ಪ್ರಾಚೀನ ಗದ್ಯಸಾಹಿತ್ಯಮಾಲೆ : ೬

ಕರ್ನಾಟಕ ಸರ್ಕಾರ

ನಿಜಗುಣ ಶಿವಯೋಗಿ ವಿರಚಿತ

ವಿವೇಕ ಚಿಂತಾಮಣಿ

ಪ್ರಧಾನ ಸಂಪಾದಕರು : ಡಾ. ಸಿದ್ಧಲಿಂಗಯ್ಯ
ಗೌರವ ಸಂಪಾದಕರು : ಡಾ. ಎಂ. ಎಂ. ಕಲಬುರ್ಗಿ
ಸಂಪಾದಕರು : ಜಿ. ಎ. ಶಿವಲಿಂಗಯ್ಯ

ಕನ್ನಡ ಪುಸ್ತಕ ಪ್ರಾಧಿಕಾರ

ನಿಜಗುಣ ಶಿವಯೋಗಿ ವಿರಚಿತ

ವಿವೇಕ ಚಿಂತಾಮಣಿ

ಪ್ರಾಚೀನ ಗದ್ಯಸಾಹಿತ್ಯಮಾಲೆ : ೬

ನಿಜಗುಣ ಶಿವಯೋಗಿ ವಿರಚಿತ

ವಿವೇಕ ಚಿಂತಾಮಣಿ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಜಿ.ಎ. ಶಿವಲಿಂಗಯ್ಯ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು-೫೬೦ ೦೦೨.

Viveka Chintamani – An Ancient Kannada Prose-classic
by Nijaguna Shivayogi
Edited by Sri G.A. Shivalingaiah
Published by B.H. Mallikarjuna
Administrative Officer, Kannada Pustaka Pradhikara,
Kannada Bhavana. J.C. Road, Bangalore-560 002.

First Impression	2012
Pages	XL + 242 = 282
Copies	1000
Price	₹ 200/-

■

ಮೊದಲ ಮುದ್ರಣ	:	೨೦೧೨
ಪುಟಗಳು	:	xl + ೨೪೨ = ೨೮೨
ಪ್ರತಿಗಳು	:	೧೦೦೦
ಬೆಲೆ	:	₹ ೨೦೦/-

ಸಂಪಾದಕರು :
ಶ್ರೀ ಜಿ.ಎ. ಶಿವಲಿಂಗಯ್ಯ

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪ ೮೮೧೧; ಮೊ : ೯೩೪೨೮ ೬೪೭೬೧

*

ಸಲಹಾಮಂಡಳಿ

■

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ಸಿ.ಪಿ. ಕೃಷ್ಣಕುಮಾರ್

ಡಾ. ಕೆ. ಮರಳಸಿದ್ದಪ್ಪ

ಪ್ರೊ. ಸುಧಾಕರ

ಡಾ. ಕೆ.ಆರ್. ಗಣೇಶ್

ಪ್ರೊ. ಸಿ.ವಿ. ಕೆರಿಮನಿ

ಎ.ಕೆ. ರಾಮೇಶ್ವರ

ಆಡಳಿತಾಧಿಕಾರಿಗಳು

ಬಿ.ಹೆಚ್. ಮಲ್ಲಿಕಾರ್ಜುನ

*

ಪ್ರಾಚೀನ ಗದ್ಯಸಾಹಿತ್ಯಮಾಲೆಯ ಕೃತಿಗಳು

■

ಕೃತಿ ಶೀರ್ಷಿಕೆ	ಸಂಪಾದಕರು
೧. ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨. ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩. ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪. ಧರ್ಮಾಮೃತಂ	: ಶ್ರೀ ಶುಭಚಂದ್ರ
೫. ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬ ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭ ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್
೮. ಮುದ್ರಾಮಂಜೂಷವು	: ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ	: ಡಾ. ರಾಮೇಗೌಡ
೧೦. ರಾಮಾಶ್ವಮೇಧಂ	: ಡಾ. ಗಾಯತ್ರಿ ನಾವಡ

■

*

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಮಾಲಿಕೆಯ ಸಂಪಾದನ ಸಮಿತಿಯ ಸದಸ್ಯರಾದ ಡಾ. ಸಿ.ಪಿ. ಕೃಷ್ಣಕುಮಾರ್ ಡಾ. ಕೆ. ಮರುಳಸಿದ್ಧಪ್ಪ, ಡಾ. ಕೆ.ಆರ್. ಗಣೇಶ್, ಶ್ರೀ ಸುಧಾಕರ, ಪ್ರೊ. ಸಿ.ವಿ. ಕೆರಿಮನಿ, ಶ್ರೀ ಎ.ಕೆ. ರಾಮೇಶ್ವರ, ಇವರಿಗೆ ಕೃತಜ್ಞತೆಗಳು. ಈ ಮಾಲೆಯಲ್ಲಿ ಹತ್ತು ಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸರುಗಳಿಗೆ ಆಭಾರಿಯಾಗಿದ್ದೇನೆ.

ಈ ಮಾಲೆಯನ್ನು ಹೊರತರುವಲ್ಲಿ ಆಸಕ್ತಿ ವಹಿಸಿದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿಯಾದ ಶ್ರೀ ಕೆ. ಮುಕುಂದನ್ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ಕನ್ನಡ ವಾಚಕವೃಂದ ನಮ್ಮ ಈ ಪ್ರಯತ್ನವನ್ನು ತುಂಬುಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

*

ಗೌರವ ಸಂಪಾದಕರ ಮಾತು

ಡಾ. ಎಂ.ಎಂ. ಕಲಬುರ್ಗಿ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಧಾನ ಪಟ್ಟ; ಗದ್ಯಕ್ಕೆ ಗೌಣಸ್ಥಾನ. ವಸ್ತು ಸ್ಥಿತಿ ಹೀಗಿರುವಾಗ, ಹೆಚ್ಚಿನದಾಗಿ ಆಧುನಿಕ ವಿದ್ವಾಂಸರು ಪ್ರಾಚೀನ ಪದ್ಯಸಾಹಿತ್ಯಕ್ಕೆ ಆಕರ್ಷಿತರಾಗಿ, ಅಂದಿನ ಗದ್ಯ ಸಾಹಿತ್ಯದ ಪ್ರಕಟನೆ- ಅಧ್ಯಯನಗಳನ್ನು ಅವಗಣಿಸುತ್ತ ಬಂದರು. ಇದರಿಂದಾಗಿ ಮೂಲೆಗೆ ಸರಿದಿರುವ ಈ ಸಾಹಿತ್ಯಪ್ರಕಾರವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಪಾಚೀನ ಗದ್ಯ ಸಾಹಿತ್ಯ ಮಾಲೆ' ಹೆಸರಿನ ಯೋಜನೆಯನ್ನು ಕೈಗೆತ್ತಿಕೊಂಡು, ಹತ್ತು ಮುಖ್ಯಕೃತಿಗಳನ್ನು ಪ್ರಕಟಿಸುತ್ತಿದೆ.

ಭಾವನೆ, ಚಿಂತನೆಗಳು ಭಾಷೆಯ ಮೂಲಕ ತಮ್ಮ ಸೆರೆ ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಅವಲಂಬಿಸುವ ಮುಖ್ಯ ಮಾರ್ಗಗಳು ಎರಡು: ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಆಗ ಅದಕ್ಕೆ ಒಂದು ಬಗೆಯ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗುತ್ತದೆ. ಹೀಗೆ ಒದಗಿ ಬರುವ ಲಯಸೌಂದರ್ಯದ ಸವಲತ್ತು ಬಳಸಿಕೊಂಡು ಪದ್ಯವು ಕವಿತ್ವದ ಕೊರತೆಯನ್ನು ತುಂಬಿಕೊಳ್ಳುತ್ತದೆ ಎಂಬ ವಾದವನ್ನು ಮಂಡಿಸಿ, 'ಗದ್ಯಂ ಕವೀನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಯ ಸಾಹಿತ್ಯದ ನಿಜವಾದ ಒರೆಗಲ್ಲು ಎಂದು ಗದ್ಯಕವಿಗಳು ಸಾರುತ್ತ ಬಂದಿದ್ದಾರೆ. ಇದು, ಈ ಸಾಹಿತ್ಯ ಪ್ರಕಾರದ ಸೃಜನಕ್ರಿಯೆಯು ಒಂದು ಆಹ್ವಾನವೆಂಬುದನ್ನು ಸೂಚಿಸಿದರೆ, ಕನ್ನಡದ ಮುದ್ದಣನ 'ಗದ್ಯಂ ಹೃದ್ಯಂ ಪದ್ಯಂ ವಧ್ಯಂ' ಎಂಬ ಮಾತು ಅದರ ಶ್ರೇಷ್ಠತೆಯನ್ನು ಸಾರುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ಕವಿಯ ಕೈಯಲ್ಲಿ ಸಾಹಿತ್ಯವಾಗುವುದರಲ್ಲಿ ಅದರ ಸಾರ್ಥಕತೆ ಇರುತ್ತದೆ. ಇಂಥ ಸಾರ್ಥಕತೆಯನ್ನು ಭಾಷೆಯ ಸಂಕ್ಷೇಪೀಕರಣ ಕಲೆಯಾದ ಪದ್ಯದಲ್ಲಿ ಸಾಧಿಸುವುದು ಸುಲಭ, ವಿಶದೀಕರಣ ಕಲೆಯಾದ ಗದ್ಯದಲ್ಲಿ ಸಾಧಿಸುವುದು ಕಷ್ಟ. ಹೀಗಿದ್ದೂ ಪ್ರಾಚೀನ ಕನ್ನಡದ ಕೆಲವು ಕವಿಗಳು ಇದನ್ನು ಆಹ್ವಾನವಾಗಿ ಸ್ವೀಕರಿಸಿ ಜಯಶಾಲಿಯಾಗಿದ್ದಾರೆ.

ಒಂದು ರಚನೆ ಅಭಿವ್ಯಕ್ತಿ (Expression) ಯೆಂದೂ, ನಿರೂಪಣೆ (Narration)ಯೆಂದೂ ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ. ನಮ್ಮ ನೆನಪಿನಲ್ಲುಳಿಯುವ ಕವಿಯೊಬ್ಬನ ಗದ್ಯದ ಸಾಲು ಇಲ್ಲವೆ ಪದ್ಯದ ಸಾಲುಗಳೇ ಅಭಿವ್ಯಕ್ತಿ. ಅದು ತನ್ನ ಸೃಜನಶೀಲ ಗುಣದಿಂದಾಗಿ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇಂಥ ಸುಂದರ ಅಭಿವ್ಯಕ್ತಿತ್ವವನ್ನೊಳಗೊಂಡ ಮತ್ತು ಐತಿಹಾಸಿಕ ಕಾರಣದಿಂದಾಗಿ ಮಹತ್ವವೆನಿಸುವ ಪ್ರಾಚೀನ ಕನ್ನಡ ಕೃತಿಗಳ ಪ್ರಕಟನ ಯೋಜನೆಯಿದು.

ದಂಡಿಯ ಸಂಸ್ಕೃತ ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ಮೂರು ಬಗೆಯಾಗಿ ವರ್ಗೀಕರಿಸಿದೆ. ಇದರ ಆದರ್ಶದಲ್ಲಿ ಆಕಾರ ಪಡೆದ ಕನ್ನಡ ಕವಿರಾಜಮಾರ್ಗವು ಪದ್ಯ, ಗದ್ಯಕಥಾ ಎಂದು ಎರಡು ಬಗೆಯಾಗಿ ವರ್ಗೀಕರಿಸುತ್ತದೆ. ಬಹುಶಃ ಅಂದು ಮಿಶ್ರ(ನಾಟಕ)ವು ಸಂಸ್ಕೃತದಲ್ಲಿ ದೃಶ್ಯ ಪಾತಳಿಯಿಂದ ವಾಚನಪಾತಳಿಗೆ ಇಳಿದಿದ್ದರೆ, ಕನ್ನಡದಲ್ಲಿ ಅದು ಇನ್ನೂ ದೃಶ್ಯಪಾತಳಿಯಲ್ಲಿ ವ್ಯವಹರಿಸುತ್ತಲಿದ್ದುದೇ ಹೀಗೆ ಹೇಳಲು ಕಾರಣವಾಗಿರಬೇಕು. ಅದೇನೇ ಇರಲಿ, "ಅಗಣಿತ ಗುಣ ಗದ್ಯಪದ್ಯಗಳ ಮಿಶ್ರಣರೂಪದ 'ಗದ್ಯಕಥಾ' ಹೆಸರಿನ ಗದ್ಯಪ್ರಕಾರವನ್ನು ಕನ್ನಡದಲ್ಲಿ ಚಿರಂತನಾಚಾರ್ಯರು ರಚಿಸಿರುವರು" ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಇದು ಚಂಪೂವನ್ನು ಸೂಚಿಸುವುದೆಂದು ಕೆಲವರು ಹೇಳುವವರಾದರೂ ಗದ್ಯಪ್ರಧಾನ ಪದ್ಯಗೌಣವಾಗಿರುವ ಆರಾಧನಾ ಕರ್ಣಾಟ ಟೀಕಾ(ವಡ್ಡಾರಾಧನೆ)ದಂಥ ಕೃತಿಗಳನ್ನು ಸೂಚಿಸುವುದೆಂದು ಬಹುಜನ ವಿದ್ವಾಂಸರು ಒಪ್ಪಿದ್ದಾರೆ.

ಸಂಸ್ಕೃತ ಆಲಂಕಾರಿಕ ಭಾಮಹನು ಗದ್ಯವನ್ನು ಆಖ್ಯಾಯಿಕಾ, ಕಥಾ ಎಂದು ವರ್ಗೀಕರಿಸುತ್ತ, ಆಖ್ಯಾಯಿಕಾ ಸಂಸ್ಕೃತದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿರಬಹುದೆಂದು ಹೇಳುತ್ತಾನೆ. ಮುಂದುವರಿದು ದಂಡಿಯು ಈ ಕಥೆಯಲ್ಲಿ ಆರ್ಯಾ ಮುಂತಾದ ವೃತ್ತಗಳು ಪ್ರವೇಶ ಪಡೆಯುವವೆಂದು ತಿಳಿಸುತ್ತಾನೆ. ಕವಿರಾಜಮಾರ್ಗಕಾರ ತಿಳಿಸುವ 'ಗದ್ಯಕಥಾ' ಇಲ್ಲಿಯ 'ಕಥಾ' ಪ್ರಕಾರವೇ ಆಗಿದೆ. ಈ 'ಗದ್ಯಕಥೆ'ಯು ಬಾಣ ಕಾದಂಬರಿಯಂತೆ ಅಖಂಡವೂ ಬೃಹತ್ಕಥೆಯಂತೆ ಬಿಡಿ ಕಥಾಕೋಶವೂ ಆಗಿರಬಹುದಾಗಿದೆ. ಮುಂದುವರಿದು ಕವಿರಾಜಮಾರ್ಗಕಾರನು ಗದ್ಯಕಥೆಯು ಸಕಲಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟ ಭಾಷಾಶೈಲಿಯಲ್ಲಿ ಎರಕಗೊಂಡಿರಬೇಕು, ಲೌಕಿಕ ಮತ್ತು ಪಾರಮಾರ್ಥಿಕ ವರ್ಣನಾನಿರ್ಣಿಕ್ತವಾಗಿರಬೇಕು, 'ಪ್ರಕಟತರ ವಸ್ತು'ವನ್ನೊಳಗೊಂಡಿರಬೇಕೆಂದು ಹೇಳುತ್ತಾನೆ.

ಒಟ್ಟಿನಲ್ಲಿ, ಪ್ರಾಚೀನ ಕರ್ನಾಟಕದ 'ಗದ್ಯಕಥಾ'ಪ್ರಕಾರದ ಲಕ್ಷಣವನ್ನು ಹೀಗೆ ಹೇಳಬಹುದು. ೧. ಗದ್ಯ ಪ್ರಧಾನ, ಪದ್ಯ ಗೌಣಪ್ರಮಾಣದಲ್ಲಿರುತ್ತದೆ. ೨. ಅಖಂಡ ಕಥೆ, ಇಲ್ಲವೆ ಬಿಡಿ ಕಥಾಗುಚ್ಛ ರೂಪದಲ್ಲಿರುತ್ತದೆ. ೩. ಸಕಲಕಲಾಭೂಯಿಷ್ಠವೂ ಉತ್ಕೃಷ್ಟ ಭಾಷಾಶೈಲಿಯದೂ, ಲೌಕಿಕ ಪಾರಮಾರ್ಥಿಕ ವರ್ಣನಾ ನಿರ್ಣಿಕ್ತವೂ

ಪ್ರಕಟತರ ವಸ್ತುವನ್ನೊಳಗೊಂಡುದೂ ಆಗಿರುತ್ತದೆ. ೪. ಇನ್ನೂ ಒಂದು ಲಕ್ಷಣವೆಂದರೆ ಈ ಗದ್ಯವನ್ನು 'ಕಥಾ' ಎಂದು ಕರೆದಿರುವುದರಿಂದ 'ಕಥಾ ಪುರಾಣಸಂಬದ್ಧಾ' ಎಂಬ ವ್ಯಾಖ್ಯೆಯ ಪ್ರಕಾರ ಇದು, ಲೌಕಿಕ(ಚರಿತ್ರೆ) ವಸ್ತುವನ್ನಲ್ಲ, ಪೌರಾಣಿಕ ವಸ್ತುವನ್ನೊಳಗೊಂಡಿರುತ್ತದೆ.

ಇಂಥ ಲಕ್ಷಣದ ಕೃತಿಗಳನ್ನು ಕನ್ನಡದಲ್ಲಿ ಬರೆದವರು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೆಂದು ಕವಿರಾಜಮಾರ್ಗ ಹೇಳುವುದಾದರೂ ಇವರ ಒಂದೂ 'ಗದ್ಯಕಥಾ' ಲಭ್ಯವಿಲ್ಲ. ಇವರಲ್ಲಿ ದುರ್ವಿನೀತನು ಬಹುಶಃ ಗಂಗ ಅರಸನಾಗಿದ್ದು, ಶಾಸನಗಳಲ್ಲಿ ಇವನು ರಚಿಸಿರುವನೆಂದು ಹೇಳಲಾಗಿರುವ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಟೀಕೆ, ಶಬ್ದಾವತಾರಗಳನ್ನು ಹೊರತುಪಡಿಸಿ, ಬೃಹತ್ಕಥೆ(ವಡ್ಡಕಥೆ)ಯೇ ಗದ್ಯಕಥೆಗೆ ಉದಾಹರಣೆಯಾಗಿರಬೇಕೆನಿಸುತ್ತದೆ. ಇದು ಗುಣಾಢ್ಯನ ಪೈಶಾಚಿಭಾಷಾಕೃತಿಯ ದಾಕ್ಷಿಣಾತ್ಯಪಾಠವೆಂದೂ, ಇದನ್ನು ಆಧರಿಸಿ ತಮಿಳಿನ ಪೆರುಂಗದ್ಯೆ ಹುಟ್ಟಿದೆಯೆಂದೂ, ಇದು ಒಂದಿಷ್ಟು ಜೈನೀಯವಾಗಿದೆಯೆಂದೂ ವಿದ್ವಾಂಸರು ಭಾವಿಸಿದ್ದಾರೆ. ಈವರೆಗಿವ ವಿವರಣೆ ಕಳೆದುಹೋದ ಕನ್ನಡ ಗದ್ಯಸಾಹಿತ್ಯವನ್ನು ಕುರಿತುದಾಗಿದೆ.

***

ಕವಿರಾಜಮಾರ್ಗೋತ್ತರ ಕಾಲೀನ ಗದ್ಯಸಾಹಿತ್ಯದಲ್ಲಿ ಎದ್ದು ಕಾಣುವ ಕೆಳಗಿನ ಕೃತಿಗಳನ್ನು ಪ್ರಸ್ತುತ ಯೋಜನೆಯ ಅಡಿಯಲ್ಲಿ ಪ್ರಕಟಣೆಗೆ ಆಯ್ದುಕೊಳ್ಳಲಾಗಿದೆ.

೧.	ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨.	ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩.	ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪.	ಧರ್ಮಾಮೃತಂ	: ಶ್ರೀ ಶುಭಚಂದ್ರ
೫.	ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬	ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭	ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್
೮.	ಮುದ್ರಾಮಂಜೂಷವು	: ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯.	ರಾಜಾವಳಿ ಕಥೆ	: ಡಾ. ರಾಮೇಗೌಡ
೧೦.	ರಾಮಾಶ್ವಮೇಧಂ	: ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ– ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ – ನಡುಗನ್ನಡ– ನಡುಗನ್ನಡೋತ್ತರ ಪ್ರಾಚೀನ ಭಾಷಾವಿಕಾಸದ ಸ್ಪಷ್ಟ

ಹೆಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾ ಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಿಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ, ಧರ್ಮಾಮೃತಗಳನ್ನು ಕಥಾಕೋಶಗಳೆಂದು; ಕನ್ನಡ ಶರಣರ ಕಥೆಗಳು, ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು; ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾಣಗಳೆಂದು; ವಿವೇಕ ಚಿಂತಾಮಣಿಯನ್ನು ಜ್ಞಾನಕೋಶವೆಂದು ಕರೆಯಬಹುದಾಗಿದೆ. ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

***

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ. ಕವಿನಾಮ ಭ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಂದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು - ಭ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೪೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶೀಯ ಗದ್ಯಶೈಲಿ, ಮನೋಜ್ಞ ಕಥನಕಲೆ, ವಿಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ - ಜೈನ ಘರ್ಷಣೆಗಳು ಆ ಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ, ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿಕ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮) ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರರ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಂಡರಾಯ. ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕಕೋಶವಾಗಿದ್ದರೆ ಇದು ಬಿಡಿಯಲ್ಲಿಯೂ ಅಖಂಡತೆಯನ್ನೊಳಗೊಂಡ

ಕೃತಿಯಾಗಿದೆ. ಹೀಗಿದ್ದೂ ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿವೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತ ಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ, ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯ ಕೃತಿಯಾಗಿದ್ದರೂ ಸೊಗಸಾದ ಕಥಾಶೈಲಿ, ದೇಶೀ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಪಡ್ಡಳಿ, ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ. ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ, ಸಂಸಾರ –ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂದಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿದೆ, ನಯಸೇನನ (೧೧೧೨) ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ನುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ. ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳವಿಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯವಾಗಿ ಕಾಣುತ್ತಾನೆ.

'ಕನ್ನಡ ಶರಣರ ಕಥೆಗಳು' ಹೆಸರೇ ಸೂಚಿಸುವಂತೆ ಕರ್ಣಾಟಕಕ್ಕೆ ಸಂಬಂಧಿಸಿದ, ಗದ್ಯ – ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ, ಶರಣರ ಕೃತಿಗಳನ್ನೊಳಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ, ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಾಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ

ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ, ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ, ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡ ಸಾಹಿತ್ಯದ ಪ್ರಥಮ ಭಾವಗೀತ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು (೧೫ ಶತಮಾನ), ಕವಿತ್ವ – ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ. ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಾಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ – ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದು ಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಇಲ್ಲಿ ಒಟ್ಟಿಗೆ ಪರಿಶೀಲಿಸಬಹುದು. ಚಿಕದೇವರಾಯ ವಂಶಾವಳಿಯ ಕರ್ತೃ ತಿರುಮಲಾರ್ಯ (೧೬೪೫–೧೭೦೬) ಮೈಸೂರು ಚಿಕದೇವರಾಯನ ಸಚಿವ. ಧಾರ್ಮಿಕ ಮುಖವಾಡದಲ್ಲಿ ತಮಿಳುನಾಡಿನಿಂದ ಕರ್ನಾಟಕವನ್ನು ಪ್ರವೇಶಿಸಿದ ಶ್ರೀವೈಷ್ಣವರು, ಈ ಹೊತ್ತಿಗೆ ರಾಜಕೀಯವಾಗಿಯೂ ಪ್ರಬಲರಾಗಿ, ತಮ್ಮ ಶ್ರೀವೈಷ್ಣವ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಲು ಆರಂಭಮಾಡಿದ ಕಾಲಘಟ್ಟದ ಕೃತಿಯಿದು. ಅನ್ಯರಾಜ್ಯದಿಂದ ಬಂದ ಇವರಿಗೆ ಒಂದು ಕಡೆ ತಮ್ಮ ಧರ್ಮಪ್ರಚಾರವೂ, ಇನ್ನೊಂದು ಕಡೆ ರಾಜನ ಪ್ರೀತಿಸಂಪಾದನೆಯೂ ಅಗತ್ಯವಾಗಿದ್ದ ಕಾರಣ, ತಮ್ಮ ಧಾರ್ಮಿಕ ಕೃತಿಗಳೊಂದಿಗೆ ರಾಜಸ್ತುತಿ ಕಾವ್ಯಗಳನ್ನೂ ಬರೆದರು. ಈ ಮನೋಧರ್ಮ ಕಾರಣವಾಗಿ ಈ ಗದ್ಯಕೃತಿಯಲ್ಲಿ ರಾಜವಂಶಾವಳಿ, ಶ್ರೀವೈಷ್ಣವಧರ್ಮ ಪ್ರಶಂಸೆಯೊಂದಿಗೆ ಇವನ ವಂಶಾವಳಿಯೂ ಸೇರಿಕೊಂಡಿದೆ. ಸಮಕಾಲೀನತೆಗಿಂತ ಪ್ರಾಚೀನತೆಯ ಒಲವು ಈ ಗದ್ಯದ ಲಕ್ಷಣವಾಗಿದೆ.

ದೇವಚಂದ್ರನ (೧೭೭೦–೧೮೪೧) ರಾಜಾವಳಿ ಕಥೆ ಮೆಕೆಂಝಿಯ ಸೂಚನೆಯಂತೆ ರಚಿಸಿದ ಕೃತಿಯಾಗಿದೆ. ಸಮಕಾಲೀನ ಮುಖ್ಯ ಘಟನೆಗಳನ್ನು, ಅವುಗಳ ಇತಿಹಾಸವನ್ನು ತುಂಬ ವಿವರವಾಗಿ ಬಿಂಬಿಸುವ ಇದು ಚರಿತ್ರೆ, ಪುರಾಣ,

ದಂತಕಥೆಗಳ ಮಿಶ್ರಣವಾಗಿದ್ದು, ಮೌಖಿಕ ಇತಿಹಾಸದ ಸ್ವರೂಪ ಪಡೆದಿದೆ. ಜೈನಪರ ಧೋರಣೆಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನು ಒಳಗೊಂಡ ಇದರ ಗದ್ಯಶೈಲಿ ಆಧುನಿಕತೆಯತ್ತ ಮುಖಮಾಡಿದೆ.

ನಂದವಂಶೀಯರ ಮಂತ್ರಿಯಾದ ರಾಕ್ಷಸನನ್ನು ಮೌರ್ಯವಂಶೀಯರ ಮಂತ್ರಿ ಚಾಣಕ್ಯನು ಒಲಿಸಿಕೊಂಡ ಕಥೆಯನ್ನು 'ಮುದ್ರಾಮಂಜೂಷ' ಹೆಸರಿನಿಂದ ರಚಿಸಿದವ, ಕೆಂಪುನಾರಾಯಣ (೧೮ನೆಯ ಶತಮಾನ). ಉತ್ತರ ಭಾರತದ ಐತಿಹಾಸಿಕ ವಸ್ತುವನ್ನು ಸಮಕಾಲೀನ ಗ್ರಂಥಸ್ಥ ಗದ್ಯದಲ್ಲಿ ಎರಕಹೊಯ್ದಿದ್ದು, ಶೈಲಿಯಲ್ಲಿ ಹಳಗನ್ನಡ-ಹೊಸಗನ್ನಡಗಳ ಮಿಶ್ರಣ ಎದ್ದುಕಾಣುತ್ತದೆ.

ಮೈಸೂರು ಅರಸರ ಕಾಲದ ಗ್ರಂಥಸ್ಥ ಅರೆಬೆಂದ ಗದ್ಯಕ್ಕೆ ಭಿನ್ನವಾಗಿ ನಿಲ್ಲುತ್ತದೆ, ಮುದ್ದಣನ ರಾಮಾಶ್ವಮೇಧ ಗದ್ಯ. "ಗದ್ಯಂ ಹೃದ್ಯಂ" ಎನ್ನುತ್ತ ಅವನು ಆಧುನಿಕ ಸಾಹಿತ್ಯದ, ಅದರಲ್ಲಿಯೂ ಗದ್ಯಸಾಹಿತ್ಯದ ಬಾಗಿಲನ್ನೇ ತೆರೆದನು. ಮೋಡ ಮುಸುಕಿದ ವಾತಾವರಣದಿಂದ ಆರಂಭವಾಗಿರುವ ಈ ಕೃತಿ, ಆ ಕಾಲದ ಕನ್ನಡದ ಮೇಲೆ ಮುಸುಕಿದ್ದ ಕತ್ತಲೆಯನ್ನು ಸಂಕೇತಿಸುತ್ತದೆ. ಇಂಥ ಸಂದರ್ಭದಲ್ಲಿ ಕಲ್ಪಿತ ಪಾತ್ರವಾಗಿ ಬರುವ ಹೆಂಡತಿ ಹೊಸ ಭಾಷೆ, ಹೊಸ ವಸ್ತು, ಹೊಸ ಬಗೆಯ ನಿರೂಪಣೆ ಇತ್ಯಾದಿಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳಿಂದ ಮುಂದುವರಿಯುವ ಇದು, ಆಧುನಿಕ ಗದ್ಯಯುಗಕ್ಕೆ ನಾಂದಿ ಹಾಡಿದೆ. ಆದುದರಿಂದ ಮುದ್ದಣನನ್ನು ನವೋದಯದ ಮುಂಗೋಳಿಯೆಂದು ಕರೆದುದು ನ್ಯಾಯವಾಗಿದೆ.

ಹೀಗೆ ಒಂದು ಸಾವಿರ ವರ್ಷದ ಗದ್ಯ ಸಾಹಿತ್ಯೇತಿಹಾಸದಲ್ಲಿ ಮೈಲಿಗಲ್ಲು ಎನಿಸಿದ ೧೦ ಕೃತಿಗಳು ಒಂದು ಮಾಲೆಯಡಿಯಲ್ಲಿ ಈಗ ಪ್ರಕಟವಾಗುತ್ತಲಿವೆ. ಇವು ಒಂದರ್ಥದಲ್ಲಿ ನಮ್ಮ ಗದ್ಯ ಸಾಗಿಬಂದ ಹಾದಿಯನ್ನು ತಿಳಿಸುವ ಕೈಮರಗಳಾಗಿವೆ.

ಕೃತಜ್ಞತೆಗಳು :

ಸಂಪಾದಕನಾಗಿ ಈ ಯೋಜನೆಯನ್ನು ಪೂರೈಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಕನ್ನಡದ ಮೇಲಿನ ಪ್ರೀತಿಯಿಂದ ಈ ಗದ್ಯಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸ ಮಿತ್ರರಿಗೂ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ, ಸಲಹಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳು.

ಉಪೋದ್ಘಾತ

ಶ್ರೀಮನ್ನಿಜಗುಣ ಶಿವಯೋಗಿಗಳು ದಾರ್ಶನಿಕರು, ದಾರ್ಶನಿಕ ಕವಿಗಳೂ ಅಹುದು. ಮೈಸೂರು ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿನ ಚಿಲಕವಾಡಿ ಗ್ರಾಮದ ಬಳಿಯಲ್ಲಿರುವ ಶಂಭುಲಿಂಗನ ಬೆಟ್ಟದಲ್ಲಿ ಗುಹಾವಾಸಿಗಳಾಗಿ ತಪೋನಿರತರಾಗಿದ್ದು, ವೇದ ಆಗಮ ಪುರಾಣಾದಿ ಅನೇಕ ಶಾಸ್ತ್ರಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ವಿದ್ಯೆಯ ಪರ್ವತವೇ ಆಗಿದ್ದಾರೆ. ಇವರು ರಚಿಸಿರುವ 'ಕೈವಲ್ಯ ಪದ್ಧತಿ' ಯನ್ನು ಗಮನಿಸಿದರೆ ಇವರು ವೀರಶೈವರೆಂಬುದರಲ್ಲಿ ಸಂದೇಹವಿಲ್ಲ. ಸಪ್ತಕಾವ್ಯಗಳ ಕರ್ತೃ ಗುರುಬಸವನಾದರೆ (೧೪೩೦), ಅಷ್ಟ ಕೃತಿಗಳ ಕರ್ತೃ ನಿಜಗುಣಶಿವಯೋಗಿಗಳು. ಇವರ ಕೃತಿಗಳು:

ಪುರಾತನರ ತ್ರಿವಿಧಿ
ಕೈವಲ್ಯ ಪದ್ಧತಿ
ಪರಮಾನುಭವ ಬೋಧೆ
ಪರಮಾರ್ಥಗೀತೆ
ಅನುಭವಸಾರ
ವಿವೇಕ ಚಿಂತಾಮಣಿ
ಪರಮಾರ್ಥ ಪ್ರಕಾಶಿಕೆ
ಸ್ವರೂಪಸಿದ್ಧಿ ಟೀಕೆ (ಪರಂಜ್ಯೋತಿಯ ಅನುಭವ ಮುಕುರದಲ್ಲಿನ ಮಹಾವಾಕ್ಯಕಾಂಡಕ್ಕೆ ಬರೆದ ಟೀಕೆ)

ಇವುಗಳಲ್ಲಿ ಕನ್ನಡ ಲೋಕದಲ್ಲಿ ಅತ್ಯಂತ ಜನಪ್ರಿಯವಾಗಿರುವ ಕೃತಿಗಳು ಕೈವಲ್ಯ ಪದ್ಧತಿ ಮತ್ತು ವಿವೇಕ ಚಿಂತಾಮಣಿ. 'ಪುರಾತನರ ತ್ರಿವಿಧಿ' ಮತ್ತು 'ಸ್ವರೂಪ ಸಿದ್ಧಿ' ಗಳನ್ನು ಬಿಟ್ಟರೆ ಆರು ಕೃತಿಗಳಾಗುತ್ತವೆ. ಹೀಗಾಗಿ 'ಷಟ್‌ಶಾಸ್ತ್ರದ ನಿಜಗುಣಪ್ಪ' ಅಥವಾ 'ನಿಜಗುಣಪ್ಪನ ಷಟ್‌ಶಾಸ್ತ್ರಗಳು' ಎಂದೇ ಇವೆರಡು ಹೆಸರುಗಳು ಕನ್ನಡ ಜನತೆಯಲ್ಲಿ ಪರಿಚಿತವಾಗಿವೆ.

ನಿಜಗುಣ, ನಿಜಗುಣಾರಾಧ್ಯ, ನಿಜಗುಣಯೋಗಿ, ನಿಜಗುಣಶಿವಯೋಗಿ ನಿಜಗುಣದೇಶಿಕೇಂದ್ರ –ಹೀಗೆ ಖ್ಯಾತಿವೆತ್ತ ನಿಜಗುಣರು ಪೂರ್ವಾಶ್ರಮದಲ್ಲಿ ಸಂಸಾರಿಗಳಾಗಿದ್ದು, ಆ ಪ್ರಾಂತ್ಯಕ್ಕೆ ದೊರೆಗಳಾಗಿದ್ದರೆಂದೂ, ಅವರ ಪತ್ನಿಯು ಜಂಗಮಾರಾಧನೆಯಲ್ಲಿ ನಿರಾಸಕ್ತರಾಗಿದ್ದುದರಿಂದಲೂ ಹಾಗೂ ಆಹ್ವಾನಿಸಿದ್ದ ಜಂಗಮರಿಗೆ ಅವಿಧೇಯಳಾಗಿ ನಡೆದುಕೊಂಡುದರಿಂದಲೂ ಬೇಸತ್ತು ತಮ್ಮ ಅಧಿಕಾರವನ್ನು ತೊರೆದು, ಸಂಸಾರವನ್ನು ತ್ಯಜಿಸಿ ವಿರಾಗಿಗಳಾದರೆಂಬುದು ಪ್ರತೀತಿ. ತಮ್ಮ ಪೂರ್ವಾಶ್ರಮದ ಬಗೆಗಾಗಲೀ ತಮ್ಮ ಗುರುಗಳ ಬಗೆಗಾಗಲೀ ತಮ್ಮ ವಿದ್ಯಾರ್ಜನೆ ಬಗೆಗಾಗಲೀ ಇವರು ಸಾಸಿವೆಯಷ್ಟು ಸುಳಿವು ನೀಡಿಲ್ಲ, ತಮ್ಮ ಕೃತಿಗಳಲ್ಲಿ. ಬಹುಶಃ 'ನಿಜಗುಣ' ಎಂಬ ನಾಮಾಂಕಿತವೂ ಕೂಡ ದೀಕ್ಷಾಕಾಲದಲ್ಲಿ ಅವರ ಗುರುವಿನಿಂದ ಲಭ್ಯವಾಗಿರಬಹುದೇ ಹೊರತು ಅವರ ಪೂರ್ವಾಶ್ರಮದ ಹೆಸರಲ್ಲ. ಇದೆಲ್ಲವೂ

ಮೊದಲುಗೊಂಡು ಏನೆಲ್ಲವೂ ಕಾಲಗರ್ಭದಲ್ಲಿ ಅಡಗಿ ಹೋಗಿದೆ. ಇಂತಹ ದೈವೀಪುರುಷನನ್ನು ಕುರಿತು ಸಮಕಾಲೀನರಾರೂ ಯಾವುದೇ ರೀತಿಯ ಮಾಹಿತಿಯನ್ನು ನೀಡದೆ ಇರುವುದು ನಿಜಕ್ಕೂ ಅಚ್ಚರಿಯಾಗಿದೆ.

ಇವರ ಕಾಲದ ಬಗೆಗೆ ವಿಚಾರ :

೧) ಕವಿಚರಿತ್ರಕಾರರು ನಿಜಗುಣರ ಕಾಲವು ಕ್ರಿ.ಶ.೧೫೦೦ ಎಂದು ಅಭಿಪ್ರಾಯ ಪಟ್ಟಿದ್ದಾರೆ.

೨) ಕನ್ನಡ ಸಾಹಿತ್ಯ ಚರಿತ್ರಾಕಾರರಾದ ರಂ.ಶ್ರೀ. ಮುಗಳಿಯವರು, ಕವಿಚರಿತೆಕಾರರ ಅಭಿಪ್ರಾಯವನ್ನು ತಾತ್ಪೂರ್ತಿಕ ಊಹೆ ಎಂದು ಹೇಳಿ, ತಾವು ಮಾತ್ರ ಅವರ ಕಾಲದ ಬಗೆಗೆ ಏನೂ ಹೇಳಿಲ್ಲ.

೩) ಹಿರಿಯ ವೀರಶೈವಕವಿಗಳನ್ನು ಗ್ರಂಥಾರಂಭದಲ್ಲಿ ಸ್ತುತಿಸುವ ಪರಂಪರೆ ಭೀಮ ಕವಿಯಿಂದ ಪ್ರಾರಂಭವಾಗಿರಬೇಕೆಂದು ಊಹಿಸಿ, ಹರಿಹರ ರಾಘವಾಂಕ ಹಾಗೂ ಕೆರೆಯ ಪದ್ಮರಸರ ಕಾವ್ಯಗಳಲ್ಲಿ ಇಂತಹ ಸ್ತೋತ್ರ ಬಂದಿಲ್ಲವಾದ್ದರಿಂದ ಶ್ರೀ ನಿಜಗುಣರು ೧೩ನೇ ಶತಮಾನದಲ್ಲಿದ್ದುದೇ ಇದಕ್ಕೆಲ್ಲ ಕಾರಣವೆಂದು ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಊಹಿಸಿದ್ದಾರೆ.

೪) ನಿಜಗುಣರ ವಿವೇಕ ಚಿಂತಾಮಣಿಯನ್ನು ಶಾಂತಲಿಂಗಕವಿಯು ಮರಾಠಿ ಭಾಷೆಗೆ ಅನುವಾದ ಮಾಡಿರುವುದರಿಂದ ಆ ಶಾಂತಲಿಂಗ ಕವಿಯ ಕಾಲ ೧೫೦೦ರ ಹಿಂದೂ ಮುಂದೂ ಇದ್ದಿರಬಹುದೆಂದು ಪಂಡಿತ ಅವಳೀಕರರು (ಮರಾಠಿ ವಿದ್ವಾಂಸರು) ಅಭಿಪ್ರಾಯಪಟ್ಟಿದ್ದಾರೆ.

೫) ಪರಂಜ್ಯೋತಿಯತಿಯು ೧೪೫೦ರಲ್ಲಿ 'ಅನುಭವಮುಕುರ'ವೆಂಬ ಕೃತಿಯನ್ನು ರಚಿಸಿದ್ದಾನೆ. ಇದು ಅದ್ವೈತ ವೇದಾಂತವನ್ನು ಬೋಧಿಸುವ ಗ್ರಂಥ. ಇದರಲ್ಲಿ ಬರುವ 'ಮಹಾವಾಕ್ಯಕಾಂಡ'ಕ್ಕೆ 'ಸ್ವರೂಪಸಿದ್ಧಿ' ಎಂಬ ಹೆಸರಿನಲ್ಲಿ ನಿಜಗುಣರು ಟೀಕೆಯನ್ನು ಬರೆದಿದ್ದಾರೆ. ಆದುದರಿಂದ ನಿಜಗುಣರು ೧೪೫೦ಕ್ಕಿಂತ ಈಚಿನವರಾಗುತ್ತಾರೆ.

೬) ೧೨ನೇ ಶತಮಾನದ ಕೊನೆಯಲ್ಲಿದ್ದ ಕನ್ಯಕುಬ್ಜಾ(ಕನೂಜ್)ಧಿಪತಿ ಜಯಂತಚಂದ್ರನ ಆಸ್ಥಾನಕವಿ ಹರ್ಷಮಿತ್ರನ ಹೆಸರನ್ನು ವಿವೇಕ ಚಿಂತಾಮಣಿಯಲ್ಲಿ ಉಲ್ಲೇಖಿಸಿರುವುದರಿಂದಲೂ, ನಿಜಗುಣಶಿವಯೋಗಿಯ ವಿವೇಕಚಿಂತಾಮಣಿಯು ಶಾಂತಲಿಂಗನಿಂದ ಶಕೆ ೧೫೨೬ರಲ್ಲಿ ಮರಾಠಿಗೆ ಭಾಷಾಂತರವಾಗಿರುವುದರಿಂದಲೂ ಅದಕ್ಕೂ ನೂರಾರು ವರ್ಷ ಹಿಂದೆಯಾದರೂ ವಿವೇಕ ಚಿಂತಾಮಣಿಯು ರಚಿತವಾಗಿರಬೇಕು. ಆದುದರಿಂದ, ನಿಜಗುಣಶಿವಯೋಗಿಗಳು ೧೪ನೇ ಶತಮಾನದಿಂದ ಈಚೆಗೆ ಇದ್ದಿರಲಾರರು ಎಂದು ತಮ್ಮ ಶರಣ ಚರಿತಾಮೃತದಲ್ಲಿ (ಪುಟ ೫೬೭, ೧೯೬೪ರಲ್ಲಿ ಮುದ್ರಿತ) ಸಿದ್ಧಯ್ಯ ಪುರಾಣಿಕರು ಅಭಿಪ್ರಾಯಪಟ್ಟಿರುತ್ತಾರೆ.

೭) ಕವಿ ಷಡಕ್ಷರದೇವನು 'ರಾಜಶೇಖರ ವಿಳಾಸ'ದಲ್ಲಿ ನಿಜಗುಣರ ಹೆಸರನ್ನೆತ್ತಿದ್ದಾನೆ. (ಆ.೧. ಪದ್ಯ ೧೬) ರಾಜಶೇಖರ ವಿಳಾಸವು ಬರೆದು ಮುಗಿಸಿದ ಕಾಲ ೧೬೫೩ ಜನವರಿ ೧೧ನೆಯ ದಿನಾಂಕ ಬುಧವಾರವಾಗುತ್ತದೆಂದು, ಗೋವಿಂದ ಪೈಗಳು ಹೇಳಿರುವುದರಿಂದ ನಿಜಗುಣರು ೧೬೫೩ಕ್ಕಿಂತ ಮೊದಲಿನವರೆಂಬುದು ಖಚಿತವಾಗುತ್ತದೆ.

ಇತ್ತೀಚಿನ ಸಂಶೋಧನೆಗಳ ಪ್ರಕಾರ ಮಹಾರಾಷ್ಟ್ರದ ಸಂತ ಕವಿಯಾದ ಶಾಂತಲಿಂಗಕವಿಯು ಕ್ರಿ.ಶ. ೧೫೨೬ರಲ್ಲಿ ವಿವೇಕ ಚಿಂತಾಮಣಿಯನ್ನು ಭಾಷಾಂತರ ಮಾಡಿ ಮುಗಿಸಿದ ಕಾಲವೂ ನಿರ್ಧಾರವಾಗಿದೆ.[A] ನಿಜಗುಣರು ಈ ಕಾಲಕ್ಕಿಂತ ಮೊದಲೇ ಇದ್ದರೆಂಬುದರಲ್ಲಿ ಅನುಮಾನವಿಲ್ಲ. ಇವರಿಬ್ಬರಿಗೂ ಎರಡು ತಲೆಮಾರು ಅಂತರವಿರುವುದು ಸಾಧ್ಯವಿದೆ. ಆದ್ದರಿಂದ ನಿಜಗುಣರು ಸು.ಕ್ರಿ.ಶ. ೧೪೬೫ರಲ್ಲಿ ಇದ್ದಿರಬಹುದೆಂದು ತೀರ್ಮಾನಿಸಬಹುದು.

ಇವರ ಕೃತಿಗಳ ಸೂಕ್ಷ್ಮ ಪರಿಚಯ :

೧) **ಪುರಾತನರ ತ್ರಿವಿಧಿ:** ತಮಿಳು ನಾಡಿನ ಶಿವಭಕ್ತರಾದ ನಾಯನ್ಮಾರರುಗಳು, ನಮ್ಮ ನಾಡಿನ ಬಸವಾದಿ ಶರಣರಿಗೆ 'ಪುರಾತನರು' ಎಂಬುದಾಗಿ ಭಕ್ತಿಪೂರ್ವಕವಾಗಿ ಪರಿಚಿತರಾಗಿದ್ದಾರೆ. ಇವರು ಸಂಖ್ಯೆಯಲ್ಲಿ ೬೩ ಮಂದಿ. ಇವರುಗಳನ್ನು ಕುರಿತು ಲಘು ಪರಿಚಯಾತ್ಮಕವಾಗಿ ಒಂದೊಂದು ತ್ರಿಪದಿಯಲ್ಲಿ ಸ್ತುತಿಯ ದ್ವಾರಾ ರಚಿಸಿರುತ್ತಾರೆ. ಇದರಲ್ಲಿ ೭೭ ತ್ರಿಪದಿಗಳಿವೆ.

೨) **ಕೈವಲ್ಯ ಪದ್ಧತಿ** : ವೀರಶೈವರಿಗೆ ಅತ್ಯಮೂಲ್ಯವಾದ ಕೃತಿಯಾಗಿರುವ ಇದು ಹಾಡಿನ ರೂಪದಲ್ಲಿದೆ. ಇದರಲ್ಲಿ ಪ್ರಧಾನವಾಗಿ ಐದು ಸ್ಥಲಗಳಿವೆ. ಅವು: ಶಿವಕಾರುಣ್ಯ ಸ್ಥಲ, ಜೀವಸಂಬೋಧನ ಸ್ಥಲ, ನೀತಿಕ್ರಿಯಾಚರಣ ಸ್ಥಲ, ಯೋಗ ಪ್ರತಿಪಾದನ ಸ್ಥಲ, ಜ್ಞಾನಪ್ರತಿಪಾದನ ಸ್ಥಲಗಳು. ಮೊದಲ ಎರಡು ಭಕ್ತಿಸ್ಥಲವನ್ನು, ಮೂರನೆಯದು ಮಾಹೇಶಸ್ಥಲವನ್ನು, ನಾಲ್ಕನೆಯದು ಪ್ರಾಣಲಿಂಗಿಸ್ಥಲವನ್ನು, ಐದನೆಯದು ಶರಣ ಹಾಗೂ ಐಕ್ಯಸ್ಥಲವನ್ನು ಬಹುಮಟ್ಟಿಗೆ ಹೋಲುತ್ತವೆ. ಈ ಪಂಚ ಸ್ಥಲಗಳಲ್ಲಿ (೨೮+೨೨+೨೬+೩೯+೫೯)೧೭೪ ಹಾಡುಗಳಿವೆ. ವೀರಶೈವದ ಹಾಡುಗಳಿಗೆ 'ಸ್ವರವಚನ'ಗಳೆಂದು ವಿಶೇಷವಾಗಿ ರೂಢಿಯಲ್ಲಿದೆ. "ವೀರಶೈವ ಸಾಹಿತ್ಯದಲ್ಲಿ ಹಾಡಿನ ಪರಂಪರೆ ಬಸವೇಶ್ವರನ ಕಾಲದಲ್ಲಿ ಮೊದಲಾಗಿ ಮತ್ತೆ ನಿಜಗುಣಶಿವಯೋಗಿಯ ಕಾಲಕ್ಕೆ ತಲೆ ಎತ್ತಿತು. ಇವುಗಳಲ್ಲಿ ಜ್ಞಾನಪ್ರದವಾದ ಭಾವಶಾಂತಿ ಇದೆ" ಎಂದು ರಂ.ಶ್ರೀ ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಿಳಿಸಿರುತ್ತಾರೆ.

---

೦. ಡಾ. ಅವಳೀಕರ ಅವರ 'ಕರ್ನಾಟಕ ಮತ್ತು ಮರಾಠಿ ಸಾಹಿತ್ಯ' ಅನು. ಎಸ್.ಪಿ. ಪಾಟಿಲ್. ಪ್ರಕಾಶನ : ಕರ್ನಾಟಕ ವಿಶ್ವವಿದ್ಯಾನಿಲಯ. ೧೯೭೭

೩) **ಪರಮಾನುಭವ ಬೋಧೆ :** ಉಪನಿಷತ್ ಕಾಲದಲ್ಲಿ ನಡೆದ ಒಂದು ಅಪೂರ್ವವಾದ ಜ್ಞಾನಾಪೇಕ್ಷೆಯ ಬೋಧನಾ ಘಟನೆಯನ್ನು ನಿಜಗುಣ ಶಿವಯೋಗಿಗಳು ಬಹಳ ಸುಂದರವಾಗಿ ರಚಿಸಿರುತ್ತಾರೆ. ಇದು "ಶ್ರೀ ಯಾಜ್ಞವಲ್ಕ್ಯರು ತಮ್ಮ ಸತಿ ಮೈತ್ರೇಯಿಗೆ ಪೇಳ್ದುದನೊಯ್ಯಾರದಿಂದೆ ವರ್ಣಿಸುವೆನು" ಎಂದು ಪ್ರಾರಂಭದ ಪೀಠಿಕೆಯಲ್ಲಿ ತಿಳಿಸಿ, ಬ್ರಹ್ಮಜ್ಞಾನದ ವಿಶಿಷ್ಟ ವಿಷಯಗಳನ್ನು ದೇಸೀಯ ಚೌಪದಿ ಪದ್ಯಗಳಲ್ಲಿ ಸರಳವಾಗಿ ತಿಳಿಸಿದ್ದಾರೆ. ಇದರಲ್ಲಿ ೬ ಸಂಧಿ, ೧೨೨ ಸೂತ್ರ, ೯೮೫ ಪದ್ಯಗಳಲ್ಲಿ ತತ್ತ್ವಜಿಜ್ಞಾಸೆ ಅಥವಾ ಬ್ರಹ್ಮಜಿಜ್ಞಾಸೆಯನ್ನು ಅಚ್ಚಕನ್ನಡದಲ್ಲಿ ತಿಳಿಸಿಕೊಟ್ಟಿದ್ದಾರೆ.

೪) **ಪರಮಾರ್ಥ ಗೀತೆ :** ಈ ಕೃತಿಯಲ್ಲಿ ಹನ್ನೊಂದು ಗತಿ (ಅಧ್ಯಾಯ)ಗಳಿವೆ. ಒಂದೊಂದು ಗತಿಯಲ್ಲಿ ಎಂಟೆಂಟು ಪಾದಗಳ ಹನ್ನೊಂದು ಸರಳ ರಗಳೆಗಳಿವೆ. ಉಪನಿಷತ್ ಕಾಲದಲ್ಲಿ ವಶಿಷ್ಠಾದಿ ಋಷಿಗಳು ತಮ್ಮ ತಮ್ಮ ಶಿಷ್ಯರುಗಳಿಗೆ ಬೋಧಿಸಿದ ಪಾರಮಾರ್ಥಿಕ ವಿಷಯಗಳನ್ನು ಈ ಕೃತಿಯಲ್ಲಿ ಪ್ರತಿಪಾದಿಸಿರುತ್ತಾರೆ. ಇದೂ ಸಹ ಉಪದೇಶ ಮಾರ್ಗದಲ್ಲಿ ರಚಿತವಾಗಿದೆ.

೫) **ಅನುಭವ ಸಾರ :** ಗುರು–ಶಿಷ್ಯರ ಪ್ರಶ್ನೋತ್ತರ ಸರಣಿಯಲ್ಲಿ ಈ ಕೃತಿಯು ಮೈದಾಳಿದೆ. ಸತ್ತು– ಚಿತ್ತುಗಳ ಮುಕ್ತಿಮಾರ್ಗಕ್ಕೆ ಬೇಕಾದ ಅತ್ಯಮೂಲ್ಯ ಸೂಚನೆಗಳ ಮೂಲಕ ಮುಮುಕ್ಷುಗಳಿಗೆ ಇದು ಆದರ್ಶವಾಗಿದೆ; ಇದರಲ್ಲಿ ೮ ಸಂಧಿಗಳು, ೪೬ ಸೂತ್ರಗಳು ೫೩೫ ತ್ರಿಪದಿಗಳಿವೆ. ತ್ರಿಪದಿಗಳ ಓಟ ನಿರರ್ಗಳವಾಗಿದೆ.

೬) **ಪರಮಾರ್ಥ ಪ್ರಕಾಶಿಕೆ :** ಸಂಸ್ಕೃತದಲ್ಲಿ 'ಶಿವಯೋಗ ಪ್ರದೀಪಿಕೆ' ಎಂಬ ಕೃತಿಯನ್ನು ಚನ್ನಸದಾಶಿವಯೋಗಿಯು ರಚಿಸಿರುತ್ತಾರೆ. ಇದು ಕಾಮಿಕಾದಿ ಶಿವಾಗಮಗಳು ಮತ್ತು ಭುಷುಂಡ–ವಾಮದೇವ–ಶ್ವೇತ–ದಮನರೆಂಬ ಯೋಗಸಿದ್ಧರ ಸಿದ್ಧಾರ್ಥ ಮಾರ್ಗಂಗಳನು ಲೇಸಾಗಿ ವಿಚಾರಿಸಿ, ಆ ಸಮಸ್ತವನು ಸಂಕೋಚಿಸಿ ಸುಗಮವಾಗಿ ಹೇಳಲ್ಪಟ್ಟ ಕೃತಿ.[1] ಇದು **'ಪರಮಾರ್ಥ ಪ್ರಕಾಶಿಕೆ'** ಎಂಬ ಶಿರೋನಾಮೆಯಲ್ಲಿ ಅಚ್ಚಗನ್ನಡ ಗದ್ಯ ರೂಪದಲ್ಲಿ ಅನುವಾದಗೊಂಡಿದೆ. ಇದೂ ಸಹ ಉಪದೇಶ ರೂಪದಲ್ಲಿದೆ.

೭) **ವಿವೇಕ ಚಿಂತಾಮಣಿ :** ಮುಂದೆ ವಿವರವಾಗಿ ತಿಳಿಸಲಾಗಿದೆ.

೮) **ಸ್ವರೂಪಸಿದ್ಧಿ ಟೀಕೆ :** ೧೪೫೦ರಲ್ಲಿದ್ದ ಪರಂಜ್ಯೋತಿಯು **'ಅನುಭವ ಮುಕುರ'** ಎಂಬ ಕೃತಿಯನ್ನು ತ್ರಿಪದಿಯಲ್ಲಿ ರಚಿಸಿರುತ್ತಾನೆ.[2] ಇದು ಅದ್ವೈತ ವೇದಾಂತವನ್ನು ತಿಳಿಸುವ ಗ್ರಂಥ. ಇದು ಪೂರ್ವಕಾಂಡ (ಸಾಧನ ವಿವೇಕ), ಉತ್ತರಕಾಂಡ

---

[1] ನಿಜಗುಣರ ಸಮಗ್ರ ಕೃತಿಗಳು.ಭಾಗ ೨ ಸಂ. ಡಾ. ಎಸ್. ವಿದ್ಯಾಶಂಕರ್. ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ. ೧೯೯೫ ಪುಟ.೩೪೭

[2]. 'ಅನುಭವ ಮುಕುರ' ಸಂ.ಕೆ.ಆರ್. ಶೇಷಗಿರಿ. ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ. ೧೯೭೮

(ಅನುಭವ ವಿವೇಕ), ಮಹಾವಾಕ್ಯಕಾಂಡ (ಅನುಭವ ಮುಕುರ) ಎಂಬ ಮೂರು ಕಾಂಡಗಳಿಂದ ಕೂಡಿದೆ. ಮೂರನೆಯ ಭಾಗವಾದ ಮಹಾವಾಕ್ಯ ಕಾಂಡಕ್ಕೆ ನಿಜಗುಣಶಿವಯೋಗಿಗಳು 'ಸ್ವರೂಪಸಿದ್ಧಿ' ಹೆಸರಿನಲ್ಲಿ ಟೀಕೆಯನ್ನು ರಚಿಸಿರುತ್ತಾರೆ.

ವಿವೇಕ ಚಿಂತಾಮಣಿ

ಇದು ಗದ್ಯಕೃತಿ, ಕನ್ನಡ ಸಾಹಿತ್ಯದಲ್ಲಿ ಮೇರು ಕೃತಿ. ನಿಜಗುಣಶಿವಯೋಗಿಗಳು ತಮ್ಮ ಸಂಪೂರ್ಣ ಜ್ಞಾನಸಂಪತ್ತನ್ನು ವಿವೇಕ ಚಿಂತಾಮಣಿಗೆ ವಿನಿಯೋಗಿಸಿದ್ದಾರೆ. ಹೀಗೆ ವಿನಿಯೋಗಿಸಿರುವಾಗ ಔಚಿತ್ಯಜ್ಞಾನದಿಂದ ಕೆಲವು ವಿಷಯಗಳನ್ನು ಇದರಲ್ಲಿ ಸಮಾವೇಶಗೊಳಿಸಿಲ್ಲ. ಉದಾ: ಆಯುರ್ವೇದ ಮತ್ತು ಅದರ ಬಗೆಗಳು, ಪಾಕಶಾಸ್ತ್ರ, ಚಿತ್ರಾಯೋಗ, ತಸ್ಕರ ಶಾಸ್ತ್ರ, ಇಂದ್ರಜಾಲ, ಅಭಿಚಾರಯೋಗಾದಿಗಳನ್ನು ಸೇರುವೆಗೊಳಿಸಿಲ್ಲ. ಅವರೇ ಹೇಳಿರುವಂತೆ "ಸಾರತರಮಾದ ಸತ್ಯಾರ್ಥಂಗಳನೆ ಸಂಗ್ರಹಿಸಿ ಮುನ್ನುಳ್ಳ ಮಣಿಪುಂಜಮಂ ರಂಜನೆಗೆಯ್ದು ತರವರಿದು ಸರಂಗೊಳಿಸಿ ನವೀನ ಕಂಠಾಭರಣವೆನಿಸುವಂತೆ ಮುಮುಕ್ಷುಜನಂಗಳೀ ಈ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಹವೆಂದರಸಿ ಬಳಲದಂತೆ ಅಭಿವ್ಯಕ್ತಮಾಗಿ ಇಲ್ಲಿ ಸಲ್ಲೀಲೆಯಿಂದರಿದು ಕೃತಾರ್ಥರಾಗಲೆಂದು ನಿಜಗುಣಶಿವಯೋಗಿ ಬೆಳುಗನ್ನಡಮಾದ ವಚನ ರಚನೆಗಳಿಂ ವಿವೇಕ ಚಿಂತಾಮಣಿಯೆಂಬ ಪ್ರಕರಣಮಂ ಪೇಳ್ವನ್" ಎಂದಿದ್ದಾರೆ.

ಇದರಲ್ಲಿ ಮಿಥ್ಯೆ ಎಂಬುದಿಲ್ಲ. ಏಕೆಂದರೆ ಸತ್ಯಾರ್ಥಂಗಳನ್ನೇ ಸಂಗ್ರಹಿಸಿದ್ದಾರೆ. ಇದು ಒಂದು ರೀತಿಯಲ್ಲಿ ಮಧುಕರವೃತ್ತಿ. ಮಧುಕರನು ತಾನು ಯಾವ ಯಾವ ಹೂವುಗಳಿಂದ ಮಧುವನ್ನು ಸಂಗ್ರಹಿಸಿದ್ದೇನೆ ಎಂದು ಹೇಳಬೇಕಿಲ್ಲ. ಅದು ಸಂಗ್ರಹಿಸಿದ ಮಧುವನ್ನು ಸವಿದು ಚಪ್ಪರಿಸಿದರೆ ಸಾಕು. ಅದರಂತೆ ನಿಜಗುಣರು ತಾವು ಇದರಲ್ಲಿರುವ ವಿಷಯಗಳನ್ನು ಎಲ್ಲೆಲ್ಲಿಂದ ಸಂಗ್ರಹಿಸಿದೆ ಎಂಬುದರ ಪಟ್ಟಿಯನ್ನು ಕೊಡಬೇಕಿಲ್ಲ. ಅದನ್ನು ಹುಡುಕುವ ಶ್ರಮ ಬೇಡವೆಂದು ಮಾರ್ಮಿಕವಾಗಿ ತಿಳಿಸಿದ್ದಾರೆ. ಆದರೂ ನವಮ ಪರಿಚ್ಛೇದದಲ್ಲಿ ಬರುವ ಪಿಂಡೋತ್ಪತ್ತಿ ವಿವರಣೆಯಲ್ಲಿ ಇದಕ್ಕೆ ಸಂಬಂಧಿಸಿದ ಗರ್ಭೋಪನಿಷತ್‌ನ್ನು ಹೆಸರಿಸಿದ್ದಾರೆ.

ವಿವೇಕ ಚಿಂತಾಮಣಿಯಲ್ಲಿ ವಿಶ್ವದ ವಿಷಯಂಗಳ ಸುಸ್ಥಿತಿಯೂ ಇದೆ. ಲೌಕಿಕರು ಇದನ್ನು ತಿಳಿದು ಅಚ್ಚರಿಗೊಳ್ಳಲಿ ಎಂದು ಇದರಲ್ಲಿ ಅದೆಲ್ಲವನ್ನು ವಿವರವಾಗಿ ತಿಳಿಸಿದ್ದಾರೆ. ವಿವೇಕ ಚಿಂತಾಮಣಿಯು ಒಂದು ಅದ್ಭುತ ವಿಶ್ವಕೋಶವಾಗಿದೆ; ಕನ್ನಡದಲ್ಲಿ ಸ್ವತಂತ್ರವಾಗಿ ಗದ್ಯಶೈಲಿ ಬೆಳೆಯಲು ಈ ಗ್ರಂಥ ಬಹುಮಟ್ಟಿಗೆ ಸಹಾಯ ಮಾಡಿತೆನ್ನಬಹುದು; ಇದು ಸಂಸ್ಕೃತ, ಮರಾಠಿ, ತಮಿಳು, ತೆಲಗು ಭಾಷೆಗಳಿಗೆ ಅನುವಾದವಾಗಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಸುಪ್ರಸಿದ್ಧ ಸಾಹಿತಿ ಅ.ನ.ಕೃಷ್ಣರಾಯರು ಹೇಳಿದ್ದಾರೆ.

ವಿವೇಕ ಚಿಂತಾಮಣಿಯು ನಿಜಗುಣರ ಹೆಬ್ಬೊತ್ತಿಗೆ. ಕನ್ನಡ ಜನಕ್ಕೆ ಅವರು ನೀಡಿದ ಜ್ಞಾನಭಾಂಡಾರ. ಬೆಳುಗನ್ನಡಮಾದ ವಚನ ರಚನೆಗಳಿಂದ ರಚಿಸಿದ ಈ

ಉದ್ಗ್ರಂಥ ಒಂದು ಮತದ ಇಲ್ಲವೆ ತತ್ತ್ವದ ಜ್ಞಾನಕೋಶವಲ್ಲ. ಮತಾತೀತವಾದ ಸಕಲ ಜ್ಞಾನಕೋಶವೆಂಬ ಸ್ವರೂಪದಲ್ಲಿ ಇದು ಕನ್ನಡ ವಾಙ್ಮಯದಲ್ಲಿ ಅದ್ವಿತೀಯವಾದ ಗದ್ಯ ಗ್ರಂಥ – ಎಂದು ಸಿದ್ಧಯ್ಯ ಪುರಾಣಿಕರು ಶ್ರುತಪಡಿಸಿದ್ದಾರೆ.

ಪಾಶ್ಚಾತ್ಯ ವಿದ್ವಾಂಸರಾದ ಬಿ. ಲೂಯಿ ರೈಸ್, ಇ.ಪಿ. ರೈಸ್ ಮತ್ತು ಎಫ್. ಕಿಟೆಲ್‌ರವರು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಇವರಲ್ಲಿ ಇ.ಪಿ. ರೈಸ್ ನಿಜಗುಣರ ಬಗ್ಗೆ ಅಡಿರುವ ಮಾತುಗಳು ಇಂತಿವೆ.: "He was a great scholar and a prolific writer. He was the ruler of the country round Sambhulinga hill near Yelandur, and finally retired to that hill and lived there was a Siva-Yogi. In all his works he extols Sambhulinga. He did not write like the others, in shatpadi, but employed tripadi, sangatya, ragale and prose. One work is a commetary on the Sanskrit Siva-yoga-pradipika, written especially for the benefit of those ignorant of Sanskrit who desire emancipation. But his best know work is the Viveka-chinatamani, a very useful encylopaedia of Sanskrit terms and Virasaiva lore," [1]

ಹೀಗೆ ಅನೇಕ ವಿದ್ವಾಂಸರು ಈ ಕೃತಿಗೆ ನಿಷ್ಪಕ್ಷಪಾತವಾಗಿ ತಮ್ಮ ಮೆಚ್ಚಿಗೆಯನ್ನು ತಿಳಿಸಿದ್ದಾರೆ.

ಕನ್ನಡ ಸಾಹಿತ್ಯಲೋಕದಲ್ಲಿ ಎರಡು ಚಿಂತಾಮಣಿಗಳಿವೆ. ಒಂದು ಶಿವತತ್ತ್ವ ಚಿಂತಾಮಣಿ, ಮತ್ತೊಂದು ವಿವೇಕ ಚಿಂತಾಮಣಿ. ಶಿವತತ್ತ್ವ ಚಿಂತಾಮಣಿಯ ಕರ್ತೃ ಲಕ್ಕಣ ದಂಡೇಶ, ವಿದ್ಯಾನಗರ (ವಿಜಯನಗರ)ದ ಇಮ್ಮಡಿ ಪ್ರೌಢದೇವರಾಯನಲ್ಲಿ ದಂಡನಾಯಕನಾಗಿದ್ದನು. ಕಾವ್ಯರೂಪದಲ್ಲಿರುವ ಶಿವತತ್ತ್ವ ಚಿಂತಾಮಣಿಯ ಪ್ರಾರಂಭದಲ್ಲಿ

> ವಿತತ ವೇದಾಗಮ ಪುರಾತನೋಕ್ತಿಗಳ ಸ
> ಮ್ಮತದ ಸಾರಾಯ ಶಿವತತ್ತ್ವ ಚಿಂತಾಮಣಿಯ
> ಕೃತಿಯ ವಿಸ್ತರಿಸುವೆಂ ಶಿವಭಕ್ತತತಿ ಕೇಳ್ದು ಮೆಚ್ಚಿ ಕೃತಕೃತ್ಯವಹುದು ॥
> ॥ಪಲ್ಲವಿ, ಸಂಧಿ ೧ ॥

ಲಕ್ಷಣ ದಂಡೇಶನೂ ಶಿವಭಕ್ತ, ವಿದ್ವಾಂಸ. ವೇದ ಆಗಮ ಪುರಾಣಾದಿಗಳನ್ನು ಇವನು ಆಮೂಲಾಗ್ರವಾಗಿ ಅಭ್ಯಾಸ ಮಾಡಿದ್ದಾನೆ. ಅವುಗಳೆಲ್ಲದರ ಸಾರವನ್ನೇ ಇಲ್ಲಿ ಹೇಳಲು ಹೊರಟಿದ್ದಾನೆ. ಇವನಿಗೂ ವೇದ ಆಗಮ ಪುರಾಣಗಳೇ ಪ್ರಸ್ಥಾನತ್ರಯಗಳು. ಈ ಕೃತಿಯು ವೀರಶೈವರಿಗೋಸ್ಕರವೇ.

---

೦ ಊಥಣಠಡಿಥಿ ಠಜೆ ಞಚಿಟಿಚಿಡಿಞಜ ಟುಣಜಡಿಚಿಣಣಡಿಜ ಛಥಿ ಇ.ಕ. ಖುಥಿಜ

ಎರಡನೆಯದಾದ ವಿವೇಕ ಚಿಂತಾಮಣಿಯು ವೀರಶೈವರಿಗೂ ವೀರಶೈವೇತರರಿಗೂ ಅಗತ್ಯವಾದ ವಿಷಯಗಳನ್ನು ತಿಳಿಸುತ್ತದೆ. ಇದು ಪ್ರಕರಣ ಗ್ರಂಥವಾದರೂ ಪ್ರಭುಸಮ್ಮಿತದಲ್ಲಿ ನಿಜಗುಣ ಶಿವಯೋಗಿಗಳು ರಚಿಸಿರುತ್ತಾರೆ.

"ವೇದ ಪುರಾಣ ಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವ ವಿಷಯಂಗಳ ಸುಸ್ಥಿತಿಯಂ ವಿವೇಕ ಚಿಂತಾಣಿಯೆಂದು ಸಲ್ವ ಪೆಸರಿಟ್ಟು ಮಹಾಕವಿತಾ ಪ್ರಬಂಧಮಂ ಪ್ರೇಮದೆ ಪೇಳ್ವ ನಾ, ಇದನೆ ನೀನೊಲಿದು ಆಲಿಸು ಶಂಭುಲಿಂಗವೆ" ಎಂದು ತಮ್ಮ ಈ ಪ್ರಬುದ್ಧ ಕೃತಿಯನ್ನು ತಮ್ಮ ಇಷ್ಟದೈವಕ್ಕೆ (ಶಂಭುಲಿಂಗಕ್ಕೆ)ಒಪ್ಪಿಸಿರುತ್ತಾರೆ. ಲೌಕಿಕರೂ ತಿಳಿದು ಅಚ್ಚರಿಗೊಳ್ಳಲಿ ಎಂದು ಇದರಲ್ಲಿ ವಿಶ್ವದ ವಿಷಯಗಳೆಲ್ಲವನ್ನೂ ವಿಸ್ತಾರವಾಗಿ ತಿಳಿಸಿದ್ದಾರೆ.

ಚಿಂತಾಮಣಿ ಎಂದರೆ ಬಯಸಿದುದನ್ನು ಕೊಡುವ ಒಂದು ಅನರ್ಘ್ಯವಾದ ಮಣಿ. ಲಕ್ಷಣದಂಡೇಶನ ಚಿಂತಾಮಣಿಯು ಶಿವತತ್ತ್ವವನ್ನು ಕೊಡುವುದಾದರೆ, ನಿಜಗುಣಶಿವಯೋಗಿಯ ಚಿಂತಾಮಣಿಯು ಶಿವತತ್ತ್ವದ ಜೊತೆಗೆ ಸಂಶಯ ಉಂಟಾಗದಂತೆ ವಿವೇಕವನ್ನೂ ಕೊಡುತ್ತದೆ. ವಿವೇಕ ಚಿಂತಾಮಣಿ ಎಂಬ ಮಧುವು ನಮ್ಮೆದುರಿಗೆ ಇರುವಾಗ 'ಬಳಲದಂತೆ' ನಿಜಗುಣ ಶಿವಯೋಗಿ ನಮಗೆ ಸೂಕ್ಷ್ಮವಾಗಿ ಎಚ್ಚರಿಸಿದ್ದಾರೆ. ಅಷ್ಟೇ ಅಲ್ಲ, ಸಲ್ಲೀಲೆಯಿಂದರಿದು ಕೃತಾರ್ಥರಾಗಿ ಎಂದೂ ಸೂಚಿಸಿದ್ದಾರೆ.

ಕೆಲವು ವೀರಶೈವ ಅನುಭಾವಿಗಳು, ಅವರಲ್ಲಿ (೧) ಸಂಪಾದನೆಯ ಸಿದ್ಧವೀರಣಾರ್ಯ (೨) ಶಾಂತದೇವ ಮುಂತಾದವರು ತಾವು ಸಂಕಲನಗೈದ ಗ್ರಂಥಗಳಲ್ಲಿ ಯಾವ ಯಾವ ಆಕರ ಗ್ರಂಥಗಳಿಂದ ಉಪಕೃತರಾಗಿದ್ದೇವೆಂಬುದನ್ನು ತಿಳಿಸಲು ಅಲ್ಲಲ್ಲಿ ಆಯಾ ಗ್ರಂಥದ ಹೆಸರುಗಳನ್ನು ಉಲ್ಲೇಖಿಸಿರುತ್ತಾರೆ. ಸಂಪಾದನೆ ಸಿದ್ಧವೀರಣಾರ್ಯರ ಅನಾದಿ ವೀರಶೈವ ಸಾರಸಂಗ್ರಹದಲ್ಲಿ ೨೧೪ ಗ್ರಂಥಗಳ ಉಲ್ಲೇಖವಿದೆ. ಅವು ವೇದ ಆಗಮ ಪುರಾಣ ಇತ್ಯಾದಿಗಳಾಗಿವೆ. ಅಂತೆಯೇ ಶಾಂತದೇವರ ಷಟ್ಸ್ಥಲ ಸಂಗ್ರಹದಲ್ಲಿ ೯೮ ಗ್ರಂಥಗಳ ಉಲ್ಲೇಖವಿದೆ. ಇವು ಕೇವಲ ಆನುಭಾವಿಕ ವಿಷಯ ನಿರೂಪಣೆಗೆ ಮೀಸಲಾದ ಕೃತಿಗಳು. ನಿಜಗುಣಶಿವಯೋಗಿ ಅಗತ್ಯವಾದ ಇನ್ನೂ ಅನೇಕ ಕೃತಿಗಳ ಆಧಾರದಿಂದ ವಿವೇಕ ಚಿಂತಾಮಣಿಯನ್ನು ರಚಿಸಿ, ಕೃತಕೃತ್ಯರಾಗಿದ್ದಾರೆ.

ವಿವೇಕ ಚಿಂತಾಮಣಿಯಲ್ಲಿ ಹತ್ತು ಪರಿಚ್ಛೇದಗಳಿವೆ. ಇಷ್ಟದೈವವಾದ ಶಂಭುಲಿಂಗದ ಪ್ರಾರ್ಥನೆಯ ನಂತರ ಕೃತಿಯು ಆರಂಭಗೊಂಡಿದೆ.

ಒಂದನೆಯ ಪರಿಚ್ಛೇದ : ವೇದಾದಿ ಸಕಲ ಶಾಸ್ತ್ರಾರ್ಥಗಳ ಪರಿಚಯ, ವೇದ ಉಪನಿಷತ್ ವರ್ಣಾಶ್ರಮಗಳು, ಪ್ರಚಲಿತವಿರುವ ದರ್ಶನ ಸ್ವರೂಪವಿವೇಚನೆ, ಶಂಕರಾದ್ವೈತಕ್ಕೆ ಸಂಬಂಧಿಸಿದ ವಿಚಾರಗಳು, ಗುರು-ಶಿಷ್ಯ, ಪಂಚೀಕರಣ, ಜೀವನ ಸಪ್ತಾವಸ್ಥೆಗಳು. ಅಧ್ಯಾಸ, ಪಂಚಾವಸ್ಥೆಗಳು. ಅಹಂಕಾರ, ತತ್ತ್ವಮಸಿ,ಆನಂದೋಪಾಧಿಭೇದ ಇತ್ಯಾದಿ ಅತಿ ಗಹನವಾದ ವೈದಿಕ ವಿಷಯಗಳು ಪ್ರತಿಪಾದಿಸ್ಪಟ್ಟಿವೆ.

ಎರಡನೆಯ ಪರಿಚ್ಛೇದ : ಆಗಮ ಪ್ರಧಾನವಾದ ಶೈವಸಿದ್ಧಾಂತ ಮತ್ತು ಅದರಿಂದ ಟಿಸಿಲೊಡೆದ ಶೈವಭೇದಗಳನ್ನು ವಿಶದವಾಗಿ ನಿರೂಪಿಸಿದ್ದಾರೆ. ಇಪ್ಪತ್ತೆಂಟು ಆಗಮಗಳು ಅವಕ್ಕೆ ಸಂಬಂಧಿಸಿದ ಉಪಾಗಮಗಳು, ಅವುಗಳ ನಾಮೋಲ್ಲೇಖ, ಆಗಮಗಳ ನಾಲ್ಕು ಭಾಗಗಳಾದ ಕ್ರಿಯಾಪಾದ ಚರ್ಯಾಪಾದ ಯೋಗಪಾದ ಜ್ಞಾನಪಾದಗಳ ಆಧಾರದ ಮೇಲೆ, ಶುದ್ಧಶೈವಲಕ್ಷಣ ಮತ್ತು ವೀರಶೈವ ಲಕ್ಷಣ, ಆಚರಣೆ ಇತ್ಯಾದಿಗಳನ್ನು ಆಗಮರೀತ್ಯಾ ಪ್ರತಿಪಾದಿಸಿರುತ್ತಾರೆ. ಆಗಮದ ಪ್ರಕಾರ "ವೀರಶೈವನು ಚರಮಶರೀರಿ, ಸಮಸ್ತರೊಳಗೆ ಇವನು ವಿಶಿಷ್ಟ. ಇತರರಂತೆ ಕ್ರಿಯಾಬಾಹುಳ್ಯದಿಂದ ಅಲ್ಪಫಲವನ್ನು ಗಳಿಸದೆ, ಅಲ್ಪ ಕ್ರಿಯೆಯಿಂದ ಅನಂತಫಲವನ್ನು ಪಡೆಯುತ್ತಾನೆ.

ಮೂರನೆಯ ಪರಿಚ್ಛೇದ : ಶುದ್ಧಾದ್ವೈತ ತತ್ತ್ವಗಳೇ ಮೊದಲಾದ ತತ್ತ್ವಗಳ ವಿಷಯ ಪರಿಚಯ, ಪಂಚೀಕರಣ, ಎಂಬತ್ತನಾಲ್ಕು ಜೀವರಾಶಿಗಳು ಬ್ರಹ್ಮಾಂಡಾದಿಗಳ ಲಕ್ಷಣ, ಸೃಷ್ಟಿಯ ವಿಚಾರ, ನರಕಗಳ ವರ್ಣನೆ, ಪಾಪಸ್ವರೂಪಗಳ ನಿರೂಪಣೆ.

ನಾಲ್ಕನೆಯ ಪರಿಚ್ಛೇದ : ಭೂಲೋಕ, ಜಂಬೂದ್ವೀಪ, ಮಹಾಮೇರು, ಅರಣ್ಯ ನದಿಗಳು, ಸರೋವರ, ವೃಕ್ಷ, ಮೃಗಜಾತಿಗಳ ನಿರೂಪಣೆ, ರಾಜ, ರಾಜನ ಆಸ್ಥಾನ, ರಾಜಸಭೆಯ ಕವಿ ಗಮಕಿ ಜ್ಯೋತಿಷಿ, ಸಂಗೀತ ನೃತ್ಯ ಕಾವ್ಯ ಸ್ವರೂಪಾದಿಗಳು, ಸಂಗೀತ ಶಾಸ್ತ್ರ, ರತಿಶಾಸ್ತ್ರ ಇತ್ಯಾದಿಗಳ ಲೌಕಿಕ ವಿಷಯಗಳನ್ನು ಅತಿರೇಕವಿಲ್ಲದೆ ನಿರೂಪಿಸಲಾಗಿದೆ.

ಐದನೆಯ ಪರಿಚ್ಛೇದ : ಬಗೆಬಗೆಯ ಸಮುದ್ರಗಳು ಸಪ್ತದ್ವೀಪಗಳು ತಮೋಭೂಮಿ, ಭೂಲೋಕದ ಯೋಜನಸಂಖ್ಯೆ ಇತ್ಯಾದಿಗಳ ನಿರೂಪಣೆ.

ಆರನೆಯ ಪರಿಚ್ಛೇದ : ಜ್ಯೋತಿಷಶಾಸ್ತ್ರಕ್ಕೆ ಪೂರಕವಾದ ಖಗೋಳಪರಿಚಯ, ಅಲ್ಲಿನ ಚಂದ್ರ ಸೂರ್ಯಾದಿ ನವಗ್ರಹಗಳ ಸ್ಥಾನ. ಋಷಿಗಳ ಸ್ಥಾನ, ಇವೆಲ್ಲವನ್ನು ವಾಯು ಸೂತ್ರದಿಂದ ನಿರ್ವಹಿಸುತ್ತಿರುವ ಧ್ರುವ ಮತ್ತು ಅವನ ಲೋಕ ಅಚ್ಚರಿಪಡುವಂತೆ ವಿವರಿಸಿರುತ್ತಾರೆ.

ಏಳನೆಯ ಪರಿಚ್ಛೇದ : ಪೃಥಿವ್ಯಾದಿ ಪಂಚಭೂತಗಳೇ ಮೊದಲುಗೊಂಡು ಮಾಯಾತತ್ತ್ವದ ವರೆಗಿನ, ರುದ್ರಪ್ರಪಂಚ ವಿವರಗಳನ್ನೂ ವಿಶದವಾಗಿ ನಿರೂಪಿಸಲಾಗಿದೆ.

ಎಂಟನೆಯ ಪರಿಚ್ಛೇದ : ಶುದ್ಧ ವಿದ್ಯಾತತ್ತ್ವ ರುದ್ರರಿಂದ ಪ್ರಾರಂಭಸಿ ಶಕ್ತಿತತ್ತ್ವ ಶಿವತತ್ತ್ವ ಕೊನೆಗೆ ಸರ್ವಾಶ್ರಯ ಶ್ರೀಶಂಭುಲಿಂಗದ ನಿತ್ಯಸತ್ಯವನು ವಿವರಿಸಿದೆ.

ಒಂಬತ್ತನೆಯ ಪರಿಚ್ಛೇದ : ನಾಸ್ತಿಕ ಜನರನ್ನು ಖಂಡಿಸಿ ಸತ್ಯದ ವಿಚಾರದಿಂದ ಆಸ್ತಿಕ ಬುದ್ಧಿ ಲಭ್ಯವಾಗುವುದು. ಪಿಂಡೋತ್ಪತ್ತಿ ಇತ್ಯಾದಿಗಳು, ಕೊನೆಗೆ ಸಮಯಾಂತರಾಭಿಮಾನಿಗಳ ಗತಿಭೇದ ವಿಚಾರ.

ಹತ್ತನೆಯ ಪರಿಚ್ಛೇದ : ಕಾಲಸ್ವರೂಪದ ಭೇದಗಳು, ಯುಗಭೇದ, ಕರ್ಮಸಿದ್ಧಭೇದ, ಬ್ರಹ್ಮಾದಿಗಳ ಪರಿಮಿತಿ, ಮಹಾಸಂಹಾರಕ್ರಮ, ಈ ಕೃತಿಯ ಅಭ್ಯಾಸಿಗಳಿಗೆ ಫಲಸಿದ್ಧಿ, ಗ್ರಂಥೋಪಸಂಹಾರ ಮಂಗಳಾಚರಣೆ.

ಇದಿಷ್ಟು ವಿವೇಕ ಚಿಂತಾಮಣಿಯ ಪಕ್ಷಿನೋಟ. ಇನ್ನು ವಿವೇಕ ಚಿಂತಾಮಣಿಯ ಕೆಲವು ವಿಷಯಗಳನ್ನು ವಿಚಾರಮಾಡಬಹುದು.

೧) "ನಿಜಗುಣಶಿವಯೋಗಿ ಬೆಳುಗನ್ನಡವಮಾದ ವಚನರಚನೆಗಳಿಂ ವಿವೇಕ ಚಿಂತಾಮಣಿಯೆಂಬ ಪ್ರಕರಣಮಂ ಪೇಳ್ವನು" – ಎಂದಿದ್ದಾರೆ. ನಮಗೆ ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬುದು ಎಲ್ಲರಿಗೂ ತಿಳಿದ ವಿಷಯ. ನಿಜಗುಣರು ಇವುಗಳ ಜೊತೆಗೆ ಬೆಳುಗನ್ನಡ ಎಂಬ ಬೇರೊಂದು ಕನ್ನಡವನ್ನು ತಿಳಿಸಿದ್ದಾರೆ. ಇದು ವಿಚಾರಕ್ಕೆ ಯೋಗ್ಯವಾದುದು.

ಬೆಳುಗನ್ನಡವನ್ನು ಬಿಳುಪಾದ + ಕನ್ನಡ ಎಂಬುದಾಗಿ ಬಿಡಿಸಬಹುದು. ಬೆಳ್ಳಗಿರುವ ಕನ್ನಡವೆಂದೂ, ಬೆಳಕಿನಂತಿರುವ ಕನ್ನಡವೆಂದೂ ಈ ಸಮಾಸಪದ ಅರ್ಥವನ್ನು ಕೊಡುತ್ತದೆ. ಭಾಷೆಗೆ ಯಾವುದೇ ಬಣ್ಣವಿಲ್ಲ, ಆದುದರಿಂದ ಬಿಳುಪಾದ ಕನ್ನಡ ಎಂಬುದನ್ನು ನಿರಾಕರಿಸಿ, ಬೆಳಕಿನಂತಿರುವ ಕನ್ನಡ ಎಂಬುದನ್ನು ಸ್ವೀಕರಿಸಿ ವಿಚಾರ ಮಾಡಬಹುದು.

ಶ್ರೀಧರಾಚಾರ್ಯರು (೧೦೫೦) ತಮ್ಮ ಜಾತಕತಿಲಕದಲ್ಲಿ "ಜ್ಯೋತಿರ್ಜ್ಞಾನವಿದೆಂತೆನೆ ಕತ್ತಲೆಮನೆಯ ವಸ್ತುಗಳಂ ತೋರ್ಪ ಸೊಡರ ಬೆಳಕಿನ ತೆರದಿಂ" ಎಂದು ತಿಳಿಸಿದ್ದಾರೆ. ಎಂದರೆ, "ಜ್ಯೋತಿಷಜ್ಞಾನವು ಕತ್ತಲೆ ಮನೆಯಲ್ಲಿರುವ ಸಕಲ ವಸ್ತುಗಳನ್ನು ತೋರಿಸಿಕೊಡುವ ದೀಪದ ಬೆಳಕಿನಂತೆ" ಎಂಬುದಾಗಿ ಜ್ಯೋತಿಶ್ಯಾಸ್ತ್ರದ ಪ್ರಯೋಜನವನ್ನು ಸೂಚಿಸಿದ್ದಾರೆ.

ಸೊಡರ ಬೆಳಕಿನಿಂದ ಕತ್ತಲೆ ಓಡಿ ಮನೆಯಲ್ಲಿರುವ ಸಮಸ್ತ ವಸ್ತುಗಳು ದೃಗ್ಗೋಚರವಾಗುತ್ತವೆ. ನಿಜಗುಣಶಿವಯೋಗಿಗಳು ಹೇಳಿರುವ ಬೆಳುಗನ್ನಡ ಎಂದರೆ, ಬೆಳಕಿನಂತೆ ಇರುವ (ಇವರ) ಕನ್ನಡಭಾಷೆಯು ವಿವೇಕ ಚಿಂತಾಮಣಿಯಲ್ಲಿನ ಎಲ್ಲ ವಿಷಯಗಳನ್ನು ಹೃದ್ಗೋಚರವಾಗುವಂತೆ ತಿಳಿಸುವಲ್ಲಿ ಸಫಲವಾಗಿರುವ ಕನ್ನಡವೆಂದು ಅರ್ಥವೇ ಹೊರತು, ಇದು ಪೂರ್ವದ ಹಳಗನ್ನಡ ಇತ್ಯಾದಿಗಳ ಸಾಲಿಗೆ ಬರುವುದಿಲ್ಲ.

೨) "ವೇದಪುರಾಣ ಶಾಸ್ತ್ರದೊಳ್ ನೇಮಿಸಿತೋರ್ಪ ವಿಶ್ವವಿಷಯಂಗಳ ಸುಸ್ಥಿತಿಯಂ ವಿವೇಕ ಚಿಂತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾ ಕವಿತಾಪ್ರಬಂಧಮಂ ಪ್ರೇಮದಿಂ ಪೇಳ್ವೆ" ಎಂದು ಪ್ರಾರಂಭವಾಗುವ ಈ ಕೃತಿಯು "ಮಹಾಕವಿತಾ ಪ್ರಬಂಧವಲ್ಲ, ಮಹಾಜ್ಞಾನನಿಧಿ ಎಂಬುದು ಖಂಡಿತ" ಎಂದು ರಂ. ಶ್ರೀ ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಿಳಿಸಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದುದು 'ವಿವೇಕಚಿಂತಾಮಣಿ'ಯು ಕಾವ್ಯಪ್ರಬಂಧವಲ್ಲ, ಸಾಮಾನ್ಯ ಅರ್ಥದಲ್ಲಿ ಸಾಹಿತ್ಯ ಪ್ರಬಂಧ. ಅನೇಕ ವಿಷಯಗಳನ್ನೊಳಗೊಂಡ ಇದನ್ನು "ಇಕ್ಕಿಮೆಟ್ಟಿ"ದ ಬೇರಾವುದಾದರೂ ಗ್ರಂಥ ಕನ್ನಡದಲ್ಲಿ 'ಇದೆಯೆ' ಎಂದರೆ 'ಇಲ್ಲ' ಎಂಬ ಉತ್ತರ ಸಿದ್ಧವಿದೆ. ಹೀಗಾಗಿ ಖಂಡಿತವಾಗಿಯೂ ಇದು ಮಹತ್ತಾದ ವಿಷಯಗಳನ್ನೊಳಗೊಂಡ ಸಾಹಿತ್ಯ ಪ್ರಬಂಧವೇ ಆಗಿದೆ.

೩) ಚಿದಾನಂದ ಅವಧೂತರ 'ಜ್ಞಾನಸಿಂಧು', ಮಹಲಿಂಗರಂಗನ 'ಅನುಭವಾಮೃತ' ಎಂಬ ಈ ಎರಡು ಕೃತಿಗಳು ಆಧ್ಯಾತ್ಮಿಕ ವಿಷಯವನ್ನು ಪ್ರತಿಪಾದಿಸುವ ಕಾವ್ಯಗಳು.

ಇವುಗಳು ಕನ್ನಡನಾಡಿನಲ್ಲಿ ಪ್ರಚಲಿತವಾಗಿವೆ. ಇವಕ್ಕೆ ಗದ್ಯಾನುವಾದವೂ ಆಗಿದೆ. 'ಮಗನಿಗೆ ಜ್ಞಾನಸಿಂಧು ತೋರಿಸಬೇಡ, ಅಳಿಯನಿಗೆ ಕಳಾಶಾಸ್ತ್ರ ತೋರಿಸಬೇಡ' ಎಂಬ ನಾಣ್ಣುಡಿಯೂ ಪ್ರಸಿದ್ಧವಿದೆ. ಇವುಗಳಲ್ಲಿನ ಕೆಲವು ವಿಷಯಗಳು ವಿವೇಕ ಚಿಂತಾಮಣಿಯಿಂದಲೂ ತೆಗೆದುಕೊಳ್ಳಲಾಗಿದೆ. ಅಷ್ಟೇ ಏಕೆ ಇನ್ನೂ ಕೆಲವು ಕವಿಗಳು ವಿವೇಕ ಚಿಂತಾಮಣಿಯಿಂದ ಉಪಕೃತರಾಗಿದ್ದಾರೆ. ಜ್ಞಾನಸಿಂಧು ಮತ್ತು ಅನುಭವಾಮೃತಕಾವ್ಯಗಳ ಹಸ್ತಪ್ರತಿಗಳು ಹೇರಳ ದೊರಕುತ್ತವೆ. ಇದೇರೀತಿ "ವಿವೇಕ ಚಿಂತಾಮಣಿಯನ್ನು ಪದ್ಯಗ್ರಂಥವಾಗಿ ಮತ್ತು ಗದ್ಯಗ್ರಂಥವಾಗಿ ಎರಡೂ ಪ್ರಕಾರಗಳಲ್ಲಿ ಬರೆದಿದ್ದರೆನ್ನಲು ಅವಕಾಶ ಮಾಡಿಕೊಡುತ್ತದೆ. ಹಾಗಾಗಿರಲು ಪದ್ಯವೃತ್ತಿಗಿಂತ ಗದ್ಯಾವೃತ್ತಿಯೇ ಪ್ರಚುರವಾಗಿ ಪದ್ಯರೂಪ ಗ್ರಂಥವು ಕಣ್ಮರೆಯಾಗಿರಬೇಕು- ಪ್ರತಿಮಾಡವರಿಲ್ಲದೆ" ಎಂದಿದ್ದಾರೆ, ಡಾ॥ ಎಲ್. ಬಸವರಾಜು ಅವರು. ಪದ್ಯರೂಪದ ಜ್ಞಾನಸಿಂಧು ಮತ್ತು ಅನುಭವಾಮೃತಗಳನ್ನು ಪ್ರತಿಮಾಡಿದ ಕನ್ನಡಿಗ ಪ್ರತಿಕಾರರು ಪದ್ಯಾತ್ಮಕವಾದ ವಿವೇಕ ಚಿಂತಾಮಣಿಯನ್ನು ಪ್ರತಿಮಾಡಲಾರದಷ್ಟು ನಿರಭಿಮಾನಿಗಳಲ್ಲ. ಒಂದು ವೇಳೆ ಪದ್ಯಾತ್ಮಕ ಆವೃತ್ತಿ ಇದ್ದಿದ್ದರೆ ಅತ್ಯಂತ ಪೂಜ್ಯಭಾವದಿಂದ ಪ್ರತಿಮಾಡುವವರಿಂದಾಗಿ ಇಲ್ಲಿಯವರೆಗೆ ಅದರ ಸಂತಾನಗಳು ಅನೇಕವಿರಬಹುದಿತ್ತು.

೪) "ಶಾಸ್ತ್ರ ವಿಷಯಗಳನ್ನು ಬಹುಶಃ ಸಂಸ್ಕೃತ ಭೂಯಿಷ್ಠವಾಗಿ ಹೇಳಬೇಕಾಗಿ ಬಂದುದರಿಂದಲೂ, ಕೆಲವುಕಡೆ ಬರೀ ಪಾರಿಭಾಷಿಕಗಳ ಪಟ್ಟಿಯೇ ಇರುವುದರಿಂದಲೂ ಬೆಳುಗನ್ನಡ ವಚನ ರಚನೆ ಎಲ್ಲ ಕಡೆಯೂ ಸಾಧ್ಯವಾಗಿಲ್ಲ" ಎಂದು ರಂ. ಶ್ರೀ ಮುಗಳಿಯವರು ಹೇಳಿದ್ದಾರೆ. ಇದರಲ್ಲಿನ ಭಾಷೆಯು ಸಂಸ್ಕೃತ ಭೂಯಿಷ್ಠವಾಗಿಲ್ಲ. ಉದಾ: ಅಧ್ಯಾಸ ಎಂಬುದನ್ನು ಅಧ್ಯಾಸ ಎಂದೂ. ಜಹಲ್ಲಕ್ಷಣೆ, ಅಜಹಲ್ಲಕ್ಷಣೆ, ತತ್, ತ್ವಂ ಇತ್ಯಾದಿಗಳನ್ನು, ಹಾಗೆಯೇ ಹೇಳಿ ಅವುಗಳಿಗೆ ವಿವರಣೆ ಕೊಡಬೇಕು, ಕೊಟ್ಟಿದ್ದಾರೆ. ಆದರೆ ಇದರಲ್ಲಿರು ಗದ್ಯರಚನೆ ಸಂಯುಕ್ತ ಪದಗಳಿಂದಲೂ, ಕೆಲವು ಕಡೆ ಸಂಕೀರ್ಣವಾಕ್ಯಗಳಿಂದಲೂ ಕೂಡಿದೆ. ಇವುಗಳನ್ನು ಬಿಡಿಸಿದರೆ ಅದು ಬೆಳುಗನ್ನಡಕ್ಕೆ ಹೇಳಿ ಮಾಡಿಸಿದಂತಾಗುತ್ತದೆ.

ಉದಾ : (೧) ಪ್ರಮಾಣಮೆನಿಸಿದಾಗಮಾಮ್ನಾಯ >
ಪ್ರಮಾಣಮೆನಿಸಿದ ಆಗಮ ಆಮ್ನಾಯ
(೨) ವೈರಾಗ್ಯೋಪರತಿಗಳಿಲ್ಲದಿರಲಾತಂಗೆ >
ವೈರಾಗ್ಯ ಉಪರತಿಗಳು ಇಲ್ಲದಿರಲು ಆತಂಗೆ
(೩) ಬ್ರಹ್ಮಾಂಶತ್ರಯಂಗಳನನುಸಂಧಾನಂಗೈವುದೆ >
ಬ್ರಹ್ಮಾಂಶ ತ್ರಯಂಗಳನು ಅನುಸಂಧಾನಂಗೈವುದೆ

ಹೀಗೆ ಇಂತಹ ಇನ್ನೂ ಕ್ಲಿಷ್ಟಕರವಾದ ಸಂಕೀರ್ಣಪದ ಮತ್ತು ಸಂಯುಕ್ತ ಪದಗಳನ್ನು ಬಿಡಿಸಿ (ಬರೆದು ಸಂಪಾದಿಸಿದರೆ) ಓದಿಕೊಂಡರೆ ಅನುಕೂಲವಾಗುತ್ತದೆ. ಹೀಗೆ ಇಡೀ ಗ್ರಂಥದಲ್ಲಿರುವ ಇಂತಹ ಪದಗಳು ಬಿಡಿಸಿಕೊಳ್ಳುವುದರಿಂದ ಇದು ಬೆಳುಗನ್ನಡವೇ ಆಗುತ್ತದೆ. ಇಂತಹ ಪದಗಳು ಗ್ರಂಥದ ಕಾಲು ಭಾಗದಷ್ಟಿರಬಹುದು. "ಕನ್ನಡದಲ್ಲಿ ಸ್ವತಂತ್ರವಾದ ಗದ್ಯದ ಶೈಲಿ ಬೆಳೆಯಲು ಈ ಗ್ರಂಥ ಬಹುಮಟ್ಟಿಗೆ ಸಹಾಯ

ಮಾಡಿತೆನ್ನಬಹುದು" ಎಂದು ಹೇಳಿರುವ ಅ.ನ.ಕೃ. ರ ಅಭಿಪ್ರಾಯ ಸತ್ಯವಾಗಿದೆ. ಏಕೆಂದರೆ ಅವರು 'ಬೆಳುಗನ್ನಡ'ದ ಮರ್ಮವನ್ನು ಚನ್ನಾಗಿ ಅರಿತು ಇಂಥ ಹೇಳಿಕೆಯನ್ನು ಕೊಟ್ಟಿದ್ದಾರೆ.

೫) ಇನ್ನು ನಿಜಗುಣರ ಗುರುಗಳು ಯಾರಿರಬಹುದು? ಎಂಬ ವಿಷಯದಲ್ಲಿ ವಿದ್ವಾಂಸರಲ್ಲಿ ಅಭಿಪ್ರಾಯ ಭೇದವಿದೆ.

ಅ) 'ಶಂಭುಲಿಂಗ' ಸ್ವಾಮಿಯೇ ನಿಜಗುಣರ ಗುರುವೆಂದು ಗಂಗಾಧರ ಮಡಿವಾಳೇಶ್ವರ ತುರಮರಿ ಹಾಗು ಪಿ.ಆರ್. ಕರಿಬಸವ ಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ.

ಆ) ಇದು ವಾಸ್ತವಕ್ಕೆ ದೂರ. ಗುರುಶಂಭುಲಿಂಗ ಎಂಬ ಅಂಕಿತವು ನಿಜಗುಣರು ವಾಸಿಸುತ್ತಿದ್ದ ಬೆಟ್ಟದಲ್ಲಿರುವ ಶಂಭುಲಿಂಗೇಶ್ವರಲಿಂಗದ ಅಂಕಿತವಾಗಿದೆ. ವಿವೇಕ ಚಿಂತಾಮಣಿಯ ಪ್ರಾರಂಭದಲ್ಲಿ "ಮಹಾಕವಿತಾಪ್ರಬಂಧಮಂ ಪೇಳ್ವೆ ನೀನೊಲಿದಾಲಿಸು ಶಂಭುಲಿಂಗವೆ" ಎಂದು ಹೇಳಿರುವುದು ಶಂಭುಲಿಂಗಸ್ವರೂಪಿ ಪರಮೇಶ್ವರನನ್ನೇ ಮುಂದಿಟ್ಟುಕೊಂಡು ನಿಜಗುಣರು ಗ್ರಂಥವನ್ನು ರಚಿಸಿರುವರೆಂಬುದನ್ನು ಸೂಚಿಸುತ್ತದೆ – ಎಂದು ಬಿ. ಶಿವಮೂರ್ತಿಶಾಸ್ತ್ರಿಗಳು ಸರಿಯಾಗಿ ಹೇಳಿರುವರು.

ಇ) ಶಿವಯೋಗ ಪ್ರದೀಪಿಕೆಯ ಕರ್ತೃ ಚನ್ನಸದಾಶಿವಯೋಗಿಯು ಇವರ ಗುರುವಾಗಿರಬಹುದೇ? ಎಂಬ ಊಹೆಯನ್ನು ಡಾ. ಬಸುಪಟ್ಟದ ಅವರು ಮಾಡಿರುವರು. ಕಾರಣ, ಶಿವಯೋಗಪ್ರದೀಪಿಕೆಯನ್ನು 'ಪರಮಾರ್ಥಪ್ರಕಾಶಿಕೆ' ಎಂಬ ಹೆಸರಿನಿಂದ ನಿಜಗುಣರು ಗದ್ಯದಲ್ಲಿ ಅನುವಾದಿಸುತ್ತ ಮೂಲ ಕೃತಿಕಾರರನ್ನು "ಆಚಾರ್ಯ ಚನ್ನಸದಾಶಿವಯೋಗಿ" ಎಂದು ಗೌರವದಿಂದ ಕರೆದಿದ್ದಾರೆ. ಶಿವಯೋಗ, ಶಿವತತ್ತ್ವ ಇತ್ಯಾದಿ ವಿಷಯಗಳ ಬಗೆಗೆ ಕೃತಿರಚನೆಗೈದವರನ್ನು ಆಚಾರ್ಯ, ದೇಶೀಕೇಂದ್ರ, ಗುರುವರ ಎಂದು ಭಾವಿಸುವುದು ಗೌರವಸೂಚಕವಾದ ವಿಷಯವೇ ಹೊರತು, ಇವರು ನಿಜಗುಣರಿಗೆ ನೇರವಾಗಿ 'ಗುರುಗಳು' ಎಂದು ಭಾವಿಸುವುದು ಸಂಭಾವ್ಯವಲ್ಲ.

ನಿಜಗುಣರು 'ನಿರಾಭಾರಿ' ಶಿವಯೋಗಿಯೆಂದು ಡಾ. ಬಸುಪಟ್ಟದ ಅವರು ವಾದಿಸಿರುವರು. ಈ ಊಹೆಯು

> ತಿಳಿಯಲ್ಕೈದಧ್ವವನು ಮೀರಿ ಕಲೆಯ ಮೇಲೆ
> ಬೆಳಗುವಾಗ ಸದಗ್ರದಮಲ ಶಕ್ತಿಯನು ।
> ತಳೆದೆಸೆವ ಶಂಭುಲಿಂಗದ ಯೋಗವಿತ್ತೆನ್ನ
> ನುಳುಹಿದ ನಿರಾಭಾರಿದೇಶಿಕವರೇಣ್ಯ ॥
>
> ಕರುಣರಸದ ಕೋಡಿವರಿದ ಕಟಾಕ್ಷದ
> ಪರತತ್ತ್ವರುಪುವಲಾಪದ ।
> ವರಪುಣ್ಯಮಯ ಶರೀರದ ನಿರಾಭಾರಿ ಸ
> ದ್ಗುರುವಿರಲೆನ್ನ ಮಾನಸದಲಿ ॥

ಎಂಬ ಈ ಪದ್ಯಗಳಲ್ಲಿ ಬಂದಿರುವ ಮತ್ತು ವಿವೇಕ ಚಿಂತಾಮಣಿಯ "ಶ್ರೀಮದನೇಕ ಭುವನ ಭುವನಾರಂಭ ಮೂಲಸ್ತಂಭ ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮ ಪರ್ಯಂತ ಮಹಾಗುರು ಪರಂಪರೆಗೆ ಮನೋವಾಕ್ಕಾಯಗಳಿಂದಭಿವಂದಿಸಿ"ಎಂಬ ಸಾಲುಗಳಲ್ಲಿ ಬಂದಿರುವ 'ನಿರಾಭಾರಿ'ಎಂಬ ಪದಪ್ರಯೋಗವನ್ನು ಅವಲಂಬಿಸಿದೆ.

'ನಿರಾಭಾರಿ' ಯೆಂಬುದು ಒಂದು ಹೆಸರಾಗಿರಬಹುದು ಎಂಬ ಅವರ ಊಹೆ ಸತ್ಯಕ್ಕೆ ದೂರವಾದುದು. ಏಕೆಂದರೆ 'ನಿರಾಭಾರಿ' ಎಂಬುದು ಒಂದು ನಾಮವಾಚಕವಾಗಿರದೆ ಷಟ್‌ಸ್ಥಲಬ್ರಹ್ಮಿಯಾದ ವಿರಕ್ತನನ್ನು ಕುರಿತದ್ದು. ಚನ್ನಸದಾಶಿವಯೋಗಿಯಂತೆ "ಜಿಗುನಿ ಮರುಳಾರ್ಯರೂ ನಿಜಗುಣರ ಸಾಹಿತ್ಯ – ಬದುಕಿನ ಮೇಲೆ ಗಾಢವಾದ ಪ್ರಭಾವಬೀರಿರುವರು. ಅವರ ಸ್ವರವಚನಗಳು ನಿಜಗುಣರ ಕೈವಲ್ಯಪದ್ಧತಿಯ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಜಿಗುನಿ ಮರುಳಾರ್ಯ, ಸೋದೆಯ ಭುಜಲಿಂಗಸ್ವಾಮಿ, ಚನ್ನಸದಾಶಿವಯೋಗಿ ಇವರೇ ಆದಿಯಾಗಿ ಬರುವ ಷಟ್‌ಸ್ಥಲಬ್ರಹ್ಮ ವಿರಕ್ತಮೂರ್ತಿಗಳ ಪ್ರಭಾವಿ ಪರಿಸರದಲ್ಲಿ ನಿಜಗುಣರ ವ್ಯಕ್ತಿತ್ವ ಅರಳಿದೆ" ಎಂದು ಹೇಳಿರುವ ಡಾ. ಎಸ್. ವಿದ್ಯಾಶಂಕರ್ ಅವರ ಮಾತನ್ನು ಇಲ್ಲಿ ಪರ್ಯಾಲೋಚಿಸಬೇಕಾಗಿದೆ.

ಕರ್ನಾಟಕದಲ್ಲಿ ನಿಜಗುಣರ ಐದು ಶಾಸ್ತ್ರಗಳ ಹಸ್ತಪ್ರತಿಗಳು ವಿಪುಲವಾಗಿವೆ. ಯಾವುದೋ ಒಂದು ಕಾಗದದ ಪ್ರತಿರೂಪದ ಕೈವಲ್ಯ ಪದ್ಧತಿಯ ಅಂತ್ಯದ ಪುಷ್ಪಿಕೆಯಲ್ಲಿ "ನಿಜಗುಣ ಶಿವಯೋಗಿಗಳು ಜಿಗುನಿಯ ಮರುಳದೇವಾಚಾರ್ಯರಿಂದ ಸರ್ವಾಚಾರ ಸಂಪತ್ತೆಂಬ ಶಿವಜ್ಞಾನ ಪ್ರಸಿದ್ಧವಹ, ತನ್ನ ಇಷ್ಟ ಸ್ವರೂಪಮಪ್ಪ ನೀರುಕ್ಷೀರ, ಮರುತಾಂಬರ, ಶಬ್ದ ನಿಶ್ಶಬ್ದದಲ್ಲಿ ಅಡಗಿದಂತೆ ನಿಜಲಿಂಗೈಕ್ಯವನೈದಿದರು" ಎಂದು ಹೇಳಲಾಗಿದೆ.[೧] ಈ ಒಂದು ಪುಷ್ಪಿಕೆಯು ವಿಪುಲವಾಗಿರುವ ಓಲೆ ಹಸ್ತಪ್ರತಿಗಳಲ್ಲಿ ಎಲ್ಲಿಯೂ ದೊರೆಯದೆ ಯಾವುದೋ ಒಂದು ಕಾಗದದ ಪ್ರತಿಯಾದ "ಕೈವಲ್ಯಪದ್ಧತಿ'ಯಲ್ಲಿ ಮಾತ್ರ ಲಭ್ಯವಾಗಿದೆ ಎಂದರೆ, ಇದನ್ನು ನಂಬುವುದು ಕಷ್ಟವಾಗುತ್ತದೆ. ನಿಜಗುಣರನ್ನು ಸಿದ್ಧಲಿಂಗಶಿವಯೋಗಿಗಳ ಪ್ರಶಿಷ್ಯ ಪರಂಪರೆಗೆ ಸೇರಿಸಬೇಕೆಂಬ ಹಂಬಲದಿಂದ ಈ ಅನುಚಿತ ಕಾರ್ಯ ನಡೆದಿದೆ. ಆದ್ದರಿಂದ ಇದನ್ನು ಕೂಟವಿಚಾರವೆಂದು ಭಾವಿಸಬೇಕು. ಅಲ್ಲದೆ ನಿಜಗುಣರ ಕಾಲವು ಕ್ರಿ.ಶ. ೧೪೬೫ ಎಂದಿರುವುದರಿಂದ ಈ ವಾದವು ಹುರುಳಿಲ್ಲದಂತಾಗುತ್ತದೆ.

೬) ನಿಜಗುಣರು ವೀರಶೈವರೆಂಬುದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ನಿಮ್ಮೆಲ್ಲರಿಗೆ ತಿಳಿದಂತೆ ಸಧ್ಯದ ವೀರಶೈವ ಸಮಾಜದಲ್ಲಿ ಎರಡು ವರ್ಗಗಳಿವೆ. **ಒಂದು:** ಆಚಾರ್ಯ ಸಂಪ್ರದಾಯದ ವೀರಶೈವ. **ಎರಡು:** ವಿರಕ್ತ ವರ್ಗದ ವೀರಶೈವ. ಆಚಾರ್ಯ ಸಂಪ್ರದಾಯವೆಂದರೆ ರೇಣುಕಾಚಾರ್ಯ, ಪಂಡಿತಾರಾಧ್ಯ ಏಕೋರಾಮಾರಾಧ್ಯ ಮರುಳಾರಾಧ್ಯ, ವಿಶ್ವಾರಾಧ್ಯರೆಂಬ ಪಂಚಾಚಾರ್ಯರು. ಈ ಸಂಪ್ರದಾಯದಲ್ಲಿ ಬಂದವರಿರಬಹುದಾಗಿದೆ, ನಿಜಗುಣಶಿವಯೋಗಿಗಳು.

೧. ಇವರಿಗೆ ಧಾರವಾಡ ಮಲ್ಲಾಬಾದಿ ವೀರಭದ್ರಪ್ಪನವರು ಸಂಪಾದಿಸಿ ಪ್ರಕಟಿಸಿ ಕೈವಲ್ಯ ಪದ್ಧತಿಯ ಕೊನೆಯ ಪೀಠಿಕಾಸೂತ್ರ ಗದ್ಯದಿಂದ ತಿಳಿದು ಬಂದಿದೆ.

ಎರಡನೇ ವರ್ಗದವರು ಅಲ್ಲಮ ಸಂಪ್ರದಾಯ ಅಥವ ವಿರಕ್ತರ ಸಂಪ್ರದಾಯದ ವೀರಶೈವರು. ಎಂಬುದು ಎಲ್ಲರಿಗೂ ತಿಳಿದ ವಿಷಯ. ನಿಜಗುಣಶಿವಯೋಗಿಗಳ ವಿವೇಕ ಚಿಂತಾಮಣಿಯಲ್ಲಿ ಅಷ್ಟಾವರಣ ವಿವರಗಳು ಪ್ರಸ್ತಾಪವಾಗಿಲ್ಲ. ಅಂತೆಯೇ ೬೪ ಶೀಲಗಳ ಪರಿಚಯವೂ ಇಲ್ಲ.[A] ಈ ಎರಡೂ ವಿರಕ್ತ ವರ್ಗದ ವೀರಶೈವರಲ್ಲಿ ಆಚರಣೆಯಲ್ಲಿರುವುದು ಸ್ಪಷ್ಟವಾಗಿ ತಿಳಿದುಬಂದಿದೆ. "ಪುರಾತನೋಕ್ತಿಗಳನುಸಾರದಿಂದ ನುಭವಿಗಳಹುದೆನಿಸುವಂತೆ" ಎಂದಿರುವನೇ ಹೊರತು 'ಅನುಭಾವಿ' 'ಅನುಭಾವ' ಎಂಬ ಶಬ್ದ ವಿವೇಕ ಚಿಂತಾಮಣಿಯಲ್ಲಿ ಎಲ್ಲಿಯೂ ಬಂದಿಲ್ಲ. ಹೀಗಾಗಿ ಇವರು ವಿರಕ್ತ ಸಂಪ್ರದಾಯದವರಲ್ಲವೆನಿಸುತ್ತದೆ.

ಈ ರೀತಿ ಪ್ರಸ್ತುತವಾದ ಜೀವಂತವಿರುವಾಗ ಡಾ॥ ಕಲಬುರ್ಗಿಯವರು ನಿಜಗುಣಶಿವಯೋಗಿಯು ಶಾಂತ ಸಂಪ್ರದಾಯದವನೆಂಬ ಹೊಸ ವಾದ ಮಂಡಿಸಿದ್ದಾರೆ (ಮಾರ್ಗ -೩ ಪುಟ ೩೧೫).

೭) ವಿವೇಕ ಚಿಂತಾಮಣಿಯ ನಾಲ್ಕನೇ ಪರಿಚ್ಛೇದದಲ್ಲಿ ಬರುವ ಜಂಬೂದ್ವೀಪದ ಸ್ಥಿತಿ ವರ್ಣನೆಯಲ್ಲಿ ಭೂಲೋಕದ ವಿವರವನ್ನು ತಿಳಿಸುತ್ತಾ ಮುಂದೆ, ಭಾರತ ವರ್ಷದ ವಿಚಾರ ಪ್ರಾರಂಭವಾಗಿ ಷಟ್ ಚಕ್ರವರ್ತಿಗಳು, ರಾಜರುಗಳು ಇವರ ವಿಚಾರವಾದ ನಂತರ ೪೫ನೇ ನಿರ್ದೇಶನ ಶೀರ್ಷಿಕೆಯ ನಂತರ ೪೬ನೇ ಶೀರ್ಷಿಕೆ ರಾಜಲಕ್ಷಣದಿಂದ ೮೩ನೇ ಶೀರ್ಷಿಕೆ ರಾಜಭೋಗದ ವರೆಗಿನ ವಿಷಯದ ವಿವರಗಳನ್ನು ಗಮನಿಸಿದರೆ ನಿಜಗುಣಶಿವಯೋಗಿಗಳು ವಿದ್ಯಾನಗರ (ವಿಜಯನಗರ)ದ ಚಕ್ರವರ್ತಿಗಳ ಆಸ್ಥಾನವನ್ನು ಪ್ರತ್ಯಕ್ಷವಾಗಿ ನೋಡಿರಬೇಕು ಎನ್ನಿಸುತ್ತದೆ. ರಾಜನ ಆಸ್ಥಾನದಲ್ಲಿ ಛಂದಸ್ಸು ಅಲಂಕಾರ, ಮಹಾಕಾವ್ಯ ಕಾವ್ಯರೀತಿಯನ್ನು ಬಲ್ಲವರು, ವಾದಿ, ಗಮಕಿ, ವಾಗ್ಮಿ, ನವರಸ ವ್ಯಾಪಾರ ಪಾರಂಗತರು, ರತ್ಯಾತ್ಮಕ ಮನೋವೃತ್ತಿ ವೈಕಲ್ಯ ಇತ್ಯಾದಿಗಳನ್ನು, ಸಂಗೀತಶಾಸ್ತ್ರ, ಕಾಮಶಾಸ್ತ್ರ ಇತ್ಯಾದಿಗಳನ್ನು ಬಲ್ಲವರು ಇರಬೇಕೆಂದು ತಿಳಿಸುವಲ್ಲಿ, ಆಸ್ಥಾನದಲ್ಲಿ ಇದೆಲ್ಲವೂ ಇದ್ದುದನ್ನು ಇವರು ಗಮನಿಸಿ ಅದೆಲ್ಲವನ್ನೂ ವಿವೇಕ ಚಿಂತಾಮಣಿಯಲ್ಲಿ ಸಮಾವೇಶಗೊಳಿಸಿರಬೇಕು. ಕ್ರಿ.ಶ. ೧೫೧೦ ಜನವರಿಯಲ್ಲಿ ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾದ ಮೇಲೆ, ಅವನ ಆಸ್ಥಾನ ವೈಭವ ವೈಖರಿಯನ್ನು ಗಮಸಿರುವ ಸಾಧ್ಯತೆ ಇದೆ.

ನಿಜಗುಣಶಿವಯೋಗಿಗಳು ರಚಿಸಿರುವ "ವಿವೇಕ ಚಿಂತಾಮಣಿ"ಯ ಗದ್ಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಉಚಿತವೆನಿಸುತ್ತದೆ. ಇವರ ಕಾಲ ಕ್ರಿ.ಶ. ೧೪೬೫ ಎಂದು ನಿರ್ಧರಿಸಿರುವುದರಿಂದ ಇದು ಹದಿನೈದನೆಯ ಶತಮಾನದ ಕಾಲವಾಗಿದೆ. ಈ ಶತಮಾನದಲ್ಲಿ ವೀರಶೈವ ಸಾಹಿತ್ಯದಲ್ಲಿ ಅನೇಕ ಉನ್ನತ ಕೃತಿಗಳು ರಚಿತವಾಗಿವೆ. ಕ್ರಿ.ಶ. ೧೪೩೦ರಲ್ಲಿ ಚಾಮರಸನ ಪ್ರಭುಲಿಂಗಲೀಲೆ; ಮಗ್ಗೆಮಾಯಿದೇವರ ಕೃತಿಗಳು ಇವೆಲ್ಲವೂ ಪದ್ಯಾತ್ಮಕವಾದವುಗಳು. ಮಹಲಿಂಗದೇವರು ಪ್ರಭುದೇವರ

° ಕೊಂಡಗುಳಿ ಕೇಶಿರಾಜ ದಂಡನಾಯಕರು ನಿರೂಪಿಸಿದ ಕಂದ ಸಂಪಾದಕರು: ಜಿ.ವಿ. ಶಿವಲಿಂಗಯ್ಯ ೧೯೮೦

ವಚನಗಳಿಗೆ ಟೀಕೆಯನ್ನು ಬರೆದಿರುತ್ತಾರೆ. ಕಲ್ಲುಮಠದ ಪ್ರಭುದೇವರು "ಲಿಂಗಲೀಲಾ ವಿಲಾಸ ಚಾರಿತ್ರ" ಹೆಸರಿನಲ್ಲಿ ಶರಣರ ವಚನಗಳಿಗೆ ಟೀಕೆಯನ್ನು ಬರೆದಿರುತ್ತಾರೆ. ಶಿವಲಿಂಗದೇವನೆಂಬ ಅನುಭಾವಿಯು "ವಿಶೇಷಾನುಭವ ಷಟ್‌ಸ್ಥಲ" ಎಂಬ ಕೃತಿಯಲ್ಲಿ ಬಸವಾದಿ ಶರಣರ ವಚನಗಳಿಗೆ ಟೀಕೆಯನ್ನು ಬರೆದಿರುತ್ತಾನೆ. ಈ ಟೀಕೆಗಳು ವಚನದ ರಹಸ್ಯಾರ್ಥವನ್ನು ಗದ್ಯದಲ್ಲಿ ನಿರೂಪಿಸಿರುವುದು ತಿಳಿದು ಬಂದ ವಿಷಯವಾಗಿದೆ. ಆದರೆ ಈ ಗದ್ಯವು ಅನುಭಾವಿಕ ಶಬ್ದಗಳಿಂದ ಕೂಡಿ ಸಾಮಾನ್ಯರಿಗೆ ಎಟುಕದ ಅಂಶವಾಗಿದೆ. ಇದಲ್ಲದೆ ಒಂದು ಕೃತಿಯನ್ನು ಸಂಪೂರ್ಣ ಗದ್ಯದಲ್ಲಿ ಈ ಶತಮಾನದಲ್ಲಿ ಯಾರೂ ಬರೆದಂತೆ ಕಂಡುಬಂದಿಲ್ಲ. ಈ ಕೊರತೆಯನ್ನು ನೀಗಿಸಿಕೊಂಡು ವೀರಶೈವರು, ವೀರಶೈವೇತರರು ಜ್ಞಾನಸಂಪಾದನೆಗೆ ಅನುವಾಗಲಿ ಎಂಬ ಘನವಾದ ಉದ್ದೇಶದಿಂದ ವಿವೇಕ ಚಿಂತಾಮಣಿ ಎಂಬ ಉದ್‌ಗ್ರಂಥವನ್ನು ರಚಿಸಿ ಕೀರ್ತಿಶಾಲಿಗಳಾಗಿರುತ್ತಾರೆ, ನಿಜಗುಣಶಿವಯೋಗಿಗಳು. ಇವರು ಬಳಸಿರುವ ಕನ್ನಡವನ್ನು ಬೆಳುಗನ್ನಡವೆಂದು ಅವರೇ ಹೇಳಿರುವುದು ಅತಿಶಯವಾಗಿದೆ. ಇದು ಹೊಸಗನ್ನಡ ಗದ್ಯಸಾಹಿತ್ಯಕ್ಕೆ ಮುಂಗಾಣ್ಕೆಯಾಗಿದೆ ಎಂದು ಖಂಡಿತವಾಗಿ ಹೇಳಬಹುದು.

ವಿವೇಕ ಚಿಂತಾಮಣಿಯ ಪಾಠದ ಬಗೆಗೆ ಒಂದೆರಡು ಮಾತುಗಳು :

ಮೂಲಪ್ರತಿಯನ್ನು ನಕಲು ಮಾಡುವಾಗ ಬಹು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಕಾವ್ಯಾದಿಗಳಿಗೆ ಒಂದು ವೇಳೆ ಸಮಜಾಯಿಸಿ ಸಿಕ್ಕಿದರೂ ವಿವೇಕಚಿಂತಾಮಣಿಯಂತಹ ಕೃತಿಗಳನ್ನು ಬರೆಯುವ ಪ್ರತಿಕಾರರಿಗೆ ಆಲಸ್ಯ ಮರಹು ಅಜ್ಞಾನ ಇತ್ಯಾದಿಗಳು ಇರಲೇಕೂಡದು. ಹಾಗೇನಾದರೂ ಆದರೆ ಆ ತಪ್ಪನ್ನು ಸರಿಪಡಿಸಲು ಸಾಧ್ಯವಿಲ್ಲ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು :

೧) ವಿವೇಕ ಚಿಂತಾಮಣಿಯ ದ್ವಿತೀಯ ಪರಿಚ್ಛೇದದಲ್ಲಿ ಇಪ್ಪತ್ತೆಂಟು ಆಗಮಗಳ ಉಪಾಗಮಗಳನ್ನು ತಿಳಿಸುವಾಗ ಸುಪ್ರಭೇದಾಗಮ, ಸರ್ವೋಕ್ತಾಗಮಗಳ ಉಪಾಗಮಗಳು ಕೈಬಿಟ್ಟು ಹೋಗಿವೆ. ಈ ಉಪಾಗಮಗಳು ಯಾವ ಪ್ರಧಾನ ಆಗಮಗ್ರಂಥದಲ್ಲಿ ದೊರಕುತ್ತವೆ ಎಂದು ಶೋಧಿಸುವುದು ಕಷ್ಟಕರವಾದ ಕಾರ್ಯ. ಪ್ರತಿಕಾರನ ಅಜ್ಞಾನದಿಂದ ಇವು ಲೋಪವಾಗಿವೆ.

೨) ಇದೇ ಪರಿಚ್ಛೇದದಲ್ಲಿ ನಿರ್ದೇಶನ ಶೀರ್ಷಿಕೆ 'ಮಲಪಾಶ ವಿವೇಕ'ದಲ್ಲಿ 'ಮೋಹ, ಮಹಾಮೋಹ, ಮಿಶ್ರ, ತಾಮಿಶ್ರ, ಅಂಧತಾಮಿಶ್ರ, ಎಂಬ ಸಪ್ತಾವಸ್ಥೆಯಲ್ಲಿ ಕೂಟಸ್ಥಾನಾದಿಯಾದಿ ಪಾಶವಿಶೇಷವೆ ಮಾಯೆಯಕ್ಕುಂ' ಎಂದು ಹೇಳಿ ಕೇವಲ ಐದನ್ನೇ ಹೆಸರಿಸಲಾಗಿದೆ. ಉಳಿದ ಎರಡು ಪ್ರತಿಕಾರರ ಅವಜ್ಞೆಯಿಂದ ಲುಪ್ತವಾಗಿದೆ.

೩) ಸಪ್ತಮ ಪರಿಚ್ಛೇದದ "ತತ್ತ್ವಗಳಿಗಭಿಮಾನಿ ರುದ್ರರು" ಎಂಬ ಶಿರ್ಷಿಕೆಯ ಕೆಳಗೆ ನಾಲ್ಕು ವಾಕ್ಯಸಮುಚ್ಚಯ(ಪ್ಯಾರಾ)ಗಳಲ್ಲಿ ಗುಹ್ಯಾಷ್ಟಕರುಗಳು ೩೨ ಬರುತ್ತವೆ.

ಆದರೆ ಇಲ್ಲಿ ಮತ್ತೊಂದು ವಾಕ್ಯ ಸಮುಚ್ಚಯವಿದ್ದು ಇನ್ನೂ ೮ ಗುಹ್ಯಷ್ಟಕರು ಮತ್ತು ಅವರ ಹೆಸರಿಸಬೇಕಿತ್ತು. ಒಂದು ವಾಕ್ಯಸಮುಚ್ಚಯವೇ ಕೈಬಿಟ್ಟು ಹೋಗಿದೆ. ನನ್ನ ಗಮನಕ್ಕೆ ಬಂದಿರುವ ಪ್ರತಿಕಾರರ ಅಜಾರೂಕತೆಗೆ ಇವು ನಿದರ್ಶನಗಳು.

ವಿವೇಕ ಚಿಂತಾಮಣಿಯ ಪ್ರಕಟಣೆಗಳು:

ವಿವೇಕ ಚಿಂತಾಮಣಿಯ ಪ್ರಕಟಣೆ ಬಗೆಗೆ ಒಂದೆರಡು ಮಾತುಗಳನ್ನು ಹೇಳುವುದು ಉಚಿತವೆನಿಸುತ್ತದೆ.

೧೮೬೩ರಲ್ಲಿ ವಿವೇಕ ಚಿಂತಾಮಣಿಯು ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳ ಸಂಪಾದಕತ್ವದಲ್ಲಿ ಮದ್ರಾಸಿನಲ್ಲಿ ಪ್ರಕಟವಾಯಿತು. ಇದು ತೆಲುಗು ಮಾದರಿಯ ಕನ್ನಡದ ಅಕ್ಷರಗಳಿಂದ ಕೂಡಿದ ಗ್ರಂಥವಾಗಿದೆ. ಈ ಕನ್ನಡವನ್ನು ಓದಲು ಜನಸಾಮಾನ್ಯರಿಗೆ ಮುಜಗರವಾಗುತ್ತಿತ್ತು. ಬಳಿಕ ೧೮೭೫ರಲ್ಲಿ ಅಚ್ಚಗನ್ನಡದ ಅಚ್ಚಿನ ಮೊಳೆಯಲ್ಲಿ ಗಾಂಟಿ ಅವರು ಇದನ್ನು ಮುದ್ರಿಸಿ ಕನ್ನಡ ಜನತೆಗೆ ಉಪಕಾರ ಮಾಡಿರುತ್ತಾರೆ. ಪ್ರಕ್ಷಿಪ್ತವಿಲ್ಲದ ರೀತಿಯಲ್ಲಿ ಓರ್ವ ಯೂರೋಪಿನವನಿಂದ ವಿಶ್ವಕೋಶದಂತಹ ಈ ಕೃತಿಯು ಮುದ್ರಣವಾಗಿರುವುದು ನಿಜಕ್ಕೂ ಆಶ್ಚರ್ಯ ಮತ್ತು ಹೆಮ್ಮೆಪಡಬೇಕಾದ ವಿಷಯವಾಗಿದೆ. ನಂತರ ಬೇರೆ ಬೇರೆಯವರಿಂದ ಇದು ಹಲವು ಮುದ್ರಣಗಳನ್ನು ಕಂಡಿದೆ. ನಿಜಗುಣಶಿವಯೋಗಿಗಳ ಜ್ಞಾನ ಶ್ರೀಮಂತಿಕೆಗೆ ಇದಕ್ಕಿಂತ ಇನ್ನಾವ ಶಿಫಾರಸ್ಸು ಅಗತ್ಯವಿಲ್ಲ.

ಸಂಪಾದನೆಗೆ ಬಳಸಿಕೊಂಡಿರುವ ಹಸ್ತಪ್ರತಿಗಳು :

೧. ಕೆ. ೨೮೦. ೨. ಕೆ.೭೫೩ ೩. ಕೆ ೨೭೬
೪. ಕೆ. ೭೬೩ ೫. ಶಿ. ಸ್ವಂತ ಪ್ರತಿ.

ನಾಲ್ಕು ಹಸ್ತಪ್ರತಿಗಳು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ರಪ್ರತಿ ಭಂಡಾರಕ್ಕೆ ಸೇರಿದವು. ಐದನೆಯದು ನಾನು ಹಸ್ತಪ್ರತಿ ಸಂಗ್ರಹಕಾರ್ಯದಲ್ಲಿ ತೊಡಗಿದ್ದಾಗ. ಬಂಧುಗಳಿಂದ ಲಭ್ಯವಾದ ಪ್ರತಿ. ಈ ಐದರಲ್ಲಿ ಶಿ. (ಸ್ವಂತ ಪ್ರತಿ)ಪ್ರತಿಯೇ ಉತ್ತಮವಾಗಿದ್ದುದರಿಂದ ಅದನ್ನು ಪ್ರಧಾನವಾಗಿ ಇಟ್ಟುಕೊಂಡು, ಉಳಿದ ಪ್ರತಿಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುತ್ತೇನೆ. ೧೯೨೫ರಲ್ಲಿ ಮುದ್ರಿತವಾದ ವಿವೇಕ ಚಿಂತಾಮಣಿಯೂ ಕೆಲವು ಸಂದರ್ಭಗಳಲ್ಲಿ ಸಹಾಯವಾಗಿದೆ. ಸಂಪಾದನಕಾರ್ಯಕ್ಕೆ ಹಸ್ತಪ್ರತಿಗಳನ್ನು ನೀಡಿ ಸಹಕರಿಸಿದ ಬೆಂಗಳೂರು ವಿಶ್ವ ವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಆಗಿನ ನಿರ್ದೇಶಕರಿಗೂ ಮತ್ತು ಹಸ್ತಪ್ರತಿ ವಿಭಾಗದ ಸಂಪಾದಕರಾಗಿದ್ದ ಎಸ್. ಶಿವಣ್ಣನವರಿಗೂ ಅನಂತ ನಮಸ್ಕಾರಗಳು. ಪುಸ್ತಕಕ್ಕೆ ಅಂದವಾಗಿ ಅಕ್ಷರ ಜೋಡಣೆ ಮಾಡಿಕೊಟ್ಟ ಅನ್ನಪೂರ್ಣ ಆಫ್‌ಸೆಟ್ ಪ್ರಿಂಟರ್ಸ್ ಮೈಸೂರು, ಮಾಲೀಕರಿಗೂ ಅನಂತ ವಂದನೆಗಳು.

ಕೃತಜ್ಞತೆ :

ಈಗ ಶ್ರೀಮನ್ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿಯನ್ನು ಸಂಪಾದಿಸಿಕೊಡುವ ಸುಯೋಗ ನನಗೆ ಬಂದಿರುವುದು ನಿಜಕ್ಕೂ ಸಂತೋಷವಾಗಿದೆ. ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಆಶ್ರಯದಲ್ಲಿ, ಕನ್ನಡ "ಪ್ರಾಚೀನ ಗದ್ಯ ಸಾಹಿತ್ಯಮಾಲೆ"ಯಡಿಯಲ್ಲಿ ನಿಜಗುಣರ ವಿವೇಕ ಚಿಂತಾಮಣಿಯನ್ನು ಸಂಪಾದಿಸಿಕೊಡುವಂತೆ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಸಿದ್ಧಲಿಂಗಯ್ಯನವರೂ ಆಡಳಿತಾಧಿಕಾರಿಗಳಾದ ಬಿ.ಹೆಚ್. ಮಲ್ಲಿಕಾರ್ಜುನ ಅವರೂ ಬಹು ವಿಶ್ವಾಸದಿಂದ ತಿಳಿಸಿರುತ್ತಾರೆ. ಇವರಿಗೂ, ಮತ್ತು 'ಪ್ರಾಚೀನ ಗದ್ಯ ಸಾಹಿತ್ಯ ಮಾಲೆ'ಯ ಗೌರವ ಸಂಪಾದಕರು ಹಾಗೂ ಹಿರಿಯ ಸಂಶೋಧಕರಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೂ ಹೃತ್ಪೂರ್ವಕ ನಮಸ್ಕಾರಗಳು.

ಜಿ.ಎ. ಶಿವಲಿಂಗಯ್ಯ
ಮೈಸೂರು.

ವಿಷಯಾನುಕ್ರಮಣಿಕೆ

ಪ್ರಥಮ ಪರಿಚ್ಛೇದ

ದ್ವಿತೀಯ ಪರಿಚ್ಛೇದ

ತೃತೀಯ ಪರಿಚ್ಛೇದ

ಚತುರ್ಥ ಪರಿಚ್ಛೇದ

ಪಂಚಮ ಪರಿಚ್ಛೇದ

ಷಷ್ಠಮ ಪರಿಚ್ಛೇದ

ಸಪ್ತಮ ಪರಿಚ್ಛೇದ

ಅಷ್ಟಮ ಪರಿಚ್ಛೇದ

ನವಮ ಪರಿಚ್ಛೇದ

ದಶಮ ಪರಿಚ್ಛೇದ

ವಿವೇಕ ಚಿಂತಾಮಣಿ

ಶ್ರೀಮದನೇಕ ಲೋಕ ಹಿತಮಾಗಿರೆ ವೇದ ಪುರಾಣ ಶಾಸ್ತ್ರದೊಳ್
ನೇಮಿಸಿ ತೋರ್ಪ ವಿಶ್ವವಿಷಯಂಗಳ ಸುಸ್ಥಿತಿಯಂ ವಿವೇಕ ಚಿಂ
ತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾ ಕವಿತಾಪ್ರಬಂಧಮಂ
ಪ್ರೇಮದೆ ಪೇಳ್ವೆ ನಾನಿದನೆ ನೀನೊಲಿದಾಲಿಸು ಶಂಭುಲಿಂಗವೇ॥

॥ಗದ್ಯ॥ ಶ್ರೀಮದನೇಕ ಭುವನಭವನಾರಂಭ ಮೂಲಸ್ತಂಭರೂಪ ಶಂಭುಲಿಂಗವಾದಿಮಾಗಿ ನಿರಾಭಾರಿ ದೇಶಿಕೋತ್ತಮ ಪರಿಯಂತಮಾದ ಗುರು ಪರಂಪರೆಗೆ ಮನೋವಾಕ್ಕಾಯಗಳಿಂದಭಿವಂದಿಸಿ, ೧

ಮತ್ತಮಾ ನಮಸ್ಕಾರ ಲಕ್ಷಣ ಮಂಗಲಾಚರಣಕ್ಕೆ ನಿರ್ವಿಘ್ನದಿಂ ಪ್ರಕರಣ ಪರಿಸಮಾಪ್ತಿ, ಶಿಷ್ಯ ಪ್ರಶಿಷ್ಯ ಪ್ರವಾಹ ಪರಿವರ್ತನೆ, ಕೇಳ್ವರ ಚಿತ್ತಸ್ವಸ್ಥತೆಗಳೆಂಬ ಫಲತ್ರಯ ಸಿದ್ಧಮೆಂದು ನಿರ್ಧರಿಸಿ, ಬಳಿಕ ಅನಾದಿನಿರ್ಮಲ ಚಿದ್ರೂಪನಪ್ಪುದರಿಂ ಸರ್ವೋತ್ಕರ್ಷನಾಗಿ, ಸರ್ವಜ್ಞತ್ವ ಸರ್ವಕರ್ತೃತ್ವ ಸಹಿತನಾದ ಪರಮೇಶ್ವರ ಪ್ರಣೀತತ್ವದಿಂ ಪ್ರಮಾಣವೆನಿಸಿದಾಗಮಾಮ್ನಾಯ ಸಮ್ಮತದಿಂ, ಮತ್ತಮಾ ಉಭಯವೇ ಮೂಲವಾದ ಶ್ರುತಿಸ್ಮೃತಿಪುರಾಣೇತಿಹಾಸ ಪುರಾತನೋಕ್ತಿಗಳನುಸಾರದಿಂದನುಭವಿಗಳಹುದೆನಿಪಂತೆ ಸ್ವಕಪೋಲ ಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಂಗಳನೆ ಸಂಗ್ರಹಿಸಿ ಮುನ್ನುಳ್ಳ ಮಣಿಪುಂಜಮಂ ರಂಜನೆಗೆಯ್ದು ತರವರಿದು ಸರಂಗೊಳಿಸಿ ನವೀನ ಕಂಠಾಭರಣಮೆನಿಸುವಂತೆ ಮುಮುಕ್ಷುಜನಂಗಳೀ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಹವೆಂದರಸಿ ಬಳಲದಂತಭಿವ್ಯಕ್ತಮಾಗಿಲ್ಲಿಯೆ ಸಲ್ಲೀಲೆಯಿಂದರಿದು ಕೃತಾರ್ಥರಾಗಲೆಂದು, ನಿಜಗುಣಶಿವಯೋಗಿ ಬೆಳುಗನ್ನಡಮಾದ ವಚನರಚನೆಗಳಿಂ ವಿವೇಕ ಚಿಂತಾಮಣಿಯೆಂಬ ಪ್ರಕರಣಮಂ ಪೇಳ್ವೆನದೆಂತೆಂದಡೆ. ೨

ಈಶ್ವರ ಕರ್ತೃತ್ವ :

ಪ್ರಥಮದಲ್ಲಿ ಚಕ್ಷುರಾದಿ ಬಾಹ್ಯೇಂದ್ರಿಯ ಗೋಚರಮಾಗಿ ತೋರುವೀ ಸಕಲ ಜಗತ್ತೆಲ್ಲಂ ಪೃಥು ಬುಧ್ನೋದರಾಕಾರದಿಂ ಸಾವಯವವಪ್ಪುದರಿಂ, ಘಟದಂತೆ ಕಾರ್ಯವಹುದಾಗಿ ಕುಲಾಲನಂತೆ ನಿಮಿತ್ತ ಕಾರಣನಾದೀಶ್ವರನಿಂ ಚಕ್ರದಂಡಾದಿಕದಂತೆ; ಪುಣ್ಯಾಪುಣ್ಯ ರೂಪ ಕರ್ಮವೆಂಬ ಸಹಕಾರೀ ಕಾರಣದಿಂ ಮೃತ್ತಿಕೆಯಂತೆ ; ಬಿಂದು ಮಾಯೆಯೆಂಬ ಶುದ್ಧಾಶುದ್ಧಮಾದ ಉಪಾದಾನಕಾರಣದಿಂ; ಗಮನಾಗಮನ ಸುಖದುಃಖಾದ್ಯನೇಕ ವ್ಯವಹಾರ ಭೇದದಿಂ ಭಿನ್ನರಾದಾತ್ಮರ ಭೋಗ ಮೋಕ್ಷಾರ್ಥಮಾಗಿ ಜನಿಸಿತ್ತೆಂದರಿಯಲ್ವೇಳ್ಕುಂ. ೩

ಬಳಿಕಲ್ಲಿ ಪ್ರಕೃತಿ, ಪರಮಾಣು ಕಾಲ, ಕರ್ಮಾದಿಗಳೇ ಜಗತ್ಕರ್ತೃಗಳಪ್ಪವು. ಈಶ್ವರನಲ್ಲೆಂದೊಡಾ ಪ್ರಕೃತಿ ಮೊದಲಾದುವೆಲ್ಲಂ ಜಡರೂಪಂಗಳಾಗಿ ಚೈತನ್ಯಾಧಿಷ್ಠಾನಮಿಲ್ಲದೆ ತಾನೆ ಜಗನ್ನಿರ್ಮಾಣಕಂಗಳಲ್ಲವೆಂಬುದೇ ಸಿದ್ಧಮಕ್ಕುಂ. ೪

ಬಳಿಕ್ಕಂತಾದೊಡೆ ಚೇತನನಾದ ಜೀವನೇ ಜಗತ್ಕರ್ತೃವಾಗಲೆಂದೊಡೆ, ಆತಂಗೆ ಕಿಂಚಿಜ್ಞತ್ವ, ಅದೃಷ್ಟ ಪರತಂತ್ರತ್ವ ಅನೀಶ್ವರತ್ವಾದಿ ದೋಷಂಗಳುಂಟಾಗಿ ಜಗವಿಂತು ಸೃಜಿಸಲು ಯೋಗ್ಯಮೆಂಬಾಳೋಚನೆಯಲ್ಲಿ ಹೇಂಗೆ ಸಮರ್ಥನಪ್ಪಂ. ಮತ್ತೇನೆಂದೊಡೆ ಪಾರಿಶೇಷ ನ್ಯಾಯದಿಂ ಪರಮೇಶ್ವರನೇ ಜಗತ್ಕರ್ತೃವೆಂದು ನಿಶ್ಚಿತಮಕ್ಕುಂ. ೫

ಬಳಿಕ ಜಗದ್ರೂಪ ಮಹಾಕಾರ್ಯಮಾದೊಡೆ, ರಥದಂತೆ ಬಹು ಕರ್ತೃಗಳುಳ್ಳುದೆನಲಾ ರಥವು, ಆಚಾರ್ಯನಾದೋರ್ವನ ಸೂತ್ರದಿಂದ ಅಹುದಾಗಿಯುಂ, ಬೇರೆ ಬೇರೆ ಬಲ್ಲತನದ ಅಭಿಮಾನದಿಂ ತಮ್ಮ ತಮ್ಮನೆ ಪೋಷಿಸಿಕೊಳಲುಳ್ಳನೇಕ ಕರ್ತೃಗಳಿಂದೊಂದು ಕಾರ್ಯವನುವಾಗದಾಗಿಯುಂ ಜಗದೀಶ್ವರನೋರ್ವನಾಗಲ್ವೇಳ್ಕುಂ. ೬

ಈಶ್ವರನ ಗುಣಾವಳಿ :

ಬಳಿಕ ಎಲ್ಲ ಕಾಲದಲ್ಲಿಯೂ, ಎಲ್ಲ ಠಾವಿನಲ್ಲಿಯೂ ಕಾರ್ಯೋದಯ ಮುಂಟಾಗಿಯಂ ಕರ್ತೃವಾದೀಶ್ವರಂಗೆ ನಿತ್ಯತ್ವ ವ್ಯಾಪಕತ್ವಂಗಳುಂ, ಆವ ಕಾರ್ಯವು ಅರಿವುತ್ತಿರ್ದ ಸಮರ್ಥನಾದ ಆತನಿಂದಲ್ಲದಾಗದಾಗಿ ಕರ್ತೃತ್ವವಾದೀಶ್ವರಂಗೆ ಸರ್ವಜ್ಞತ್ವ ಸರ್ವಶಕ್ತಿತ್ವಂಗಳುಂ; ಕಾಲವೆಂತಮೂರ್ತಮಾಗಿ ಪಲ್ಲವಕುಸುಮಾದಿ ಸಾಧಕಮಪ್ಪುವಂತೆ ಸಕಲ ಕಾರ್ಯೋತ್ಪಾದಕನಾದೀಶ್ವರಂಗೆ ನಿಷ್ಕಲತ್ವಮುಂ; ಸರ್ವಾತ್ಮರ ಹೃದಯದೊಳಂತರ್ಯಾಮಿಯಾಗಿಯುಂ; ಹೊರಗೆ ಶ್ರುತಿ ಸ್ಮೃತಿರೂಪ ಮಾದಾಜ್ಞೆಯಿಂದವೂ ನಿಯಾಮಕನಪ್ಪುದರಿಂದ ಸರ್ವಪ್ರೇರಕತ್ವಮುಂ; ಎಂತುಂ ಲೋಕದಲ್ಲಿ ಕುಲಾಲಾದಿ ಕರ್ತೃವಿನಿಂದನ್ಯಮಾದ ಘಟಾದಿಗಳ್ ನಿಯಾಮಿಸಿಕೊಳುತ್ತಿರುವಂತೆ ಅನನ್ಯಮಾದ ಶರೀರಾದಿಗಳೇ ನಿಯಾಮಿಸಿಕೊಳುತಿರ್ಪವಂತು ವಿಶ್ವವೆಲ್ಲಂ ವಿಶ್ವೇಶ್ವರನಿಂ ನಿಯಾಮ್ಯಮೆಂಬ ಶ್ರುತಿಯುಂಟಾಗಿ ಈಶ್ವರಂಗೆ ಸರ್ವಾತ್ಮಕತ್ವಮುಂ; ಅದ್ವಿತೀಯನಪ್ಪುದರಿಂ ಬೇರೆ ಪಿತೃಕರ್ತೃಗಳಿಲ್ಲಾಗಿ ಈಶ್ವರಂಗೆ ಸ್ವತಂತ್ರಮುಂ, ಜೀವರ ಕರ್ಮಾನು

ಗುಣ್ಯವಾಗಿಯೆ ಸುಖದುಃಖವುನೀವುದರಿಂದ ಈಶ್ವರಂಗೆ ರಾಗದ್ವೇಷ ರಹಿತತ್ವಮುಂ ; ಈಶ್ವರನಿಂ ಸೃಷ್ಟವಾದ ವ್ಯೋವಾದಿ ವಿಶ್ವಮಂ ಬೇರೊಂದು ಪ್ರಕಾರವಾಗಿ ಮಾಡಲು ಆವ ಮನುಷ್ಯನು ಸಮರ್ಥನಲ್ಲವದರಿಂದ ಈಶ್ವರಂಗೆ ಸರ್ವೇಶ್ವರತ್ವಮುಂ ಸುಸ್ಥಿತಮಕ್ಕುಂ. ೭

ಪ್ರಮಾಣ ಶಾಸ್ತ್ರಂಗಳು :

ಅನಂತರದೊಳಾ ಪರಮೇಶ್ವರನಿಂ ನಿರ್ಮಿತಮಾದ ಜೇತನಾಚೇತನರೂಪ ಜಗತ್ತಿನಲ್ಲಿ ಭೋಗ ಮೋಕ್ಷಾರ್ಥಮಾಗಿ ಬೇರೆ ಬೇರೆ ವರ್ತಿಸುತ್ತಿರ್ಪ ವಾದಿಗಳಿಗಭಿನುತವಾದ ಶಾಸ್ತ್ರಂಗಳಾವಾವವೆಂದೊಡೆ:- ಮೊದಲು, ಮುಖ್ಯಪ್ರಮಾಣಮಾದ ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದವೆಂಬವೆ ಸ್ವಯಂಭುವೆಂಬೀಶ್ವರ ಪ್ರಣೀತವೆಂದು ಪೇಳಿಸಿಕೊಳ್ಳುತ್ತಿರ್ದ ನಾಲ್ಕು ವೇದಂಗಳವರಲ್ಲಿ ಋಗ್ವೇದವಿಪ್ಪತ್ತೊಂದು ಭೇದಮಾಗಿಹುದು, ಯಜುರ್ವೇದ ಹನ್ನೊಂದು ಭೇದಮಾಗಿಹುದು, ಸಾಮವೇದ ಸಾವಿರಭೇದವಾಗಿಹುದು, ಅಥರ್ವಣವೇದವೆ ನವಭೇದಮಾಗಿರ್ಕುಂ ೮

ವೇದವಾಕ್ಯ ಸ್ವರೂಪ :

ಮತ್ತಮಾ ವೇದಂಗಳಾದೊಡೆ ವಿಧಿವಾದ, ಅರ್ಥವಾದ, ಮಂತ್ರವಾದ, ನಾಮಧೇಯಂಗಳೆಂಬ ನಾಲ್ಕು ಭೇದಂಗಳಿಂ, ಸಮಸ್ತ ಕರ್ಮಧರ್ಮಂಗಳಂ ಬೋಧಿಸುತ್ತಿರ್ಪವವರಲ್ಲಿ ರಾಜಾಜ್ಞೆಯಂತೆ ಪುರುಷರುಗಳ ನಿಷೇಧದತ್ತಣಿಂ ತಿರುಗಿಸಿ, ಧರ್ಮವೇ ಮಾಡಲು ತಕ್ಕುದೆಂಬುದೇ ವಿಧಿವಾದವೆನಿಸೂದು. ವಂದಿಗಳಂತಾ ವಿಧ್ಯರ್ಥಮಂ ಕೊಂಡಾಡೂದೇ ಅರ್ಥವಾದವೆನಿಸೂದು, ಆಚಾರ್ಯನಂತೆ ಮಾಡಲು ತಕ್ಕುದಂ ತೋರ್ಪುದೇ ಮಂತ್ರವಾದ ವೆನಿಸೂದು. ಜನನೀಜನಕರಂತೆ ಯಾಗಾದಿಗಳ್ಗೆ ಪೆಸರಂ ಪೇಳ್ವುದೇ ನಾಮಧೇಯಮಕ್ಕುಂ. ೯

ವೇದಾಂಗಗಳು :

ಮತ್ತಮಾ ವೇದಕ್ಕೆ ಪಾದ ಹಸ್ತ ಮುಖ ಘ್ರಾಣ ನೇತ್ರ ಶ್ರೋತ್ರಂಗಳಾದ ಕ್ರಮದಿಂ ಛಂದಸ್ಸು ಕಲ್ಪ ವ್ಯಾಕರಣ ಶಿಕ್ಷಾ ಜೋತಿಷ ನಿರುಕ್ತವೆಂಬಿವೆ ಷಡಂಗಗಳವರಲ್ಲಿ, ಛಂದಸ್ಸೇ ಮಂತ್ರಾದಿಗಳ್ಗೆ ತ್ರಿಷ್ಟುಪ್ ಮೊದಲಾದ ಛಂದಸ್ಸುಗಳಿಂದಕ್ಷರ ಗಣನೆಗಳಂ ಮಾಡೂದು. ಕಲ್ಪವೇ ಆಶ್ವಲಾಯನೀಯ ಬೋಧಾಯನೀಯ ಆಪಸ್ತಂಭನೀಯಾದಿ ಸೂತ್ರರೂಪದಿಂ ಯಜ್ಞಪ್ರಯೋಗಾದಿಗಳಂ ಕಲ್ಪಿಸೂದು. ವ್ಯಾಕರಣವೇ ವೈದಿಕ ಶಬ್ದಸಿದ್ಧಿಯಂ ಸಮರ್ಥಿಸೊದು. ಶಿಕ್ಷೆಯೇ ಉದಾತ್ತ ಅನುದಾತ್ತ ಸ್ವರಿತ ಪ್ರಚಯಂಗಳೆಂಬ ಚತುರ್ವಿಧ ಸ್ವರಕರಣ ಪೂರ್ವಕಮಾದ ಪದಪಾಳಿಕ್ರಮದಿಂ ವೇದಾಧ್ಯಯನಾದಿಕಮಂ ಸೂಚಿಸೂದು. ಜೋತಿಷವೇ ಲಗ್ನ ತಿಥಿ ವಾರ ನಕ್ಷತ್ರ ಯೋಗ ಕರಣಾದಿಗಳಿಂ ವೈದಿಕ ಕರ್ಮಗಳಿಗೆ ಕಾಲಂಗಳಂ ತಿಳಿಪುದು. ನಿರುಕ್ತವೇ ವೈದಿಕ ಶಬ್ದ ನಿರ್ವಚನಮಂ ನಿಯಾಮಿಸುತ್ತಿರ್ಕುಂ. ೧೦

ಉಪಾಂಗಗಳು :

ಬಳಿಕ ಮೀಮಾಂಸೆ ನ್ಯಾಯ ಪುರಾಣ ಸ್ಮೃತಿಗಳೆಂಬ ನಾಲ್ಕೇ ವೇದಕ್ಕುಪಾಂಗಗಳಿವರ ಲಕ್ಷಣಂಗಳ ಮುಂದೆ ಪೇಳಲ್ಪಡುತ್ತಿರ್ಕುಂ. ೧೧

ಉಪವೇದಗಳು :

ಬಳಿಕ ಆಯುರ್ವೇದ ಅರ್ಥವೇದ ಗಾಂಧರ್ವವೇದ ಧನುರ್ವೇದವೆಂಬವೆ ಉಪವೇದ ಚತುರ್ವಿಧಂಗಳವರಲ್ಲಿ : ಆಯುರ್ವೇದವೆ ವ್ಯಾಧಿನಿದಾನ, ವ್ಯಾಧಿಚಿಹ್ನೆ, ಮಂತ್ರೌಷದಾದಿ ಚಿಕಿತ್ಸಗಳಿಂದಾಯುರಾರೋಗ್ಯಾದಿಗಳಂ ತೋರಿಸೂದು. ಅರ್ಥವೇದವೆ ದಕ್ಷಿಣೆ ಆಜ್ಯ ಚರು ಉಪಹಾರಾದಿಗಳಂ ಸಂಪಾದಿಸುವುದರಿಂ ಧರ್ಮಾದಿ ಚತುರ್ವರ್ಗ ಸಾಧನವಾಗಿಹುದು. ಧನುರ್ವೇದವೆ ಶತ್ರುಜಯಾರ್ಥವಾಗಿ ಮಂತ್ರಾಸ್ತ್ರ ಪ್ರಯೋಗಾದಿಗಳಂ ಕಲಿಸೂದು. ಗಾಂಧರ್ವವೇದವೆ ಸಾಮವೇದಾದಿಗಳಲ್ಲಿ ಸರಿಗಮಪದನಿ ಎಂಬ ಸಪ್ತಸ್ವರ ಗೀತ ಪ್ರಬಂಧಗಳಂ ವಿಭಾಗಿಸುತ್ತಿರ್ಕುಂ. ೧೨

ಉಪನಿಷತ್ತುಗಳು :

ಬಳಿಕ ಶ್ರೀರುದ್ರ ಬೃಹದಾರಣ್ಯ ಶ್ವೇತಾಶ್ವತರ ಕೈವಲ್ಯ ಕಾಲಾಗ್ನಿ ಕಠವಲ್ಲಿ ಕಾತ್ಯಾಯನ ಬ್ರಹ್ಮ ನಾರಾಯಣ ಹಂಸ ಪರಮಹಂಸ ಬಾಷ್ಕಳ ಬ್ರಹ್ಮಬಿಂದು ಆರುಣಿ ಅಮೃತಬಿಂದು ಚರ್ಚ ಪಂಚಬ್ರಹ್ಮ ಜಾಬಾಲ ತೇಜೋಬಿಂದು ವಾಜಸನೀಯ ಬೋಧಾಯನೀಯ ಆಶ್ವಲಾಯನೀಯ ಮೈತ್ರಾಯಣೀಯ ಸಾಂಖ್ಯಾಯನೀಯ ವಾಸುರಾಯಣೀಯ ಶೌನಕೀಯ ಶಿವಸಂಕಲ್ಪ ಶ್ರವಣ ಪರಿಕ್ರಮ ಪೋಚ್ಯ ಮುದ್ಗಲ ಮುಂಡಕವೆಂಬೀ ಮೊದಲಾದ ಉಪನಿಷತ್ತುಗಳವರಲ್ಲಿ ಜ್ಞಾನಾಗಮದ ಭಸ್ಮ ರುದ್ರಾಕ್ಷಿಗಳಂ ಬ್ರಹ್ಮಜ್ಞಾನಾಧಿಕಮಂ ವಿಸ್ತರಿಸಿರ್ಕುಂ. ೧೩

ಸ್ಮೃತಿಗಳು :

ಬಳಿಕ ಮನುಸ್ಮೃತಿ ಅತ್ರಿಸ್ಮೃತಿ ಹಾರೀತಸ್ಮೃತಿ ವಿಷ್ಣುಸ್ಮೃತಿ ಯಾಜ್ಞವಲ್ಕ್ಯಸ್ಮೃತಿ ಉಶನಸ್ಮೃತಿ ಆಂಗಿರಸಸ್ಮೃತಿ ಆಪಸ್ತಂಬಸ್ಮೃತಿ ಸಂವರ್ತಕಸ್ಮೃತಿ ಕಾತ್ಯಾಯನಸ್ಮೃತಿ ಬೃಹಸ್ಪತಿಸ್ಮೃತಿ ಪರಾಶರಸ್ಮೃತಿ ನಾರದಸ್ಮೃತಿ ವ್ಯಾಸ ಸ್ಮೃತಿ ಶಂಖಲಿಖಿತಸ್ಮೃತಿ ದಕ್ಷಸ್ಮೃತಿ ಗೌತಮಸ್ಮೃತಿ ಶಾತಾತಪಸ್ಮೃತಿ ವಶಿಷ್ಠ ಸ್ಮೃತಿಗಳೆಂಬಿವೆ. ಆಯಾಯ ನಾಮಧೇಯಮುಳ್ಳವರಿಂದುಕ್ತಮಾದ ಹತ್ತೊಂಬತ್ತು ಧರ್ಮಶಾಸ್ತ್ರಂಗಳವರೊಳಗೆ,

ಕೃತಯುಗದಲ್ಲಿ ಮನುಸ್ಮೃತಿ ಧರ್ಮವೇ ಮುಖ್ಯವಾಗಿಹುದು.
ತ್ರೇತಾಯುಗದಲ್ಲಿ ಗೌತಮ ಸ್ಮೃತಿ ಧರ್ಮವೇ ಮುಖ್ಯವಾಗಿಹುದು.
ದ್ವಾಪರಯುಗದಲ್ಲಿ ಶಂಖಲಿಖಿತ ಸ್ಮೃತಿ ಧರ್ಮವೇ ಮುಖ್ಯವಾಗಿಹುದು.
ಕಲಿಯುಗದಲ್ಲಿ ಪರಾಶರಸ್ಮೃತಿ ಧರ್ಮವೇ ಮುಖ್ಯವಾಗಿಹುದು. ೧೪

ಸ್ಮೃತಿಗಳಲ್ಲಿ ಜಾತಿ ವರ್ಣಾಶ್ರಮಾಚಾರಂಗಳಂ, ದಾಯಾದ್ಯ ವಿಭಾಗಾದಿ ಹದಿನೆಂಟು ವ್ಯವಹಾರ ಭೇದಂಗಳಂ, ಮಹಾಪಾತಕಾದಿಗಳಿಗೆ ಪ್ರಾಯಶ್ಚಿತ್ತಂಗಳಂ ವಿಧಿಸೂದು.

ಅವರೊಳಗೆ ಕಮ್ಮೆ ಕನ್ನಡಿಗ ಆಂಧ್ರ ದ್ರಾವಿಡವೆಂಬವೆ ನಾಲ್ಕು ಜಾತಿಗಳು. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬವೆ ನಾಲ್ಕು ವರ್ಣಂಗಳವರಲ್ಲಿ. ೧೫

ಬ್ರಾಹ್ಮಣ ಕರ್ಮ (ಷೋಡಶ ಕರ್ಮಗಳು ಮತ್ತು ಷಟ್ಕರ್ಮಗಳು)

ಗರ್ಭಾದಾನ ಪುಂಸವನ ಸೀಮಂತ ಉನ್ನಯನ ಜಾತಕರ್ಮ ನಾಮಕರಣ ಉಪನಿಷ್ಕ್ರಮಣ ಅನ್ನಪ್ರಾಶನ ಚೌಲ ಉಪನಯನ ಮಹಾನಾಮ್ಯ ಮಹಾವ್ರತ ಉಪನಿಷತ್ತು ಶೋಭನ ಉದ್ವಾಹ ಮೃತಿಗಳೆಂಬ ಷೋಡಶಕರ್ಮಂಗಳೊಡನೆಯೂ, ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹವೆಂಬೀ ಷಟ್ಕರ್ಮಂಗಳೊಡನೆಯೂ, ಶಿವ ಭಕ್ತ್ಯಾದಿ ಸಕಲ ಸದ್ಗುಣಂಗಳೊಡನೆಯೂ ಕೂಡಿದಾತನೇ ಬ್ರಾಹ್ಮಣನಪ್ಪಂ. ೧೬

ಕ್ಷತ್ರಿಯ ಕರ್ಮಗಳು :

ಬಳಿಕ ಪ್ರಜಾಪಾಲನ, ಯಜನ, ಅಧ್ಯಯನ, ದುರ್ಜನ ದುಷ್ಟಮೃಗ ಪಕ್ಷಿ ಶತ್ರುಸಂಹಾರ, ಅನ್ನದಾನ, ವಸ್ತ್ರದಾನ, ಭೂದಾನ, ಕನ್ಯಾದಾನ, ಹಿರಣ್ಯದಾನ, ಗೋದಾನ, ಉಭಯ ಮುಖೀದಾನ, ಮಹಿಷೀದಾನ, ಅಶ್ವದಾನ, ಶ್ವೇತಾಶ್ವದಾನ, ಕಾಳಾಮುಖದಾನ, ಮಹಾಮೇರುದಾನ ಕಲ್ಪವೃಕ್ಷದಾನ, ವಿದ್ಯಾದಾನಾದಿ ಮಹಾದಾನ, ತದ್ದಾನಾರ್ಥವಾಗಿ ದೇಶ-ಕಾಲ-ಪಾತ್ರ-ಪರೀಕ್ಷೆ-ವಿಷ್ಣು ಭಕ್ತ್ಯಾದಿ ಕರ್ಮಯುಕ್ತನಾದಾತನೇ ಕ್ಷತ್ರಿಯನಪ್ಪಂ. ೧೭

ವೈಶ್ಯಕರ್ಮಗಳು :

೧. **ಗಣಿತ ಸಂಜ್ಞೆ**:- ಬಳಿಕ ಪ್ರಥಮಸ್ಥಾನ, ದ್ವಿತೀಯಸ್ಥಾನ, ತೃತೀಯ ಸ್ಥಾನ, ಚತುರ್ಥಸ್ಥಾನ, ಪಂಚಮಸ್ಥಾನವೆಂದಿಂತು ಮೂವತ್ತಾರು ಸ್ಥಾನಪರಿಯಂತರಂ ಕ್ರಮದಿಂದೆ ಎಕ್ಕಂ, ದಹಂ, ಶತಂ, ಸಾವಿರ ದಾಸಾವಿರ, ಲಕ್ಷ ದಾಲಕ್ಷ, ಕೋಟಿ ದಹಂ ಕೋಟಿ, ಶತಂಕೋಟಿ, ಅರ್ಬುದ, ನಿರ್ಬುದ, ಖರ್ವ, ಮಹಾಖರ್ವ, ಪದ್ಮ, ಮಹಾಪದ್ಮ, ಕ್ಷೋಣಿ, ಮಹಾಕ್ಷೋಣಿ, ಶಂಖ ಮಹಾಶಂಖ, ಕ್ಷಿತಿ, ಮಹಾಕ್ಷಿತಿ, ಕ್ಷೋಭ, ಮಹಾಕ್ಷೋಭ, ನಿಧಿ, ಮಹಾನಿಧಿ, ಸಾಗರ ಮಹಾಸಾಗರ, ಹರಿ, ಮಹಾಹರಿ, ಶಂಖೆ, ಮಹಾಶಂಖೆ, ಫಣಿ, ಮಹಾಫಣಿ, ಕ್ರತು, ಮಹಾಕ್ರತುವೆಂಬವೆ ಉಗ್ಘಡಣೆಗಳು.

ಬಳಿಕ ಯಗ ಯಕ್ಕ ಏಕ ರೂಪ ಭೂಮಸಂಜ್ಞೆ ಚಂದ್ರಸಂಜ್ಞೆ ಮೊದಲಾದವೆ ಒಂದಕ್ಕೆ ಪೆಸರು.

ಬೆ ಬೆನ್ನಿ ದ್ವಾ ದ್ವಂದ್ವ ದ್ವಿ ದ್ವಿತೀಯ ಯುಗ್ಮ ಯುಗಳ ಯುಗ ಉಭಯ ಬಾಹು ಪಾದ ಪಕ್ಷ ನಯನಸಂಜ್ಞೆ ಮೊದಲಾದವೆ ಎರಡಕ್ಕೆ ಪೆಸರು.

ತ್ರಿ ತ್ರಿತಯ ತ್ರಯ ಹರನಯನ ಅಗ್ನಿ ಪುರ ವರರತ್ನಾದಿಗಳೇ ಮೂರಕ್ಕೆ ಪೆಸರು.

ಚೌ ಚತು ಗತಿ ಕಷಾಯ ವೇದ ವರ್ಣ ಆಶ್ರಮ ಸಮುದ್ರಸಂಜ್ಞೆ ಮೊದಲಾದವೇ ನಾಲ್ಕಕ್ಕೆ ಪೆಸರು.

ಪಂಚ ಹರವಕ್ತ್ರ ವ್ರತ ಇಂದ್ರಿಯ ಬಾಣ ವಿಷಯ ಪಾಂಡವ ಭೂತಾದಿಗಳೇ ಐದಕ್ಕೆ ಪೆಸರು.

ಷಟ್‌ದ್ರವ್ಯ ಋತು ರಸ ಸ್ಕಂದಮುಖ ವೇದಾಂಗ ಕರ್ಮ ವರ್ಣ ದರ್ಶನ ಅರ್ಥಾದಿಗಳೇ ಆರಕ್ಕೆ ಪೆಸರು.

ಸಪ್ತಮುನಿ ಗಿರಿ ರಾಜಾಂಗ ತುರಗ ಧಾತು ಸಭಾಂಗ ಸ್ವರ ಸಾಗರ ಸಂಜ್ಞೆ ಮೊದಲಾದವೇಳಕ್ಕೆ ಪೆಸರು.

ಅಷ್ಟವಸು ದಿಗ್ಗಜ ಮದ ಕರ್ಮಾದಿಗಳೆ ಎಂಟಕ್ಕೆ ಪೆಸರು.

ನವ ರಂದ್ರ ನಿಧಿ ರಸ ಗ್ರಹ ರತ್ನ ಭಾವಾದಿಗಳೆ ಒಂಭತ್ತಕ್ಕೆ ಪೆಸರು.

ಬಿಂದು ಶೂನ್ಯ ನಾಸ್ತಿ ಅನುಸ್ವಾರ ಗಗನಸಂಜ್ಞೆ ಮೊದಲಾದವೆ ಸೊನ್ನೆಯ ಪೆಸರೆಂದು ಸಕಲ ಸಂಖ್ಯಾ ಸಂಜ್ಞೆಗಳನರಿದು.

ಹೆಚ್ಚಕಳೆದು, ಗಣಿತಾದಿಗಳಂ ಗುಣಿಸಿ, ಕ್ರಮುಕಾದಿ ಸಮಸ್ತ ವಸ್ತುಗಳಂ ಪ್ರಮಾಣಿಸುವ ಲೆಕ್ಕ ಬರೆಹ ಕ್ರಯ ಬಡ್ಡಿ ವಟ್ಟ ಚಿನ್ನದ ಬಣ್ಣ ಪವಳದ ಕಣಜ ಮಣಿಗಳಟವು ರತ್ನಂಗಳ ಸೂಕ್ಷ್ಮ ಪರೀಕ್ಷೆ ವಜ್ರದ ಮುಂಜಾಡಿ ಪಚ್ಚೆಯ ರತಿ ಮೊದಲಾದವಂ ಬೇರೆ ಬೇರೆ ಲಕ್ಷಿಸಿ. ೧೮

೨ ತೂಕದ ಪ್ರಮಾಣ : ಬಳಿಕ

ಹತ್ತು ಹಣತೂಕ ಒಂದು ಗದ್ಯಾಣ
ಅದು ನಾಲ್ಕಾಗಲು ಒಂದು ಕರ್ಷ
ಅದು ನಾಲ್ಕಾಗಲು ಒಂದು ಹಲ
ಅದು ಇಪ್ಪತ್ತಾಗಲು ಒಂದು ಬಿಸಿಗೆ
ಆ ಬಿಸಿಗೆ ಐದಾಗಲು ಒಂದು ತೊಲೆ
ಆ ತೊಲೆ ಇಪ್ಪತ್ತಾಗಲು ಒಂದು ಭಾರ

ಅ ಭಾರ ಹತ್ತಾಗಲು ಒಂದು ಅಚಿತವಹುದೆಂದು ಕರ್ಪೂರಾದಿಕದ ತೂಕಮಂ ಪ್ರಮಾಣಿಸಿ, ೧೯

೩ ಅಳತೆ ಪ್ರಮಾಣ : ಬಳಿಕ

ಒಂದು ಸೊಲಿಗೆಯೆ ನಿಕುಂಜ
ಅದು ನಾಲ್ಕಾಗಲು ಒಂದು ಕುಡುಬ
ಅದು ನಾಲ್ಕಾಗಲು ಒಂದು ಪ್ರಸ್ಥ
ಆ ಪ್ರಸ್ಥವೆರಡಾಗೆ ವಾಹ
ಅದು ಎರಡಾಗಲು ಒಂದು ಅಡಕ
ಅದು ನಾಲ್ಕಾಗಲು ಒಂದು ದೋಣ
ಅದು ಐದಾಗಲೊಂದು ಖಾರಿ ಯಹುದೆಂದು ಧಾನ್ಯಾದಿಗಳ ಅಳತೆಯ ನಾರೈದು

ಮಾಡುವ ವಾಣಿಜ್ಯ ಕೃಷಿ ಗೋಪಾಲಿಕೆ ಸೂರ್ಯಭಕ್ತ್ಯಾದಿ ಕರ್ಮಯುಕ್ತನಾದಾತನೇ ವೈಶ್ಯನಪ್ಪಂ ೨೦

ಶೂದ್ರ ಕರ್ಮ :

ಬಳಿಕ ಬ್ರಾಹ್ಮಣಾದಿ ವರ್ಣತ್ರಯ ಸೇವೆ, ಕ್ಷೇತ್ರ ರಕ್ಷಣೆ, ಸಕಲದೇವತಾ ಭಕ್ತ್ಯಾದಿ ಕರ್ಮಯುಕ್ತನಾದಾತನೇ ಶೂದ್ರನೆನಿಪಂ ೨೧

ಪುರಾಣೋಪ ಪುರಾಣಂಗಳು :

ಅನಂತರದಲ್ಲಿ ಬ್ರಹ್ಮ ಪುರಾಣ, ಪದ್ಮಪುರಾಣ, ವೈಷ್ಣವಪುರಾಣ, ಶೈವ ಪುರಾಣ, ಭಾಗವತ ಪುರಾಣ, ನಾರದೀಯ ಪುರಾಣ, ಮಾರ್ಕಂಡೇಯ ಪುರಾಣ, ಅಗ್ನಿಪುರಾಣ, ಭವಿಷ್ಯತ್ಪುರಾಣ, ಬ್ರಹ್ಮಕೈವರ್ತಪುರಾಣ, ಲೈಂಗ್ಯಪುರಾಣ, ವರಾಹ ಪುರಾಣ, ಮತ್ಸ್ಯ ಪುರಾಣ, ಸ್ಕಂದ ಪುರಾಣ ವಾಮನ ಪುರಾಣ, ಕೂರ್ಮಪುರಾಣ, ಗಾರುಡಪುರಾಣ, ಬ್ರಹ್ಮಾಂಡ ಪುರಾಣವೆಂಬವೆ ಶಿವಪ್ರಸಾದದಿಂ ವ್ಯಾಸ ಋಷೀಶ್ವರರೋತ್ತಮಾದ ವೇದದ ನಷ್ಟ ಶಾಖಾರ್ಥ ಪ್ರತಿಪಾದಕಮಪ್ಪ ನಾಲ್ಕು ಲಕ್ಷಗ್ರಂಥ ಸಂಖ್ಯೆಯಳ್ಳ ಹದಿನೆಂಟು ಮೂಲ ಪುರಾಣಂಗಳು.

ಅದರೊಳಗೆ : ಶಿವಪುರಾಣ ಸ್ಕಂದಪುರಾಣ ಲೈಂಗ್ಯಪುರಾಣ ಕೂರ್ಮಪುರಾಣ ವಾಮನಪುರಾಣ ವರಾಹ ಪುರಾಣ ಭವಿಷ್ಯತ್ಪುರಾಣ ಮತ್ಸ್ಯಪುರಾಣ ಮಾರ್ಕಂಡೇಯಪುರಾಣ. ಬ್ರಹ್ಮಾಂಡ ಪುರಾಣವೆಂಬ ಹತ್ತೇ ಶಿವ ಪುರಾಣಗಳು.

ಬ್ರಹ್ಮಪುರಾಣ ಪದ್ಮಪುರಾಣವೆಂದೆರಡೇ ಬ್ರಹ್ಮಪುರಾಣಗಳು,

ನಾರದೀಯ ಭಾಗವತ ಗಾರುಡ ವೈಷ್ಣವವೆಂಬವೇ ನಾಲ್ಕು ವಿಷ್ಣು ಪುರಾಣಗಳು,

ಅಗ್ನೇಯವೊಂದೇ ಅಗ್ನಿ ಪುರಾಣವಹುದು.

ಬ್ರಹ್ಮ ಕೈವರ್ತವೊಂದೇ ಸೂರ್ಯಪುರಾಣವಹುದಾಗಿ ದೇವತೆಗಳ ತಾರತಮ್ಯವನು ಈ ಪುರಾಣಂಗಳ ಕುಂದು ಹೆಚ್ಚುಗಳಿಂದಿವೆ ನಿಶ್ಚೈಸವೇಳ್ಕುಂ. ೨೨

ಮತ್ತವಾ ಪುರಾಣಂಗಳಲ್ಲಿ ಸರ್ಗ ಪ್ರತಿಸರ್ಗ ವಂಶ ಮನ್ವಂತರ ವಂಶಾನುಚರಿತಂಗಳೆಂಬ ಪಂಚಲಕ್ಷಣಂಗಳುಂ ಸಮಸ್ತ ವೈದಿಕ ತಾಂತ್ರಿಕ ಧರ್ಮಂಗಳುಂ ವಿದಿತಂಗಳಕ್ಕುಂ ೨೩

ಬಳಿಕ

ಸನತ್ಕುಮಾರಪುರಾಣ ನಾರಸಿಂಹಪುರಾಣ ನಂದಿಪುರಾಣ ಶಿವಧರ್ಮಪುರಾಣ ದೂರ್ವಾಸಪುರಾಣ ನಾರದೀಯಪುರಾಣ ಮಾನವಪುರಾಣ ಉಶನಃಪುರಾಣ ಬ್ರಹ್ಮಾಂಡಪುರಾಣ ವಾರುಣಪುರಾಣ ಕಾಲೀಪುರಾಣ ವಾಶಿಷ್ಠಪುರಾಣ ಸಾಂಬಪುರಾಣ ಸೌರಪುರಾಣ ಪಾರಶರಪುರಾಣ ಮಾರೀಚ್ಯಪುರಾಣ ಭಾರ್ಗವಪುರಾಣ

ಕಪಿಲಪುರಾಣವೆಂಬವೆ ಆಯಾಯ ನಾಮಧೇಯಮುಳ್ಳವರಿಂ ನಿರೂಪಿತಂಗಳಾದ ಹದಿನೆಂಟು ಉಪ ಪುರಾಣಂಗಳವರಲ್ಲಿ ವೈದಿಕ ಧರ್ಮಾದಿಕವೆಲ್ಲಂ ಪ್ರತಿಪಾದ್ಯಂಗಳಕ್ಕುಂ. ೨೪

ಇತಿಹಾಸ :

ಬಳಿಕ ಭಾರತ ರಾಮಾಯಣವೆಂಬವೆರಡೇ ವ್ಯಾಸ ವಾಲ್ಮೀಕಿಗಳಿಂ ಪ್ರಣೀತಮಾದ ಇತಿಹಾಸಂಗಳು. ಅವರಲ್ಲಿ ಸತ್ವಗುಣಭೇದಂಗಳುಂ ತ್ರಿದೇವತಾ ಲಕ್ಷಣಂಗಳುಂ, ದೇವದಾನವಾದಿಗಳ ಜನನ ಕ್ರಮಂಗಳಂ, ಯುಧಿಷ್ಠಿರ ರಾಮಚಂದ್ರಾದಿ ರಾಜ ವೃತ್ತಾಂತಂಗಳಂ, ವೈದಿಕ ಧರ್ಮಾದಿಗಳಂ ದೃಢೀಕರಿಸುತ್ತಿರ್ಕುಂ. ೨೫

ಅವೈದಿಕ ಶಾಸ್ತ್ರತ್ರಯಂಗಳು :

ಅನಂತರದಲ್ಲಿ ಬೃಹಸ್ಪತಿ ಅರ್ಹತ ಸುಗತರೆಂಬವರಿಂ ಕ್ರಮದಿಂ ಪೇಳಲ್ಪಟ್ಟ ಚಾರ್ವಾಕ ಜೈನ ಬೌದ್ಧಂಗಳೆಂಬವೆ ಅವೈದಿಕ ಶಾಸ್ತ್ರ ತ್ರಯಂಗಳು.

೧. ಚಾರ್ವಾಕವೇ ಪೃಥುವ್ಯಾದಿ ಚತುರ್ಭೂತ ವಿಕಾರಮಾದ ಜಗತ್ತಿನಲ್ಲಿ ಸುಖವೇ ಸ್ವರ್ಗ, ದುಃಖವೇ ನರಕವಲ್ಲದೆ ಬೇರೆ ಸ್ವರ್ಗನರಕಾದಿಗಳಿಲ್ಲವೆಂದು ಪೇಳೂದು.

೨. ಜೈನಶಾಸ್ತ್ರವೇ ಸಿದ್ಧ ಬದ್ಧ ನಾರಕಿಗಳೆಂಬ ಪುರುಷತ್ರಯ ಲಕ್ಷಣಂಗಳಂ ;

ಒಡ್ಡೀಶ, ಒಡ್ಡಮಲ್ಲೇಶ್ವರ, ಜ್ವಾಲಿನೀಕಲ್ಪ, ಪದ್ಮಾವತಿಕಲ್ಪ, ಶಾರದಾಕಲ್ಪ, ಕುಕ್ಕುಟನಾಥಾದಿಕಲ್ಪಂಗಳಂ;

ಮಂತ್ರೌಷಧಾದಿ ಪ್ರಯೋಕ್ತೃಗಳಾದ ಪರಮಸಿದ್ಧರುಗಳಂ ;

ಲೂನೇಶ, ದಿಗಂಬರ, ಪಾಣಿಪಾತ್ರೆ, ಮಯೂರಪಿಂಛ ಪಂಚಮಲಧಾರಣಾದಿಗಳಿಂ;

ಪುಸಿ, ಕಳವು, ಪರದಾರ, ಅತಿಕಾಂಕ್ಷೆ, ಹಿಂಸೆಗಳಿಲ್ಲದಿಹಣವೆಂಬ ಪಂಚಾಣು ವ್ರತಂಗಳಂ ;

ಮಧು ಪಲಾಂಡು ಮೊದಲಾದ ನಿಷಿದ್ಧಂ ಬಿಟ್ಟು, ತಪ್ತ ಶಿಲಾಶಯನಾದಿಗಳಿಂದುಗ್ರ ತಪವನಾಚರಿಸುವ ಮುನಿವೃತ್ತಿಗಳಂ; ಹೇಮಚಂದ್ರ, ನೇಮಿಚಂದ್ರ, ನಾಗಚಂದ್ರ, ಮೇಘಚಂದ್ರ, ಮಾಘಚಂದ್ರ, ಅರ್ಹತ, ಆದಿನಾಥ, ಅಗ್ಗಳನಾಥ, ಪಾರ್ಶ್ವನಾಥ ಸೌಗತ, ಶ್ರುತಕೀರ್ತಿ, ಶ್ರೀಮತಿ, ಕಾಮರಹಿತ, ಮುನಿಸ್ವಾಮಿಗಳೆಂಬ ಚೌವ್ವೀಸ ತೀರ್ಥಂಕರರ ಚರಿತ್ರಂಗಳಂ; [1]

ಸ್ಯಾದಸ್ತಿ ಸ್ಯಾನ್ನಾಸ್ತಿ ಎಂಬಿವು ಮೊದಲಾದ ಸಪ್ತಭಂಗಿಗಳಂ ;

ಜೀವ ಅಜೀವ ಕರ್ಮ ಆಸ್ರವ ಬಂಧ ನಿರ್ಜರ ಮೋಕ್ಷಂಗಳೆಂಬ ಸಪ್ತ ಪದಾರ್ಥಂಗಳಂ ಪ್ರತಿಪಾದಿಸೂದು.

---

[1] ತೀರ್ಥಂಕರರ ಕೆಲವು ಹೆಸರುಗಳು ಭಿನ್ನವಾಗಿವೆ.

೩. ಬೌದ್ಧಶಾಸ್ತ್ರ :

ಬೌದ್ಧವೇ ಭೂಮ್ಯಾದಿ ಬುದ್ಧಿ ಕಡೆಯಾದ ತ್ರಯೋವಿಂಶತಿ ತತ್ತ್ವಾತ್ಮಕ ಪ್ರಪಂಚವೆಲ್ಲಂ ದೀಪ ಜ್ವಾಲೆಗಳಂತೆ ಕ್ಷಣಿಕವೆಂದು ಸಂಪಾದಿಸುತ್ತವೆ.

ಸೌತಾಂತ್ರಿಕ ವೈಭಾಷಿಕ ಮಹಾಯಾನಕ ಸೌಶ್ರುತವೆಂದು ನಾಲ್ಕು ತೆರನಾಗಿರ್ಕುಂ. ೨೬

ಕೌಳಯಾಮಳ :

ಬಳಿಕ ಸತ್ಯನಾಥ, ಸಂತೋಷಕನಾಥ, ಆದಿನಾಥ, ಅನಾದಿನಾಥ, ಅಕುಳಿನಾಥ ಮತಂಗನಾಥ, ಮತ್ಸ್ಯಂದ್ರನಾಥ, ಘಟಯಂತ್ರನಾಥ, ಗೋರಕ್ಷನಾಥರೆಂಬ ನವವಾಥ ಸಿದ್ಧರಿಂ ಕಲ್ಪಿತಮಾದ ಕೌಳಯಾಮಳಾದಿಗಳೇ ಹಿಂಸಾ ಮೈಥುನಾದಿ ನಿಷಿದ್ಧಕರ್ಮಮುಳ್ಳ ಶಾಸ್ತ್ರಾಂತರಂಗಳವರಲ್ಲಿ;

೧. ಅಭಿಚಾರಕರ್ಮಜನಿತ ವ್ಯಾಧ್ಯಾದಿ ದ್ವಾರದಿಂ ಅಕಾಲಮೃತ್ಯುರೂಪ ಮರಣವೆಂಬ;

೨. ಸುಪ್ತಿ ವಿಷಯ ಮೂರ್ಛಾದಿ ಸದೃಶೀಕರಣ ಲಕ್ಷಣ ಮೋಹನಮೆಂಬ;

೩. ಅಗ್ನಿಸ್ತಂಭ ಜಲಸ್ತಂಭ ಇಂದ್ರಿಯಸ್ತಂಭ ಖಡ್ಗಸ್ತಂಭ ಜಿಹ್ವಾಸ್ತಂಭ ಗತಿಸ್ತಂಬಾದಿ ರೂಪಸ್ತಂಭನವೆಂಬ ;

೪. ಪೂರ್ವಸುಖಾಶ್ರಯ ನಿರಸನಾತ್ಮಕ ಉಚ್ಚಾಟನಮೆಂಬ ;

೫. ವಸ್ತ್ರಾಭರಣ ವಾಹನ ವನಿತಾದಿ ವಸ್ತು ನಿಜಸ್ಥಾನಗತ ಲಕ್ಷಣಾಕರ್ಷಣಮೆಂಬ ;

೬ ಪ್ರಾಣಸ್ನೇಹಿತಾನ್ಯೋನ್ಯ ವಿರೋದ ಕರಣಾತ್ಮಕ, ವಿದ್ವೇಷಣಮೆಂಬ ಷಟ್ಕರ್ಮಂಗಳು.

ರಾಜವಶ್ಯ, ಜನವಶ್ಯ, ಸ್ತ್ರೀವಶ್ಯಂಗಳಂ; ಜ್ವರ ಭೂತ ಗ್ರಹಾವೇಶಂಗಳಂ ; ಪಾದುಕಾಸಿದ್ಧಿ, ಅಂಜನಾಸಿದ್ಧಿ, ಘುಟಿಕಾಸಿದ್ಧಿ, ಮೂಲಿಕಾಸಿದ್ಧಿ, ರಸಾಯನಾದಿಸಿದ್ಧಿಗಳಂ ಸಾಧಿಸುತ್ತಿರ್ಕುಂ. ೨೭

ಶಾಕ್ತೇಯ, ಪಂಚರಾತ್ರಂಗಳು :

ಬಳಿಕ ಶಕ್ತಿತತ್ತ್ವವಾಸಿಯಾದೋರ್ವಾತ್ಮಕನಿಂ, ವಾಸುದೇವನಿಂ ಕ್ರಮದಿಂದುಕ್ತಮಾದ ಶಾಕ್ತೇಯ ಪಂಚರಾತ್ರಮೆಂಬವೆ ಶಾಸ್ತ್ರಾಂತರ ದ್ವಯಂಗಳವರಲ್ಲಿ :

ಶಾಕ್ತೇಯವೇ ಜಡಾಜಡ ಪ್ರಪಂಚವೆಲ್ಲಂ ಶಕ್ತಿ ಪರಿಣಾಮಮೆಂಬುದು ಮೊದಲಾದವಂ ವಿಸ್ತರಿಸೂದು.

ಪಾಂಚರಾತ್ರವೇ ಪೃಥುವ್ಯಾದಿ ಮಾನಸಾಂತಮಾದ ಚತುರ್ವಿಂಶತಿ ತತ್ವಂಗಳಿಂ ಮೇಲೆ ಗುಣತತ್ತ್ವಾತ್ಮಕ ವಾಸುದೇವನಿಂ ಜಗದ್ಧಿತಾರ್ಥಮಾಗಿ ಕೃಷ್ಣ ಅನಿರುದ್ಧ ಮಕರಧ್ವಜ ರೌಹಿಣೇಯರೆಂಬ ನಾಲ್ವರುತ್ಪತ್ತಿ ಮೊದಲಾದವಂ ಸಂಪಾದಿಸುತ್ತಿರ್ಕುಂ. ೨೮

ಸಾಧಾರಣ ಶಾಸ್ತ್ರ ಪಂಚಕ :

ಬಳಿಕ ಲೌಕಿಕ ವೈದಿಕ ಆಧ್ಯಾತ್ಮಿಕ ಅತಿಮಾರ್ಗಿಕ ಮಾಂತ್ರಿಕವೆಂದು ಪಂಚವಿಧ ಶಾಸ್ತ್ರಂಗಳು. ಅವರಲ್ಲಿ,

೧ **ಲೌಕಿಕ ಶಾಸ್ತ್ರ** : ಲೌಕಿಕವೇ ಧನ್ವಂತ್ರ್ಯಾದಿಗಳಿಂದುಕ್ತಮಾದ ಆಯುರ್ವೇದ ದಂಡನೀತಿ ಮೊದಲಾದ ದೃಷ್ಟ ಫಲಂಗಳಂ ನಿರ್ಧರಿಸುತ್ತಿರ್ಕುಂ.

೨ **ವೈದಿಕ ಶಾಸ್ತ್ರ** : ಜೈಮಿನಿ ಅಕ್ಷಪಾದ ಕಣಾದರೆಂಬ ಋಷೀಶ್ವರರಿಂ ಕ್ರಮದಿಂದುಕ್ತಮಾದ ಪೂರ್ವಮೀಮಾಂಸೆ, ನ್ಯಾಯ, ವೈಶೇಷಿಕಮೆಂಬ ದೃಷ್ಟಾದೃಷ್ಟ ಫಲಂಗಳುಳ್ಳವೇ ವೈದಿಕ ಶಾಸ್ತ್ರತ್ರಯಂಗಳವರಲ್ಲಿ.

ಪೂರ್ವಮೀಮಾಂಸೆಯೇ ಉಪಕ್ರಮಾದಿ ಷಡ್ವಿಧಲಿಂಗತಾತ್ಪರ್ಯದಿಂ ವೇದವಾಕ್ಯವಿಚಾರಪೂರ್ವಕವಾಗಿ ಜ್ಯೋತಿಷ್ಟೋಮ ಯಾಗಾದಿಕಮಂ ವಿಧಿಸೂದು.

ನ್ಯಾಯವೇ ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅನಯನ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡ, ಹೇತ್ವಾಭಾಸ, ಛಲ, ಜಾತಿ, ನಿಗ್ರಹಸ್ಥಾನಂಗಳೆಂಬ ಷೋಡಶ ಪದಾರ್ಥಂಗಳಂ ಪೇಳುತ್ತವೆ ಪ್ರಪಂಚಕ್ಕೆ ಈಶ್ವರ ಕರ್ತೃತ್ವಮಂ ನಿಶ್ಚೈಸೂದು.

ವೈಶೇಷಿಕವೇ ದ್ರವ್ಯ ಗುಣ ಕರ್ಮ ಸಾಮಾನ್ಯ ವಿಶೇಷ ಸಮನಾಯವೆಂಬ ಷಟ್ಪದಾರ್ಥ ಪ್ರತಿಪಾದಕತ್ವದಿಂ ಪ್ರಪಂಚ ಸ್ವರೂಪಮಂ ವಿಭಾಗಿಸುತ್ತಿರ್ಕುಂ. ೨೯

೩. **ಆಧ್ಯಾತ್ಮಿಕ ಶಾಸ್ತ್ರ** : ಕಪಿಲ ಪತಂಜಲಿ ವ್ಯಾಸರೆಂಬ ಮುನಿಗಳಿಂ ಕ್ರಮದಿಂ ನಿರೂಪಿತಂಗಳಾದ ಸಾಂಖ್ಯ, ಪಾತಂಜಲ, ವೇದಾಂತಂಗಳೆಂಬ ಆತ್ಮಜ್ಞಾನ ಫಲವಾಗುಳ್ಳವೇ ಆಧ್ಯಾತ್ಮಿಕ ಶಾಸ್ತ್ರತ್ರಯಂಗಳ್. ಅವರಲ್ಲಿ,

ಸಾಂಖ್ಯ : ಸಾಂಖ್ಯವೇ ನಿತ್ಯನಿರ್ಮಲರಾದಾತ್ಮರ ಸನ್ನಿಧಾನದಿಂ ಗುಣತ್ರಯಾತ್ಮಕ ಪ್ರಕೃತಿಯೇ ಪಂಚವಿಂಶತಿ ತತ್ತ್ವಾತ್ಮಕ ಜಗವಾಗಿ ವ್ಯವಹರಿಸೂದೇ ಸಂಸಾರ ಬಂಧಮೆಂಬುದಂ ಸತ್ವಾದಿಗುಣತ್ರಯಾನುಕ್ರಮದಿಂ ಶ್ಲೇಷ್ಮಪ್ರಕೃತಿ, ಪಿತ್ಥಪ್ರಕೃತಿ, ವಾತ ಪ್ರಕೃತಿಗಳುಳ್ಳ ಶಾಂತಿ ಕ್ರೋಧ ಮೂಢತ್ವಾದಿ ಗುಣಗಳಾದ ಉತ್ತಮ ಮಧ್ಯಮ ಅಧಮ ಪುರುಷತ್ರಯದ ವರ್ಣ ರೀತಿ ಮೊದಲಾದವಂ ವಿಭಾಗಿಸೂದು.

ಪಾತಂಜಲ : ಪಾತಂಜಲವೇ ಯಮಾದ್ಯಷ್ಟಾಂಗಯೋಗದಿಂ ಮನೋನಿಶ್ಚಲತೆಯಂ ಸಿದ್ಧಿಸೂದು.

ವೇದಾಂತ : ಉತ್ತರ ಮೀಮಾಂಸೆಯೆನಿಪ ಉಪನಿಷದರ್ಥ ಪ್ರತಿಪಾದಕಮಾದ ವೇದಾಂತ ಶಾಸ್ತ್ರವೇ ಪ್ರಪಂಚಕ್ಕೆ ಮಿಥ್ಯತ್ವಮಂ ಸಾಧಿಪುದರಿಂ ಬಹ್ಮಾತ್ಮೈಕ್ಯಮಂ ವರ್ಣಿಸುತ್ತಂ ಭಾಸ್ಕರೀಯ ಮಾಯಾವಾದ ಶಬ್ದಬ್ರಹ್ಮವಾದ ಕ್ರೀಡಾಬ್ರಹ್ಮವಾದವೆಂದು ನಾಲ್ಕು ತೆರನಾಗಿ ಪ್ರಚುರಗೊಂಡಿರ್ಕುಂ. ೩೦

೪ ಅತಿ ಮಾರ್ಗಿಕ: ಬಳಿಕ, ಮಾಯಾತತ್ವ ವಿದ್ಯಾತತ್ವವಾಸಿಗಳಾದ ತ್ರಿರುದ್ರರಿಂ ರಚಿತಂಗಳಾದ ಪಾಶುಪತ ಕಾಪಾಲಿಕ ಮಹಾವ್ರತಗಳೆಂಬವೇ ಅತಿಮಾರ್ಗಿಕ ಶಾಸ್ತ್ರತ್ರಯಂಗಳು. ಅವರಲ್ಲಿ,

ಪಾಶುಪತವೇ ಮಾಯಾ ಕರ್ಮವೆಂಬ ಪಾಶದ್ವಯಾದಿಗಳಿಂ ನಿರ್ವಹಿಸೂದು.

ಕಾಪಾಲಿಕವೇ ನರಕಪಾಲ ಭಿಕ್ಷಾಟನಾದಿಗಳಂ ನಿರ್ವಹಿಸೂದು.

ಮಹಾವ್ರತವೇ ಅಸ್ಥಿ ಧಾರಣಾದಿಗಳಿಂ ವರ್ತಿಸೂದು. ೩೧

೫ ಮಂತ್ರಶಾಸ್ತ್ರ : ಪರಶಿವ ಪ್ರಣೀತ ಮಾದ ಮಂತ್ರವೇ ಮೋಕ್ಷಾಂಗಮಾದ ಕ್ರಿಯೆ, ಚರ್ಯೆ, ಯೋಗ, ಜ್ಞಾನಾದಿಗಳಂ ಪ್ರಮಾಣಿಸುತ್ತಿರ್ಕುಂ. ೩೨

ಆತ್ಮ ಪ್ರತಿಪಾದನೆ :

ಮತ್ತಮಾ ಸಮಸ್ತ ಮತಾಂತರಂಗಳಲ್ಲಿ ಪೇಳುವ ಆತ್ಮ ಸ್ವರೂಪವೆಂತೆನೆ:

ದೇಹವೇ ಆತ್ಮವೆಂಬರು ಚಾರ್ವಾಕರು.

ಇಂದ್ರಿಯಗಳೇ ಆತ್ಮವೆಂಬರು ಚಾರ್ವಾಕೈಕದೇಶಿಗಳು.

ಪ್ರಾಣವೇ ಆತ್ಮನೆಂಬರು ಹಿರಣ್ಯಗರ್ಭ ಚಾರ್ವಾಕೈಕದೇಶಿಗಳು ದೇಹಾದಿವಿಲಕ್ಷಣನಾಸೋರ್ವಾತ್ಮನು ದೇಹ ಪರಿಮಿತನಾಗಿ ಮಧ್ಯಮ ಪರಿಮಾಣತ್ವದಿಂ ಸಂಕೋಚ ವಿಕಾಸ ಧರ್ಮಯುಕ್ತನೆಂಬರು ಜೈನರು.

ಬುದ್ಧಿಯೇ ಆತ್ಮನೆಂಬರು ಬೌದ್ಧರು.

ಆನಂದವೇ ಆತ್ಮನೆಂಬರು ಕೌಳಯಾಮಳ ಶಾಕ್ತೇಯರು.

ಆತ್ಮನು ನಾಡಿಮಧ್ಯಗತನಾಗಿ ಅಣುಪರಿಮಾಣನೆಂಬರು ಪಾಂಚರಾತ್ರರು.

ಆತ್ಮನು ದೇಹ ಪುತ್ರಾದಿ ರೂಪನೆಂಬರು ಲೌಕಿಕರು.

ಆತ್ಮನು ಸ್ವತಃ ಪ್ರಮಾಣಜ್ಞಾನ ಸಮೇತನೆಂಬರು ಮೀಮಾಂಸಕ ಭೇದಮಾದ ಭಾಟ್ಟ ಪ್ರಾಭಾಕರರುಗಳು.

ಆತ್ಮನು ಗಗನದಂತೆ ಮಹತ್ಪರಿಮಾಣನಾಗಿ ಪಾಷಾಣದಂತೆ ಜಡರೂಪನಾದೊಡಂ ಮನಸಂಯೋಗದಿಂ ಚಿದ್ಧರ್ಮಯುಕ್ತನೆಂಬರು ನೈಯ್ಯಾಯಿಕ ವೈಶೇಷಿಕರುಗಳು.

ಆತ್ಮನು ಅಸಂಗಚಿನ್ಮಾತ್ರನೆಂಬರು ಸಾಂಖ್ಯ ಪಾತಂಜಲರು.

ಆತ್ಮನು ಜ್ಞಪ್ತಿಮಾತ್ರನೆಂಬರು ವೇದಾಂತಿಗಳು

ಆತ್ಮನು ನಿತ್ಯ ವ್ಯಾಪಕ ಚೈತನ್ಯನೆಂಬರು ಪಾಶುಪತ ಕಾಪಾಲಿಕ ಮಹಾವ್ರತರುಗಳು. ೩೩

ಮೋಕ್ಷಪ್ರತಿಪಾದನೆ:

ಮತ್ತಮಾ ಸಕಲವಾದಿಗಳಿಂ ಪ್ರತಿಪಾದಿಸಲ್ಪಟ್ಟ ಮೋಕ್ಷ ಲಕ್ಷಣವೆಂತೆನೆ: ಮರಣವೇ ಮೋಕ್ಷವೆಂಬರು ಚಾರ್ವಾಕರು.

ಅಲೌಕಿಕಾಕಾಶ ಮಧ್ಯದೊಳುತ್ತರೋತ್ತರ ಗಮನವೇ ಮೋಕ್ಷವೆಂಬರು ಜೈನರು.

ಸುಖದುಃಖಾದಿಗಳ ಸೋಂಕಿಲ್ಲದ ಶುದ್ಧ ಬುದ್ಧಿ ಸಂತತಿಯೇ ಮೋಕ್ಷವೆಂಬರು ಬೌದ್ಧರು.

ಆಕಾಶಗಮನಾದಿ ಸಿದ್ಧಿ ಪ್ರಾಪ್ತಿಯೇ ಮೋಕ್ಷವೆಂಬರು ಕೌಳಯಾಮಳರುಗಳು.

ಆನಂದ ಪ್ರಾಪ್ತಿಯೇ ಮೋಕ್ಷವೆಂಬರು ಶಾಕ್ತೇಯರುಗಳು.

ವಾಸುದೇವಾತ್ಮಕ ಪ್ರಕೃತಿಯಲ್ಲಿ ಸ್ವರೂಪಹಾನಿಯಿಲ್ಲದೆ ಅಡಗಿಹುದೇ ಮೋಕ್ಷವೆಂಬರು ಪಾಂಚರಾತ್ರರು.

ಇಹಪರಂಗಳಲ್ಲಿ ಪುತ್ರ ಭಾರ್ಯಾದಿಗಳೊಡಗೂಡಿ ವ್ಯಾಧ್ಯಾದಿ ದುಃಖವಿಲ್ಲದೆ ಸುಖದಿಂದಿಹುದೇ ಮೋಕ್ಷವೆಂಬರು ಲೌಕಿಕರು.

ಸ್ವರ್ಗಾದಿ ಪದಪ್ರಾಪ್ತಿಯೇ ಮೋಕ್ಷವೆಂಬರು ಪೂರ್ವಮೀಮಾಂಸಕರು.

ಆತ್ಮ ಶರೀರ ಇಂದ್ರಿಯಾದಿಕಮೆಂಬ ಇಪ್ಪತ್ತೊಂದು ದುಃಖದತ್ಯಂತ ನಾಶದಿಂ ಪಾಷಾಣ ಪ್ರಾಯನಾಗಾತ್ಮನಿಹುದೇ ಮೋಕ್ಷಮೆಂಬರು ನ್ಯಾಯ ವೈಶೇಷಿಕರುಗಳು.

ಪ್ರಕೃತಿ ಪುರುಷ ವಿವೇಕದಿಂದವೆ ಅವಿದ್ಯಾನಾಶವೇ ಮೋಕ್ಷವೆಂಬರು ಸಾಂಖ್ಯರು.

ಯೋಗಾಭ್ಯಾಸ ಬಲದಿಂ ಮನೋಲಯ ದ್ವಾರದಿಂದವೆ ಅಜ್ಞಾನದಳಿವೇ ಮೋಕ್ಷವೆಂಬರು ಪಾತಂಜಲರು.

ಬ್ರಹ್ಮತ್ಮೈತತ್ವ ಜ್ಞಾನದಿಂ ವ್ಯಾವಹಾರಿಕ ಬಂಧನಿವೃತ್ತಿಯೇ ಮೋಕ್ಷಮೆಂಬರು ವೇದಾಂತಿಗಳು.

ಪ್ರವಾಹೇಶ್ವರಿತ್ವದಿಂದೀಶ್ವರಿತ್ವವನನ್ಯರ್ಗಿತ್ತು ಆತ್ಮನು ಜ್ಞಪ್ತಿ ಮಾತ್ರದಿಂದಿರ್ಪುದೇ ಮೋಕ್ಷವೆಂಬರು ಪಾಶುಪತರು.

ಕರ್ತೃತ್ವವೆ ಸಂಸಾರಮಪ್ಪುದರಿಂದ ಅದನುಳಿದು ಜ್ಞಪ್ತಿ ಮಾತ್ರದಿಂದಿಹುದೇ ಮೋಕ್ಷವೆಂಬರು ಕಾಪಾಲಿಕ ಮಹಾವ್ರತರು.

ಆತ್ಮಂಗೆ ಷಡಧ್ವಾತೀತ ಶಿವಸಮಾನತ್ವವೇ ಮೋಕ್ಷವೆಂಬರು ಸಿದ್ಧಾಂತಿಗಳೆಂದು ವಿವರಿಸಲ್ವೇಳ್ಕುಂ. ೩೪

ಮತಾಂತರ ಭೇದ :

ಬಳಿಕ ಆ ವಾದಿಗಳಲ್ಲಿ ಚಾರ್ವಾಕ ಜೈನ ಬೌದ್ಧ ಮೀಮಾಂಸಕ ಸಾಂಖ್ಯರೆಂಬರೆ ನಿರೀಶ್ವರ ವಾದಿಗಳು, ಮಿಕ್ಕವರೆಲ್ಲರೂ ಈಶ್ವರವಾದಿಗಳು. ಮತ್ತಮಾ ವಾದಿಗಳಲ್ಲಿ ಚಾರ್ವಾಕಾದಿಗಳೆಲ್ಲರು ಭೇದವಾದಿಗಳು. ವೇದಾಂತಿಯೋರ್ವನೇ ಅಭೇದವಾದಿಯಪ್ಪಂ. ೩೫

ಚತುರ್ದಶ ವಿದ್ಯೆಗಳು :

ಬಳಿಕ ಇಂತು ಪೇಳ್ದ ಸಕಲ ಶಾಸ್ತ್ರಂಗಳೊಳಗೆ ವೇದ ನಾಲ್ಕು, ವೇದಾಂಗವಾರು, ನ್ಯಾಯ ಮೀಮಾಂಸೆಯೆಂಬೆರಡು, ಸ್ಮೃತಿ ಪುರಾಣವೆಂಬೆರಡು. ಕೂಡಿ ಹದಿನಾಲ್ಕು ವಿದ್ಯೆಗಳೆನಿಸಿಕೊಳುತಿರ್ಕುಂ. ೩೬

ಸೂತ್ರ ವಿಚಾರ :

ಮತ್ತಮಾ ಚತುರ್ದಶ ವಿದ್ಯೆಗಳೊಳಗೆ ಮೀಮಾಂಸೆಯೆಂಬುದೇ ಮಿಗೆ ವಿಶಿಷ್ಟಮಾಗಿ ಇಪ್ಪತ್ತಧ್ಯಾಮವೆನಿಸಿ ಅರ್ಥ ಪ್ರತಿಪಾದಕದಿಂ ದ್ವಿಭಾಗಮಾಗಿಹುದು ಅದರೊಳಗೆ.

ಮೊದಲಭಾಗವೆ ಜೈಮಿನಿಸೂತ್ರರೂಪದಿಂ ದ್ವಾದಶಾಧ್ಯಾಯಮೆನಿಸಿ ಕರ್ಮಾರ್ಥ ಪ್ರತಿಪಾದಕಮಾಗಿ ಲೋಕವೇದಾದಿ ಕರಣವೆಂಬುದು ಮೊದಲಾದ ಸಹಸ್ರ ನ್ಯಾಯದಿಂ ಪೂರ್ವಮೀಮಾಂಸೆಯೆನಿಸಿಕೊಂಬುದು. ಆ ಜೈಮಿನಿ ಸೂತ್ರಕ್ಕೆ ಶಾಬರಮೆಂಬ ಭಾಷ್ಯಂ ಮಾಡಲ್ಪಟ್ಟಿತ್ತು. ಮತ್ತಮಾ ಮೀಮಾಂಸಾ ಶಾಸ್ತ್ರಕ್ಕೆ ಭಟ್ಟಾಚಾರ್ಯರಿಂ ವಾರ್ತಿಕರೂಪಮಾಗಿ ಭಾಟ್ಟಮೆಂಬುದೊಂದು ಮತ್ತೊಂದು ಮತಾಂತರಂ ರಚಿತವಾಯಿತ್ತು. ಬಳಿಕ ಆ ಭಟ್ಟಾಚಾರ್ಯರ ಶಿಷ್ಯರಾದ ಪ್ರಭಾಕರಗುರುಗಳಿಂದ ಆ ಶಾಬರ ಭಾಷ್ಯಕ್ಕೆ ಪ್ರಾಭಾಕರವೆಂಬುದೊಂದು ಮತಾಂತರಂ ಪೇಳಲ್ಪಟ್ಟಿತ್ತು. ೩೭

ಬಳಿಕ ಎರಡನೆಯ ಭಾಗವೆ ಬ್ರಹ್ಮಾರ್ಥಪ್ರತಿಪಾದಕತ್ವದಿಂದುತ್ತರ ಮೀಮಾಂಸೆ ಎನಿಸಿಕೊಂಡು ವ್ಯಾಸ ಸೂತ್ರರೂಪದಿಂದೆಂಟಧ್ಯಾಯಮಾಗಿಹುದದರೊಳಗೆ ಪೂರ್ವದ ನಾಲ್ಕಧ್ಯಾಯವೆ ದೇವತಾ ಕಾಂಡಮೆನಿಸಿಕೊಂಬುದದರಲ್ಲಿ ಮಂತ್ರವಾದದಂತೆ ದೇವತಾ ಲಕ್ಷಣವೆ ಬಲಭದ್ರರಾಮನಿಂ ಪ್ರತಿಪಾದಿಸಲ್ಪಟ್ಟಿತ್ತು. ಬಳಿಕುತ್ತರಮಾದ ನಾಲ್ಕಧ್ಯಾಯವೆ ಬ್ರಹ್ಮಕಾಂಡವೆನಿಸಿಕೊಂಬುದು. ಅದರೊಳಗೆ ಬ್ರಹ್ಮಾತ್ಮೈಕ್ಯತತ್ವ ಪ್ರತಿಪಾದಕಮಾಗಿ ಶಂಕರಾಚಾರ್ಯರಿಂ ಭಾಷ್ಯಂಗೆಯಲ್ಪಟ್ಟಿತ್ತು. ಬಳಿಕಾ ಭಾಷ್ಯಕ್ಕೆ ವಿವರಣಾಚಾರ್ಯರಿಂ ವಿವರಣಂ ಮಾಡಲ್ಪಟ್ಟಿತ್ತು. ಮತ್ತಮಾ ವಿವರಣವೇ ವೇದಾಂತ ಶಾಸ್ತ್ರವೆನಿಸಿಕೊಳುತ್ತಿರ್ಕುಂ. ೩೮

ವೇದಾಂತ ಶಾಸ್ತ್ರಕ್ರಮ :

ಅನಂತರದೊಳು ಆ ವೇದಾಂತ ಶಾಸ್ತ್ರದರ್ಥ ವಿಸ್ತಾರವೆಂತೆಂದೊಡೆಃ ಆಶೀರ್ವಾದ ನಮಸ್ಕಾರ ವಸ್ತು ನಿರ್ದೇಶವೆಂಬವೆ ಶಾಸ್ತ್ರರಂಭದಲ್ಲಿ ಮಾಳ್ಪ ಮಂಗಳಾಚರಣತ್ರಯಂಗಳು. ೩೯

ವ್ಯಾಖ್ಯಾನ ಪಂಚಲಕ್ಷಣಗಳು :

ಪದ ಪದಾರ್ಥ ವಾಕ್ಯಯೋಜನೆ ಪ್ರಶ್ನೆ ಪರಿಹಾರವೆಂಬವೆ ವ್ಯಾಖ್ಯಾನ ಪಂಚಲಕ್ಷಣಂಗಳು. ೪೦

ಅನ್ವಯ ಲಕ್ಷಣ :

ವಿಶೇಷಣ ವಿಶೇಷ್ಯ ಕರ್ತೃ ಕರ್ಮ ಕ್ರಿಯೆಗಳೆಂಬವೆ ಅನ್ವಯ ಪಂಚಲಕ್ಷಣಗಳು. ೪೧

ಅನುಬಂಧಚತುಷ್ಟಯ :

ವಿಷಯ ಸಂಬಂಧ ಪ್ರಯೋಜನ ಅಧಿಕಾರಿಗಳೆಂಬವೆ ಶಾಸ್ತ್ರಕನುಬಂಧ ಚತುಷ್ಟಯಂಗಳು ಅವರಲ್ಲಿ,

೧. ಶಾಸ್ತ್ರಕ್ಕೆ ಜೀವಬ್ರಹ್ಮರೇಕತ್ವವೇ ವಿಷಯವೆನಿಸೂದು.
೨. ಬ್ರಹ್ಮಶಾಸ್ತ್ರಂಗಳಿಗೆ ಪ್ರತಿಪಾದ್ಯ ಪ್ರತಿಪಾದಕಭಾವವೇ ಸಂಬಂಧವೆನಿಸೂದು.
೩. ಸಕಲ ದುಃಖನಿವೃತ್ತಿಯಿಂ ನಿತ್ಯಾನಂದಪದ ಪ್ರಾಪ್ತಿಯೇ ಪ್ರಯೋಜನವೆನಿಸೂದು.
೪. ಸಾಧನ ಚತುಷ್ಟಯ ಸಂಪನ್ನನೇ ಅಧಿಕಾರಿಯಪ್ಪಂ. ೪೨

ಸಾಧನ ಚತುಷ್ಟಯ :

ಬಳಿಕ ನಿತ್ಯಾನಿತ್ಯ ವಸ್ತುವಿವೇಕ, ಇಹಾಮುತ್ರ ಫಲ ಭೋಗವಿರಾಗ, ಶಮೆ, ಮುಮುಕ್ಷುತ್ವವೆಂಬವೆ ಸಾಧನ ಚತುಷ್ಟಯಂಗಳು ಅವರಲ್ಲಿ:

೧. ಚಿದ್ರೂಪನಾದಾತ್ಮನೇ ನಿತ್ಯನು, ಮಿಕ್ಕವಿಷಯವೆಲ್ಲಂ ಮಿಥ್ಯೆಯೆಂದು ತಿಳಿವುದೇ ನಿತ್ಯಾನಿತ್ಯ ವಸ್ತುವಿವೇಕವೆನಿಸೂದು.
೨. ಇಹಪರಂಗಳಲ್ಲಿಯ ವನಿತಾದಿ ವಿಷಯ ಭೋಗವವೆಲ್ಲಂ ಕರ್ಮಜನ್ಯಮಪ್ಪುದರಿಂದ ನಿತ್ಯವಾಗಿಯುಂ ಸಂಪಾದಿಸವಾದಿ ಭೋಗಿಸಿದಂತ್ಯಂಗಳಲ್ಲಿ ಕ್ರಮದಿಂ ಮಹಾಪ್ರಯಾಸ ವೈರಂಗಳಪ್ಪದರಿಂದವು ದುಃಖರೂಪವೆಂದು ಮನವೆಳಸದಿಹುದೇ ಇಹಾಮುತ್ರ ಫಲಭೋಗ ವಿರಾಗವೆನೆಸೂದು.
೩. ದಮೆ ಮೊದಲಾದಾರು ಸದ್ಗುಣ ಸಿದ್ಧಿಯೇ ಶಮೆ ಎನಿಸೂದು.
೪. ಸಹಜ ಸಾಯುಜ್ಯರೂಪ ಮೋಕ್ಷಾಪೇಕ್ಷೆಯೇ ಮುಮುಕ್ಷುತ್ವಮಕ್ಕುಂ. ೪೩

ಶಮಾದಿ ಷಟ್ಕ :

ಬಳಿಕ ಶಮೆ ದಮೆ ತಿತೀಕ್ಷೆ ಉಪರತಿ ಶ್ರದ್ಧೆ ಸಮಾಧಿಗಳೆಂಬವೆ ಶಮಾದಿ ಷಟ್ಕಂಗಳು. ಅವರಲ್ಲಿ,

ಅಂತಃಕರಣ ನಿಗ್ರಹವೇ ಶಮೆ
ಬಾಹ್ಯಕರಣ ನಿಗ್ರಹವೇ ದಮೆ
ಕ್ರೋಧಾದಿಗಳ ಸೈರಿಸೂದೇ ತಿತೀಕ್ಷೆ
ಸಕಲ ಧರ್ಮಪರಿತ್ಯಾಗವೇ ಉಪರತಿ
ಶ್ರುತಿ ಗುರುಗಳಲ್ಲಿಯ ವಿಶ್ವಾಸವೇ ಶ್ರದ್ಧೆ.
ಗುರೂಪದೇಶಮಂ ಚಿತ್ತದಲ್ಲಿ ದೃಢವಿಡಿವುದೇ ಸಮಾಧಿಯಕ್ಕುಂ. ೪೪

ಗುರುಸೇವಾ ಲಕ್ಷಣ :

ಬಳಿಕ ಸಾಧನ ಸಂಪನ್ನನಾದ ಅಧಿಕಾರಿಯಿಂ ಮಾಳ್ಪಸದ್ಗುರು ಸೇವೆಯಾದೊಡೆ ಆಪ್ತ ಅಂಗ ಸ್ಥಾನ ಸದ್ಭಾವವೆಂದು ನಾಲ್ಕು ತೆರನಾಗಿಹುದು. ಅವರಲ್ಲಿ,

ಗುರುವಿಗೆ ಅನುಕೂಲವೃತ್ತಿಯೇ ಆಪ್ತವೆನಿಸೂದು.
ಗುರುಪಾದ ಪ್ರಕ್ಷಾಲನಾಧಿಕವೇ ಅಂಗವೆನಿಸೂದು.
ಗುರುವಿನ ಗೃಹ ಕ್ಷೇತ್ರ ರಕ್ಷಣಾದಿಕವೇ ಸ್ಥಾನವೆವಿಸೂದು.
ಶ್ರೀ ಗುರುವೇ ಸಾಕ್ಷಾಚ್ಛಿವನೆಂಬ ವಿಶ್ವಾಸವೇ ಸದ್ಭಾವಮಕ್ಕುಂ. ೪೫

ಅಧಿಕಾರಿ ಪ್ರಭೇದ :

ಬಳಿಕ ಕರ್ಮಕಾಂಡಿ ಭಕ್ತಿಕಾಂಡಿ ಜ್ಞಾನಕಾಂಡಿಯೆಂದು ಬೇರೆಬೇರೆ ಮೂವರಧಿಕಾರಿಗಳುಂಟು. ಅವರಲ್ಲಿ,

ದೇಹ ಗೃಹ ಕೃತ್ಯಾದಿಗಳಲ್ಲಿ ಕ್ರಮದಿಂ ನಾನು ನನ್ನದೆಂಬ
ಅಹಂಕಾರ ಮಮಕಾರಂಗಳುಳ್ಳಾತನೇ ಕರ್ಮಕಾಂಡಿಯೆನಿಸುವನು.
ಸಕಲ ಕ್ರಯೆಗಳನು ಈಶ್ವರಾರ್ಪಣಂಗೆಯ್ವಾತನೇ ಭಕ್ತಿಕಾಂಡಿಯೆನಿಸುವನು.
ಸರ್ವಕರ್ಮಸಾಕ್ಷಿಕನು ತಾನೆಂಬಾತನೇ ಜ್ಞಾನಕಾಂಡಿಯಪ್ಪಂ. ೪೬

ಪಂಚಾಧಿಕಾರಿಗಳು :

ಬಳಿಕ ಕರ್ಮಿ ಮುಮುಕ್ಷು ಅಭ್ಯಾಸಿ ಅನುಭವಿ ಆರೂಢರೆಂದು ಉತ್ತರೋತ್ತರ ವಿಶಿಷ್ಟಮಾದಧಿಕಾರಿ ಪಂಚವಿಧಂಗಳು, ಅವರಲ್ಲಿ :

ಮೂಢತನದಿಂ ತನ್ನ ಜಾತಿಮಾತ್ರದ ಕರ್ಮವಿಡಿದು ಶತಜನ್ಮದಿಂ ಮುಕ್ತನಪ್ಪಾತನೇ ಕರ್ಮಿ.
ಜಗತ್ಸತ್ಯವೆಂದು ತಿಳಿದು ಬಾಹ್ಯ ಕರ್ಮನಿಷ್ಟನಾಗಿ ಮೂರುಜನ್ಮದಿಂ ಮುಕ್ತನಪ್ಪಾತನೇ ಮುಮುಕ್ಷು.
ಸ್ವಪ್ನದಂತೆ ಪ್ರಪಂಚವೆಲ್ಲಂ ಮಿಥ್ಯೆಯೆಂದು ಆಭ್ಯಂತರದಲ್ಲಿ ಕರ್ಮಯುಕ್ತನಾಗಿ ಜನ್ಮದ್ವಯದಿಂ ಮುಕ್ತನಪ್ಪಾತನೇ ಅಭ್ಯಾಸಿ.
ವ್ಯವಹಾರವನುಪೇಕ್ಷಿಸಿ ವಿವೇಕತತ್ಪರನಾಗಿ ಏಕಜನ್ಮದಿಂ ಮುಕ್ತನಪ್ಪಾತನೇ ಅನುಭವಿ.
ವಿಶ್ವವಿಕೃತಿದೋರದೆ ಆತ್ಮಜ್ಞಾನದಿಂ ಸದ್ಯೋನ್ಮುಕ್ತನಪ್ಪಾತನೇ ಆರೂಢನಪ್ಪಂ. ೪೭

ಪುನರಧಿಕಾರಿ ತ್ರಯ :

ಬಳಿಕ, ೧. ಈ ಜಗತ್ತೆಂಬ ಕಮಲವಲ್ಲರಿಯ ಮೂಲವಾವುದೋ ಎಂಬ ವಿಚಾರ ಮುಖದಿಂ ಶ್ರೀ ಗುರುವನೆಯ್ದಿ ಬ್ರಹ್ಮಜ್ಞಾನಿಯಾಗಿ ಮುಕ್ತಿ ಪಡೆವಾತನೋರ್ವನು.

೨. ದೇಹಾದಿಗಳ ಅನಿತ್ಯತೆಯಂ ಕಂಡು ಭೋಗಾಪೇಕ್ಷೆದೋರದೆ ಶ್ರೀ ಗುರವನೆಯ್ದಿ ತತ್ತ್ವಜ್ಞಾನಿಯಾಗಿ ಮೋಕ್ಷಂಬಡೆವಾತನೋರ್ವನು.

೩. ಒಬ್ಬಾನೊಬ್ಬ ಶ್ರೀ ಗುರುವು ತನ್ನ ಶಿಷ್ಯಂಗುಪದೇಶಂಗೆಯ್ವುದಂ ಕೇಳ್ದು ಆಕಸ್ಮಿಕದಿಂದಾತ್ಮಜ್ಞಾನಿಯಾಗಿ ನಿರ್ವಾಣಂಬಡೆವಾತನೋರ್ವಂ, ಇಂತು ವಿವೇಕ ವಿರಕ್ತಿ ದೈವಗತಿಯಿಂ ಮುಕ್ತರಪ್ಪವರೆ ಬೇರೆ ಮೂವರಧಿಕಾರಿಗಳಕ್ಕುಂ. ೪೮

ಅಷ್ಟಗುರು ಲಕ್ಷಣ :

ಮತ್ತಂ ಆ ಶ್ರೀಗುರುವೆ ಸಾಧಕರಾದ ಶಿಷ್ಯರಧಿಕಾರ ಭೇದದಿಂ, ಬೋಧಕಗುರು, ವೇದಕಗುರು, ನಿಷಿದ್ಧಗುರು, ಕಾಮ್ಯಗುರು, ಸೂಚಕಗುರು, ವಾಚಕಗುರು, ಕಾರಕಗುರು, ವಿಹಿತಗುರುವೆಂದೆಂಟು ತೆರನಾಗಿರ್ಪರು.

೧. ಶಾಸ್ತ್ರ ಶಬ್ದಾರ್ಥಂಗಳನರುಹುವಾತನೆ ಬೋಧಕಗುರು.
೨. ತತ್ತ್ವದರ್ಶಕನೇ ವೇದಕ ಗುರು.
೩. ವಶ್ಯಾಕರ್ಷಣಾದಿಗಳಿಂದಿಹಲೋಕದಲ್ಲಿ ಸುಖ, ಪರಲೋಕದಲ್ಲಿ ದುಃಖಂಗಳ ನೀವಾತನೇ ನಿಷಿದ್ಧಗುರು.
೪. ಪುಣ್ಯಕರ್ಮೋಪದೇಶದಿಂದ ಇಹಪರಂಗಳಲ್ಲಿಯು ಸುಖಪ್ರದನೇ ಕಾಮ್ಯ ಗುರು.
೫. ವಿವೇಕ ಮುಖದಿಂ ಶಮದಮಾದಿ ಸದ್ಗುಣಪ್ರದನೇ ಸೂಚಕಗುರು.
೬ ವಿಷಯಂಗಳ ಮಿಥ್ಯಾಪ್ರದರ್ಶನದಿಂದ ಆತ್ಮಾನುರಾಗ ಪ್ರದನೇ ವಾಚಕಗುರು.
೭ ಶಿವ ಜೀವರೈಕ್ಯ ಜ್ಞಾನಪ್ರದನೇಕಾರಕಗುರು.
೮. ಸಂಶಯ ನಿರಸನ ದ್ವಾರದಿಂ ನಿತ್ಯಮುಕ್ತಿ ಪ್ರದನೇ ವಿಹಿತಗುರುವಕ್ಕುಂ. ೪೯

ಶಿಷ್ಯೋಪಸನ್ನತಿ :

ಮತ್ತಮಾ ಸದ್ಗುರು ಸಚ್ಛಿಷ್ಯರುಗಳ ಮಧ್ಯದೊಳಾವನಾನೋರ್ವ ಅಧಿಕಾರಿಯು, ತಾಪತ್ರಯಾಗ್ನಿಯಿಂ ಬೆಂದು ವ್ಯಾಕುಲಿತ ಚಿತ್ತನಾಗಿ, ಆನಾರು, ಎನಗೆ ಈ ಸಂಸಾರವೇನು ಕಾರಣಂ ಬಂದಿತ್ತು, ಇದು ಆರ ಮುಖದಿಂ ನಿವೃತ್ತಿಸುಹುದೆಂದು ವಿಚಾರಿಸಿನೋಡಿ, ಪತ್ರ ಪುಷ್ಪಫಲಾದಿ ಸಹಪಾಣಿಯಾಗಿ, ವಿದ್ಯಾವಿನಯ ವೈರಾಗ್ಯಾದಿ ಸದ್ಗುಣ ಸಮೇತನಾದ ಶ್ರೀ ಗುರುವನೆಯ್ದಿ "ಚೈತನ್ಯಂ ಶಾಶ್ವತಂ ಶಾಂತಂ" ಎಂಬುದು ಮೊದಲಾದ ಅಷ್ಟಮಂತ್ರ ಪೂರ್ವಕಮಾಗಿ, ಪದದ್ವಯ ಕರದ್ವಯ ಭುಜದ್ವಯ ಲಲಾಟವಕ್ಷದ್ವಯಗಳೆಂಬ 'ಅಷ್ಟಾಂಗಂ' ನೆಲ ಸೋಂಕುವಂತೆ ಪ್ರಣತನಾಗಿ, ಬಳಿಕೆದ್ದು ಭಯಭಕ್ತಿಯಂ ಕರಕಮಲಮಂ ಮುಗಿದು, ಕಿಂಕರಭಾವಂ ಕೈಮಿಕ್ಕು ಕಾರ್ಪಣ್ಯಂದೋರಿ, ಕೂರ್ಮೆಯಿಂ ಕೊಂಡಾಡಿ, ಜ್ಞಾನ, ವೈರಾಗ್ಯ, ಬಲ, ಐಶ್ವರ್ಯ, ಕೀರ್ತಿ, ಶ್ರೀ ಗಳೆಂಬ ಷಡ್ಗುಣ ಸಮಗ್ರತೆಯಿಂ, ಭಗವಾನ್ ಆದ ಎಲೆ ಸದ್ಗುರುವೆ, ಆಯಾಸವಿಲ್ಲದೆ ಆವತೆರದಿಂದೆನಗೆ ಈ ಭವ ಬಂಧನಂ ಬಿಡುವುದೆಂದು ಬಿನ್ನಹಂಗೆಯ್ವುದೇ ಶಿಷ್ಯನ ವಿಧಿವದುಪಸನ್ನತ್ವಮಕ್ಕುಂ. ೫೦

ಉಪದೇಶ ಕ್ರಮ :

ಮತ್ತಮಾ ಉಪಸನ್ನನಾದ ಶಿಷ್ಯನಧಿಕಾರಮಂ ಪರೀಕ್ಷಿಸಿ ಕೃಪಾಲೋಚನದಿಂ ನೋಡಿ ಅಂಜದಿರೆಂದು ಅಭಯಕರಮಂ ಶಿರದೊಳಿಟ್ಟು, ಶ್ರುತಿಯುಕ್ತಿಗಳಿಂದಾತನ ದೇಹಾದ್ಯಾತ್ಮ ಬುದ್ಧಿಯಂ ನೇತಿಗಳೆದು, ನೀನೇ ಪರಬ್ರಹ್ಮವೆಂದು ಉಳ್ಳುದನರುಹುವುದೇ ಶ್ರೀ ಗುರುವಿನ ಉಪದೇಶಮಕ್ಕುಂ. ೫೧

ಬೋಧ ಪ್ರಕಾರತ್ರಯ :

ಮತ್ತಮಾ ಉಪದೇಶ ಕ್ರಮದಲ್ಲಿ, ಉದ್ದೇಶ, ಲಕ್ಷಣ, ಪರೀಕ್ಷೆಯೆಂಬವೇ ಬೋಧ ಪ್ರಕಾರತ್ರಯಂಗಳು.

ಅವರಲ್ಲಿ : ೧. ತಾನು ಸಮರ್ಥಿಸಲಿಷ್ಯಮಾದ ವಸ್ತುವಂ ನಾಮ ಮಾತ್ರದಿಂ ಕೀರ್ತಿಪುದೇ ಉದ್ದೇಶವೆನಿಸೂದು.

೨. ಗಂಗೆದೊಗಲುಳ್ಳುದೇ ಗೋವೆಂಬಂತೆ ಬಳಿಕ ಆ ವಸ್ತುವಿನ ಅಸಾಧಾರಣ ಧರ್ಮಮಂ ಪೇಳೂದೆ ಲಕ್ಷಣವೆನಿಸೂದು.

೩. ಲಕ್ಷಿತಮಾದ ವಸ್ತುವಿಗೆ ಆ ಲಕ್ಷಣಮುಂಟೋ ಇಲ್ಲವೋ ಎಂದು ವಿಚಾರಂಗೆಯ್ವುದೇ ಪರೀಕ್ಷೆಯಕ್ಕುಂ. ೫೨

ಪ್ರಮಾಣ ವಿಭಾಗ :

ಬಳಿಕ ಪ್ರತ್ಯಕ್ಷ ಪ್ರಮಾಣ, ಅನುಮಾನ ಪ್ರಮಾಣ, ಆಗಮ ಪ್ರಮಾಣ, ಅರ್ಥಾಪತ್ತಿ ಪ್ರಮಾಣ, ಉಪಮಾನ ಪ್ರಮಾಣ, ಅಭಾವ ಪ್ರಮಾಣ, ಸಂಭವ ಪ್ರಮಾಣ, ಐತೀಹ ಪ್ರಮಾಣವೆಂಬವೆ ವಸ್ತು ಸಿದ್ಧಿಗೆ ಅಷ್ಟ ಪ್ರಮಾಣಂಗಳು,

ಅವರಲ್ಲಿ : ೧. ಘಟಾದಿ ದರ್ಶನವೇ ಪ್ರತ್ಯಕ್ಷ ಪ್ರಮಾಣವೆನಿಸೂದು.

೨. ಧೂಮದಿಂದಗ್ನಿಜ್ಞಾನವೇ ಅನುಮಾನ ಪ್ರಮಾಣವೆನುಸೂದು.

ಈ ಅನುಮಾನ ಪ್ರಮಾಣಕ್ಕೆ ಪ್ರತಿಜ್ಞೆ ಹೇತು ದೃಷ್ಟಾಂತವೆಂಬಂಗತ್ರಯಂ ಗಳುಂಟು ಅವರಲ್ಲಿ :

ಪರ್ವತ ಅಗ್ನಿಯುಳ್ಳುದು ಎಂಬುದೇ ಪ್ರತಿಜ್ಞೆಯೆನಿಸೂದು.
ಧೂಮ ಉಳ್ಳುದಾದ ಕಾರಣ ಹೇತುವೆನಿಸೂದು.
ಮಹಾನಸದಂತೆ ಎಂಬುದೇ ದೃಷ್ಟಾಂತ ಮಕ್ಕುಂ.

೩. ಯಥಾದೃಷ್ಟಾರ್ಥವಾದಿಯಾದಿ ಆಪ್ತವಚನದಿಂ ನದೀತೀರಾದಿಕದಲ್ಲಿಯ ಫಲಾದಿ ಸದ್ಭಾವಜ್ಞಾನವೇ ಆಗಮ ಪ್ರಮಾಣವೆನಿಸೂದು.

೪. ಅರ್ಥಾಪತ್ತಿ ಪ್ರಮಾಣದಲ್ಲಿ, ದೃಷ್ಟಾರ್ಥಪತ್ತಿ, ಶ್ರುತಾರ್ಥ ಪತ್ತಿ ಎಂದು ಇತ್ತೆರನುಂಟು, ಅವರಲ್ಲಿ,

ಪಗಲುಣ್ಣದ ದೇವದತ್ತನ ದೇಹದ ಪೀನತ್ವಮಂ ಕಂಡು ರಾತ್ರಿ ಭೋಜನಮಂ ಕಲ್ಪಿಸೂದೆ

ದೃಷ್ಟಾರ್ಥಪತ್ತಿಯೆನಿಸೂದು. ಬದುಕಿರ್ದದೇವದತ್ತನಂ ಗೃಹದಲಿಲ್ಲಾ ಎಂದೊಡೆ ಸ್ಥಾನಾಂತರದಲ್ಲಿರ್ಪನೆಂದು ತಿಳಿವುದೇ ಶ್ರುತಾರ್ಥಪತ್ತಿ ಪ್ರಮಾಣವೆನಿಸೂದು.

೫. ಗೋವಿಗೆ ಸದೃಶವಾದ ಮರೆಯೆಂಬ ವಾಕ್ಯ ಶ್ರವಣಾನಂತರದಲ್ಲಿ ವನವನ್ನೈದಿದಾತಂಗೆ ತದ್ವಿಷಯು ಜ್ಞಾನವೇ ಉಪವಾನ ಪ್ರಮಾಣವೆನಿಸೂದು.

೬ ಈ ಭೂತಲದಲ್ಲಿ ಘಟವಿಲ್ಲವೆಂಬುದರಿಂದ ಆ ಘಟಭಾವ ಭಾವವೇ ಅಭಾವ ಪ್ರಮಾಣವೆನಿಸೂದು.

೭. ಸಾವಿರ ಸಂಖ್ಯೆಯಲ್ಲಿ ಶತ ಸಂಖ್ಯೆಯುಂಟೆಂಬ ಜ್ಞಾನವೇ ಸಂಭವ ಪ್ರಮಾಣವೆನಿಸೂದು.

೮. ಈ ವಟವೃಕ್ಷದಲ್ಲಿ ಯಕ್ಷನಿರ್ಪುದೆಂಬ ಲೋಕವಾರ್ತೆಯಿಂದ ಆ ಯಕ್ಷವಿಷಯ ಜ್ಞಾನವೇ ಐತೀಹ ಪ್ರಮಾಣಮಕ್ಕುಂ. ೫೩

ಬಳಿಕ ಈ ಪ್ರಮಾಣಂಗಳಲ್ಲಿ ಚಾರ್ವಾಕರಿಗೆ ಪ್ರತ್ಯಕ್ಷಪ್ರಮಾಣವೊಂದು. ಜೈನ ಬೌದ್ಧ, ವೈಶೇಷಿಕರ್ಗೆ ಪ್ರತ್ಯಕ್ಷ ಪ್ರಮಾಣ, ಅನುಮಾನ ಪ್ರಮಾಣವೆರಡು ಸಾಂಖ್ಯರ್ಗೆ, ಪ್ರತ್ಯಕ್ಷ, ಅನುಮಾಮ, ಆಗಮ ಪ್ರಮಾಣಂಗಳು ಮೂರು ನ್ಯಾಯೈಕದೇಶಗಳ್ಗೆ, ಪ್ರತ್ಯಕ್ಷ, ಅನುಮಾನ, ಆಗಮ, ಉಪಮಾನ ಕೂಡಿ ನಾಲ್ಕು ಪ್ರಾಭಾಕರರಿಗೆ ಪ್ರತ್ಯಕ್ಷ, ಅನುಮಾನ, ಆಗಮ, ಉಪಮಾನ, ಅರ್ಥಾಪತ್ತಿಯೊಡಗೂಡಿದ್ಯೆದು. ಭಾಟ್ಟರು ವೇದಾಂತಿಗಳ್ಗೆ ಪ್ರತ್ಯಕ್ಷ, ಅನುಮಾನ, ಆಗಮ, ಉಪಮಾನ, ಅರ್ಥಾಪತ್ತಿ, ಅಭಾವಂಗಳುಕೂಡಿ ಆರು,

ಪೌರಾಣಿಕರ್ಗೆ ಪ್ರತ್ಯಕ್ಷ, ಆನುಮಾನ, ಆಗಮ, ಉಪಮಾನ, ಅಥಾಪತ್ತಿ, ಅಭಾವ, ಸಂಭವ ಐತೀಹಂಗಳೊಡಗೂಡಿದ ಎಂಟು ಪ್ರಮಾಣಂಗಳೆಂದು ವಿವರಿಸಲ್ವೇಳ್ಕುಂ. ೫೪

ಪದಾರ್ಥ ದ್ವಯಂಗಳು :

ಅನಂತರದಲ್ಲಿ ದೃಕ್ಕು ದೃಶ್ಯವೆಂಬವೆ ಪದಾರ್ಥದ್ವಯಂಗಳು ದೃಕ್‌ದೃಶ್ಯ ವಿವೇಕ:

ಸ್ವಗತ ಭೇದ, ಸಜಾತೀಯ ಭೇದ, ವಿಜಾತೀಯ ಭೇದ ವೆಂಬವೆ ದೃಕ್ಕಿನಲ್ಲಿ ನಿರಾಕರಿಸಲ್ತಿಕ್ಕ ಭೇದತ್ರಯಂಗಳ್ ಇವಕ್ಕೆ ದೃಷ್ಟಾಂತಮೆಂತೆನೆ :

ಈ ಲೋಕದೊಳೊಂದಾನೊಂದು ವೃಕ್ಷಕ್ಕೆ ಪತ್ರ ಪುಷ್ಪ ಫಲಾದಿಕವೆ ಸ್ವಗತ ಭೇದವೆನಿಸೂದು.

ವೃಕ್ಷಾಂತರವೇ ಸಜಾತೀಯ ಭೇದವೆನಿಸೂದು.

ಪಾಷಾಣಾದಿಕವೇ ವಿಜಾತೀಯ ಭೇದಮಕ್ಕುಂ. ೫೫

ಬ್ರಹ್ಮಕ್ಕೆ ಭೇದ ನಿರಾಕರಣ:

ಬಳಿಕ ಸದ್ರೂಪಬ್ರಹ್ಮವು ಗಗನದಂತೆ ನಿರವಯಮಪ್ಪುದರಿಂದವು, ಸತ್ತೆಗೆ ಬೇರೊಂದು ಸತ್ತೆಯಿಲ್ಲಾಗಿಯುಂ ಬ್ರಹ್ಮದಲ್ಲಿ ಸ್ವಗತ ಭೇದ ಸಜಾತೀಯ ಭೇದವಿಲ್ಲದೊಡಂ ಜಗತ್ಕಾರಣವಾದ ಮಾಯೆಯುಂಟಾಗಿ ವಿಜಾತಿಯ ಭೇದವಿಲ್ಲೆಂಬುದು ಎಂತೆನೆ :

ಲೋಕದಲ್ಲಿ ಚಿತ್ರಕನಿಂ ಚಿತ್ರಶಕ್ತಿಗೆ ಬೇರೆ ತೋರ್ಕೆ ಇಲ್ಲವು,
ಎಂಡಂತೆ ಸನ್ಮಾತ್ರ ಬ್ರಹದಮದತ್ತಣಿಂ ಮಾಯೆಗೆ ವಿಲಕ್ಷಣತ್ವವೇ ಇಲ್ಲಾಗಿ ಬ್ರಹ್ಮಕ್ಕೆ ವಿಜಾತೀಯ ಭೇದವಿಲ್ಲವೆಂಬುದೇ ಸಿದ್ಧಮಕ್ಕುಂ. ೫೭

ಸಿದ್ಧಾಂತ ಶ್ರುತಿ :

ಬಳಿಕ ಈ ಅರ್ಥದಲ್ಲಿ "ಏಕಮೇವಾದ್ವಿತೀಯ ಬ್ರಹ್ಮ" ಎಂಬ ಶ್ರುತಿ ವಾಕ್ಯದಲ್ಲಿ ಏಕಂ, ಏವ, ಅದ್ವಿತೀಯ ಎಂಬ ಪದತ್ರಯಕ್ಕೆ, ಐಕ್ಯ, ಅವಧಾರಣೆ, ದ್ವೈತ ನಿಷೇಧಮೆಂಬ ಅರ್ಥತ್ರಯಮಪ್ಪುದರಿಂದಾ ಕ್ರಮದಿಂದವೆ, ಬ್ರಹ್ಮದಲ್ಲಿ ಸ್ವಗತ, ಸಜಾತೀಯ, ವಿಜಾತೀಯಮೆಂಬ ಭೇದತ್ರಯಂಗಳಿಲ್ಲವೆಂಬುದೇ ಪ್ರಾಮಾಣ್ಯಮಕ್ಕುಂ. ೫೮

ಅಧ್ಯಾರೋಪ ವಿವೇಕ :

ಬಳಿಕ ಅಧ್ಯಾರೋಪ ಅಪವಾದವೆಂಬವೇ ಕಲ್ಪಿತದ್ವಯಂಗಳು. ಅವರಲ್ಲಿ ಉಳ್ಳ, ರಜ್ಜು ಶುಕ್ತಿ ಸ್ಥಾಣ್ವಾದಿಗಳಲ್ಲಿ, ಕ್ರಮದಿಂದಲ್ಲದ ಅಹಿ, ರಜತ, ಚೋರಾದಿಗಳಂ ಕಲ್ಪಿಸುವಂತೆ, ಸದ್ರೂಪ ಬ್ರಹ್ಮದಲ್ಲಿಲ್ಲದ ಮಾಯಾ ಪ್ರಪಂಚಿನ ಕಲ್ಪನೆಯೇ ಅಧ್ಯಾರೋಪವೆನಿಸೂದು. ೫೯

ಅಪವಾದ ವಿವೇಕ :

ಬಳಿಕ ಇದು ಅಹಿಯಲ್ಲ ರಜ್ಜುವೆ, ಇದು ರಜತವಲ್ಲ ಶುಕ್ತಿಯೇ, ಇವನು ಚೋರನಲ್ಲ ಸ್ಥಾಣುವೇ ಎಂಬಂತೆ ವಿಚಾರಮುಖದಿಂ, ಪ್ರಪಂಚವೆಲ್ಲಂ ಮಥ್ಯೆ, ಬ್ರಹ್ಮವೇ ಸತ್ಯ ಎಂಬುದೇ ಅಪವಾದಮಕ್ಕುಂ. ೬೦

ಬ್ರಹ್ಮಲಕ್ಷಣ ವಿವೇಕ :

ಬಳಿಕ ಅತದ್ವ್ಯಾವೃತ್ತಿ ಲಕ್ಷಣ, ತಟಸ್ಥಲಕ್ಷಣ, ಸ್ವರೂಪ ಲಕ್ಷಣ ವೆಂಬವೆ ದೃಕ್ ರೂಪವಸ್ತು ಸಾಕ್ಷಾತ್ಕಾರಕ್ಕುಪಾಯತ್ರಯಂಗಳವರಲ್ಲಿ :

೧. ದೇಹಾದ್ಯನಾತ್ಮವರ್ಗಮಂ ಯುಕ್ತಿಯಂ ನೇತಿಗಳೆದು ಉಳಿದ ಆತ್ಮನನು ಅರುಹಿಪುದೇ ಅತದ್ವ್ಯಾವೃತ್ತಿ ಲಕ್ಷಣವೆನಿಸೂದು.

೨. ಶಾಖಾಗ್ರದಲ್ಲಿ ಚಂದ್ರನಿರ್ಪನೆಂಬಂತೆ, ಭೂತಾದಿ ಜಗತ್ಕಾರಣತ್ವದಿಂದ ಆತ್ಮನನರುಹಿಪುದೇ ತಟಸ್ಥಲಕ್ಷಣವೆನಿಸೂದು.

೩. ಪ್ರಕೃಷ್ಟ ಪ್ರಕಾಶಸ್ವರೂಪವೇ ಸೂರ್ಯನೆಂಬಂತೆ ಆತ್ಮನ ನಿಜವನರುಹಿಪುದೇ ಸ್ವರೂಪಲಕ್ಷಣಮಕ್ಕುಂ. ೬೧

ಆತ್ಮನ ಪಂಚಸ್ವರೂಪ ಲಕ್ಷಣ :

ಬಳಿಕ ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣವೆಂಬವೆ ಆತ್ಮನ ಪಂಚಸ್ವರೂಪ ಲಕ್ಷಣಂಗಳು,

ಅವರಲ್ಲಿ : ೧. ಅರಿಯೆನ್, ಅರವೆನ್, ಅರಿದೆನ್ ಎಂಬಲ್ಲಿಯುಂ, ಕಾಮಾದಿ ವೃತ್ತಿಗಳು ತೋರುವಲ್ಲಿ ತೋರದಿಹಲ್ಲಿಯುಂ, ಜಾಗ್ರದಾವಸ್ಥೆಗಳಲ್ಲಿಯುಂ, ತನಗೊಂದು ಬಾಧೆಯಿಲ್ಲದೆ ಉಂಟೆನಿಪುದೇ ಸದ್ರೂಪು.

೨. ಸರ್ವಾವಸ್ಥೆಗಳಲ್ಲಿಯೂ ವಿಷಯಂಗಳನು ಎಡವಿಡದೆ ಇದಿರಿಟ್ಟು ಅರಿವುದೇ ಚಿದ್ರೂಪು.

೩. ಪರಮ ಪ್ರೀತಿಗೆ ವಿಷಯವಹತನವೇ ಆನಂದರೂಪು.

೪. ಸತತೋದಿತ ಮಾಗಿರ್ಪುದೇ ನಿತ್ಯರೂಪು.

೫. ಸರ್ವಾರ್ಥಸಾಧಕಮಪ್ಪುದರಿಂ ಸರ್ವಸಂಬಂಧಿತ್ವವೇ ಪರಿಪೂರ್ಣ ರೂಪಮಕ್ಕುಂ. ೬೨

ಆನಂದ ವಿಚಾರ :

ಬಳಿಕ ಇಲ್ಲಿ ಸಚ್ಚಿದಾನಂದಂಗಳಾತ್ಮ ಸ್ವರೂಪಮಾಗೆ ಸದ್ರೂಪು ಚಿದ್ರೂಪುಗಳಂತೆ ಸರ್ವಬುದ್ಧಿ ವೃತ್ತಿಗಳಲ್ಲಿಯು ಆನಂದ ರೂಪಕ್ಕೆ ಅಭಿವ್ಯಕ್ತಿ ಉಂಟಾಗಬೇಕು. ಅದಿಲ್ಲಾಗಿ, ಆನಂದ ಆತ್ಮ ಸ್ವರೂಪವಲ್ಲ ಎಂದೊಡೆ ಅದಕ್ಕೆ ದೃಷ್ಟಾಂತವಿಚಾರ:– ಉಷ್ಣ ಪ್ರಕಾಶ ರೂಪಮಾದ ದೀಪದ ಪ್ರಕಾಶವೆ ಗೃಹದಲ್ಲಿ ವ್ಯಾಪಿಸುತ್ತುಹುದು. ಉಷ್ಣವು ವ್ಯಾಪಕಮಾಗದು. ಉದಕದಲ್ಲಿ ಉಷ್ಣವೆ ಪ್ರಕಟಿಸುತ್ತಿಹುದು, ಪ್ರಕಾಶವು ಪ್ರಕಟತೆಯಾಗದು. ಕಾಷ್ಠದಲ್ಲಿ ಉಷ್ಣಪ್ರಕಾಶವೆಂಬ ಎರಡಕ್ಕೆಯು ತೋರ್ಕೆಯುಹುದು. ಎಂತೋ ಅಂತೆ, ಪಾಷಾಣಾದಿಗಳಲ್ಲಿ ಬ್ರಹ್ಮದ ಸದ್ರೂಪಕ್ಕೆ ಅಭಿವ್ಯಕ್ತಿ ಯೈಸೆ. ಚಿದಾನಂದಂಗಳಿಗೆ ಅಭಿವ್ಯಕ್ತಿ ಘಟಿಸದು. ಬುದ್ಧಿಯ ತಮೋಗುಣದಿಂ ಅಜ್ಞಾನಮಯವಾದ ಮೂಢ ವೃತ್ತಿಯಲ್ಲಿಯು, ರಜೋಗುಣದಿಂ ರಾಗಮಯವಾದ ಘೋರವೃತ್ತಿಗಳಲ್ಲಿಯು, ಸಚ್ಚಿದ್ರೂಪಂಗಳೆರಡಕ್ಕೆ ಸ್ಪಷ್ಟತೆಯಿಲ್ಲದೆ ಆನಂದರೂಪಕ್ಕೆ ಸ್ಪಷ್ಟತೆ ದೊರೆಕೊಳ್ಳದು. ಸತ್ವಗುಣದಿಂ ವೈರಾಗ್ಯಮಯವಾದ ಶಾಂತವೃತ್ತಿಯಲ್ಲಿ ಸಚ್ಚದಾನಂದವೆಂಬ ತ್ರಿ ರೂಪಕ್ಕೆಯು ಸ್ಫುರಣ ಮಪ್ಪುದರಿಂದ ಆನಂದವು ಆತ್ಮರೂಪಮಕ್ಕುಂ. ೬೩

ಸತ್ತಾ ಸ್ವರೂಪ ವಿವೇಕ :

ಬಳಿಕ ಕ್ರಮದಿಂದೆ ಪಂಚರೂಪುಗಳಿಗುಪಾಧಿಯ ಭೇದವೆಂತನೆ: ವ್ಯಾವಹಾರಿಕಸತ್ತೆ, ಪ್ರಾತಿಭಾಸಿಕ ಸತ್ತೆ, ಪಾರಮಾರ್ಥಿಸತ್ತೆಯೆಂದು ಸತ್ತಾತ್ರಯಂಗಳು:

ಅವರಲ್ಲಿ : ೧. ಜಾಗ್ರದಲ್ಲಿಯ ಘಟಾದಿಗಳ ಸತ್ತೆಯೆ ವಿದೇಹ ಕೈವಲ್ಯ ಪರಿಯಂತರಂ ಸುಪ್ತಿ ಮೂರ್ಛೆ ಮೊದಲಾದವಸ್ಥೆಯಲ್ಲಿ ತೋರದಿರ್ದು, ಬಳಿಕ ಎದ್ದು ನೋಡಿದರೆ ಮೊದಲಂತೆ ತೋರುತ್ತಿಹುದಾಗಿ ವ್ಯವಹಾರಸತ್ತೆ ಎನಿಸೂದು.

೨. ಶುಕ್ತಿಕಾರಜತ, ಕನಸಿನ ವಿಷಯಾದಿಳ ಸತ್ತೆಯೇ. ಆ ತೋರುವ ಕಾಲದಲ್ಲಿಯಲ್ಲದೆ ಎಚ್ಚತ್ತು ಮರಳಿ ಕಾಂಬ ಸ್ವಪ್ನದಲ್ಲಿಲ್ಲವಾಗಿ ಪ್ರಾತಿ ಭಾಸಿಕ ಸತ್ತೆ ಎನಿಸೂದು.

೩. ಸಮಸ್ತ ಕಲ್ಪನೆಗೆ ಅಧಿಷ್ಠಾನಮಾಗಿ ತೋರದ ಅಡಗದ ಬ್ರಹ್ಮದ ಸತ್ತೆಯೇ ಪಾರಮಾರ್ಥಿಕ ಸತ್ತೆಯೆನಿಸೂದು. ೬೪

ಚಿದ್ರೂಪೋಪಾದಿ :

ಮತ್ತಂ ಜೀವ ಈಶ್ವರ ಕೂಟಸ್ಥ ಬ್ರಹ್ಮವೆಂಬುವೆ ಚಿತ್ತಿನ ಚತುರ್ವಿದ ಭೇದಂಗಳವಕ್ಕೆ:

೧. ಘಟ ಜಲದಲ್ಲಿ ಪ್ರತಿಬಿಂಬಿಸಿರ್ದ ಸಾಬ್ರನಕ್ಷತ್ರಾಕಾಶ –ಜೀವ

೨. ಮೇಘಾಂಶ ತುಷಾರ ಜಲದಲ್ಲಿ ಪ್ರತಿಬಿಂಬಿಸಿರ್ದ ಅನುಮಿತಾಕಾಶ – ಈಶ್ವರ

೩. ಘಟಾವ ಛಿನ್ನಾಕಾಶವೇ – ಕೂಟಸ್ಥ

೪. ಮಹದಾಕಾಶವೇ – ಬ್ರಹ್ಮ

ಕ್ರಮದಿಂ ದೃಷ್ಟಾಂತ ಚತುಷ್ಟಯಂಗಳಕ್ಕುಂ. ೬೫

ಆನಂದದೋಪಾದಿ ಭೇದ :

ಮತ್ತಂ ವಿಷಯಾನಂದ, ಬ್ರಹ್ಮಾನಂದ, ವಾಸನಾನಂದ, ಮುಖ್ಯಾನಂದ, ನಿಜಾನಂದ, ಆತ್ಮಾನಂದ, ಅದ್ವೈತಾನಂದ, ವಿದ್ಯಾನಂದಗಳೆಂಬ, ಆನಂದದಷ್ಟ ಭೇದಂಗಳವರಲ್ಲಿ :

ಅವರಲ್ಲಿ : ೧. ವನಿತಾದಿ ವಿಷಯು ಲಾಭವಾದಲ್ಲಿ ತೋರ್ಪುದೇ ವಿಷಯಾನಂದವೆನಿಸೂದು.

೨. ನಿದ್ರಾ ಸಮಯದಲ್ಲಿ ತೋರ್ಪುದೇ ಬ್ರಹ್ಮಾನಂದವೆನಿಸೂದು.

೩. ನಿದ್ರೆ ತಿಳಿದಾಕ್ಷಣದಲ್ಲಿಯೆ ತೋರ್ಪುದೇ ವಾಸನಾನಂದವೆನಿಸೂದು.

೪. ಹಾನೋಪನವಿಲ್ಲದೆ ಉಪೇಕ್ಷಾಬುದ್ಧಿಯುಲ್ಲಿ ತೋರ್ಪುದೇ ಮುಖ್ಯಾನಂದವೆನಿಸೂದು.

೫. ಯೋಗಾಭ್ಯಾಸಬಲದಿಂ ಮನೋಲಯಮಾದಲ್ಲಿ ತೋರ್ಪುದೇ ನಿಜಾನಂದವೆನಿಸೂದು.

೬ ಪ್ರಿಯುವಾದ ವನಿತಾದಿ ವಿಷಯಂಗಳ ಮಧ್ಯದಲ್ಲಿ ತಾನೇ ಪ್ರಿಯತಮನೆಂದರಿದಲ್ಲಿ ತೋರ್ಪುದೇ ಆತ್ಮಾನಂದವೆನಿಸೂದು.

೭ ನಾಮ ರೂಪ ಪ್ರಪಂಚವೆಲ್ಲಂ ಮಿಥ್ಯೆ, ತಾನೇ ಸತ್ಯನೆಂಬ ವಿವೇಕದಲ್ಲಿ ತೋರ್ಪುದೇ ಅದ್ವೈತಾನಂದವೆನಿಸೂದು.

೮. ತತ್ತ್ವಮಸ್ಯಾದಿ ಮಹಾವಾಕ್ಯ ಜನಿತಮಾದ ಅಪರೋಕ್ಷಜ್ಞಾನದಲ್ಲಿ ತೋರ್ಪುದೇ ವಿದ್ಯಾನಂದಮಕ್ಕುಂ. ೬೬

ಅಭಾವ ವಿವೇಕ :

ಮತ್ತಂ ಪ್ರಾಗಭಾವ, ಪ್ರಧ್ವಂಸಾಭಾವ, ಅನ್ಯೋನ್ಯಾಭಾವ, ಅತ್ಯಂತಾಭಾವವೆಂಬವೆ 'ಬ್ರಹ್ಮ' 'ನಿತ್ಯ' ಪದದೊಳಗೊಪ್ಪುವ ಅಭಾವ ಚತುಷ್ಟಯಂಗಳು,

ಅವರಲ್ಲಿ : ೧. ಮೃತ್ತಿಕೆ ಮೊದಲಾದವರಲ್ಲಿ ಘಟಾದಿಕದ ಮೊದಲಿಲ್ಲದೆಯೇ ಪ್ರಾಗಭಾವವೆನಿಸೂದು.

೨. ಪುಟ್ಟಿದ ಘಟದಲ್ಲಿ ಬಳಿಕಿಲ್ಲವೆಯೇ ಪ್ರಧ್ವಂಸಾಭಾವವೆನಿಸೂದು.

೩. ಘಟದಲ್ಲಿ ಪಟವಿಲ್ಲ, ಪಟದಲ್ಲಿ ಘಟವಿಲ್ಲವೆಂಬುದು ಮೊದಲಾದುದೇ ಅನ್ಯೋನ್ಯಾಭಾವವೆನಿಸೂದು.

೪. ಗಗನಕುಸುಮಾದಿಕವೇ ಅತ್ಯಂತಾಭಾವಮಕ್ಕುಂ. ೬೭

ಪರಿಚ್ಛೇದತ್ರಯ :

ಮತ್ತಂ ಕಾಲಪರಿಚ್ಛೇದ ದೇಶಪರಿಚ್ಛೇದ ವಸ್ತುಪರಿಚ್ಛೇದವೆಂಬವೇ ಬ್ರಹ್ಮದ ಪೂರ್ಣಪದದೊಳ್ನಿವಾರಿಸಲ್ತಕ್ಕ ಪರಿಚ್ಛೇದತ್ರಯಂಗಳು,

ಅವರಲ್ಲಿ : ೧. ಒಂದು ಕಾಲದಲ್ಲುಂಟು, ಒಂದು ಕಾಲದಲ್ಲಿಲ್ಲೆನಿಸಿಕೊಂಬುದೇ ಕಾಲ ಪರಿಚ್ಛೇದವೆನಿಸೂದು.

೨. ಒಂದು ದೇಶದಲ್ಲುಂಟು, ಒಂದು ದೇಶದಲ್ಲಿಲ್ಲೆನಿಸಿಕೊಂಬುದೇ ದೇಶಪರಿಚ್ಛೇದವೆನಿಸೂದು.

೩. ಒಂದು ವಸ್ತುವಿದಹುದು, ಒಂದು ವಸ್ತುವಿದಲ್ಲವೆನಿಸಿಕೊಂಬುದೇ ವಸ್ತು ಪರಿಚ್ಛೇದವೆನಿಸೂದು. ೬೮

ಜೀವಾದಿ ನಾಮಭೇದ :

ಬಳಿಕ ಪೂರ್ವೋಕ್ತ ಚಿದ್ರೂಪಭೇದಂಗಳಾದ ಜೀವೇಶ್ವರಾದಿ ಚತುಷ್ಟಯಕ್ಕೆ ಕ್ರಮದಿಂ ನಾಮಾದಿ ವ್ಯವಹಾರ ಕಲ್ಪನೆಗಳಂತೆನೆ: ಮೊದಲ ಜೀವವೇ ವಿಶ್ವ ತೈಜಸ ಪ್ರಾಜ್ಞನೆಂದು ತ್ರಿವಿಧಮಾಗಿಪ್ಪನವರಲ್ಲಿ :

೧. ಸ್ಥೂಲ ಶರೀರ ವ್ಯಷ್ಟ್ಯಭಿಮಾನಿ, ವ್ಯವಹಾರಿಕ ಜೀವನು, ಬುದ್ಧಿ ಪ್ರತಿಫಲಿತ ಚೈತನ್ಯನು, ಚಿದಾಭಾಸನು, ವಿಕ್ಷೇಪರೂಪನು, ಕ್ಷೇತ್ರಿ, ಶರೀರಿ, ಪ್ರಮಾತೃ, ಕರ್ತೃ, ಭೋಕ್ತೃ, ಸಂಸಾರಿ, ವಿಷಯ, ಪರಾಗಾತ್ಮನು, ವಿಜ್ಞಾನಮಯನು, ತ್ವಂ ಪದ ಮುಖ್ಯಾರ್ಥನು ಎಂಬಿವು ಮೊದಲಾದವೆ ವಿಶ್ವನ ಪರಿಯಾಯನಾಮಂಗಳು.

೨. ಸೂಕ್ಷ್ಮ ಶರೀರ, ವ್ಯಷ್ಟ್ಯಭಿಮಾನಿ, ಪ್ರಾತಿಭಾಸಿಕ ಜೀವನು, ಸ್ವಪ್ನ ಕಲ್ಪಿತನೆಂಬಿವು ತೈಜಸನ ಪರಿಯಾಯನಾಮಂಗಳು.

೩. ಕಾರಣ ಶರೀರ ವ್ಯಷ್ಟ್ಯಭಿಮಾನಿ ಅವಿದ್ಯೋಪಹಿತನು, ಕಾರ್ಯೋಪಾದಿಕನು ಎಂಬಿವು ಮೊದಲಾದವೆ ಪ್ರಾಜ್ಞನ ಪರಿಯಾಯ ನಾಮಂಗಳಕ್ಕುಂ. ೬೯

ಆತ್ಮತ್ರಯ ವಿಚಾರ :

ಬಳಿಕ ಜೀವಾತ್ಮ ಅಂತರಾತ್ಮ ಪರಮಾತ್ಮರೆಂದಾತ್ಮತ್ರಯಂಗಳು,

ಅವರಲ್ಲಿ : ೧. ತಪ್ತಾಯಃ ಪಿಂಡದಂತೆ ದೇಹಾದಿಗಳೊಡತನ ಸಂಬಂಧದಿಂ ಸಕಲ ಸಂಸಾರ ವ್ಯವಹಾರಮುಳ್ಳಾತನೇ ಜೀವಾತ್ಮನಕ್ಕುಂ.

೨. ಕಮಲ ಪತ್ರೋದಕದಂತೆ ಜೀವನು ಸಂಸಾರಮಂ ಪೊರ್ದಿಯು ಪೊರ್ದದಾತನೆ ಅಂತರಾತ್ಮನು.

೩. ಲೋಕವ್ಯವಹಾರಕ್ಕೆ ಸೂರ್ಯನೆಂತಂತೆ ಜೀವಾತ್ಮ ಅಂತರಾತ್ಮರ ವ್ಯವಹಾರ ಸಾಕ್ಷಿಕನೆ ಪರಮಾತ್ಮನಕ್ಕುಂ. ೭೦

ವಿಕಾರ ಸ್ಥಿತಿ :

ಬಳಿಕ ಜಲದಲ್ಲಿ ನೇಸರು ಚಲಿಸಿತ್ತೆಂಬಂತೆ, ಮುಗಿಲು ಓಡಲು ಚಂದ್ರನು ಓಡಿದನೆಂಬಂತೆ, ನದಿಯ ಹರಿಗೆಲು ಗಮಿಸಿದೊಡೆ ತೀರದತರು ಗಮಿಸಿತ್ತೆಂಬಂತೆ, ಮನೆಯು ಕಂಡಿಯೊಳ್ಪೊದಿದ ಸೂರ್ಯಾತಪದಲ್ಲಿ ಹಸ್ತದೆಡೆಯಾಟದಿಂದ ಎಡೆಯಾಡಿತ್ತೆಂಬಂತೆ, ದೇಹದ ಜನನ ಮರಣವು ಆತ್ಮಗೆಂಬಂತೆ, ನಿರ್ವಿಕಾರನಾದಾತ್ಮಂಗೆ ದೇಹಾದ್ಯುಪಾದಿಯಿಂದಾದ ಜೀವಾವಸ್ಥೆಯಂ ಸಂಸಾರ ವ್ಯವಹಾರಮೆಂದರಿಯಲ್ವೇಳ್ಕುಂ. ೭೧

ಈಶ್ವರನಾಮ ಭೇದ :

ಮತ್ತಮಾ ಈಶ್ವರನೇ ವಿರಾಟ್ಪುರುಷನು, ಹಿರಣ್ಯಗರ್ಭನು, ಅಂತರ್ಯಾ ಮಯನೆಂದು ತ್ರಿವಿಧಮಾಗಿರ್ಪನವರಲ್ಲಿ:

೧. ಸ್ಥೂಲ ಶರೀರ, ಸಮಷ್ಟ್ಯಭಿಮಾನಿ, ವೈಶ್ವಾನರವೆಂಬಿವು ಮೊದಲಾದವೆ ವಿರಾಟ್ಪುರುಷನ ಪರಿಯಾಯನಾಮಂಗಳು.

೨. ಲಿಂಗಶರೀರ, ಸಮಷ್ಟ್ಯಭಿಮಾನಿ, ಮಹಾಪ್ರಾಣನು, ಸೂತ್ರಾತ್ಮಕನೆಂಬಿವು ಮೊದಲಾದವೆ ಹಿರಣ್ಯಗರ್ಭನ ಪರಿಯಾಯ ನಾಮಂಗಳು.

೩. ಕಾರಣ ಶರೀರ, ಸಮಷ್ಟ್ಯಭಿಮಾನಿ, ಅಜ್ಞಾನೋಪಹಿತಚೈತನ್ಯನು, ಕಾರಣೋಪಾಧಿಕನು, ಮಾಯೋಪಾಧಿಕನು, ಮಾಯಾಭಾಸನು, ಮಾಯಾವರ, ಜಗದ್ಯೋನಿ, ಆನಂದಮಯನು, ಅಕ್ಷರನು, ಅವ್ಯಕ್ತನು, ಅವ್ಯಾಕೃತನು, ಶಬಲಬ್ರಹ್ಮನು, ಸಗುಣಬ್ರಹ್ಮನು ಪರದೇವತೆ, ತತ್ವದ ಮುಖ್ಯಾರ್ಥನೆಂಬಿವು ಮೊದಲಾದವೆ ಅಂತರ್ಯಾಮಿಯ ಪರಿಯಾಯವಾಮಂಗಳಕ್ಕುಂ. ೭೨

ಈಶ್ವರನ ತ್ರಿವಿಧತತ್ವದ ದೃಷ್ಟಾಂತ :

ಮತ್ತಮಾ ಈಶ್ವರನ ತ್ರಿವಿಧತ್ವದಲ್ಲಿ ದೃಷ್ಟಾಂತಮೆಂತೆನೆ:

ಹೇಂಗೆ ಒಂದಾನೊಂದು ಚಿತ್ರಪಟವು ದ್ರವ್ಯಾಂತರ ಸಂಬಂಧವಿಲ್ಲದಿಹುದರಿಂ

ತಾನೇ ಧೌತವೆನಿಸಿಕೊಂಬುದು. ಮೇಲೆ ಗಂಜಿಗೂಳಿನನುಲೇಪನದಿಂ ಘಟ್ಟಿತವೆನಿಸಿಕೊಂಬುದು. ಬಳಿಕ ನೀಲಿಮಯವಾದಾಕಾರದಿಂ ಲಾಂಛಿತವೆನಿಸಿಕೊಂಬುದು. ಮೇಲೆ ಯಥಾ ಯೋಗ್ಯಮಾದ ವರ್ಣಪೂರಣದಿಂ ರಂಜಿತವೆನಿಸಿಕೊಂಬುದು.

ಹಾಂಗೆ ಪರಬ್ರಹ್ಮವು ಮೊದಲು ಮಾಯಾ ತತ್ಕಾರ್ಯರಹಿತಮಾದ ತಾನೇ ಚಿತ್ತೆನಿಸಿಕೊಂಬುದು. ಬಳಿಕ ಸರ್ವಕಾರಣಮಾದ ಮಾಯೋಪಾದಿ ಯಿಂದ ಅಂತರ್ಯಾಮಿ ಎನಿಸಿಕೊಂಬುದು. ಮೇಲವ್ಯಕ್ತಮಾದ ಪಂಚೀಕೃತ ಭೂತಕಾರ್ಯಮಾದ ಸೂಕ್ಷ್ಮ ಶರೀರ ಸಮಷ್ಟ್ಯುಪಾಧಿಯಂ ಸೂತ್ರಾತ್ಮನೆನಿಸಿ ಕೊಂಬುದು. ಮೇಲೆ ವ್ಯಕ್ತಮಾಗಿ ಪಂಚೀಕರಿಸಿದ ಭೂತಕಾರ್ಯ ಸ್ವರೂಪ ಸ್ಥೂಲ ಶರೀರ ಸಮಷ್ಟ್ಯುಪಾಧಿಯಂ ವಿರಾಟ್ಟೆನಿಸಿಕೊಳುತಿರ್ಕ್ಕುಂ. ೭೩

ಧೃಷ್ಟಾಂತ ಸಮನ್ವಯ :

ಬಳಿಕ ಇಲ್ಲಿ ಬ್ರಹ್ಮಕ್ಕೆ ಚಿತ್ರಪಟ ಧೃಷ್ಟಾಂತಮಾಗಲು, ಆ ಚಿತ್ರಗಳಾವಾ ವೆಂದೊಡೆ, ವಿರಿಂಚ್ಯಾದಿ ತೃಣಾಂತಮಾದ ಚೇತನ ಪ್ರಾಣಿಗಳುಂ ಗಿರಿನದ್ಯಾದ್ಯ ಚೇತನ ವಿಷಯಂಗಳುಂ, ಎಂಬ ಜಡಾಜಡರೂಪವೆ ಚಿತ್ರಧೃಷ್ಟಾಂತಮಕ್ಕುಂ ೭೪

ಗುಣಾದಿ ಕಲ್ಪನೆ :

ಮತ್ತಮಾ ಪಾರಮಾರ್ಥಿಕಮಾದ ಚಿದ್ರೂಪ ಬ್ರಹ್ಮವೊಂದರಲ್ಲಿ ಮಿಥ್ಯಾತ್ಮಕ ಬಹುಜೀತನಾಚೇತನ ರೂಪ ಜಗತ್ತಿನ ತೋರ್ಕೆಯೆಂತೆಂದೊಡೆ : ಹೇಂಗೆ ಚಿತ್ರದಲ್ಲಿ ಬರೆಯಲ್ಪಟ್ಟ ಮನುಷ್ಯರು ಉಟ್ಟು ಹೊದೆದ ನಾನಾ ವರ್ಣೋಪೇತಮಾದ ಶೀತಾದಿನಿವೃತ್ತಿಯಂ ಮಾಡಲು ಅಸಮರ್ಥಮಪ್ಪ ವಸ್ತ್ರಾಭಾಸಂಗಳಾದೊಡೆ, ಏಕಾರಮಾದ ಶೀತಾದಿ ಪರಿಹಾರಕಮಪ್ಪ ತಥ್ಯಮಾದ ಪಟದೊಡನೆ ಆಧಾರ ಸದೃಶಂಗಳಗಿರ್ಪವಾ ಚಿತ್ರದಲ್ಲಿ ಗಿರಿನದ್ಯಾದಿಗಳಿಗೆ ಆ ಚಿತ್ರಾಧಾರ ಪಟದೊಡನೆ ಹೋಲಿಕೆ ಘಟಿಸಲರಿಯದು.

ಹಾಂಗೆ ಚಿದ್ರೂಪ ಬ್ರಹ್ಮದಲ್ಲಿ ಬೇರೆ ಬೇರೆ ತೋರುತ್ತಿರ್ದ ವ್ಯವಹಾರಿಕ ಜೀವರುಗಳೇ ಚಿತ್ತಿನಲ್ಲಿ ಹೋಲಿಕೆಯಾಗಿ ಚಿದಾಭಾಸ ಚೇತನರುಗಳು ಚಿತ್ತಿನೊಡನೆ ಹೋಲಿಕೆಯಾಗದ ಮೃತ್ತಿಕ್ಕೆ ಮೊದಲಾದವೆ ಜಡರೂಪಂಗಳಪ್ಪುದರಿಂ, ಚೇತನಾ ಚೇತನಾತ್ಮಕ ಜಗತ್ತು ಚಿದ್ರೂಪ ಬ್ರಹ್ಮದಲ್ಲಿಯೇ ಕಲ್ಪಿತಮೆಂದು ನಿಶ್ಚೈಸಲ್ವೇಳ್ಕುಂ ೭೫

ಈಶ್ವರನ ಗುಣಾದಿಗಳು :

ಬಳಿಕ ಸರ್ವಜ್ಞತ್ವ ಸರ್ವೇಶ್ವರತ್ವ ಸರ್ವನಿಯಂತ್ರತ್ವ ಸರ್ವಾಂತರ್ಯಾಮಿತ್ವ ಸರ್ವಾತ್ಮಕತ್ವ ಸರ್ವಶಕ್ತಿತ್ವಾದಿಗಳೇ ಈಶ್ವರನ ಮುಖ್ಯಗುಣಂಗಳು.

ಕರ್ತೃತ್ವ ಅಕರ್ತೃತ್ವ ಅನ್ಯಥಾಕರ್ತೃತ್ವವೆಂಬವೆ ಈಶ್ವರನ ಪ್ರಭುತ್ವ ಸಾಮರ್ಥ್ಯತ್ರಯಂಗಳು.

ಬಳಿಕ ಸೃಷ್ಟಿ, ಸ್ಥಿತಿ ಸಂಹಾರ ನಿಯಾಮನ ಅನುಪ್ರವೇಶ ಎಂಬ ಈಶ್ವರನ ಪಂಚ ಕೃತ್ಯಂಗಳಕ್ಕುಂ. ೭೬

ಈಶ್ವರ ಕೃತ್ಯಕ್ಕೆ ದೃಷ್ಟಾಂತ :

ಬಳಿಕ ನಿರ್ವಿಕಾರದಿಂದ ಅದ್ವಿತೀಯ ಬ್ರಹ್ಮಸ್ವರೂಪನಾದ ಈಶ್ವರನಲ್ಲಿ ಸೃಷ್ಟ್ಯಾದಿ ಬಹು ಕೃತ್ಯವು ಎಂತು ಘಟಿಪುದು, ಎಂದೊಡೆ, :

ಹೇಂಗೆ ಸೂರ್ಯನು ಇಚ್ಛಾಯತ್ನಾದಿಕಮಿಲ್ಲದೆ ತನ್ನ ವರ್ಷಕಿರಣ ದಿಂದ ವೃಷ್ಟಿರೂಪಜಲಮಂ ಕರೆದು, ಬಳಿಕ ಆ ಜಲದಲ್ಲಿ ಪ್ರತಿಬಿಂಬ ರೂಪದಿಂ ತಾನೆ ಹೊಕ್ಕು ಮೇಘಾದಿಕದಿಂದಾ ಜಲ ಪ್ರತಿಬಿಂಬಮಂ ಮರಸಿ, ಹಿಮಕಿರಣಾದಿಕದಿಂದಾ ಜಲಪ್ರತಿಬಿಂಬನುಂ ತಡೆದು, ಉಷ್ಣಕಿರಣದಿಂದ ಆ ಜಲಮಂ ಪೀರ್ದು ಬಳಿಕಾ ಪ್ರತಿಬಿಂಬಮಂ ತನ್ನೊಳು ಒಡಗೂಡಿಕೊಳುತ್ತಿರ್ಪುದು, ಹಾಂಗೆ ಮಹೇಶ್ವರನು ತನ್ನ ಮಾಯಾಶಕ್ತಿಯೊಡನೆ ಚಿತ್ಪ್ರದಾನತ್ವದಿಂ ನಿಮಿತ್ತ ಕಾರಣನಾಗಿ, ಜಡಪ್ರದಾನತ್ವದಿಂದ, ಉಪಾದಾನತ್ವ ಕಾರಣವೆನಿಸಿ, ಬುದ್ಧ್ಯಾದಿಕಾರ್ಯಮಂ ಸೃಜಿಸಿ, ಜೀವರೂಪದಿಂದಲ್ಲಿ ತಾನೇ ಪ್ರವೇಶಿಸಿ, ಕರ್ಮದಿಂ ಭೋಕ್ತವೆನಿಸಿ, ನಿಯಾಮಕ ಶಕ್ತಿಯಿಂದಾ ಭೋಗ್ಯ ಭೋಕ್ತ್ರಗಳಂ ನಿಯಾಮಿಸಿ ರುದ್ರರೂಪದಿಂದಾ ಕಾರ್ಯಮಂ ಸಂಹರಿಸಿ, ಬಳಿಕಾ ಶ್ರುತ್ಯಾಚಾರ್ಯ ರೂಪದಿಂದಾ ಜೀವನಂ ತನ್ನೊಡನೈಕ್ಯಮಂ ಮಾಡಿಕೊಳುತ್ತಿರ್ಪನೆಂಬುದೇ ಸುಸ್ಥಿರಮಕ್ಕುಂ ೭೭

ವ್ಯಷ್ಟಿ–ಸಮಷ್ಟಿವಿವೇಕ :

ಬಳಿಕ ಸಮಷ್ಟಿ ವ್ಯಷ್ಟಿಯಂಬವೆ ಜೀವೇಶ್ವರರ್ಗೆ ವಿಭಾಗೋಪಾಯ ದ್ವಯಂಗಳು ಅವರಲ್ಲಿ : ಅನೇಕ ವೃಕ್ಷಂಗಳುಳ್ಳದನೊಂದೇ ವನವೆಂದು ತಿಳಿವಂತೆ, ಅನೇಕ ಜೀವರೆಲ್ಲರನು ತನ್ನಾತ್ಮರೆಂಬ ಅಭಿಮಾನವೇ ಈಶ್ವರಂಗೆ ಸಮಷ್ಟಿರೂಪವಹುದು.

ಅದೊಂದೇ ವನದಲ್ಲಿ ಇದೊಂದು ವೃಕ್ಷ, ಇದೊಂದು ವೃಕ್ಷವೆಂದು ಬೇರೆ ಬೇರೆ ಕುರುಹಿಡಿವಂತೆ ಭಿನ್ನ ಭಿನ್ನ ದೇಹತ್ವಾಭಿಮಾನವೇ ಜೀವಂಗೆ ವ್ಯಷ್ಟಿರೂಪಮಕ್ಕುಂ. ೭೮

ಕೂಟಸ್ಥಾದಿ ನಾಮವಿವೇಕ :

ಮತ್ತಮಾ ವಿಶ್ವಾದಿ ಜೀವತ್ರಯಾಧಿಷ್ಠಾನ ಚೈತನ್ಯನು, ತುರ್ಯನು, ಸ್ವಯಂ ಶಬ್ದಾರ್ಥನು, ಸಾಕ್ಷಿಕನು ಪಾರಮಾರ್ಥಿಕಜೀವನು, ಪ್ರತ್ಯಗಾತ್ಮನು, ಅಂತರ್ಯಾಮಿ, ಅನುಸಂಧಾತೃ, ಅವಚ್ಛಿನ್ನ ಜೀವನು, ತ್ವಂಪದ ಲಕ್ಷಾರ್ಥನು ಎಂಬಿವು ಮೊದಲಾದವರ ಕೂಟಸ್ಥಾನ ಪರಿಯಾಯ ನಾಮಣಗಳಕ್ಕುಂ.

ಬ್ರಹ್ಮ ಪರ್ಯಾಯ ನಾಮಂಗಳು :

ಮತ್ತಮಾ ಅಂತರ್ಯಾಮಿ ಮೊದಲಾದ ಈಶ್ವರತ್ರಯ ಅಧಿಷ್ಠಾತೃವು ಪರಬ್ರಹ್ಮ, ಪರತತ್ವ, ಪರಮಾತ್ಮ, ಸರ್ವಾಧಿಷ್ಠಾತೃ, ವಿಶುದ್ಧ ಚಿತ್ತು, ತತ್ಪದ ಲಕ್ಷ್ಯಾರ್ಥವೆಂಬಿವು ಮೊದಲಾದವೆ ಬ್ರಹ್ಮಾದಿ ಪರಿಯಾಯ ನಾಮಂಗಳಕ್ಕುಂ ೮೦

ದೃಕ್ ವಿವೇಕ ಸಾರ :

ಬಳಿಕ ಮೃತ್ತಿಕೆಯೊಂದೇ ನಾಮರೂಪಂಗಳಿಂದ ಘಟಾದಿ ಬಹು ಭೇದಮಾದಂತೆ,

ಸುವರ್ಣವೊಂದೆ ವಾಚಾರಂಭಣದಿಂದ ಕಟಕ ಮಕುಟಾದಿ ಹಲವು ಆಭರಣವಾದಂತೆ,

ಜಲವೊಂದೇ ವಾಯುವಶದಿಂದ ಫೇನ ತರಂಗಾದಿ ಸಮುದಾಯವಾದಂತೆ,

ದೀಪವೊಂದೇ ಘಟಾದಿ ವಿವರಂಗಳಿಂದ ಬಹುಳತೆ ಪಡೆದಂತೆ,

ಮಾರುತನೊಂದೇ ವಂಶ (ಬಿದಿರು) ರಂಧ್ರಗಳಿಂ ಮಧುರ ಮಂದ್ರಾದಿ ವಿಭಿನ್ನಮಾದಂತೆ,

ಸ್ವರವೊಂದೇ ಗೃಹಾದ್ಯುಸಾಧಿಯಿಂದ ಅನೇಕಮಾದಂತೆ,

ಧ್ವನಿಯೊಂದೇ ವಾದ್ಯಭೇದದಿಂ ಪಲವಾದಂತೆ,

ನಭವೊಂದೇ ಕದಳೀದಳದ ಖಂಡಂಗಳಲ್ಲಿ ಕರಿತುರಗಾದಿ ವಿಚಿತ್ರ ಮಾದಂತೆ

ಶಶಿರವಿಗಳೊಂದೇ ಜಲಕುಂಭಾದಿಕದಿಂ ನಾನಾತ್ವವನೆಯ್ದಿದಂತೆ, ಲೆಕ್ಕವೊಂದೆ ಬಹುಬಿಂದುಗಳಿಂ ದಶ ಶತ ಸಹಸ್ರಾದಿಕಮಾದಂತೆ, ಚಿತ್ರವೊಂದರಲ್ಲಿ ಪೂರ್ವೋಕ್ತ ಜೀವೇಶಾದಿ ಭೇದ ವ್ಯವಹಾರವು ಅಪ್ಪುದು, ಎಂಬಿವು ಮೊದಲಾದವೆಲ್ಲಂ ದೃಕ್ ವಿವೇಕಮಕ್ಕುಂ. ೮೧

ಮಾಯಾ ಸ್ವರೂಪ ವಿವೇಕ :

ಅನಂತರದಲ್ಲಿ ಅನಾದಿಯಿಂದ ಚಂದ್ರನ ಕಳಂಕವೆಂತು ಅಂತೆ, ಚಂದ್ರನಂ ಸೆಮ್ಮಿ, ಚಂದ್ರನಂ ಮುಸುಂಕದೆ, ಚಂದ್ರನಿಂ ಬೆಳಗಿಸಿಕೊಳುತಿರ್ಪುದು ಅಂತೆಯೇ, 'ನಾನು ಎನ್ನನರಿಯೆನು' ಎಂಬ ಲೋಕಪ್ರಸಿದ್ಧಮಾದ ವ್ಯವಹಾರದಲ್ಲಿ ಆತ್ಮನಂ ನೆಮ್ಮಿ ಆತ್ಮನನ್ ಆಚ್ಛಾದಿಸದೆ ಆತ್ಮನಿಂದ ಅರುಹಿಸಿಕೊಳುತ್ತಿಹುದಾಗಿಯುಂ ಮತ್ತೆಯುಂ,

ಅಗ್ನಿಯ ದಾಹಕ ಶಕ್ತಿ ಹೇಂಗೆ ಮಣಿ ಮಣಿಮಂತ್ರಾದಿ ಪ್ರಯೋಗದಿಂ ತಾನೆ ಬಂಧಿಸಿಕೊಳುತ್ತಿಹುದರಿಂದ ಅಗ್ನಿ ಸ್ವರೂಪವಲ್ಲದೆ ಅಗ್ನಿಯಂ ಬಿಟ್ಟು ತೋರದೆ, ಸ್ಫೋಟಕಾದಿ ಕಾರ್ಯಗಮ್ಯವಾಗಿರ್ಪುದು. ಹಾಂಗೆ (ಹಾಗೆಯೇ) ಬ್ರಹ್ಮಸ್ವರೂಪವಲ್ಲದೆ ಬ್ರಹ್ಮವಿಲಕ್ಷಣಮಾಗಿ ತೋರದೆ ವಿಯದಾದಿ ಕಾರ್ಯಗಮ್ಯಮಾಗಿಯುಂ, ಅಘಟಿತ ಘಟನಾ ಸಮರ್ಥೆಯಾಗಿಯುಂ ಸರ್ವ ಅನರ್ಥಕ್ಕೆ ಕಾರಣಮಪ್ಪುದೇ ದೃಶ್ಯರೂಪಮಾಯಾಶಕ್ತಿಯಕ್ಕುಂ.

ಮಾಯಾಲಕ್ಷಣ :

ಬಳಿಕ ಅಸತ್ತು, ಜಡ, ದುಃಖ, ಅನಿತ್ಯ, ಖಂಡಿತವೆಂಬವೇ ಮಾಯಾಪಂಚಲಕ್ಷಣಂಗಳ್, ಅವರಲ್ಲಿ : ೧. ಶಶವಿಷಾಣಾದಿಕವೇ ಅಸದ್ರೂಪು

೨. ಪಾಷಾಣದಿಕವೇ ಜಡರೂಪು

೩. ರಜ, ತಮೋಮಯವಾದ ಬುದ್ಧಿಯ ಘೋರ ಮೂಢ ವ್ಯತ್ಯಾದಿಕವೇ ದುಃಖವೇ ರೂಪು

೪. ತೋರಿ ಕೆಡುವ ದೇಹಾದಿಕವೇ ಅನಿತ್ಯರೂಪು

೫. ಕಾಲ ಪರಿಚ್ಛೇದಾದಿಕವೇ ಖಂಡಿತರೂಪಮಕ್ಕುಂ. ೮೩

ಅನಿರ್ವಚನ ಪ್ರಕಾರ :

ಬಳಿಕ ಭಿನ್ನ, ಅಭಿನ್ನ, ಭಿನ್ನಾಭಿನ್ನ ಸತ್ತು ಅಸತ್ತು ಸದಸತ್ತು, ಸಾವಯವ, ನಿರಯವ, ಸಾವಯವ ನಿರವಯವಲ್ಲೆಂಬುದೇ ಮಾಯೆಗೆ ಅನಿರ್ವಾಚ್ಯ ನವಪ್ರಕಾರಮಕ್ಕುಂ ೮೪

ಮಾಯಾ ಪ್ರತೀತಿತ್ರಯ :

ಬಳಿಕ ಆ ಮಾಯೆಯೆ ಶ್ರುತಿ ಸಂಬಂಧ ಜ್ಞಾನ, ಯುಕ್ತಿ ಸಂಬಂಧಜ್ಞಾನ, ಲೋಕ ಸಂಬಂಧಜ್ಞಾನ ವೆಂಬ ಜ್ಞಾನತ್ರಯದಿಂ ಕ್ರಮವಿಡಿದು, ಗಗನಕುಸುಮದಂತೆ ತುಚ್ಛಮೆನಿಸಿ, ಶುಕ್ತಿಕಾರಜತದಂತೆ ಅನಿರ್ವಾಚ್ಯಮೆನಿಸಿ, ಆತ್ಮನಂತೆ ನಿತ್ಯನೆನಿಸಿಕೊಳುತ್ತಿರ್ಕುಂ. ೮೫

ಮಾಯಾ ಪಂಚಕ :

ಮತ್ತಂ, ತಮಸ್ಸು ಮಾಯ ಮೋಹ ಅವಿದ್ಯೆ ಅನ್ಯತಾತ್ಮಕಿ ಎಂಬಿವೆ ಮಾಯಾಪಂಚಕಂಗಳು,

ಅವರಲ್ಲಿ : ೧. ಜೀವ ಚೇತನವನಾಚ್ಛಾದಿಪುದರಿಂ ತಮಸ್ಸೆನಿಸೂದು.

೨. ಜಗದ್ರೂಪವಾದಅನ್ಯಥಾ ತೋರಿಕೆಗೆ ಕಾರಣಮಪ್ಪುದರಿಂ ಮಾಯೆಯೆನಿಸೂದು.

೩. ಆ ತೋರಿದ ಜಗತ್ತಿನಲ್ಲಿ ಶುಕ್ತಿಕಾರಜತಾದಿ ವಿಪರೀತಜ್ಞಾನಮಂ ಪುಟ್ಟಿಪುದರಿಂ ಮೋಹವೆಸನಿಸೂದು.

೪. ವಿದ್ಯೆಯಿಂ ಕೆಡುವುದರಿಂದ ಅವಿದ್ಯೆಯೆನಿಸೂದು.

೫. ಸದ್ರೂಪಕ್ಕೆ ಅನ್ಯಮಪ್ಪುದರಿಂದ ಅನ್ಯತಮಕ್ಕುಂ. ೮೬

ಮಾಯಾಧರ್ಮದ್ವಯ :

ಬಳಿಕ ಸಂಕೋಚ ವಿಕಾಸವೆಂಬವೆ ಮಾಯಾಧರ್ಮದ್ವಯಂಗಳು ಅವರಲ್ಲಿ, ಹೇಗೆ ಚಿತ್ರಪಟವು ತನ್ನ ಪ್ರಸರಣದಿಂ ಚಿತ್ರಂಗಳ ಕಾಣಿಸಿ, ಸಂಕೋಚದಿಂದ ಆ ಚಿತ್ರಂಗಳಂ ಮರಸುತ್ತಿಹುದು. ಹಾಗೆಯೇ ಮಾಯೆ ತನ್ನ ಸಂಕೋಚ ಧರ್ಮದಿಂದ ಜಗತ್ ಪ್ರಪಂಚಮಂ ತೋರಿ, ತನ್ನ ಧರ್ಮದಿಂದ ಅದನು ಅಡಗಿಸುತ್ತಿರ್ಕುಂ. ೮೭

ಮಾಯಾಗುಣದ್ವಯ :

ಬಳಿಕ ಸ್ವತಂತ್ರತೆ ಅಸ್ವತಂತ್ರತೆಗಳೆಂಬವೆರಡು ಮಾಯಾಗುಣಂಗಳು,

ಅವರಲ್ಲಿ : ೧ ಮಾಯೆ ಮಿಥ್ಯೆಯಪ್ಪುದರಿಂ ಸದ್ರೂಪ ಚೈತನ್ಯಮಂ ಬಿಟ್ಟು ತೋರದಿಹುದು ಆದರಿಂದ ಅಸ್ವತಂತ್ರತೆಯೆನಿಸೂದು.

೨. ಸಾಕ್ಷಿಕನಪ್ಪುದರಿಂದ ಅಸಂಗನಾದಾತ್ಮನಂ ಜೀವಾಧಿ ಪ್ರಪಂಚಮಯ ನಾಗಿ ಮಾಳ್ಪುದೇ ಸ್ವತಂತ್ರತೆಯಕ್ಕುಂ. ೮೮

ಮಿಥ್ಯಾತ್ವ ನಿರುಕ್ತಿ :

ಬಳಿಕಲ್ಲಿ ಮಿಥ್ಯೆಯೆಂದೊಡೆ : ಗಗನ ಕುಸುಮಮಾದಿಕದಂತೆ ಸರ್ವಥಾ ಶೂನ್ಯವೆಂಬುದಲ್ಲ. ಮತ್ತೇನೆನೆ, ಸ್ವಪ್ನಗಜಾದಿಕದಂತೆ ತೋರುತ್ತಿರ್ದು, ವಿಚಾರ ಬಾಧಿತಮಪ್ಪುದೇ ಮಿಥ್ಯೆಮಕ್ಕುಂ. ೮೯

ಮಾಯಾ ವೃತ್ತಿತ್ರಯ :

ಮತ್ತಂ, ವಿಶುದ್ಧ ಸತ್ವರೂಪಮಲಿನಮಾಯೆ, ಸ್ವರೂಪಾವಿದ್ಯೆ, ತಮಃ, ಪ್ರಧಾನರೂಪ ಪ್ರಕೃತಿ ಎಂಬವೇ ಮಾಯಾವೃತ್ತಿ ತ್ರಯಂಗಳು,

ಅವರಲ್ಲಿ :೧) ಪ್ರಾಂಯೆಂಯು ಸುಪ್ತಲಂಯುಂಗಳಲ್ಲಿ ಪರಬ್ರಹ್ಮದೊಡನೆ ಅಧ್ಯಾಸ್ಯೈಕ್ಯವಾಗಿರ್ದು, ಸ್ವಪ್ನ ಜಾಗರಣಂಗಳಲ್ಲಿ ಇನಿತು ಭೇದಾವಸ್ಥೆಯನ್ಯೆದುತ್ತಿಹುದು ಆಗಳ್ ಆ ಬ್ರಹ್ಮಕ್ಕೆ, ಬ್ರಹ್ಮಚೈತನ್ಯವದರಲ್ಲಿ ಪ್ರತಿಫಲಿಸದೇ ಸರ್ವಜ್ಞತ್ವಾದಿ ಗುಣವಿಶಿಷ್ಟ ಚೈತನ್ಯನಾದೀಶ್ವರನೆನಿಸಿ, ಪತಿ ಪದಾರ್ಥವೆನಿಸಿ, ಪ್ರೇರಯತೃವೆನಿಸಿಕೊಂಬುದರಿಂದಾ ಮಾಯೆ ಈಶ್ವರಂಗೇ ಉಪಾಧಿಯಾಗಿ ಆ ಮೋಹಕಾರಿಣಿಯೆನಿಸೂದು.

೨) ಮತ್ತಮಾ ಅವಿದ್ಯೆಯೇ ನಾನಾತ್ವದಿಂ ಭೋಕ್ತೃಗಳಾಗಿ ಪಶು ಪದಾರ್ಥಮಪ್ಪ ಜೀವರ್ಗೆ ಉಪಾಧಿಯಾಗಿ ಮೋಹಿಸುತ್ತಿಹುದು.

೩) ಮತ್ತಂ ಆ ಪ್ರಕೃತಿಯೆ ಭೋಗಾತ್ಮಕತ್ವದಿ ಪಾಶ ಪದಾರ್ಥನೆನಿಸಿಕೊಂಡು ಗುಣತ್ರಯ ಸಮಾನಾವಸ್ಥೆಯಿಂದಿರ್ದು ಬಳಿಕ ಅವಿದ್ಯೆಯೊಳ್ ಪ್ರತಿಂಬಿಂಬಿಸಿರ್ದ ಜೀವಂ ಭೋಗಾರ್ಥಮಾಗಿ ಸಕಲ ಕಾರ್ಯಮಾಗ ಲೋಸುಗಂ ಈಶ್ವರನ ಸನ್ನಿಧಾನ ಲಕ್ಷಣನೋಟಮಾತ್ರದಿಂ ವಿಕರಿಸಿ, ಮೊದಲು ಕಾಲತತ್ವಮಂ ಪಡೆದು ಮೇಲೆ ಆ ಕಾಲವಶದಿಂ ಪರಿಣಮಿಸಿ ಮಹತತ್ತ್ವವೆನಿಸೂದು. ೬೦

ಮಹದಾದಿ ಸೃಷ್ಟಿಕ್ರಮ :

ಬಳಿಕ ಆ ಮಹತತ್ತ್ವವಾದೊಡೆ ಬಿತ್ತಿ ನೀರೆರೆದೊಡಂ ಆಂಕುರಿಸದೆ ಮೊದಲಂತಿರದೆ, ಉದ್ಭೃಂಹಣಾವಸ್ಥೆಯನ್ಯೆದಿದ ಬೀಜದಂತೆ, ಕಾರಣ ಪ್ರಕೃತಿಯಲ್ಲದೆ, ಕರಣಮಾದ ಆಹಂಕಾರವಲ್ಲದೆ, ಮಿಥ್ಯಾಜ್ಞಾನದ ನಿರ್ವಿಕಲ್ಪ ಸ್ವರೂಪದಿಂ ಮಧ್ಯಾವಸ್ಥೆಯೆನಿಸೂದು. ಮತ್ತಂ, ಆ ಮಹತ್ತತ್ತ್ವದಿಂ ಗುಣಭೇದವಡೆದುಮಿಥ್ಯಾಜ್ಞಾನದ ಸವಿಕಲ್ಪ ರೂಪಮಾದ ಪ್ರಥಮಾಧ್ಯಾಸವೆನಿಸಿಕೊಂಬ ಮೂಲಾಹಂಕಾರಂ ಜನಿಸುತ್ತಿರ್ಕ್ಕುಂ. ೬೧

ಗುಣತ್ರಯಗಳು :

ಬಳಿಕ ಸತ್ವಗುಣ ರಜೋಗುಣತಮೋಗುಣವೆಂಬವೆ ಗುಣತ್ರಯಂಗಳು, ಪ್ರಕಾಶಪ್ರವೃತ್ತಿ ಮೋಹವೆಂಬವೆ ಸತ್ವಾದಿಗುಣರೂಪಂಗಳು, ವೈಕಾರಿಕ ತೈಜಸ ಭೂತಾದಿಯೆಂದು ಆ ಸತ್ವಾದಿಗುಣಪರಿಯಾಯ ನಾಮಂಗಳು.

ಅವರಲ್ಲಿ : ೧. ಸತ್ವಗುಣದಿಂ ಮಾನಸಾದ್ಯಂತಃಕರಣ ಚತುಷ್ಟಯಂಗಳ ಶ್ರೋತ್ರಾದಿ ಜ್ಞಾನೇಂದ್ರಿಯ ಪಂಚಕಂಗಳು ಪುಟ್ಟುವುವು.

೨. ರಜೋಗುಣದಿಂ ವಾಗಾದಿಕರ್ಮೇಂದ್ರಿಯ ಪಂಚಕಂಗಳು ಪ್ರಾಣಾದಿವಾಯುಪಂಚಕಂಗಳು ಪುಟ್ಟುವುವು.

೩. ತಮೋಗುಣದಿಂ ಆಕಾಶಾದಿ ಭೂತಪಂಚಕಗಳು ಪುಟ್ಟುವುವು.

ಬಳಿಕ ಆ ಭೂತಂಗಳ ಪಂಚೀಕರಣದಿಂ ಬ್ರಹ್ಮಾಂಡ ಭುವನ ಶರೀರ ಘಟಾದಿ ವಿಷಯಂಗಳುದಿಸುತ್ತಿರ್ಕ್ಕುಂ. ೯೨

ಅಂತಃಕರಣ ಚತುಷ್ಟಯ ವ್ಯಾಪಾರಂಗಳು :

ಬಳಿಕ ಆ ಮಾನಸಾದ್ಯಂತಃಕರಣಂಗಳಿಗೆ ಕ್ರಮದಿಂ ವಿಷಯಂಗಳಂ ನೆನೆವುದು, ನಿಶ್ಚೈಸೂದು, ಅಭಿಮಾನಿಸೂದು, ಆವಧರಿಸೂದು ಎಂಬವೆ ವ್ಯಾಪಾರಂಗಳು, ಚಂದ್ರ, ಚತುರ್ಮುಖ, ಕ್ಷೇತ್ರಜ್ಞ, ತ್ರಿಪುರಾಂತಕರೆಂಬವರೇ ಅಧಿದೇವತೆಗಳು. ಹೃದಯಗೋಳಕವೇ ಸ್ಥಾನಮಕ್ಕುಂ. ೯೩

ಜ್ಞಾನೇಂದ್ರಿಯ ಪಂಚಕ :

ಮತ್ತಂ ಆ ಶ್ರೋತ್ರಾದಿ ಜ್ಞಾನೇಂದ್ರಿಯಂಗಳಿಗೆ ಕ್ರಮದಿಂ ಶಬ್ದಾದಿ ವಿಷಯಂಗಳಂ ಕೇಳೂದು, ಸೋಕೂದು, ನೋಡೂದು ರುಚಿಸೂದು, ವಾಸಿಸೂದೆಂಬವೆ ವ್ಯಾಪಾರಂಗಳು. ದಿಕ್ಕೂ ಮಾರುತ ಮಿತ್ರ ವರುಣ ಅಶ್ವನಿಯರೆಂಬವರೆ ಅಧಿದೇವತೆಗಳು. ಕರ್ಣಾದಿಗೋಳಕಂಗಳೇ ಸ್ಥಾನಂಗಳು.

ಬಳಿಕ ಶ್ರೋತ್ರಾದಿಂದ್ರಿಯಂಗಳಿಗೆ ಬಾಹ್ಯದಲ್ಲಿ ಶಬ್ದಾದಿಗಳನರಿವಂತೆ ಕಿವಿಯನು ಅಂಗುಲಿಯಿಂ ಮುಚ್ಚಿದಲ್ಲಿ ಪ್ರಾಣವಾಯು, ಜಠರಾಗ್ನಿಗಳಲ್ಲಿ ಉಂಟಾದ ಶಬ್ದಗ್ರಹಣ. ನೇತ್ರವ ಮುಚ್ಚಿದಲ್ಲಿ ಬಳಗಣ ತಮೋರೂಪ ಗ್ರಹಣ. ಅನ್ನಪಾನ ಸ್ವೀಕಾರಮಾದಲ್ಲಿ ಉಷ್ಣ ಸೀತ ಸ್ಪರ್ಶಗ್ರಹಣ. ತೇಗೂದ್ಗಾರಮಾದಲ್ಲಿ ರಸಗಂಧಗ್ರಹಣಗಳೆಂಬ ಆಂತರಶಬ್ದಾದಿ ವಿಷಯಗ್ರಹಗಳುಂಟೆಂಬುದೇ ಸಿದ್ಧಮಕ್ಕುಂ. ೯೪

ಕರ್ಮೇಂದ್ರಿಯ ಪಂಚಕ :

ಮತ್ತಮಾ ವಾಗಾದಿ ಕರ್ಮೇಂದ್ರಿಯಂಗಳಿಗೆ ಕ್ರಮದಿಂ ನುಡಿವುದು, ಹಿಡಿವುದೊ, ನಡೆವುದು, ಬಿಡುವುದು, ಆನಂದಮಂ ಪುಟ್ಟಿಸೂದು ಎಂಬಿವೇ ವ್ಯಾಪಾರಂಗಳು.

ಅಗ್ನಿ ಇಂದ್ರ, ರವಿ ಮೃತ್ಯು ಪ್ರಜೇಶರೆಂಬುವರೇ ಅಧಿದೇವತೆಗಳು. ಮುಖಾದಿಗೋಳಕಂಗಳೇ ಸ್ಥಾನಂಗಳಕ್ಕುಂ. ೯೫

ಆಧ್ಯಾತ್ಮಿಕಾದಿ ವಿವೇಕ :

ಬಳಿಕ ಅವುಗಳಲ್ಲಿ ಅಂತಃಕರಣ (ಚತುಷ್ಟಯ), ಜ್ಞಾನೇಂದ್ರಿಯ (ಪಂಚಕ), ಕರ್ಮೇಂದ್ರಿಯ (ಪಂಚಕ)ಮೆಂಬ ಹದಿನಾಲ್ಕೇ ಆಧ್ಯಾತ್ಮಿಕಂಗಳು. ಅವರ ವಿಷಯಂಗಳೇ ಆದಿಭೌತಿಕಂಗಳು, ಆವರ ಅಧಿ ದೇವತೆಗಳೇ ಆದಿ ದೈವಿಕಂಗಳು ಎನಿಸಿಕೊಳುತಿರ್ಪುಂ. ೯೬

ಇಂದ್ರಿಯ ಮೂಲ ಸಮನ್ವಯ :

ಮತ್ತಂ ಅ ಇಂದ್ರಿಯಾದಿಗಳ ದೇವತೆಗಳೆ ವಿರಾಟ್ಪುರುಷನ ಇಂದ್ರಯಂಗಳು. ಆ ಇಂದ್ರಿಯಂಗಳೆ ಹಿರಣ್ಯಗರ್ಭನ ಶರೀರ. ಆ ಶರೀರವೇ ತಮೋರೂಪದಿಂದ ಆಂತರ್ಯಾಮಿಗೆ ಆವರಣಮಾಗಿರ್ಕುಂ. ೯೭

ಪ್ರಾಣಪಂಚಕಾದಿ :

ಮತ್ತಂ, ಪ್ರಾಣಪಂಚಕಾದಿಗಳೊಳ್ ಮಹಾಪ್ರಾಣ ಪಂಚಕಾದಿಗಳು ಉಪಪ್ರಾಣಪಂಚಕಾದಿಗಳೆಂಬುಭಯಮಕ್ಕುಂ.

ಮಹಾ ಪ್ರಾಣ ಪಂಚಕಾದಿಗಳೆಂಬು ಭಯಮಕ್ಕುಂ.

ಮಹಾಪ್ರಾಣ ಪಂಚಕಾದಿಗಳ ವಿವರಂ :

೧. ಪ್ರಾಣವಾಯು – ಹೃದಯಸ್ಥಾನದಲಿರ್ದು, ಉಚ್ಛ್ವಾಸ ನಿಶ್ವಾಸಗೆಯ್ಯುತ್ತಿರ್ಕುಂ.
೨. ಅಪಾನವಾಯು – ಗುದಸ್ಥಾನದಲಿರ್ದು ಮಲಮೂತ್ರಗಳಂ ತ್ಯಜಿಸುತ್ತಿಹುದು.
೩. ಸಮಾನವಾಯು– ನಾಭಿಸ್ಥಾನದಲಿರ್ದು ಉಂಡ ಅನ್ನ ರಸಮಂ ಸರ್ವಾಂಕ್ಕೆ ಹಂಚುತ್ತಿಹುದು.
೪. ಉದಾನವಾಯು– ಕಂಠಸ್ಥಾನದಲಿರ್ದು ಉದ್ಗಾರಮಂ ಮಾಡಿಸುತ್ತಿಹುದು.
೫. ವ್ಯಾನವಾಯು – ಸರ್ವಾಂಗಲಿರ್ದು ಧರಿಸಿಕೊಂಡಿಕ್ಕುಂ.

ಉಪಪ್ರಾಣಪಂಚಕಾದಿಗಳ ವಿವರಂ :

೧. ನಾಗವಾಯುವಿನಿಂ – ಮೈಮುರುಹು, ಆಗುಳಿಕೆಯಕ್ಕುಂ
೨. ಕೂರ್ಮವಾಯುವಿನಿಂ – ತೇಗು, ಬಿಕ್ಕು ಗಳಕ್ಕುಂ.
೩. ಕ್ರಕರವಾಯುವಿನಿಂ – ಸೀನು, ಕೆಮ್ಮುಗಳಕ್ಕುಂ
೪. ದೇವದತ್ತವಾಯಸುವಿನಿಂ – ನಗೆ, ನುಡಿಗಳಕ್ಕುಂ
೫. ಧನಂಜಯವಾಯುವಿನಿಂ – ಶೋಕ ರಾಗಂಗಳಹವು.

ಮತ್ತಮಾ ಧನಂಜಯ ವಾಯುವೇ ಮೃತಿಯಾದ ಐದುದಿನ ಪರಿಯಂತಮ್ ಆದೇಹಮನೂದಿಸಿ ಒಡೆದು ಕೆಡಿಸಿ ಪೋಗುತ್ತಿರ್ಕುಂ. ೯೮

ಮತ್ತಮಲ್ಲದೆ ಈ ನಾಗಾದಿ ವಾಯುಗಳೇ ಬಾಹ್ಯವಾಯುಗಳೆನಿಸಿಕೊಂಡು ವಾಗಾದಿ ಕರ್ಮೇಂದ್ರಿಯ ಚೇಷ್ಟಾ ಹೇತುಗಳಾಗಿಹವು.

ಬೇರೆ, ವೈರಂಭ ಮುಖ್ಯ ಪ್ರಭಂಜನ ಅಂತರ್ಯಾಮಿ ಸಂಜ್ಞೆಯುಳ್ಳ ಈ ನಾಲ್ಕು ಜೀವ ಸಂಬಂಧವಾದ ವಾಯುಗಳೇ ಮಾನಸಾದಿ ಅಂತಃಕರಣ ಚೇಷ್ಟಾ ಕಾರಣಂಗಳಾಗಿರ್ಕುಂ. ೯೯

ಭೂತಗುಣ ವಿಚಾರ :

ಮತ್ತಂ, ಆ ಭೂಮ್ಯಾದಿ ಭೂತಂಗಳೊಳಗೆ ಕ್ರಮದಿಂ. ಧಾರಣ, ಪಿಂಡೀಕರಣ, ಪಾಕ, ವ್ಯೂಹ ಆವಕಾಶಗಳೇ ವ್ಯಾಪಾರಂಗಳು. ಬ್ರಹ್ಮ ವಿಷ್ಣು ರುದ್ರ, ಈಶ್ವರ, ಸದಾಶಿವರೆಂಬವರೆ ಅಧಿದೇವತೆಗಳು.

ಗಂಧಾದಿಗಳೇ ಗುಣಗಳಕ್ಕುಂ :

ಮತ್ತಂ, ಆ ಭೂತಗುಣಂಗಳಲ್ಲಿ, ಆಕಾಶಕ್ಕೆ ಒಂದು ಗುಣ, ವಾಯುವಿಗೆ ಎರಡು ಗುಣ, ಅಗ್ನಿಗೆ ಮೂರು ಗುಣ, ಅಪ್ಪು (ಜಲ)ವಿಗೆ ನಾಲ್ಕು ಗುಣ, ಪೃಥ್ವಿ (ಭೂಮಿ)ಗೆ ಐದು ಗುಣಂಗಳು. ಅವುಗಳ ವಿಭೇದಗಳು ಎಂತೆನೆ :

೧. ಆಕಾಶಕ್ಕೆ – ಪ್ರತಿಧ್ವನಿ ರೂಪ ಶಬ್ದಗುಣ ಒಂದು

೨. ವಾಯುವಿಗೆ – ಬಿಸ್ಸೆಂಬ ಶಬ್ದ, ಅನುಷ್ಣ ಶೀತಮೆಂಬೆರಡು.

೩. ಅಗ್ನಿಗೆ – ಭುಗಿಭುಗಿಲೆಂಬ,ಉಷ್ಣಸ್ಪರ್ಶ, ಪ್ರಭಾರೂಪಮೆಂಬ ಮೂರು

೪. ಜಲಕ್ಕೆ – ಬುಳು ಬುಳು ಎಂಬ, ಶೀತಸ್ಪರ್ಶ, ಶ್ವೇತರೂಪು, ಮಧುರರಸವೆಂಬ ಗುಣ ನಾಲ್ಕು.

೫. ಭೂಮಿಗೆ – ಗಡ ಗಡ ಎಂಬ ಶಬ್ದ, ಕಠಿಣ ಸ್ಪರ್ಶ, ನೀಲಾದ್ರಿ ಚಿತ್ರರೂಪು ಮಧುರ ಆಮ್ಲಾದಿ ನಾನಾ ರಸ ಸುಗಂಧ, ದುರ್ಗಂಧವೆಂಬ ಗುಣವೈದು.

ಇಂತು ವಿಭಾಗಿಸಲ್ವೇಳ್ಕುಂ. ೧೦೦

ತ್ರಿಪುಟಿ ಲಕ್ಷಣ :

ಬಳಿಕ ಜ್ಞಾತೃ ಜ್ಞಾನ ಜ್ಞೇಯಂಗಳೆಂಬನೆ ತ್ರಿಪುಟಿಗಳವರಲ್ಲಿ,

೧. ಮೂಲಾಹಂಕಾರದಲ್ಲಿ ಪ್ರತಿಫಲಿಸಿರ್ದ ಜೀವ ಚೈತನ್ಯವೇ ಜ್ಞಾತೃವೆನಿಸೂದು.

೨. ಮನದಲ್ಲಿ ಪ್ರತಿಬಿಂಬಿಸಿಹ ಚೈತನ್ಯವೇ ಜ್ಞಾನವೆನಿಸೂದು.

೩. ಭೂತ ಭೌತಿಕ ವಿಷಯಂಗಳೇ ಜ್ಞೇಯಮಕ್ಕುಂ. ೧೦೧

ತತ್ತ್ವಗಳು :

ಬಳಿಕ ಮನವೇ ಇಪ್ಪತ್ತನಾಲ್ಕನೆಯ ತತ್ತ್ವವೆನಿಸೂದು. ಮೂಲಾಹಂಕಾರವೇ ಇಪ್ಪತ್ತೈದನೆಯದು. ಅಹಂಕಾರಗತ ಚಿದಾಭಾಸ ಜೀವನವೇ ಇಪ್ಪತ್ತಾರನೆಯಾತನು. ಮಾಯೋಪಾಧಿಕನಾದೀಶ್ವರನೇ ಇಪ್ಪತ್ತೇಳನೇಯಾತನು. ಅಹಂಕಾರ ಜೀವರ್ಗೆ ಅಧಿಷ್ಠಾನಮಾದ ಕೂಟಸ್ಥನೇ ಇಪ್ಪತ್ತೆಂಟನೆಯಾತನು, ಆ ಮಾಯೋಪಾಧಿಕದ ಈಶ್ವರರ್ಗೆ ಅಧಿಷ್ಠಾತೃವಾದ ಬ್ರಹ್ಮನೇ ಇಪ್ಪತ್ತೊಭತ್ತನೆಯದು ಅಕ್ಕುಂ. ೧೦೨

ಸೃಷ್ಟಿಕ್ರಮ :

ಮತ್ತಂ, ಆ ಪ್ರಕೃತಿಯಿಂ ಕಾರ್ಯೋದಯಮಾದೊಡೆ ಕ್ರಮಸೃಷ್ಟಿಯೆಂದು, ಯುಗಪತ್ ಸೃಷ್ಟಿಯೆಂದು ದ್ವಿಪ್ರಕಾರವಹುದು ಅಲ್ಲಿ ;

೧) ಮೂಲ ಪ್ರಕೃತಿಯಂ ಮಹತತ್ವ ಅಹಮು ತನ್ಮಾತ್ರಪಂಚಕಮೆಂಬ ಸಪ್ತಪ್ರಕೃತಿಗಳ್ ಅವರಿಂ ಭೂತಂಗಳ್, ಅವರಿಂ ಬ್ರಹ್ಮಾಂಡ ದೇಹ ಘಟಾದಿ ಪ್ರಪಂಚೋದಯವೆ ಕ್ರಮ ಸೃಷ್ಟಿಯೆನಿಸೂದು.

೨) ನಿರಸ್ತರಂಗ ಸಮುದ್ರದೊಳ್ ಒಂದೇ ಕಾಲದಲ್ಲಿ ವಾಯುವಶದಿಂ ವಿಚಿತ್ರ ಫೇನ ತರಂಗ ಬುದ್ಬುದಾದಿಗಳಾಗುವಂತೆ, ಸಚ್ಚಿದಾನಂದಾತ್ಮಕ ಬ್ರಹ್ಮದಲ್ಲಿ ಮಾಯಾಮಯ ನಾಮರೂಪ ಪ್ರಸರಣವೇ ಯುಗಪತ್ ಸೃಷ್ಟಿಯೆನಿಸೂದೂ.

ಇವೆರಡು ಶ್ರುತಿಸಿದ್ಧಮಪ್ಪುದರಿಂದ ಅಂಗೀಕೃತಮಕ್ಕುಂ. ೧೦೩

ಸೃಷ್ಟಿ ದೃಷ್ಟಾಂತ :

ಬಳಿಕ ಇಲ್ಲಿ ಅತಿರೋಹಿತ ಬ್ರಹ್ಮಸ್ವರೂಪಮಪ್ಪುದರಿಂದ ವಿಕಾರವಿಲ್ಲದ ಈಶ್ವರನಿಂ, ಜಡಪ್ರಕೃತಿಯಲ್ಲಿ ಸಕಲ ಕಾರ್ಯೋದಯಮೆಂತೆನೆ :

ಇಚ್ಛಾದಿಕಮಿಲ್ಲದ ಸೂರ್ಯನಿಂ ಯತ್ನಾದಿಕಮಿಲ್ಲದ ಸೂರ್ಯಕಾಂತದಲ್ಲಿ ವಹ್ನಿಯು ಉಜ್ವಲಿಪಂತೆ, ಪರಶಿವನಿಂದ ಪ್ರಕೃತಿಯಲ್ಲಿ ಮಹದಾದಿ ಕಾರ್ಯಮುದಿಸಲ್ ವಿರೋಧಮಿಲ್ಲಂ. ೧೦೪

ಚತುರ್ವಿಧ ಕಾರ್ಯಕಲ್ಪನೆ :

ಬಳಿಕ; ವೃತ್ತಿ ಪರಿಣಾಮ ಆರಂಭಿಕ ವಿವರ್ತಕಮೆಂದು ಕಾರ್ಯೋದಯ ಚತುರ್ವಿಧಗಳು, ಅವಕ್ಕೆ ;

ಪಟ–ಕುಟೀ ಭಾವ, ಕ್ಷೀರ – ದಧ್ಯಾಕಾರ, ತಂತು – ಪಟನ್ಯಾಯ, ರಜ್ಜು –ಸರ್ಪರೂಪಮೆಂಬವೆ ಕ್ರಮದಿಂ ದೃಷ್ಟಾಂತ ಚತುಷ್ಟಯಂಗಳಕ್ಕುಂ. ೧೦೫

ಕಾರಣತ್ವ ದೋಷ ಪರಿಹಾರ :

ಬಳಿಕ ಇಲ್ಲಿ ನಿರ್ವಿಕಾರ ಸ್ವರೂಪದಿಂದ ಅದ್ವಯನಾದ ಆತ್ಮನಲ್ಲಿ, ಮಿಥ್ಯಾವಸ್ತು ಕಲ್ಪಿತಮಾಯತ್ತೆಂತೆನೆ ; ಮೊದಲು ಆ ಭ್ರಾಂತಿ ಯಾವಾತಂಗೆ ತೋರಿತ್ತೆಂದಡೆ :

ಒಬ್ಬಾನೊಬ್ಬ ಯತೀಶ್ವರನಲ್ಲಿ ಸತಿ ಪತಿ ರತಿಕಾಂಕ್ಷೆಯೆಂಬ ತ್ರಿವಿಧರೂಪಸ್ವಪ್ನ ಒಂದೇ ಕಾಲದಲ್ಲಿ ತೋರಲ್, ಆತಂಗೆ ಆವಹಾನಿಯಿಲ್ಲದಂತೆ ಸಾಕ್ಷಿಕನಾದ ಆತ್ಮನಲ್ಲಿ ಗುಣತ್ರಯಾತ್ಮಕ ಪ್ರವೃತಿಯಿಂ ಭ್ರಾಂತಿಸುವ ಜ್ಞಾತೃ ಭ್ರಾಂತಿ, ಜ್ಞಾನಭ್ರಾಂತಿ, ವಿಷಯಜ್ಞೇಯವೆಂಬ ತ್ರಪುಟಿಮಯ ಪ್ರಪಂಚವು ಏಕಕಾಲದಲ್ಲಿಯೆ ಕಲ್ಪಿತಮಾಗಲ್ ಆತ್ಮಂಗೆ ಆವ ಹಾನಿಯು ಇಲ್ಲವೆಂಬುದೇ ಸುಸ್ಥಿತಮಕ್ಕುಂ. ೧೦೬

ಪ್ರಪಂಚ ತ್ರೈವಿಧ ಭಾವನ :

ಮತ್ತಂ ಆ ಈಶ್ವರನಿಂ ಸೃಷ್ಟಮಾದ ಮಾಯಾಮಯ ವ್ಯೋಮಾದಿ ಪ್ರಪಂಚಮಾದೊಡೆ, ತನ್ನ ಸ್ವರೂಪದಿಂದ ಒಂದೇ ಪ್ರಕಾರದಿಂದಿಹುದು, ಅದರಲ್ಲಿ ಜೀವನ ಬುದ್ಧಿ ವೃತ್ತಿ ಕಲ್ಪಿತವಾದ ಬೇರೊಂದು ಭೋಗ್ಯತ್ವ-ರೂಪವೇ ಪ್ರೀತಿ ವಿಷಯವೆಂದು, ದ್ವೇಷವಿಷಯವೆಂದು, ಉಪೇಕ್ಷಾ ವಿಷಯವೆಂದು ತ್ರಿವಿಧಮಾಗಿರ್ಪುದು. ಅವರಲ್ಲಿ.

೧. ವನಿತಾದಿಕವೇ ಪ್ರೀತಿ ವಿಷಯವೆನಿಸೂದು.

೨. ವ್ಯಾಘ್ರಾದಿಕವೇ ದ್ವೇಷ ವಿಷಯವೆನಿಸೂದು

೩. ವೀಧಿ ತೃಣಾದಿಕವೆ ಉಪೇಕ್ಷಾ ವಿಷಯಮಕ್ಕುಂ. ೧೦೭

ಹಲವು ಬಗೆಯಾಗಿ ತೋರ್ಪುದು :

ಮತ್ತಂ ಆ ವಿಷಯಮೊಂದರಲ್ಲಿಯೇ

ಈಶ್ವರ ನಿರ್ಮಿತಮಾದ ಏಕಾಕಾರಮುಂ

ಜೀವ ಕಲ್ಪಿತ ಹಲವಾಕಾರಮುಂ ಇಪ್ಪುದು, ಆದಕ್ಕೆ ದೃಷ್ಟಾಂತಮೆಂತೆನೆ : ಈಶ್ವರ ನಿರ್ಮಿತ ರತ್ನಾದಿ ವಸ್ತು ತಾನೊಂದೇ ಪ್ರಕಾರದಿಂದಿರುತ್ತಿರಲಾತಿ, ಬಳಿಕ, ಭೋಕ್ತಸಗಳ ಬುದ್ಧಿ ವೃತ್ತಿ ಕಲ್ಪಿತ ನಾನಾತ್ವದಿಂದ,

ಆ ರತ್ನಾದಿಕಮೆ, ತನ್ನ ಪಡೆದಾತಂಗೆ ಪ್ರೀತಿ ವಿಷಯಮಾಗುತ್ತಿಹುದು. ತನ್ನ ಪಡೆದಾತಂಗೆ ದ್ವೇಷ ವಿಷಯವಾಗಿತ್ತಿಹುದು.

ವಿರಕ್ತನಾದಾತಂಗೆ ಆ ರತ್ನಾದಿಕಂ ಉಪೇಕ್ಷಾ ವಿಷಯವಾಗುತ್ತಿರ್ಕ್ಕುಂ. ೧೦೮

ಮತ್ತಂ ಆ ಈಶ್ವರ ನಿರ್ಮಿತಮಾದ ವಸ್ತುರೂಪಮೊಂದೇ ಪ್ರಕಾರಮಾಗಿರ್ದು, ಜೀವನಂ ಆ ಈಶ್ವರ ನಿರ್ಮಿತವಾದ ಭೋಗ್ಯತ್ವಾಕಾರವು ಅದರಲ್ಲಿ ನಾನಾಪ್ರಕಾರಮಾಗಿಹುದನು ಅಭಿವ್ಯಕ್ತಂ ಮಾಡಲೋಸುಗ ಇನ್ನೊಂದು ದೃಷ್ಟಾಂತವು ಎಂತೆನೆ ;

ಪಿತೃಜನ್ಯಮಾದ ಒಬ್ಬಾಳೊಬ್ಬ ಸ್ತ್ರೀಯ ಮಾಂಸಮಯವಾದ ರೂಪಮೊಂದೇ ತೆರೆದಿಂದಿಹುದು. ಆ ಸ್ತ್ರೀಯ ಭೋಕ್ತಗಳ ಬುದ್ಧಿ ವೃತ್ತಿ ಕಲ್ಪಿತಾಕಾರದಿಂ, ಆ ಸ್ತ್ರೀಯು, ತಂದೆಗೆ ಮಗಳೆನಿಸಿಯುಂ.

ಗಂಡಂಗೆ ವಧುವೆನಿಸಿಯುಂ,

ಸುತಂಗೆ ತಾಯಿ ಎನಿಸಿಯುಂ,

ಮಾವಂಗೆ ಸೊಸೆಯೆನಿಸಿಯುಂ ಬಹುವಿಧವಮಾಗುತ್ತಿಹಳ್ ಇಂತು ಸರ್ವವಿಷಯವೆಲ್ಲಂ ಈಶ್ವರ ನಿರ್ಮಿತಮಾದ ಏಕಾಕಾರಂ, ಜೀವನಿಂ ಕಲ್ಪಿತಮ್ ಆ ಹಲವಾಕಾರದಿಂದ ಇತ್ತೆರನಪ್ಪುದು ಅವರೊಳಗೆ; ೧೦೯

ಈಶ್ವರ ಪ್ರಪಂಚ :

ಈಶ್ವರ ನಿರ್ಮಿತ ಪ್ರಪಂಚವೇ ಬಾಧಕವಲ್ಲಾಗಿಯುಂ, ಗುರು ಶಾಸ್ತ್ರಾದಿ ರೂಪದಿಂ, ಮೋಕ್ಷ ಸಾಧನಮಾಗಿಯುಂ, ತನ್ನಿಂ ಬಿಡಲು ಶಕ್ಯವಲ್ಲದಾಗಿಯು, ಅದಂತಿರ್ಕೆ (ಆ ವಿಷಯವು ಹಾಗಿರಲಿ) ೧೧೦

ಜೀವ ಪ್ರಪಂಚತ್ರಯ ನಿಷೇಧ :

ಬಳಿಕ ಜೀವ ಕಲ್ಪಿತಮಾದ ಪ್ರಪಂಚವೇ ಬಂಧಕರಮಪ್ಪುದರಿಂ, ಮುಮುಕ್ಷುವಿಂ ಬಿಡಲು ತಕ್ಕುದಾದೊಡೆ, ಶಾಸ್ತ್ರೀಯ ಪ್ರಪಂಚಮೆಂದು, ಅಶಾಸ್ತ್ರೀಯ ಪ್ರಪಂಚಮೆಂದು ದ್ವಿವಿಧಮಾಗಿಹುದು.

ಆತ್ಮರ ಬ್ರಹ್ಮರ ವಿಚಾರವೇ ಶಾಸ್ತ್ರೀಯ ಪ್ರಪಂಚವೆನಿಸೂದು.

ತೀವ್ರವೆಂದು, ಮಂದವೆಂದು ಎರಡು ತೆರನಾಗಿಹುದು. ಅಶಾಸ್ತ್ರೀಯ ಪ್ರಪಂಚವು ಕಾಮ ಕ್ರೋಧಾದಿಕನೆ ತೀವ್ರ ಪ್ರಪಂಚವೆನಿಸೂದು.

ಮನಃ ಕಲ್ಪಿತಮಾದ ರಾಜಸ ಕರ್ಮಾದಿಕವೆ ಮಂದ ಪ್ರಪಂಚವೆನಿಸೂದು.

ಜೀವಕಲ್ಪಿತ ತ್ರಿವಿಧ (ಪ್ರೀತಿ, ದ್ವೇಷ, ಉಪೇಕ್ಷಾ) ಪ್ರಪಂಚದಲ್ಲಿ ಶಾಸ್ತ್ರೀಯ ಪ್ರಪಂಚವೇ ಜ್ಞಾನಾದಿ ಸಾಧನದಿಂ ಆತ್ಮ ಸಾಕ್ಷಾತ್ಕಾರವಾದ ಮೇಲೆ ಬಿಡಲು ತಕ್ಕುದು.

ಅಶಾಸ್ತ್ರೀಯರೂಪಮಾದ ತೀವ್ರಮಂದವೆಂಬು ಭಯ ಪ್ರಪಂಚವು ಆತ್ಮ ಸಾಕ್ಷಾತ್ಕಾರಕ್ಕೆ ವಿರೋಧಿಗಳಾಗಿ ಜ್ಞಾನಾಭ್ಯಾಸಕ್ಕೆ ಮುನ್ನಮೇ ಬಿಡಲು ತಕ್ಕವು. ಬಳಿಕ ಆ ಉಭಯವು (ತೀವ್ರ ಮತ್ತು ಮಂದ) ಆತ್ಮ ಸಾಕ್ಷಾತ್ಕಾರವಾದ ನಂತರದಲ್ಲಿಯೂ ಮೋಕ್ಷ ಸಿದ್ಧ್ಯರ್ಥಮಾತಿ ಸರ್ವಥಾ ಬಿಡಲು ತಕ್ಕವು ಎಂಬುದೇ ರಹಸ್ಯರ್ಥಮಕ್ಕುಂ. ೧೧೧

ಉಪಾಧಿ ಕ್ರಮ :

ಅನಂತರದೊಳ್, ಅವಚ್ಛಿನ್ನೋಪಾಧಿ
ಪ್ರತಿಬಿಂಬೋಪಾಧಿ
ಅಧ್ಯಾಸೋಪಾಧಿ ಎಂಬವೆ ಉಪಾಧಿ ತ್ರಯಂಗಳ್.

ಅವರಲ್ಲಿ : ೧. ಪ್ರತ್ಯಗಾತ್ಮಂಗೆ ಸುಷುಪ್ತಿರೂಪಾವಿದ್ಯೆಯ ಅನಚ್ಛಿನ್ನೋಪಾಧಿ ಎನಿಸೂದು.

೨. ತತ್ಕಾರ್ಯವಾದ ಬುದ್ಧಿಯಲ್ಲಿ ಆತ್ಮ ಪ್ರತಿಫಲಿಸೂದೇ ಪ್ರತಿಬಿಂಬೋಪಾಧಿ ಎನಿಸೂದು.

೩. ಆ ಬುದ್ಧಿಗತ ಸುಖದುಃಖಂಗಳನು ಅಧ್ಯಾಸೋಪಾಧಿ ಎನಿಸೂದು. ೧೧೨

ಆಧ್ಯಾಸ ಲಕ್ಷಣ :

ಮತ್ತಂ, ಅಲ್ಲದುದರಲ್ಲಿ ಅಹುದೆಂಬ ಬುದ್ಧಿಯೇ, ಶುಕ್ತಿಕಾರಜತ ದೃಷ್ಟಾಂತದಿಂದ ಅಧ್ಯಾಸ ಲಕ್ಷಣವಹುದು. ಆ ಅಧ್ಯಾಸವೇ

ಮಿಥ್ಯಾಧ್ಯಾಸ

ಇತರಾಧ್ಯಾಸ

ಇತರೇತರಾಧ್ಯಾಸ

ಸತ್ಯಾಧ್ಯಾಸವೆಂದು ನಾಲ್ಕು ತೆರನಾಗಿಹುದು.

ಇವುಗಳ ಲಕ್ಷಣಂ ;

೧. ಸ್ಥೂಲ ಶರೀರವೇ ಮಿಥ್ಯಾಧ್ಯಾಸವೆನಿಸೂದು.

೨. ಇಂದ್ರಿಯ ವರ್ಗವೇ ಇತರಾಧ್ಯಾಸವೆನಿಸೂದು.

೩. ಅಂತಃಕರಣವೇ ಇತರೇತರಾಧ್ಯಾಸವೆನಿಸೂದು.

೪. ಮೂಲಾಹಂಕಾರವೇ ಸತ್ಯಾಧ್ಯಾಸಮಕ್ಕುಂ

ಬಳಿಕ ಅಹಂ ಎಂಬುದರಿಂದ ಪ್ರತ್ಯಗಾತ್ಮಾಹಂಕಾರಗಳ್ಗೆ ರಜ್ಜು ಸರ್ಪವೆಂಬಂತೆ ನಿರುಪಾಧಿಕಾಧ್ಯಾಸವೆನಿಸೂದು.

ಅಹಂ ಕರ್ತಾಎಂಬುದರಿಂ ಅಹಂಕಾರ ಧರ್ಮಾತ್ಮರ್ಗೆ ಪ್ರವಾಹಜಲ ಪತಿತ ಪತಂಗ ಪ್ರತಿಬಿಂಬದಂತೆ ತದ್ಧರ್ಮತಾಧ್ಯಾಸವೆನಿಸೂದು.

ವ್ಯವಹಾರದಂತೆ ಸಂಬಂಧಮಾತ್ರಾಧ್ಯಾಸವೆನಿಸೂದು.

ಇಂತು ಅಧ್ಯಾಸದಿಂದವೆ ನಿರ್ವಿಕಾರನಾದಾತ್ಮಂಗೆ ಸಂಸಾರಕಲ್ಪನೆಯಕ್ಕುಂ.

ಪಂಚಾವಸ್ತೆಗಳು :

ಮತ್ತಂ, ಜಾಗರಣ, ಸ್ವಪ್ನ, ಸಷುಪ್ತ, ತುರ್ಯ, ತುರ್ಯಾತೀತವೆಂಬವೆ ಪಂಚಾವಸ್ಥೆಗಳು. ಅವರಲ್ಲಿ :

೧. ಸ್ಥೂಲ ಪಂಚಭೂತ, ದಶೇಂದ್ರಿಯ, ಪ್ರಾಣಪಂಚಕ, ಅಂತಃಕರಣ ಚತುಷ್ಟಯಗಳೆಂಬ ಚತುರ್ವಿಂಶತಿತತ್ವಾತ್ಮಕ ಸ್ಥೂಲ ಶರೀರದಲ್ಲಿ ಸತ್ವಗುಣ,ಅಕ್ಷರಾಕ್ಷರ ವಿಷ್ಣುವಧಿದೇವತೆ, ಲೋಚನಸ್ಥಾನ, ಹೃದಯಕಮಲದಷ್ಟದಳ ಗತಿಗಳಿಂ, ವಿಶ್ವಜೀವನು, ವಿರಾಟ್ ಸಂಜ್ಞಿತನಾದ ಈಶ್ವರರುಗಳು ಒಂದಾಗಿ ವನಿತಾಗಿ ವಿಷಯ ಭೋಗಮಂ ಸಕಲ ಕರಣ ಸಾಮಗ್ರಿಯಿಂದನುಭವಿಸುತ್ತಿರಿಂದೇ ಜಾಗರಣಾ (ಜಾಗ್ರತಾ)ವಸ್ಥೆ ಎನಿಸೂದು

೨. ಮತ್ತಂ ಆ ಇಪ್ಪತ್ತನಾಲ್ಕು ತತ್ವಂಗಳೊಳಗೆ ಸ್ಥೂಲ ಭೂತಂಗಳೈದನು. ಚಿತ್ತ ಬುದ್ಧಿಗಳೆರಡನು ಬಿಟ್ಟು, ಮಿಕ್ಕ ಹದಿನೇಳು ತತ್ವರೂಪ ಸೂಕ್ಷ್ಮ ಶರೀರದಲ್ಲಿ ರಜೋಗುಣ ಉಕಾರಾಕ್ಷರ ಬ್ರಹ್ಮನಧಿದೇವತೆ ಕಂಠಸ್ಥಾನ ಹೃತ್ಕಮಲ ಕರ್ನಿಕಾಗತಿಗಳಿಂ ತೈಜಸ

ಜೀವನು ಸೂತ್ರಾತ್ಮಕ ಸಂಜ್ಞಿತನಾದೀಶ್ವರರುಗಳೊಂದುಗೂಡಿ ಜಾಗ್ರದ್ವಾಸನಾ ವಿಷಯ ಭೋಗಮಂ ಮನವೆಂಬ ಕರಣದಿಂದ ಅನುಭವಿಸುತ್ತಿಹುದೇ ಸ್ವಪ್ನಾವಸ್ಥೆಯೆನಿಸೂದು.

೩. ಮತ್ತಂ ಪರಿದು ಮೇವುತ್ತಿರ್ದಮರಿಗಳೆಲ್ಲಮಂ ತನ್ನ ಪಕ್ಕದ (ರೆಕ್ಕೆಯ) ಮರೆಯೊಳಡಗಿಸಿಕೊಂಡು ಒಂದೆಡೆಯಲ್ಲಿ ನಿದ್ರೆಗೆಯ್ಯುತ್ತಿರ್ದ್ದ ಚರಣಾಯುಧ (ಕೋಳಿ)ಯಂತೆ, ಆ ಸಮಸ್ತ ಕಾರ್ಯವನೊಳಕೊಂಡು, ತತ್ಸಂಸಾರ ಸಹಿತಮಾಗಿ, ಆತ್ಮಾಶ್ರಯದಲ್ಲಿ ನಿರವಸ್ಥೆಯಿಂದಿರ್ದ ಪ್ರಕೃತಿರೂಪ ಕಾರಣ ದೇಹದಲ್ಲಿ ತಮೋಗುಣ ಮಕಾರಾಕ್ಷರ, ರುದ್ರನಧಿದೇವತೆ, ಹೃದಯಸ್ಥಾನ, ತತ್ಕಮಲ ಕರ್ನಿಕಾ ಮಧ್ಯಗತಿಗಳಂ, ಪ್ರಾಜ್ಞ ಜೀವನು, ಅಂತರ್ಯಾಮಿ ಸಂಜ್ಞಿತನಾದ ಈಶ್ವರರುಗಳೇಕಮಾತಿ ಬ್ರಹ್ಮಾನಂದ ವಿಷಯ ಭೋಗಮಂ ಮಯಾವೃತ್ತಿಯೆಂಬ ಸೂಕ್ಷ್ಮಕರಣದಿಂದ ಅನುಭವಿಸುತ್ತಿಹುದೇ ಸುಶುಪ್ತಾವಸ್ಥೆ ಎನಿಸೂದು. ೧೧೬

೪. ಬಳಿಕಾ ಜಾಗ್ರದಾದ್ಯವಸ್ಥೆಗಳಿಗೆ ಅವಸ್ಥಾತ್ರಯ, ಧಾಮತ್ರಯ, ಸ್ಥಾನತ್ರಯ, ಪುರತ್ರಯಗಳೆಂಬವೆ ಪರ್ಯಾಯ ನಾಮಂಗಳಕ್ಕುಂ. ಮತ್ತಂ ಆ ಜಾಗರಣದಲ್ಲಿಯೆ ತತ್ಕಮಲವನುಳಿದು ಮನೋವ್ಯಾಪಾರವನಳಿದು ಪರಮಾತ್ಮನ ಚಿಂತೆಗೆಯ್ವುದೇ ತುರ್ಯಾವಸ್ಥೆ ಎನಿಸೂದು.

ಮತ್ತಂ ಆತ್ಮನಲ್ಲಿಯೇ ಮನ ಮಗ್ನಮಾಗಿರ್ಪುದೇ
ತುರ್ಯಾತೀತಾವಸ್ಥೆಯೆ ನಿಕುಂ. ೧೧೭

ಮತ್ತಂ ಆ ಅವಸ್ಥೆಗಳಲ್ಲಿ :

ಸ್ಥಾವರಕ್ಕೆ (ಚಲನವಿಲ್ಲದುದಕ್ಕೆ) ಸುಪ್ತಿ ಅವಸ್ಥೆ
ಪಶ್ವಾದಿಗಳಿಗೆ ಸ್ವಪ್ನದ ಅವಸ್ಥೆ
ದೇವತೆಗಳಿಗೆ ಜಾಗರಣಾ (ನಿದ್ರೆಯಿಲ್ಲದ) ಅವಸ್ಥೆ.
ಮನುಷ್ಯರಿಗೆ ಸ್ವಪ್ನ, ಸುಪಿ, ಜಾಗರಣಾವಸ್ಥೆಗಳಕ್ಕುಂ
ಮರಳುಗಳಿಗೆ (ದೆವ್ವ) ತುರ್ಯಾವಸ್ಥೆ.
ಪರಮಯೋಗಿಗಳಿಗೆ ತುರ್ಯಾತೀತ ಅವಸ್ಥೆಗಳಕ್ಕುಂ.

ಮೊದಲ ಮೂರು ಅವಸ್ಥೆಗಳು ಮನುಷ್ಯರ್ಗೆ ತಮ್ಮಿಂ ತಾವೇ ತೋರಿಕೊಂಡು ಸಂಸಾರಾತ್ಮಕವಾಗಿಹವು. ಮಿಕ್ಕ ಎರಡು ಅವಸ್ಥೆಗಳು (ತುರ್ಯ, ತುರ್ಯಾತೀತ) ಯೋಗಾಭ್ಯಾಸ ಬಲದಿಂ ಜನಿಸಿ ಮುಕ್ತಿ ಸಾಧನಗಳಾಗಿರ್ಕುಂ. ೧೧೮

ಅವಸ್ಥಾಮಿಥ್ಯಾತ್ವ :

ಮತ್ತಂ ಆ ಅವಸ್ಥೆಗಳು ಒಂದರೊಳು ಒಂದಿಲ್ಲವಾಗಿಯುಂ, ಕಾಲ, ದೇಶಾದಿ ನಿಯಮಂಗಳ ತೋರ್ಕೆಯಲ್ಲಾಗಿಯುಂ ಮಿಥ್ಯಾಭೂತಂಗಳಕ್ಕುಂ.

ಅವರಲ್ಲಿ ಅನುಸ್ಯೂತಮಾಗಿ (ಸೇರಿಕೊಂಡು) ಬಿಡದೆ ಅರಿವ ನಿಜವಾದ ತುರ್ಯನಾದಾತ್ಮನೇ ಸತ್ಯನಪ್ಪಂ. ೧೧೯

ಆತ್ಮಸಿದ್ಧಿ:

ಮತ್ತಮ್ ಆ ಜಾಗ್ರಸ್ವಪ್ನಂಗಳಲ್ಲಿ ಅರಿವು (ಜ್ಞಾನ) ಉಂಟೆಂಬುದೇ ಪ್ರಸಿದ್ಧವು. ಆದರೆ ಆ ಸುಷುಪ್ತಿಯಲ್ಲಿ ಅರಿವು ಉಂಟೆಂಬುದಕ್ಕೆ ಎಚ್ಚೆತ್ತ ಕಾಲದಲ್ಲಿ "ನಾನೇನನು ಅರಿಯದೇ ಮಲಗಿರ್ದೆನು"

"ಸುಖದಿಂ ನಿದ್ರೆಗೆಯ್ದೆನು" ಎಂಬ ಸ್ಮರಣದ್ವಯದ ಅನುಭವವಿಲ್ಲದೆ ಪುಟ್ಟದು ಎಂಬ ಅರ್ಥಾಪತ್ತಿ ಪ್ರಮಾಣದಿಂದ ಆ ಸುಷುಪ್ತಿಯಲ್ಲಿ, ಆತ್ಮನು ಸಮಸ್ತ ಘಟಾದಿರೂಪನೊಳಕೊಂಡ ಕತ್ತಲೆಯನ್ನು ಕಣ್ಣು ಕಾಣುವಂತೆ ಸಕಲ ಶರೀರಾದಿ ಕಾರ್ಯವನೊಳಕೊಂಡ ಅವಿದ್ಯೆಯನು ಕಾಂಬನು. ಆ ಅವಿದ್ಯೆಯ ಸೂಕ್ಷ್ಮವೃತ್ತಿಗಳಲ್ಲಿ ಚಂಚಲ ತರು ಪಲ್ಲವಾಂತರದ ಲೇಶಂಗಳಂತೆ ಪೊಳೆದು ಅಡಗುತ್ತಿರ್ದ ನಿಜ (ತನ್ನ) ಸ್ವರೂಪವಾದ ಆನಂದಾಂಶಂಗಳನು, ಕರಣಾಂತರಾಪೇಕ್ಷೆ ಇಲ್ಲದೆ ಅನುಭವಿಸುತ್ತಿರ್ಪುದರಿಂದ ಅಲ್ಲಿ ಅರಿವು ಸುಸ್ಥಿರಮಕ್ಕುಂ. ೧೨೦

ಬಳಿಕ ಏನನೂ ಅರಿಯದೆ ಸುಖದಿಂ ಮಲಗಿದ್ದೆನು ಎಂಬುದಕ್ಕೆ ಕ್ರಮದಿಂ, ಸಕಲ ವಿಷಯ ಜ್ಞಾನಮಿಲ್ಲದೆ, ಸಂಸಾರ ದುಃಖ ನಿವೃತ್ತಿಗಳೇ ಅಲ್ಲದೆ, ಸರ್ವಥಾ ಸುಷುಪ್ತಿಯಲ್ಲಿ ಅವಿದ್ಯೆಗೆ ಸಾಕ್ಷಿಕನಾದ ಆನಂದಮಯನಾದ ಆತ್ಮನುಂಟು ಎಂದೊಡೆ, ಓರ್ವನು ಅಲ್ಲಿ ಅರಿದೆನೆಂಬುದು ಏನೂ ಕಾರಣಮಿಲ್ಲ, ಎಂದೊಡೆ (ಇದಕ್ಕೆ ಒಂದು ನಿದರ್ಶನಂ)

ಒಡವೆಯ ನರಸಲೆಂದು ಬಾವಿಯೊಳಗೆ ಮುಳುಗಿದಾತಂಗೆ ಆ ಒಡವೆ ಇಲ್ಲ, ಉಂಟು ಎಂಬುದನು ಪೊರಮಟ್ಟಲ್ಲದೆ ಪೇಳ್ವುದು ಎಂತುಂ ಘಟಿಸದು.

ಅಂತೆ ಸುಷುಪ್ತಿಯಲ್ಲಿ ಅರಿವು ಉಂಟಾದೊಡಂ ಕಾಲಕರ್ಮವಶದಿಂದ ಎಚ್ಚೆತ್ತು, ಕರಣ ಸಹಕಾರಿಯಾದಲ್ಲದೆ, ಅಲ್ಲಿ ತಾನರಿದರ್ಥಮಂ.ಪೇಳ್ವುದು ಘಟಿಸದು. ಇಂತು (ಹೀಗೆ) ಆಗಲು ಅ ಸರ್ವಾವಸ್ಥೆಗೆ ಸಾಕ್ಷಿಕನಾದ ಆತ್ಮಂಗೆ ಸಚ್ಚಿದಾನಂದವು ಸ್ವಯಂ ಪ್ರಕಾಶರೂಪತ್ವಂ ಅನುಭವ ಸಿದ್ಧಮಕ್ಕುಂ. ೧೨೧

ಪಂಚಕೋಶ ವಿವೇಕ :

ಬಳಿಕ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂಬವೇ ಪಂಚಕೋಶಂಗಳು,

ಅವರಲ್ಲಿ : ೧. ಪಿತೃಮಾತೃಗಳ ಶುಕ್ಲ ಶೋಣಿತಂಗಳಿಂದಾದ ಸ್ಥೂಲ ಶರೀರವೇ ಅನ್ನಮಯ ಕೋಶವೆನಿಸೂದು.

೨. ಸೂಕ್ಷ್ಮತನುವಿನಲ್ಲಿ ಪ್ರಾಣಮಾರುತನುಂ ಕರ್ಮೇಂದ್ರಿಯಂಗಳು ಕೂಡೆ ಪ್ರಾಣಮಯ ಕೋಶಮೆನಿಸೂದು.

೩. ಮನಸ್ಸು ಜ್ಞಾನೇಂದ್ರಿಂಗಳು ಕೂಡೆ ಮನೋಮಯ ಕೋಶವೆನಿಸೂದು.

೪. ಪ್ರತ್ಯಗಾತ್ಮ ಚೈತನ್ಯಛಾಯೆಯೊಡಗೂಡಿ ಲೋಹಾಂತಕುಂತದಂತೆ ಇರ್ದ ಅಹಂಕಾರಮುಂ, ಜ್ಞಾನೇಂದ್ರಿಯಂಗಳುಂ ಕೂಡೆ ವಿಜ್ಞಾನಮಯ ಕೋಶವೆನಿಸೂದು.

೫. ಕಾರಣ ದೇಹರೂಪವಾದ ವಿದ್ಯೆಯುಂ, ಜಾಗ್ರದಲ್ಲಿ ವನಿತಾದಿ ಅಷ್ಟವಿಷಯ ದರ್ಶಣ, ಸಾಮೀಪ್ಯ, ಸಂಯೋಗಗಳಿಂ ಕ್ರಮದಿಂ ಪುಟ್ಟುವ ಪ್ರಿಯ, ಮೋದ, ಪ್ರಮೋದವೆಂಬ ಈ ತ್ರಿವಿಧಂಗೂಡಿ ಆನಂದಮಯ ಕೋಶಮಕ್ಕುಂ. ೧೨೨

ಅಹಂಕಾರಕ್ಕೆ ಆತ್ಮತ್ವ ಖಂಡನೆ :

ಬಳಿಕ ಈ ವಿಜ್ಞಾನಮಯ ಕೋಶರೂಪಮಾದ ಅಹಂಕಾರವನೆ ಆತ್ಮಾನಾತ್ಮವಿವೇಕ ಶೂನ್ಯರುಗಳು **ಅಹಂ** ಎಂಬ ತಮ್ಮ ಅನುಭವದಿಂದ ಆತ್ಮನೆಂದು ಬಗೆವರು. ಅದಕ್ಕೆ

೧. 'ನೀಲೋತ್ಪಲ' ಮೆಂಬಲ್ಲಿ ನೀಲಗುಣ ವಿಶೇಷಣದೊಡನೆ ವಿಶೇಷಮಾದ ಉತ್ಪಲ (ಹೂವು) ವು ವೇದ್ಯಮಪ್ಪಂತೆ.

೨. 'ಕೃಶೋಹ' ಎಂಬಲ್ಲಿ ಸ್ಥೂಲ ತನುವಿನೊಡನೆ

೩. 'ಶ್ರೋತ್ರಾಹ' ಎಂಬಲ್ಲಿ ಇಂದ್ರಿಯದೊಡನೆ.

೪. 'ಧ್ಯಾತಾಹ' ಎಂಬಲ್ಲಿ ಅಂತಃಕರಣದೊಡನೆ ಕೂಡಿ ಪ್ರತ್ಯಗಾತ್ಮಂಗೆ ವೇದ್ಯಮಪ್ಪುದರಿಂದ ಅಹಂಕಾರವು ಅತ್ಮನೆಂಬುದು ಅಲ್ತು(ಅಲ್ಲ). ೧೨೩

ಅಹಂಕಾರ ಚೈತನ್ಯ ವಿವೇಕ :

ಬಳಿಕ ಅಂತಾದೊಡೆ ಅಚೇತನಮಾದ ಅಹಂಕಾರಕ್ಕೆ ಬಾಹ್ಯ ವಿಷಯವನು ಆರಿವತನ ಎಂತೆನೆ :

ಸೂಜಿಕಲ್ಲ ಸನ್ನಿಧಿಯಂ ಸೂಜಿ ಚೇಷ್ಟಿಸುವಂತೆ,

ಬಿಸಿಲಲ್ಲಿ ಪಿಡಿದ ಕನ್ನಡಿ ಕೋಣೆಯ ಕತ್ತಲೆಯಂ ಬೆಳಗುವಂತೆ,

ಪ್ರತ್ಯಗಾತ್ಮ ಸನ್ನಿಧಿಯಿಂದ ತಚ್ಚೈತನ್ಯ ಪ್ರತಿಬಿಂಬ ತನ್ನಲ್ಲಿರ್ಪುದರಿಂದವೂ, ಜಡವಾದ ಅಹಂಕಾರವೆ ಬಾಹ್ಯವಿಷಯದ ಅರಿಕೆಯಿಂ, ಜಾಗ್ರ ಸ್ವಪ್ನಗಳಲ್ಲಿ ಸಂಚರಿಸಿ ಸುಷುಪ್ತಿಯಲ್ಲಿ ಅಡಗುತ್ತಿಹುದು. ತತ್ಪ್ರಪಂಚಕ್ಕು ಸಮಾನಮೆಂತೆನೆ :

ಅಹಂಕಾರದ ಲಯಾವಸ್ತಾತ್ಮಕಮಾದ ಸುಪ್ತಿಯೊಳು

ಆ ಅವಿದ್ಯೆಯೆಂಬ ಕೋಣೆಯ ಒಳಭಿತ್ತಿಯಂ

ನಿದ್ರೆಯೆಂಬ ಕವಾಟಮಂ, ನಿಷ್ಕಂಪ ದೀಪರೂಪಮಾದ

ತನ್ನ ತಾನೇ ಬೆಳಗಿತ್ತಿರ್ಪುದೇ ಪ್ರತ್ಯಗಾತ್ಮ ಜೋತಿಯೆನಿಸೂದು.

ಬಳಿಕ, ಕಾಲಕರ್ಮಾದಿ ಸಮೀರಣ ಪ್ರೇರಣೆಯಿಂದಾ, ತಾಮಸನಪ್ಪ ನಿದ್ರೆಯೆಂಬ ಕವಾಟಂ (ಬಾಗಿಲು) ತೆರೆಯೆ, ಬಳಿಕ ಆ ಅವಿದ್ಯಾ ಪ್ರಥಮಾವಸ್ಥಾತ್ಮಕ ಮಹತ್ವವೆಂಯ ದೇಹಳಿಯ (ಹೊಸ್ತಿಲ) ಮೇಲಿರ್ದ ಸಾತ್ವಿಕಮಾದ ಅಹಂಕಾರಮೆಂಬ ಸ್ಫಟಿಕಮಣಿಯು ಆ ಪ್ರತ್ಯಗಾತ್ಮ ಪ್ರದೀಪ ಪ್ರತಿಬಿಂಬ ಗರ್ಭಿತಮಾಗಿ ಮುನ್ನಿನಂತೆ ಜೀವನೆನಿಸಿ ಸ್ವಪ್ನಾನವಸ್ಥೆಯೆಂಬ ನಡುಮನೆಯಂ ಬೆಳಗಿ, ಮೇಲೆ ಇಂದ್ರಿಯಂಗಳೆಂಬ ಗವಾಕ್ಷದಿಂ ಪೊರಮಟ್ಟು ಜಾಗ್ರದಾವಸ್ಥೆಯೆಂಬ ಬಾಹ್ಯಾಂಗಣಮಂ ಪ್ರಕಾಶಿಸುತ್ತಿರ್ಪುಂ.

ಮತ್ತಂ ಆ ಕಾಲ ಕರ್ಮಾದಿ ಸಮೀರಣ (ವಾಯು) ಪ್ರೇರಣೆಯಿಂ ನಿದ್ರೆಯೆಂಬ ಕವಾಟಂ, ಮುಚ್ಚಲೊಡನೆ ಅಹಂಕಾರಮೆಂಬ ಸ್ಫಟಿಕಮಣಿಯು ತನಗೆ ಕಾರಣಮಾದ ಅವಿದ್ಯೆಯುಲ್ಲಿ ಅಡಗಲು, ಜಾಗ್ರ ಸ್ವಪ್ನಗಳೆಂಬ ಆಂಗಣ ನಡುಮನೆಗಳು ಆಂಧಕಾರಮಯವಪ್ಪವು. ಆ ಆಹಂಕಾರಮಣಿಯಲ್ಲಿ ಪ್ರತಿಫಲಿಸಿರ್ದ, ಚಿದ್ದೀಪ ಪ್ರಕಾಶವೆ ತನಗೆ ಮೂಲಭೂತಮಾದ ಪ್ರತ್ಯಗಾತ್ಮ ಪ್ರದೀಪದಲ್ಲಿಯೆ ಏಕಮಾಗಿತ್ತಿಹುದು. ಇಂತು ಜಾಗ್ರದಾದ್ಯವಸ್ಥಾತ್ರಯದೊಳು ಅಹಮ್ಮಿನ ಭಾವಾಭಾವಂಗಳನು ಅವಿಕಾಠನಾಗಿ ಅರಿವ ಆತ್ಮನೋರ್ವ ಬೇರೆ ಇಪ್ಪುದರಿಂ 'ಅಹಂ' ಆತ್ಮನಲ್ಲವೆಂಬುದೇ ಸಿದ್ಧಮಕ್ಕು. ೧೨೬

ಆಹಂಕಾರ ಸಂಬಂಧ :

ಬಳಿಕ ಬಾಹ್ಯವಿಷಯಕ್ಕೆ ಅತ್ಮನಾಗಿ ಪ್ರತ್ಯಗಾತ್ಮಂಗೆ ವೇದ್ಯಮಪ್ಪುದರಿಂ, ಜಡಾಜಡಸ್ವರೂಪಮಪ್ಪ ದರ್ಪಣದ (ಕನ್ನಡಿಯ) ಹಿಂಭಾಗ ಮುಂಭಾಗದಂತೆ, ಪ್ರಕಾಶ ಅಪ್ರಕಾಶಾತ್ಮಕಮಾದ ಆಹಂಕಾರಕ್ಕೆ ದೇಹ, ಚಿಚ್ಛಾಯ ಪ್ರತ್ಯಗಾತ್ಮರೆಂಬ ಈ ಮೂರರೊಡನೆ ಸಂಬಂಧಮುಂಟು. ಅವರಲ್ಲಿ, "ಅಹಂ ಜ್ವರಾಮಿ' ಎಂಬಂದರಿಂದ ಚಿತ್ಪ್ರತಿಬಿಂಬ ಮುಕ್ತಮಾದ ಅಹಂಕಾರ ಸಂಬಂಧದಿಂ ಸ್ಥೂಲದೇಹಕ್ಕೆ ಉಷ್ಣಾದಿಗಳನರಿವ ತನವೇ ಕರ್ಮಜನಿತಮಾಗಿ ಕರ್ಮಜವೆನಿಸೂದು. ೧೨೭

ಬಳಿಕ 'ಅಹಂ ಜಾನಾಮಿ' ಎಂಬುದರಿಂ ಚಚ್ಛಾಮಾಹಂಕಾರಂಗಳ ಸಂಬಂಧವೇ ಸೃಷ್ಟಿ ತೊಡಗಿ ಮೋಕ್ಷಾವದಿಯಾಗಿ ಕೆಡದಾಗಿ ಸಹಜವೆನಿಸೂದು. ಬಳಿಕ 'ಅಹಂ ಕರ್ತಾ' ಎಂಬುದರಿಂ ಸಂಗನಾದ ಪ್ರತ್ಯಗಾತ್ಮಾಹಂಕಾರಗಳ ಸಂಬಂಧವೇ ಭ್ರಾಂತಿಜನ್ಯವೆನಿಸೂದು; ಎಂಬಿವು ಮೊದಲಾದವೆಲ್ಲಂ ದೃಶ್ಯವಿವೇಕಮಕ್ಕುಂ. ೧೨೮

ಜೀವನ ಸಪ್ತಾವಸ್ಥೆಗಳು :

ಅನಂತರದಲ್ಲಿ, ಅಜ್ಞಾನ, ಆವರಣ, ವಿಕ್ಷೇಪ, ಪರೋಕ್ಷಜ್ಞಾನ, ಅಪರೋಕ್ಷಜ್ಞಾನ, ಶೋಕನಿವೃತ್ತಿ, ನಿರಂಕುಶತೃಪ್ತಿ ಎಂಬವೆ ಜೀವನ ಸಪ್ತಾವಸ್ಥೆಗಳು.

ಅವರಲ್ಲಿ :
೧. ಸಂಸಾರಾಸಕ್ತನಾದ ಚಿದಾಬಾಸಜೀವನು ಪ್ರತಿವಿಚಾರಕಿಂ ಮುನ್ನವೆ ತನ್ನ ನಿಜಸ್ವರೂಪಮಾದ ಸ್ವಯಂ ಪ್ರಕಾಶಮಪ್ಪ ಪ್ರತ್ಯಗಾತ್ಮನನ್ನು ಅರಿಯದಿಹುದೇ **ಅಜ್ಞಾನ**ವೆನಿಸೂದು.
೨. ಬಳಿಕೊಂದಾನೊಂದು ವೇಳೆ ಚಿದಾತ್ಮ ಪ್ರಸಂಗ ಬರಲಾಗಿ ಪ್ರತ್ಯಗಾತ್ಮನು ಇಲ್ಲವೆಂಬ ಪ್ರತ್ಯಗಾತ್ಮಂ ತೋರೆದು ಎಂಬ ಉಭಯವಿಧ ಮೋಸವೇ ಆ ಅಜ್ಞಾನಕಾರ್ಯಮಾದ **ಆವರಣೀ**ಯವೆನಿಸೂದು.
೩. ಬಳಿಕ ತಾನೇ ಕರ್ಮಕರ್ತೃ, ತಾನೇ ಕರ್ಮಫಲ ಭೋಗ್ಯವೆಂದು ಬಗೆದು ದೇಹಾಭಿಮಾನಿಯಾದ ಚಿದಾಭಾಸ ಜೀವನು ತಾನೆ **ವಿಕ್ಷೇಪ**ವೆನಿಸೂದು.

೪. ಬಳಿಕ ಆತ್ಮನ ಅಸ್ತಿತ್ವಮಂ ಪೇಳ್ವ ಶ್ರುತ್ಯಾಚಾರ್ಯ ವಾಕ್ಯವಿಶ್ವಾಸದಿಂ ಪ್ರತ್ಯಗಾತ್ಮನುಂಟೆಂದು ತಿಳಿವುದೇ ಮೊದಲ ಅಸತ್ವಾವರಣ ನಿವರ್ತಕಮಾದ **ಪರೋಕ್ಷಜ್ಞಾನ** ಎನಿಸೂದು.

೫. ಬಳಿಕ ನೀನೇ ಬ್ರಹ್ಮನೆಂದು ಪೇಳ್ವ ವೇದಾಂತವಾಕ್ಯ ವಿಚಾರ ಪರಿಪಾಕವಶದಿಂದ ಆ ಪ್ರತ್ಯಗಾತ್ಮನೇ ತಾನೆಂದರಿವುದೇ ಎರಡನೆಯ ಅಭಾವಾವರಣ ನಿವರ್ತಕಮಾದ **ಅಪರೋಕ್ಷ** ಜ್ಞಾನಮೆನಿಸೂದು.

೬ ಬಳಿಕ ಪ್ರತ್ಯಗಾತ್ಮ ಸಾಕ್ಷಾತ್ಕಾರದಿಂ ಮೇಲೆ, ನಾನು ಕರ್ತೃ ಕರ್ಮ ಕರ್ಮಫಲಭೋಕ್ತೃವೆಂಬ ಜೀವರೂಪ ದುಃಖ ಪರಿತ್ಯಾಗವೇ **ಶೋಕ ನಿವೃತ್ತಿ** ಎನಿಸೂದು.

೭ ಬಳಿಕ ಮಾಡಲು ತಕ್ಕ ಕೃತ್ಯವೆಲ್ಲಂ ಮಾಡಲ್ಪಟ್ಟಿತ್ತು. ಎಯ್ದಲ್ತಕ್ಕ ಫಲಜಾತವೆಲ್ಲವು ಯೆಯ್ದಲ್ಪಟ್ಟಿತ್ತು ಎಂದು ಸಹಜ ಪರಿತುಷ್ಟಿವಡೆದಿರ್ಪುದೆ **ನಿರಂಕುಶತೃಪ್ತಿ** ಯೆನಿಸೂದು. ೧೨೯

ಸಪ್ತಾವಸ್ಥಾ ಸಮನ್ವಯ :

ಬಳಿಕ ಸ್ವಯಂ ಪ್ರಕಾಶ ಚಿದ್ರೂಪನಾದ ಆತ್ಮಂಗೆ ನಿತ್ಯ ಅಪರೋಕ್ಷತ್ವವು ಉಂಟಪ್ಪುದರಿಂದ ಆತ್ಮನೊಳು ಈ ಅಜ್ಞಾನಾದಿ ಸಪ್ತಾವಸ್ಥೆಯು ಘಟಿಸಲರಿಯದು. ಎಂದೊಡೆ ಅದಕ್ಕೆ ದೃಷ್ಟಾಂತಂ ಎಂತೆನೆ. ಪೂರ್ವದಲ್ಲಿ ದಶಪುರುಷಗಳು ಒಂದು ನದಿಯಂ ದಾಂಟಿ ಪೋಗಿ ಮೇಲೆ ತಮ್ಮಂ ಪರಾಮರ್ಶಂಗೆಯ್ವ ಸಮಯದೊಳು ಅವರಲ್ಲಿ ನವಸಂಖ್ಯಾ ಪುರುಷರುಗಳನು ಇದಿರಿಟ್ಟು ಎಣಿಸುತ್ತಿದ್ದ ಒರ್ವ ಪುರುಷನು,

೧. ತಾನೇ ದಶಮ ಪುರುಷವೆಂಬುದನು ಅರಿಯದೆ ಇರ್ಪುದೇ ಅಜ್ಞಾನವೆನಿಸೂದು.

೨. ಹತ್ತನೆಯಾತನಿಲ್ಲ ಆತಂ ಕಾಣಿಸುತ್ತಿರನೆಂಬುಭಯ ಭ್ರಾಂತಿಯೇ ಆ ಅಜ್ಞಾನ ಕಾರ್ಯಮಾದ ಆವರಣಮೆನಿಸೂದು.

೩. ಬಳಿಕ ಹತ್ತನೆಯಾತಂ ನದಿಯಲ್ಲಿ ಮೃತನಾದನೆಂಬ ದುಃಖವೇ ವಿಕ್ಷೇಪವೆನಿಸೂದು.

೪. ಬಳಿಕ ಬೇರೆ ಒಬ್ಬ ಆಪ್ತನವಚನದಿಂದ ದಶಮ ಪುರುಷನನು ಸ್ವರ್ಗದಂತುಂಟೆಂದು ಅರುವುದೆ, ದಶಮನಿಲ್ಲೆಂಬ ಮೊದಲಾದಾವರಣಕ್ಕೆ ವಿರೋಧಿಯಾದ ಪರೋಕ್ಷಜ್ಞಾನವೆನಿಸೂದು.

೫. ಬಳಿಕ ನವಸಂಖ್ಯಾ ಪುರುಷರುಗಳೊಡನೆ ಕೂಡಿ ಕ್ರಮದಿಂದೆಣಿಸಿ ನೀನೆ ದಶಮನೆಂದು ಪೇಳೆ, ತನ್ನಂ ತಾನೇ ಸಾಕ್ಷಾತ್ಕರಿಪುದೇ, ದಶಮಂ ಕಾಣಿಸನೆಂಬ ಎರಡನೆಯ ಆವರಣಕ್ಕೆ ವಿರೋಧಿಯಾದ ಅಪರೋಕ್ಷ ಜ್ಞಾನವೆನಿಸೂದು.

೬. ಬಳಿಕ ಆ ದಶಮನ ಮೃತಿ ದುಃಖಮಂ ಬಿಡುವುದೇ ಶೋಕ ನಿವೃತ್ತಿಯೆನಿಸೂದು.

೭. ಬಳಿಕ ನಿಜಸ್ಥಿತಿಯಂ ಸುಖದಿಂದ ಇರ್ಪುದೇ ನಿರಂಕುಶತೃಪ್ತಿಯಕ್ಕುಂ. ೧೩೦

ವೇದವಾಕ್ಯ ವಿಚಾರ :

ಬಳಿಕ ವೇದವಾಕ್ಯ ವಿಚಾರ ಮೆಂತೆನೆ : ವಿಧಿವಾಕ್ಯ, ನಿಷೇಧವಾಕ್ಯ, ಸಿದ್ಧಾರ್ಥ ಬೋಧಕವಾಕ್ಯವೆಂದು ವೇದವಾಕ್ಯಂ ತ್ರಿವಿಧಮಾಗಿರ್ಪುದುಂ

ಅವರಲ್ಲಿ : ೧. ಯಾಜ್ಞಾದಿಗಳಂ ಮಾಡಬೇಕೆಂಬುದೇ ವಿಧಿವಾಕ್ಯ.
೨. ಸುರಾಪಾನದಿಗಳಂ ಮಾಡಬಾರದೆಂಬುದೇ ನಿಷೇಧವಾಕ್ಯ.
೩. ವಿಧಿಶೂನ್ಯಮಾಗಿ ಬ್ರಹ್ಮಾತ್ಮೈಕರೂಪವಸ್ತು ಮಾತ್ರಮಂ ಬೋಧಿಪುದೇ ಸಿದ್ಧಾರ್ಥ ಬೋಧಕ ವಾಕ್ಯಂಗಳಕ್ಕುಂ. ೧೩೧

ವೇದಾಂತ ಮಹಾವಾಕ್ಯಾರ್ಥ :

ಬಳಿಕ ಋಗ್ಯಜುಸ್ಸಾಮಾಥರ್ವಣವೆಂಬ ನಾಲ್ಕು ಕ್ರಮದಿಂ ಪ್ರತಿಪಾದಿಸಲ್ಪಟ್ಟ,

ಪ್ರಜ್ಞಾನಂಬ್ರಹ್ಮ, ಅಹಂಬ್ರಹ್ಮಾಸ್ಮಿ, ತತ್ವಮಸಿ, ಅಯಮಾತ್ಮಾಬ್ರಹ್ಮವೆಂಬ ಸಿದ್ಧಾರ್ಥ ಬೋಧಕಮಾದ ನಾಲ್ಕು ವಾಕ್ಯಂಗಳು. ಅವರೊಳಗೆ ಮುಖ್ಯಮಾದ 'ತತ್ವಮಸಿ' ಎಂಬ ಮಹಾವಾಕ್ಯಕ್ಕೆ **ತತ್ ತ್ವಂ ಅಸಿ** ಎಂಬ ಪದತ್ರಯಂಗಳು. ಅವಕ್ಕೆ ಶಿವ ಜೀವ ತದುಭಯೈಕ್ಯಮೆಂಬವೆ ಕ್ರಮದಿಂದರ್ಥತ್ರಯಂಗಳಕ್ಕುಂ. ೧೩೨

ವಾಕ್ಯಾರ್ಥ ಸಂಬಂಧ ತ್ರಯ :

ಬಳಿಕ ಪದ, ಪದಾರ್ಥ, ವಾಕ್ಯಾರ್ಥಂಗಳಿಗೆ, ಸಮಾನಾಧಿಕರಣ ಸಂಬಂಧ, ವಿಶೇಷಣ-ವಿಶೇಷ್ಯ ಸಂಬಂಧ, ಲಕ್ಷ್ಯ-ಲಕ್ಷಣ ಸಂಬಂಧವೆಂಬವೆ ಕ್ರಮದಿಂ ಸಂಬಂಧತ್ರಯಂಗಳಕ್ಕುಂ. ೧೩೩

ತತ್ತ್ವಂ ಪದವಾಚ್ಯಾರ್ಥ :

ಬಳಿಕ ಆ ಪದಾರ್ಥಂಗಳಿಗೆ ವಾಚ್ಯಾರ್ಥ ಲಕ್ಷ್ಯಾರ್ಥವೆಂದು ಅರ್ಥದ್ವಯಂಗಳು, ಅವರಲ್ಲಿ,

ಪೂರ್ವೋಕ್ತ ಸ್ಥೂಲಾದಿ ತನುತ್ರಯ ಸಮಷ್ಟಿರೂಪರಾದ ವಿರಾಟ್ಪುರುಷ, ಹಿರಣ್ಯಗರ್ಭ, ಈಶ್ವರರುಗಳನು, ಬ್ರಹ್ಮವನು ಕೂಡಿ ತಪ್ತಾಯ ಪಿಂಡದಂತೆ ಏಕಾಕಾರಮಾಗಿ ಕಾಣ್ಬುದೇ 'ತತ್' ಪದಕ್ಕೆ ವಾಚ್ಯಾರ್ಥವೆಂದು, ಮುಖ್ಯಾರ್ಥವೆಂದು ಅಭಿದಾನಾರ್ಥವೆಂದೆನಿಸೂದು.

ಬಳಿಕ ತನುತ್ರಯ ವ್ಯಷ್ಟಿರೂಪರಾದ ವಿಶ್ವ ತೈಜಸ ಪ್ರಾಜ್ಞರುಗಳನು ಪ್ರತ್ಯಗಾತ್ಮನನು ಕೂಡಿ ತಪ್ತಾಯ ಪಿಂಡದಂತೆ ಒಂದೆಂದು ಕಂಡಲ್ಲಿ 'ತ್ವಂ' ಪದಕ್ಕೆ ವಾಚ್ಯಾರ್ಥವೆಂದು, ಮುಖ್ಯಾರ್ಥವೆಂದು ಅಭಿದಾನಾರ್ಥವೆಂದು ಎನಿಸೂದು. ೧೩೪

ತತ್ತ್ವಂ ಪದ ಲಕ್ಷ್ಯಾರ್ಥ :

ಬಳಿಕ ವಿರಾಟ್ಪುರುಷರಾದಿಗಳಂ ಬೇರ್ಪಡಿಸಿದ ನಿರುಪಾಧಿಕ ಬ್ರಹ್ಮವೇ ತತ್ ಪದಕ್ಕೆ ಲಕ್ಷ್ಯಾರ್ಥವೆಂದು, ಶೋಧಿತ ತತ್ ಪದಾರ್ಥವೆಂದೆನಿಸೂದು. ಮತ್ತಂ ಆ ವಿಶ್ವಾದಿಗಳಂ ಪೃಥಕ್ಕರಿಸಿದ ನಿರುಪಾಧಿಕ ಪ್ರತ್ಯಗಾತ್ಮನೇ ತ್ವಂ ಪದಕ್ಕೆ ಲಕ್ಷ್ಯಾರ್ಥವೆಂದು ಶೋಧಿತ ತ್ವಂ ಪದಾರ್ಥವೆಂದೆನಿಸುತಿರ್ಪುಂ. ೧೩೫

ಲಕ್ಷಣಾ ಭೇದ :

ಬಳಿಕ ಲಕ್ಷಣಂ ಜಹಲ್ಲಕ್ಷಣೆ ಅಜಹಲ್ಲಕ್ಷಣೆ, ಜಹದಜಹಲ್ಲಕ್ಷಣೆಯೆಂದು ತ್ರಿವಿಧಮಾಗಿರ್ಪುವು. ಅವಕ್ಕೆ:

"ಗಂಗಾಯಾಂ ಘೋಷಃ ಪ್ರತಿವಸತಿ"
"ಕುಂತಾಃ ಪ್ರವಿಶಂತಿ"
"ಸೋಽಯಂ ದೇವದತ್ತಃ" ಎಂಬವೇ ಕ್ರಮದಿಂದ
ಉದಾಹರಣ ತ್ರಯಂಗಳು ಅವರಲ್ಲಿ ೧೩೬

ಜಹಲ್ಲಕ್ಷಣೆ :

ಗಂಗಾಶಬ್ದವೆ ಪ್ರವಾಹರೂಪಮಾದ ತನ್ನ ಮುಖ್ಯಾರ್ಥಮಂ, ಘೋಷವೆಂಬ ಗೊಲ್ಲವಳ್ಳಿಗೆ ಆಶ್ರಮತ್ವಂ ಘಟಿಸದಾಗಿ ಬಿಟ್ಟು ತೀರಮಂ ಲಕ್ಷಸುತ್ತಿಹುದು. ೧೩೭

ಅಜಹಲ್ಲಕ್ಷಣೆ :

ಬಳಿಕ ಕುಂತ ಶಬ್ದವೆ ತನ್ನ ಮುಖ್ಯಾರ್ಥಮಂ ಬಿಡದೆ ಕುಂತಧಾರಿಗಳಾದ ಪುರುಷರಂ ಲಕ್ಷಿಸುತ್ತಿಹುದು. ೧೩೮

ಜಹದಜಹಲ್ಲಕ್ಷಣೆ :

ಬಳಿಕ 'ಸಃ' ಎಂಬುವ ಶಬ್ದವೇ ಭೂತಕಾಲ, ದೇಶ, ವಯೋವಿಶಿಷ್ಟನಾದ ದೇವದತ್ತನಂ ಪೇಳ್ವುದು. 'ಅಯಂ' ಎಂಬ ಶಬ್ದವೇ ವರ್ತಮಾನಕಾಲ, ದೇಶ ವಯೋ ವಿಶಿಷ್ಟನಾದ ದೇವದತ್ತನಂ ಪೇಳ್ವುದು. ಇಂತುಭಯ ವಿರುದ್ಧ ಧರ್ಮಮುಳ್ಳ ಪದಾರ್ಥಂಗಳಿಗೆ ಐಕ್ಯತೆ ಘಟಿಸದಿರೆ, ಬಳಿಕ ಆ ಉಭಯ ಪದಾರ್ಥಗತ ವಿರುದ್ಧ ಧರ್ಮಾಂಶಮಂ ಬಿಟ್ಟು, ಅವಿರುದ್ಧ ಧರ್ಮಾಂಶಮಾದ ದೇವದತ್ತ ಮಾತ್ರವನೆ ಸ್ವೀಕರಿಸೆ, ಬಳಿಕ ಆತನೇ ಈತನು, ಈತನೇ ಆತನು ಎಂದು ಇಂತು ತಾದಾತ್ಮ್ಯಂ ಘಟಿಸುಗುಂ. ಇದೇ ಜಹದಜಹಲ್ಲಕಣೆಯೆಂದು, ಅರ್ಥಲಕ್ಷಣೆಯೆಂದು, ಭಾಗತ್ಯಾಗಲಕ್ಷಣೆ ಎಂದು ಪರ್ಯಾಯ ನಾಮಂಗಳುಳ್ಳುದಾಗಿಹುದಾಗಿ, ತತ್ವಮಸಿ ಎಂಬ ವಾಕ್ಯದಲ್ಲಿ ಉದಾಹರಣಮಾಗಿ ಇದೊಂದು ಪೇಳಲು ಯೋಗ್ಯವದೆಂತೆನೆ. ೧೩೯

ತತ್ತ್ವಮಸ್ಯಾರ್ಥ:

'ತತ್' ಎಂಬ ಪದವೇ ವಾಚ್ಯಾರ್ಥಮಾದ ಸರ್ವಜ್ಞತ್ವಾದಿ ಸದ್ಗುಣ ವಿಶಿಷ್ಟನಪ್ಪ ಪರೋಕ್ಷನಾದ ಶಿವನಂ ಪೇಳ್ವುದು.

'ತ್ವಂ' ಎಂಬ ಪದವೇ ವಾಚ್ಯಾರ್ಥಮಾದ ಕಿಂಚಿಜ್ಞತ್ವಾದಿ ಹೀನ ಗುಣ ವಿಶಿಷ್ಟನಪ್ಪ ಅಪರೋಕ್ಷನಾದ ಜೀವನಂ ಪೇಳ್ವುದು.

ಇಂತು ಉಭಯ ವಿರುದ್ಧ ಧರ್ಮಮುಳ್ಳ ಪದಾರ್ಥಂಗಳಿಗೆ ಏಕತ್ವಂ ಘಟಿಸದಾಗಿ, ಬಳಿಕಾ ಉಭಯ ಪದಾರ್ಥಗತ ಪರೋಕ್ಷತ್ವ ಅಪರೋಕ್ಷತ್ವಾದಿ ವಿರುದ್ಧ ಧರ್ಮಾಂಶಮಂ

ಬಿಟ್ಟು, ಅವಿರುದ್ಧಮಾದ ಚೈತನ್ಯಮಾತ್ರಮಪ್ಪ ಲಕ್ಷ್ಯಾರ್ಥಮಾದ ಬ್ರಹ್ಮಕೂಟಸ್ಥರಂ ಸ್ವೀಕರಿಸಿ, ಅದೇ ಇದು, ಇದೇ ಅದು ಎಂದು ಇಂತು ತಾದಾತ್ಮ್ಯಂ ಘಟಿಸುತ್ತಹುದು. ೧೪೦

ಬಳಿಕ "ಅಸಿ"ಎಂಬ ಪದವೇ ಉಭಯ ಲಕ್ಷ್ಯಾರ್ಥಂಗಳಲ್ಲಿಯ ಪರೋಕ್ಷತ್ವ ಅಪರೋಕ್ಷತ್ವಾದಿಗಳನ್ನು ಅವಿದ್ಯಾಕಲ್ಪಿತ ಮತವೆಂದು ಬೋಧಿಸುತ್ತಂ ಸಫಲವಹುದು. ಇಂತಾಗಲಾತ್ಮರಿಗೆ ಅಖಂಡೈಕರಸಬೋಧ ಮಾತ್ರವೇ ಸಿದ್ಧಮೆಂಬುದು ವಾಕ್ಯಾರ್ಥಮಕ್ಕುಂ. ೧೪೧

ಬಳಿಕ ಈ ತತ್ವಮಸಿಯೆಂಬ ಮಹಾವಾಕ್ಯದಲ್ಲಿ ಪ್ರತ್ಯಾಗಾತ್ಮ ಪರಮಾತ್ಮರಿಗೆ ಏಕತ್ವಮೆಂಬದಾದೊಡೆ, ಘಟಾದ್ಯುಪಾಧಿಯಂ ನೇತಿಗಳೆದು ಆಕಾಶಮೊಂದೇ ಎಂಬಂತೆ,

ರಾಮ ಚಂದ್ರನ ಮನುಜತ್ವಮಂ ಬಿಡಿಸಿ ನೀನೆ ವಿಷ್ಣುವೆಂಬಂತೆ;

ಕರ್ಣನ ವ್ಯಾಧ ಭಾವಮಂ ಬಿಡಿಸಿ ನೀನೇ ಕುಂತಿ ಪುತ್ರನೆಂಬಂತೆ;

ದಶಮ ಪುರುಷನ ಮರಣ ದುಃಖಮಂ ಬಿಡಿಸಿ ನೀನೇ ದಶಮನೆಂಬಂತೆ ಸ್ವಭಾವ ಸಿದ್ಧವು. ಅಲ್ಲದೆ, ೧೪೨

ವಾಕ್ಯಾರ್ಥ ಪ್ರತಿಪತ್ತಿ ನಿರಾಕರಣೆ :

ಬಳಿಕ ಒಂದು ಪೂವಿಗೆ ಸ್ವರ್ಗಮೆಂಬ ವಾಕ್ಯದಂತೆ ಮೋಕ್ಷದೊಳ್ ಆಪೇಕ್ಷೆಯಂ ಪುಟ್ಟಿಸುವ ಅರ್ಥವಾದವೆಂದು.

ಪ್ರತಿಮೆಯಂ ದೇವತಾಕೃತಿಯೆಂಬ ವಾಕ್ಯದಂತೆ ಉಪಾಸನಾ ಪರವೆಂದು,

ಮನುಜನಂ ದೇವೇಂದ್ರನೆಂಬ ವಾಕ್ಯದಂತೆ ಸ್ತುತಿ ಪರವೆಂದು,

ಆಳನರಸನೆಂಬ ವಾಕ್ಯದಂತೆ ಔಪಚಾರಿಕಮೆಂದು

ಅಗ್ನಿರ್ಮಾಣವಕನೆಂಬ ವಾಕ್ಯದಂತೆ ಗುಣಸಾದೃಶ್ಯಮೆಂದು

ಇದು ಗೋವಿನ ದೇಹಮೆಂಬ ವಾಕ್ಯದಂತೆ ಜಾತಿವ್ಯಕ್ತಪರಮೆಂದು

ಘಟಮೃತ್ತಿಕೆಗೆ ಅನನ್ಯವೆಂಬ ವಾಕ್ಯದಂತೆ ಕಾರ್ಯಕಾರಣಮೆಂದು

ನೀಲೋತ್ಪಲಮೆಂಬ ವಾಕ್ಯದಂತೆ ಗುಣಗುಣಿತ್ವಮೆಂದು

ಕ್ಷೀರದಧಿಗಳಿಗ ಭೇದಮೆಂಬ ವಾಕ್ಯದಂತೆ ವಿಕಾರಮೆಂದು

ವಾರಿ ಕಣಂಗಳಿಗೆ ಏಕಮೆಂಬ ವಾಕ್ಯದಂತೆ ಅಂಶಾಂಶಿಕಮೆಂದು

ಬಿಂಬ ಪ್ರತಿಬಿಂಬಗಳಿಗೆ ಐಕ್ಯಮೆಂಬ ವಾಕ್ಯದಂತೆ ಬಿಂಬ ಪ್ರತಿಬಿಂಬ ವಾದವೆಂದು, ಬಹುವಿಧದಿಂದೆ ಇಂತು ಭೇದಪರಮಾಗಿ ವಿಕಲ್ಪಿಸಿಪೇಳೆ ಶ್ರುತಿ ವಿರೋಧಮಕ್ಕುಂ. ೧೪೩

ಮಿಥ್ಯೆಯರಿತರೆ ಸತ್ಯಸಿದ್ಧಿ :

ಬಳಿಕ ಸಕಲ ಪ್ರಪಂಚಕ್ಕೆ ಮಿಥ್ಯತ್ವಮಂ ಪೇಳ್ವ ವೇದಾಂತ ಪಕ್ಷದಲ್ಲಿ ಶ್ರುತಿ ವಿಚಾರದಿಂದೆಂತು ಸತ್ಯವಾದ ಮುಕ್ತಿ ಘಟಿಪುದು, ಎಂದೊಡೆ:

ಭ್ರಾಂತಿಯಾದ ಸ್ವಪ್ನದಲ್ಲಿ ವನಿತಾ ಸಂಭೋಗಾದಿಕದಿಂ ಸತ್ಯಮಪ್ಪ ವೀರ್ಯಪತನಾದಿಕಮಂ;

ಕಲ್ಪಿತ ಶಿಲಾ ಭೈರವಾದಿ ದೇವತಾ ಭಜನೆಯಿಂ ತಥ್ಯಮಾದ ಸಂಪದಾದಿಸಿದ್ಧಿಗಳುಂ;

ಯಥಾರ್ಥವಲ್ಲದ ದರ್ಪಣ (ಕನ್ನಡಿ) ಪ್ರತಿಬಿಂಬಾದಿಗಳಿಂ ಸತ್ಯಮಾದ ಮುಖಲಾವಣ್ಯಾದಿಗಳುಂ

ದೃಷ್ಟಮಪ್ಪಂತೆ ಪ್ರಣವಾತ್ಮಕ ಶ್ರುತಿವಿಚಾರದಿಂ ಪರಮಾರ್ಥಮಾದ ಮುಕ್ತಿ ಸಿದ್ಧಿಯಕ್ಕುಂ. ೧೪೪

ಮುಕ್ತಿಗೆ ವಿಘ್ನತ್ರಯ :

ಬಳಿಕ, ಅಜ್ಞಾನ, ಸಂಶಯ, ವಿಪರೀತವೆಂಬವೆ ಮುಕ್ತಿಗೆ ವಿಘ್ನತ್ರಯಂಗಳು,

ಅವರಲ್ಲಿ ;

ನಾನು ಬ್ರಹ್ಮನಲ್ಲವೆಂಬುದೇ ಅಜ್ಞಾನವೆನಿಸೂದು.

ನಾನು ಬ್ರಹ್ಮವಹುದೋ ಅಲ್ಲವೋ ಎಂಬುದೇ ಸಂಶಯವೆನಿಸೂದು.

ಶ್ರುತಿಯುಕ್ತಿಗಳಿಂ ನಾನು ಬ್ರಹ್ಮವಹುದಾದೊಡಂ ಮುನ್ನಿನ ಜೀವಭಾವವೆನಗಿದೆ ಎಂಬುದೇ ವಿಪರೀತಮಕ್ಕುಂ. ೧೪೫

ವಿರೋಧತ್ರಯ :

ಬಳಿಕ, ಶ್ರವಣ, ಮನನ, ನಿಧಿಧ್ಯಾಸವೆಂಬವೇ ಕ್ರಮದಿಂ ಅಜ್ಞಾನಾದಿಗಳಿಗೆ ವಿರೋಧತ್ರಯಂಗಳು,

ಅವರಲ್ಲಿ : ೧. ಶ್ರುತಿ ವಿಚಾರದಿಂ ಸೂತಕಾದಿಗಳಲ್ಲಿ ದೃಢಬುದ್ಧಿಯಪ್ಪುದು ಎಂತಂತೆ. ಪ್ರತ್ಯಗಾತ್ಮ ಬ್ರಹ್ಮರಿಗೆ ಐಕ್ಯವೆಂಬುಪನಿಷದ್ವಾಕ್ಯ ತಾತ್ಪರ್ಯವನು ಅವಧರಿಸೂದೇ ಶ್ರವಣವೆನಿಸೂದು.

೨. ಆ ಶ್ರುತ್ಯರ್ಥವನೆ ಯುಕ್ತಿಯಂ ಚಿಂತನೆಗೆಯ್ಯುದೇ ಮನನವೆನಿಸೂದು.

೩. ಆ ಶ್ರವಣ ಮನನಂಗಳಂ ನಿಶ್ಚಿತಮಾದ ಅರ್ಥದಲ್ಲಿ ಚಿತ್ತ ನಿಶ್ಚಲ ಮಾಗಿಹುದೇ ನಿಧಿಧ್ಯಾಸಮಕ್ಕುಂ. ೧೪೬

ಸಹಕಾರಿ ಕಾರಣ :

ಬಳಿಕ ಇಲ್ಲಿ ಶ್ರವಣದಿಂದುತ್ಪನ್ನಮಾದ ಜ್ಞಾನದಿಂದ ಆತ್ಮ ಸಾಕ್ಷಾತ್ಕಾರಮಾಗಿಪ್ಪುದಾಗಿ, ಶ್ರವಣವೇ ಮುಖ್ಯವಪ್ಪುದರಿಂದ **ಅಂಗಿ** ಸನಿಸೂದು, ಮನನ ನಿಧಿಧ್ಯಾಸನಂಗಳು ಶ್ರವಣಕ್ಕೆ ಸಹಕಾರಿಗಳಪ್ಪುದರಿಂ ಮುಖ್ಯವಲ್ಲಾಗಿ **ಅಂಗಗಳಕ್ಕುಂ**. ಅದೆಂತೆನೆ : ಅರ್ಥ ಪ್ರಕಾಶಮಾದ ದೀಪದ ಚಂಚಲಾವಸ್ಥೆಯಲ್ಲಿ ಕಾರ್ಯಸಮರ್ಥವಿಲ್ಲಾಗಿ, ಬಳಿಕ ವಾಯುಸಂಚಾರಕ್ಕೆ ಮರೆಗಟ್ಟುವ ತೆರೆಯಂತೆ ಮನನ, ಅದರ ಬತ್ತಿಯನೆ ನೆರೆ ನೂಂಕಿ ಪ್ರಜ್ವಲಂ ಮಾಡುವಂತೆ **ನಿಧಿಧ್ಯಾಸ** ಮಕ್ಕುಂ. ೧೪೭

ಶ್ರುತಿ ತಾತ್ಪರ್ಯ ನಿರ್ಣಯಲಿಂಗ:

ಬಳಿಕ ಉಪಕ್ರಮ + ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ, ಅರ್ಥವಾದ, ಉಪಪತ್ತಿ ಎಂಬವೆ ಶ್ರವಣಕ್ಕೆ ಷಡ್ವಿಧಲಿಂಗ ತಾತ್ಪರ್ಯಂಗಳು,

ಅವರಲ್ಲಿ : ೧. ಸೃಷ್ಟಿಗಿಂ ಮೊದಲೀ ಜಗತ್ತು ಸದ್ರೂಪಬ್ರಹ್ಮವೇ ಆಗಿತ್ತೆಂದು. ಮತ್ತು ಆ ಬ್ರಹ್ಮಕ್ಕೆ ಸ್ವಗತಾದಿ ಭೇದತ್ರಯಮಂ ನಿವಾರಿಸುತ್ತ ಅಖಂಡೈಕರಸಮಂ ಪೇಳ್ವುದೇ ಉಪಕ್ರಮವೆನಿಸೂದು. ಬಳಿಕ, ನಾಮ ರೂಪಾತ್ಮಕ ಜಗತ್ತಿಗಾ ಬ್ರಹ್ಮದಲ್ಲಿ ಲಯಮಂ ಮಾಡಿ, ಪ್ರತ್ಯಗಾತ್ಮಂಗೆ ಆ ಬ್ರಹ್ಮದೊಡನೆ ಏಕತ್ವಮಂ ಬೋಧಿಸುತಾ ಬ್ರಹ್ಮಮದ್ವತಿಯುವೆಂದು ಪೇಳ್ವುದೇ ಉಪಸಂಹಾರಮೆನಿಸೂದು. ಈ ಉಪಕ್ರಮೋಪಸಂಹಾರವೆಂಬೆರಡೂ ಕೂಡಿ ಒಂದು ಲಿಂಗಮಕ್ಕುಂ.

೨. ಮತ್ತಂ, ಪ್ರತ್ಯಗಾತ್ಮವೇ ಬ್ರಹ್ಮವೆಂದು ಮರಳಿ ಮರಳಿ ಪೇಳ್ವುದೇ ಅಭ್ಯಾಸವೆನಿಸೂದು.

೩. ಮತ್ತಂ, ಪ್ರತ್ಯಗಾತ್ಮಂಗೆ ಪ್ರತ್ಯಕ್ಷಾದಿ ಪ್ರಮಾಣಾತೀತತ್ವಮಂ ಪೇಳ್ವುದೇ ಅಪೂರ್ವತೆಯೆನಿಸೂದು.

೪. ಮತ್ತಂ ಆತ್ಮನೋರ್ವವಂ ಅರಿಯಲ್ಪಡಲಾಗಿ, ಸರ್ವವೂ ಅರಿಯಲ್ಪಟ್ಟಿತ್ತೆಂದು ಪೇಳ್ವುದೇ ಫಲವೆನಿಸೂದು.

೫. ಮತ್ತಂ ಆ ಪ್ರತ್ಯಗಾತ್ಮರೂಪ ನಿರ್ವಿಕಾರ ಬ್ರಹ್ಮಕ್ಕೆ "ಸ್ಥಿತಸ್ಯ ಗತಿಶ್ಚಿಂತನೀಯ" ಎಂಬ ನ್ಯಾಯಮುಂಟಾಗಿ ಜಗತ್ತಿನ ಸೃಷ್ಟ್ಯಾದ್ಯನು ಪ್ರವೇಶಾಂತಮಾದ ಪಂಚಕೃತ್ಯ, ಕರ್ತೃತ್ವಮಂ ಪೇಳ್ವುದೇ ಅರ್ಥವಾದ (ಭೂತಾರ್ಥವಾದ) ವೆನಿಸೂದು.

ಮತ್ತಂ, ಘಟಕ್ಕೆ ಮೃತ್ತಿಕೆ, ತಂತುವಿಂಗೆ ಊರ್ಣನಾಭಿಯ ನಿಮಿತ್ತವೆಂಬಂತೆ, ಬ್ರಹ್ಮವೆ ಜಗತ್ಕಾರಣಮೆಂದು ಪೇಳ್ವುದೇ ಉಪಪತ್ತಿ (ದೃಷ್ಟಾಂತ) ಯಕ್ಕುಂ. ೧೪೮

ಮನನ ಸಾಮಗ್ರಿ :

ಬಳಿಕ, ಯುಕ್ತಿ ತರ್ಕ ಅನುಮಾನಂಗಳೇ ಮನನ ಸಹಾಯಗಳು, ಅವರಲ್ಲಿ: ಆತ್ಮರುಗಳನೇಕರಾಗಿ ವ್ಯಾಪಕರೆಂಬ ಸಾಂಖ್ಯಾದಿ ಮತದೊಳಾ ಸಮಸ್ತಾತ್ಮರ್ಗೆಯುಂ, ಪ್ರತ್ಯೇಕ ಶರೀರಂಗಳಲ್ಲಿ ಸಂಬಂಧ ಮಪ್ಪುದರಿಂದ ಈತಂಗೆಯೇ ಈ ಶರೀರಂ, ಭೋಗ ಸಾಧನವನ್ಯರ್ಗಾಗದೆಂದು ಭೋಗ ಸ್ಥಿತಿಯಂ ಪೇಳ್ವುದೇ ಘಟಿಸದು. ಬಳಿಕ ಎತ್ತಲಾನುಮೀತನು ಸುಕೃತಾದಿಕದಿಂಗಳಿಸಲ್ಪಟ್ಟುದಾಗಿ, ಈ ಶರೀರಂ ಈತಂಗಯೇ ಅನ್ಯರ್ಗಿಲ್ಲ ಎಂದೊಡೆ ಆ ಸುಕೃತಾದಿಕಮುಂ ಸರ್ವರಿಗೂ ಇಲ್ಲವೆಯೇನು? ಬಳಿಕ ಈತನ ಪೂರ್ವದೇಹಾಭಿಮಾನದಿಂ ಮಾಡಲ್ಪಟ್ಟ ಸುಕೃತಾದಿಕ ಮೀತನದೇ ಎಂದೊಡೆ ಆ ಅಭಿಮಾನಮುಂ ಪೂರ್ವದೇಹದಲ್ಲಿರ್ದ್ದ ಅನೇಕಾತ್ಮರ್ಗೆಯುಂ ಇಲ್ಲವೆಯೇನು?

ಬಳಿಕ ಈತನ ಪೂರ್ವದೇಹಾಭಿಮಾನದಿಂ ಮಾಡಲ್ಪಟ್ಟ ಸುಕೃತಾದಿಕಮೀತನದೇ ಎಂದೊಡೆ ಆ ಅಭಿಮಾನಮುಂ ಪೂರ್ವದೇಹದಲ್ಲಿರ್ದ್ದ ಅನೇಕಾತ್ಮರ್ಗೆಯುಂ ಇಲ್ಲವೆಯೇನು? ಬಳಿಕ ಇಂತು ಸರ್ವಸಾಂಕರ್ಯಮಾದ ಅನವಸ್ಥಾದೂಷಣಮಂ ನಿವಾರಿಸಲಶಕ್ಯವು : ಅದೆಂತೆನೆ. ಸರ್ವಾತ್ಮರು ಅನಾದಿಯಪ್ಪರಾಗಿ, ಬಳಿಕ ಏಕಾತ್ಮಪಕ್ಷದಲ್ಲಿ ಭೋಗವ್ಯವಸ್ಥೆ ಘಟಿಸದೆಂದು ನಾನಾತ್ಮಪಕ್ಷವನಾಶ್ರಯಸಿದೊಡೆ ಇಂತು ಭೋಗಸ್ಥಿತಿ ಘಟಿಸದಾಯಿತ್ತು. ಬಳಿಕ ಉಭಯಮತದಲ್ಲಿಯೂ ಈಶಂಕೆ ಸಮಾನಮೆಂದೊಡೆ, ಏಕಾತ್ಮಪಕ್ಷದಲ್ಲಿ ಬಿಂಬ ಪ್ರತಿಬಿಂಬ ನ್ಯಾಯದಿಂದ ಉಪಾಧಿಗಳಾದ ಅಂತಃಕರಣದಿಂ ಕಂಪ ಕಾಲುಷ್ಯಾದಿ ನಾನಾತ್ವದ ದೆಸೆಯಿಂ ವಿಚಿತ್ರ ಭೋಗಸ್ಥಿತಿ ಸುಲಭವೆಂಬುದೇ **ಯುಕ್ತಿ**ಯಕ್ಕುಂ. ೧೪೯

ಬಳಿಕ, ತರ್ಕ ಅನುಮಾನಂಗಳ ಲಕ್ಷಣಮಾದೊಡೆ, ಹರ್ಶಮಿಶ್ರಾಚಾರ್ಯರಾದಿಗಳಿಂ, ಖಂಡನಾದಿಗಳಲ್ಲಿ ಪ್ರಸಿದ್ಧಮಪ್ಪುದರಿಂದ ಇದು ಸುಖಾನುಭವ ಪ್ರಕರಣವಹುದಾಗಿಯುಂ, ಗ್ರಂಥಬಾಹುಲ್ಯಮಪ್ಪುದೆಂಬ ಭೀತಿಯಂ ಪ್ರತಿಪಾದಿಸಲ್ಪಟ್ಟುದಿಲ್ಲಂ. ೧೫೦

ನಿಧಿಧ್ಯಾಸನ ಪಂಚಯೋಗ :

ಬಳಿಕ ಮಂತ್ರಯೋಗ, ಸ್ಪರ್ಶಯೋರ್ಗ, ಭಾವಯೋಗ, ಅಭಾವಯೋಗ ಮಹಾಯೋಗವೆಂಬುವೆ ನಿಧಿಧ್ಯಾಸನರೂಪ ಯೋಗಪಂಚಕಂಗಳು,

ಅವರಲ್ಲಿ :

೧. ಪ್ರಣವಾದಿ ಮಂತ್ರಾನುಸಂಧಾನದಿಂ ಪರಮಾತ್ಮನಲ್ಲಿ ಮನೋಲಯವಹುದೇ ಮಂತ್ರಯೋಗವೆನಿಸೂದು.

೨. ಮತ್ತಂ ಆ ಮಂತ್ರಯೋಗ ಸಹಿತಮಾಗಿ ಮನಪವನಂಗಳೊಂದು ಗೂಡಿ ಮೂಲಾಧರದಿಂ ಸುಷುಮ್ನಾನಾಡಿಯು ಮಾರ್ಗದೊಳೆಯ್ದಿ, ಶಿರೋಮಧ್ಯಗತ ಪರಮಾತ್ಮ ತೇಜಸ್ಸಿನೊಳಾ ಮನೋಲಯವಹುದೇ ಸ್ಪರ್ಶಯೋಗವೆನಿಸೂದು.

೩. ಮತ್ತಂ, ಮೊದಲು ಸ್ವರ್ಗವೇ ಮೂರ್ಧ್ನಿ (ತಲೆ), ದಿಕ್ಕೇಶ್ರೋತ್ರಂ, ಚಂದ್ರಾರ್ಕರೇ ನೇತ್ರ, ಅಗ್ನಿಯೇ ಮುಖ, ಅಂತರಿಕ್ಷವೇ ನಾಭಿ, ಭೂಮಿಯೇ ಪಾದಂಗಳಾದ ಈಶ್ವರನ ವಿರಾಡ್ರೂಪಮಂ ನೆನೆದು, ಅಲ್ಲದೆ, ಪರಿಮಿತ ಭುಜಾಸ್ತ್ರಾಭರಣಾದಿ ಸಹಿತನಾದ ಈಶ್ವರನ ದಿವ್ಯಮೂರ್ತಿಯಂ ಪರಿಭಾವಿಸಿ, ಬಳಿಕದರವಯವಗಳೊಂದೊಂದಂ ಬಿಟ್ಟು ಉಳಿದ ಅವಯವಮಾತ್ರಮಾದ ಸದ್ರೂಪ ಬ್ರಹ್ಮನಲ್ಲಿ ಮನೋಲಯವಪ್ಪದೇ ಭಾವಯೋಗವೆನಿಸೂದು.

೪. ಮತ್ತಂ, ಕರಣಗೋಚರವಲ್ಲದ, ಪ್ರಮಾಣಾತೀತಮಪ್ಪ ನಿರುಪಾಧಿಕ ಬ್ರಹ್ಮದಲ್ಲಿ ಮನೋಲಯವಹುದೇ ಅಭಾವಯೋಗವೆನಿಸೂದು.

೫. ಮತ್ತಂ, ಜಗದುದಯ ಲಯಂಗಳಲ್ಲಿಯುಂ; ಅರಿದೆನು ಅರಿಯೆನು ಎಂಬಲ್ಲಿಯುಂ ತನಗಾವ ಹಾನಿಯು ಇಲ್ಲದೆ ಒಂದೇ ಪ್ರಕಾಶಮಾದ ಪ್ರತ್ಯಗಾತ್ಮರೂಪ ಬ್ರಹ್ಮದಲ್ಲಿ ಮನೋಲಯವಹುದೇ ಮಹಾಯೋಗಮಕ್ಕುಂ. ೧೫೧

ಪ್ರತಿಬಂಧತ್ರಯ:

ಬಳಿಕ ಭೂತ ಪ್ರತಿಬಂಧ, ವರ್ತಮಾನ ಪ್ರತಿಬಂಧ, ಆಗಾಮಿ ಪ್ರತಿಬಂಧವೆಂಬವೆ ಆತ್ಮಸಾಕ್ಷಾತ್ಕಾರಕ್ಕೆ ವಿರೋಧತ್ರಯಂಗಳು,

ಅವರಲ್ಲಿ : ೧. ಮೋಕ್ಷಾಪೇಕ್ಷೆಯಿಂ ಸರ್ವಸಂಗ ಪರಿತ್ಯಾಗಮಂ ಮಾಡಿ ಶ್ರೀ ಗುರುವನೆಯ್ದಿ ಶ್ರವಣಾದಿಕಮಂ ಮಾಡಿದೊಡಂ, ಮೊದಲು ಗೃಹಸ್ಥಾಶ್ರಮದಲ್ಲಿ ಸ್ವೀಕರಿಸಿರ್ದ ವನಿತಾದಿ ವಸ್ತುಗಳ ರೂಪ, ಯೌವನ, ಶೃಂಗಾರಾದಿ ಸದ್ಗುಣಂಗಳನುಭವದ ಸವಿಯೆ ಸಂಸ್ಕಾರ ಬಲದಿಂ ಬಂದು ಬಂದು ಮನವನಳ್ಳಿರಿದು ಅಡಿಗಡಿಗೆ ಚಿಂತೆಯಂ ಪುಟ್ಟಿಸುತ್ತಾ ಆತ್ಮ ಸಾಕ್ಷಾತ್ಕಾರವನಾಗಲೀಯದಿಹುದೇ ಭೂತ ಪ್ರತಿಬಂಧವೆನಿಸೂದು.

೨. ಮತ್ತಂ, ಜಡಬುದ್ಧಿ, ಜನಸಂಗರತಿ, ವಿಷಯಾಸಕ್ತಿ, ಕುತರ್ಕ, ಅಭಿಮಾನ, ಚಪಲತ್ವಾದಿಗಳುಂಟಾಗಿ ತತ್ತ್ವ ವಿಚಾರಂಗೆಯ್ದೊಡಂ ಆತ್ಮಸಾಕ್ಷಾತ್ಕಾರವನಾಗಲೀಯದಿಹುದೇ ವರ್ತಮಾನ ಪ್ರತಿಬಂಧವೆನಿಸೂದು.

೩. ಮತ್ತಂ, ಮುಂದೆ ಕೆಲವು ಜನ್ಮಾಂತರವನಿತ್ತಲ್ಲದೆ ತೀರದು ಆ ಪ್ರಾರಬ್ಧವಿಶೇಷಮೆಂಬ, ಬ್ರಹ್ಮಾದಿ ಲೋಕವಾಂಛೆಯೆಂಬ ದೋಷದ್ವಯ ಯುಕ್ತವಾಗಿರ್ದು ವೇದಾರ್ಥವನರಿದಿರ್ದೊಡಂ ಆತ್ಮಸಾಕ್ಷಾತ್ಕಾರವಾಗಲೀಯದಿಹುದೇ ಆಗಾಮಿ ಪ್ರತಿಬಂಧಮಕ್ಕುಂ. ೧೫೨

ಪ್ರತಿಬಂಧ ನಿವರ್ತಕ:

ಬಳಿಕ ಪ್ರತಿಬಂಧತ್ರಯಮಂ ಜಯಿಸಲೋಸುಗಮಾಗಿ ಜ್ಞಾನ, ವೈರಾಗ್ಯ, ಉಪರತಿಗಳೆಂಬ ಮುಖಸಾಧನಂಗಳನೆ ಬಿಡದೆ ಅಭ್ಯಾಸಂಗೆಯ್ವುದಕ್ಕೆ: ಕಾರಣ, ಸ್ವರೂಪು, ಕಾರ್ಯವೆಂಬ ಮೂರು ಲಕ್ಷಣಂಗಳಂ ಕ್ರಮದಿಂ ಬೇರೆ ಬೇರೆ ಪೇಳ್ವೆನದೆಂತೆಂದೊಡೆ. ೧೫೩

ಜ್ಞಾನಾದಿಗಳ ಲಕ್ಷಣ :

ಜ್ಞಾನಕ್ಕೆ ಶ್ರವಣಾದಿಕವೇ ಕಾರಣವಹುದು. ಆತ್ಮಾಹಂಕಾರಗಳ ಅಧ್ಯಾಸೈಕ್ಯಮಂ ಬೇರ್ಪಡಿಸೂದೇ ಸ್ವರೂಪವಹುದು. ಬಳಿಕ ಅಹಂಕಾರಗತ ಸಂಸಾರ ಸಾಕ್ಷಿತ್ವವೇ ಕಾರ್ಯಮಕ್ಕುಂ. ವೈರಾಗ್ಯಕ್ಕೆ ವನಿತಾದಿ ವಿಷಯಂಗಳ ಅನಿತ್ಯತ್ವಾದಿ ದೋಷದರ್ಶನವೇ ಕಾರಣವಹುದು. ಮೇಲಾವ ಪ್ರಕಾರದಿಂದಾದೊಡವನ್ನು ಬಿಡುವುದೇ ಸ್ವರೂಪವಹುದು. ಬಳಿಕ ಆ ವಿಷಯಂಗಳಿಗೆರಗದಿಹುದೇ ಕಾರ್ಯಮಕ್ಕುಂ. ಬಳಿಕ ಉಪರತಿಗೆ ಯಮನಿಯಮಾದ್ಯಷ್ಟಾಂಗ ಯೋಗವೇ ಕಾರಣವಹುದು. ಚಿತ್ತವು ಅಂತರಂಗದೊಳೇಕಾಗ್ರತೆಯಾದುದೇ ಸ್ವರೂಪವಹುದು. ಮತ್ತೆ ಬಾಹ್ಯಕರ್ಮಕ್ಕೆರಗದಿಹುದೇ ಕಾರ್ಯಮಕ್ಕುಂ. ೧೫೪

ಜ್ಞಾನಾಧಿಗಳಿಗವಧಿ :

ಬಳಿಕ ಇವರಲ್ಲಿ ದೇಹ ಆತ್ಮಭಾವವಳವಟ್ಟಂತೆ ಬ್ರಹ್ಮವೇ ತಾನೆಂಬ ದೃಢಬುದ್ಧಿಯೇ ಜ್ಞಾನಕ್ಕವಧಿ. ಬ್ರಹ್ಮಲೋಕಾದಿ ತೃಣೀಕಾರವೇ ವೈರಾಗ್ಯಕ್ಕೆ ಅವಧಿ. ಸುಷುಪ್ತನಂತೆ ಸಕಲಕಾರ್ಯ ವಿಸ್ಮರಣವೇ ಉಪರತಿಗವಧಿಯಕ್ಕುಂ. ೧೫೫

ಮೋಕ್ಷ ಕಾರಣ :

ಬಳಿಕ ಅವರೋಳಗೆ ಜ್ಞಾನ ವೈರಾಗ್ಯ ಉಪರತಿಗಳೆಂಬ ಮೂರೂ ಸಿದ್ಧಿಸಿದೊಡೆ ಆತಂಗೆ ಅದು ಮಹಾತಪಸ್ಸಿನ ಫಲ. ಅದು ಅಂತಿರ್ಕೆ (ಅದು ಹಾಗಿರಲಿ), ಮತ್ತೆ, ವೈರಾಗ್ಯ ಉಪರತಿಗಳೆಂಬೆರಡುಂ ಸಂಪೂರ್ಣಮಾಗಿರ್ದು, ಜ್ಞಾನಮೊಂದಿಲ್ಲದಿರ್ದೊಡೆ, ಆತಂಗೆ ಮುಕ್ತಿಯೇ ಘಟಿಸದು. ಆತಂಗೆ ಮಹಾ ಸುಖಸ್ಥಾನಮಾದ ಊರ್ಧ್ವ ಲೋಕ ಪ್ರಾಪ್ತಿಯಹುದು. ಮರಳಿ, ಜ್ಞಾನ ಮೊಂದಿರ್ದು ವೈರಾಗ್ಯ ಉಪರತಿಗಳಿಲ್ಲದಿರಲಾಗಿ, ಆತಂಗೆ, ಮರದ ಕೊನೆ ಮುರಿದೊಡೆ ಅಲ್ಲಿರುತಿರ್ದ ಮನುಜಂಗೆ ಪತನೇಚ್ಛೆಯಿಲ್ಲದೊಡಂ ಬೀಳ್ವಂತೆ, ದೇಹಾವಸಾನದಲ್ಲಿ ಮುಕ್ತಿಯೇ ಅಹುದು. ಪ್ರಾರಬ್ಧ ಜನಿತ ದುಃಖಾನುಭವಮುಂಟೆಂಬುದೇ ಸತ್ಯಮಕ್ಕುಂ. ೧೫೬

ಸಪ್ತಜ್ಞಾನ ಭೂಮಿಕೆ ಮತ್ತು ಕ್ರಮ :

ಬಳಿಕ ಶುಭೇಚ್ಛೆ, ವಿಚಾರಣೆ, ತನುಮಾನಸಿ, ಸಂಸಕ್ತಿ, ಸತ್ವಾಪತ್ತಿ, ಪದಾರ್ಥ ಭಾವನೆ, ತುರ್ಯಗಾಮಿ ಎಂಬವೆ ಸಪ್ತ ಜ್ಞಾನ ಭೂಮಿಕೆಗಳು.

ಅವರಲ್ಲಿ :

೧. ನಾನು ಮೂಢನಾಗಿಹ ಕಾರಣವೇನು, ಶ್ರುತಿ, ಗುರುಗಳಿಂದ ಅರಿಯಬೇಕೆಂಬುದೇ ಶುಭೇಚ್ಛೆಯೆನಿಸೂದು.

೨. ಗುರು, ಶಾಸ್ತ್ರಾದಿಗಳಿಂ ಜನಿಸಿದ ಕಿಂಚಿದ್ವೈರಾಗ್ಯ ಬಲದಿಂ ಸದಾಚಾರ ಪ್ರವೃತ್ತಿಯೇ ವಿಚಾರಣೆಯೆನಿಸೂದು.

೩. ಬಳಿಕ ಶುಭೇಚ್ಛೆ ವಿಚಾರಣೆಗಳ ಬಲದಿಂ ವಿಷಯಾಸಕ್ತಿ ಕೆಡುವುದೇ ತನುಮಾನಸಿಯೆನಿಸೂದು.

೪. ಬಳಿಕ ಭೂಮಿಕಾತ್ರಯದ ಅಭ್ಯಾಸ ಸಾಮರ್ಥ್ಯದಿಂ ಜಾಗ್ರತ್ ಪ್ರಂಚಮೆಲ್ಲಮಂ ಕನಸೆಂದು ಕಂಡು ಆತ್ಮನ ಸನ್ಮಾತ್ರಾನುಸಂಧಾನವೇ ಸತ್ವಾಪತ್ತಿಯೆನಿಸೂದು.

೫. ಬಳಿಕ ಸಕಲ ಪ್ರಪಂಚದ ತೋರಿಕೆಯುಡಗಿ ಸುಷುಪ್ತನಂತೆ ಆತ್ಮಚಿನ್ಮಾತ್ರಾವಶಿಷ್ಟತ್ವವೇ ಸಂಸಕ್ತಿಯೆನಿಸೂದು.

೬ ಬಳಿಕ ಸರ್ವವಾಸನಾ ವಿಲಯದಿಂ ಗಾಢ ನಿದ್ರಿತನಂತೆ ಆನಂದಾತ್ಮಲೀನತೆಯೆ ಪದಾರ್ಥ ಭಾವನೆಯೆನಿಸೂದು.

೭ ಮೇಲೆ ಉಂಟೆನಿಸದೆ ಇಲ್ಲೆನಿಸದೆ ಅಹಂಕೃತಿ ನಿರಹಂಕೃತಿದೋರದೆ ಕೇವಲ ಜ್ಞಪ್ತಿರೂಪಮಾದ ಅದ್ವೈತ ಪದದಲ್ಲಿ ಬಯಲು ಬರುಗೊಡದಂತೆ ಒಳಹೊರಗೆ ಶೂನ್ಯಮಾಗಿರ್ಪುದೇ ತುರ್ಯಗಾಮಿಯಕ್ಕುಂ. ೧೫೭

ಷಟ್ಸಮಾಧಿಗಳು :

ಮತ್ತಂ ಆ ಉಪರತಿಗಳಿಗನುಸಾರಿಗಳಾದ ದೃಶ್ಯಾನುವೇದ, ಶಬ್ದಾನುವೇದ, ನಿರ್ವಿಕಲ್ಪವೆಂಬವೆ ಬಾಹ್ಯ-ಅಭ್ಯಾಂತರ ಭೇದದಿಂ ಷಟ್ಸಮಾಧಿಗಳು,

ಅವರಲ್ಲಿ : ಬಾಹ್ಯದ ಸಮಾಧಿಗಳು.

೧. ಘಟಾದಿ ವಿಷಯಜಾತದೊಳಾವುದಾನೊಂದುವನಾದರೂ, ಕೂರ್ತು ಅದರ ನಾಮರೂಪಂಗಳೆಂಬ ಮಾಯಾಂಶಂಗಳೆರಡನೂ ಪಿರಿಚಿ ಮತ್ತದರೊಳು ಅಸ್ತಿ ಭಾತಿ ಪ್ರಿಯಂಗಳೆಂಬ ಬ್ರಹ್ಮಾಂಶತ್ರಯಂಗಳನು ಅನುಸಂಧಾನಂಗೆಯ್ವುದೇ ಬಾಹ್ಯದ ದೃಶ್ಯಾನುವೇದವೆಂಬ ಸವಿಕಲ್ಪ ಸಮಾಧಿಯೆನಿಸೂದು.

೨. ಮತ್ತಂ ಅಖಂಡ ಸಚ್ಚಿದಾನಂದ ಅದ್ವಿತೀಯ ಸ್ವರೂಪಮಾದುದೇ ಬ್ರಹ್ಮವೆಂದು ಧ್ಯಾನಿಸುತ್ತಿಪ್ಪುದೇ ಬಾಹ್ಯದ ಶಬ್ದಾನುವೇದವೆಂಬ ಸವಿಕಲ್ಪ ಸಮಾಧಿಯೆನಿಸೂದು.

೩. ಆ ಸಮಾಧಿದ್ವಯದ ಅಭ್ಯಾಸಬಲದಿಂದಾದ ಬ್ರಹ್ಮಾನಂದದ ಆಸ್ವಾದನದಲ್ಲಿಯೇ ಮನೋಮಗ್ನವಾಗಿ ನಿಸ್ತರಂಗಸಮುದ್ರದಂತೆ ನಿಶ್ಚಲಾತ್ಮಕವಾಗಿಪ್ಪುದೇ ಬಾಹ್ಯದ ನಿರ್ವಿಕಲ್ಪ ಸಮಾಧಿಯಕ್ಕುಂ.

ಅಭ್ಯಂತರ ಸಮಾಧಿಗಳು

೧. ಬಳಿಕ ಮನೋಗತಕಾನು ಸಂಕಲ್ಪಾದಿಗಳೇ ದೃಶ್ಯಂಗಳು, ತಾನವರ್ಗೆ ಸಾಕ್ಷಿಕನೆಂಬ ಅನುಸಂಧಾನವೆ ಅಭ್ಯಂತರದ ದೃಶ್ಯನುವೇದವೆಂಬ ಸವಿಕಲ್ಪ ಸಮಾಧಿಯೆನಿಸೂದು.

೨. ಮತ್ತಂ ಅಸಂಗ ಸಚ್ಚಿದಾನಂದ ಸ್ವಪ್ರಕಾಶಾದ್ವಯ ಸ್ವರೂಪವೇ ತಾನೆಂದು ಚಿಂತನಗೇಯ್ವುದೇ ಅಭ್ಯಂತರದ ಶಬ್ದಾನುವೇದವೆಂಬ ಸವಿಕಲ್ಪ ಸಮಾಧಿಯೆನಿಸೂದು.

೩. ಮತ್ತಂ, ಆ ಸ್ವಾನುಭೂತಿ ರಸಾವೇಶದಿಂದಾ ದೃಶ್ಯಶಬ್ದಂಗಳೆರಡನು ಉಳಿದು ನಿವಾತಸ್ಥಿತ ದೀಪದಂತೆ ನಿಸ್ಪಂದರೂಪಮಾಗಿಹುದೇ ಅಭ್ಯಂತರದ ನಿರ್ವಿಕಲ್ಪ ಸಮಾಧಿಯೆನಿಸೂದು. ೧೫೯

ಜ್ಞಾನಫಲ ಚತುಷ್ಟಯ :

ಬಳಿಕ ದುಃಖಾಭಾವ, ಸರ್ವಕಾಮಾಪ್ತಿ, ಕೃತಕೃತ್ಯತ್ವ, ಪ್ರಾಪ್ಯಪಾಪ್ತಿತ್ವಗಳೆಂಬವೆ ಜ್ಞಾನಫಲ ಚತುರ್ವಿಧಂಗಳು, ಅವರಲ್ಲಿ :

೧. ದುಃಖಾಭಾವಮೆಂಬುದಿಹ ಪರಲೋಕ ಭೇದದಿಂದ ಇತ್ತೆರನಾಗಿಹುದು, ಅವರೊಳಗೆ, ಸ್ಥೂಲಶರೀರದಲ್ಲಿ ಕುರೂಪತ್ವ, ದುರ್ಗಂಧತ್ವ, ವ್ಯಾಧ್ಯಾದಿಗಳುಂ; ಸೂಕ್ಷತನುವಿನಲ್ಲಿ ತೋರುವ ಕಾಮಕ್ರೋಧಾದಿಗಳುಂ; ಕಾರಣದೇಹದಲ್ಲಿ ಆದಿ ವ್ಯಾಧಿಗಳಿಗೆ ಬೀಜಭೂತಮಾದ ಸಂಸ್ಕಾರಂಗಳುಮೆಂಬ ತ್ರಿವಿಧ ಸಂತಾಪವೇ ಇಹಲೋಕ ದುಃಖವಹುದು. ಅಲ್ಲಿ ಮಿಥ್ಯಾತ್ಮಕ ಮಾಯಾ ಕಾರ್ಯಮಾದ ಶರೀರಾದಿಗಳತ್ತಣಿಂ ಬೇರ್ಪಡಿಸಲ್ಪಟ್ಟ ಅದ್ವಿತೀಯನಾದ ಪ್ರತ್ಯಗಾತ್ಮಜ್ಞಾನದಿಂ, ಮೇಲೆ ಪರಮಾರ್ಥಮಾದ

ಭೋಗ ಭೊಕ್ತೃಗಳಿಲ್ಲಾಗಿ ಜ್ಞಾನಿಗೆ ಆ ದುಃಖತ್ರಯ ಸಂಬಂಧಮಿಲ್ಲದಿರಲದೇ **ಇಹಲೋಕ** ದುಃಖಾಭಾವವೆನಿಸೂದು.

ಬಳಿಕ ಪುಣ್ಯವೆಂತು ಬರ್ಪುದೋ, ಪಾಪವೆಂತುಪೋಪುದೋ ಎಂಬ ಚಿಂತೆಯೇ ಪರಲೋಕ ದುಃಖವಹುದು. ಅಲ್ಲಿ ಸಮ್ಯಜ್ಞಾನಾಂತರದಲ್ಲಿ ಕಮಲ ಪತ್ರೋದಕದಂತೆ ಜ್ಞಾನಿಗೆ ಆ ಕರ್ಮದ್ವಯ ಲೇಪವಿಲ್ಲಾಗಿಯುಂ, ದಾವ ವಡಸಿದ ನಗವನಾವ ಮೃಗ ಪಕ್ಷಿಗಳು ಪುಗದಂತೆಜ್ಞಾನಾಗ್ನಿಮಯನಂ ಸುಕೃತಾದಿಗಳ್ ಸೋಂಕಲಮ್ಮವಾಗಿಯುಂ, ಅದರಿಂದಾ ಚಿಂತೆದೋರದಿಹುದೇ **ಪರಲೋಕ** ದುಃಖಾಭಾವಮಕ್ಕುಂ. ೧೬೦

೨. **ಸರ್ವಕಾಮಾಪ್ತಿ :** ಮತ್ತಂ ಸರ್ವೈಶ್ವರ್ಯ ಸಂಪನ್ನನಾದ ಸಾರ್ವಭೌಮಾದಿ ಹಿರಣ್ಯಗರ್ಭಾಂತವಪಾದ ಉತ್ತರೋತ್ತರವಪಾಗಿ ಬಂಸುಸಲ್ತಕ್ಕ ಶತಗುಣೋತ್ತರಾನಂದಂಗಳೆಲ್ಲಂ ನಿಷ್ಪೃಹನಾದ ವಿವೇಕಿಗುಂಟಾಗಿಯುಂ, ಬಳಿಕ ಆನಂದಂಗಳೆಲ್ಲಂ ಜ್ಞಾನದಿಂದರಿಯಲ್ಪಟ್ಟ ಬ್ರಹ್ಮಾಂಶಂಗಳಪ್ಪುದರಿಂದ ಆತಂಗೆ ಅಖಂಡಾನಂದ ಸಿದ್ಧಿಸಿತ್ತಾಗಿಯುಂ ಅದೇ ಸರ್ವಕಾಮಾಪ್ತಿಯೆನಿಸೂದು. ೧೬೧

೩. **ಕೃತಕೃತ್ಯತ್ವ :** ಮತ್ತಂ ಆ ವಿವೇಕಿಗೆ ತತ್ತ್ವಜ್ಞಾನಕ್ಕುಂ ಮೊದಲೇ ಇಹಲೋಕ ಸಂಬಂಧಮಾದ ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿಗೊಸುಗ, ಕೃಷಿ ವಾಣಿಜ್ಯಾದಿಕಮಂ, ಸ್ವರ್ಗಾದಿ ಸಿದ್ಧಿಗೋಸುಗ ಯೋಗೋಪಾಸನಾದಿಕಮಂ, ಮೋಕ್ಷ ಸಾಧನ ಸಿದ್ಧಿಗೋಸುಗ ಶ್ರವಣಾದಿಕಮೆಂಬ ತ್ರಿವಿಧಂ ಕರ್ತವ್ಯಮಾಗಿಹುದು ಈಗಳೀ ತತ್ತ್ವಜ್ಞಾನಾಂತರದಲ್ಲಿ ಆದೊಡೆ, ಸಾಂಸಾರಿಕ ಫಲ ಭೋಗೇಚ್ಚೆ ಇಲ್ಲಾಗಿ, ಕೃಷಿ ಮೊದಲಾದ ವ್ಯಾಪಾರವಿಲ್ಲಂ. ಬಳಿಕ ಗವಾಕ್ಷಗತ ಸೂರ್ಯಕಿರಣದಲ್ಲಿ ತೋರ್ಪ ಪರಮಾಣುಗಳಾಟವು, ಬಯಲ ಮಹಾಬೆಳಗಿನಲ್ಲಿ ಕಾಣಿಸದಂತೆ, ಅಲ್ಪ ಜ್ಞಾನಿಗಳ ವಿಷಯಮಾದ ಕರ್ಮವೆಲ್ಲಂ ಸಮ್ಯಜ್ಞಾನಿಗಳ ಮಧ್ಯದಲ್ಲಿ ತೋರದಿರ್ಪುದರಿಂದ ಅನುಷ್ಠಿಸಲ್ ತಕ್ಕುದಿಲ್ಲಾಗಿ ಯಾಗಾದಿ ವಾಂಛೆದೋರದು. ಬಳಿಕ ಬ್ರಹಾಂಡ ಸಾಕ್ಷಾತ್ಕಾರವಾಯಿತ್ತಾಗಿ ಶ್ರವಣಾದಿಕವೆಲ್ಲಂ ಕೃತಪ್ರಯವಹುದು. ಇಂತಿದೇ ಕೃತಕೃತ್ಯತ್ವವೆನಿಸೂದು. ೧೬೨

೪. **ಪ್ರಾಪ್ಯಪ್ರಾಪ್ತಿತ್ವ :** ಮತ್ತಂ ತನಗೆ ವಿಶಿಷ್ಟ ಪುಣ್ಯ ಪರಿಪಾಕ, ಮುಮುಕ್ಷುತ್ವ, ಗುರೂಪಾಸ್ಥೆ, ಶಾಸ್ತ್ರ ಶ್ರವಣ, ಆತ್ಮಾನಾತ್ಮವಿವೇಕ, ಆಜ್ಞಾವ ನಿವೃತ್ತಿ, ಆತ್ಮಸಾಕ್ಷಾತ್ಕಾರ, ಸಂಸಾರದುಃಖನಿವೃತ್ತಿ, ನಿಜಾನಂದಾದಿಗಳ ಸಿದ್ಧಿಯೇ ಪ್ರಾಪ್ಯ ಪ್ರಾಪ್ತಿತ್ವ ಮಕ್ಕುಂ. ೧೬೩

ಜೀವನ್ಮುಕ್ತಿ :

ಬಳಿಕ ಜೀವನ್ಮುಕ್ತಿ, ವಿದೇಹ ಕೈವಲ್ಯವೆಂಬವೆ ಮೋಕ್ಷದ್ವೈವಿಧಂಗಳವರಲ್ಲಿ, ವಿವೇಕಿಗೆ ಅಹಂ ಮತ್ತು ಆತ್ಮರ್ಗೆ ಅನ್ಯೋನ್ಯ ಸಂಬಂಧ ಲಕ್ಷಣ ಹೃದಯ ಗ್ರಂಥಿ ಶಿಥಿಲತೆಯುನೆಯ್ದುತ್ತಾಗಿ, ಪರಶರೀರದಲಿ ಎಂತಂತೆ, ಸ್ವಶರೀರದಲ್ಲಿಯೂ ದೃಢಾಭಿಮಾನವಿಲ್ಲಾಗಿ ಅನುಭವ ಸಾಮ್ಯಮಪ್ಪುದರಿಂ ಪ್ರಾರಬ್ಧಭೋಗ ಸಾಕ್ಷಾತ್ಕಾರಂ. ಮತ್ತಂ ಸುಪ್ತಬಾಲಾದಿಗಳಂತೆ ಮಂದಾನುಸಂಧಾನವಹುದರಿಂ ದೇಹಾದಿ ನಿರಭಿಮಾನತೆಯುಂ, ಘಟೋತ್ಪತ್ತಿಯಂ ಮೇಲೆ ಕುಲಾಲ ಚಕ್ರ ಭ್ರಮಣದಂತೆ

ತತ್ಪ್ರಾರಬ್ಧವಾಸನಾ ವಶದಿಂ ಬದುಕುತ್ತಿಹುದೇ ಜೀವನ್ಮುಕ್ತಿಯಕ್ಕುಂ. ೧೬೪

ಜೀವನ್ಮುಕ್ತಿ ಸಂಗತಿ :

ಬಳಿಕ ಬ್ರಹ್ಮಜ್ಞಾನೋದಯಾನಂತರದಲ್ಲಿಯೆ – ಸೂರ್ಯೋದಯದಿಂ ಕತ್ತಲೆ ಕೆಡುವಂತೆ – ಅಜ್ಞಾನದೊಡನದರ ಕಾರ್ಯಮಾದ ಶರೀರಾದಿಕವಳಿದು ವಿದೇಹ ಕೈವಲ್ಯಮಾಗದೆ, ಮಧ್ಯದಲ್ಲಿ ಜೀವನ್ಮುಕ್ತಿ ಕಲ್ಪನೆ ಎಂತೆಂದೊಡೆ, ವಿವೇಕದಿಂ ರಜ್ಜುವಿನಲ್ಲಿಯ ಸರ್ಪಭ್ರಾಂತಿ ಕೆಟ್ಟೊಡಂ ತತ್ಕಾರ್ಯವಾದ ಭಯ ಕಂಪನಾದಿಗಳಿರ್ಪಂತೆ, ಜ್ಞಾನದಿಂದಜ್ಞಾನ ಕೆಟ್ಟೊಡಂ ಅದರ ಕಾರ್ಯವಾದ ಶರೀರಾದಿಗಳಿಗೆ ಸ್ಥಿತಿಯುಂಟಾಗಿಯುಂ ಬ್ರಹ್ಮವಿದ್ಯೋತ್ಪತ್ತಿ ಸಮಯ ಕಾಲದೊಳ್ ನಿಶ್ಶೇಷಮಾಗಿ ಅಜ್ಞಾನದೊಡಗೂಡಿ ದೇಹ ಪಾತವಾಗೆ ಬ್ರಹ್ಮವಿದ್ಯಾ ಸಂಪ್ರದಾಯ ವಿಚ್ಛಿತ್ತಿಯಹುದಾಗಿಯುಂ, ಬಳಿಕ್ಕ ಅಂತಾದೊಡೆ ಏನಾಯಿತ್ತನೆ: ಪರಶಿವನಿಂ ಬ್ರಹ್ಮನು, ಬ್ರಹ್ಮನಿಂ ಪ್ರಜಾಪತಿ, ಪ್ರಜಾಪತಿಯಿಂ ಮನು, ಮನುವಿಂ ಪ್ರಜೆಗಳರಿದರೆಂದು ಬ್ರಹ್ಮವಿದ್ಯಾ ಸಂಪ್ರದಾಯಮಂ ಪೇಳ್ವ ಛಾಂದೋಗ್ಯ ಶ್ರುತಿ ವಿರೋಧವಹುದಾಗಿಯುಂ, ಜ್ಞಾನಿಗೆ ಜೀವನ್ಮುಕ್ತಿ ಸಿದ್ಧಸಲೋಸುಗಮಾಗಿ ಪ್ರಾರಬ್ಧ ಕರ್ಮವಾಸನೆ, ಅಜ್ಞಾನ ಲೇಶ, ಸದ್ಭಾವಂಗಳನಂಗೀಕರಿಪುದರಿಂ ದೇಹಸ್ಥಿತಿಯುಂ ಶಿಷ್ಯೋಪದೇಶಾದಿಕಮುಂ ಸಿದ್ಧಿಸುತ್ತಿರ್ಕುಂ. ೧೬೫

ಜ್ಞಾನ ಪ್ರಭಾವ :

ಮತ್ತಂ, ಆ ಜೀವನ್ಮುಕ್ತಂಗೆ ಸಂಚಿತ ಕರ್ಮವೇ ಜ್ಞಾನಾಗ್ನಿಯಿಂದೆ ಸುಂಕ್ತುಬುಲ್ಲ ಸುಂಕಿನಂತೆ ಉರಿದು ಪೋಪುದು. ಪ್ರಾರಬ್ಧ ಕರ್ಮವೇ ಉಂಡುತೀರೂದು. ಆಗಾಮಿ ಕರ್ಮವೆ ಅನಧಿಕಾರಿಯಪ್ಪುದರಿಂ ಫಲಿಸುತ್ತಿರದೆಂದು ಅನುವದಿಸಲ್ವೇಳ್ಕುಂ. ಬಳಿಕ, ಜ್ಞಾನಾಗ್ನಿಯಿಂ ದಗ್ಧಮಾದ ಕರ್ಮವೆ ಪ್ರಾರಬ್ಧ ಭೋಗವನೀವುದರಿಂ ಮುಂದೆ ದೇಹೋತ್ಪತ್ತಿಯನು ಮಾಡಲುಳ್ಳುದೆಂದೊಡೆ, ಹುರಿದ ಚಣಕಾದಿ ಬೀಜವು ಭೋಗಮಾತ್ರಕ್ಕೆ ಯೋಗ್ಯವಲ್ಲದೆ, ಅಂಕುರೋತ್ಪತ್ತಿಗೆ ಕಾರಣವಲ್ಲದಂತೆ, ಜ್ಞಾನಿಯ ಕರ್ಮವು ಪ್ರಾರಬ್ಧ ಭೋಗದಿಂದವೆ ತೀರೂದಾಗಿ, ಜನ್ಮಾಂತರಕ್ಕೆ ಹೇತುವಲ್ಲವೆಂದು ತಿಳಿಯಲ್ವೇಳ್ಕುಂ. ೧೬೬

ಜನ್ಮಾವಧಿ :

ಮತ್ತಂ ಆ ಪ್ರಾರಬ್ಧ ಕರ್ಮವಾದೊಡೆ, ಲೋಕಯಾತ್ರೆಗಳನಧಿಕರಿಸಿದ ಅಸ್ಮದಾದಿ ನರರ್ಗೆ ಏಕದೇಹದಲ್ಲಿಯೆ ಭೋಗ್ಯವಹುದು. ಲೋಕಯಾತ್ರೆಯೊಳಧೀಕೃತರಾದ ಮನು ವ್ಯಾಸಾದಿ ಮಹಾಪುರುಷರ್ಗೆ ದಶಸಂಖ್ಯಾ ದೇಹದಿಂದಲ್ಲದೆ ತೀರದಿರ್ದೊಡಂ, ಜ್ಞಾನಕ್ಕೆ ತಿರೋಧಾನಮಿಲ್ಲಾಗಿ ಬಾಲ್ಯ ಕೌಮಾರಾದಿ ಭೇದಮುಂಟಾದೊಡಂ ನರನಿಗೊಂದೇ ದೇಹವೆಂತಂತೆಂದರಿಯವೇಳ್ಕುಂ. ೧೬೭

ಜ್ಞಾನಿಗೆ ಭೋಗ ಸಿದ್ಧಿ :

ಬಳಿಕ ಸಕಲ ವಿಷಯಂಗಳಿಗೆ ಸಾಧಿಸುತ್ತಿರ್ದ ಜ್ಞಾನಕ್ಕೆಯುಂ, ವಿಷಯಂಗಳಿಗೆ ಸತ್ಯತ್ವಮಂ ಸಂಪಾದಿಸುತ್ತಿರ್ದ ಪ್ರಾರಬ್ಧ ಭೋಗಕ್ಕೆಯುಂ, ಅನ್ಯೋನ್ಯ ವಿರೋಧ ಮುಂಟಾಗಿ, ಜ್ಞಾನಿಗೆ ಎಂತು ಭೋಗಸಿದ್ಧಿಯಹುದು, ಎಂದೆಡೆ : ಮಿಥ್ಯಾತ್ಮಕ ಸ್ವಪ್ನ, ಇಂದ್ರಜಾಲಾದಿಗಳಲ್ಲಿ ಕ್ರಮದಿಂ ವನಿತಾದಿ ತೋರಿಕೆಗಳಿಂ ಮೈಥುನಾದಿ, ವಿಸ್ಮಯಾದಿ ನಿಜಭೋಗವಹುದೆಂತಂತೆ, ವ್ಯಾವಹಾರಿಕ ಪ್ರಾರಬ್ಧ ಭೋಗಕ್ಕೆ ವಿಷಯಂಗಳಿಗೆ, ಸತ್ಯತ್ವದರ್ಶನಮುಂಟಾದಲ್ಲದೆ ಆಗದೆಂಬ ನಿಯಮವಿಲ್ಲಾಗಿ, ಪ್ರಾರಬ್ಧ ಭೋಗಕ್ಕೆಯುಂ, ಜ್ಞಾನಕ್ಕೆಯುಂ ಅನ್ಯೋನ್ಯ ವಿರೋಧವಿಲ್ಲ ಅದರಿಂ ಜ್ಞಾನಿಗೆ ಪ್ರಾರಬ್ಧ ಭೋಗಂ ಉಂಟೆಂದು ವಿಧಿತಮಕ್ಕುಂ. ೧೬೮

ಭೋಗ ದೃಷ್ಟಾಂತ :

ಬಳಿಕ ಇಲ್ಲಿ ಭ್ರಾಂತಿಕೆಟ್ಟಾಕ್ಷಣದಲ್ಲಿಯೆ ಶುಕ್ತಿಯ ರಜತಕ್ಕೆ ಹಾನಿಯಪ್ಪಂತೆ, ಜ್ಞಾನದಿಂದ ಅಜ್ಞಾನವಳಿದಾಗಳೆ ಜಗತ್ಪ್ರಪಂಚದ ತೋರ್ಕೆಯಿಲ್ಲಾಗಿ ವಿವೇಕಿಗೆ ಪ್ರಾರಬ್ಧ ಭೋಗ ಮೆತಪ್ಪುದೆಂದೊಡೆ:

ಶುಕ್ತಿಕಾ ರಜತವೆಂಬುದು ನಿರುಪಾಧಿಕ ಭ್ರಮೆಯಪ್ಪುದರಿಂದ ಅಲ್ಲಿ ತಿಳಿದಾಗಲೇ ರಜತಸ್ವರೂಪಕ್ಕೆ ನಾಶವಹುದು. ಈಸೋಪಾಧಿಕ ಭ್ರಮೆಯೊಳ್ ಅಂತಲ್ಲದೆ ಎಂತೆನೆ: ತಿಳಿಗೊಳನ ತೀರದಲ್ಲಿರುವ ಮನುಷ್ಯನು ತಾನು ಆ ಜಲದೊಳಧೋಮುಖನಾಗಿಪ್ಪುದು ಪುಸಿಯೆಂದು, ತೀರದಲ್ಲಿರ್ದ ತನ್ನಲ್ಲಿಯೇ ಬುದ್ಧಿ ನಿಷ್ಠನಾಗಿದ್ದರೂ, ಆ ಅಧೋಮುಖ ರೂಪುದೋರುತ್ತಿರ್ಪುದು. ಅಂತೇ ಅಹಂಕಾರ ಸಂಬಂಧಮಾದ ಜೀವಭಾವಾದಿಕವೇ ಮಿಥ್ಯೆ, ಪ್ರತ್ಯಗಾತ್ಮನೇ ತಾನೆಂದರಿದು ಜೀವತ್ವಾದಿ ಪ್ರಪಂಚವಿಹುದಾಗಿ ಜೀವನ್ಮುಕ್ತಂಗೆ ಪ್ರಾರಬ್ಧ ಭೋಗವ್ಯವಹಾರಂ ಅಂಗೀಕೃತಮಕ್ಕುಂ. ೧೬೯

ಜೀವನ್ಮುಕ್ತ ಸದ್ಗುಣ :

ಮತ್ತಂ ಆ ಜೀವನ್ಮುಕ್ತಂಗೆ ಮೈತ್ರಿ ಕರುಣಾ ಮುದಿತಾ ಉಪೇಕ್ಷೆಯೆಂಬ ಸದ್ಗುಣ ಚತುಷ್ಟಯಂಗಳುಂಟು. ಅವರಲ್ಲಿ :

ಸತ್ಪುರುಷರೊಡತನ ಸ್ನೇಹವೇ ಮೈತ್ರಿಯೆನಿಸೂದು.

ದುಃಖಿತಾತ್ಮರಲ್ಲಿಯ ಮರುಕವೇ ಕರುಣೆಯೆನಿಸೂದು.

ಪುಣ್ಯಕಾರಿಗಳಲ್ಲಿಯ ಸಂತೋಷವೇ ಮುದಿತವೆನಿಸೂದು.

ಪಾಪಿಗಳಲ್ಲಿ ರಾಗದ್ವೇಷವಿಲ್ಲದಿಹುದೇ ಉಪೇಕ್ಷೆಯಕ್ಕುಂ. ೧೭೦

ಜೀವನ್ಮುಕ್ತ ಪ್ರಯೋಜನ ಪಂಚಕ :

ಬಳಿಕ ಆ ಜೀವನ್ಮುಕ್ತಂಗೆ ಜ್ಞಾನರಕ್ಷೆ, ತಪಸ್ಸು, ಸರ್ವಸಂವಾದ, ದುಃಖಸಂಕ್ಷಯ, ಸುಖಾವಿರ್ಭಾವವೆಂಬ ಪಂಚ ಪ್ರಯೋಜನಗಳುಂಟು. ಅವರಲ್ಲಿ:

೧. ವಾಸನಾಕ್ಷಯ, ಮನೋನಾಶಂಗಳಿಂ ಬುದ್ಧಿ ನಿರ್ಮಲವಾಗಿಪ್ಪುದೇ ಜ್ಞಾನರಕ್ಷಯೆನಿಸೂದು.
೨. ಬಳಿಕದರತ್ತಣಿಂದ ಇಂದ್ರಿಯ ಮನಸ್ಸುಗಳಿಗೆ ಏಕಾಗ್ರತೆಯೇ ತಪಸ್ಸೆನಿಸೂದು.
೩. ಬಳಿಕ ಆ ತಪೋನಿಷ್ಟನಾದ ಜೀವನ್ಮುಕ್ತನಂ ಆಬಾಲ ಪಂಡಿತರೆಲ್ಲರೂ ಯೋಗೀಶ್ವರನೆಂದು ಸ್ತುತಿನಮಸ್ಕಾರಗಳಿಂ ಬಹು ಮನ್ನಣೆಗೆಯ್ವುದೇ ಸರ್ವಸಂವಾದವೆನಿಸೂದು.
೪. ಬಳಿಕ ಅಸ್ಮಿತಾದಿ ಕ್ಲೇಶವಿಲ್ಲದಿಹುದೇ ದುಃಖಸಂಕ್ಷಯವೆನಿಸೂದು.
೫. ಬಳಿಕ ಆ ಸಾಧನಗಳಿಂದ ಆತ್ಮಂಗೊಂದು ಪ್ರತಿಬಂಧವಿಲ್ಲದಿಹುದೇ ಸುಖಾವಿರ್ಭಾವಮಕ್ಕುಂ. ೧೭೧

ಜ್ಞಾನದ ದಶ ಚಿಹ್ನಗಳು :

ಬಲಿಕ ಅಕ್ರೋಧ, ಆರೋಗ್ಯ, ಜಿತೇಂದ್ರಿಯತ್ವ, ದಯೆ, ಕ್ಷಮೆ, ಜನಪ್ರಿಯತ್ವ, ಅಲೋಭತ್ವ, ಧಾತೃತ್ವ, ಅಭಯ, ನಿರ್ಮದಗಳೆಂಬವೆ ಜ್ಞಾನದ ದಶ ಚಿಹ್ನೆಗಳು. ೧೭೨

ಜ್ಞಾನಿಯಿಂ ಪ್ರಯೋಜನ :

ಮತ್ತೆ ಆ ಜೀವನ್ಮುಕ್ತನಿಂ ಶಿಷ್ಯ, ಭಕ್ತ, ಉದಾಸೀನ, ಪಾಪಿಗಳೆಂಬ ಚತುರ್ವಿಧ ಜನರ್ಗೆ ಅನುಗ್ರಹಂ ದೊರೆಕೊಳ್ಗುಂ, ಅದೆಂತೆನೆ :

೧. ತತ್ವೋಪದೇಶಂಗೆಯ್ವ ಜೀವನ್ಮುಕ್ತನಿಂ ಶಿಷ್ಯಂಗೆ ವಿಶ್ವಾಸದಿಂ ಮುಕ್ತಿಯುಂ.
೨. ಬಳಿಕ ಅನುರಾಗದಿಂದ ಆತನನಾರಾಧಿಸುವ ಭಕ್ತಂಗೆ ಸುಕೃತಾತಿಶಯಮುಂ.
೩. ಬಳಿಕ ಆತನ ಸಚ್ಚರಿತ್ರಮಂ ಕಂಡ ಉದಾಸೀನಂಗೆ ಪುಣ್ಯ ಕೃತಾಭಿಜತಿಯುಂ.
೪. ಬಳಿಕ ಆತನ ದರ್ಶನ ಸ್ಪರ್ಶನಾದಿಗಳಿಂದ ಪಾಪಿಗೆ ಪಾಪಕ್ಷಯಂಗಳಕ್ಕುಂ. ೧೭೩

ಉಪದೇಶ ಸಂಗತಿ :

ಬಳಿಕ ಇಲ್ಲಿ ಕರ್ತೃತ್ವಾದಿಕಮಿಲ್ಲದ ಜೀವನ್ಮುಕ್ತನಿಂ

ವೇದಾಂತ ವಾಕ್ಯಶಕ್ತಿ, ತಾತ್ಪರ್ಯ, ತರ್ಕಾನುಕೂಲ, ದೃಷ್ಟಾಂತಾದಿಗಳಿಂ ಯತ್ನ ಪುರಸ್ಸರಮಾದ ಬ್ರಹ್ಮೋಪದೇಶಾದಿಕಮೆಂತು ಘಟಿಪುದು, ಎಂದೊಂಡೆ: ಅತಿರೋಹಿತ, ಬ್ರಹ್ಮಸ್ವರೂಪನಪ್ಪುದರಿಂ ರಾಗ ದ್ವೇಷಾದಿಗಳಿಲ್ಲದ ಈಶ್ವರಂಗೆ ಅನುಗ್ರಾಹ್ಯ ನಿಗ್ರಾಹ್ಯ ಜನರ ಸುಕೃತ ದುಷ್ಕೃತ ವಶದಿಂದ ಅನುಗ್ರಹ ಚೇಷ್ಟೆ ದೊರೆಕೊಂಬಂತೆ, ಸಾಧಕ ಸುಕೃತಾದಿ ಪ್ರಭಾವದಿಂ ಜ್ಞಾನಿಗೆ ಉಪದೇಶಾದಿಗಳಹವು ಎಂಬುದೇ ಸಿದ್ಧಮಕ್ಕು. ೧೭೪

ಜೀವನ್ಮುಕ್ತರ ಪ್ರಾರಬ್ಧವು :

ಬಳಿಕ ಇಲ್ಲಿ ಜೀವನ್ಮುಕ್ತರು ಇಂತು ಪೇಳ್ದ ಸಲ್ಲಕ್ಷಣದಿಂದಿರದೆ ಬಹು ಪ್ರಕಾರಮಾಗಿರ್ಪರೆಂತೆನೆಃ ಪ್ರಾರಬ್ಧಕರ್ಮ ಸಂಸ್ಕಾರವೆಂಬುದಾದೊಡೆ:- ತೀವ್ರವೆಂದೂ,

ಮಧ್ಯವೆಂದೂ, ಮಂದವೆಂದೂ, ಸುಪ್ತವೆಂದೂ ನಾಲ್ಕು ತೆರನಾಗಿಹುದು, ಅವರಲ್ಲಿ :

ಸಮ್ಯಜ್ಞಾನಿಯಾದರೂ ಭೋಗದಲ್ಲಿಯೇ ತತ್ಪರನಾಗಿ ಪಶುವಿನಂತೆ ಆತ್ಮಪ್ರೀತಿ ಮಾತ್ರವಿಹುದೇ ತೀವ್ರ ಸಂಸ್ಕಾರವೆನಿಸೂದು.

ಭೋಗಕ್ಕೆ ಮುಖ್ಯತ್ವವಾದರೂ ತಾನು ಆತ್ಮತತ್ಪರನಾಗಿ ಬಾಲಕರಂತೆ ವಿನೋದದಿಂದಪ್ಪುದೇ ಮಧ್ಯ ಸಂಸ್ಕಾರವೆನಿಸೂದು.

ಸಕಲ ಭೋಗವನುಳಿದು ಪರಮಾತ್ಮನಲ್ಲಿಯೇ ತತ್ಪರನಾಗಿ ಸುರತಸುಖ ಮಿಥುನದಂತೆ ನಿಜಾನಂದದಿಂದಿರ್ಪುದೇ ಮಂದ ಸಂಸ್ಕಾರವೆನಿಸೂದು.

ಸರ್ವವ್ಯಾಪಾರವಳಿದು ನಿರುಪಾಧಿಕಾತ್ಮನಲ್ಲಿಯೇ ತತ್ಪರನಾಗಿ ಪರಮುಕ್ತನಂತೆ ಪರಮ ಸುಖದಿಂದಿರ್ಪುದೇ ಸುಪ್ತ ಸಂಸ್ಕಾರಮಕ್ಕುಂ.

ಬಳಿಕ ಇಂತು ನಾಲ್ಕು ಪ್ರಕಾರಮಾದ ಪ್ರಾರಬ್ಧ ಕರ್ಮವಶದಿಂ ಜೀವನ್ಮುಕ್ತರು ನಾನಾ ವರ್ತನೆಗಳಿಂದಿರ್ದರು, ಋಜು ಕುಟಿಲಗತಿಯ ನದಿಗಳ ಸಮುದ್ರ ಸಂಬಂಧದಂತೆ ಕಡೆಯಲ್ಲಿ ಬ್ರಹ್ಮಸ್ವರೂಪಮಾಗಿರ್ದ ಮುಕ್ತಿ ಸುಖಂ ಒಂದೇ ಪ್ರಕಾರಮಕ್ಕುಂ. ೧೭೫

ಪ್ರಾರಬ್ಧತ್ರಯ :

ಬಳಿಕ ಇಚ್ಛಾಪ್ರಾರಬ್ಧ, ಅನಿಚ್ಛಾಪ್ರಾರಬ್ದ, ಪರೇಚ್ಛಾಪ್ರಾರಬ್ದವೆಂಬ ತ್ರಿವಿಧ ಪ್ರಾರಬ್ದಗಳೇ ದೇವತೆಗಳಿಂದವು ನಿವಾರಿಸಲಶಕ್ಯಮಾಗಿರ್ಪವು.

ಅವರಲ್ಲಿ : ಅಪಥ್ಯ ಸೇವಾದಿಕಮಂ ತನಗೆ ಬರ್ಪ ಅನರ್ಥವನರಿದರೂ ಬಿಡಲೀಯದೆ ಮಾಡಿಪುದೇ ಇಚ್ಛಾಪ್ರಾರಬ್ಧವೆನಿಸೂದು.

ಮಾಡಲೊಲ್ಲೆನೆಂದರೂ ಹಿಂಸಾದಿಕಮಂ ರಾಜಾಜ್ಞೆಯಂತೆ ಬಲತ್ಕಾರದಿಂ ಮಾಡಿಪುದೇ ಅನಿಚ್ಛಾಪ್ರಾರಬ್ಧವೆನಿಸೂದು.

ತನಗಿಚ್ಛಾನಿಚ್ಛೆಗಳಿಲ್ಲದಿದ್ದರೂ ಪರದಾಕ್ಷಿಣ್ಯಂದಿಂ ಸುಖದುಃಖವನುಣಿಪುದೇ ಪರೇಚ್ಛಾಪ್ರರಬ್ಧವೆನಿಸೂದು.

ಇಂತು ತ್ರಿವಿಧ ಪ್ರಾರಬ್ಧಾನುಸಾರದಿಂ ಜೀವನ್ಮುಕರ್ಗೆ ವಿಚಿತ್ರ ಚರಿತಂಗಳುಂಟೆಂಬುದೇ ಸಿದ್ಧಮಕ್ಕುಂ. ೧೭೬

ಜೀವನ್ಮುಕ್ತರು :

ಬಳಿಕ ಈ ಅರ್ಥದಲ್ಲಿ ಸನಕ ಜನಕ ಭರತ ಯಾಜ್ಞಾವಲ್ಕ್ಯ ಶುಕ ವಾಮದೇವ ಗೌತಮ ಪ್ರಹ್ಲಾದ ವಿಶ್ವಾಮಿತ್ರ ವಾಶಿಷ್ಠ ದೂರ್ವಾಸ ನಾರದಾದಿಗಳ ವರ್ತನಾಭೇದಂಗಳೆ ನಿದರ್ಶನಮಕ್ಕುಂ. ೧೭೭

ಜ್ಞಾನ್ಯಜ್ಞಾನಿ ಭೇದ:

ಬಳಿಕ ಇಲ್ಲಿ ಜ್ಞಾನಿಗೆ ಪ್ರಾರಬ್ಧಭೋಗವನಿಂತು ಅಂಗಿಕರಿಸೆ ಅಜ್ಞಾನಿ ಜ್ಞಾನಿಗಳಿಗೇನು ಭೇದಮೆಂದೊಡೆಃ ವ್ರಾತ್ಯ ಶ್ರೋತ್ರೀಯರ್ಗೆ, ವೇದಾಧ್ಯಯನಪರಿತ್ಯಾಗ, ವೇದಾಧ್ಯಯನ

ಯುಕ್ತತೆಗಳಿಂದವೆ ಭೇದವಲ್ಲದೆ ಆಹಾರ ನಿದ್ರಾದಿಗಳಿಂ ಭೇದವಿಲ್ಲದು. ಅಂತೇ ಜ್ಞಾನಿಗಳೆಯು ಅಜ್ಞಾನಿಗಳೆಯು ಹೃದಯಗ್ರಂಥಿಯ ಸಂಬಂಧ. ಆ ಸಂಬಂಧಗಳಿಂ ಭೇದವ್ಯೆಸೆ. ಭೋಗಸ್ಥಿತಿಯಂ ಭೇದವಿಲ್ಲೆಂಬುದೇ ಸಮ್ಮತಮಕ್ಕುಂ. ೧೭೮

ಸ್ವನಾಶ ಪ್ರಯತ್ನೋಪಪತ್ತಿ :

ಬಳಿಕ ಇಲ್ಲಿ ತತ್ತ್ವಜ್ಞಾನದಿಂ ಬ್ರಹ್ಮಪ್ರಾಪ್ತಿಯಾಗೆ, ವ್ಯಾಪ್ರ ಸಂದರ್ಶಕನಂತೆ ಜೀವತ್ವಂ ಕೆಡುಗುಂ. ಅದಾಗಿ ತನ್ನ ನಾಶಕೆ ಎಂತು ಜೀವಂ ಪ್ರವರ್ತಿಪನೆಂದೊಡೆ: ಎಂತು ಲೋಕದಲ್ಲಿ ದೇವತ್ವದ ಅಭಿವಾಂಚೆಯಿಂ ಭೃಗು ಅಗ್ನಿ ಗಂಗೆ ಪ್ರಯಾಗಾದಿಗಳಲ್ಲಿ ನರತ್ವ ಪರಿತ್ಯಾಗವನಂಗೀಕರಿಸುತ್ತಿರ್ಪರ್, ಅಂತೆ ಪ್ರತ್ಯಗಾತ್ಮರೂಪ ಬ್ರಹ್ಮತ್ವದಿಂದ ಇರಲೋಸುಗಮಾಗಿ ಜೀವಂ ತತ್ತ್ವಜ್ಞಾನದೆ, ತನ್ನ ನಾಶವನು ಒಡಂಬಡುತಿರ್ಪನು ಎಂಬುದು ಪ್ರಸಿದ್ಧಮಕ್ಕುಂ. ೧೭೯

ಜೀವನ್ಮುಕ್ತ ಪ್ರಶಂಸೆ :

ಬಳಿಕ ವ್ಯಾಸಾದಿಗಳಂತೆ ಶಾಪಾನುಗ್ರಹ ಸಾಮರ್ಥ್ಯಂ ಆವಾತಂಗುಂಟು ಆತನೇ ತತ್ತ್ವಜ್ಞಾನಿಯಲ್ಲದೆ ಬೇರೊಬ್ಬ ಎಂದೊಡೆ ಆ ಸಾಮರ್ಥ್ಯವು ತಪಸ್ಸಿನ ಫಲವ್ಯೆಸೆ. ತತ್ತ್ವಜ್ಞಾನದ ಫಲವಲ್ಲವೆಂದೇ ಕಾಣ್ಬದು, ಬಳಿಕ ಅಂತಾದೊಡೆ ತತ್ತ್ವಜ್ಞಾನಕ್ಕೆ ತಪವೇ ಮೂಲವೆಂಯ ಶ್ರುತಿಯುಂಟಾಗಿ, ತಪೋರಹಿತಂಗೆ ತತ್ತ್ವಜ್ಞಾನವೆತ್ತಣದು ಎನೆ, ಶಾಪಾದಿಗಳಿಗೆ ಕಾರಣಮಾದ ಸಕಾಮ್ಯ, ತಪದಿಂದನ್ಯಮಾದ ನಿಷ್ಕಾಮ್ಯ. ತಪಸ್ಸಿನಿಂ ತತ್ತ್ವಜ್ಞಾನವಹುದೆಂದು ಪರಾಮರ್ಶಂಗೆಯ್ಯಲ್ತಕ್ಕುದು. ಮತ್ತು ಆ ವ್ಯಾಸಾದಿಗಳಿಗೆ ತತ್ತ್ವಜ್ಞಾನ ಸಾಮರ್ಥ್ಯಗಳೆರಡೂ ಉಂಟಲ್ಲಾ ಎನಲ್, ಅವರ್ಗೆ, ಉಭಯ ವಿಧ ತಪಮುಂಟಾಗಿ, ಜ್ಞಾನ ಸಾಮರ್ಥ್ಯಗಳೆಂಬ ದ್ವಿ ವಿಧವು ಸಂಭವಿಸುತ್ತಿಹವು. ಬಳಿಕ ಒಂದೇ ತಪವನಾಚರಿಸಿದೊಡೆ ಆತಂಗೆ ಸಿದ್ಧಿಸುತ್ತಿಹವಾಗಿ ವಿರೋಧವಿಲ್ಲಂ. ೧೮೦

ಬಳಿಕ ಶಾಪಾದಿ ಸಾಮರ್ಥ್ಯವಿಲ್ಲದ ವಿಧಿಶೂನ್ಯನಾದ ತತ್ತ್ವಜ್ಞಾನಿಯಂ ಕ್ರಿಯಾನಿಷ್ಠರೆಲ್ಲಾ ನಿಂದಿಸುತ್ತಿಹರಲಾ, ಎನಲು, ಆ ಕ್ರಿಯಾನಿಷ್ಠರ್ಗೆಯೂ, ಆ ವಿಷಯ ಲಂಪಟರಾದ ಪಾಮರರಿಂ ನಿಂದ್ಯತ್ವಮುಂಟು. ಅದರಿಂ ವೈಷಮ್ಯವಿಲ್ಲಂ ಮತ್ತಂ ಆ ವಿಷಯಲಂಪಟರಿಂದಾದ ನಿರಾಕರಣದಿಂ, ಕ್ರಿಯನಿಷ್ಠರಾದ ವಿಶಿಷ್ಟರ್ಗೆ ಆವಹಾನಿಯೆನೆ, ದೇಹವೇ ಆತ್ಮನೆಂಬ, ಬುದ್ಧಿಯುಳ್ಳ ಕ್ರಿಯಾನಿಷ್ಠರ್ ಮಾಳ್ಪ ದೂಷಣದಿಂ ತತ್ತ್ವಜ್ಞಾನಿಗೆ ಆವಹಾನಿಯೂ ಇಲ್ಲವೆಂಬುದೇ ಯಥಾರ್ಥಮಕ್ಕುಂ.

ಮತ್ತಂ ಆಜೀವನ್ಮುಕ್ತಂ ಅಲೌಕಿಕನಪ್ಪುದುರಿಂ ಪ್ರಾರಬ್ಧವಶದಿಂ ವಿದ್ವದವಸ್ಥೆಯೊಳಿರ್ದೊಡಂ, ಮಾರುತನಿಂ ಶ್ರಿತಾಶ್ರಿತ ಮೇಘಪಟಲ ಗಗನದಂತೆ ನಿತ್ಯನಿರ್ಮಳನಪ್ಪಂ, ಮತ್ತಂ ಅದೃಷ್ಟಮೆಂಬ ಪರಿಚಾರಕನಿಂ ದತ್ತಮಾದ ಸ್ರಕ್ ಚಂದನಾದಿ ಭೋಗ ಸ್ವೀಕಾರಮಿರ್ದೊಡಂ ನಿಜಭರ್ತೃವಿನೊಳ್ ಸುರತಂಗೆಯ್ವ ಪುಂಶ್ಚಲಿಮಂತೆ ಪರಾಕತೆಯಕ್ಕುಂ ಮತ್ತು ಮೂಢನಂತೆ ಕಲಾಭಿಜ್ಞತೆಯೊಳ್ ಮೌನಮಾಗಿರ್ದೊಡಂ ಕಲ್ಪಿತದ್ವೈತಪರ ಶ್ರುತಿವಾಕ್ಯ ವೈಖರಿ ವಿಷಯದೊಳ್ ಅಲಸನಪ್ಪಂ. ಮತ್ತಂ

ಪ್ರಸ್ತುತವನರಿಯದ ಬಹುಭಾಷಣನಂತೆ ಏನನುಡಿದೊಡಮದೇ ಗೂಢಾಭಿಪ್ರಾಯ ಗರ್ಭಿತಮಾದ ಸತ್ಯಾದ್ವೈತನಿಷ್ಠೆ ನಿಗಮಾಭಿಪ್ರಾಯಮಕ್ಕುಂ. ಮತ್ತಂ ಆಚಾರ್ಯನಂತೆ ಶಿಷ್ಯರನ್ ಉಪದೇಶಿಸುತ್ತಿರ್ದೊಡಂ. ಆತನು ನಿತ್ಯಮುಕ್ತನಪ್ಪುದರಿಂ ಚೋದ್ಯಬೋಧಕತ್ವನೆ ಮಾಯಾರಚನಾತ್ಮಕಮೆಂಬ ಕೃತನಿಶ್ಚಯದಿಂ ಗಗನವಾಣಿಯಂತೆ ಗುರುತ್ವಾಭಿಮಾನ ರಹಿತನಪ್ಪಂ. ಮತ್ತಂ ಉನ್ಮತ್ತನಂತೆ ಅನೂಚಿತವಕ್ಕವಾದೊಡಂ ದ್ವೈತಭಾವವಳಿದ ಆತ್ಮಾರಾಮನಪ್ಪುದರಿಂ, ಸುರಾತಾಂತ್ಯ ಸಮಯದೊಳಗೆ ರತಿಕಾಮಾಸಕ್ತ ಮಿಥುನ ವಾಕ್ಯದಂತೆ ಅನಭಿದೇಯ ವಿಷಯಮಕ್ಕುಂ.

ಮತ್ತಂ ಪಿಶಾಚಗ್ರಹವಿಷ್ಟನಂತೆ ಗಳಗಳನೆ ನಡೆದೊಡಂ ಪೂರ್ಣೈಕ ಸ್ವಭಾವ ನಿಷ್ಟನಪ್ಪುದರಿಂ ವಿರಹಿಯ ಗಮನದಂತೆ ಅಪ್ರಾಪ್ಯಾನುಸಂಧಾನಮಕ್ಕುಂ. ಮತ್ತಂ ಪುತ್ರವಿಯೋಗಾನುಭವವುಳ್ಳ ಗ್ರಾಮ್ಯಜನಕನಂತೆ ಶೋಕಂಗೈಯ್ಯೆ ಅದೆ ಸರ್ವೇಂದ್ರಿಯಂಗಳ್ ಬ್ರಹ್ಮಂಗಳೆಂದಾಲೋಚನಗೆಯ್ಯದೆ ಕಲ್ಪಿತ ಸಾಧಕ ಅವಸ್ಥೆಯೊಳ್ ಮಂಡಿತ ಸರ್ವೇಂದ್ರಿಯ ಧರ್ಮ ವಿಷಯಮಾದ ಕರುಣರಸಮಕ್ಕುಂ.ಮತ್ತಂ ವಿಕೃತ ಬಹುರೂಪ ದರ್ಶನ ವಿನೋದದೊಳು ಅಟ್ಟಹಾಸಂಗೆಯ್ದೊಡಂ ವಿಚಿತ್ರ ಪುಣ್ಯಾಪಾಪಾದಿ ವ್ಯವಹಾರಮಂ ಸತ್ಯವೆಂದು ಪ್ರತಿಪಾದಿಪ ಮೀಮಾಂಸಾದಿ ದರ್ಶನ ವಿಷಯಮಾದ ಪರಿಹಾಸಮಕ್ಕುಂ. ಮತ್ತಂ ವಿಟನಂತೆ ಸ್ತ್ರೀಲೋಲ ನಾಗಿರ್ದೊಡಂ ಪೂರ್ಣೈಕ ಸ್ವಭಾವನಪ್ಪುದರಿಂ, ನಿಜಾನಂದಾನುಭವಿಯಪ್ಪಂ. ಮತ್ತಂ ಶತ್ರುವಿನಂತೆ ಆವಾತನಂ ಕ್ರೋಧದಿಂ ಸಂತಾಪಂಪಡಿಸಿದೊಡಂ ಕ್ಷೇತ್ರದಾಹಕಾಗ್ನಿಯಂತೆ ವಿಶಿಷ್ಟಫಲ ಸಂಪತ್ತಿಗಾತನನ್ ಆಶ್ರಯಂ ಮಾಡುವಾತನೆಂದು ವಿಶ್ವಾಸಂಗೆಯ್ಯಲ್ವೇಳ್ಕುಂ. ೧೮೧

ವಿದೇಹಕೈವಲ್ಯ :

ಅನಂತರದುಳು ಆವಕಾಲದಲ್ಲಿಯು ಆವದೇಶದಲ್ಲಿಯು ಆವುದಾನೊಂದು ಶರೀರಂಬಡೆಯದೆ ಸಚ್ಚಿದಾನಂದ ಬ್ರಹ್ಮ ಸ್ವರೂಪದಿಂದಿಹುದೇ ವಿದೇಹ ಕೈವಲ್ಯ ಮಕ್ಕುಂ. ಬಳಿಕಾ ವಿದೇಹ ಕೈವಲ್ಯವನೆಯ್ದುವ ಕ್ರಮವೆಂತೆಂದೊಡೆ :

ಆವನಾನೋರ್ವ ಮುಮುಕ್ಷುವಿಗೆ ನಿತ್ಯಕರ್ಮಾನುಷ್ಠಾನದಿಂ ಧರ್ಮೋತ್ಪತ್ತಿ, ಧರ್ಮೋತ್ಪತ್ತಿಯಿಂ ಪಾಪನಿವೃತ್ತಿ, ಪಾಪನಿವೃತ್ತಿಯಿಂ ಚಿತ್ತಶುದ್ಧಿ, ಚಿತ್ತಶುದ್ಧಿಯಿಂ ಸಂಸಾರದೋಷದರ್ಶನ, ಅದರಿಂ ವಿಷಯವಿರಕ್ತಿಯಿಂ ಮೋಕ್ಷಾಪೇಕ್ಷೆ, ಮೋಕ್ಷಾಪೇಕ್ಷೆಯಿಂ ಬಾಹ್ಯ ಕರ್ಮೋಪರತಿ ಕರ್ಮೋಪರತಿಯಿಂ ಯೋಗಾಭ್ಯಾಸ, ಅದರಿಂ ಪ್ರತ್ಯಗಾತ್ಮಾಭಿರತಿ, ಪ್ರತ್ಯಗಾತ್ಮಾಭಿರತಿಯಿಂ ತತ್ತ್ವಮಸ್ಯಾದಿ ಮಹಾವಾಕ್ಯ ವಿಚಾರ, ಅದರಿಂದ ಅದ್ವೈತಜ್ಞಾನ, ಅದರಿಂದ ಅವಿದ್ಯಾನಾಶ, ಅದರಿಂದ ಅದ್ವೈತಭ್ರಾಂತಿನಷ್ಟ, ಅದರಿಂ ಶುಭಾಶುಭಬುದ್ಧಿ ಪರಿತ್ಯಾಗ, ಅದರಿಂ ರಾಗದೇಷ ಹಾನಿ, ರಾಗದ್ವೇಷಹಾನಿಯಂ ವಿಧಿನಿಷೇಧ ನಿರಸನ, ಅದರಿಂ ಪುಣ್ಯಾಪಾಪಕ್ಷಯ, ಅದರಿಂ ದೇಹಭಾವ ವಿಚ್ಛಿತ್ತಿ, ದೇಹಭಾವವಿಚ್ಛಿತ್ತಿಯಿಂ ಸರ್ವಪಾಶವಿಮೋಚನ, ಅದರಿಂ ಸರ್ವೋತ್ಕರ್ಷಮಾದ ಚರಮ ಸ್ಥಾನಮಪ್ಪ ನಾಮ ರೂಪ ಜಾತಿ ಕ್ರಿಯಾವಾಸನೆ ಪುಗದ ವಾಚಾಮ ಗೋಚರಮಪ್ಪ ನಿತ್ಯಾನಂದ

ಸ್ವರೂಪವಮಾದ ವಿದೇಹ ಕೈವಲ್ಯವಹುದೆಂದು ನಿಶ್ಚಯಿಪುದೇ ಶ್ರುತ್ಯಾಚಾರ್ಯ ಪ್ರಸಾದ ಸಿದ್ಧಯಕ್ಕುಂ.

ಇತಿ ವೇದಾದಿ ಸಕಲ ಶಾಸ್ತ್ರಾರ್ಥ ನಿರ್ಣಯಂ
ಪ್ರಥಮ ಪರಿಚ್ಛೇದಃ

■■

ದ್ವಿತೀಯ ಪರಿಚ್ಛೇದ

ಕಂದ॥ ಇಂತಖಿಳ ವೇದ ಶಾಸ್ತ್ರಾ
ರ್ಥಂ ತಿಳಿವಂತೊರೆದೆನಿನ್ನು ಪರತರ ಶಿವಸಿ ।
ದ್ಧಾಂತ ಪದ್ಧತಿಯನರಿದೋ
ರಂತುಸುರ್ವೆಂ ಸಾಧಕರ್ಗೆ ಸಂತಸಮುದಿಸಲ್ ॥

ಅಂತಾದೊಡೆ ಆ ಸಿದ್ಧಾಂತ ಶಾಸ್ತ್ರದೊಳ್ ಈ ಲೋಕದಲ್ಲಿ ಪ್ರತ್ಯಕ್ಷ ಫಲದಿಂ ವಿಶ್ವಾಸಂ ಘಟಿಸಲೋಸುಗಮಾಗಿ ವಿಜ್ಞಾನಕೇವಲರೆಂಬ ಆತ್ಮವರ್ಗದೊಳ್ ಅಯಾಯ ನಾಮಧೇಯಮುಳ್ಳವರಿಂದ ಉತ್ತಮಾದ ಗಾರುಡ ದಕ್ಷಿಣ ವಾಮ ಭೂತಂಗಳೆಂಬ ನಾಲ್ಕು ತಂತ್ರಾಂತರಂಗಳವರಲ್ಲಿ ಕ್ರಮದಿಂ ತತ್ಪುರುಷ ಅಘೋರ ವಾಮದೇವ ಸದ್ಯೋಜಾತವೆಂಬ ಚತುರ್ವಿಧ ಬ್ರಹ್ಮಮೂರ್ತ್ಯುಪಾಸನೆಗಳುಂ, ಸರ್ಪ ಚಿಕಿತ್ಸೆ ಶತ್ರುಜಯ ರಸವಾದ ಗ್ರಹೋಚ್ಚಾಟನಾರ್ಥಮಾಗಿ ಕ್ರಮದಿಂ ಗಾರುಡ ಮಾರಣವಾದ ಮಂತ್ರೌಷಧ ಪ್ರಯೋಗಂಗಳುಂ ಸಮರ್ಥಿತಂಗಳಕ್ಕುಂ. ೧೮೩

ಆಗಮ ಭೇದಗಳು :

ಮತ್ತಂ ಆ ಶಿವಸಿದ್ಧಾಂತ ಭೇದಂಗಳಾವಾವೆಂತೆಂದೊಡೆ :

ಕಾಮಿಕಾಗಮ	ಯೋಗಜಾಗಮ	ಚಿಂತ್ಯಾಗಮ	ಕಾರಣಾಗಮ
ಅಜಿತಾಗಮ	ದೀಪ್ತಾಗಮ	ಸೂಕ್ಷ್ಮಾಗಮ	ಸಹಸ್ರಾಗಮ
ಅಂಶುಮಾನಗಮ	ಸುಪ್ರಭೇದಾಗಮ	ವಿಜಯಾಗಮ	ವಿಮಲಾಗಮ
ವಿಶ್ವಾಸಾಗಮ	ಸ್ವಾಯಂಭುವಾಗಮ	ಅನಲಾಗಮ	ಶಾಂತಾಗಮ
ವೀರಾಗಮ	ರೌರವಾಗಮ	ಮಕುಟಾಗಮ	ಲಲಿತಾಗಮ
ಚಂದ್ರಜ್ಞಾನಾಗಮ	ಬಿಂಬಾಗಮ	ಪ್ರೋದ್ಗೀತಾಗಮ	ಸಿದ್ಧಾಗಮ
ಪಾರಮೇಶ್ವರಾಗಮ	ಸರ್ವೋಕ್ತಾಗಮ	ಕಿರಣಾಗಮ	ವಾತೂಲಾಗಮ

ವೆಂಬವೆ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕುಂ. ೧೮೪

ಬಳಿಕವು ಆದೊಡೆ ಕಾಮಿಕಾದಿಕ್ರಮದಿಂ ಸದಾಶಿವನ ಸದ್ಯೋಜಾತ ಮುಖದಲ್ಲೈದು, ವಾಮದೇವ ಮುಖದಲ್ಲೈದು, ಅಘೋರ ಮುಖದಲ್ಲೈದಿ ತತ್ಪುರುಷ ಮುಖದಲ್ಲೈದು ಈಶಾನಮುಖದಲೆಂಟು ಜನಿಸಿದವರಲ್ಲಿ ಕಾಮಿಕಾದಿ ಸುಪ್ರಭೇದಾಂತಮಾದ ಹತ್ತು ಆಗಮಂಗಳೆ ಶಿವ ಭೇದನೆನಿಸಿಕೊಂಬವು. ಮಿಕ್ಕ ವಿಜಯಾದಿ ವಾತೂಲಾಂತಮಾದ ಹದಿನೆಂಟಾಗಮಂಗಳೇ ರುದ್ರಭೇದವೆನಿಕೊಳುತಿರ್ಕುಂ. ೧೮೫

ಆಗಮಾವತರಣ :

ಮತ್ತಂ ಆ ಶಿವ ರುದ್ರರುಗಳಿಂದ ಆಗಮಂಗಳವತರಿಸಿದ ಕ್ರಮವೆಂತೆಂದೊಡೆ ;

೧. ಸದ್ಯೋಜಾತ ಮುಖದಿಂ ಕಾಮಿಕಾಗಮವನೆ ಮೊದಲು ಪ್ರಣವನು, ಬಳಿಕ ಅವನಿಂ ತ್ರಿಕಲನು, ಅವನಿಂ ಹರನೈದಿದನು.

೨. ಯೋಗಜಾಗಮವನೆ ಮೊದಲು ಸುಧಾಖ್ಯನು ಮೇಣವನಿಂ ಯೋಗಾಹ್ವಯನು ಮತ್ತವನಿಂ ಅಂಬಿಕೆ ಕೇಳಿದಳು.

೩. ಚಿಂತ್ಯಾಗಮವನೆ ಮೊದಲು ಸುದೀಪ್ತನು, ಅವನಿಂ ಯೋಗನು, ಅವನಿಂ ವಿಭುವು ಕೇಳಿದನು.

೪. ಕಾರಣಾಗಮವನೆ ಮೊದಲು ಕಾರಣಾಖ್ಯನು, ಬಳಿಕವನಿಂ ಶರ್ವನು, ಮೇಲವನಿಂ ಪ್ರಜಾಪತಿಯು ಕೇಳಿದನು.

೫. ಅಜಿತಾಗಮವನೆ ಮೊದಲು ಶಿವನು, ಅವನಿಂ ಸುಶಿವನು, ಬಳಿಕವನಿಂದಚ್ಯುತನು ಕೇಳಿದನು.

೬ ವಾಮದೇವ ಮುಖದಿಂ ದೀಪ್ತಾಗಮವನೆ ಮೊದಲು ಈಶನು ಕೇಳಿದನು. ಈಶನಿಂ ತ್ರಿಮೂರ್ತಿಯು, ಬಳಿಕವನಿಂ ಹುತಾಶನನರಿದನು.

೭ ಸೂಕ್ಷ್ಮಾಗಮವನೆ ಮೊದಲು ಸೂಕ್ಷ್ಮನು ಕೇಳಿದನು, ಅವನಿಂ ವೈಶ್ರವಣನು, ಮತ್ತವನಿಂ ಸಪ್ರಭಂಜನನೈದಿದನು.

೮. ಸಹಸ್ರಾಗಮವನು ಮೊದಲು ಕಾಲರುದ್ರನರಿದನು, ಮೇಲವನಿಂ ಭೀಮರುದ್ರನು, ಮತ್ತವನಿಂ ಧರ್ಮನರಿದನು.

೯. ಅಂಶುಮಾನಾಗಮವನೆ ಮೊದಲು ಅಂಬುವು, ಬಳಿಕವನಿಂದ ಉಗ್ರನು, ಮೇಲವನಿಂದ ಔರಸನರಿದನು.

೧೦. ಸುಪ್ರಭೇದಾಗಮವನೆ ಮೊದಲು ಶೇಷನರಿದನು, ಮತ್ತವನಿಂ ವಿಘ್ನೇಶ್ವರನು, ಮೇಲವನಿಂ ಶಶಿ ತಿಳಿದ ನಿಂತು ದಶ ಆಗಮಂಗಳ್ ಶಿವಭೇದಂಗಳಕ್ಕುಂ. ೧೮೬

೧೧. ಅಘೋರ ಮುಖದಿಂ ವಿಜಯಾಗಮವನೆ ಮೊದಲು ರುದ್ರನು, ಮತ್ತವನಿಂದ ಅನಾದಿಯು, ಮೆಲವನಿಂ ಪರಮೇಶ್ವರನರಿದನು.

೧೨. ವಿಶ್ವಾಸಾಗಮವನೆ ಮೊದಲು ಉದಯನು, ಮತ್ತವನಿಂ ಗಿರಿಜೆ ಕೇಳಿದಳು.

೧೩. ಸ್ವಾಯಂಭುವಾಗಮವನೆ ಮೊದಲು ನಿಧನೇಶನು, ಬಳಿಕವನಿಂ ಸ್ವಯಂಭೂತನೆಯ್ದಿದನು.

೧೪. ಅನಲಾಗಮವನೆ ಮೊದಲು ವ್ಯೋಮನು, ಮತ್ತವನಿಂ ಹುತಾಶನು ಅರಿದನು.
೧೫. ವೀರಾಗಮವನೆ ಮೊದಲು ತೇಜಸನು, ಮೇಲವನಿಂ ಪ್ರಜಾಪತಿಯು ಕೇಳಿದನು.
೧೬. ತತ್ಪುರುಷ ಮುಖದಿಂ ರೌರವಾಗಮವನೆ ಮೊದಲು ಬ್ರಹ್ಮೇಶನು, ಮೇಲವನಿಂ ನಂದಿಕೇಶ್ವರನರಿದನು.
೧೭. ಮಕುಟಾಗಮವನೆ ಮೊದಲು ಶೇಷಾಖ್ಯನು, ಬಳಿಕವನಿಂ ಮಹಾದೇವನೆಯ್ದಿದನು.
೧೮. ವಿಮಲಾಗಮವನೆ ಮೊದಲು ಸರ್ವಾತ್ಮಕನು, ಮೇಣವನಿಂ ವೀರಭದ್ರನರಿದನು.
೧೯. ಚಂದ್ರಜ್ಞಾನಾಗಮವನೆ ಮೊದಲು ಅನಂತನು, ಮತ್ತವನಿಂ ಬೃಹಸ್ಪತಿಯು ಕೇಳಿದನು.
೨೦. ಬಿಂಬಾಗಮವನೆ ಮೊದಲು ಪ್ರಶಾಂತನು, ಬಳಿಕವನಿಂ ದಧೀಚಿ ಕೇಳಿದನು.
೨೧. ಈಶಾನ್ಯಮುಖದಿಂ ಪ್ರೋದ್ಗೀತಾಗಮವನೆ ಮೊದಲು ಶೂಲಿಯು, ಮೇಲವನಿಂ ಕವಚಾಖ್ಯನೆಯ್ದಿದನು,
೨೨. ಲಲಿತಾಗಮವನೆ ಮೊದಲು ಮಲಯನು, ಮತ್ತವನಿಂ ಲಲಿತನರಿದನು.
೨೩. ಸಿದ್ಧಾಗಮವನೆ ಮೊದಲು ಇಂದ್ರನು, ಬಳಿಕವನಿಂ ಚಂಡೇಶ ನೆಯ್ದಿದನು.
೨೪. ಶಾಂತಾಗಮವನೆ ಮೊದಲು ವಶಿಷ್ಠನು, ಶೃಸಪಾಯನರಿದನು.
೨೫. ಸರ್ವೋಕ್ತಾಗಮವನೆ ಮೊದಲು ಸೋಮನು, ಮೇಲವನಿಂ ನೃಸಿಂಹನೆಯ್ದಿದನು.
೨೬. ಪಾರಮೇಶ್ವರಾಗಮವನೆ ಮೊದಲು ದೇವಿಯು ಕೆಳಿದಳು.
೨೭. ಕಿರಣಾಗಮವನೆ ಮೊದಲು ದೇವಪಿತನು, ಬಳಿಕವದಿಂ ಸಂವರ್ತಕ ನರಿದನು.
೨೮. ವಾತೂಲಾಗಮವನೆ ಮೊದಲು ಶಿವರುದ್ರನು, ಮತ್ತವನಿಂ ಮಹಾಕಾಯನೆಯ್ದಿದನು.
ಇಂತು ಅಷ್ಟಾದಶ ಆಗಮಂಗಳ್ ರುದ್ರಭೇದಂಗಳಕ್ಕುಂ. ೧೮೭

ಆಗಮ ಸಂಖ್ಯೆ :

ಬಳಿಕ ಆ ಆಗಮಂಗಳನೊಂದುಗೂಡೆಣಿಸಿದೊಡೆ: ಎರಡು ಶಂಖಮುಂ ಒಂದು ಪದ್ಮಮುಂ ಒಂದು ಅರ್ಭುದಮುಂ ಹತ್ತೊಂಬತ್ತು ಕೋಟಿಯಂ ಮೂವತ್ತೆರಡು ಲಕ್ಷವುಂ, ನಲವತ್ತು ನಾಲ್ಕು ಸಾವಿರ ಗ್ರಂಥಸಂಖ್ಯೆಯುಳ್ಳುವಾಗಿ (೨೧೧೧೯೩೨೪೪೦೦೦). ೧೯೬ ಭೇದಂಗಳಾಗಿರ್ಪವಗ. ಆ ಭೇದಂಗಳು ಆವಾವೆಂತೆಂದೊಡೆ :

೧. ಉತ್ತರ, ಭೈರವೋತ್ತರ, ನಾರಸಿಂಹವೆಂಬವೆ ಕಾಮಿತಾಗಮದ ತ್ರಿಭೇದಂಗಳು,
೨. ವಿಣಾಶಿಖೋತ್ತರ, ತಾರತಂತ್ರ, ಸೌಖ್ಯಾಗಮ, ಶಾಂತಾದ್ಯಾಗಮ, ಆತ್ಮಯೋಗವೆಂದು ಯೋಗಜಾಗಮದ ಐದು ಭೇದಂಗಳು.
೩. ಸುಚಿಂತ್ಯಾಗಮ ಶುಭಗಾಗಮ, ವಾಮತಂತ್ರ, ಪಾಪನಾಶಕ, ಸಾರೋದ್ಭವ ಅಮೃತಾಗಮವೆಂದು ಚಿಂತ್ಯಾಗಮದ ಆರುಭೇದಂಗಳು.
೪. ಕಾರಣ ತಂತ್ರ, ಪಾವನತಂತ್ರ, ದೌರ್ಘ್ಯತಂತ್ರ, ಮಹೇಂದ್ರತಂತ್ರ, ಭೀಮತಂತ್ರ,

ಮಾರಣ ತಂತ್ರ, ಈಶಾನ ತಂತ್ರವೆಂದು ಕಾರಣಾಗಮದ ಸಪ್ತಭೇದಂಗಳು.

೫. ಪ್ರಭೂತಾಗಮ, ಪರೋದ್ಭೂತಾಗಮ, ಪಾರ್ವತೀತಂತ್ರ, ಪದ್ಮಸಂಹಿತೆಯೆಂದು ಅಜಿತಾಗಮದ ನಾಲ್ಕು ಭೇದಂಗಳು.

೬ ಅಮೇಯಾಗಮ, ಅಪ್ರಮಾಗಮ, ಆಪ್ಯಾಗಮ, ಅಸಂಖ್ಯಾಗಮ, ಅಮಿತೌಜಸಾಗಮ, ಆನಂದಾಗಮ, ಮಾಧವೋದ್ಭೂತಾಗಮ, ಅದ್ಭುತಾಗಮ, ಅಮೃತಾಗಮವೆಂದು ದೀಪ್ತಾಗಮದ ನವಭೇದಂಗಳು.

೭ ಸೂಕ್ಷ್ಮಸಂಹಿತೆಯೆಂದು ಸೂಕ್ಷ್ಮಾಗಮದ ಒಂದೇ ಭೇದಮಾಗಿಹುದು.

೮. ಅತೀತಾಗಮ, ಅಮಲಾಗಮ, ಶುದ್ಧಾಗಮ, ಅಪ್ರಮೇಯಾಗಮ, ಜ್ಯೋತಿಭಾನಾಗಮ, ಪ್ರಬುದ್ಧಾಗಮ, ವಿಬುದ್ಧಾಗಮ, ಹಸ್ತಾಗಮ, ಅಲಂಕಾರಾಗಮ, ಸುಬೋಧಾಗಮವೆಂದು ಸಹಸ್ರಾಗಮದ ದಶಭೇದಂಗಳು.

೯. ವಿದ್ಯಾಪುರಾಣಾಗಮ, ಭಾಸ್ವರಾಗಮ, ನೀಲಲೋಹಿತತಂತ್ರ, ಪ್ರಕರಣಾಗಮ, ಭೂತತಂತ್ರ, ಆತ್ಮಾಲಂಕಾರ, ಕೌಶ್ಯಪಾಗಮ, ಗೌತಮಾಗಮ, ಮಹೇಂದ್ರಾಗಮ, ಬ್ರಹ್ಮಾಗಮ, ವಾಶಿಷ್ಠಾಗಮ, ಈಶಾನೋತ್ತರವೆಂದು ಅಂಶುಮಾನಾಗಮದ ದ್ವಾದಶಭೇದಂಗಳು.

೧೦. ಸುಪ್ರಭೇದಾಗಮದಲ್ಲಿ: ತಿಳಿದುಬಂದಿಲ್ಲ.

೧೧. ವಿಜಯತಂತ್ರ, ಉದ್ಭವತಂತ್ರ, ಸೌಮ್ಯತಂತ್ರ, ಅಘೋರತಂತ್ರ ಮೃತ್ಯುನಾಶಕತಂತ್ರ ಕುಬೇರತಂತ್ರ, ವಿಮಲತಂತ್ರ, ಮಹಾಘೋರತಂತ್ರವೆಂದು ವಿಜಯಾಗಮದ ಎಂಟು ಭೇದಂಗಳು.

೧೨. ವಿಶ್ವಾಸ, ಉತ್ತರವಿಶ್ವಾಸ, ವಿಶ್ವಾಸಮುಖೋದಯ ವಿಶ್ವಾಸನಯನ, ವಿಶ್ವಾಸಕಾರಿಕೆ, ಘೋರಸಂಹಿತೆ, ಸುಸೌಖ್ಯ, ಗುಹ್ಯವೆಂದು ವಿಶ್ವಾಸಾಗಮದ ಎಂಟು ಭೇದಂಗಳು.

೧೩. ಸ್ವಾಯಂಭೂತ,ಪ್ರಜಾಪತಿಮತ, ಪದ್ಮತಂತ್ರವೆಂದು ಸ್ವಾಯಂಭೂವಾಗಮದ ತ್ರಿಭೇದಂಗಳು.

೧೪. ಆಜ್ಞೇಯವೊಂದೇ ಅನಲಾಗಮದ ಭೇದ ಒಂದಾಗಿಹುದು.

೧೫. ಪ್ರಸ್ತರತಂತ್ರ, ಪ್ರಸ್ಫುರತಂತ್ರ, ಪ್ರಬೋಧತಂತ್ರ, ಬೋಧಕತಂತ್ರ, ಬೋಧತಂತ್ರ, ಅಮೋಹತಂತ್ರ, ಮೋಹಸಮಯತಂತ್ರ, ಸಕಟತಂತ್ರ, ಸಾಕಟೀಯತಂತ್ರ, ಹಲತಂತ್ರ, ವಿಲೇಖನತಂತ್ರ, ಭದ್ರತಂತ್ರ, ವೀರತಂತ್ರವೆಂದು ವೇರಾಗಮದ ಹದಿಮೂರು ಭೇದಂಗಳು.

೧೬. ಕಾಲದಹನ, ರೌರವೋತ್ತರ, ಕೌಮಾರ, ಕಾಳ, ಮಹಾಕಾಳ, ಮಹಾತಾಳ, ಇಂದ್ರಾಗಮವೆಂದು ರೌರವಾಗಮನದ ಆರು ಭೇದಂಗಳು.

೧೭. ಮಕುಟ, ಚಕುಟೋತ್ತರವೆಂದು ಮಕುಟಾಗಮದ ಎರಡು ಭೇದಂಗಳು.

೧೮. ಅನಂತಭೋಗಾಗಮ, ಆಕ್ರಾಂತಾಗಮ, ಹೃದ್ಭಾಸಾಗಮ, ಅರಿಕೃತಾನಾಗಮ, ಅದ್ಭುತಾಗಮ, ಮಾರಣತಂತ್ರವೆಂದು ವಿಮಲಾಗಮದ ಆರುಭೇದಂಗಳು.

೧೯. ಸ್ಥಿರಸಂಹಿತೆ, ಸ್ಥಾಣುಸಂಹಿತೆ, ಮಹಂತಸಂಹಿತೆ, ನಂದಿಸಂಹಿತೆ, ನಂದಿಕೇಶ್ವರಸಂಹಿತೆ, ಏಕಪಾದಪುರಾಣ, ಶಂಕರಾಗಮ, ನೀಲಭದ್ರತಂತ್ರ, ಶಿವಭದ್ರಾಗಮ, ಕಲಾಭೇದಾಗಮ, ಶ್ರೀಮುಖಾಗಮ, ಶಿವಶಾಸನಾಗಮ, ಶಿವಶೇಖರಾಗಮ, ದೇವೀಮತವೆಂದು, ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಂಗಳು.

೨೦. ಚತುರ್ಮುಖತಂತ್ರ, ಮಲಯತಂತ್ರ, ಮಹಾಯೋಗ, ಸಂಸ್ತೋಬಾಗಮ, ಪ್ರತಿಬಿಂಬಾಗಮ, ಅರ್ಥಾಲಂಕಾರ, ವಾಯವ್ಯತಂತ್ರ, ಕೌಟಿಕತಂತ್ರ, ತುಟನಿಲಕರ, ತುಲಾವೃತ್ತ, ತುಲಾಯೋಗ, ಕುಟ್ಟಮತಂತ್ರ, ವರ್ಗಶೇಖರ, ಮಹಾವಿದ್ಯೆ, ಮಹಾಸೌರವೆಂಶದು ಬಿಂಬಾಗಮದ ಹದಿನೈದಿ ಭೇದಂಗಳು.

೨೧. ಕವಚಾಗಮ, ವರಾಹತಂತ್ರ, ಪಿಂಗಳಮತ, ಪಾಶಬಂಧಸಂಹಿತ, ದಂಡಧರಿತಂತ್ರ, ಕುಶತಂತ್ರ, ಧನುರ್ಧಾರಿಣಿ, ಶಿವಜ್ಞಾನ, ವಿಜ್ಞಾನ, ತ್ರಿಕಾಲಜ್ಞಾನ, ಆಯುರ್ವೇದ, ಧನುರ್ವೇದ, ಸರ್ವಧಂಷ್ಟ್ರ ವಿಭೇದನ, ಸಂಗೀತ, ಭರತ, ಅತೋದ್ಯವೆಂದು ಪ್ರೋದ್ಗೀತಾಗಮದ ಷೋಡಶ ಭೇದಂಗಳು.

೨೨. ಲಲಿತ, ಲಲಿತೋತ್ತರ, ಕೌಮಾರತಂತ್ರ, ವಿಘ್ನೇಶ್ವರಾಗಮವೆಂದು ಲಲಿತಾಗಮದ ನಾಲ್ಕು ಭೇದಂಗಳು.

೨೩. ಸಾರೋಧರ ದೇವೇಶೋಕ್ತ, ಶಾನಭೇಧ, ಶಶಿಮಂಡಲವೆಂದು ಸಿದ್ಧಾಗಮದ ನಾಲ್ಕು ಭೇದಂಗಳು.

೨೪. ಲಿಂಗಾಧ್ಯಕ್ಷ, ಸುರಾಧ್ಯಕ್ಷ, ಶಂಕರತಂತ್ರ ಮಹೇಶ್ವರಾಗಮ, ಅಸಂಖ್ಯತಂತ್ರ, ಅನಿಲಾಗಮ, ದ್ವಂದ್ವಾಗಮವೆಂದು ಶಾಂತಾಗಮದ ಏಳು ಭೇದಂಗಳು.

೨೫. ಸರ್ವೋಕ್ತಾಗಮದ ಭೇದಂಗಳು ಉಪ್ತವಾಗಿದೆ.

೨೬. ಮಾತಂಗ ತಂತ್ರ, ಯಕ್ಷಿಣೀಶಾಸ್ತ್ರ, ಪದ್ಮಾಗಮ, ಪೌಷ್ಕರ, ಸುಪ್ರಯೋಗ, ಹಂಸಾಗಮ, ಸಾಮಾನ್ಯಾಗಮವೆಂದು, ಪಾರಮೇಶ್ವರಾಗಮ ಏಳು ಭೇದಂಗಳು.

೨೭. ಗರುಡಾಗಮ, ನೈರುತ್ಯಾಗಮ, ನೀಲತಂತ್ರ, ರೂಕ್ಷಾಗಮ, ಭಾನಾಗಮ, ವೈಕ್ರಮಾಗಮ, ಬುದ್ಧಾಗಮ, ಪ್ರಬುದ್ಧಾಗಮ, ಕಾಲತಂತ್ರವೆಂದು ಕಿರಣಾಗಮದ ನವಭೇದಮಗಳ್.

೨೮. ವಾತೂಲ, ಉತ್ತರವಾತೂಲ, ಕಾಲಜ್ಞಾನ, ಪರೋಚಿತ, ಸರ್ವಾಗಮ ಸರ್ವೇಷ್ಟಾಗಮ, ಶ್ರೇಷ್ಠಾಗಮ, ನಿತ್ಯಾಗಮ, ಶುದ್ಧಾಗಮ, ಮಹಾನಾಗಮ ವಿಶ್ವಾಸಾಗಮ, ವಿಶ್ವಾತ್ಮಾಗಮವೆಂದು ವಾತೂಲಾಗಮದ ದ್ವಾದಶ ಭೇದಂಗಳು. ೧೮೮

ಆಗಮ ಪ್ರತಿಪಾದಂಗಳು :

ಬಳಿಕ ಸಕಲಾಗಮಂಗಳಲ್ಲಿಯೂ **ಕ್ರಿಯಾಪಾದ, ಚರ್ಯಾಪಾಧ, ಯೋಗಪಾದ, ಜ್ಞಾನಪಾದ**ವೆಂಬ ನಾಲ್ಕು ವಿಭಾಗಂಗಳುಂ **ಪತಿ ಕುಂಡಲಿನಿ ಮಾಯೆ, ಪಶು ಪಾಶ ದೀಕ್ಷೆ**ಯೆಂಬ ಷಟ್ಪದಾರ್ಥಗಳುಂ.

ಗುರುಮುಖದಿಂ ನಿರ್ಗತಮಾದ **ಜ್ಞಾನಮೆಂಬ,** ಪತ್ಯಾದಿರೂಪ **ಜ್ಞೇಯಮೆಂ**ಬ, ಲಿಂಗಾರ್ಚನ ಲಕ್ಷಣಮಾದ **ಅನುಷ್ಠೇಯ**ಮೆಂಬ ಭಸ್ಮಧಾರಣಾತ್ಮಕಮಾದ **ಅಧೀಕೃತ**ಮೆಂಬ, ಶಿವ ಮಂತ್ರರೂಪ **ಸಾಧನಮೆಂಬ,** ಶಿವ ಸಮಾನತಾಮುಕ್ತಿರೂಪ **ಸಾಧ್ಯ**ವೆಂಬ ಆರು ಪದಾರ್ಥಗಳುಂ ಪ್ರತಿಪಾದ್ಯಂಗಳಕ್ಕುಂ. ೧೮೯

ಪಾದಾದಿವಿಷಯ :

ಬಳಿಕ್ಕವರಲ್ಲಿ ಮೊದಲು ಕ್ರಿಯಾಪಾದದೊಳು, ಆತ್ಮಂಗೆ, ಪಶುತ್ವಕ್ಷಯ ಶಿವತ್ವಾಭಿವ್ಯಕ್ತಿ, ನಿತ್ಯಾದಿಕರ್ಮಾದಿಕಾರಿತ್ವಂಗಳಂ ಸಂಪಾದಿಸೂದೇ ಲಕ್ಷಣಮಾಗಿ,

ಶಿವನ ಕ್ರಿಯಾಶಕ್ತಿರೂಪಮಾದುದೇ ದೀಕ್ಷೆಯಹುದು. ಆ ದೀಕ್ಷಾವಿಶೇಷಯುಕ್ತಮಾದ, ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಪ್ರವರಶೈವ, ಅಂತರಶೈವವೆಂಬಿವೇ ಸಪ್ತಶೈವಂಗಳು:

ಅವರಲ್ಲಿ : ಶಿವನೇ ಅನಾದಿ ಶೈವನು, ಶಿವನಪಂಚವಕ್ತ್ರದಿಂ ದೀಕ್ಷಿತರಾದ ಕೌಶಿಕಾದಿ ಋಷೀಶ್ವರರೇ ಆದಿಶೈವರು, ಆ ಋಷಿಯ ವಂಶಜರಾಗಿ ದೀಕ್ಷಿತರಾದ ದ್ವಿಜರೇ ಮಹಾಶೈವರು. ಶಿವಸಂಸ್ಕಾರಿಗಳಾದ ಕ್ಷತ್ರಿಯರೇ ಅನುಶೈವರು, ಶಿವ ದೀಕ್ಷಾ ಸಂಪನ್ನರಾದ ಶೂದ್ರರೇ ಅವಾಂತರಶೈವರು. ಶಿವದೀಕ್ಷಾಯುಕ್ತರಾದ ಅಂಬಷ್ಠ ಕುಲಾಲಾದಿಗಳೇ ಪ್ರವರಶೈವರು. ದೀಕ್ಷಾನ್ವಿತರಾದುಳಿದ ಜಾತಿಗಳೇ ಅಂತರ ಶೈವವೆನಿಸಿಕೊಳುತ್ತಿರ್ಕುಂ. ೧೯೦

ಶೈವ ಭೇದ :

ಮತ್ತಂ ಆ ಶೈವವೆ ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತನೆಂದು ನಾಲ್ಕು ತೆರನಾಗಿರ್ಪುದು. ಅವರಲ್ಲಿ ಶಕ್ತಿಪರವಾದುದೇ ವಾಮವೆನಿಸೂದು. ಭೈರವ ಪರವಾದುದೇ ದಕ್ಷಿಣವೆನಿಸೂದು. ಸಪ್ತಮಾತೃಕಾ ಪರವಾದುದೇ ಮಿಶ್ರವೆನಿಸೂದು. ಪರಶಿವ ಪರವಾದುದೇ ಸಿದ್ಧಾಂತಮಕ್ಕುಂ.

ಬಳಿಕಾ ಶೈವಂಗಳಲ್ಲಿ ಮುಖ್ಯಮಾದ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವವೆಂದು ಚತುರ್ವಿಧ ಶೈವಂಗಳು. ೧೯೧

ಸಾಮಾನ್ಯ ಶೈವ :

ಆವನಾನೋರ್ವನು ಶ್ರೀ ವಿಭೂತಿಧಾರಣಮಾತ್ರದಿಂ ಶುದ್ಧಾತ್ಮನಾಗಿ ಸ್ವಯಂಭುಲಿಂಗವನಾದೊಡಂ, ದೇವ, ದಾನವ, ಋಷಿ, ಮಾನವಾದಿ ಪ್ರತಿಷ್ಠಿತ ಲಿಂಗವನಾದೊಡಂ ಕಾಣುತ್ತಲೆ ನಮಸ್ಕಾರ ಪ್ರದಕ್ಷಿಣ, ಪೂಜಾದಿಕಮಂ ಯಥಾಶಕ್ತಿಯಿಂ ಮಾಡುತ್ತೆ, ಶಿವಭಕ್ತ ಜನವಾತ್ಸಲ್ಯ, ಶಿವಪೂಜಾರತಿ, ಶಿವಾರ್ಚನೆ, ಶಿವಾರ್ಥಮಾದ ವ್ಯಾಪಾರ, ಶಿವ ಕಥಾಶ್ರವಣೇಚ್ಛೆ, ಶಿವಧ್ಯಾನ, ಶಿವಾನುಕೂಲತೆ, ಪರಮ ಸಾತ್ವಿಕಮೆಂಬ ಅಷ್ಟ ವಿಧಭಕ್ತಿ ಯುಕ್ತನಾಗಿರ್ಪಾತನೇ ಸಾಮಾನ್ಯ ಶೈವನಪ್ಪಂ. ೧೯೨

ಮಿಶ್ರಶೈವ :

ಬಳಿಕ ಪೀಠಸ್ಥ ಶಿವಲಿಂಗಪೂಜೆಯೊಡನೆ ವಿಷ್ಣು, ಉಮೆ, ಷಣ್ಮುಖ, ವಿಘ್ನೇಶ್ವರ ಸೂರ್ಯರೆಂಬೀ ಪಂಚಪೂಜೆಗಳಂ, ಮಿಕ್ಕ ಬ್ರಹ್ಮರಿಂದ್ರಾದಿ ದೇವತಾರಾಧನೆಗಳಂ

ಆಯಾಯ ಮಂತ್ರಂಗಳಿಂ ಮಾಡುತ್ತೆ, ಶಿವನು ಸರ್ವಾತ್ಮಕನೆಂಬ ಬುದ್ಧಿಯಿಂದವೂ, ವಿಷ್ಣಾದಿ ದೇವತೆಗಳೆಲ್ಲಂ ಶಿವಭಕ್ತರೆಂಬ ಭಾವನೆಯಿಂದವೂ ಸಮಾನ ಭಕ್ತಿಯುಕ್ತನಾಗಿರ್ಪಾತನೇ ಮಿಶ್ರಶೈವನಪ್ಪಂ. ೧೯೩

ಶುದ್ಧಶೈವ ಲಕ್ಷಣ :

ಮತ್ತಂ, ಅನಾದಿಶೈವನಾದ ಸದಾಶಿವನ ಸದ್ಯೋಜಾತಾದಿ ಪಂಚಮುಖಗಳಿಂ ದೀಕ್ಷಿತರಾದ ಕೌಶಿಕ, ಭಾರಧ್ವಾಜ, ಅತ್ರಿ, ಗೌತಮರೆಂಬ ಆದಿಶೈವರ ಗೋತ್ರ ಸಂಭವನಾಗಿ ಮಹಾಶೈವನೆನಿಪ ಶುದ್ಧಶೈವನೇ ವೇದಾಗಮ, ಪುರಾಣ ಇತಿಹಾಸ ಸೂತ್ರಭಾಷ್ಯಾದಿ ಸಕಲ ಶಾಸ್ತ್ರ ಸಂಪನ್ನನಾಗಿ; ಸ್ಥೂಲ, ಸೂಕ್ಷ್ಮ ಕಾರಣಗಳೆಂಬ ಶಿವಲಕ್ಷಣಂಗಳಂ; ಶುದ್ಧ ಮಿಶ್ರ ಸಂಕೀರ್ಣವೆಂಬ ಶಿವ ಸ್ವರೂಪಂಗಳಂ ; ಶಿವಾಕರ್ಷಣಾದಿ ಸಕಲ ದೇವತಾಕರ್ಷಣಂಗಳಂ; ಲಿಂಗಪ್ರತಿಷ್ಠೆ ಮೊದಲಾದ ಸಮಸ್ತ ದೇವತಾ ಪ್ರತಿಷ್ಠೆಗಳಂ; ಲಿಂಗಸ್ಥಾಪನಾದಿ ಸಕಲ ದೇವತಾಕರ್ಷಣಂಗಳಂ;ಲಿಂಗಪ್ರತಿಷ್ಠೆ ಮೊದಲಾದ ಸಮಸ್ತ ದೇವತಾ ಪ್ರತಿಷ್ಠೆಗಳಂ; ಲಿಂಗಸ್ಥಾಪನಾದಿ ಸಕಲ ದೇವತಾ ಸ್ಥಾಪನಂಗಳಂ; ನಿತ್ಯೋತ್ಸವ, ಮಾಸೋತ್ಸವ, ರಥೋತ್ಸವಾದಿ ಕ್ರಿಯೆಗಳಂ; ಪುಷ್ಪ, ಗಂಧ, ಮಧು, ಇಕ್ಷು, ನಾಳಿಕೇರ, ಕ್ಷೀರ, ರಜನೀಚೂರ್ಣ, ಸರ್ಪಿ, ತೈಲ, ಜಲ, ವನವೆಂಬ ಶಿವನ ಏಕಾದಶ ವಿಧ ಉತ್ಸಾಹಂಗಳಂ ಲೇಸಾಗಿ ವಿಚಾರಂಗೆಯ್ದು. ೧೯೪

ಬಳಿಕ, ಸೂರ್ಯನಿಂದ ಆರೋಗ್ಯಾದಿಗಳು, ಇಂದ್ರನಿಂ ಸೌಭಾಗ್ಯಾದಿಗಳು, ಅಗ್ನಿಯಿಂದೈಶ್ವರ್ಯಾದಿಗಳು, ಯಮನಿಂ ಪಿತೃಯಾನಾದಿಗಳು, ವಾಯುವಿನಿಂ ಬಲಾದಿಗಳು, ದುರ್ಗಿಯಿಂ ವಿಜಯಾದಿಗಳು, ಸರಸ್ವತಿಯಿಂ ವಾಕ್ಸಿದ್ಧ್ಯಾದಿಗಳು, ಲಕ್ಷ್ಮಿಯಿಂ ಸಂಪದಾದಿಗಳು, ಷಣ್ಮುಖನಿಂದ ಅಷ್ಟಸಿದ್ಧ್ಯಾದಿಗಳು, ಚಂದ್ರನಿಂ ಕೀರ್ತಿ ಚಿತ್ತಶುದ್ಧ್ಯಾದಿಗಳು, ಬ್ರಹ್ಮನಿಂ ಬ್ರಹ್ಮಣ್ಯ ಶಾಂತ್ಯಾದಿ ಸದ್ಗುಣಂಗಳು, ವಿಷ್ಣುವಿನಿಂ ದೇವಯಾನ ಮುಮುಕ್ಷುತ್ವಾದಿಗಳು, ವಿಘ್ನೇಶ್ವನಿಂ ಕಾರ್ಯಸಿದ್ಧಿ ಗುರುಭಕ್ತ್ಯಾದಿಗಳು, ಶ್ರೀಗುರುವಿನಿಂ ಶ್ರವಣಾದಿ ಜ್ಞಾನಸಾಧನಂಗಳು, ಶ್ರೀ ಪಾರ್ವತಿಯಂ ಸಂಪದ ವಿವೇಕಾದಿಗಳು, ಶ್ರೀ ಶಿವನಿಂ ಭೋಗಜ್ಞಾನ ಮೋಕ್ಷಾದಿಗಳೆಲ್ಲಂ ಸಕಾಮನಿಷ್ಕಾಮ ಕ್ರಿಯಾ ಭೇದದಿಂ ಸಿದ್ಧಿಸುತ್ತಿಹವು ಎಂಬುದಂ ಪರಾಮರ್ಶಂಗೆಯ್ದು. ೧೯೫

ವಿಭೂತಿ ವಿಚಾರಂಗಳು :

ಮತ್ತಂ ಆ ಸಮಸ್ತ ಶೈವ ಕ್ರಿಯೆಗಳಿಗೆ ಶ್ರೀಮದ್ವಿಭೂತಿ ಧಾರಣವೇಮುಖ್ಯವಹುದಾಗಿ, ತದ್ವಿಧಾನಮಂ ಶುದ್ಧಶೈವನರಿಯಬೇಕು ಇಲ್ಲಿ: ಸದ್ಯೋಜಾತಾದಿ ಪಂಚಬ್ರಹ್ಮ, ಪೃಥುವ್ಯಾದಿ ಪಂಚಭೂತ, ನಿವೃತ್ಯಾದಿ ಪಂಚ ಕಲೆಗಳಿಂ, ಕ್ರಮದಿಂ ಕಪಿಲ ವರ್ಣದ ನಂದೆ, ಕೃಷ್ಣವರ್ಣದ ಭದ್ರೆ, ರಕ್ತವರ್ಣದ ಸುರಭಿ, ಶ್ವೇತವರ್ಣದ ಸುಶೀಲೆ, ಚಿತ್ರವರ್ಣದ ಸುಮನೆಯೆಂಬ ಕೃಶ್ವಾಂಗಾದಿ ದೋಷಮಿಲ್ಲದ ಸಲ್ಲಕ್ಷಣಮಾದ ಪಂಚಗೋವುಗಳು ಉದಿಸಿಹವು, ಅವರಲ್ಲಿ, ನವೀನವಾದ ದುರ್ಗಂಧಾದಿ ದೋಷಮಿಲ್ಲದ ಗೋಮಯಂಗಳಲ್ಲಿ ಪ್ರಣವಪೂರ್ವಕಮಾದ ಸದ್ಯೋಜಾತಾದಿ ಪಂಚಬ್ರಹ್ಮಮಂತ್ರ ಕ್ರಮ ವಿಡಿದು; ಗ್ರಹಣ,

ಕಬಳನ, ಶೋಷಣ, ದಹನ ಶೋಧನಮೆಂಬ ಪಂಚಕ್ರಿಯೆಯಂ; ಭೂತಿ, ಭಸಿತ, ಭಸ್ಮ, ಕ್ಷಾರ ರಕ್ಷಗಳೆಂಬ ಪಂಚವಿಧಿ ವಿಭೂತಿಗಳ್ಕ್ರಮದಿಂ ಜನಿಸಿ ಐಶ್ವರ್ಯಕಾರಣತ್ವದಿಂ, ಸಾರ್ವಭಾಸಕತ್ವದಿಂ, ಸರ್ವಾಘಭರ್ತ್ಸ್ಯನತ್ವದಿಂ ಅಪದಾತ್ ಕಾರಣತ್ವದಿಂ ಭೂತಾದಿ ಭೀತಿ ರಕ್ಷಣತ್ವದಿಂದ ಆಯಾಯ ಪೆಸರ್ವಡೆದು ಜಗದ್ಧಿತಾರ್ಥವಾಗಿಪ್ಪವು. ೧೯೬

ಬಳಿಕ ನಂದೆ ಮೊದಲಾದ್ಯೆದು ಗೋವರ್ಣಕ್ರಮವಾಂತ ಭೂತಾದಿಗಳ್ಯೆದು; ನಿತ್ಯ ನೈಮಿತ್ತಿಕ, ಕಾಮ್ಯ, ಪ್ರಾಯಶ್ಚಿತ್ತ, ಮುಕ್ತಗಳೆಂಬ ಪಂಚ ಕ್ರಿಯೆಗಳಿಗೆ ಪರಿವಿಡಿದು ಯೋಗ್ಯವಾಗಿರ್ಪವು. ಆ ಸಮಸ್ತ ಭಸಿತಂಗಳು ಆವಾವುಎಂತೆಂದೊಡೆ: ಕಲ್ಪ, ಅನುಕಲ್ಪ, ಉಪಕಲ್ಪ, ಅಕಲ್ಪವೆಂದು ನಾಲ್ಕು ತೆರನಾಗಿರ್ಪವು. ಅವರಲ್ಲಿ ಪೂರ್ವೋಕ್ತ ಗ್ರಹಣ ಕಬಳನಾದಿ ವಿಧಿಯಿಂ ಮಾಡಿದುದೇ ಕಲ್ಪವೆನಿಸೂದು. ವನದೊಳೊಣಗಿದ ಗೋಮಯಮಂ ಮತ್ತೆ ಚೂರ್ಣೀಕರಿಸಿ ದಹಿಸಿ ಮಾಡಿಕೊಂಬುದೇ ಅನುಕಲ್ಪವೆನಿಸುದು. ಮೊದಲು ದಹನಮಾಗಿರ್ದುದನೆ ಬಳಿಕವಸ್ತ್ರದಿಂ ಶೋಧಿಸಿ ಗೋಮೂತ್ರದಿಂ ಕಲಸಿ ಪಿಂಡಮಂ ಮಾಡಿ ಪೂರ್ವೋಕ್ತ ವಿಧಿಯಿಂ ಪಚಿಸಿ ಮಾಡಿಕೊಂಬುದೇ ಉಪಕಲ್ಪವೆನಿಸೂದು. ಅನ್ಯರಿಂ ಮಾಡಿದುದೇ ಅಕಲ್ಪವೆನಿಸೂದು. ಇವರಲ್ಲಿ, ಬ್ರಾಹ್ಮಣ ಕತ್ರಿಯ ವೈಶ್ಯರ್ಗೆ ಅಗ್ನಿಹೋತ್ರಜಭೂತಿಯೋಗ್ಯಮಾಗಿಹುದು. ಗೃಹಸ್ಥಾಶ್ರಮಿಗಳಿಗೆ ವಿರಜಾನಲಾಗ್ನಿ ಪಾಷಾಣಾಗ್ನಿಗಳಿಂದುದಿಸಿದ ಭಸ್ಮವು ಯೋಗ್ಯಮಾಗಿಹುದು. ಬ್ರಹ್ಮಚಾರಿಗಳಿಗೆ ಸಮಿದಗ್ನಿಯಿಂದಾದ ಭಸಿತಯೋಗ್ಯಮಾಗಿಹುದು. ಶೂದ್ರರಿಗೆ ಶ್ರೋತ್ರೀಯಾಗಾರದ ಪಚನದಿಂದೊಗೆದ ಭೂತಿ ಯೋಗ್ಯಮಾಗಿಹುದು. ಯತಿಗಳಿಗೆ ಎಲ್ಲಾ ಎಡೆಯ ವಿಭೂತಿ ಯೋಗ್ಯಮಾಗಿಹುದು. ಅತ್ಯಾಶ್ರಮಿಗಳ್ಗೆ ಸ್ಮಶಾನಭಸ್ಮ ಯೋಗ್ಯವಹುದು. ಸಮಸ್ತರ್ಗೆಯು ದೇವಾಲಯ ಸ್ಥಿತ ಭಸಿತವೇ ಯೋಗಮಾಗಿಹುದು. ೧೯೬

ವಿಭೂತಿ ಧಾರಣ :

ಮತ್ತಮಾ ವಿಭೂತಿಗೆ ಸ್ನಾನ ಉದ್ಧೂಳನ ಧಾರಣಮೆಂಬ ಮೂರು ವಿಧಗಳುಂಟವನಾಚರಿಸುವಾತನು, ಮೊದಲು ಹಸ್ತಪಾದ ಪ್ರಕ್ಷಾಳವಂಗೆಯ್ದು, ಸುಸ್ಥಲದಲ್ಲಿ ಸ್ಥಾಪನದಿಂ ಕುಳ್ಳಿರ್ದು, ಪ್ರಾಣಾಯಾಮ ತ್ರಯಮಂ ಮಾಡಿ, ಮೇಲೆ ಭಸ್ಮಸ್ನಾನಂಗೆಯ್ಯುತ್ತಿದ್ದೇನೆಂದು ಸಂಕಲ್ಪಿಸಿ, ಬಳಿಕ ದೃಢಮಾದ ಚೂತ ಬಿಲ್ವ ಅಶೋಕೆ ಶಿಲೆ ವಸ್ತ್ರಾದಿಗಳಿಂ ರಚಿತಮಾದ, ಆಧಾರದಲ್ಲಿ ಸುಸ್ಥಿತಮಾಗಿರ್ದ, ಶ್ರೀಮದ್ವಿಭೂತಿಯಂ ಕುರಂಗ ಮುದ್ರೆಯಿಂ ಸದ್ಯೋಜಾತಾದಿ ಪಂಚಬ್ರಹ್ಮ ಮಂತ್ರ ಪೂರ್ವಕಮಾಗಿ ತೆಗೆದು ವಾಮ ಹಸ್ತದಲ್ಲಿರಿಸಿ, ನಮಸ್ಕಾರಮಂತ್ರವನುಚ್ಚರಿಸಿ, ಮೇಲೆ ದಕ್ಷಿಣ ಹಸ್ತದಿಂ ಮುಚ್ಚಿ, ಬಲದ ತೊಡೆಯ ಮೇಲಿಟ್ಟು, ಮೂಲ ಮಂತ್ರದಿಂದೇಳು ವೇಳೆ ಮಂತ್ರಿಸಿ ಬಳಿಕ 'ಅಗ್ನಿರಿತಿ ಭಸ್ಮ' ಎಂಬುದು ಮೊದಲಾದ ಮಂತ್ರೋಚ್ಚಾರಣದಿಂದಾದರೂ ಮಂತ್ರಿಸಿ, ಬಳಿಕ, ಮಾನಸ್ತೋಕೇತಿ ಮಂತ್ರದಿಂದೆತ್ತಿ ಶಿರಸ್ಸು ಮುಖ ಹೃದಯ ಗುಹ್ಯ ಪಾದ ಸರ್ವಾಂಗಮೆಂಬ ಆರುಸ್ಥಾನಂಗಳಲ್ಲಿಯೆ ಆಯಾಯ ಮಂತ್ರೋಚ್ಚಾರಣದಿಂ ಕ್ರಮದಿಂದ ಈಶಾನಾದಿ ಪಂಚಬ್ರಹ್ಮ ಪ್ರಣವ ಮಂತ್ರಂಗಳನು, ಸೃಷ್ಟಿ ಸ್ಥಿತಿ ಸಂಹಾರಕ್ರಮವನರಿದು ಸಂಪ್ರೋಕ್ಷಣಂಗೆಯ್ವುದೇ ಸ್ನಾನಮಕ್ಕುಂ. ೧೯೭

ಮತ್ತಂ ಶಿರಸ್ಸು ಮೊದಲಾದ ಆರು ಸ್ಥಾನಂಗಳಲ್ಲಿಯೆ ಆಯಾಯ ಮಂತರೋಚ್ಚಾರಣದಿಂ ಕ್ರಮದಿಂದ ಐದುವೇಳೆ, ನಾಲ್ಕು ವೇಳೆ, ಎಂಟುವೇಳೆ ಹದಿಮೂರು ವೇಳೆ ಒಂದು ವೇಳೆ ಅನುಲೇಪನಂಗೆಯ್ವುದೇ ಉದ್ಧೂಳನಮಕ್ಕುಂ. ಬಳಿಕಲ್ಲಿ ಬ್ರಾಹ್ಮಣರ್ಗೆ ಚತುರಾಶ್ರಮಿಗಳ್ಗೆ ಸರ್ವಾಂಗೋದ್ಧೂಳನಂ ಸಲ್ವುದು. ಕ್ಷತ್ರಿಯರ್ಗೆ ಮುಖಮಾತ್ರವಂ ಬಿಟ್ಟು ಸರ್ವಾಂಗೋದ್ಧೂಳನಂ ಸಲ್ವುದು. ವೈಶ್ಯರ್ಗೆ ಲಲಾಟ ಮಾತ್ರೋದ್ಧೂಳನಂ ಸಲ್ವುದು. ಶೂದ್ರರ್ಗೆ ಧಾರಣವೇ ಅಕ್ಕುಂ. ೧೯೮

ಬಳಿಕ ಸುಶೀತಳಮಾದ ಮಂತ್ರೋದಕ ಮಿಶ್ರಮಾದ ವಿಭೂತಿಯಂ ಮೂಲಮಂತ್ರ, ತ್ರಿಯಾಯುಷಮಂತ್ರ, ತ್ರಿಯಂಬಕ ಮಂತ್ರಗಳನುಚ್ಚರಿಸುತ್ತಂ ಶಿವಮೂರ್ತಿಧ್ಯಾನಯುಕ್ತನಾಗಿ ತ್ರಿಪುಂಡ್ರ ಧಾರಣ ಸ್ಥಳಂಗಳಲ್ಲಿ ಧರಿಸಬೇಕು. ಆ ಸ್ಥಾನಂಗಳಾವುವು ಎಂತೊದೊಡೆ: ಮೂರ್ಧ್ನಿ ಲಲಾಟ ಕರ್ಣದ್ವಯ ನೇತ್ರದ್ವಯ ಘ್ರಾಣ ಮುಖ ಬಾಹುದ್ವಯ ಭುಜದ್ವಯ ಮಣಿಬಂಧದ್ವಯ ಸ್ಥನದ್ವಯ ವಕ್ಷ ಉದರ ಪಾರ್ಶದ್ವಯ ನಾಭಿ ಮೇಢ್ರ ಪಾಯು ಪೃಷ್ಠ ಊರುದ್ವಯ ಜಾನುದ್ವಯ ಜಂಘಾದ್ವಯ ಪಾದದ್ವಯವೆಂಬವೆ ಮೂವತ್ತೆರಡು ಧಾರಣ ಸ್ಥಲಗಳು. ಬಳಿಕ ಶಿರಸ್ಸು ಬಾಳ ಕರ್ಣಯುಗ್ಮ ಓಷ್ಠದ್ವಯ ಕಂಠ ಬಾಹುಯುಗ್ಮ ಭುಜಯುಗಳ ಮಣಿಬಂಧದ್ವಯ ಹೃದಯ ಅಪರ ನಾಭಿಯೆಂಬವೆ ಹದಿನಾರು ಸ್ಥಾನಂಗಳು. ಬಳಿಕ ಮಸ್ತಕ ಅಳಿಕ ಗ್ರೀವ ಬಾಹುದ್ವಯ ಹೃದಯ ನಾಭಿ ಪೃಷ್ಟವೆಂಬವೆ ಎಂಟು ಸ್ಥಾನಂಗಳೆನಿಸಿರ್ಪವು, ಅವರಲ್ಲಿ ಶಿರಸ್ಸು ಲಲಾಟ ಶ್ರೋತ್ರದ್ವಯ ಕಂಠ ಭುಜದ್ವಯ ವಕ್ಷ ಪೃಷ್ಠ ನಾಭಿ ಸ್ಕಂದವೆಂಬ ಏಕಾದಶ ಸ್ಥಾನಂಗಳೇ ಮುಖ್ಯವಾಗಿರ್ಪವು, ಅವರಲ್ಲಿ, ಸ್ಥಿರ ಪದ್ಮಾಸೀನರಾದ, ಶುದ್ಧಸ್ಪಟಿಕ ಸನ್ನಿಭರಾದ ಕಪರ್ದ ಚಂದ್ರಕಲೆ ಪ್ರಸನ್ನವದನ ನೀಲಗ್ರೀವ ಕ್ಷೌಮಾಂಬರ ಸರ್ಪಧಾರಣಗಳುಳ್ಳ ಮೃಗಿ ಟಂಕ ವರದಾಭಯ ಪಾಣಿಗಳಾದ, ಸರ್ವಲಕ್ಷಣ ಸಂಪನ್ನರಾದ ಪರಮಾತ್ಮ ಶಿವ ಮಾಹೇಶ್ವರ ರುದ್ರ ಶ್ರೀಕಂಠ ಶಂಭು ಈಶ್ವರ ಮಹಾದೇವ ಪಶುಪತಿ ಶಂಕರ ವೃಷಧ್ವಜರೆಂಬ ರುದ್ರರ ಶಿರಸ್ಸು ಮೊದಲಾದ ಏಕಾದಶ ಸ್ಥಾನಕ್ರಮದಿಂ ಸ್ಮರಿಸುತ್ತವೆ ತ್ರಿಪುಂಡ್ರಮಂ ಧರಿಸೂದೇ ಧಾರಣಮುಕ್ಕುಂ. ೧೯೯

ವಿಭೂತಿ ಧಾರಣ ಕ್ರಮ :

ಬಳಿಕ ಆ ಲಲಾಟದಲ್ಲಿ ತ್ರಿಪುಂಡ್ರಧಾರಣಮಂ, ದಕ್ಷಿಣಕರದ ಮಧ್ಯಮೆ ಅನಾಮಿಕೆ ಅಂಗುಷ್ಠಮೆಂಬ ಅಂಗುಲಿತ್ರಯದಿಂದ ಅನುಲೋಮದಿಂದಾದರೂ, ಅಲ್ಲವೆ, ಅಕಾರವೆ ಅನಾಮಿಕೆ, ಉಕರವೆ ಮಧ್ಯಮೆ, ಮಕಾರವೆ ತರ್ಜನಿಯೆಂಬ ಭಾವನೆಯೆಂದ, ಮಧ್ಯಮಂಗುಲಿತ್ರಯದಿಂದಾದರೂ; ಅಗ್ನಿತ್ರಯ, ಕಾಲತ್ರಯ, ಅಕ್ಷರತ್ರಯ, ಗುಣತ್ರಯ, ಲೋಕತ್ರಯ, ಆತ್ಮತ್ರಯ, ವೇದತ್ರಯ, ರುದ್ರ–ಈಶ್ವರ–ಸದಾಶಿವರೆಂಬ ದೇವತಾತ್ರಯಾತ್ಮಕಮೆಂಬ ಅನುಸಂಧಾನ ಪೂರ್ವಕಮಾಗಿ ತ್ರಿರೇಖೆಗಳಂ ಷಡಂಗುಲ ಪ್ರಮಾಣಮಾಗಿ, ನೇತ್ರಯುಗ್ಮ ಪ್ರಮಾಣಮಾಗಿ, ಲಲಾಟಾಂತಮಾದರೂ, ಕಠಿಣ, ಮಲಿನ, ವಕ್ರ, ಭಿನ್ನ, ದೂರ, ಬೆರಕೆಯೆಂಬ ಆರುದೋಷಮಿಲ್ಲದೆ; ನಯ, ಶುಭ್ರ, ನೇರ, ಸಾಂದ್ರ, ಸಮೀಪ, ಭಿನ್ನಮೆಂಬ ಆರು ಲಕ್ಷಣಯುಕ್ತಮಾಗಿ ಧರಿಸೂದು. ಅಲ್ಲಿ ಬ್ರಾಹ್ಮಣರಿಗೆ ಆರಂಗುಲ ಪ್ರಮಾಣ, ಕ್ಷತ್ರಿಯರ್ಗೆ ನಾಲ್ಕಂಗುಲಪ್ರಮಾಣ, ವೈಶ್ಯರ್ಗೆ ಎರಡಂಗುಲ

ಪ್ರಮಾಣ. ಶೂದ್ರರಿಗೆ ಒಂದಂಗುಲ ಪ್ರಮಾಣದಿಂ ತ್ರಿಪುಂಡ್ರಮಂ ಧರಿಪುದೇ ಧಾರಣಮಕ್ಕುಂ ಬಳಿಕ ಇಲ್ಲಿ ಗೃಹಸ್ಥರು ಸ್ತ್ರೀಯರುಗಳು ತ್ರಿ ಸಂಧ್ಯಯಲ್ಲಿಯು ಜಲಮಿಶ್ರಿತವಾದ ಶ್ರೀ ವಿಭೂತಿಯನು ಧರಿಸಬೇಕು. ಯತಿಗಳು ಎಲ್ಲಾ ಕಾಲದಲ್ಲಿಯು ಜಲ ಮಿಶ್ರಿತವಿಲ್ಲದೆ ವಿಭೂತಿಯಂ ಧರಿಸಬೇಕು. ವಾನಪ್ರಸ್ಥರು, ಕನ್ನಿಕೆಯರು, ದೀಕ್ಷಾಹೀನ ಮನುಷ್ಯರು ಮಧ್ಯಾಹ್ನ ಪರಿಯಂತರಂ ಜಲಮಿಶ್ರಿತವಾಗಿ ಮೇಲೆ ಕೇವಲ ವಿಭೂತಿಯನೆ ಧರಿಸಲ್ವೇಳ್ಕುಂ. ೨೦೦

ಬಳಿಕ ಇಂತು ಸ್ನಾನ ಉದ್ಧೂಳನ ಧಾರಣಕ್ರಮದಿಂ ವಿಧ್ಯುಕ್ತಮಾಗಿ ಶ್ರೀಮದ್ವಿಭೂತಿಯಂ ಧರಿಸೂದೇ ಶಿರೋಮಂತ್ರ ವ್ರತವೆಂದು, ಪಾಶುಪತ ವ್ರತವೆಂದು ಪೆಸರ್ವಡೆದು ದೋಷ ರೋಗಾದಿ ಭೀತಿಯಂ ಬಿಡಿಸಿ, ಭೋಗ ಮೋಕ್ಷಪ್ರದಮೆಂದು ವೇದಾಗಮ ಪುರಾಣಾದಿಗಳಲ್ಲಿ ಪ್ರಸಿದ್ಧ ವಹುದಾಗಿಯುಂ, ಸಮಸ್ತ ಮನು ಮುನಿ ದೇವತೆಗಳೆಲ್ಲರೂ ಮಹಾ ವಿಶಿಷ್ಟವೆಂದು ಧರಿಸಿದರಾಗಿಯುಂ, ರಕ್ಷಣಾರ್ಥ, ಮಂಗಲಾರ್ಥ, ಪವಿತ್ರಾರ್ಥ, ಶಿವಾರ್ಥವಾಗಿಯುಂ ಬ್ರಾಹ್ಮಣಾದಿ ವರ್ಣಿಗಳುಂ, ಬ್ರಹ್ಮಚರ್ಯಾದ್ಯಾಶ್ರಮಿಗಳುಂ, ಸಾಂಖ್ಯಾದಿ, ಮತಾಭಿಮಾನಿಗಳುಂ ಸರ್ವಥಾ ಶ್ರೀ ವಿಭೂತಿಯನೆ ಧಾರಣಂಗೆಯ್ಯಲ್ತಕ್ಕುದೆಂದು ವಿಶ್ವಾಸಿಸಿ. ೨೦೧

ರುದ್ರಾಕ್ಷಧಾರಣ ಕ್ರಮ :

ಬಳಿಕ ಇಂತು ಭಸ್ಮಧಾರಣಾನಂತರದಲ್ಲಿ, ರುದ್ರಾಕ್ಷಧಾರಣವೇ ಕರ್ತವ್ಯಮಪ್ಪುದಾಗಿ, ತದ್ವಿಧಾನಮಂ ಶುದ್ಧಶೈವನರಿಯಬೇಕು, ಅಲ್ಲಿ ತ್ರಿಪುರದಹನ ಲೀಲಾಸಮಯದೋಳೀಶ್ವರನ ಚಂದ್ರಸೂರ್ಯಾಗ್ನಿ ಲೋಚನತ್ರಯದ ಜಲಬಿಂದುಗಳಲ್ಲಿ ಕ್ರಮದಿಂ, ಶುಭ್ರವರ್ಣದ ಷೋಡಶವಿಧಮಾದ, ರಕ್ತವರ್ಣದ ದ್ವಾದಶವಿಧಮಾದ, ಕೃಷ್ಣವರ್ಣದ ದಶಪ್ರಕಾಶಮಾದ ರುದ್ರಾಕ್ಷಿಗಳು, ತಮ್ಮನಾಮೋಚ್ಚಾರಣ ದರ್ಶನ ಸ್ಪರ್ಶನ ಧಾರಣಮಾತ್ರದಿಂದ ಉತ್ತರೋತ್ತರಮಾದ ಅಧಿಕ ಪುಣ್ಯಂಗಳನೀವುದರಿಂದ, ಲೋಕೋಪಕಾರಮಾಗಿ ಜನಿಸಿದವು. ಆ ರುದ್ರಾಕ್ಷಿಗಳಲ್ಲಿ ಸರಂಗೆಯ್ಯುದಕ್ಕೆಯೇ ಮಣಿಗಳ ಉನ್ನತಸ್ಥಾನಂಗಳೇ ಮುಖಂಗಳು; ನಿಮ್ನ ಸ್ಥಾನಂಗಳೇ ಪೃಷ್ಠಂಗಳಹವು. ಮುಖದ ಗಣನೆಯನರಿವುದಕ್ಕೆ ರೇಖೆಗಳೇ ಮುಖಂಗಳಪ್ಪವು. ಆ ಮಣಿಗಳ ಮೂಲವೇ ಬ್ರಹ್ಮನು, ನಾಳವೇ ವಿಷ್ಣು, ಮುಖವೇ ರುದ್ರನು, ಕೇಸರಂಗಳೇ ಸಕಲ ದೇವತೆಗಳು, ಅವರ ಸಲ್ಲಕ್ಷಣಂಗಳಂ ಪರೀಕ್ಷಿಸಿ, ಮೇಲೆ ಪ್ರಕ್ಷಾಲನಾದಿ ವಿಧಿಗಳಿಂ ಸರಂಗೊಳಿಸಿ, ಬಳಿಕ ತಾನು ಸ್ನಾನಾದಿಗಳಿಂ ಶುಚಿಯಾಗಿ ಕುಳ್ಳಿರ್ದು, ಧರಿಸುತ್ತಿದ್ದೇನೆ ಎಂದು ಸಂಕಲ್ಪಿಸಿ.

ಬಳಿಕ ಶಿಖೆಗೆ ಏಕಮುಖದ ಮಣಿಯೊಂದು; ಶಿರಕ್ಕೆರಡು, ಮೂರು, ಹತ್ತು ಮುಖದ ಮಣಿಗಳಲ್ಲಿ ಮೂರು; ಮೂರ್ಧ್ನಕ್ಕೆ ಹನ್ನೊಂದು ಮುಖದ ಮಣಿ ಮುವತ್ತಾರು. ಕರ್ಣಂಗಳಿಗೆ ಐದು, ಏಳು ಹತ್ತು ಮುಖದ ಮಣಿಗಳು ಅಲ್ಲೊಂದೊಂದು. ಕಂಠಕ್ಕೆ ಎಂಟುಮುಖದ ಮಣಿ ಮೂವತ್ತೆರಡು. ಉರಕ್ಕೆ ನಾಲ್ಕುಮುಖದ ಮಣಿಗಳೈವತ್ತು. ಬಾಹು ದ್ವಯಕ್ಕೆ ಹದಿಮೂರು ಮುಖದ ಮಣಿ ಹದಿನಾರು ಹದಿನಾರು.

ಮಣಿಬಂಧಯುಗಕ್ಕೆ ಒಂಬತ್ತು ಮುಖದ ಮಣಿ ಹನ್ನೆರಡು, ಹನ್ನೆರಡು. ಯಜ್ಞೋಪವೀತಕ್ಕೆ ಹದಿನಾಲ್ಕು ಮುಖದ ಮಣಿ ನೂರೆಂಟು. ಉದರ ಬಂಧಕೆ ಆವ ಮುಖದ ಮಣಿಯಾದರೂ ಐವತ್ತನಾಲ್ಕನು ಆಯಾಯ ಮಂತ್ರಪೂರ್ವಕಮಾಗಿ ಧರಿಸೂದು. ಬಳಿಕ ಈ ಕ್ರಮದ ಮುಖದ ಮಣಿ ದೊರೆಯದಿರ್ದೊಡೆ ಎನಿತುಮುಖದ ಮಣಿಗಳನಾದರೂ ಆಯಾ ಸ್ಥಾನಗಣನೆ ತಪ್ಪದೆ ಧರಿಸಲ್ವೇಳ್ಕುಂ. ೨೦೩

ರುದ್ರಾಕ್ಷ ದೇವತಾ ಫಲ :

ಬಳಿಕ ಏಕಮುಖದ ಮಣಿಯೇ ಪರಶಿವನು, ಬ್ರಹ್ಮಹತ್ಯಾದಿ ಪಾತಕಮಂ ಕೆಡಿಸಿ ಸರ್ವಸಿದ್ಧಿಗಳನೀವುದು.

ದ್ವಿಮುಖದ ಮಣಿಯೇ ಈಶ್ವರ ಈಶಾನರು, ಗೊವಧೆಯಂ ಪರಿಹರಿಸೂದು, ತ್ರಿಮುಖದ ಮಣಿಯೇ ಅಗ್ನಿ, ಸ್ತ್ರೀ ವಧೆಯ ಪಾಪಮಂ ದಹಿಸೂದು.

ಚತುರ್ಮುಖದ ಮಣಿಯೇ ಚತುರ್ಮುಖನು, ಪುರುಷವಧಾ ಪಾಪಮಂ ತೊಲಗಿಸೂದು.

ಪಂಚಮುಖದ ಮಣಿಯೇ ಸದಾಶಿವನು, ಅಭಕ್ಷಭಕ್ಷಣಾದಿ ದೋಷಮಂ ನಿವರ್ತಿಸೂದು.

ಷಣ್ಮುಖದ ಮಣಿಯೇ ಷಣ್ಮುಖನು. ಭ್ರೂಣ ಹತ್ಯಾದಿ ಪಾತಕಮಂ ಕೆಡಿಸೂದು.

ಸಪ್ತಮುಖದ ಮಣಿಯೇ ಅನಂತನು. ಗೋವಧೆ ಸುವರ್ಣಸ್ತೇಯಾದಿ ಕಲುಷಮಂ ಕ್ಷಯಿಸೂದು.

ಅಷ್ಟಮುಖದ ಮಣಿಯೇ ವಿಘ್ನೇಶ್ವರನು, ಸಮಸ್ತ ಪಾತಕಂಗಳನು ಉರುಹಿ ಸರ್ವವಿಘ್ನಂಗಳಂ ನಿವಾರಿಸಿ ಪರಮ ಪದವೀವುದು.

ನವಮುಖದ ಮಣಿಯೇ ಭೈರವನು, ಸಕಲ ಕಲ್ಮಷಂಗಳಂ ಕಳೆದು ಭುಕ್ತಿ ಮುಕ್ತಿಗಳಂ ಕೊಡುವುದು.

ದಶಮುಖದ ಮಣಿಯೇ ಮಾಧವನು, ಭೂತವೇತಾಳ ಮಾರಿಗಣ ಬ್ರಹ್ಮರಾಕ್ಷಸ ಪನ್ನಗಾದಿ ಭಿತಿಯಂ ಬಿಡಿಸೂದು.

ಏಕಾದಶ ಮುಖದ ಮಣಿಯೇ ಏಕಾದಶ ರುದ್ರರು. ಅಶ್ವಮೇಧಾದಿ ಪುಣ್ಯಂಗಳನೀವುದು.

ದ್ವಾದಂ ಮುಖದ ಮಣಿಯೇ ದ್ವಾದಶಾದಿತ್ಯರು. ಅಗ್ನಿ ಚೋರ ವ್ಯಾಘ್ರ ಖಡ್ಗಾದಿ ಬಾಧೆಗಳಂ ನಿವಾರಿಸಿ ವ್ಯವಹಾರ ಸಿದ್ಧಿ ಸುವರ್ಣದಾನಾದಿ ಫಲಂಗಳನೀವುದು.

ತ್ರಯೋದಶ ಮುಖದ ಮಣಿಯೇ ಮಹೇಶ್ವರನು, ಮಾತಾಪಿತೃವಧೆ ಮೊದಲಾದ ದುಷ್ಕೃತಿಯಂ ನಿವಾರಿಸಿ, ರಸ, ರಸಾಯನ, ವಾದ ವಶ್ಯಾದಿಗಳಂ ಫಲಿಸೂದು.

ಚತುರ್ದಶ ಮುಖದ ಮಣಿಯೇ ಮನುಗಳು. ಸಕಲದೇವತಾ ಪೂಜಾಪುಣ್ಯಪ್ರದವೆಂದರಿವುದು. ೨೦೪

ರುದ್ರಾಕ್ಷಧಾರಣ ಮಂತ್ರ :

ಏಕಮುಖದ ಮಣಿ ಮೊದಲಾಗಿ ಚತುರ್ದಶ ಮುಖದ ಮಣಿಗಳ ಪರಿಯಂತರಂ, ಓಂ ಹ್ರಾಂ ಲಾಂ ಓಂ ಹ್ರೀಂ ಹ್ರೂಂ ಹ್ರೌಂ ಶ್ರೀಂ ಹ್ರೇಂ ಮಂ ವಂ ಕ್ಷೋಂ ಕ್ಷಾಂ ಊಂ ಎಂಬ ಕ್ರಮದಿಂದಾಯಾಯ ಮಂತ್ರಪೂರ್ವಕಮಾಗಿ ಧರಿಸುವುದು. ಆ ರುದ್ರಾಕ್ಷೆಗಳಂ ಬ್ರಾಹ್ಮಣಾದಿಗಳೆಲ್ಲರುಂ ಸಂಧ್ಯಾವಂದನಾದಿ ಕ್ರಿಯೆಗಳಲ್ಲಿ ಸರ್ವಥಾ ಧರಿಸಬೇಕೆಂದು ನಿರ್ಧರಿಸಿ. ೨೦೫

ಮಂತ್ರ ವಿಷಯ :

ಬಳಿಕ ಇಂತು ಭಸಿತ ರುದ್ರಾಕ್ಷಧಾರಣನಿಷ್ಠನಾದ ಶುದ್ಧಶೈವನು ಪಂಚಾಕ್ಷರಾದಿ ಮಂತ್ರ ಜಪ ವಿಧಿಗಳನರಿಯಬೇಕು. ಇಲ್ಲಿ ಮೊದಲು : ಸಿದ್ಧ ಸಾಧ್ಯ ಸುಸಿದ್ಧ ಅರಿಯೆಂಬ ಮಂತ್ರಸಿದ್ಧಿ ಸೂಚಕಮಾದ ಮಾತೃಕಾ ಚಕ್ರೋದ್ಧರಣವನು, ಮಂತ್ರಾರ್ಚನಾದಿ ಕರಣಮಾದ ಯಂತ್ರೋದ್ಧರಣವನು, ಮಂತ್ರಾನು ಸಂಧಾನಾಶ್ರಯಮಾದ ಘಟೋದ್ಧರಣಾದಿಗಳಂ ಪರೀಕ್ಷಿಸಿ. ೨೦೬

ಬಳಿಕ, ಶುದ್ಧ ಪ್ರಸಾದ, ಮೂಲ ಪ್ರಸಾದ, ತತ್ವ ಪ್ರಸಾದ, ಆದಿಪ್ರಸಾದ, ಆತ್ಮಪ್ರಸಾದವೆಂಬ ಸೃಷ್ಟಿರೂಪ ಪಂಚ ಶಿವಮಂತ್ರಂಗಳಂ; ಮೋಕ್ಷದ, ಅಭಿವೃದ್ಧಿ, ಕಾಮ್ಯ, ಶಾಂತಿಕ, ಪೌಷ್ಟಿಕಮೆಂಬ ಪಂಚ ಸದಾಶಿವರೂಪ ಸ್ಥಿತಿ ಮಂತ್ರಂಗಳಂ; ಸೃಷ್ಟಿ, ಸ್ಥಿತಿ, ಲಯವೆಂಬ ಮಹೇಶ್ವರರೂಪ ತ್ರಿವಿಧ ಸಂಹಾರಮಂತ್ರಂಗಳಂ; ಸಾಕಲ್ಯಪ್ರಣವ, ಶಾಂಭವಪ್ರಣವ, ಸೌಖ್ಯಪ್ರಣವ, ಸಾದಾಖ್ಯಪ್ರಣವ ಸಾಯುಜ್ಯಪ್ರಣವವೆಂಬ ಪಂಚ ಪ್ರಣವ ಮಂತ್ರಂಗಳಂ; ಮೂಲ ಪಂಚಾಕ್ಷರ, ಸ್ಥೂಲ ಪಂಚಾಕ್ಷರ, ಸೂಕ್ಷ್ಮ ಪಂಚಾಕ್ಷರ, ಮಾಯಾಖ್ಯ ಪಂಚಾಕ್ಷರ, ಪ್ರಸಾದ ಪಂಚಾಕ್ಷರವೆಂಬ ಪಂಚ ಪಂಚಾಕ್ಷರ ಮಂತ್ರಂಗಳಂ; ಶಿವಾಸ್ತ್ರ, ಕ್ಷುರಿಕಾಸ್ತ್ರ, ಪಾಶುಪತಾಸ್ತ್ರ, ವ್ಯೋಮಾಸ್ತ್ರ, ಅಘೋರಾಸ್ತ್ರವೆಂಬ ಪಂಚಾಸ್ತ್ರಮಂತ್ರಗಳಂ; ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನವೆಂಬ ಪಂಚಬ್ರಹ್ಮ ಮಂತ್ರಂಗಳಂ; ಗಾಯತ್ರಿ, ಮೃತ್ಯುಂಜಯ, ದಕ್ಷಿಣಾಮೂರ್ತಿ, ನೀಲಕಂಠ, ಶರಭ, ವೀರ, ವಿಘ್ನೇಶ್ವರ, ವಿಶಾಖ, ವಿದ್ಯೇಶ್ವರ, ಬ್ರಹ್ಮ, ವಿಷ್ಣು, ಸೂರ್ಯ, ಭೈರವಾದಿ ಮಹಾಮಂತ್ರಂಗಳಂ; ದುರ್ಗಿ, ಶಾರದೆ, ಲಕ್ಷ್ಮಿ, ಗೌರಿ, ಭುವನೇಶ್ವರಿ, ಅನ್ನಪೂರ್ಣೇಶ್ವರಿ, ಅಶ್ವಾರೂಡೆ, ತ್ರಿಪುರಾಂಬಿಕಾದಿ ಮಹಾ ಶಕ್ತಿ ಮಂತ್ರಂಗಳಂ; ಸಿದ್ಧಶಾಭರ, ಶಕ್ತಿಶಾಭರ, ಮೇರುತಂತ್ರ, ಶಾಕಿನೀತಂತ್ರ, ಡಾಕಿನೀತಂತ್ರ, ಕೂಚಿಮಾರತಂತ್ರ, ಶಲ್ಯತಂತ್ರಾದಿ ಸಿದ್ಧಮಂತ್ರಂಗಳಂ; ಆಂಧ್ರ ದ್ರವಿಡ ಲೌಕಿಕ ದೇಶ ಭಾಷಾ ಮಂತ್ರಂಗಳಂ ಬೇರೆ ಬೇರೆ ವಿವೇಕಿಸಿ ನೋಡಿ. ೨೦೭

ಮಂತ್ರಾಂಗ ಪಲ್ಲವ ಪ್ರಯೋಗ :

ಮತ್ತಂ, ಆ ಮಂತ್ರಗಳ ಹೃದಯ ಶಿರಸ್ಸು ಶಿಖಿ ಕವಚ ನೇತ್ರ ಅಸ್ತ್ರವೆಂಬಷಡಂಗ ಕ್ರಮದಿಂ, ನಮಃ ಸ್ವಾಹಾ, ವಷಟ್, ಹುಂ, ವೌಷಟ್, ಫಟ್, ಎಂಬ ಷಟ್ ಪಲ್ಲವ ಪ್ರಯೋಗಂಗಳಂ; ಶುಭ್ರ ಪೀತ ರಕ್ತ ಸ್ಫಟಿಕ ಶ್ಯಾಮ ಕೃಷ್ಣವೆಂಬ ಕ್ರಮದಿಂದಾ

ಹೃದಯಾದ್ಯಂಗ ವರ್ಣಂಗಳಂ ಪಂಚಾಂಗಮಂತ್ರಂಗಳಿಗೆ ನೇತ್ರ ಪಲ್ಲವಮಂ ಬಿಡಬೇಕೆಂಬುದಂ, ಅಂಗಹೀನಮಂತ್ರಂಗಳಿಗೆ ಅಂಗಮಂ ಕಲ್ಪಿಸಿಕೊಳಬಹುದೆಂಬುದಂ ನಿಶ್ಚೈಸಿ. ೨೦೮

ಮತ್ತಂ ಅ ಮಂತ್ರ ಪಲ್ಲವಂಗಳಲ್ಲಿ ಕೋಪ ಉಪಶಾಂತಿಗಳಿಗೆ ಹೃದಯ ಪಲ್ಲವಮಂ, ಹೋಮವಶ್ಯಾದಿಗಳಿಗೆ ಶರಃ ಪಲ್ಲವಮಂ, ಲಾಭಾಲಾಭಾದಿಗಳಿಗೆ ಶಿಖಾಪಲ್ಲವಮಂ, ಮೋಹನ ಉದ್ದೀಪನ ಪುಷ್ಟಿ ವಿಜಯಾದಿಗಳಿಗೆ ನೇತ್ರ ಪಲ್ಲವಮಂ, ಛೇದನ ಮಾರಣ ಪ್ರೀತಿ ನಾಶಾದಿಗಳಿಗೆ ಕವಚಪಲ್ಲವಮಂ, ವಿಘ್ನ ಗ್ರಹ ಉಚ್ಚಾಟನಾದಿಗಳಿಗೆ ಅಸ್ತ್ರ ಪಲ್ಲವಮಂ ಮಂತ್ರಾಂತ್ಯದಲ್ಲಿ ಪ್ರಯೋಗಿಸಬೇಕೆಂಬುದಂ ವಿಧಿಸಿ. ೨೦೯

ಮಂತ್ರ ದಶಭೇದ ಸಂಸ್ಕಾರಗಳು :

ಬಳಿಕ, ವಾತೂಲ ಶರದಾತಿಲಕ ಮಂತ್ರದೇವತಾಪ್ರಕಾಶಿಕೆ, ಪ್ರಪಂಚಸಾರಾದಿ ಮಂತ್ರ ಶಾಸ್ತ್ರೋಕ್ತ, ಮಹಾಚಕ್ರಗತಮಾದ ಮಾತೃಕೆಗಳಿಂ ತೆಗೆದು ಮಂತ್ರವನುದ್ಧರಿಸುವ ಜನನವೆಂಬ;

ಮತ್ತಮಾ ಮಂತ್ರಾಕ್ಷರಂಗಳಂ ಪ್ರಣವ ಅಂತರ್ಹಿತಮಂ ಮಾಡಿ ಜಪಿಸುವ ಜೀವನಮೆಂಬ;

ಮರಳಿ ಮಂತ್ರವರ್ಣಂಗಳಂ ಬರೆದು ಬೇರೆ ಬೇರೆ ಆ ವರ್ಣಂಗಳಂ ಚಂದನೋದಕದಿಂ ವಾಯುವಿನಿಂ ಪೊಡೆವ ತಾಡಣಮೆಂಬ;

ಬಳಿಕ ಆ ಮಂತ್ರಾಕ್ಷರಂಗಳ ಗಣನೆಯೆನಿತು ಕರವೀರದ ಅರಳಿಂ ವಾಯುವಿನಿಂದ ಇಡುವ ಬೋಧನಮೆಂಬ;

ಮತ್ತಂ ಆಮಂತ್ರಾಕ್ಷರದ ಸಂಖ್ಯೆಗಳೆನಿತು ಅಶ್ವತ್ಥಪಲ್ಲವಂಗಳಿಂ ಮಂತ್ರಾಕ್ಷರಂಗಳಿಗೆ ಮಂತ್ರೋದಕವೆರೆವ ಅಭಿಷೇಕವೆಂಬ;

ಬಳಿಕಾ ಮಂತ್ರಮಂ ಮನದಲ್ಲಿ ಸ್ಮರಿಸಿ "ತಾರ ವ್ಯೋಮಾಗ್ನಿ ಮಾನಯುಕ್, ದಂಡಿಜ್ಯೋರ್ತಿರ್ಮನುರ್ಮತ" ಎಂಬ ಗ್ರಂಥಾರ್ಥಮಾದ ಜೋತಿರ್ಮಂತ್ರದಿಂ ಶಿವಮಂತ್ರವಲ್ಲದುಳಿದ ಮಂತ್ರಂಗಳ ಮಲತ್ರಯಮಂ ದಹಿಸುವ ವಿಮಲೀಕರಣಮೆಂಬ;

ಮತ್ತಂ ಆ ಜೋತಿರ್ಮಂತ್ರದಿಂ ಮಂತ್ರಿತಮಾದ ಕುಶೋದಕದಿಂದಾ ಮಂತ್ರಾಕ್ಷರಂಗಳಂ ಪ್ರತ್ಯೇಕ ಸಂಪ್ರೋಕ್ಷಣಂಗೆಯ್ವ ಆಪ್ಯಾಯನಮೆಂಬ;

ಮತ್ತಂ ಮರಳಿ ಮಂತ್ರಕ್ಕೆ ಮಂತ್ರೋದಕದಿಂ ತರ್ಪಣಂ ಗೊಡುವ ತರ್ಪಣಮೆಂಬ;

"ತಾರಾ ಮಾಯಾ ರಮಾ ಯೋಗೋ ಮನೋ ದೀಪನ ಮುಚ್ಯತೇ"

ಎಂಬ ಗ್ರಂಥಾರ್ಥಮಾದ ದೀಪನಮೆಂಬ,

ಮೇಲೆ ಜಪಿಸಲು ಯೋಗ್ಯಮಾದ ಮಂತ್ರಮಂ ಪ್ರಕಟಂ ಗೆಯ್ಯುತ್ತಿರ್ಪ ಗುಪ್ತಿ ಎಂಬ ಈ ಮಂತ್ರದಶ ಸಂಸ್ಕಾರಂಗಳಂ ವಿಚಾರಿಸಿ, ೨೧೦

ಪ್ರಣವ ವಿಚಾರ :

ಬಳಿಕ ಆ ಸಕಲ ಮಂತ್ರಂಗಳೊಳಗೆ ಮುಖ್ಯಮಾದ ಪ್ರಣವವೇ ಪರಪ್ರಣವ ಅಪರಪ್ರಣವವೆಂದು ದ್ವಿವಿಧಮಾಗಿರ್ಪುದವರಲ್ಲಿ :

ಪರಪ್ರಣವವೇ ವಾಚ್ಯಮಾದ ಸತ್ಯಜ್ಞಾನಾದಿ ಲಕ್ಷಣಮುಳ್ಳ ಪರಬ್ರಹ್ಮವೆನಿಸೂದು. ಬಳಿಕ ಅಪರ ಪ್ರಣವವೇ ವಾಚಕಮಾದ ಶಬ್ದರೂಪಮಾಗಿ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರಧಿದೇವತೆಗಳಾದ ರಕ್ತ ಶುಕ್ಲ ಕೃಷ್ಣ ಜ್ಯೋತಿ ಸ್ಫಟಿಕವೆಂಬ ಪಂಚವರ್ಣಕ್ರಮವನುಳ್ಳ, ಅಕಾರ ಉಕಾರ ಮಕಾರ ಬಿಂದು ನಾದವೆಂಬ ಪಂಚಾಕ್ಷರಾತ್ಮಕದಿಂ, ತಾರಕ, ದಂಡಕ, ಕುಂಡಲಾಕಾರ, ಅರ್ಧಚಂದ್ರಾಕಾರ, ದರ್ಪಣಾಕಾರ ಜ್ಯೋತಿರಾಕರಮೆಂಬಾರು ರೂಪದಿಂ; ಓಂಕಾರಮೆಂದು ಬ್ರಹ್ಮವೆಂದು, ಜ್ಞಾನವೆಂದು ಶಿವಾತ್ಮಕವೆಂದು ಸರ್ವಾತ್ಮಕವೆಂದು ಸರ್ವವಿದ್ಯಾದಿಬೀಜವೆಂದು, ತೇಜೋಬೀಜವೆಂದು, ಮುಕ್ತಿಬೀಜವೆಂದು, ನಿಷ್ಕಲವೆಂದು, ನಾದವೆಂದು, ನಾದಾದಿಯೆಂದು, ಹೃನ್ನಾದವೆಂದು, ವೇದಾದಿಯೆಂದು, ವೇದಭೂಮಿಯೆಂದು, ಮಂತ್ರ ಪ್ರಾಣವೆಂದು, ಬ್ರಹ್ಮಮೂರ್ತಿಯೆಂದು, ಆತ್ಮಮಂತ್ರವೆಂದು ಇವು ಮೊದಲಾದ ಪರಿಯಾಯ ನಾಮಂಗಳುಳ್ಳುದಾಗಿಹುದು. ೨೧೧

ಮಂತ್ರಾನುಷ್ಠಾನ :

ಬಳಿಕ ಮಂತ್ರ ಸಿದ್ಧ್ಯರ್ಥಮಾಗಿ ಜಪಪ್ರಾರಂಭದಲ್ಲಿ, ಸ್ನಾನಾದಿ ವಿಧಿಯುಕ್ತನಾಗಿ, ಬ್ರಹ್ಮಾರಣ್ಯ ನದೀತೀರಾದಿ ಸುಸ್ಥಿಲದಲ್ಲಿರ್ದು, ಬ್ರಹ್ಮವೃಕ್ಷವನಾಶ್ರಯಿಸಿ, ಪ್ರಾಙ್ಮುಖೋದುಙ್ಮುನಾಗಿ ಸ್ವಸ್ಥಾನದಲ್ಲಿ ಕುಳ್ಳಿರ್ದು, ಪ್ರಾಣಾಯಾಮ ಕ್ರಮಮಂ ಮಾಡಿ, ಬಳಿಕ ಆ ಮಂತ್ರಕ್ಕೆ ಬ್ರಹ್ಮನೇ ಋಷಿ, ದೇವಿ ಗಾಯತ್ರಿ ಛಂದಸ್ಸು, ಪರಮಶಿವನಧಿದೇವತೆ, ಅಂ ಬೀಜ, ಉಂ ಶಕ್ತಿ, ಮಂ ಕೀಲಕ, ಮೋಕ್ಷಾರ್ಥಮಾದ ಜಪವೇ ವಿನಿಯೋಗಮೆಂದು ಮೊದಲು ಸ್ಮರಿಸಿ, ೨೧೨

ಮಂತ್ರನ್ಯಾಸ ಕ್ರಮ :

ಮೇಲೆ ಆ ಮಂತ್ರದಿಂ ಕರನ್ಯಾಸಂಗೈವಲ್ಲಿ, ಕರದ್ವಯದ ಅಂಗುಷ್ಠಾದಿ ಕನಿಷ್ಠಾಂತ ಮಾದ ಅಂಗುಲಿಗಳ ಆದಿ ಮಧ್ಯ ಅಂತ್ಯ ಪರ್ವಂಗಳಲ್ಲಿ, ಪ್ರತ್ಯೇಕ ಬಿಂದು ಯುಕ್ತಮಾದ ಅಕಾರ ಉಕಾರ ಮಕಾರಂಗಳಂ ನ್ಯಾಸಮಾಡಿ, ಬಳಿಕ ಆ ಬಿಂದುಯುಕ್ತ ಪ್ರಣವವನು ಆ ಸರ್ವಾಂಗುಲಿಗಳಲ್ಲಿಯು ನ್ಯಾಸಂಗೆಯ್ದು, ಮೇಲೆ ಆ ಪ್ರಕಾರದಿಂದವೆ ಕರತಳಕರಪೃಷ್ಠಂಗಳಿಂ ಸಮ್ಮಾರ್ಜನಂ ಮಾಡಿ, ಬಳಿಕ, ಇಂತು ಕರನ್ಯಾಸಂಗೈಯ್ದನಂತರದಲ್ಲಿ, ನಾಭಿ ಹೃದಯ ಮೂರ್ಧ್ನಂಗಳಲ್ಲಿ ಕ್ರಮದಿಂ ಸೊನ್ನೆವೆರಸಿದ ಅಕಾರ ಉಕಾರ ಮಕಾರಂಗಳಂ ನ್ಯಾಸಂಮಾಡಿ, ಮೇಲೆ ಆ ಮೂರ್ಧ್ನಾದಿ ಪಾದಾಂತಮಾಗಿ, ಬಿಂದು ಸಹಿತ ಪ್ರಣವನ್ಯಾಸಂಗೆಯ್ದು, ಇಂತು ದೇಹನ್ಯಾಸಂ ಮಾಡಿ ಮೇಲೆ "ಓಂ ಭೂರಗ್ನ್ಯಾತ್ಮನೇ ಹೃದಯಾಯನಮಃ" ಎಂದು ದಕ್ಷಿಣಕರದ ಚತುರಂಗುಲಿಗಳಿಂ, ಹೃದಯ ಸ್ಪರ್ಶನದಿಂದಾ ಹೃದಯ ಸ್ಥಿತ ಮಂತ್ರ ದೇವತೆಯಂ ನಮಸ್ಕರಿಸಿ, ಬಳಿಕ "ಓಂ ಭುವೋವಾಯ್ವಾತ್ಮನೇ ಶಿರಸೇ ಸ್ವಾಹ" ಎಂದು ಶಿಖೆಯಲ್ಲಿರ್ದ

ಊರ್ಧ್ವಜ್ವಲನ ಸ್ವಭಾವದ ಪರಮ ಶಿವನ ಚೈತನ್ಯಮಂ ತನ್ನ ಶರೀರದ ಊ ರ್ಧ್ವಾಂಗುಷ್ಟ ಮುಷ್ಟಿಯಿಂ ದದಃ ಕರಿಸಿ ಬಳಿಕ "ಓಂ ಮಹಃ ಬ್ರಹ್ಮಾತ್ಮನೇ ಕವಚಾಯ ಹುಂ" ಎಂದು ಅಧೋಮುಖ ಶಿವ ಚೈತನ್ಯಮಂ ತನ್ನ ಶರೀರದ ಪ್ರತಿರೋಮ ಕೂಪಂಗಳಲ್ಲಿ ವಿಜ್ರಂಭಿಸುವಂತೆ ಕರದ್ವಯದ ತರ್ಜನಿಗಳಿಂ ವಜ್ರಕವಚದಿಂ ನಿರೋಧಿಸಿ, ಬಳಿಕ "ಓಂ ಜನಃ ಜ್ಞಾನಾತ್ಮನೇ ನೇತ್ರತ್ರಯಾಯ ವೌಷಟ್" ಎಂದು ದಕ್ಷಣಕರದ ಮಧ್ಯಾಂಗುಲತ್ರಯದಿಂ ನೇತ್ರ ಸ್ಪರ್ಶನದಿಂದಾ ಪರಮ ಶಿವ ಚೈತನ್ಯಮಂ ಸರ್ವತ್ರ ಸ್ಫುರಿಸುವಂತೆ ಅಭಿವ್ಯಕ್ತಂ ಮಾಡಿ, ಬಳಿಕ "ಓಂ ತಪಃ ಸತ್ಯಂ ಸತ್ಯಾತ್ಮನೇ ಅಸ್ತ್ರಾಯ ಫಟ್" ಎಂದು ಬಾಹು ಮೂಲಂಗಳಲ್ಲಿ ಅಂಗುಷ್ಟತರ್ಜನಿಗಳಿಂ ಧ್ವನಿಯಪ್ಪಂತೆ ಅಸ್ತ್ರಂಗೆಯ್ದು, ಬಳಿಕ, ಪೂರ್ವಾದಿ ದಶದಿಕ್ಕುಗಳಲ್ಲಿ ರಕ್ಷಣಾರ್ಥಮಾಗಿ ಪರಮ ಶಿವ ಚೈತನ್ಯ ರೂಪಮಾದ ಆ ಅಸ್ತ್ರಮಂ ಇಂದ್ರಾದಿ ಲೋಕಪಾಲಕ ಹಸ್ತಂಗಳಲ್ಲಿ ಇರಿಸಿ, ಬಳಿಕ "ಓಂ ಭೂರ್ಭುವಃ ಸ್ವಾಹ ಅಸ್ತ್ರಯಫಟ್" ಎಂದು ಆ ದಿಕ್ಪಾಲಕರ್ಗೆ ಅನ್ಯೋನ್ಯ ಸಂಬಂಧವಂ ಮಾಳ್ಪುದು. ಈ ಷಡಂಗ ಪಲ್ಲವಾರ್ಥ ಕ್ರಮವೆಲ್ಲಾ ಮಂತ್ರಂಗಳಿಗೆಯೂ ಸಮಾನವಹುದು. ಇದೇ ಬ್ರಹ್ಮಕವಚವೆನಿಸಿಕೊಂಬುದು. ಈ ಬ್ರಹ್ಮಕವಚಮಂ ಧರಿಸಿದಾತನೇ ಬ್ರಹ್ಮಾಸ್ತ್ರ ಬ್ರಹ್ಮದಂಡ, ಕಾಲದಂಡ, ವಜ್ರಾಯುಧಾದಿಗಳಿಂ ಭೇದ್ಯನಲ್ಲಾಗಿ ಸುರನರಾದಿಗಳಿಂ ಪೂಜ್ಯನಪ್ಪಂ. ೨೧೩

ಬಳಿಕ ಈ ಕ್ರಮದಿಂ ಕರನ್ಯಾಸ ದೇಹನ್ಯಾಸ ಅಂಗನ್ಯಾಸಂಗೆಯ್ದು ಅನಂತರದಲ್ಲಿ ಜಗವೆಲ್ಲವುಂ ತಪ್ತಾಯು ಪಿಂಡದಂತೆ, ಪ್ರಣವ ಜ್ಯೋತಿವ್ಯಾಪ್ತವೆಂಬ ಅನುಸಂಧಾನದಿಂದಾದರೂ, ಅಲ್ಲವೆ ತನ್ನ ಮೂಲಾಧಾರಾದಿ ಅಖಿಲ ಚಕ್ರಭೇದಿನಿಯಾದ ಸುಷುಮ್ನಾ ನಾಡಿ, ಮಧ್ಯಗತ ವಿದ್ಯುಲ್ಲೇಖಾತ್ಮಕ ಬಿಂದು ಚಿಂತನೆಯಿಂದಾದರೂ, ಅಲ್ಲಮತ್ತೆ, ಹೃತ್ಕಮಲ ಕರ್ನಿಕಾಗ್ರದ ಸೋಮಸೂರ್ಯಾಗ್ನಿ ಮಂಡಲತ್ರಯ ಮಧ್ಯದಲ್ಲಿ ಮಾಹೇಶ್ವರ ಧ್ಯಾನಯುಕ್ತ ಆ ಪ್ರಣವ ಮಂತ್ರಂ ಸಿದ್ಧಿಸಿ, ಬಳಿಕ ಸಕಲ ಪಾಪಕ್ಷಯಮಂ ಷಟ್ಕರ್ಮಸಿದ್ಧಯಂ ಅಷ್ಟಮಹದೈಶ್ವರ್ಯಗಳಂ, ಸರ್ವವಿದ್ಯೆಂಗಳಂ, ಯಥೇಷ್ಟ ಫಲಂಗಳನೀವುದೇ ಸತ್ಯಮೆಂದರಿದು. ೨೧೪

ಅಜಪ ಮಂತ್ರವಿಚಾರ :

ಅನಂತರದೊಳು ಆ ಮಂತ್ರಗಳೊಳಗೆ ಆತ್ಮಪ್ರಸಾದವೆಂಬುದೇ ಸರ್ವಾತ್ಮರಲ್ಲಿ ರೇಚಕ ಪೂರಕಮೆಂಬುದು, ಪ್ರಾಣೋಪಾನರೂಪ ರವಿಶಶಿಗಳೊಳಗೂಡಿ ಸಂಚರಿಸಿ "ಹಂಸಃ ಸೋಹಂ"ಎಂದಿತ್ತೆರನಾಗಿ ಜೀವಮಂತ್ರಮೆಂದು, ಹಂಸಮಂತ್ರಮೆಂದು, ಅಜಪಗಾಯತ್ರಿಯೆಂದು ಪೆಸರ್ವಡೆದುಪ್ಪುದು.

ಪ್ರಾಣಾಯಾಮತ್ರಯ ಪೂರ್ವಕಮಾಗಿ, ಮೇಲೆ ಆ ಮಂತ್ರಕ್ಕೆ ಹಂಸಋಷಿ ಅವ್ಯಕ್ತಗಾಯತ್ರಿ ಛಂದಸ್ಸು, ಪರಮಹಂಸವೇ ದೇವತೆ, ಹಂ ಬೀಜಂ, ಸ್ವಾಹಾಶಕ್ತಿ, ಸೋಹಂ ಕೀಲಕ, ಪರಮಹಂಸ ಪ್ರಸಾದಾರ್ಥಮಾದ ಜಪವೇ ವಿನಿಯೋಗಗಳೆಂದು ಸ್ಮರಿಸಿ, ಬಳಿಕ

ಹಂಸಾಂ ಸೂರ್ಯಾತ್ಮನೇ ಅಂಗುಷ್ಠಾಭ್ಯಾಂ ನಮಃ
ಹಂಸೀಂ ಸೋಮಾತ್ಮನೇ ತರ್ಜನೀಭ್ಯಾಂ ನಮಃ
ಹಂಸೋಂ ನಿರಂಜನಾತ್ಮನೇ ಮಧ್ಯಮಾಭ್ಯಾಂ ನಮಃ
ಹಂಸೈಂ ನಿರಾಭಾಸಾತ್ಮನೇ ಅನಾಮಿಕಾಭ್ಯಾಂ ನಮಃ
ಹಂಸೌಂ ಅವ್ಯಕ್ತಾತ್ಮವೇ ಕನಿಷ್ಠಾಭ್ಯಾಂ ನಮಃ
ಹಂಸಃ ಅತನು ಸೂಕ್ಷ್ಮಾತ್ಮನೇ ಕರತಳ ಪೃಷ್ಠಾ ಭ್ಯಾಂ ನಮಃ

ಎಂದು ಕರನ್ಯಾಸಮಂ ಮಾಡಿ, ಮೇಲೆ ಆ ಕ್ರಮದಿಂದವೆ ಹೃದಯಾದಿ ಕರಾಂತಮಾದ ಷಡಂಗಗಳಲ್ಲಿ ಆಯಾ ಪಲ್ಲವಂಗೂಡಿ ಅಂಗನ್ಯಾಸಂಗೆಯ್ದು, ಬಳಿಕ ಹೃತ್ಕಮಲ ಕರ್ನಿಕಾಮಧ್ಯದಲ್ಲಿ ಶ್ವೇತವರ್ಣದಿಂ ಪರಶು ಮೃಗ ವರದಾಭಯಂಗಳುಳ್ಳ ಕರಚತುಷ್ಟಯದಿಂದೆಸೆದು ಸರ್ವಲಕ್ಷಣ ಸಂಪನ್ನನಾದ ಉಮಾಪತಿ ಧ್ಯಾನಯುಕ್ತಮಾಗಿ, ಶ್ರೀಗುರೂಪದೇಶದಿಂದ ಅರುಣೋದಯಾದಿ ಸಮಯದಲ್ಲಿ ಸೂರ್ಯೋದಯಾಂತಮಾದ ದಿನ ಒಂದಕ್ಕೆ ಇಪ್ಪತ್ತೊಂದು ಸಾವಿರದರುನೂರು ಅಹುದು. ಅದರೊಳಗೆ ಆಧಾರಾದಿ ಬ್ರಹ್ಮರಂದ್ರಾಂತಮಾದ ಸಪ್ತಚಕ್ರ ಕಮಲಂಗಳಲ್ಲಿ ಕ್ರಮವಿಡಿದಿರ್ದ ಶ್ರೀಗಣಪತಿಗೆ ಅರುನೂರು, ಬ್ರಹ್ಮಂಗೆ ಆರು ಸಾವಿರ, ವಿಷ್ಣುವಿಂಗಾರು ಸಾವಿರ, ಉಮಾಮಹೇಶ್ವಂಗೆ ಆರು ಸಾವಿರ, ಜೀವಾತ್ಮಂಗೆ ಸಾವಿರ, ಪರಮಾತ್ಮಂಗೆ ಸಾವಿರ, ಶ್ರೀಗುರುವಿಂಗೆ ಸಾವಿರ ಅಜಪಾ ಗಾಯತ್ರಿ ಮಂತ್ರ ಜಪಮಂ 'ನಿವೇದಯಾಮಿ' ಎಂದು ಸಂಕಲ್ಪಿಸೂದು. ಇಂತು ಜಪಂಗೆಯ್ವಾತಂಗೆ ಸಮಸ್ತ ಪಾತಕಂಗಳಂ ಕೆಡಿಸಿ ಆಯುರಾರೋಗ್ಯಾದಿ ಭೋಗ ಮೋಕ್ಷಂಗಳ ನೀವುದೆಂದು ನಿರ್ಧರಿಸಿ, ೨೧೫

ಶಿವ ಪಂಚಾಕ್ಷರ ಜಪವಿಚಾರ :

ಮತ್ತಂ ಆ ಮಂತ್ರಗಳಲ್ಲಿ ಮೂಲ ಪಂಚಾಕ್ಷರವೆಂಬುದೊಂದೇ ಮುಖ್ಯವಾಗಿ ವಿದ್ಯೆಯೆಂದು ಶಿವನೆಂದು ಶಿವಹೃದಯವೆಂಬ ಸೂತ್ರವೆಂದು ಪರ್ಯಾಯ ನಾಮಂಗಳನುಳ್ಳದಾಗಿ, ವೇದ ಆಗಮ ಪುರಾಣದೊಳ್ ಪ್ರಸಿದ್ಧಮೆನಿಸಿ ಸೂಕ್ಷ್ಮಮಂತ್ರವಾದರೂ ವಟಬೀಜದಂತೆ ಮಹಾಅರ್ಥಮುಳ್ಳುದಾಗಿ ಸಕಲ ಶಿವಭಕ್ತರ್ಗೆ ತಾನೇ ಜಪಿಸಲು ಯೋಗ್ಯಮೆನಿಸಿ ಪ್ರಣವಪೂರ್ವಕಮಾದ ಭೂತಾದಿ ಸಕಲ ಪಂಚವರ್ಗಾತ್ಮಕನ ನಕಾರಾದಿಯಕಾರಾಂತವಾದ ಆರಕ್ಕರಂಗಳನುಳ್ಳುದಾಗಿ, ನಿಷ್ಪ್ರಯಾಸದಿಂ ಭುಕ್ತಿಮುಕ್ತಿಪ್ರದವಾಗಿಹುದು. ಆ ಪಂಚಾಕ್ಷರಿ ಮಂತ್ರಂ ಮೊದಲು ಶ್ರೀಗುರುಮುಖದಿಂದ ಅರ್ಥಸಮೇತಮಾಗರಿದು, ಯಥಾಶಕ್ತಿಯಿಂದ ಗುರುದಕ್ಷಿಣೆಯಂ ಕೊಟ್ಟು,

ಬಳಿಕ ಆ ಶ್ರೀಗುರುವಿನಾಜ್ಞೆಯಿಂದ ಆ ಮಂತ್ರಸಿದ್ಧ್ಯರ್ಥಮಾಗಿ ಮುಂದೆ ಪೇಳ್ವ ಶುಭಮಾಸಾದಿ ವಿಧಿಗಳನಾರೈದು, ಬಳಿಕ ಜಲಸ್ನಾನಾದಿಗಳಂ ಮಾಡಿ, ತನ್ನ ದೇಹದ ಬಲವರಿದು, ಶಾಖ ಮೂಲ ಫಲ ಕ್ಷೀರಾದಿ ಮಿತಾಹಾರಿಯಾಗಿ, ಬಳಿಕ ಅಕ್ಷರಕ್ಕೊಂದೊಂದು ಲಕ್ಷಮಾದ ಆರುಲಕ್ಷಜಪಮಂ ಗೆಯ್ವಾತನಾಗಿ, ಹಾಲುತುಪ್ಪದಿಂದಾದರು ಪಾಲಾಶಕುಸುಮದಿಂದಾದರೂ, ಸಾವಿರ ಹೋಮವನ್ನು, ಒಂದು ಲಕ್ಷತರ್ಪಣಮಂ

ಪುರಾಣೋಕ್ತಮಾಗಿ ಮಾಡುವುದು. ಅಲ್ಲದೆ, ಮತ್ತೆ ಕಲೋಕ್ತಮಾದ ಇಪ್ಪತ್ತನಾಲ್ಕು ಲಕ್ಷ ಜಪಘನಾದರೂ ಪೂರ್ವೋಕ್ತ ಸಂಖ್ಯಾಕ್ರಮದಿಂ ಹೋಮತರ್ಪಣಂಗಳಂಪೆರ್ಚಿಸಿ ಮಾಡೂದು. ಇಂತು ಪುನಶ್ಚರಣಂಗೆಯ್ದ ಮೇಲೆ, ದಿನ ಒಂದಕ್ಕೆ ನೂರೆಂಟನಾದರೂ ಇನ್ನೂರ ಐವತ್ತನ್ನಾದರೂ ಮುನ್ನೂರನ್ನಾದರೂ, ಐನೂರನ್ನಾದರೂ, ಹನ್ನೆರದು ಸಾವಿರವನ್ನಾದರೂ, ಸಂಖ್ಯಾನಿಯಮ ಪೂರ್ವಕವಾಗಿ ನಿತ್ಯಜಪಂಗೆಯಲ್ವೇಕ್ಕುದು. ಆ ಸಂಖ್ಯಾಹೀನ ಫಲಂ ರಾಕ್ಷಸರ್ ಅಪಹರಿಪರೆಂದರಿದು. ೨೧೬

ಪಂಚಾಕ್ಷರ ಜಪಪುರಶ್ಚರಣ ವಿಭಾಗ :

ಬಳಿಕ ಇಲ್ಲಿ ಪುರಶ್ಚರಂನಗೆಯ್ಯದೇ ಸಂಖ್ಯಾನಿಯಮದಿಂ ದೇಹಾಂತಮಾಗಿಮಾಳ್ಪುದೇ ನಿತ್ಯಜಪವದು ಕನಿಷ್ಟವೆನಿಸೂದು. ಪುರಶ್ಚರಣ ಜಪವದು ಮಧ್ಯಮವೆನಿಸೂದು. ಪುರಶ್ಚರಣಂಗೆಯ್ದು ಮೇಲೆ ಸಂಖಾನಿಯಮಂ ಪ್ರಾಣಾಂತಮಾತಿ ಮಾಳ್ಪುದೇ ಪುರಶ್ಚರಣಪೂರ್ವಕ ನಿತ್ಯಜಪವದು ಉತ್ತಮವೆನಿಸೂದು ಎಂದು ಭಾವಿಸಿ. ೨೧೭

ಜಪಾರಂಭ :

ಮೇಲೆ ಮಂತ್ರಜಪ ಪ್ರಾರಂಭದಲ್ಲಿ ಪ್ರಾಣಾಯಾಮತ್ರಯಮಂ ಮಾಡಿ ಬಳಿಕ ಆ ಮಂತ್ರಕ್ಕೆ ವಾಸುದೇವಋಷಿ ಪಜ್ತೀಛಂದಸ್ಸು, ಸದಾಶಿವನು ಅಧಿದೇವತೆ, ಪ್ರಣವವೇ ಬೀಜ, ಉಮಾಶಕ್ತಿ, ಉದಾತ್ತ ಸ್ವರ, ಶ್ವೇತವರ್ಣ, ಭೋಗಮೋಕ್ಷಾರ್ಥಮಾದ ಜಪವೇ ವಿನಿಯೋಗಮೆಂದು ಮೊದಲು ಸ್ಮರಿಸಿ, ಬಳಿಕ ಪಿಂಡ ಬ್ರಹ್ಮಾಂಡಂಗಳಲ್ಲಿ ಭೂಮ್ಯಾದಿ ಆತ್ಮಾಂತಮಾದ ಆರು ಆನುಕ್ರಮದಿಂ ನಕಾರಾದಿ ಪ್ರಣವಾಂತಮಾದ ಆಕ್ಷರಾತ್ಮಕವೆಂದು ಆನುಸಂಧಾನಿಸಿ. ೨೧೮

ಕರನ್ಯಾಸ ಭೇದಂಗಳು :

ಮತ್ತಂ ಆ ಮಂತ್ರದಿಂ ಕರಂನ್ಯಾಸಂಗೈವಲ್ಲಿ ಕರದ್ವಯ ಅಂಗುಷ್ಠಾದಿ ಕನಿಷ್ಠಾಂತಮಾಗಿ, ಯಕಾರಾದಿ ನಕಾರಾಂತಮಾದ ಪ್ರತ್ಯೇಕ ಬಿಂದು ಸಮೇತಮಪ್ಪ ಪ್ರಣವದ್ವಯವನು, ಆದ್ಯಂತದಲ್ಲಿ ಕೂಡಿ ಆಯಾಯ ಅಂಗುಲಿಗಳಾದಿಯಿಂದ ಅಗ್ರಪರ್ಯಂತರಂ ಮಾಳ್ಪುದೇ ಸೃಷ್ಟಿನ್ಯಾಸವೆನಿಸೂದು. ಬಳಿಕ ಕನಿಷ್ಟದಿ ಅಂಗುಷ್ಠಾಂತವಾಗಿ ನಕಾರಾದಿ ಯಕಾರಾಂತಮಾಗಿ ವರ್ಣಂಗಳನು ಆ ಕ್ರಮದಿಂದಾದಿ ಪರಿಯತರಂ ಮಾಳ್ಪುದೇ ಸಂಹಾರನ್ಯಾಸವೆನಿಸೂದು. ಮತ್ತಂ ಆ ಮಧ್ಯಮಾಂಗುಲ್ಯಾದಿ ತರ್ಜನ್ಯಂತಮಾಗಿ ಶಿಕಾರಾದಿ ಮಕಾರಾಂತಮಾದ ಅಕ್ಷರಂಗಳನು ಆ ಪರಿಯಿಂದ ಆರು ಅಂಗುಲಿಗಳ ಮಧ್ಯದಿಂದಾದಿ ಅಗ್ರಪರ್ಯಂತರಂ ಮಾಳ್ಪುದೇ ಸ್ಥಿತಿನ್ಯಾಸವೆನಿಸೂದು. ಬಳಿಕ ಆಂಗುಲಿಗಳ ಪರ್ವಂಗಳಲ್ಲಿಯೂ ಮಂತ್ರಾಕ್ಷರಂಗಳನು ಆ ರೀತಿಯಿಂದ ಉತ್ಪತ್ಯಾದಿ ಭೇದವನರಿದು ನ್ಯಾಸಂಗೆಯ್ವುದು. ಬಳಿಕ ಪ್ರತ್ಯೇಕ ಅಂಗುಲಿಗಳಲ್ಲಿಯೂ, ಸಂಪುಟೀಕರಿಸಿ ಪ್ರಣವನ್ಯಾಸಂ ಮಾಡೂದು. ಮತ್ತಂ ಆ ಕರದ್ವಯದ ಚತುರಂಗುಲಿಯನೆ ಆಯಾ ಅಂಗುಷ್ಠದಿಂ ಅಂಗುಷ್ಠವನೆ ಆಯಾ ತರ್ಜನಿಯಿಂದ ನ್ಯಾಸಂಗೆಯ್ವುದು. ಬಳಿಕ ಕರತಳದ್ವಯಕ್ಕೆ ಬಿಂದುಯುಕ್ತ ಪ್ರಣವ ತ್ರಯಮಂ ವಾಮಕರವನೆ ದಕ್ಷಿಣ ಕರದಿಂ, ದಕ್ಷಿಣ ಕರವನೆ

ವಾಮಕರದಿಂ, ಆ ಕರಂಗಳನು, ಅನುಲೋಮವಾಗಿ ಸಮ್ಮಾರ್ಜನಂ ಗೆಯ್ವುದೇ ಸೃಷ್ಟಿನ್ಯಾಸವೆನಿಸೂದು. ಲೋಮವಿಲೋಮವಾಗಿ ಸಮ್ಮಾರ್ಜನಂ ಮಾಳ್ಪುದೇ ಸಂಹಾರನ್ಯಾಸವಹುದು. ಇಂತು ಕರನ್ಯಾಸಂ ಮಾಡಿ. ೨೧೯

ದೇಹನ್ಯಾಸ ಭೇದಂಗಳು :

ಮೇಲೆ ದೇಹನ್ಯಾಸದಲ್ಲಿ ಮೂರ್ಧ್ನಿ ಮುಖ ಕಂಠ ಹೃದಯ ಗುಹ್ಯ ಪಾದಂಗಳಲ್ಲಿ ಕ್ರಮದಿಂ ಪ್ರಣವಾದಿ ಮಕಾರಾಂತಮಾದ ಪ್ರತ್ಯೇಕ ಬಿಂದು ಸಮೇತಮಪ್ಪ ಮಂತ್ರಾಕ್ಷರಂಗಳಂ ಬಿಂದುಯುಕ್ತ ಪ್ರಣವದ್ವಯ ಸಂಪುಟಮಾಗಿ ಮಾಳ್ಪುದೇ ಸೃಷ್ಟಿನ್ಯಾಸವೆನಿಸೂದು. ಬಳಿಕ ಆ ಕ್ರಮದಿಂದವೆ ಪಾದಾದಿ ಮೂರ್ಧ್ನಿ ಪರ್ಯಂತರಂ ಪ್ರಣವಾದಿ ಯಕಾರಾಂತಮಾಗಿ ಮಾಳ್ಪುದೇ ಸಂಹಾರನ್ಯಾಸವೆನಿಸೂದು. ಬಳಿಕ ಹೃದಯ ಗುಹ್ಯ ಪಾದ ಮೂರ್ಧ್ನಿ ಮುಖ ಕಂಠಗಳಲ್ಲಿ ಕ್ರಮದಿಂ ಪ್ರಣವಾದಿ ಮಕಾರಾಂತವಮಾಗಿ ಮಾಳ್ಪುದೇ ಸ್ಥಿತಿನ್ಯಾಸವೆನಿಸೂದು. ಬಳಿಕ ಸರ್ವಮಂತ್ರದಿಂ ಶಿರಸಾದಿ ಸರ್ವಾಂಗಮಂ ನ್ಯಾಸಂಗೆಂಯ್ವುದು.

ಅಂಗನ್ಯಾಸ ಭೇದಂಗಳು :

ಬಳಿಕ ಅಂಗನ್ಯಾಸದಲ್ಲಿ ಕನಿಷ್ಠ ಅಂಗುಷ್ಠಯೋಗದಿಂ ಹೃದಯ, ಅನಾಮಿಕಾಂಗುಷ್ಠ ಯೋಗದಿಂ ಮೂರ್ಧ್ನಿ, ಮಧ್ಯಮ ಅಂಗುಷ್ಠ ಯೋಗದಿಂ, ಶಿಖಿ, ಕರದ್ವಯದ ತರ್ಜನಿಗಳಿಂ ಕವಚ, ದಕ್ಷಿಣ ಕರದ ಮಧ್ಯಾಂಗುಲಿ ತ್ರಯದಿಂ ನೇತ್ರ, ದಕ್ಷಿಣ ಚತುರಂಗುಲಿಗಳಿಂ ವಾಮಕರತಳದಲ್ಲಿ ತಾಳತ್ರಯದಿಂದ ಅಸ್ತ್ರದಿಂದ ಅಸ್ತ್ರಂಗಳಂ ಪ್ರಣವಾದಿ ಯಕಾರಾಂತಮಾದ ಮಂತ್ರಾಕ್ಷರಂಗಳಂ ಪೂರ್ವೋಕ್ತ ಕ್ರಮದಿಂ ಆಯಾ ಪಲ್ಲವಾರ್ಥವರಿದು ಒಡಗೂಡಿ ಮಾಳ್ಪುದು ಸೃಷ್ಟಿನ್ಯಾಸವೆನಿಸೂದು.

ಬಳಿಕ ಮಂತ್ರ ವರ್ಣಭೇದವಿಲ್ಲದೆ ಅಸ್ತ್ರಾದಿ ಹೃದಯಾಂತಮಾಗಿ ಮಾಳ್ಪುದೇ ಸಂಹಾರನ್ಯಾಸವೆನಿಸೂದು.

ಬಳಿಕ ಕವಚಾದಿ ಶಿಖಾಂತಮಾಗಿ ಮಾಳ್ಪುದೇ ಸ್ಥಿತಿನ್ಯಾಸವೆನಿಸೂದು. ೨೨೦

ಬಳಿಕ ಈಶಾನಾದಿ ಸದ್ಯೋಜಾತಾಂತ ಮಾಳ್ಪುದೇ ಸೃಷ್ಟಿನ್ಯಾಸವಹುದು. ಸದ್ಯೋಜಾತಾದಿ ಈಶಾನಾಂತ ಮಾಡುದೇ ಸಂಹಾರನ್ಯಾಸವಹಿಸು, ಅಘೋರಾದಿ ತತ್ಪುರುಷಾಂತ ಮಾಡುದೇ ಸ್ಥಿತಿನ್ಯಾಸವೆನಿಸೂದು. ಈ ಪಂಚ ಬ್ರಹ್ಮನ್ಯಾಸಂಗಳಂ ಕರ, ದೇಹ, ಅಂಗತ್ರಯಂಗಳಲ್ಲಿ ಮಾಳ್ಪುದು. ಮೇಲೆ ಪೂರ್ವಾದಿ ಊರ್ಧ್ವಾಂತಮಾದ ಪಂಚ ದಿಕ್ಕುಗಳಲ್ಲಿ ನಕಾರಾದಿ ಯಕಾರಾಂತಮಾದ ಅಕ್ಷರಂಗಳನು ಆ ಕ್ರಮದಿಂದವೆ ಸ್ಥಾಪಿಸೂದು. ಬಳಿಕ ಅಂಗುಷ್ಠ ತರ್ಜನಿಗಳಿಂ ಧ್ವನಿಯಪ್ಪಂತೆ ಇಂದ್ರಾದಿ ದಶದಿಕ್ಕುಗಳಲ್ಲಿ ಅಸ್ತ್ರ ಪಲ್ಲವಂ ಪ್ರಯೋಗಿಸೂದು. ಬಳಿಕ ಮಕಾರಾದಿ ನಕಾರಾಂತಮಾಗೆ ಸೃಷ್ಟಿ ಮಂತ್ರವಹುದು. ಶಿಕಾರಾದಿ ಮಕಾರಾಂತಮಾಗೆ ಸ್ಥಿತಿಮಂತ್ರವಹುದು. ಅದರಲ್ಲಿ ಸ್ತ್ರೀ ಶೂದ್ರರುಗಳು ಪ್ರಣವವಿಲ್ಲದೆ ನಮೋಂತಮಾದ ಸ್ಥಿತಿ ಮಂತ್ರವನೆ ಜಪಗೈವುದು. ಆ

ಜಪಂಗೆಯ್ವಲ್ಲಿ ಸಾಂಬಶಿವನಾಗಲಿ ಸದಾಶಿವನಾಗಲಿ ತಾಂಡವಾಕಾರವನಾಗಲಿ ಧ್ಯಾನಿಸುತ್ತೆ ಜಪಂಗೆಯ್ವುದು ಎಂದು ನಿರ್ವಹಿಸಿ, ೨೨೧

ಪಂಚಾಕ್ಷರಿ ವಿನಿಯೋಗ :

ಬಳಿಕ ಈ ಕ್ರಮದಿಂ ಪುನಶ್ಚರಣ ಜಪಂಗೆಯ್ವುದಲ್ಲದೆ ಸಕಲ ಸಾಂಗಿಕಮಾಗಿ ಬಿಲ್ವವೃಕ್ಷವನಾಶ್ರಯಿಸಿ, ಒಂದೇ ದಿನ ಅನಂತ ಜಪಂಗೆಯ್ಯಲು, ಎಲ್ಲಾ ಮಂತ್ರಗಳಿಗೆಯು ಪುರಶ್ಚರಣದಿಂ ಸಿದ್ಧಮಾದ ಪಂಚಾಕ್ಷರ ಮಂತ್ರಮಂ ಪರ್ವತಾಗ್ರದಲ್ಲಿ ಒಂದು ಲಕ್ಷಮಂ ಜಪಿಸೆ ಆಯುಃವೃದ್ಧಿಯು. ಮಹಾನದೀತೀರದಲ್ಲಿ ದ್ವಿಲಕ್ಷ ಜಪಂಗೆಯ್ಯೆ ಆಯುವೃದ್ಧಿ, ದೂರ್ವೆತಿಲ ಅಮರದಬಳ್ಳಿ ಗುಳಿಗೆಗಳಂ ಹತ್ತು ಸಾವಿರಮಂ ಮಂತ್ರಿಸಿ ಹೋಮಂಗೆಯ್ಯಲಾಗೆ ಆಯುವೃದ್ಧಿ. ಅರಳಿಯ ಮರವನೇರಿಕೊಂಡು ದ್ವಿಲಕ್ಷಮಂ ಜಪಿಸೆ ಅಪಮೃತ್ಯುಪರಿವುದು. ಪ್ರತಿದಿನದ ಶನಿವಾರದಲ್ಲಿಯು ಅರಳಿಯ ಮರವನ್ನು ಎರಡು ಕೈಗಳಿಂ ಮುಟ್ಟಿಕೊಂಡು ನೂರೆಂಟು ವೇಳೆ ಜಪಿಸೆ ಮೃತ್ಯು ತೊಲಗುವುದು. ಅದಿತ್ಯಾಭಿಮುಖಮಾಗಿ ಒಂದು ಲಕ್ಷ ಜಪಂಗೆಯ್ದು ಅರ್ಕಕುಸುಮಾದಿ ನೂರೆಂಟು ಹೋಮಂಗೆಯ್ಯೆ ಸರ್ವವ್ಯಾಧಿ ಹರಿವುದು. ಒಂದು ಮಾಸ ಪರ್ಯಂತಮಾಗಿ ಪ್ರತಿದಿನದುದಯ ಸಮಯದಲ್ಲಿ ನೂರೆಂಟು ವೇಳೆ ಉದಕಮಂ ಮಂತ್ರಿಸಿಕೊಳಲಾಗಿ ಕುಕ್ಷಿರೋಗ ಹರಿವುದು. ಪಲಾಶಕುಸುಮದಿಂ ಹತ್ತು ಸಾವಿರ ಹೋಮಂಗೆಯ್ಯೇ ಸರ್ವವ್ಯಾಧಿ ಹರಿವುದು. ನದೀ ತೋಯಪೂರ್ಣಕುಂಭಮಂ ಮುಟ್ಟಿಕೊಂಡು ಹತ್ತು ಸಾವಿರ ಜಪಂಗೆಯ್ದು ಆ ಜಲಸ್ನಾನದಿಂ ಸಕಲವ್ಯಾಧಿ ನಿವೃತ್ತಿಯಹುದು. ಚಂದ್ರಸೂರ್ಯಗ್ರಹಣಗಳಲ್ಲಿ ಸಮುದ್ರಗಾಮಿಯಾದ ನದಿಯೊಳು ಉಪಾಸಿಯಾಗಿ ಶುಚಿಯಾಗಿಕುಳ್ಳಿರ್ದು, ಆ ಗ್ರಹಣಾದಿ ಗ್ರಹಾಣಾಂತ್ಯಮಾಗಿ ಬ್ರಾಹ್ಮಿರಸಮಂ ನೂರೆಂಟು ವೇಳೆ ಮಂತ್ರಿಸಿಕೊಳಲಾಗಿ ಇಹದಲ್ಲಿಯೇ ಸರ್ವಶ್ರುತಿಪಾರಂಗತನಹನು. ಪ್ರಾತಃಕಾಲದಲ್ಲಿ ಸ್ನಾನಂಗೆಯ್ದು ನಿತ್ಯಕ್ರಿಯಾಸಂಪನ್ನನಾಗಿ ಪಾಲಾಶ ಪತ್ರದಲ್ಲಿ ವಿಭೂತಿಯನಾದರೂ ತುಪ್ಪವನಾದರೂ, ಪಂಚಗವ್ಯವಾದರೂ ತುಂಬಿ ಹಸ್ತದಿಂ ಮುಟ್ಟಿಕೊಂಡು ಸಾವಿರದ ಎಂಟು ಜಪಂಗೈದುಕೊಳಲಾಗಿ ಸಕಲ ವಿದ್ಯಾಸಂಪನ್ನನಹನು. ಬಿಲ್ವಛಾಯೆಯನು ಆಶ್ರೈಸಿ ಹತ್ತುಸಾವಿರ ಜಪಂಗೆಯ್ದು ಮೇಲೆ ಆ ಬಿಲ್ವ ಪತ್ರ, ಫಲ, ಕುಸುಮಗಳಿಂದಾದರೂ ಸಾವಿರದೆಂಟು ಹೋಮಂಗೆಯ್ಯ ಸಕಲೈಶ್ವರ್ಯ ಸಮೃದ್ಧಿಯಹುದು. ಛಿದ್ರವಿಲ್ಲದ ಪಾಲಾಶಕುಸುಮದಿಂದ ಹತ್ತುಸಾವಿರ ಹೋಮಂಗೆಯ್ಯೆ ಸರ್ವಲಕ್ಷಣ ಸಂಪನ್ನನಾದ ಪುತ್ರನಹನು, ಆ ಪಾಲಾಶಕುಸುಮದಿಂ ಸಾವಿರದ ಎಂಟು ಹೋಮಂಗೆಯ್ಯೆ ನಕ್ಷತ್ರ ಗ್ರಹ ಪೀಡಾನಿವಾರಣವಹುದು. ಸ್ನಾನವಂ ಮಾದಿ ಹತ್ತುಸಾವಿರ ಜಪಂಗಯ್ದು ಘೃತದಿಂ ನೂರೆಂಟು ಹೋಮಂಗೆಯ್ಯೆ ದುಃಸ್ವಪ್ನ ಶಾಂತಿಯಹುದು. ಚಂದ್ರ ಸೂರ್ಯಗ್ರಹಣಗಳಲ್ಲಿ ಶಿವಲಿಂಗಪೂಜೆಯಂ ವಿಧಿವತ್ತಾಗಿ ಮಾಡಿ ಆ ಲಿಂಗ ಸನ್ನಿಧಿಯಲ್ಲಿಯೇ ಹತ್ತುಸಾವಿರ ಜಪಂಗೆಯ್ಯ ಸರ್ವಕಾಮ್ಯಾರ್ಥ ಸಿದ್ಧಿಯಹುದು. ದಿನಂಪ್ರತಿಯೂ ಹನ್ನೊಂದು ವೇಳೆ ಅನ್ನವಂ ಮಂತ್ರಿಸಿ ಕೊಳಲಾಗಿ ಕೃತ್ರಿಮಂ ಸೋಂಕದು. ಮತ್ತಂ ಆ ಮೂಲಮಂತ್ರವಾದೊಡೆ ೂರೆಂಟು ಜಪದಿಂ ನಿತ್ಯಕರ್ಮಲೋಪ ನಿಷಿದ್ಧಾನ್ನ ಸ್ವೀಕಾದೋಷಂಗಳಂ ಕೆಡಿಸೂದು.

ಹತ್ತುಸಾವಿರವಧಿಕಮಾದ ಒಂದು ಲಕ್ಷ ಜಪದಿಂ ಮಹಾಪಾತಕಂಗಳುಂ ತೊಲಗೂದು. ಐವತ್ತೈದು ಸಾವಿರ ಜಪದಿಂ ಪಾತಕಂಗಳುಂ ನಿವಾರಣವಹುದು. ಇಪ್ಪತ್ತೇಳು ಸಾವಿರದ ಐನೂರು ಜಪದಿಂದ ಉಪಪಾತಕಂಗಳುಂ ನಿವಾರಣವಹುದು. ಐದು ಸಾವಿರಜಪದಿಂ ವ್ಯತಿಪಾತಕಗಳಂತೆ ಎಬ್ಬಟ್ಟುವುದಿ. ತತ್ವಗಳಿಗೊಂದೊಂದು ಲಕ್ಷಮಾಗಿ ಇಪ್ಪತ್ತೈದು ಲಕ್ಷ ಜಪದಿಂ ಭೂಮ್ಯಾದಿ ಪಂಚವಿಂಶತಿ ತತ್ವಮಂ ದಾಟಿಸೂದು. ಐನೂರು ಲಕ್ಷ ಜಪದಿಂ ಸರ್ವಕಾರಣನಾದ ಈಶ್ವರತ್ವವನೀವುದು. ನೂರು ಲಕ್ಷ ಜಪದಿಂ ರುದ್ರತ್ವವನೀವುದು. ಎಂಭತ್ತು ಲಕ್ಷ ಜಪದಿಂ ವಿಷ್ಣುತ್ವನೀವುದು. ಅರವತ್ತು ಲಕ್ಷ ಜಪದಿಂ ಬ್ರಹ್ಮತ್ವವನೀವುದು. ಇಪ್ಪತ್ತನಾಲ್ಕು ಲಕ್ಷ ಜಪದಿಂ ವಿರಾಡತ್ವವನೀವುದು. ಲಕ್ಷಜಪದಿಂ ದೀರ್ಘಾಯುವೀವುದು. ಮತ್ತಂ ಆ ಪಂಚಾಕ್ಷರಮಂತ್ರಮಂ ವಾಯುಜಿತನಾಗಿ ಮೌನಿಯಾಗಿ ಮಧ್ಯರಾತ್ರಿಯಲ್ಲಿ ಲಕ್ಷ ಜಪಂಗೆಯ್ಯೆ ಸರ್ವಾಂಧಕಾರ ನಿವರ್ತಕಮಾದ ಬಿಂದು ದರ್ಶನವಹುದು. ಮಧ್ಯರಾತ್ರಿಯಲ್ಲಿ ವಾಯುಜಿತನಾಗಿ ಲಕ್ಷ ಜಪಂಗೆಯ್ಯೆ ಸರ್ವಸಿದ್ಧಿಗಳಹವು ಎಂಬಿವು ವಿನಿಯೋಗಗಳಂ ವಿಧಿಸಿ, ೨೨೨.

ಜಪ ಕಾಲಂಗಳು :

ಅನಂತರದೊಳು ಈ ಪಂಚಾತ್ತರಾದಿ ಸಕಲ ಮಂತ್ರ ಪುರಶ್ಚರಣ ಪ್ರಾರಂಭದಲ್ಲಿ ಶುಭಮಾಸಾದಿ ವಿಧಿಕ್ರಮಂಗಳಂ ವಿಚಾರಿಸಬೇಕಾಗಿಹುದು.

ಅವರಲ್ಲಿ: ಚೈತ್ರಸದಲ್ಲಿ ದುಃಖ, ವೈಶಾಖಮಾಸದಲ್ಲಿ ರತ್ನ ಲಾಭ,
ಜೇಷ್ಠ ಮಾಸದಲ್ಲಿ ಮೃತ್ಯು, ಆಷಾಡಮಾಸದಲ್ಲಿ ಬಂಧುನಾಶ,
ಶ್ರಾವಣ ಮಾಸದಲ್ಲಿ ಪೂರ್ಣಾಯು, ಭಾದ್ರಪದದಲ್ಲಿ ಪ್ರಜಾಹಾನಿ,
ಆಶ್ವಯೂಜದಲ್ಲಿ ಶುಭ, ಕಾರ್ತೀಕದಲ್ಲಿಸರ್ವಸಿದ್ಧಿ,
ಮಾರ್ಗಶಿರದಲ್ಲಿ ಮಾಂಗಲ್ಯ, ಪುಷ್ಯದಲ್ಲಿ ಹಾನಿ.

ಮಾಘಮಾಸದಲ್ಲಿ ಬುದ್ಧಿವೃದ್ಧಿ, ಪಾಲ್ಗುಣದಲ್ಲಿ ಸಕಲ ಸಿದ್ಧಿಗಳಹುವು :

ಮಾಸಂಗಳಂ ಮನಂಗೊಂಡು, ಬಳಿಕ ಮೇಷಾದಿಮೀನಾಂತಮಾದ ಹನ್ನೆರಡು ರಾಶಿಗಳೊಳಗೆ ಮೇಷ, ಮಿಥುನ, ಸಿಂಹ, ತುಲಾ, ಧನು, ಕುಂಭವೆಂಬಾರು ರಾಶಿಗಳೇ ಅಶುಭಂಗಳು, ಮಿಕ್ಕಾರು ರಾಶಿಗಳೇ ಶುಭಂಗಳೆಂದು ರಾಶಿಗಳ ಲೇಸುವಿಡಿದು,

ಬಳಿಕ ಪಾಡ್ಯ ಚತುರ್ಥಿ ಷಷ್ಠಿ ಅಷ್ಟಮಿ ನವಮಿ,
ಚತುರ್ದಶಿ ಹುಣ್ಣಿಮೆ ಅಮಾವಾಸ್ಯೆಯೆಂಬ ಎಂಟು
ತಿಥಿಗಳೇ ಅಶುಭಂಗಳು
ಮಿಕ್ಕ ಎಂಟ್ಟು ತಿಥಿಗಳೇ ಶುಭಂಗಳೆಂದು ತಿಥಿಗಳಂ ಪತಿಕರಿಸಿ.

ಬಳಿಕ ಆದಿತ್ಯವಾರ ಮಂಗಳವಾರ ಶನಿವಾರಂಗಳೇ ಅಶುಭಂಗಳು ಮಿಕ್ಕವೆಲ್ಲಾ ಶುಭವಾರಗಳೆಂದು ವಾರಂಗಳನಾರೈದು. ಬಳಿಕ ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಂಗಳೊಳಗೆ, ಮಖಾ ಮೃಗಶಿರ ಹಸ್ತ ಸ್ವಾತೀ ಮೂಲ ಅನುರಾಧ ರೋಹಿಣಿ ರೇವತಿ ಉತ್ತರ ಉತ್ತರಾಷಾಡ ಉತ್ತರಾಭಾದ್ರವೆಂಬ ಹನ್ನೊಂದು ಶುಭ ನಕ್ಷತ್ರಂಗಳು

ಉಳಿದವೆಲ್ಲಾ ಅಶುಭಂಗಳೆಂದು ನಕ್ಷತ್ರಂಗಳನುಪಲಕ್ಷಿಸಿ, ಬಳಿಕ ವಿಷ್ಕಂಭಾದಿ ವೈಧೃತಿ ಕಡೆಯಾದ ಇಪ್ಪತ್ತೇಳು ಯೋಗಂಗಳೊಳಗೆ ವಿಷ್ಕಂಭ ಶೂಲ ಗಂಡ ಅತಿಗಂಡ ವ್ಯಾಘಾತ ವಜ್ರ ಧೃತಿ ಧೃವ ವೈಧೃತಿ ವ್ಯತೀಪಾತ ಪರಿಘವೆಂಬೇ ಏಕಾದಶ ಯೋಗಂಗಳೇ ಅಶುಭಂಗಳು, ಮಿಕ್ಕ ಹದಿನಾರು ಯೋಗಂಗಳೇ ಶುಭಗಳೆಂದು ಯೋಗಂಗಳಂ ಸಂಯೋಗಿಸಿ, ಬಳಿಕ ಶಕುನಿ ಮೊದನಾದ ಭದ್ರೆ ಕಡೆಯಾದ ಹನ್ನೊಂದು ಕರಣಂಗಳೊಳಗೆ ಶಕುನಿ ಚತುಷ್ಕ ನಾಗ ಕಿಂಸ್ತುಘ್ನ ವಣಿಜೆ ಭದ್ರೆಯಂಬ ಆರು ಕರಣಂಗಳೇ ಅಶುಭಂಗಳು ಉಳಿದೈದು ಕರಣಂಗಳೇ ಶುಭಂಗಳೆಂದು ಕರಣಂಗಳಂ ಪರೀಕ್ಷಿಸಿ,

ಬಳಿಕ ಶುಭತಿಥಿಯಿಂ ಶ್ರೀಯುಂ, ಶುಭವಾರದಿಂದ ಆಯು ಶುಭ ನಕ್ಷತ್ರದಿಂ ಪಾಪಕ್ಷಯ, ಶುಭ ಯೋಗದಿಂ ರೋಗ ನಿವೃತ್ತಿ ಶುಭ ಕರಣದಿಂ ಕಾರ್ಯಸಿದ್ಧಿಗಳಪ್ಪವಾಗಿ, ಮಂತ್ರಜಪ ಪ್ರಾರಂಭದಲ್ಲಿ ಎಲ್ಲಮಂ ಸರ್ವಥಾ. ವಿಚಾರಿಸಬೇಕೆಂಬುದನು ಅಂಗೀಕರಿಸಿ. ೨೨೩

ಜಪ ಮಾಲಿಕಾ ಲಕ್ಷಣ :

ಮತ್ತಂ ಆ ಮಂತ್ರ ಜಪಕ್ಕೆ ಮೊದಲು ಮಾಲಿಕೆಯಂ ಸಂಪಾದಿಸಬೇಕಾಗಿಹುದು, ಅಲ್ಲಿ ಉತ್ತರೋತ್ತರ ಗುಣವಿಶಿಷ್ಟವಾದ ಮಾಲಿಕೆಗಳೋಳಗೆ ಅಂಗುಲಿಗಳಿಂದಾದರೂ, ಅಲ್ಲದೆ ಆ ಅಂಗುಲಿಗಳಲ್ಲಿ ಮಧ್ಯಮ ಅನಾಮಿಕೆಗಳೆರಡರ ಮಧ್ಯವೆರಡು ರೇಖೆಗಳೇ ಮೇರುವಾಗಿ, ಮಿಕ್ಕ ಮಧ್ಯಾಂಗುಲಿಯ ಅಗ್ರದ ರೇಖೆಯಂ ತೊಡಗಿ ಪ್ರದಕ್ಷಿಣಮಾಗಿ ಹತ್ತು ರೇಖೆಗಳನು ಅಂಗುಷ್ಠಾಗ್ರದಿಂ ಮುಟ್ಟಿ ಮುಟ್ಟಿ ಮಾಳ್ಪುದೇ ನಿತ್ಯ ಕರ್ಮಾದಿಕಕ್ಕೆ, ಶಂಖದ ಮಣಿಮಾಲೆಯೇ ಐಶ್ವರ್ಯಾದಿಕಕ್ಕೆ, ಸ್ಪಟಿಕದ ಮಾಲೆಯೆ ಮೋಕ್ಷಾದಿಕಕ್ಕೆ, ಪದ್ಮಾಕ್ಷಮಣಿಮಾಲೆಯೇ ಪುಷ್ಟಿ ಲಕ್ಷ್ಮ್ಯಾದಿಗಳಿಗೆ, ಪುತ್ರಜೀವಿಯ ಮಣಿಮಾಲೆಯೇ ಪುತ್ರ ಪಶು ಧಾನ್ಯಾಭಿವೃದ್ಧಿಗಳಿಗೆ, ಪವಳದ ಮಣಿಮಾಲೆಯ ವಶ್ಯ ಧನಧಾನ್ಯ ಸೌಭಾಗ್ಯ ಮುಕ್ತ್ಯಾದಿಗಳಿಗೆ, ಮುಕ್ತ್ಯಾಮಣಿ ಮಾಲೆಯೆ ಸರ್ವವಿದ್ಯಾದಿಗಳಿಗೆ, ಮಾಣಿಕ್ಯದ ಮಣಿಮಾಲೆಯ ಲೋಕವಶ್ಯ ಸ್ತ್ರೀವಶ್ಯಾದಿಗಳಿಗೆ, ಮರಕತ ಶಿಲೆಗಳ ಮಣಿಮಾಲೆಯೆ ಶತ್ರುಜಯಾದಿಗಳಿಗೆ, ಕುಶಗ್ರಂಥಿಯ ಮಾಲೆಯೆ ಪಾಪಕ್ಷಯ ವಿದ್ಯಾವೃದ್ಧ್ಯಾದಿಗಳಿಗೆ, ಸುವರ್ಣ ರಜತಂಗಳ ಮಣಿಮಾಲೆಗಳೇ ಶ್ರೀ ಸ್ತ್ರೀ ಕಾಮ್ಯ ಕರ್ಮಾದಿಗಳಿಗೆ, ಮಾತೃಕಾಕ್ಷರಮಾಲೆಯೇ ವಾಕ್ಸಿದ್ಧ್ಯಾದಿಗಳಿಗೆ, ಪಾದರಸದ ಮಣಿಮಾಲೆಯ ಪೂರ್ವೋಕ್ತ ಸಕಲ ಕಾರ್ಯಂಗಳಿಗೆ ರುದ್ರಾಕ್ಷಮಾಲೆಯೇ ಭೋಗಮೋಕ್ಷಂಗಳಿಗಪ್ಪವೆಂಬುದಂ ಒಪ್ಪುಗೊಂಡು.

ಬಳಿಕ ರುದ್ರಕ್ಷಮಾಲಿಕೆಯಲ್ಲಿ ಮೇರುಶೂನ್ಯಮಾದ ಹನ್ನೊಂದುಮಣಿ ಮಾಲಿಕೆಯಿಂದ ಏಕಾದಶ ರುದ್ರಪ್ರೀತಿಯು, ಹದಿನೈದು ಮಣಿಮಾಲೆಯಿಂದ ಅಭಿಚಾರ ಕ್ರಿಯೆ, ಇಪ್ಪತ್ತೈದು ಮಣಿಮಾಲಿಕೆಯಿಂದೆ ಮುಕ್ತಿ, ಇಪ್ಪತ್ತಾರು ಮಣಿಮಾಲಿಕೆಯಿಂದೆ ಧನವೃದ್ಧಿ, ಇಪ್ಪತ್ತೇಳು ಮಣಿಮಾಲಿಕೆಯಿಂ ಸರ್ವಾರ್ಥ ಸಿದ್ಧಿ, ಇಪ್ಪತ್ತೆಮಟು ಮಣಿಮಾಲಿಕೆಯಂ ಪುಷ್ಟಿ, ಮೂವತ್ತು ಮಣಿ ಮಾಲಿಕೆಯಂ ಅರ್ಥಲಬ್ಧ, ಮೂವತ್ತೆರಡು ಮಣಿಮಾಲಿಕೆಯಂ ಜಯಲಕ್ಷ್ಮಿ, ಐವತ್ತು ಮಣಿ ಮಾಲಿಕೆಯಂ ಕಾಮ್ಯಕರ್ಮ ಪ್ರವೃದ್ಧಿ, ಐವತ್ತನಾಲ್ಕು ಮಣಿ ಮಾಲಿಕೆಯಿಂ ಸರ್ವಸಿದ್ಧಿ, ನೂರು ಮಣಿಮಾಲಿಕೆಯಂ ಕಾರ್ಯಪ್ರವೃದ್ಧಿ, ನೂರೈದು

ಮಣಿಮಾಲಿಕೆಯಂ ಭೋಗಮೋಕ್ಷಂಗಳು, ನೂರೆಂಟು ಮಣಿಮಾಲಿಕೆಯಂ ಭುಕ್ತಿ ಮುಕ್ತಿಗಳಹುವೆಂಬುದನೊಡಂಬಟ್ಟು. ೨೨೪

ಬಳಿಕ ಆ ಮಾಲಿಕೆಗಳಿಗೆ ಆಮಲಕಫಲ ಪ್ರಮಾಣಿನ ಮಣಿಯೇ ಉತ್ತಮ, ಬದರೀಫಲ ಪ್ರಮಾಣಿನ ಮಣಿಯೇ ಮಧ್ಯಮ, ಚಣಕ ಪ್ರಮಾನಿನ ಮಣಿಯೇ ಕನಿಷ್ಟವಹುದು, ಅವರಲ್ಲಿ ಅತಿಸ್ಥೂಲ, ಅತಿಸೂಕ್ಷ್ಮ, ಭಿನ್ನ, ಲಘು, ವ್ರಣ, ಕಂಟಕ, ಜೀರ್ಣ, ಪೂರ್ವಧಾರಣಾದಿ ದೋಷಮಿಲ್ಲದೆ, ದೃಢ, ವ್ಯಕ್ತ, ಸುವರ್ಣ, ದೃಷ್ಟಿ, ಪ್ರೀತಿ ಮೊದಲಾದ ಸಲ್ಲಕ್ಷಣಂಗಳನುಳ್ಳ ಮಣಿಗಳಿಂದ ಆಯಾಯಾ ಮಾಲಿಕೆಗಳಿಗೆ ಚಿನ್ನ, ಬೆಳ್ಳಿ, ತಾಮ್ರ, ಸೀಸ, ಕಬ್ಬುನದ ಸರಿಗೆಗಳಾಗಲಿ, ಪಂಚವರ್ಣದ ಪಟ್ಟುನೂಲಾಗಲಿ, ಕಾರ್ಪಾಸದೆಳೆಯಾಗಲಿ, ಅವರಲ್ಲಿ, ನವೀನಮಾದ ಪವಿತ್ರಮಪ್ಪ ಸೂಕ್ಷ್ಮವಾದ ಇಪ್ಪತ್ತೇಳು ಎಳೆಗಳನೆ, ಸಮಭಾಗದಿಂ ಮುಪ್ಪುರಿಗೂಡಿದುದೆ ಉತ್ತಮ, ಇಪ್ಪತ್ತೊಂದು ಎಳೆಯಂ ಮುಪ್ಪುರಿಗೊಂಡುದೆ ಮಧ್ಯಮ, ಹದಿನೇಳು ಎಳೆಯಂ ಮುಪ್ಪುರಿಗೊಂಡುದೇ ಕನಿಷ್ಟ ಮಣಿಮಾಲೆಗಳಹುದೆಂದರಿದು, ೨೨೫

ಮಾಲಿಕಾ ರಚನಾದಿ ಮಂತ್ರಂಗಳು :

'ಓಂ ಶುಭಾತ್ಮನೇ ಪರಮಾತ್ಮನೇ ನಮಃ' ಎಂಬ ಮಂತ್ರದಿಂ ಹೊಸೆದು ಸೂತ್ರಮಂ ಮಾಡಿ, ಮೇಲೆ ಆ ಸೂತ್ರಮಂ ಪಿಡಿದುದೇ ಮೂಲವಹುದು. ಹುರಿಗೂಡಿದುದೇ ಅಗ್ರವಹುದೆಂದರಿದು,

'ಓಂ ಹೃದಯಾಯ ನಮಃ' ಎಂಬ ಮಂತ್ರದಿಂದ ಆ ಸೂತ್ರಮಂ ಸುಗಂಧಲೇಪನಾದಿಗಳಿಂ ಸಂಸ್ಕರಿಸಿ,

ಮೇಲೆ, "ಓಂ ಭವಾಯನಮಃ" ಎಂಬ ಮಂತ್ರದಿಂದ ಉದಕಮಂ ಮಂತ್ರಿಸಿ,

"ಓಂ ನಂ ಸದ್ಯೋಜಾತಾಯ ನಮಃ" ಎಂಬ ಮಂತ್ರದಿಂ ಮಣಿಗಳಂ ತೊಳೆದು,

"ಓಂ ಮಂ ವಾಮದೇವಾಯ ನಮಃ" ಎಂಬ ಮಂತ್ರದಿಂದ ಆಮಣಿಗಳನು ಒರಸೂದು.

"ಓಂ ಶಿಂ ಅಘೋರಾಯ ನಮಃ" ಎಂಬ ಮಂತ್ರದಿಂ ಧೂಪವನಿಕ್ಕಿ,

"ಓಂ ವಾಂ ತತ್ಪುರುಷಾಯ ನಮಃ" ಎಂಬ ಮಂತ್ರದಿಂ ಆ ಮಣಿಪುಂಜವನರ್ಚಿಸಿ,

"ಓಂ ಯಂ ಈಶಾಯನಮಃ" ಎಂಬ ಮಂತ್ರದಿಂ ಪ್ರತ್ಯೇಕರ್ಮಣಿಗಳಂ ಮಂತ್ರಿಸುತ್ತ ಇಂತು ಪರಿಶುದ್ಧಿಗೆಯ್ದು, ಬಳಿಕ

"ಓಂ ಶಿವ ಚೈತನ್ಯ ರೂಪಾಯ ಪ್ರಣವಾತ್ಮಕಾಯ ನಮಃ" ಎಂಬ ಮಂತ್ರದಿಂ ಸ್ಥೂಲವಾದ ಮಣಿಗಳನು ಆ ಸೂತ್ರ ಮೂಲದಲ್ಲಿ ಸೂಕ್ಷ್ಮವಾದ ಮಣಿಗಳನು ಅಗ್ರದಲ್ಲಿ ಗೋ ಪುಚ್ಛದಾಕಾರವಪ್ಪಂತೆ, ಸೇರುವೆಯರಿದು, ಮುಖ ಮಖಂಗಳಂ ಸಂಯೋಗಿಸಿ, ಸರಂಗೊಳಿಸಿ ಮೇಲೆ ಮಣಿಮಣಿಗಳೊರಸದಂತೆ' ಓಂ ಬ್ರಹ್ಮಸ್ವರೂಪಾಯ ಸರ್ವಜ್ಞಾಯ ನಮಃ" ಎಂಬ ಮಂತ್ರದಿಂದ ಎರಡು ಸುತ್ತಿನ ಗಂಟನಿಕ್ಕಿಬಿಗಿದು, ಮೇಲೆ ಮೂಲಾ ಅಗ್ರಂಳನೊಂದುಗೂಡಿ, ಬೇರೆ ಗಣನೆಯೊಳಗಲ್ಲದ ಒಂದು ಮಣಿಯನು "ಓಂ

ಶಿಖಾಮಧ್ಯಸ್ಥಿತ ರೂಪಾಯ ನಮಃ" ಎಂಬ ಮಂತ್ರದಿಂ ಮೇರುವೆಂದು ಕಲ್ಪಿಸಿ ಪೋಣಿಸುತ್ತ ಅದರ ಮೇಲೆ ಎರಡು ಸುತ್ತಿನ ಗಂಟನಿಕ್ಕಿ ಬಂಧಿಸಿ ಜಪಮಾಲಿಕೆಯನು ಇಂತು ಅನುಗೊಳಿಸಿ. ೨೨೬

ಬಳಿಕ ಶ್ರೀ ಗುರುವಿನ ಹಸ್ತದಿಂದಾ ಮಾಲಿಕೆಗೆ ಪಂಚಗವ್ಯ ಪಂಚಾಮೃತಗಳಿಂ "ಓಂ" ಎಂಬ ಮಂತ್ರದಿಂದ ಅಭಿಷೇಕಂಗೆಯ್ದು, ಮೇಲೆ 'ಓಂ' ಮಂತ್ರದಿಂದವೆ ಜಲಸ್ನಾನ ಮಾಡಿ, ಮೇಲೆ ಗಂಧ ಪುಷ್ಪಾದಿಗಳಿಂ ಪ್ರತ್ಯೇಕ ಮಣಿಗಳಂ ಮುಟ್ಟಿಮುಟ್ಟಿ 'ಓಂ' ಎಂಬ ಮಂತ್ರದಿಂದರ್ಚಿಸಿ, ನೈವೇದ್ಯ ತಾಂಬೂಲಾದಿಗಳಂ ಸಮರ್ಪಿಸಿ, ಮೇಲೆ ದಂಡನಮಸ್ಕಾರ ಪ್ರದಕ್ಷಣೆ ಮೊದಲಾದ ವಿಧಿಗಳಿಂ ಗುರೂಪದೇಶದಿಂ ಜಪಮಾಲಿಕೆಯಂ ಪಡೆದು.

ಬಳಿಕ ತಾನು ಜಪಗೆಯ್ವಲ್ಲಿ ಮೊದಲು ಜಪಮಾಲಿಕೆಗೆ ಜಲ ಪುಷ್ಪಂಗಳಿಂದ ಅರ್ಘ್ಯಮಂ ಶುಕ್ತಿಮುದ್ರೆಯಿಂ ಮಂತ್ರಸಹಿತಮಾಗಿ ಕೊಟ್ಟು, ಮೇಲೆ ಆ ಜಪಮಾಲಿಕೆಯಂ ಸ್ಥೂಲಾದಿ ಸೂಕ್ಷ್ಮಾಂತಮಾಗಿ ಜಪಂಗೆಯ್ವದೇ ಉತ್ಪತ್ತಿ, ಸ್ಥಿತಿಯಂಗರಿವುದು. ಸೂಕ್ಷ್ಮಾದಿ ಸ್ಥೂಲಾಂತಮಾಗಿ ಜಪಿಸೂದೇ ಸಂಹಾರಮೆಂದರಿವುದು. ಪರದೃಷ್ಟಿಗೆ ಗೋಚರಮಾಗದಂತೆ ಶೀಘ್ರವಲದೆ, ಮಂದವಲ್ಲದೆ ಪ್ರತ್ಯೇಕ ಮಣಿಗೊಮ್ಮೊಮ್ಮೆ ಮಂತ್ರೋಚ್ಚಾರದಿಂ ಜಪಿಸುವಲ್ಲಿ ಪ್ರಮಾದವಶದಿಂ ಮಾಲಿಕ ಪತನಮಾಗೆ ಮಂತ್ರಹಾನಿಯಹುದಾಗಿ, ಮತ್ತೆ ಮೊದಲಿಂ ಪ್ರಾರಂಭ ಮಾಡಿ, ಮೇರುವನುಲ್ಲಂಘಸದೆ ಪ್ರದಕ್ಷಣಮಾಗಿ ತಿರುಹಿಕೊಂಡು ನಮಸ್ಕರಿಸಿ, ಮೇಲೆ ಮೊದಲಂತೆ ಪ್ರಾರಂಭಿಸುತ್ತ ಇಂತು, ತನ್ನ ನೇಮದ ಜಪ ಸಮಾಪ್ತಿಯಾದ ಮೇಲೆಯು ಜಪಮಾಲಿಕೆಗೆ ಅರ್ಘ್ಯಮಂ ಕೊಟ್ಟು, ವಾಮಹಸ್ತದಿಂದಾ ಜಪಮಾಲಿಕೆಯಂ ಮುಟ್ಟದೆ ಕಂಠಾದಿಗಳಲ್ಲಿ ಧರಿಸದೆ ಜಪಕಾಲದಲ್ಲಿಯೇ ಜಪಂಗೆಯ್ದು, ಸದಾ ಶುದ್ಧಸ್ಥಳದಲ್ಲಿ ಇರಿಸಬೇಕೆಂಬುದಂ ಅಂಗೀಕರಿಸಿ, ೨೨೭

ಜಪಾದಿಗಳಿಗೆ ಸ್ಥಾನಾದಿಗಳು :

ಬಳಿಕ ಗೃಹ ಗೋಷ್ಟ ನದೀತೀರ ಸಮುದ್ರ ತಟ ಗಿರಿ ಪುಣ್ಯಾಶ್ರಮ ದೇವಾಲಯಾದಿಗಳೇ ಜಪಕ್ರಿಯೆಗೆ ಉತ್ತರೋತ್ತರ ವಿಶೇಷ ಸ್ಥಾನಂಗಳು, ಅವರಲ್ಲಿ : ಜಲಸನ್ನಿಧಿ ದೀಪಸನ್ನಿಧಿ ಸೂರ್ಯಸನ್ನಿಧಿ ಶಿವಸನ್ನಿಧಿಗಳೇ ಜಪವಿಧಿಗೆ ಉತ್ತರೋತ್ತರ ವಿಶಿಷ್ಠ ಸನ್ನಿಧಿಗಳೆಂಬುದಂ ಅಂಗಂಗೊಂಡು, ಬಳಿಕ, ಅಲ್ಲಿ, ಪೂರ್ವಾಭಿಮುಖದಿಂ ವಶ್ಯ, ಅಗ್ನಿಯಮ ವ್ಯಾಧಿ, ದಕ್ಷಿಣದಿಂದ ಅಭಿಚಾರ, ನೈರುತ್ಯದಿಂ ದ್ವೇಷ, ಪಶ್ಚಿಮದಿಂ ಧನಲಾಭ, ವಾಯವ್ಯದಿಂದ ಆಕರ್ಶಣ, ಉತ್ತರದಿಂ ಶಾಂತಿ, ಈಶಾನ್ಯದಿಂ ಮೋಕ್ಷ ಸಿದ್ಧಿಗಳಪ್ಪವೆಂದು ದಿಕ್ ವಿಚಾರಮಂ ಮಾಡಿ. ೨೨೮

ಜಪಾಸನ ಫಲ :

ಬಳಿಕ ವಂಶಾಸನದಿಂ ದಾರಿದ್ರ್ಯ, ಪಾಷಾಣಾಸನದಿಂ ವ್ಯಾಧಿ, ಭೂಮ್ಯಾಸನದಿಂ ದುಃಖ, ಮಂತ್ರಹಾನಿಗಳು, ದಾರುಕಾಸನದಿಂದ ದೌರ್ಭಾಗ್ಯ ವ್ಯಾಧಿಗಳು. ತೃಣಾಸನದಿಂ ಯಶೋಹಾನಿ, ಪಲ್ಲವಾಸನದಿಂ ಚಿತ್ತಭ್ರಾಂತಿ, ಕೃಷ್ಣಾಜಿನಾಸನದಿಂ ಮೋಕ್ಷಲಕ್ಷ್ಮಿ, ವಸ್ತ್ರಾಸನದಿಂ ವ್ಯಾಧಿನಿವೃತ್ತಿ, ಕಂಬಲಾಸನದಿಂ ಸೌಖ್ಯತೆ. ಕೃಷ್ಣವಸ್ತ್ರಾಸನವೆ ಅಭಿಚಾರಾ ಕ್ರಿಯೆಗೆ, ರಕ್ತವಸ್ತ್ರಸನವ

ವಶ್ಯಾದಿಕ್ರಿಯೆಗೆ, ಶುಭವಸ್ತ್ರಾಸನವೆ ಶಾಂತ್ಯಾದಿ ವಿಧಿಗೆ, ಚಿತ್ರಕಂಬಲಾಸನವೆ ಸರ್ವಾರ್ಥ ಸಿದ್ಧಿಗಳಿಗೆ ಅಹುದೆಂದು ಪೀಠಂಗಳಂ ಕುರುಹಿಟ್ಟು, ೨೨೯

ಆಸನಬಂಧ ಭೇದಂಗಳು :

ಬಳಿಕ ಎಂಭತ್ತನಾಲ್ಕು ಆಸನಂಗಳೊಳಗೆ ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ವೀರಾಸನ, ಗೋಮುಖಾಸನ, ಸುಖಾಸನಂಗಳೆ ಜಪಕರ್ಮಕ್ಕೆ ಯೋಗ್ಯವಾದ ಆಸನಗಳೆಂದು ಸುಸ್ಥಿರಾಸನನಾಗಿ, ೨೩೦

ಜಪಕಾಲದಲ್ಲಿ ಇರತಕ್ಕ ಬಗೆ :

ವಾಹನ ಮಂಚ ತಲೆಸುತ್ತು ಕುಪ್ಪಸ ದಿಗಂಬರ ಮುಕ್ತಕೇಶ ಅಶುಚಿತ್ವ ಬಹುಭಾಷೆ ಆಗುಳಿಕೆ ಶೀನು ತೂಕಡಿಕೆ ನಿಷ್ಠೀವನ ನೀಚಪ್ರಾಣಿದರ್ಶನ ಕ್ರೋಧ ವ್ಯಾಕುಲತೆಗಳುಳ್ಳಾತನಾಗಿ ಜಪಿಸಲಾಗದೆಂದು ನಿರ್ವಿಕಾರತ್ವದಿಂ ಕಾಷ್ಠಮೌನಿಯಾಗಿ ಸಮಗ್ರೀವ ಶಿರಶರೀರಿಯಾಗಿ ಮನೋದೃಷ್ಟಿಗಳ ಏಕಾಗ್ರತೆಯಿಂ ಧ್ಯಾನ ಮುದ್ರಾ ಸಮನ್ವಿತನಾಗಿ ಕುಳ್ಳಿರ್ದು. ೨೩೧

ಪ್ರಾಣಾಯಾಮ ಯೋಗ :

ಬಳೀಕ ಭಸ್ಮ ರುದ್ರಾಕ್ಷಾಧಾರಣ ಗುರುಪಾದಸ್ಮರಣಪೂರ್ವಕಮಾಗಿ, ಮರಳಿ, ಕನಿಷ್ಟ ಅನಾಮಿಕ ಅಂಗುಷ್ಟಮೆಂಬ ಅಂಗುಲಿತ್ರಯದಿಂ ವಾಮ ದಕ್ಷಿಣ ನಾಸಾಪುಟಮಂ ಪಿಡಿದು, ಮೇಲೆ ಬ್ರಹ್ಮಾದಿ ದೇವತೆಯಪ್ಪ ಪ್ರಣವದಾದಿಯಾದ ಅಕಾರಮಂ ಚಿಂತಿಸುತ್ತೆ. ಈಡೆಯೊಳ್ ಪವನನಂ ತನ್ನ ಶಕ್ತ್ಯಾನುಸಾರದಿಂದ ಉದರದಲ್ಲಿ ಪೂರಿಸಿ ಬಳಿಕ ವಿಷ್ಣುವಧಿದೇವತೆಯಾದ ಪ್ರಣವಮಧ್ಯಮಪ್ಪ ಉಕಾರಮಂ ಧ್ಯಾನಿಸುತ್ತಾ, ಪೂರಿಸಿದ ಪ್ರಾಣವನು ಅಲ್ಲಿಯೀ ಕುಂಭಿಸಿ, ಬಳಿಕ ರುದ್ರಾಧಿದೇವತಾದಿಕಮಾದ ಪ್ರಣವದತ್ಯಂತಮಪ್ಪ ಮಕಾರಮಂ ಸ್ಮರಿಸುತ್ತಂ. ಆ ಕುಂಭಿಸಿದ ಈಡೆಯಂ ರೇಚಿಸಿ ಮೇಲೆ ಆಯಾಯ ಮಂತ್ರಕ್ರಮವಿಡಿದು ಮತ್ತೆ ಪಿಂಗಲೆಯಿಂ ಪೂರಿಸುತ್ತ ಉದರದಲ್ಲಿ ಕುಂಭಿಸುತ್ತ ಈಡೆಯಂ ರೇಚಿಸುತ್ತ ಇಂತು ಪ್ರಾಣಾಯಾಮಕ್ರಮಮಂ ಮಾಡಿ, ೨೩೨

ಮಂತ್ರಾಂಗಗಳು :

ಮೇಲೆ ಸಕಲ ಮಂತ್ರಗಳಿಗೆ ಸಾಧಾರಣಮಾದ ಋಷಿ, ಛಂದಸ್ಸು, ದೇವತೆ, ಬೀಜ, ಶಕ್ತಿ, ಕೀಲಕ, ಸ್ವರ, ವರ್ಣ, ಸ್ಥಾನ, ಅಕ್ಷರ, ಕಲೆ, ತತ್ವ, ಅರ್ಥ, ಚಿಂತನಾದಿಗಳೆಂಬ ಅಂಗಂಗಳಲ್ಲಿ ಮುಖ್ಯಮಾದ ಮಂತ್ರ, ಪ್ರಥಮದೃಷ್ಟನಾದ ಋಷಿಯನೆ ಮಸ್ತಕದಲ್ಲಿ, ಮಂತ್ರಾಕ್ಷರ ಸಂಖ್ಯಾರೂಪಮಪ್ಪ ಛಂದವನೆ ಮುಖದಲ್ಲಿ, ಮಂತ್ರವಾಚ್ಯವಾದ ಅಧಿದೇವತೆಯನೆ ಹೃದಯದಲ್ಲಿ, ಮಂತ್ರದೇವತಾನಾಮ ವರ್ಣವಿಶೇಷಮಾದ ಬೀಜವನೆ ನಾಭಿಯಲ್ಲಿ, ಮಂತ್ರಸಿದ್ಧಿಪ್ರದಮಾದ ಕುಂಡಿಲಿನ್ಯಾದಿ ಶಕ್ತಿಯನೆ ಗುಹ್ಯದಲ್ಲಿ, ಮಂತ್ರ ವಿಘ್ನನಿವರ್ತಕಮಾದ ಕೀಲಕವೆನೆ ಪಾದದಲ್ಲಿ, ಬೇರೆ ಮಂತ್ರರಕ್ಷಕರಾದ ಉಮೆ ವಿಘ್ನೇಶ್ವರರನೆ ಕ್ರಮದಿಂ ವಾಮ ದಕ್ಷಿಣ ಭುಜದ್ವಯದಲ್ಲಿ, "ಋಷಯೇ ನಮಃ" ಎಂಬ ಮಂತ್ರಕ್ರಮದಿಂ ಚತುರ್ಥ್ಯಂತಮಾದ ನಮಸ್ಕಾರ ಪೂರ್ವಕಮಾಗಿ ಆಯಾಯ ಸ್ಥಾನಂಗಳಂ

ಮುಟ್ಟಿ ಮುಟ್ಟಿ ಸ್ಮರಣಂಗೆಯ್ದು ಮತ್ತಂ ಆ ಮಂತ್ರಂಗಳಿಂ, ಕರನ್ಯಾಸ ದೇಹನ್ಯಾಸ, ಅಂಗನ್ಯಾಸವೆಂಬ ನ್ಯಾಸತ್ರಯಂಗಳ ಉತ್ಪತ್ತಿ ಸ್ಥಿತಿ ಸಂಹಾರ ಭೇದಂಗಳಂ ಪೂರ್ವೋಕ್ತ ಕ್ರಮದಿಂದರಿದು ವಿಸ್ತರಿಸುವದು. ಆವರಲ್ಲಿ ಗೃಹಸ್ಥಂಗೆ ಮುತ್ತೈದೆಯರಿಗೆ ವಿಧವೆಯರಿಗೆ ಸ್ಥಿತಿನ್ಯಾಸವಹುದು. ಬ್ರಹ್ಮಚಾರಿಗೆ ಉತ್ಪತ್ತಿನ್ಯಾಸವಹುದು, ವಾನಪ್ರಸ್ಥ ಯತಿಗಳಿಗೆ ಸಂಹಾರನ್ಯಾಸವಹುದುದೆಂದು ಅನುವದಿಸಿ, ೨೩೩

ಜಪಾಂಗುಳಿ ವಿನಿಯೋಗಾದಿ :

ಬಳಿಕ ಆಂಗುಷ್ಠದಿಂ ಮೋಕ್ಷ, ತರ್ಜನಿಯಂ ಶತ್ರು ಹಾನಿ, ಮಧ್ಯಾಂಗುಲಿಯಂ ಅರ್ಥಸಿದ್ಧಿ, ಅನಾಮಿಕೆಯಿಂ ಶಾಂತಿ, ಕನಿಷ್ಠದಿಂ ರಕ್ಷಣಗಳಪ್ಪವು. ಅಲ್ಲಿ ಮಧ್ಯಾಂಗುಷ್ಠ ಯೋಗದಿಂ ಮಾಲಿಕೆಯಂ ಪಿಡಿದು ಜಪಂಗೆಂಯ್ವುದೇ ಕನಿಷ್ಠವೆನಿಸೂದು. ತರ್ಜನಿ ಅಂಗುಷ್ಠಯೋಗದಿಂ ಜಪಿಸೂದೇ ಮಧ್ಯಮವೆನಿಸೂದು. ಅನಾಮಿಕ ಅಂಗುಷ್ಠಯೋಗದಿಂ ಜಪಂಗೆಯ್ವುದೇ ಉತ್ತಮವೆನಿಸೂದು. ಬಳಿಕ ಅಲ್ಲಿ ಮಧ್ಯಾಂಗುಷ್ಠಂಗಳಿಂ ಭಾಷ್ಯಜಪಂಗೆಯ್ವುದು. ತರ್ಜನಿ ಅಂಗುಷ್ಠಂಗಳಿಂದ ಉಪಾಂಶು ಜಪಂ ಮಾಳ್ಪುದು. ಅನಾಮಿಕೆ ಮಧ್ಯಮ ಅಂಗುಷ್ಠಂಗಳಿಂದ ಮಾನಸ ಜಪಂಗೆಯ್ವುದು. ಅವರಲ್ಲಿ ಪರಶ್ರುತಿ ಗೋಚರವಪ್ಪಂತೆ ಉಚ್ಚರಿಪುದೆ ಉಪಾಂಶುವಹುದು. ಮಂತ್ರವಾಕ್ಯಾರ್ಥ ಚಿಂತನಂಗೆಯ್ವುದೇ ಮಾನಸವಹುದು. ಅವರೊಳಗೆ ವಾಚಕ ಜಪವೆ ಕ್ಷುದ್ರ ಕಾರ್ಯಂಗಳಿಗೆ ಉಪಾಂಶು ಜಪವೇ ಸಕಲ ಸಿದ್ಧಿಗಳಿಗೆ, ಮಾನಸ ಜಪವೇ ಮುಕ್ತಿಗೆ ಅಹುದೆಂದು ನಿಯಾಮಿಸಿ, ೨೩೪

ನವಾವರಣಗಳು : ಬಳಿಕ,

೧. ಮಂತ್ರಗಳ ವಾಚ್ಯವಾಚಕ ಸಂಬಂಧವರಿದು ಮೇಲೆ ಪಂಚಬ್ರಹ್ಮ ಷಡಂಗಗಳೇ ಪ್ರಥಮಾವರಣ.
೨. ಅನಂತಾದಿ ಅಷ್ಟ ವಿದ್ಯೇಶ್ವರರು ಎರಡನೆಯಾವರಣ
೩. ಉಮೆ ಚಂಡೇಶ್ವರ ನಂದಿಕೇಶ್ವರ ಮಹಾಕಾಳ ಭೃಂಗಿರಂಟಿ ಗಣಪತಿ ವೃಷಭ ಷಣ್ಮುಖರೆಂಬ ಅಷ್ಟಗಣೇಶ್ವರರೇ ಮೂರನೆಯಾವರಣ.
೪. ಇಂದ್ರಾದಿ ಲೋಕಪಾಲಾಷ್ಟಕರು, ಬ್ರಹ್ಮವಿಷ್ಣುಗಳು ನಾಲ್ಕನೆಯಾವರಣ.
೫. ವಜ್ರಾದಿ ಪದ್ಮಚಕ್ರಂಗಳೆಂಬ ದಶಾಯುಧಂಗಳು ಐದನೆಯಾವರಣ.
೬. ಬ್ರಾಹ್ಮಿಯಾದಿ ಸಪ್ತಮಾತೃಕೆಯರು ಆರನೆಯಾವರಣ.
೭. ಅಷ್ಟವಸುಗಳೇ ಏಳನೆಯ ಆವರಣ.
೮. ಏಕಾದಶರುದ್ರರೆ ಎಂಟನೆಯ ಆವರಣ.
೯. ಆದಿತ್ಯಾದಿ ನವಗ್ರಹಗಳು ಒಂಭತ್ತನೆಯ ಆವರಣವಹುದಾಗಿ ಪಂಚಾಕ್ಷರಾದಿ ಮಂತ್ರ ದೇವತೆಯಾವರಣ ಸಹಿತಮಾಗಾದರೂ, ನಿರಾವರಣಮಾಗಾದರು, ಧ್ಯಾನಿಸುತ್ತೆ ಜಪಿಸೂದು. ಆ ಧ್ಯಾನದಲ್ಲಿ ಅಭಿಚಾರ ಗ್ರಹೋಚ್ಚಾಟನಾದಿಗಳಿಗೆ

ಕೃಷ್ಣವರ್ಣರೂಪದಿಂ, ವಶ್ಯಾದಿಗಳಿಗೆ ರಕ್ತವರ್ಣರೂಪದಿಂ, ಮುಕ್ತ್ಯಾದಿಗಳಿಗೆ ಶುಕ್ಲವರ್ಣರೂಪದಿಂ ಧ್ಯಾನಿಸೂದು. ೨೩೫

ಧ್ಯಾನಕ್ರಮ ಫಲಾದಿಗಳು :

ಬಳಿಕ ಆ ಧ್ಯಾನಕ್ರಮದಲ್ಲಿ ಮಂತ್ರಾಧಿದೇವತೆಗಳಿಗೆ ಅಘೋರಾದಿ ಘೋರಮೂರ್ತಿಯೆಂದು, ಸದಾಶಿವಾದಿ ಮಿಶ್ರಮೂರ್ತಿಯೆಂದು, ಸಾಂಬಶಿವಾದಿ ಶಾಂತಮೂರ್ತಿಯೆಂದು, ತ್ರಿವಿಧ ಮೂರ್ತಿಗಳುಂಟು, ಅವರಲ್ಲಿ ಘೋರಮೂರ್ತಿಧ್ಯನದಿಂ ಪಾಪ ರೋಗ ರಿಪುಕ್ಷಯಾದಿಗಳಹವು. ಮಿಶ್ರಮೂರ್ತಿಧ್ಯಾನದಿಂ ಚಿರಕಾಲಕ್ಕೆ ಸಕಲ ಸಿದ್ಧ್ಯಾದಿಗಳಹವು, ಶಾಂತಮೂರ್ತಿ ಧ್ಯಾನದಿಂ ಶೀಘ್ರ ಚಿರಕಾಲವಲ್ಲದೆ ಶಾಂತಿ ಪ್ರಜ್ಞಾದಿಗಳಹವು, ಎಂದರಿದು ಧ್ಯಾನಿಸೂದು. ೨೩೬

ದ್ವಿವಿಧ ಜಪಂಗಳು :

ಆ ಧ್ಯಾನ ರಹಿತಮಾಗಿ ಮಾಳ್ಪುದೇ ಅಗರ್ಭಜಪವು. ಆ ಧ್ಯಾನಯುಕ್ತಮಾಗಿ ಮಾಳ್ಪುದೇ ಸಗರ್ಭಜಪವು. ಅವರೊಳಗೆ ಅಗರ್ಭಜಪಕ್ಕೆ ಸಗರ್ಭ ಜಪವೇ ಕೋಟಿಮಡಿ ಮಿಗಿಲೆಂದು ಅನುಸಂಧಾನಿಸಿ. ೨೩೭

ಮಂತ್ರ ಗರ್ಭಗಳು :

ಬಳಿಕ ಆ ಮಂತ್ರಂಗಳಿಗೆ ಆತ್ಮಗರ್ಭ, ಶಿವಗರ್ಭ, ಶಕ್ತಿಗರ್ಭವೆಂಬ ಗರ್ಭತ್ರಯಂಗಳು ಅವರಲ್ಲಿ ಆತ್ಮಗರ್ಭಮಾಗೆ ಫಲಿಸಲು ಅಸಮರ್ಥವಹುದು, ಶಿವಗರ್ಭಮಾಗೆ ನಪುಂಸಕವಹುದು. ಶಕ್ತಿಗರ್ಭಮಾಗೆ ಭುಕ್ತಿ ಮುಕ್ತಿ ಪ್ರದವಹುದೆಂದು ಈ ಕ್ರಮವರಿದು, ೨೩೮

ಜಪೋಪಸಂಹಾರಿ :

ಇಂತು ವಿದ್ಯುಕ್ತಮಾಗಿ ಜಪಂಗೆಯ್ದು, ಜಪ ಸಮಾಪ್ತಿಯಾದಮೇಲೆಯು ಪೂರ್ವೋಕ್ತಮಾದ ವಿಧಿಗೆ ವಿಪರೀತಮಾದ ಪ್ರಾಣಾಯಾಮತ್ರಯದಿಂ, ಮೊದಲಂತೆ ಛಂದ ಋಷಿ ದೇವತಾದಿಗಳಂ ಸ್ಮರಿಸಬೇಕೆಂದು ವಿಧಿಸಿ, ಬಳಿಕೀ ಮಂತ್ರಾದಿ ಸಕಲ ಕ್ರಿಯೆಗಳಂ ಶ್ರೀ ಗುರೂಪದೇಶದಿಂದ ಅಭ್ಯಾಸಂಗೆಯ್ಯೆ, ಸವಾರ್ಥಸಿದ್ಧಿಯಹುದಲ್ಲದೆ ಯುಕ್ತಿಶಾಸ್ತ್ರಬಲದಿಂದ ಅನುಷ್ಠಿಸಲಾಗದೆಂದು ದೃಢವಿಡಿದು. ೨೩೯

ಶಿವಪೂಜಾ ವಿಷಯ :

ಅನಂತರದೊಳು ಇಂತು ಭಸಿತ ರುದ್ರಾಕ್ಷ ಪಂಚಾಕ್ಷರಮಂತ್ರವಿಧಾನ ಸಿದ್ಧನಾದ ಶುದ್ಧಶೈವಂಗೆ ಶಿವಾರ್ಚನವೇ ಕರ್ತವ್ಯವಹುದು. ಅಲ್ಲಿ ಮೂಲಾಭಿಷೇಚನದಿಂ ತರು ಶಾಖೋಪಶಾಖಾದಿಕವೆಲ್ಲ ಪಲ್ಲವಿಸುವಂತೆ, ಪ್ರಾಣೋಪಹಾರದಿಂ ಸಕಲೇಂದ್ರಿಯ ಸಮೂಹವೆಲ್ಲಂ ಪರಿಪೋಷಿಸುವಂತೆ, ಶಿವಾರ್ಚನವೊಂದರಿಂದ ಅಖಿಳ ದೇವತಾ ಸಂತುಷ್ಟಿಯಹುದಾಗಿ, ಚಂದ್ರಸೂರ್ಯಮಂಡಲ ವಹ್ನಿ ಗಂಗಾ, ಸ್ಥಂಡಿಲ ಕಲಶ

ಪುಸ್ತಕ ಸಾಲಗ್ರಾಮಾದಿ ಪೂಜಾಸ್ಥಾನಂಗಳೊಳಗೆ ಲಿಂಗದ ಅದಿಷ್ಠಾನವೇ ಮಹಾ ವಿಶೇಷವೆಂದು, ೨೪೦

ಶಿವಲಿಂಗ ಭೇದ :

ಶಿಲಾಮಯಲಿಂಗವನೆ ಬ್ರಹ್ಮನು, ಇಂದ್ರನೀಲಮಯಲಿಂಗವನೆ ವಿಷ್ಣುವು, ರತ್ನಮಯಲಿಂಗವನೆ ಇಂದ್ರನು, ಸುವರ್ಣಮಯಲಿಂಗವನೆ ಕುಬೇರನು, ರಜತಮಯಲಿಂಗವನೆ ವಿಶ್ವದೇವರ್ಕಳು, ಪಿತ್ತಳಮಯಲಿಂಗವನೆ ವಾಯು, ಕಾಂಸಮಯ ನಿಂಗವನೆ ವಸುಗಳು, ಮೃಣ್ಮಯಲಿಂಗವನೆ ಅಶ್ವಿನಿ ದೇವರ್ಕಳು, ಸ್ಫಟಿಕಮಯಲಿಂಗವನೆ ವರುಣನು, ಅನ್ನಚಯಲಿಂಗವನೆ ಅಗ್ನಿಯು, ತಾಮ್ರಮಯಲಿಂಗವನೆ ಸೂರ್ಯನು, ಮುಕ್ತಾ ಫಲಲಿಂಗವನೆ ಚಂದ್ರನು, ಬಹುವರ್ಣದಲಿಂಗವನೆ ನಕ್ಷತ್ರಂಗಳು, ಮಣಿಮಯಲಿಂಗವನೆ ಬುಧನು, ಕಬ್ಬುನಲಿಂಗವನೆ ಶುಕ್ರನು, ವಿದ್ರುಮ ಲಿಂಗವನೆ ಮಂಗಳನು, ಮಾಣಿಕ್ಯಲಿಂಗವನೆ ಬೃಹಸ್ಪತಿಯು, ತಾಮ್ರದ ಲಿಂಗವನೆ ಶನಿಯು, ಕುಸುಮದಲಿಂಗವನೆ ಸಪ್ತಋಷಿಗಳು, ನೀಲದಲಿಂಗವನೆ ಧ್ರುವನು, ಸ್ಥಾಣುನಾಮಲಿಂಗವನೆ ಮಾರ್ಕಂಡೇಯನು, ದರ್ಭಮಯಲಿಂಗವನೆ ವಶಿಷ್ಠನು, ಸದಾಶಿವನಾಮಲಿಂಗವನೆ ಸನತ್ಕುಮಾರಾದಿ ಯೋಗಿಗಳು, ಪ್ರವಾಳಮಯಲಿಂಗವನೆ ನಾಗರ್ಕಳು. ಅಯೋಮಯ ಲಿಂಗವನೆ ರಾಕ್ಷಸರು, ವಜ್ರಮಯಲಿಂಗವನೆ ಮಾತೃಗಳು, ಪ್ರಸೂನಚಯಲಿಂಗವನೆ ಮನ್ಮಥನು, ನಾನಾಕಾರದಲಿಂಗವನೆ ಲಕ್ಷ್ಮಿ ಸರಸ್ವತಿ ಶಚಿ ಮಾತೃಕಾದಿ ಮಹಾಶಕ್ತಿ ದೇವತೆಗಳು ಇಂತು ಬೇರೆ ಬೇರೆ ಶಿವಲಿಂಗವನೆ ಪೂಜಿಸಿ ತಮ್ಮತಮ್ಮ ಸಂಪದಗಳಲ್ಲಿ ಸುಖಮಿರ್ಪರು. ಅದೆಂತೆಂದೊಡೆ :-

ಕರ್ಮಟ ಮನುಷ್ಯರೊಳ್ ಅವರಿವರೆನ್ನದೆ ಎಲ್ಲರು, ಸ್ವಯಂಭುಲಿಂಗ, ಬಾಣಲಿಂಗ, ಚಲಲಿಂಗ, ಸಂಕೀರ್ಣಲಿಂಗ ಪ್ರಾಣಲಿಂಗವೆಂಬ ಪಂಚವಿಧ ಲಿಂಗಂಗಳಲ್ಲಿ ತಮ್ಮ ತಮ್ಮ ಶಕ್ತ್ಯಾನುಸಾರವಾದ ಅರ್ಚನಾ ತತ್ಪರರಾಗವೇಳ್ಕುಂ, ಎಂಬುದನಂಗೀಕರಿಸಿ, ೨೪೧

ಪಂಚಶುದ್ಧಿಗಳು :

ಮತ್ತಂ ಆ ಶಿವಪೂಜಾವಿಧಿಗೆ ದೇಶ ಕಾಲ ಸ್ಥಾನ ದ್ರವ್ಯಾದ್ರವ್ಯ ಪ್ರಯೋಜನಾದಿಗಳು; ತಾಂತ್ರಿಕ ವೈದಿಕವೆಂಬೆರಡು ಪೂಜಾಭೇದಿಗಳಂ; ಅಂತಃಶೌಚ ಬಾಹ್ಯಶೌಚವೆಂಬೆರಡು ಶೌಚಭೇದಂಗಳಂ; ಶೋಷಣ ದಹನ ಪ್ಲಾವನಕ್ರಿಯೆಗಳಂ; ಆತ್ಮಶುದ್ಧಿ ಸ್ಥಾನಶುದ್ಧಿ ದ್ರವ್ಯಶುದ್ಧಿ ಆಂಗಶುದ್ಧಿ ಮಂತ್ರಶುದ್ಧಿಯೆಂಬ ಪಂಚಶುದ್ಧಿಗಳಂ; ವಿಸ್ತರಿಸೂದು. ಅವರಲ್ಲಿ,

೧. ಶೌಚಾಚಮನ, ಸ್ನಾನ, ಭಸ್ಮರುದ್ರಾಕ್ಷಧಾರಣ, ಕವಚ ಮಂತ್ರ, ಕಲಾನ್ಯಾಸ ಧ್ಯಾನಾದಿ ರಚನಂಗೆಯ್ವುದೇ ಆತ್ಮಶುದ್ಧಿಯೆನಿಸೂದು

೨. ಸಮ್ಮಾರ್ಜನ ಅನುಲೇಪನ ವರ್ಣಕ ಗಂಧ ಪುಷ್ಪ ಧೂಪ ದೀಪಾದಿ ನಿಮಲ ಉಪಕರಣಗಳಿಂ ಚೌಕಮನ್ ಅಲಂಕರಿಪುದೇ ಸ್ಥಾನಶುದ್ಧಿ ಸನಿಸೂದು.

೩. ಜಲ ಗಂಧಾಕ್ಷತ ಪುಷ್ಪಾದಿಗಳಂ ನಿರೀಕ್ಷಿಸಿ ಭಸ್ಮ ಮಂತ್ರ ವಾರಿಗಳಿಂ ಸಂಪ್ರೋಕ್ಷಣಂಗೆಯ್ವುದೇ ದ್ರವ್ಯಶುದ್ಧಿ ಎನಿಸೂದು.

೪. ಅನಾಮಿಕೆ ಮಧ್ಯಮಗಳ ಮಧ್ಯದಲ್ಲಿ ನವಿನಕುಸುಮವಿಡಿದು ಅಂಗುಷ್ಟ ತರ್ಜನಿಗಳಿಂ ಮೊದಲು ಆ ನಿರ್ಮಾಲ್ಯಮಂ ತ್ಯಜಿಸಿ ಅಂಗಪೀಠಮಂ ವಾರಿಯಂ ಪ್ರಕ್ಷಾಲನಂಗೆಯ್ವುದೇ ಅಂಗಶುದ್ಧಿ ಎನಿಸೂದು.

೫. ಸಕಲ ಪೂಜಾರ್ಥಮಾಗಿ "ಓಂ ನಮಃ ಶಿವಾಯ ಸ್ವಾಹಾ" ಎಂದು ಇಚ್ಛರಿಪುದೇ ಮಂತ್ರಶುದ್ಧಿ ಸನಿಸೂದು. ಇಂತೆಂದು ಒಡಂಬಟ್ಟು ೨೪೨

ಮುದ್ರಾವಿವೇಕ :

ಬಳಿಕ ಅಸ್ತ್ರಮುದ್ರೆ, ಚಕ್ರಮುದ್ರೆ, ಮಹಾಮುದ್ರೆ, ಶೋಧನೀಮುದ್ರೆ ಪಂಚಮುಖಿ ಮ್ಮುದ್ರೆ, ಸುರಭಿಮುದ್ರೆ, ದ್ರವ್ಯಮುದ್ರೆ, ಮುಕುಳಿತಮುದ್ರೆ, ಪದ್ಮಮುದ್ರೆ, ಶತಕರ್ಣಮುದ್ರೆ, ಶಕ್ತಿಮುದ್ರೆ, ಬೀಜಮುದ್ರೆ, ಶಾಂತಿಮುದ್ರೆ, ಆಹ್ವಾನಮುದ್ರೆ, ಮನೋರಮಮುದ್ರೆ, ಧ್ವಜಮುದ್ರೆ, ಆಂಗಮುದ್ರೆ, ಗಾಯಿತ್ರಿಮುದ್ರೆ, ಕಾಲಕಂಠಮುದ್ರೆ, ಶೂಲಮುದ್ರೆ, ನಮಸ್ಕಾರಮುದ್ರೆ, ಯೋನಿಮುದ್ರೆ, ಉಚ್ಚಾಟನಮುದ್ರೆ, ಆಚ್ಛಾದನಮುದ್ರೆ, ಸಂಹಾರಮುದ್ರೆ ಎಂಬ ಸಕಲ ಮುದ್ರಾ ಲಕ್ಷಣವನರಿದು ಆಯಾ ಕ್ರಿಯೆಗಳಲ್ಲಿ ಪ್ರಯೋಗಿಸಿ, ೨೪೩

ಶಿವಪೂಜಾಯೋಗ ಪೀಠ :

ಬಳಿಕ, ಕೂರ್ಮ ಅನಂತ ಸಿಂಹ ಪದ್ಮ ವಿಮಲ ಯೋಗಾದಿ ಪೀಠಂಗಳಲ್ಲಿ ಮುಖ್ಯಮಾದ, ಸಿಂಹಾಸನಕ್ಕೆ ಶ್ವೇತ ರಕ್ತ ಪೀತ ಶ್ಯಾಮಲವರ್ಣದ ಸಿಂಹಾಕಾರಮಾದ, ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯವೆಂಬ ನಾಲ್ಕೇ ಕ್ರಮದಿಂದ ಆಗ್ನೇಯಾದಿ ವಿದಿಕ್ಕಿನ ಪಾದ ಚತುಷ್ಟಯಂಗಳುಂ ; ರಾಜಾವರ್ತಪ್ರಭೆಯ ರೂಪಮಾದ ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯವೆಂಬ ನಾಲ್ಕೇ ಕ್ರಮದಿಂದ ಪೂರ್ವಾದಿ ದಿಕ್ಕಿನ ಪಾದ ಚತುರ್ವಿಧಂಗಳುಂ; ಮೇಲೆ ಅಣಿಮಾದಿಗಳೇ ಪೂರ್ವಾದ್ಯಷ್ಟ ದಿಕ್ಕಿನ ಕೇಸರಂಗಳು; ವೈರಾಗ್ಯವೇ ಮಧ್ಯಕರ್ನಿಕೆ, ವಾಮೆ ಮೊದಲು ಮನೋನ್ಮನಿ ಕಡೆಯಾದ ನವಶಕ್ತಿಗಳೇ ಪೂರ್ವಾದಿ ಮಧ್ಯಾಂತಮಾದ ಕರ್ನಿಕಾ ಬೀಜಂಗಳು; ಬಳಿಕ ಅದರ ಮೇಲೆ ಅಗ್ನಿ ರವಿ ಶಶಿಮಂಡಲತ್ರಯಂಗಳು; ಬಳಿಕ ಅವರ ಮೇಲೆ ತಮೋ ರಜ ಸತ್ವಗುಣಂಗಳು; ಅವರ ಮೇಲೆ ಜೀವಾತ್ಮ ಅಂತರಾತ್ಮ ಪರಮಾತ್ಮರುಗಳು; ಅವರ ಮೇಲೆ ಆತ್ಮ ತತ್ತ್ವ ವಿದ್ಯಾತತ್ತ್ವ ಶಿವತತ್ತ್ವಂಗಳು : ಇಂತು ಪರಿವಿಡಿದು ಆಯತಮಾದ ಸಿಂಹಾಸನಮಂ ಪರಿಕಲ್ಪಿಸಿ, ೨೪೪

ಶಿವಾರ್ಚನ ಸಂಗ್ರಹ :

ಮತ್ತಂ ಆ ಸಿಂಹಾಸನದಲ್ಲಿ ಶಿವಲಿಂಗಕ್ಕೆ ಆಹ್ವಾನ, ಸ್ಥಾಪನ, ಸನ್ನಿಧಾನ, ಸನ್ನಿರೋಧನ, ಸಮ್ಮುಖೀಕರಣಮೆಂಬ ಕ್ರಿಯೆಗಳಂ ಮಾಡಿ, ಬಳಿಕ ಪೂಜಾಪ್ರಾರಂಭದಿಂ ತೊಡಗಿ

ಪೂಜಾ ಸಮಾಪ್ತಿ ಪರ್ಯಂತರಂ ಕ್ಷಾಲದಪಾತ್ರಜಲಮಮಂ ಮರಳಿ ಮರಳಿ ಮುಟ್ಟಿ ಮುಟ್ಟಿ ಸಕಲ ಕ್ರೀಗಳನು ಈಶ್ವರಾರ್ಪಣಂಗೆಯ್ಯಬೇಕೆಂದರಿದು ೨೪೫

ಶಿವಪೂಜಾ ಸಾಮಗ್ರಿ :

ಬಳಿಕ ನದಿ ತಟಾಕ ಕೂಪಂಗಳಲ್ಲಿ ಸ್ವಾದು ಮಿಶ್ರ ಲವಣಂಗಳಾದ ಕ್ರಮದಿಂದ ಉತ್ತಮ ಮಧ್ಯಮ ಕನಿಷ್ಟಮೆಂಬ ಪೂಜಾಯೋಗ್ಯಮಾದ ಉದಕ ಭೇದಂಗಳಂ ; ಬಳಿಕ ಬಿಳಿಸಾಸಿವೆ ಕುಸುಮ, ದೂರ್ವೆ, ಕೋಷ್ಟ, ಲಾಮಂಚ, ಕರ್ಪೂರಮೆಂಬ ಆರು ಪಾದ್ಯದ್ರವ್ಯಂಗಳಂ ; ಕುಶಾಗ್ರ ತಿಲ ಬಿಳಿಸಾಸಿವೆ ಜವೆ ನೆಲ್ಲು ಕ್ಷೀರವೆಂಬ ಆರು ಆರ್ಘ್ಯದ್ರವ್ಯಂಗಳಂ; ಮುಖಾಂಭುಜಕ್ಕೆ ಘೃತ ದಧಿ ಮಧು ಮಿಶ್ರಮಾದ ಮಧುಪರ್ಕದ್ರವ್ಯಂಗಳಂ; ಫಲ ಕಚೋರ ಕರ್ಪೂರ ಕೋಷ್ಟ ಕುಂಕುಮ ಏಲಕ್ಕಿ ಎಂಬ ಆರು ಆಚಮನೀಯ ದ್ರವ್ಯಂಗಳಂ; ಪಂಚಗವ್ಯ ಪಂಚಾಮೃತಗಳಂ ; ಗೋಧೂಮಚೂರ್ಣ ಮುದ್ಗಚೂರ್ಣ ಗಂಧಾದ್ಯುದ್ವರ್ತನ ದ್ರವ್ಯಂಗಳಂ; ಮಂದೋಷ್ಣಾದಿ ಸ್ನಾನಾವಾರಿಗಳಂ; ಗಂಧೋದಕ ಪುಷ್ಪೋದಕ ಸ್ವರ್ಣೋದಕ ರತ್ನೋದಕ ಮಂತ್ರೋದಕಂಗಳಂ; ಮಹಾಸ್ನಾನೋದಕಂಗಳಂ ; ವಿಧಿ ನಯ ಶುಭ್ರಾದಿ ಗುಣಯುಕ್ತ ಭಸಿತಂಗಳಂ; ಪಟ್ಟು ದೇವಾಂಗ ಶುಭ್ರಚಿತ್ರಾದಿ ಸುವಸ್ತ್ರಂಗಳಂ; ಸುವರ್ಣ ರಜತ ಪಟ್ಟು ಸೂತ್ರಾದಿ ಯಜ್ಞೋಪವೀತಂಗಳಂ; ಕಿರೀಟಾದ್ಯಾಭರಣಂಗಳಂ; ಚಂದನ ಅಗರು ಕಸ್ತೂರಿ, ಕರ್ಪೂರ ತಮಾಲದಳ ಕುಂಕುಮ ಲಾಮಂಚ ಕೋಷ್ಟಂಗಳೆಂಬ ಅಷ್ಟಗಂಧಂಗಳಂ; ಜವೆ ಸಾಸುವೆ, ಬಿಳಿಸಾಸುವೆ ತಿಲ, ತಂಡುಲ, ಮುಕ್ತಾಫಲಾದ್ಯಕ್ಷತೆಗಳಂ; ಶುಭ್ರ ರಕ್ತ ಕೃಷ್ಣವರ್ಣಕ್ರಮದಿಂ ನಂದ್ಯಾವರ್ತಾದಿ ಕಮಲಾದಿ ನಿಲೋತ್ಪಲಾದಿ ಸಾತ್ವಿಕ ರಾಜಸ ತಾಮಸ ಪುಷ್ಪಂಗಳಂ ; ದೂರ್ವೆ ತುಲಸಿ ಬಿಲ್ವಾದಿ ಪತ್ರ–ಜಾಲಮಂ ; ಕರಿಯಗರು, ಬಿಳಿಯಗರು, ಗುಗ್ಗುಳ, ಶ್ರೀಗಂಧ, ಅರಗು, ಬಿಲ್ವಫಲ ತುಪ್ಪ ಜೇನುತುಪ್ಪ ಸಜ್ಜರಸ ಕರ್ಪೂರಮೆಂಬ ದಶಾಂಗಧೂಪಂಗಳಂ; ತೈಲವರ್ತಿಘೃತ ಕರ್ಪೂರಮೆಂಬ ದೀಪಸಾಧನಂಗಳಂ ; ಹರಿದ್ರಾನ್ನ ಪರಮಾನ್ನ ಮುದ್ಗಾನ್ನ, ಕೃಸರಾನ್ನ, ದಧ್ಯಾನ್ನ ಗುಡಾನ್ನಮೆಂಬ ಷಡ್ವಿದಾದಿ ಅನ್ನ ನೈವೇದ್ಯಂಗಳಂ, ಪೂಗ, ಪರ್ನ ಚೂರ್ಣ ಕರ್ಪೂರಾದಿ ತಾಂಬೂಲ ದ್ರವ್ಯಂಗಳಂ ಬೇರೆ ಬೇರೆ ಸಂಪಾದಿಸಿ, ೨೪೬

ಉಪಚಾರ ಸಂಗ್ರಹ :

ಬಳಿಕ ಪರಮಪವಿತ್ರ ದ್ರವ್ಯಂಗಳಿಂಮಾಳ್ಪ ಉಪಚಾರಂಗಳೊಳಗೆ ತ್ರಿವಿಧೋಪಚಾರ ಪಂಚೋಪಚಾರ ಅಷ್ಟೋಪಚಾರ ದಶೋಪಚಾರ ಷೋಡಶೋಪಚಾರ ಚತುರ್ವಿಂಶತ್ಯುಪಚಾರ ದ್ವಾತ್ರಿಂಶದುಪಚಾರಂಗಳುಂಟು, ಅವರಲ್ಲಿ : ಆವಾಹನ ಆಸನ ಅರ್ಘ್ಯ ಪಾದ್ಯ ಆಚಮನೀಯ ಸ್ನಾನ ವಸ್ತ್ರ ಯಜ್ಞಸೂತ್ರ ಭೂಷಣ ಗಂಧ ಅಕ್ಷತೆ ಪುಷ್ಪ ಧೂಪ, ದೀಪ ನೈವೇದ್ಯ ಮುಖವಾಸನ ನೀರಾಜನ ದರ್ಪಣ ಫಲಾರ್ಪಣ ತಾಂಬೂಲ ಪ್ರದಕ್ಷಿಣ ನಮಸ್ಕಾರ ಸ್ತೋತ್ರ ಪುರಾಣಪಠಣ ಛತ್ರ ಚಾಮರ ವ್ಯಜನ ಶಯ್ಯಾ ಸಂಗೀತ

ನೃತ್ಯ ವಾದ್ಯ ಆತ್ಮಾರೋಪಣಮೆಂಬ ದ್ವಾತ್ರಿಂಶದುಪಚಾರಂಗಳಂ ಸಮಂತ್ರಕಮಾಗಿ ಮಾಡಿ, ಬಳಿಕ ಈ ಸಮಸ್ತ ಪೂಜಾ ದ್ರವ್ಯಂಗಳಿಲ್ಲದಿರೆ, ಜಲಮಾತ್ರ ಪುಷ್ಪಮಾತ್ರದಿಂ ಅರ್ಚಿಸಲು ಆ ಸಕಲ ಸಾಂಗಿಕಮಾದರ್ಚನೆಗೆ ಸಮಾನವಹುದಾಗಿ, ಪೂಜಕಂಗೆ ಶ್ರದ್ಧಾಭಕ್ತಿಯೇ ಮುಖ್ಯವಾಗಿಹುದು. ಆ ಭಕ್ತಿಯೇ ಈಶ್ವರವಿಷಯಮಾದ ಶ್ರವಣ ಕೀರ್ತನ ಸ್ಮರಣ ಪಾದಸೇವೆ ಪೂಜೆ ವಂದನೆ ದಾಸ್ಯ ಸಖ್ಯ ಆತ್ಮಾರ್ಪಣವೆಂಯ ನವವಿಧಮಾಗಿರ್ಪುದು ಎಂದರಿದು, ಇಂತು ಪೀಠಸ್ಥ ಶಿವಲಿಂಗದ ಬಹಿರಂಗದ ಪೂಜೆಯಂ ವಿಸ್ತರಿಸಿ, ೨೪೩

ಅಂತರಂಗ ಶಿವಾರ್ಚನೆ :

ಬಳಿಕ ಇಹಲೋಕಫಲವ ಇಚ್ಛಿಸುವಾತಂ ಆದೊಡಂ, ಪರಲೋಕ ಫಲಮಂ ಕಾಮಿಸುವಾತನಾದೊಡಂ, ಸಕಲಜನಕ್ಕೆ ಹಿತಮಂ ಬಯಸುವಾತನಾದೊಡಂ, ಬಾಹ್ಯದ್ರವ್ಯಂಗಳಿಂದ ಇಂತು ಶಿವಲಿಂಗ ಪೂಜೆಯಂ ಮಾಡಲ್ವೇಳ್ಕುಂ ಎಂದು ನಿಶ್ಚೈಸಿ, ಬಳಿಕ ನಿಷ್ಕಾಮನಾದ ಮೋಕ್ಷಾದಿಕಾರಿಗೆ ಅಭ್ಯಂತರದಲ್ಲಿ ಮುಖ್ಯವಾಗಿ ಜ್ಞಾನಮಯವಾದ ಪೂಜೆಯೇ ಕರ್ತವ್ಯಂ, ಪೂಜೋಪಚಾರಂಗಳಲ್ಲಿ ಉಪಚಾರಮಂ ಉಪಚರ್ಯಮಾದ ದೇವತೆಯ ಗುಣಗಳನಾರೋಪಿಸಿ ಮಾಡಲ್ತಕ್ಕುದು ಎಂತೆಂದೊಡೆ, ೨೪೪

ಅಂತರಂಗ ಶಿವಯೋಗ ಸಂಗ್ರಹ :

ಮೊದಲು ಅಂತರಂಗದಲ್ಲಿ ಶಿವಧರ್ಮವೇ ಕಂದ, ಸುಜ್ಞಾನವೇ ನಾಳ, ಅಷ್ಟಮಹದೈಶ್ವರ್ಯವೇ ದಳ, ರುದ್ರೇಶ್ವಾರಾದಿಕವೇ ಕೇಸರ, ವೈರಾಗ್ಯವೇ ಕರ್ನಿಕೆಗಳಾಗಿ, ಚಂದ್ರಪ್ರಭಾಮಯವೆನಿಸಿ ಮೆರೆವ ಹೃದಯ ಕಮಲದ ಸೋಮಸೂರ್ಯಾಗ್ನಿ ಮಂಡಲತ್ರಯ ಮಧ್ಯದಲ್ಲಿ, ಸತ್ ಎಂಬ ದಿವ್ಯಮೂರ್ತಿಯಂ, ಚತ್ ಎಂಬ ಕಾಂತಿಯಿಂ ಆನಂದವೆಂಯ ಲಾವಣ್ಯದಿಂ ತತ್ತ್ವಪರಿಕಲ್ಪಿತಮಾದ ಆಭರಣ ಆಯುಧಗಳಿಂದಲೂ ಅಲಂಕೃತಮಾಗಿ ಸ್ಫಟಿಕ ಘಟದೊಳಗಣ ದೀಪದಂತೆ ಹೊರಗೆ ಬೆಳಗುತ್ತಿರ್ದ ಈಶ್ವರನಂ ಪರಿಭಾವಿಸಿ, ೨೪೫

ಬಳಿಕ ಸರ್ವಾಧಾರನ್ ಈಶ್ವರನೆಂಬ ಬುದ್ಧಿಯೇ ಆಸನ, ಪರಮಾತ್ಮನು ಪರಿಪೂರ್ಣನೆಂಬ ತಿಳಿವೆ ಪಾದ್ಯ, ಸುಖಾಂಬುಧಿ ಶಂಭುಲಿಂಗಮೆಂಬ ಸಂಧಾನವೆ ಅರ್ಘ್ಯ, ಪರಮ ಪವಿತ್ರ ಸ್ವರೂಪನು ಅಭವನೆಂಬ ಅರಿವೆ ಅಚಮನೀಯ, ನಿತ್ಯ ನಿರ್ಮಲನ್ ಈಶ್ವರನೆಂಬ ಉಪಲಬ್ಧಯೆ ಸ್ನಾನ, ಜಗವೆಲ್ಲವನು ಅತಿಕ್ರಮಿಸಿರ್ದ ಶುದ್ಧವಿದ್ಯೆಯೇ ವಸ್ತ್ರ, ತ್ರಿಗುಣಾಗಮಾತೀತಮಾದ ಜ್ಞಾನ ಭಾವನೆಯೆ ಯಜ್ಞಸೂತ್ರ, ಚೈತನ್ಯವೇ ಜಗದಲಂಕಾರಮೆಂಬ ಪ್ರಭೆಯೇ ಆಭರಣ, ಶುದ್ಧ ಚಿಚ್ಛಕ್ತಿಯೆ ಅನುಲೇಪನ, ಕಾರುಣ್ಯವೇ ಅಕ್ಷತೆ, ಪ್ರಣವಾತ್ಮಕ ಸತ್ಯವಚನವೇ ಪುಷ್ಪ, ವಿಷಯ ವಾಸನಾವಿಲಯವೇ ಧೂಪ, ಜಗದ್ವರ್ತಿವಿಡಿದು ಉಜ್ವಲಿಪ ಪರಂಜ್ಯೋತಿಯೇ ದೀಪ, ಜಗವೆಲ್ಲಮಂ ಕಬಳೀಕರಿಸಿಕೊಂಡಿರ್ದ ಆತ್ಮನೇ ನಿತ್ಯತೃಪ್ತನೆಂಬ ಸಂವಿತ್ತೇ ನೈವೇದ್ಯ, ತ್ರಿಗುಣಂಗಳನೊಳಕೊಂಡುನಿಂದ ಜ್ಞಪ್ತಿಯೇ ತಾಂಬೂಲ, ಸೋಹಂ ಭಾವದ ವೃತ್ತಿಯೇ

ಪ್ರದಕ್ಷಿಣ, ಸಮಸ್ತ ತತ್ವಂಗಳನು ಅತಿಕ್ರಮಿಸಿ ನಿಂದ ನಿಜವೇ ನಮಸ್ಕಾರ, ಶಿವೈಕ್ಯ ಸ್ಥಿತಿಯೆ ವಿಸರ್ಜನವೆಂಬ ಈ ಉಪಚಾರಂಗಳಿಂದ ಅಂತಃಪೂಜೆಯಂ ರಚಿಸಿ, ೨೫೦

ಬಳಿಕ ಇಂತು ಹೃತ್ಕಮಲ ಕರ್ನಿಕಾಮಧ್ಯದಲ್ಲಿ ಗುರುವಿತ್ತ ಇಷ್ಟಲಿಂಗದಲ್ಲಿ ಸಿಂಹಾಸನದಲ್ಲಿ ಮಾಡುವ ಆತ್ಮಾರ್ಥಕವಾದ ಪೂಜಾಭೇದಂಗಳಂ, ಗ್ರಾಮ ನದಿತೀರಾದಿ ಕ್ಷೇತ್ರಂಗಳಲ್ಲಿ, ದೇವ ದಾನವಾದಿಗಳಿಂ ಪ್ರತಿಷ್ಠಿತಮಾದ ಲಿಂಗಂಗಳಲ್ಲಿ ಮಾಳ್ಪ ಪರಾರ್ಥ ಪೂಜೆಗಳಂ ಬಿಡಸದೆ ಆಚರಿಸುತ್ತಂ ೨೫೧

ಪರಾರ್ಥಪೂಜಾದಿ ಪ್ರಾಯಶ್ಚಿತ್ತಾದಿಗಳು :

ಪರಮಾರ್ಥಪೂಜೆಯೊಳು ಈಶ್ವರಾವರಣಮಾದ ವೃಷಭ ಭಾಸ್ಕರ ವೀರಭದ್ರ ಮಾತೃಕೆ ಸ್ಕಂದ ಕ್ಷೇತ್ರಪಾಲ ಬ್ರಹ್ಮ ವಿಷ್ಣು ರುದ್ರರೆಂಬ ದೇವತೆಗಳನು ಅವರವರ ಸ್ಥಾನಕ್ರಮವರಿದು ಆರಾಧಿಸುತ್ತೆ, ಬೇರೆ ಬೇರೆ ಸ್ಥಾಪಿತಂಗಳಾದ ವಿಷ್ಣ್ವಾದಿ ದೇವತಾ ಭಜನೆಗಳಂ ತ್ಯಜಿಸಿ, ತನ್ನಿಷ್ಟಲಿಂಗವು ಚೋರಾದಿಗಳಿಂ ಪೋಗಿ ಬಾರದಿರ್ದೊಡೆ ಒಂದು ಲಕ್ಷ ಅಘೋರಮಂತ್ರಜಪದಿಂ ಶುದ್ಧಾತ್ಮನಾಗಿ, ಮೇಲೆ ಆಚಾರ್ಯನಿಂ ವಿದ್ಯುಕ್ತಮಾಗಿ, ಮತ್ತೆ ವ್ರತ ನಿಯಮಾದಿ ಲೋಪಮಾಗಲು ಅಷ್ಟೋತ್ತರ ಶತ ಗಾಯತ್ರಿ ಜಪದಿಂ ಪರಿಶುದ್ಧಿವಡೆದು, ಬಳಿಕ ಪರಮ ಪವಿತ್ರಮಾದ ಶಿವಪಾದೋದಕ ಸ್ವೀಕಾರ, ಶಿವಪ್ರಸಾದಾನ್ನಸೇವನೆ ಶಿವಪ್ರಸಾದಾಂಬುಪಾನ, ಶಿವನಿರ್ಮಾಲ್ಯಗಳ ಕುಸುಮಧಾರಣಂಗಳು, ಸದ್ಬ್ರಾಹ್ಮಣರು ಮೊದಲಾದ ವಿಶಿಷ್ಟರ್ಗೆ ಕರ್ತವ್ಯವಹುದು. ಮಿಕ್ಕ ಪಾಪಾತ್ಮರ್ಗೆ ಪಾಷಾಂಡಿಗಳಿಗೆ ಶಾಪದಗ್ಧರಿಗೆ ಶಿವಸಂಸ್ಕಾರ ಹೀನರ್ಗೆ ನಾಸ್ತಿಕರ್ಗೆ, ವೇದಬಾಹ್ಯರ್ಗೆ ಯೋಗ್ಯವಲ್ಲೆಂದು ಪರಿಭಾವಿಸುತ್ತ, ಇಂತು ಸಕಲ ಸತ್ಕ್ರಿಯೆಗಳಿಂ ನಿರ್ಮಲಾಂತಃ ಕರಣನಾಗಿ ಇರ್ಪಾತನೇ ಶುದ್ಧ ಶೈವನಪ್ಪಂ. ೨೫೨

ವೀರಶೈವ ಲಕ್ಷಣ :

ಮತ್ತಂ ಆ ಪರಮೇಶ್ವರ ನಿರ್ಮಿತಮಾದ ಜಗತ್ತಿನಲ್ಲಿ ಚರಮಶರೀರಿ ಎನಿಸಿಕೊಂಡು ಸಮಸ್ತ ಶೈವರೊಳತಿ ವಿಶಿಷ್ಟನಾಗಿ; ಇತರ ಶೈವರಂತೆ ಕ್ರಿಯಾಬಾಹುಳ್ಯದಿಂ ಅಲ್ಪಫಲಮಂ ಪಡೆಯದೆ, ಅಲ್ಪಕ್ರಿಯೆಯಿಂದ ಅನಂತಫಲಮಂ ಪಡೆವಾತನಾಗಿ; ಶಿವದೀಕ್ಷೆಯಿಂ ಮೇಲೆ ಸ್ನಾನ, ಭೋಜನ, ನಿದ್ರೆ, ಜಾಗರಣ, ಮಲಮೂತ್ರವಿಸರ್ಜನಾದಿ ಕಾಲಂಗಳಲ್ಲಿ ಅಶುಚಿಭಾವನೆದೋರದೆ, ಸದಾ ಲಿಂಗಾಂಗಿ ಸಂಬಂಧಿಯಾಗಿ, ಲಿಂಗಭೋಗೋಪಭೋಗಿಯಾಗಿ; ತನ್ನಿಷ್ಟಲಿಂಗದಲ್ಲಿ ಆಹ್ವಾನ ವಿಸರ್ಜನ ಕ್ರಿಯೆಗಳಂ ಮಾಡದಾತನಾಗಿ; ತ್ರಿಕಾಲ ಲಿಂಗಾರ್ಚನಾಸಕ್ತನಾಗಿ; ಲಿಂಗಲೋಪ, ವ್ರತಲೋಪಂಗಳಲ್ಲಿ ಪ್ರಾಣತ್ಯಾಗವಲ್ಲದೆ ಬೇರೊಂದು ಪ್ರಾಯಶ್ಚಿತ್ತವಿಲ್ಲದಾತನಾಗಿ; ಗುರುನಿಂದೆ, ಶಿವನಿಂದೆ, ಜಂಗಮನಿಂದೆ ಪ್ರಸಾದ ಪಾದೋದಕ ಭಸ್ಮಧಾರಣನಿಂದೆ, ಶಿವಾಗಮ ಶಿವಕ್ಷೇತ್ರ ಶಿವಾಚಾರನಿಂದೆಗಳಂ ಸೈರಿಸಿದಾತನಾಗಿ; ವಿಷ್ಣ್ವಾದಿದೇವತೆಗಳಂ ಲೆಕ್ಕಿಸದಾತನಾಗಿ; ಬಾಹ್ಯದಲ್ಲಿ ಲಿಂಗಲಾಂಛನವಿಲ್ಲದೆ ಭವಿಗಳೊಡನೆ ಏಕಾಸನ, ಶಯನ, ಯಾನ, ಸಂಪರ್ಕ ಸಹಭೋಜನಾದಿಗಳಿಲ್ಲದಾತನಾಗಿ; ಅನೃತ ಅಸ್ಥಿರವಾಕ್ಯ, ವಂಚನೆ, ಪಙ್ತಿಭೇದ, ಉದಾಸೀನ,

ನಿರ್ದಯವೆಂಬ ಆಂತರಂಗ ಭವಿಗಳಿಲ್ಲದಾತನಾಗಿ; ಶಿವಮಾಹೇಶ್ವರರಂ ಕಾಣುತಲೆ ಏಳುವುದು, ಇದಿರಾಗಿ ನಡೆವುದು, ಅವರ್ಗೊಡಿ ತಿರುಗುವುದು, ಪ್ರಿಯವಚನಮಂ ನುಡಿವುದು, ಗದ್ದುಗೆಯನಿಕ್ಕುವುದು, ಅನ್ನಪಾನಾದಿಗಳಂ ಸಮರ್ಪಿಸೂದು ಎಂಬ ಮುಕ್ತಸೋಪಾನಸಪ್ತಕ್ರಮಮುಕ್ತನಾಗಿ; ರಜಸೂತಕವೆಂಬ ಪಂಚಸೂತಕವನುಳಿದಾತನಾಗಿ; ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರವೆಂಬ ಪಂಚಾಚಾರ ನಿಷ್ಠನಾಗಿ; ದಾಸತ್ವ ವೀರದಾಸತ್ವ, ಷಡ್ವಿಧ, ಸಜ್ಜನಯುಕ್ತನಾಗಿ; ದೇಶ, ಕಾಲ, ಕಲ್ಪಿತಾದಿ ಲೌಕಿಕಾಚಾರಂಗಳಂ ಮೀರಿ ಸ್ವತಂತ್ರಶೀಲನಾಗಿ ; ಶಿವಾತ್ಮರ್ಗೆ ಭೇದ ಭ್ರಾಂತಿದೋರದಾತನಾಗಿ; ಉಪನಿಷದ್ವಾಕ್ಯಜನಿತ ವಿದ್ಯೆಯಲ್ಲಿ ರಮಿಸುವಾ ಶೈವನಪ್ಪುದರಿಂ ತತ್ಸೌಂಜ್ಞೆಯುಳ್ಳಾತನಾತಿ; ಜಗತ್ಪೂಜ್ಯನಾಗಿರ್ಪನೇ ವೀರಶೈವನಪ್ಪಂ. ೨೫೩

ವೀರಶೈವ ಭೇದಂಗಳು :

ಬಳಿಕ ಆ ವೀರಶೈವನೆ ಕ್ರಿಯಾಭೇದದಿಂ ಸಾಮಾನ್ಯ ವೀರಶೈವನೆಂದು, ವಿಶೇಷ ವೀರಶೈವನೆಂದು, ನಿರಾಭಾರಿ ವೀರಶೈವನೆಂದು, ತ್ರಿವಿಧನಾಗಿರ್ಪನು. ಆವರಲ್ಲಿ ಶ್ರೀಗುರುವಿನ ಹಸ್ತಮಸ್ತಕ ಸಮಂಯೋಗದಿಂ, ವಿಭೂತಿಯುಪಟ್ಟದಿಂ, ಶಿವಮಂತ್ರೋಪದೇಶದಿಂ, ಲಿಂಗಾಂಗಸಂಗಿಯಾಗಿ, ಹಸ್ತ, ಮಸ್ತಕ ಕಂಠ ಕಕ್ಷ ವಕ್ಷಸ್ಥಲಾದಿಗಳಲ್ಲಿ ಶಿವಲಿಂಗಧಾರ್ರಕನಾಗಿ, ಗುರು ಲಿಂಗ ಭಸಿತಂಗಳಲ್ಲಿ ಭಕ್ತಿಯುಕ್ತನಾಗಿರ್ಪಾತನೇ ಸಾಮಾನ್ಯವೀರಶೈವನಪ್ಪಂ. ೨೫೪

ಕ್ರಿಯಾಪಾದ – ದೀಕ್ಷಾಕ್ರಮ :

ಆನಂತರದಲ್ಲಿ, ಶಾಂತಿದಾಂತ್ಯಾದಿ ಸಾಧನ ಸಂಪನ್ನನಾಗಿ ಶ್ರೀಗುರುವಿನಿಂ ಶಾಸನೀಯನಪ್ಪುದರಿಂ ಶಿಷ್ಯನಾದಾತನು ಶುಭಕಾಲ ದೇಶಾದಿಗಳಂ ಪರೀಕ್ಷಿಸಿ, ಬಳಿಕ ಆಚಾರ್ಯಸಂಪ್ರದಾಯಸಿದ್ಧನಾದ ಸಕಲ ಸದ್ಗುಣ ಸಹಿತನಾದ ಶ್ರೀಗುರುವನೆಯ್ದಿ, ಮತ್ತಂ ಆ ಗುರುವಿನನುಮತದಿಂ ಶಿವಪೂಜಾಪರಾಯಣರಾದ ಕೀರ್ತಿಮಯರಾದ ನಾಲ್ವರು ಋತ್ವಿಕ್ಕುಗಳಂ ಸ್ನಾನ ಧವಲಾಂಬರಾಭರಣ, ಗಂಧ ಪುಷ್ಪಾದಿಗಳಿಂ ಅಲಂಕರಿಸಿ, ಬಳಿಕ ಆ ಗುರುವಿನಾಜ್ಞೆಯಿಂ ತಾನು ಆ ರಾತ್ರಿಯಲ್ಲಿ ಕ್ಷೀರಾಹಾರಿಯಾಗಿರ್ದು, ಮೇಲೆ ಪ್ರಭಾತ ಸಮಯದಲ್ಲಿ ದಂತಧಾವಲ್ಯಂಗೆಯ್ದು, ಮಂಗಳ ಸ್ನಾನವಂ ಮಾಡಿ, ಧವಲಾಂಬರವನುಟ್ಟು, ಪೊದೆದು, ಭಸಿತೋದ್ಧೂಳನಂ ರಚಿಸಿ, ತ್ರಿಪುಂಡ್ರಧಾರಣಮಂ ವಿಸ್ತರಿಸಿ, ರುದ್ರಾಕ್ಷ ಮಾಲೆಗಳಂ ಧರಿಸಿ, ಸುವರ್ಣಾಭರಣಾದಿಗಳಿಂ ಸಿಂಗರಂ ಬಡೆದು, ಬಳಿಕ ಆಚಾರ್ಯನ ಸಮೀಪಕ್ಕೆ ಬಂದು, ಭಯ ಭಕ್ತಿಯಿಂ ಅಷ್ಟಮಂತ್ರಪೂರ್ವದಿಂ ವಿನಯ ವಿನಮಿತನಾತಿ, ಸುವರ್ಣ ಪುಷ್ಪಾದಿಗಳಿಂ ವಿತ್ತಾನುಸಾರಮಾಗಿ, ಗುರುಪೂಜನಂ ಗೆಯ್ದು, ಮರಳಿ ಗಂಧಪುಷ್ಪಾದಿಗಳಿಂ ಋತ್ವಿಕ್ಕುಗಳಂ ಭಜಿಸಿ, ಮೇಲೆ ಶ್ರೀಗುರು ಮುಖ ಸಕಲ ಮಾಹೇಶ್ವರರಂ ಬಲವಂದು, ವಿಭೂತಿ ವೀಳಯಂಗಳಂ ಸಮರ್ಪಿಸೂದು. ೨೫೫

ಬಳಿಕ ಖನನ ದಹನ ಶೋಧನ ಸಂಪ್ರೋಕ್ಷಣ ಮರ್ದನ ಲೇಪವವೆಂಬ ಷಟ್ಕರ್ಮಗಳಿಂ; ಸಾರಣೆ ಕಾರಣೆ ತಳಿರುತೋರಣ ಕುಸುಮಸರವಿಸರ ಪಳವಿಗೆ

ಧೂಪಧೂಮಾದಿಗಳಿಂ ಪರಿಶೋಭೆವಡೆದು, ಮನೋಹರಮಾದ ದೀಕ್ಷಾಮಂಟಪದಲ್ಲಿ ಗೋಚರ್ಮಮಾತ್ರದ ಭೂಮಿಯಂ ಚೌಕಮಾಗಿ, ಗೋರೋಜನ, ಗೋಮಯ, ಗೋಮೂತ್ರ, ಗೋಘೃತ, ಗೋದಧಿ ಗೋಕ್ಷೀರವೇ ಷಟ್ ಸಮಾರ್ಜನಂಗೆಯ್ದು ಬಳಿಕ ಚೌಕಮಧ್ಯದಲ್ಲಿ, ಪ್ರವಾಳ, ಮೌಕ್ತಿಕ, ಶುಭ್ರಪಾಷಾಣ ಸುವರ್ಣ, ಶ್ವೇತಾಭ್ರಕ, ತಂಡುಲಾದಿಗಳ ಚೂರ್ಣಂಗಳಿಂದ ಅಷ್ಟಕಮಲಮಂ ರಚಿಸಿ, ಮತ್ತೆ, ಅದನಾವರಿಸಿ ಶಂಖ ಚಕ್ರ ಶೂಲಿ ಡಮರುಗ ಪರಶು ಗಂಟೆ ಛತ್ರ ಚಾಮರ ವೃಷಭಚರಣಾದಿ ವಿಚಿತ್ರ ವರ್ಣಕಮಂ ತುಂಬುತ್ತ, ಆದರ ಮೇಲೆ, ಎಳ್ಳು ಜೀರಿಗೆ ಗೋದುವೆ ಅಕ್ಕಿ ಉದ್ದುಗಳೆಂಬ ಪಂಚಧಾನ್ಯವನಾದರೂ, ಕೇವಲ ತಂಡುಲವನಾದರೂ ಮೂವತ್ತೆರಡು ಅಂಗುಲ ಪ್ರಯಾಣಿನ ಚತುರಸ್ರಮಾಗಿ ಹರಹುತ್ತ, ಅದರ ಮೇಲೆ ತೀರ್ಥಾಂಬುಪೂರ್ಣಮಾದ ಸುವರ್ಣಾದಿ ನವೀನ ಪಂಚಕಳಸಗಳಂ ಪೂರ್ವ ದಕ್ಷಿಣ ಪಶ್ಚಿಮ ಉತ್ತರ ಮಧ್ಯಕ್ರಮದಿಂ ಆಚಾರ್ಯನಂ ಸ್ಥಾಪಿಸುತ್ತ ಕಳಸಂಗಳಂ ಬೇರೆ ಬೇರೆ ನೂತಲ ವಸ್ತ್ರಗಳಿಂ ಸುತ್ತಿ ನವಪಂಚ ತಂತುಗಳಿಂ ಪರಿವೇಷ್ಟಿಸಿ ಸುವರ್ಣಾದಿಗಳಂ ಅವರೊಳ ಇರಿಸಿ. ೨೫೬

ಬಳಿಕ ಆಮ್ರ ಪಲ್ಲವ ದೂರ್ವಾಂಕುರ ಪೂಗಕುಸುಮ ನಾಗವಲ್ಲಿದಳಾದಿಗಳಿಂದ ಆ ಕಳಸಂಗಳಂ ಕ್ರಮದಿಂ ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ, ಈಶಾನವೆಂಬ ಪಂಚಬ್ರಹ್ಮಾತ್ಮಕಮೆಂದು ಪರಿಭಾವಿಸಿ ಮತ್ತಂ ಆ ಕಳಸಂಗಳ ಮಧ್ಯದಲ್ಲಿ ಪರಶಿವನಂ ಭಜಿಸಿ ಮೇಲೆ ಅಗ್ರಾಸನದಲ್ಲಿ, ಪೂರ್ವಾಭಿಮುಖನಾಗಿ ಪರಶಿವ ಸಂಜ್ಞಿಕನಾಗಿ ಕುಳ್ಳಿರ್ದ ಆಚಾರ್ಯನೇ ಮಧ್ಯದ ಕಳಸವನುಳಿದು, ಪೂರ್ವಾದಿ ನಾಲ್ಕು ಕಳಸಂಗಳವೆ ಕ್ರಮದುಂ, ರೇವಣಸಿದ್ಧ, ಮರುಳಸಿದ್ಧ, ರಾಮದೇವ ಪಂಡಿತಾರಾಧ್ಯರೆಂಬ ಆಚಾರ್ಯ ಸಂಪ್ರದಾಯಕರಾದ ಬೇರೆ ಬೇರೆ ಮಠ ಪೀಠಾಸನಾದಿ ಲಕ್ಷಣ ಲಕ್ಷಿತರಾದ ಆಯಾಯ ಋತ್ವಿಕ್ಕುಗಳಂ, ಅರ್ಘ್ಯ ಗಂಧ ಪುಷ್ಪಾಕ್ಷತಾದಿಗಳಿಂ ಶ್ರೀಮತ್‌ಪಂಚಾಕ್ಷರಮಂತ್ರ ಪೂರ್ವಕಮಾಗಿ ಭಜಿಸುತ್ತಾ, ಅನಂತರದಲ್ಲಿ ತನ್ನ ಶರೀರ ಅರ್ಥ ಪ್ರಾಣಾದಿಗಳಂ ಸದ್ಗುರುವಿಂಗೋಸ್ಕರ ನಿವೇದಿಸಿ ಸಾಷ್ಟಂಗ ಪ್ರಣುತನಾಗಿ ಶಿಷ್ಯನು ಶ್ರೀಗುರುವಿನ ಆಣತಿಯಿಂದ ಉತ್ತರಾಭಿಮುಖನಾಗಿ ಶ್ರೀಗುರುವಿನ ದಕ್ಷಿಣ ಭಾಗದಲ್ಲಿ ಚೌಕಸನ್ನಿಧಿಯಲ್ಲಿ ಸ್ವಸ್ತಿಕ ಮಂಡಲದ ಮೇಲೆ ಪದ್ಮಾಸೀನನಾಗಿ ಋಜುಕಾಮನಾತಿ ನಾಸಾಗ್ರ ನಿರೀಕ್ಷಣ ಲೋಚನಂಗಳನುಳ್ಳಾತನಾತಿ, ಮುಕುಳಿತಕರ ಕಮಲನಾಗಿ, ಶಿವಮಂತ್ರೋಚ್ಚಾರಣೆ ಶಿವಧ್ಯಾನಾದಿಗಳಿಂ ಸಲ್ಲಕ್ಷಣಮಾಗಿ ಕುಳ್ಳಿರ್ದ ಶಿಷ್ಯನಂ ಶೀಗುರು ತನ್ನ ಕೃಪಾವಲೋಕನದಿಂ ಈಕ್ಷಿಸಿ, ಮೇಲೆ ಸಕಲ ಮಾಹೇಶ್ವರರ ಆಶೀರ್ವಾದನಾದಂ ಪೊಣ್ಮೆ, ಮಂಗಲ ವಾದ್ಯ ಧ್ವನಿಯುಣ್ಮಲು ಒಡನೆ ಆಚಾರ್ಯಾದಿಋತ್ವಿಕ್ಕುಗಳು ತಮ್ಮ ತಮ್ಮ ಕಳಸಂಗಳಂ ಕ್ರಮದಿಂದೆತ್ತಿ, ಬಳಿಕ ಆ ಕಳಸೋದಕಂಗಳಂ ದೂರ್ವಾಕುರದಿಂ ಗುರುವರ್ಯನು ಆ ಶಿಷ್ಯನ ಶಿರಸ್ಸಿನಲ್ಲಿ ಸಂಪ್ರೋಕ್ಷಿಸಿ, ಮತ್ತಂ ಆ ಕಳಸಂಗಳನು ಅಲ್ಲಲ್ಲಿಯೇ ಸ್ಥಾಪಿಸಿ ಬಳಿಕ ಆ ಕ್ರಮದಿಂದವೆ ಶಿಷ್ಯನ ಮಸ್ತಕದ ಮೇಲೆ ತಳಿದು ಇಂತು ಮೂರು ವೇಳೆ ಅಘಮರ್ಷಣ ಸ್ನಾನಂಗೆಯ್ದು ನಂತರದೊಳು ಆಚಾರ್ಯನು ಆ ಶಿಷ್ಯನ ಲಲಾಟಾದಿ ಸ್ಥಾನಂಗಳಲ್ಲಿ ಶಿವಮಂತ್ರದಿಂದ ಅಭಿಮಂತ್ರಿತಮಾದ ಶ್ರೀಮತ್ ವಿಭೂತಿಯಂ ಧರಿಸಿ,

ವಿಧಿ ದುರ್ಲಿಪಿಗಳಂ ತೊಡೆದು ಕಾಯಶುದ್ಧಿ ಆತ್ಮಶುದ್ಧ್ಯಾದಿಗಳ ಮಾಡಿ, ಕಲಾನ್ಯಾಸ, ಮಂತ್ರನ್ಯಾಸಾದಿಗಳಂ ವಿಸ್ತರಿಸಿ, ಆಣವಾದಿ ಮಲತ್ರಯಮಂ ಕಳೆದು ಶುದ್ಧಾತ್ಮನಂ ಮಾಡಿ, ಮೇಲೆ ಶ್ರೀಗುರು ತನ್ನ ದಕ್ಷಿಣಹಸ್ತಮಂ ಗಂಧಾಕ್ಷತೆ ಪುಷ್ಪಾದಿಗಳಿಂ ಶಿವಮಂತ್ರದಿಂ ಅರ್ಚಿಸಿ, ಬಳಿಕ ಆ ತೇಜೋಮಯವಾದ ಶಿವಹಸ್ತಮಂ ಶಿಷ್ಯನ ಮಸ್ತಕದಲ್ಲಿ ಮೂಲಮಂತ್ರೋಚ್ಚಾರಣದಿಂದ ಇರಿಸುತ್ತ, ಶಿಷ್ಯನ ಮಸ್ತಕದಲ್ಲಿಯೆ ಅಧಿಷ್ಠಾತೃವಾದ ಪರಶಿವನಂ ಆಹ್ವಾನಿಸಿ ಸಂಯೋಗಿಸಿ ಲಿಂಗಪ್ರತಿಷ್ಠೆಯಂ ಮಾಡಿ ಮಾನಸ ಪೂಜೆಯಂ ವಿಸ್ತರಿಸಿ, ಮೇಲೆ ಆಚಾರ್ಯನು ತನ್ನಕರಕಂಜವಮಂ ಮುಗಿದು, ಅಲ್ಲಿ ಸದಾಸನ್ನಿಹಿತಮಾಗಿರೆಂದು ಈಶ್ವರಂಗೆ ಬಿನ್ನಪಂಗೆಯ್ದು ಇರಿಸೂದೆ ವೇದಾದೀಕ್ಷೆ ಎನಿಸೂದು. ೨೫೭

ಬಳಿಕ ಆ ಪ್ರಣವಪಂಚಾಕ್ಷರ ಮಂತ್ರವನ್ ಆ ಶಿಷ್ಯನ ದಕ್ಷಿಣಕರ್ಣದಲ್ಲಿ ಮೆಲ್ಲವೆ ಉಚ್ಚರಿಸುತ್ತಾ ಮಂತ್ರ ಋಷಿ ಛಂದಾದಿ ದೇವತಾದ್ಯಂಗಳಂ ತಿಳುಹೂದೇ ಮಂತ್ರದೀಕ್ಷೆಯೆನಿಸೂದು. ೨೫೮

ಬಳಿಕ ಆ ಮಂತ್ರಾನು ಸಂಧಾತೃವಾಗಿರ್ದ ಶಿಷ್ಯನ ಮಸ್ತಕಸ್ಥಿತಮಾದ ಜ್ಞಾನ ಕ್ರಿಯಾತ್ಮಕ ಲಿಂಗವನೆ ಶ್ರೀಗುರು ತನ್ನ ಭಾವ ಮನೋದೃಷ್ಟಿಗಳಿಗೆ ಯಥಾಕ್ರಮದಿಂ ಆಕರ್ಷಿಸಿ ತಂದು, ಆ ದೃಷ್ಠಿಯಿಂ ಮೇಲೆ ಸ್ಫಟಿಕ ಸುವರ್ಣ ಶಿಲೆ ರತ್ನಾದಿ ಲಿಂಗಂಗಳಲ್ಲಿ ಲಿಂಗಾಧಿಕ್ಯಮಾಗೆ ಮೃತ್ಯು, ಶಕ್ತ್ಯಾಧಿಕ್ಯಮಾಗೆ ದರಿದ್ರತೆ, ಲಿಂಗಶಕ್ತಿಸಮಾನದಿಂ ಬೋಗಮೋಕ್ಷಂಗಳಪ್ಪುದರಿಂದಾ ಲಿಂಗದ ವೃತ್ತಮಂ ಬಳಸಿ ಸೂತ್ರದಿಂದ ಎಳೆದ ಆ ಸೂತ್ರಮಂ, ಗೋಮುಖದ ತುದಿಗೆ ಲಿಂಗದ ಮಸ್ತಕಕ್ಕೆ ಪಿಡಿದು ಸರಿಗಂಡು, ಮೇಲೆ ಆ ಸೂತ್ರದಿಂ ಶಕ್ತಿಯ ಅದಃಪೀಠಮಂ ಪ್ರಮಾಣಿಸಿ, ಮೇಣ್ ಅದಃ ಪೀಠದಿಂ ಗೋಮುಖವನೆಳೆದು, ಸಮಾನವರಿದಿಂತು, ಪಂಚಸೂತ್ರಮುಳ್ಳ ಪೀಠ ಲಿಂಗಂಗಳೊಂದೇ ಜಾತಿ ಶಿಲಾದಿಗಳಾದ ಕಾಂತಿಮಯವಪ್ಪ ಲಿಂಗಸ್ಥಲಮಂ ತೀರ್ಥಾಂಬು ಪಂಚಗವ್ಯ ಭಸಿತ ಮಿಶ್ರೋದಕಂಗಳಿಂ ಪರಿಪೂರಿತಮಾದ ತ್ರಿವಿಧ ಕುಂಭದೊಳೊಂದೊಂದು ರಾತ್ರಿಯಲ್ಲಿ ಪ್ರತ್ಯೇಕಮಾಗಿ ಅಷ್ಟೋತ್ತರಶತ ಪಂಚಾಕ್ಷರವನು ಅನುವಿಂದ ಮಂತ್ರಿಸುತ್ತ ಅವಗಾಹಮಿರಿಸಿ ಬಳಿಕ ನಾಲ್ಕನೆಯ ರಾತ್ರಿಯೊಳು ಆ ಪಂಚಕಳಸ ಸ್ಥಾಪನಕ್ಕೆ ಉತ್ತರ ದಿಕ್ಕಿನಲ್ಲಿ ಭೂಮಿಯಂ ಪರಿಶುದ್ಧಗೆಯ್ದು, ಅಷ್ಟದಳ ಪದ್ಮಮಂ ತುಂಬಿ ಬಳಿಕ ಏಳು ಮೊಳದುದ್ದಮಂ ನವೀನವಸ್ತ್ರಮಂ ತಂದು ಆ ಪದ್ಮದ ಮೇಲೊಂದು ಅಂಗುಲ ದಪ್ಪದಲ್ಲಿ ಶ್ಯಾಮಕಮಂ ಪಸರಿಸುತ್ತ ಅಷ್ಟದಳನಳಿನಮಂ ಬರೆದು, ಆ ವಸ್ತ್ರಮಂ ಬಾಸಣಿಸಿ ಮತ್ತೆ ಅದರ ಮೇಲೆ ತಿಲಮಂ ಹರಹುತ್ತ, ಅಷ್ಟದಳ ಕಮಲಮಂ ಲಿಖಿಸುತ್ತಾ ವಸ್ತ್ರಮಂ ಪೊದಿಸಿ, ಮತ್ತೆ ಅದರ ಮೇಲೆ ಗೋದುವೆಯಂ ಹರಹುತ್ತ, ಅಷ್ಟದಳವಾರಿಜಮಂ ನಿರ್ಮಿಸುತ್ತುಂ ವಸ್ತ್ರಂ ಕವಿಚಿ, ಮತ್ತೆ ಅದರ ಮೇಲೆ ವ್ರೀಹಿಯಂ ಪಸರಿಸುತ್ತ ಅಷ್ಟದಳ ಕಂಜಮಂ ರಚಿಸುತ್ತ ವಸ್ತ್ರಮಂ ಮುಸುಂಕಿ, ಮತ್ತೆ ಅದರ ಮೇಲೆ ತಂಡುಲಮಂ ಹರಹುತ್ತ ಅಷ್ಟದಳಕಂಜಮಂ ಅಂಕಿಸುತ್ತಾ ವಸ್ತ್ರವನಾವರಿಸಿ, ಮತ್ತೆ ಅದರ ಮೇಲೆ ಚೂತ ಬಿಲ್ವ ಆಮಲಕ ಕುಶ ಅಪಾಮಾರ್ಗವೆಂಬ ಪಂಚಪತ್ರಂಗಳಂ

ವಿಸ್ತರಿಸುತ್ತಾ ವಸ್ತ್ರಮನ್ ಆಚ್ಛಾದಿಸಿ, ಹೀಂಗೆ ಏಳು ನೆಲೆಯಾದ ಆಧಾರಮಂ ಕಲ್ಪಿಸುತ್ತ ಅದರ ಮೇಲೆ ಆ ಲಿಂಗಸ್ಥಲಮಂ ಗೋಮುಖಂ ಉತ್ತರಭಾಗಮಪ್ಪಂತೆ ಇರಿಸಿ, ಮೇಲೆ ಸೀತ್ಕಾರ ಪ್ರಾಣಾಯಾಮದಿಂ ಸಹಸ್ರಮೂಲಮಂತ್ರಮಂ ಜಪಿಸುತ್ತಾ ಲಿಂಗಸ್ಥಳಕ್ಕೆ ಮಾತೃಕಾನ್ಯಾಸ ಕಲಾನ್ಯಾಸ ಮಂತ್ರನ್ಯಾಸಾದಿಗಳಿಂ ಪ್ರಾಣಪ್ರತಿಷ್ಠೆಯಂ ಮಾಡಿ, ಮರಳಿ ಕಳಶೋದಕದಿಂ ಸ್ನಾನಂಗೆಯ್ದು ಅಷ್ಟವಿಧ ಅರ್ಚನೆಯಂ ಮಾಡೂದು. ಇಂತು ಮುನ್ನವೇ ಪರಿಶುದ್ಧವಡೆದಿರ್ದ ಲಿಂಗಸ್ಥಲವನು ಆಚಾರ್ಯಂ ತನ್ನ ವಾಮಕರಸ್ಥಲಕ್ಕೆ ಬಿಜಯಂಗೆಯ್ಯಿಕೊಂಡು ಬಳಿಕ ಅದರೊಳು ಪೂರ್ವೋಕ್ತಂ ಕ್ರಮದಿಂ ದೃಷ್ಟಿಸ್ಥಿತ ಶಿವಕಲಾ ಪ್ರತಿಷ್ಠೆಯಂ ಮಾಡಿ, ಮತ್ತಂ ಆ ಶಿಷ್ಯನ "ಆಯಂ ಮೇ ಹಸ್ತೋ ಭಗವಾನ್" ಎಂಬ ಶ್ರುತಿ ಸಿದ್ಧಮಾದ ಮಂತ್ರದಿಂ, ವಾಮಹಸ್ತ ಪೀಠದೊಳು ಆ ಶಿವಲಿಂಗವಂ ಗೋಮುಖ ವಾಮಭಾಗವಪ್ಪಂತೆ ಸಂಸ್ಥಾಪಿಸೂದೇ ಕ್ರಿಯಾದೀಕ್ಷೆಯೆನಿಸೂದು. ೨೫೯

ಸಪ್ತವಿಧ ದೀಕ್ಷೆಗಳು :

ಬಳಿಕ ಶ್ರೀಗುರುವು ತನ್ನ ಶಿಷ್ಯನಂ ಕರೆದು ಎಲೆ ಮಗನೆ ನಿನ್ನ ಪ್ರಾಣಲಿಂಗವಿದು ತಾನೆ; ತತ್ವಾತೀತಮಾದ ಪರವಸ್ತುವಿದು ತಾನೆ : ಹರಿಬ್ರಹ್ಮರು, ಅರಸಿ ಕಾಣದ ನಿಜ ತತ್ವವಿದನು ಇಂತು ನಿಮಿಷ ಅರ್ಧಮಾದರೂ ನಿನ್ನ ಶರೀರದಿಂದ ವಿಯೋಗಮಾಗದಂತೆ ಸಾವಧಾನದಿಂ ಧರಿಸು, ತ್ರಿಕಾಲಂ ತಪ್ಪದಂತೆ ಅರ್ಚಿಸುತ್ತಿರು, ಲಿಂಗಾರ್ಪಿತಲ್ಲದೆ ಏನೊಂದನು ಸ್ವೀಕರಿದಿರು, ಸಕಲ ಭೋಗ ಮೋಕ್ಷಂಗಳೆಲ್ಲಂ ನಿನ್ನ ಕೈಸಾರಿದವು ಎಂದು ನಂಬು, ಸರ್ವಕ್ಲೇಶಮಂ ಬಡು, ನಿತ್ಯ ಸುಖಿಯಾಗಿ ಸತ್ಯಮಿದು, ಎಂಬಿವು ಮೊದಲಾದ ಶಿವಕ್ರಿಯೆಗಳನು ಉಪದೇಶಗೈದು ಇಂತು ಪೇಳ್ದ ವೀರಶೈವದೀಕ್ಷೆ ಎಂತೆಂದೊರೆ ; ಆಜ್ಞಾದೀಕ್ಷೆ, ಉಪಮಾದೀಕ್ಷೆ ಸ್ವಸ್ತಿಕಾರೋಹಣ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತಮೆಂದು ಸಪ್ತವಿಧಮಾಗಿಹುದು ಅವರಲ್ಲಿ:

೧. ಶ್ರೀಗುರು ತನ್ನಾಜ್ಞೆಯನೆ ಶಿಷ್ಯನಲ್ಲಿ ಪ್ರತಿಪಾದಿಸೂದೇ ಆಜ್ಞಾದೀಕ್ಷೆ ಎನಿಸೂದು.

೨. ಪುರಾತನ ಸಮಯಾಚಾರಕ್ಕೆ ಸದೃಶಮಾಗಿ ಮಾಡೂದೇ ಉಪಮಾದೀಕ್ಷೆ ಎನಿಸೂದು.

೩. ಸ್ವಸ್ತಿಕಮೆಂಬ ಮಂಡಲದ ಮೇಲೆ ಶಿಷ್ಯನಂ ಕುಳ್ಳಿರಿಸಿ ಮಂತ್ರನ್ಯಾಸಾದಿಗಳಂ ಮಾಡಿ, ಮಂತ್ರ ಶರೀರಿ ಎನಿಸೂದೇ ಸ್ವಸ್ತಿಕಾರೋಹಣವೆನಿಸೂದು.

೪. ಪಂಚಕಳಸೋದಕಂಗಳಂ ಶಿಷ್ಯಂಗೆ ಸ್ನಪನಂಗೆಯ್ವುದೇ ಕಳಸಾಭೀಷೇಕವೆನಿಸೂದು.

೫. ಆಗಮೋಕ್ತ ಸ್ಥಾನಂಗಳಲ್ಲಿ ತತ್ ತತ್ ಮಂತ್ರಂಗಳಿಂ ಶ್ರೀವಿಭೂತಿ ಧಾರಣಂ ಗೆಯ್ವುದೇ ವಿಭೂತಿಪಟ್ಟನೆನಿಸೂದು.

೬. ಆಚಾರ್ಯಂ ತಾನು ಶಿಷ್ಯಂಗೆ ಕೊಡಲು ತಕ್ಕ ಲಿಂಗವನು ಅರ್ಚಿಸಿ ಶಿಷ್ಯನಂ ನೋಡೂದೇ ಲಿಂಗಾಯತವೆನಿಸೂದು.

೭ ಶ್ರೀಗುರುವಿತ್ತ ಲಿಂಗವನೆ ಶಿಷ್ಯನು ಸಾವಧಾನದಿಂದ ಉತ್ತಮಾಂಗಾದಿ ಸ್ಥಾನಂಗಳಲ್ಲಿ ಧರಿಸೂದೇ ಲಿಂಗಾಸ್ವಾಯತವೆನಿಸೂದು.

ಇಂತು ಶಾಸ್ತ್ರೋಕ್ತ ಕ್ರಮದಿಂ ಸಾಂಗಿಕಮಾದ ಶಿವದೀಕ್ಷೆಯಂ ಲಿಂಗಾಂಗ ಸಂಬಂಧಿಯಾದ ವಿಶೇಷ ವೀರಶೈವನು ಮಾಳ್ಪ ಶಿವಲಿಂಗ ಪೂಜಾ ಕ್ರಮಮೆತೆಂದೊಡೆ. ೨೬೦

ವೀರಶೈವ ಶಿವಪೂಜಾ ಕರ್ಮಾನುಷ್ಠಾನ :

ಶ್ರೇಷ್ಠರುಗಳು ಆವಾವುದನು ಆಚರಿಸುವರು ಅದನೇ ಲೋಕದವರು ಅನುವರ್ತಿಪುದರಿಂದ ಜಗಕ್ಕೆ ಉಪದೇಶಮಪ್ಪಂತೆ, ತಾನು ನಿತ್ಯ ನಿರ್ಮಲನಾದರೂ, ಮಂತ್ರನ್ಯಾಸಾದಿ ಸಕಲ ಸಾಂಗಿಕಮಾಗಿ ಶಿವಲಿಂಗಾರ್ಚನೆಯಂ ಮಾಡುವಲ್ಲಿ ಮೊದಲು

" ಓಂ ಹಃ ಅನಂತ ಶಕ್ತಿಧಾಮ್ನೇ ಜೋತಿರೂಪಾಯ ಶಿವಸ್ತ್ರಾಯೆ ಫಟ್" ಎಂಬ ಮಂತ್ರದಿಂ ಮನಶ್ಶುದ್ಧಿಯನಾಚರಿಸಿ,

ಬಳಿಕ ಆಪೋವಾ ಇದಂ ಸರ್ವಂ ವಿಶ್ವಭೂತಾನ್ಯಾಪಃ
ಪ್ರಾಣಾನಾಮಾಪಃ ಪಶವಃ ಆಪೋನ್ನಮಾಪಃ
ಸಾಮ್ರಾಡಾಪೋ ವಿರಾಡಾಪೋ ಸ್ವರಾಡಾಪಃ
ಅಸ್ಯವೋ ಯಜೂಂಷ್ಯಾಪಃ ಸತ್ಯಮಾಪಃ

ಸರ್ವದೇವತಾ ಆಪಃ ಓಂ ಭೂರ್ಭುವಂ ಸುವಡಾಪಃ ಅಮೃತಮಾಪಃ ಎಂಬ ಅಭಿಮಂತ್ರಿತಮಾದ ಉದಕದಿಂ ಕರಚರಣ ಮುಖ ಪ್ರಕ್ಷಾಲನಂಗೈದು, ಬಳಿಕ 'ಸರ್ವಜ್ಞಾಯ ನಮಃ' ಎಂಬ ಮಂತ್ರವನು ಉಚ್ಚರಿಸುತ್ತಾ, ಆ ಪೂಜಾಗ್ನಹಮಂ ಪೊಕ್ಕು ಮರಳಿ "ಓಂ ಹ್ರಾಂ ಪೃಥುವಾತ್ಮನೇ ನಮಃ ನಿವೃತ್ತಿಕರಾಯೈ ನಮಃ "ಎಂಬ ಮಂತ್ರದಿಂ ಸ್ಥಾನಶುದ್ಧಿಯನಾಚರಿಸಿ ಮೇಲೆ "ಶ್ರೀಯೈ ನಮಃ" ಎಂಬ ಮಂತ್ರೋಚ್ಚಾರಣದಿಂ ಪೂರ್ವೋತ್ತರ ಮುಖವಾಗಿಯಾದರೂ ಸುಖಾಸನದಲ್ಲಿ ಕುಳ್ಳಿರ್ದು, ಬಳಿಕ "ಓಂ ಹ್ರೀಂ ಈಶಾಯ ನಮಃ" ಎಂಬ ಮಂತ್ರದಿಂ ದಕ್ಷಿಣಕರದ ಮಧ್ಯಮೆ ಅನಾಮಿಕ ಅಂಗುಷ್ಠಗಳಿಂ ಶ್ರೀಮತ್ ವಿಭೂತಿಯನು ಆಧಾರದಿಂ ತೆಗೆದುಕೊಂಡು, ಮೇಲೆ ವಾಮಹಸ್ತದ ಅಂಗುಷ್ಠಾದಿ ಅಂಗುಲಿಗಳಲ್ಲಿ, ಯಕಾರಾದಿ ನಕಾರಾಂತಮಾದ ಪಂಚಾಕ್ಷರಗಳನು ಉಚ್ಚರಿಸುತ್ತಂ ಆ ವಿಭೂತಿಯನಿರಿಸಿ,

ಬಳಿಕ ಪುನಾತಿ ಯಜ್ಞಗತ್ಸರ್ವಂ ತ್ರಿಪುಂಡ್ರಾತ್ಮಾ ಸದಾಶಿವ ಃ
ಐಶ್ವರ್ಯ ಪ್ರಾಪ್ತಿ ಬೀಜಾಯ ತಸ್ಮೈಶ್ರೀ ಭಸ್ಮನೇ ನಮಃ

ಎಂಬ ಮಂತ್ರದಿಂದ ಆ ಭಸಿತಕ್ಕೆ ನಮಸ್ಕರಿಸಿ, ಮೇಲೆ ದಕ್ಷಿಣಕರದಿಂ ಮುಚ್ಚಿ, ಬಲತೊಡೆಯ ಮೇಲಿಟ್ಟು "ಓಂ ನಮಃ ಶಿವಾಯ " ಎಂಬ ಮಂತ್ರ ಮೂಲದಿಂದ ಏಕಾದಶವಾರ ಅಭಿಮಂತ್ರಿಸಿ,

ಅಲ್ಲಾಮತ್ತೆ, 'ಅಗ್ನಿರಿತಿ ಭಸ್ಮ ಜಲಮತಿ ಭಸ್ಮ' ಸ್ಥಲಮತಿಭಸ್ಮ,
ವ್ಯೋಮೇತಿ ಭಸ್ಮ ಸರ್ವಗಂಹವಾ ಇದಂ ಭಸ್ಮ
ಮನ ಏತಾದಿ ಚಕ್ಷೂಷಿ ಭಸ್ಮಾನಿ'

ಎಂಬ ಮಂತ್ರದಿಂದಾದರೂ ಮಂತ್ರಿಸಿ,

ಬಳಿಕ 'ಮಾನಸ್ತೋಕೇ ತನಯೇ ಮಾನ ಆಯುಷಿ
ಮಾನೋ ಗೋಷು ಮಾನೋ ಅಶ್ವೇಷುರೀರಿಷಃ
ವೀರಾನ್ ಮಾನೋ ರುದ್ರ ಭಾಮಿತೋ ವದೀರ್ಹ
ವಿಷ್ಮಂತೋ ನಮಃ ಸಾ ವಿಧೇಮತೇ'

ಎಂಬ ಮಂತ್ರದಿಂದ ಎತ್ತಿ ಬಳಿಕ ಆ ವಿಭೂತಿಯಂ,
ಓಂ ಹ್ರೊಂ ಯಂ ಈಶಾನಾಯ ನಮಃ
ಎಂದು ಶಿರಸ್ಸಿನಲ್ಲಿ
ಓಂ ಹ್ರೇಂ ವಾಂ ತತ್ಪುರುಷಾಯ ನಮಃ
ಎಂದು ಮುಖದಲ್ಲಿ
ಓಂ ಹ್ರೂಂ ಶಿಂ ಅಘೋರಾಯ ನಮಃ
ಎಂದು ಹೃದಯದಲ್ಲಿ
ಓಂ ಹ್ರೀಂ ಮಂ ವಾಮದೇವಾಯ ನಮಃ
ಎಂದು ಗುಹ್ಯದಲ್ಲಿ
ಓಂ ಹ್ರಾಂ ನಂ ಸದ್ಯೋಜಾತಾಯ ನಮಃ

ಎಂದು ಪಾದದಲ್ಲಿಯೂ, ಸರ್ವಾಂಗದಲ್ಲಿಯೂ ಸಂಪ್ರೋಕ್ಷಿಸಿ, ಬಳಿಕ ಆಚಮನಂ ಮಾಡಿ ಮತ್ತೆ ವಿಭೂತಿಯಂ ತೆಗೆದುಕೊಂಡು ಮೂಲಮಂತ್ರದಿಂ ಹನ್ನೊಂದು ವೇಳೆ ಮಂತ್ರಿಸುತ್ತಾ ಆ ಭಸಿತದಿಂ;

'ಓಂ ಹ್ರೋಂ ಈಶಾನಾಯ ನಮಃ' ಎಂದು ಐದುವೇಳೆ ಶಿರೋದೇಶವನು,
'ಓಂ ಹ್ರೇಂ ತತ್ಪುರುಷಾಯ ನಮಃ' ಎಂದು ನಾಲ್ಕುವೇಳೆ ಮುಖವನು,
'ಓಂ ಹ್ರೂಂ ಅಘೋರಾಯ ನಮಃ' ಎಂದು ಎಂಟುವೇಳೆ ಹೃದಯವನು,
'ಓಂ ಹ್ರೀಂ ವಾಮದೇವಾಯ ನಮಃ' ಎಂದು ಹದಿಮೂರುವೇಳೆ ಗುಹ್ಯಪ್ರದೇಶವನು,
'ಓಂ ಹ್ರಾಂ ಸದ್ಯೋಜಾತಾಯ ನಮಃ' ಎಂದು ಎಂಟುವೇಳೆ ಪಾದಾದಿ ಸರ್ವಾಂಗವನು ಉದ್ಧೂಳಿಸಿ, ಮತ್ತಂ, ಆ ಭಸಿತಮಂ ಜಲಮಿಶ್ರಂ ಮಾಡಿ

ಪೂರ್ವೋಕ್ತ ಮೂರ್ಧ್ನಿ ಲಲಾಟಾದಿ ಸ್ಥಾನಂಗಳಲ್ಲಿ,

"ತ್ರಿಯಾಯುಷಂ ಜಮದಗ್ನೇಃ ಕಶ್ಯಪಸ್ಯ
ತ್ರಿಯಾಯುಷಂ ಅಗಸ್ತ್ಯಸ್ಯ, ತ್ರಿಯಾಯುಷಂ ಯದ್ದೇವಾನಾಂ,
ತ್ರಿಯಾಯುಷಂ ತನ್ಮೇ ಅಸ್ತು ತ್ರಿಯಾಯುಷಂ"

ಎಂಬ ತ್ರಿಯಾಯುಷ ಮಂತ್ರವನು,

ತ್ರಿಯಂಬಕಮ್ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ
ಉರ್ವಾರುಕಮಿನ ಬಂಧವಾನ್ಮೃತ್ಯೋ ಮ್ಕೃಕ್ಷಿಯಮಾಮೃತಂ

ಎಂಬ ತ್ರಿಯಂಬಕ ಮಂತ್ರವನು ಜಪಿಸುತ್ತೆ ತ್ರಿಪುಂಡ್ರಧಾರಣಂ ಗೆಯ್ದು, ೨೬೧

ವೀರಶೈವ ಕಲಾನ್ಯಾಸ :

ಬಳಿಕ, ಓಂ ಈಶಾನಃ ಸರ್ವವಿದ್ಯಾನಾಂ ಶಶಿನ್ಯೈನಮಃ, ಮೂರ್ಧ್ನಿ
ಓಂ ಈಶ್ವರಃ ಸರ್ವಭೂತಾನಾಂ ಲಿಂಗಧಾಯ್ಯೈನಮಃ, ಪೂರ್ವಮೂರ್ಧ್ನಿ
ಓಂ ಬ್ರಹ್ಮಾಧಿಪತಿ ಬ್ರಾಹ್ಮಣೋಧಿಪತಿ ಬ್ರಹ್ಮ ಜೇಷ್ಠಯ್ಯೆ ನಮಃ, ದಕ್ಷಿಣಮೂರ್ಧ್ನಿ
ಓಂ ಶಿವೋಮೇ ಅಸ್ತು ಮರೀಚ್ಯೈನಮಃ ವಾಮಮೂರ್ಧ್ನಿ
ಓಂ ಸದಾಶಿವೋಂ ಜ್ವಲಿನ್ಯೈನಮಃ ಪಶ್ಚಿಮ ಮೂರ್ಧ್ನಿ
ಓಂ ತತ್ಪುರುಷಾಯ ವಿದ್ಮಹೇ ಶಾಂತಾಯನಮಃ ಪೂರ್ವವಕ್ತ್ರೇ
ಓಂ ಮಹಾದೇವಾಯ ದೀಮಹಿ ವಿದ್ಯಾಯ್ಯೈನಮಃ ದಕ್ಷಿಣವಕ್ತ್ರೇ
ಓಂ ತನ್ನೋ ರುದ್ರಃ ಪ್ರತಿಷ್ಠಾಯ್ಯೆ ನಮಃ ವಾಮವಕ್ತ್ರೇ
ಓಂ ಪ್ರಚೋದಯಾತ್ ನಿವೃತ್ಯೈನಮಃ ಪಶ್ಚಿಮವಕ್ತ್ರೇ
ಓಂ ಈಶಾನ ವಕ್ತ್ರಾಯನಮಃ ಊರ್ಧ್ವವಕ್ತ್ರೇ
ಓಂ ಅಘೋರೇಭ್ಯಃ ತಮಸ್ಯೈನಮಃ ಹೃದಯೇ
ಓಂ ಘೋರೋರೇಭ್ಯಃ ಮೋಹಾಯ್ಯೆ ನಮಃ ಕಂಠೇ
ಓಂ ಘೋರ ಅಕ್ಷಯಾಯ್ಯೆನಮಃ ದಕ್ಷಿಣಾಂಸೇ
ಓಂ ಘೋರತರೇಭ್ಯಃ ಕನಿಷ್ಠಾಯ್ಯೆನಮಃ ವಾಮಾಂಸೆ
ಓಂ ಸರ್ವತಃ ಸರ್ವಮೃತ್ಯುವೇನಮಃ ನಾಭಿ
ಓಂ ಸರ್ವೇಭ್ಯಃ ಮಾಯಾಯ್ಯೆನಮಃ ಜಠರೇ
ಓಂ ನಮಸ್ತೇ ಅಸ್ತುರುದ್ರ ಅಭಯಾಯ್ಯೆನಮಃ ಪೃಷ್ಠೇ
ಓಂ ರೂಪೇಭ್ಯಃ ಶಿವೇಭ್ಯಃ ಜ್ವರಾಯ್ಯೆನಮಃ ವಕ್ಷಸಿ
ಓಂ ವಾಮದೇವಾಯ ನಮೋ ರಜಾಯ್ಯೆನಮಃ ಗುಹ್ಯೇ
ಓಂ ಜೇಷ್ಠಾಯನಮೋ ರಕ್ಷಾಯನಮಃ ಲಿಂಗೇ
ಓಂ ರುದ್ರಾಯನಮೋ ರತ್ಯೈನಮಃ ದಕ್ಷಿಣೋರು
ಓಂ ಕಾಲಾಯನಮೋ ಪಾಲ್ಯಾಯ್ಯೆನಮಃ ವಾಮೋರು
ಓಂ ಕಾಲಕಾಮಾಯ್ಯೆನಮಃ ದಕ್ಷಿಣಜಾನುನಿ
ಓಂ ವಿಕರಣಾಯನಮಃ ಸಂಯಮಿನೇನಮಃ ವಾಮಜಾನುನಿ
ಓಂ ಬಲಕ್ರಿಯಾಯ್ಯೆ ನಮಃ ದಕ್ಷಿಣ ಜಂಘಾಯಾಂ
ಓಂ ವಿಕರಣಾಯ ರುದ್ರಾಯ ನಮೋ ಬುದ್ಧ್ಯೈನಮಃ ವಾಮಜಂಘಾಯಾಂ
ಓಂ ಬಲಕಾಯ್ಯಾಯ್ಯೆ ನಮಃ ದಕ್ಷಿಣಸ್ಥಿಜಿ
ಓಂ ಪ್ರಮಥಾಯ ನಮಃ ಧತ್ರ್ಯೈನಮಃ ವಾಮಸ್ಥಿಜಿ

ಓಂ ಸರ್ವಭೂತ ದಮನಾಯನಮೋ ಗ್ರಾಮಿಣೀನಮಃ ಕಟಿಂ
ಓಂ ನಮೋ ಮನಮೋಹಿನ್ಯೇನಮಃ ದಕ್ಷಿಣ ಪಾರ್ಶ್ವೇ
ಓಂ ಉನ್ಮನಾಯನಮಃ ಮೋಹಾಯೈನಮಃ ವಾಮಪಾರ್ಶ್ವೇ
ಓಂ ಸದ್ಯೋಜಾತಂ ಪ್ರಪದ್ಯಾಮಿ ಸಿದ್ಧ್ಯೈ ನಮಃ ದಕ್ಷಿಣ ಪಾದೇ
ಓಂ ಸದ್ಯೋಜಾತಾಯ ವೈ ನಮಃ ಬುದ್ಧ್ಯೈನಮಃ ವಾಮಪಾದೇ
ಓಂ ಭವೇದ್ಯುತ್ಯೈ ನಮಃ ದಕ್ಷಿಣ ಕರೇ
ಓಂ ಅಭವೇಲಕ್ಷ್ಮ್ಯೈ ನಮಃ ವಾಮಕರೇ
ಓಂ ಅನಾದಿ ಭವೇ ಮೇಧಾಯೈ ನಮಃ ಘ್ರಾಣೇ
ಓಂ ಭವಸ್ವಮಾಂ ಕಾಂತ್ಯೈ ನಮಃ ಶಿರಸಿ
ಓಂ ಭವಸ್ವಧಾಯೈ ನಮಃ ದಕ್ಷಿಣಾ ಬಾಹೌ
ಓಂ ಉದ್ಭವಾಯನಮೊ ದೃತ್ಯೈಯ ನಮಃ ವಾಮಪಾದೌ ಎಂದಿಂತು
ಕಲಾನ್ಯಾಸಮಂ ವಿಸ್ತರಿಸಿ. ೨೬೨

ವೀರಶೈವ ಷಡಂಗನ್ಯಾಸ :

ಬಳಿಕ, ಓಂ ಹ್ರಾಂ ಸರ್ವಜ್ಞ ಶಕ್ತಿಧಾಮ್ನೇ ಹೃದಯಾಯ ನಮಃ
ಓಂ ಹ್ರೀಂ ತೃಪ್ತಿ ಶಕ್ತಿ ಧಾಮ್ನೇ ಶಿರಸೇ ಸ್ವಾಹಾ
ಓಂ ಹ್ರೂಂ ಅನಾದಿಬೋಧ ಶಕ್ತಿಧಾಮ್ನೇ ಶಿಖಾಯೈ ವಷಟ್
ಓಂ ಹ್ರೈಂ ಸ್ವತಂತ್ರ ಶಕ್ತಿಧಾಮ್ನೇ ಕವಚಾಯಹುಂ
ಓಂ ಹ್ರೌಂ ಅಲುಪ್ತ ಶಕ್ತಿಧಾಮ್ನೇ ನೇತ್ರತ್ರಯಾ ವೌಷಟ್
ಓಂ ಹ್ರಃ ಅನಂತಂಕ್ತಿಧಾಮ್ನೇ ಅಸ್ತ್ರಾಯ ಫಟ್
ಎಂದು ಷಡಂಗ ನ್ಯಾಸಗೈದು. ೨೬೩

ಪಂಚಬ್ರಹ್ಮನ್ಯಾಸ ರುದ್ರಾಕ್ಷಧಾರಣಾದಿ :

ಬಳಿಕ ಓಂ ಹ್ರೋಂ ಈಶಾನಾಯ ನಮಃ ಎಂದು ಶಿರಸ್ಸಿನಲ್ಲಿ
ಓಂ ಹ್ರೇಂ ತತ್ಪುರುಷಾಯ ನಮಃ ಎಂದು ಮುಖದಲ್ಲಿ
ಓಂ ಹ್ರೂಂ ಅಘೋರಾಯ ನಮಃ ಎಂದು ಹೃದಯದಲ್ಲಿ
ಓಂ ಹ್ರೀಂ ವಾಮದೇವಾಯ ನಮಃ ಎಂದು ಗುಹ್ಯದಲ್ಲಿ
ಓಂ ಹ್ರಾಂ ಸದ್ಯೋಜಾತಾಯ ನಮಃ ಎಂದು ಪಾದಂಗಳಲ್ಲಿ

ಪಂಚಬ್ರಹ್ಮನ್ಯಾಸವಂ ಮಾಡಿ, ಬಳಿಕ ಮೂರ್ಧ್ನಿ, ಲಲಾಟ, ಕಂಠ, ಹೃದಯ, ನಾಭಿಗಳಲ್ಲಿ ಕ್ರಮದಿಂ ಮಕಾರಾದಿ ನಕಾರಾಂತಮಾಗಿ ಪಂಚಾಕ್ಷರನ್ಯಾಸಗೆಯ್ದು.

ಅನಂತರದಲ್ಲಿ ರುದ್ರಾಕ್ಷಪುಂಜಮಂ ವಸ್ತ್ರದಲ್ಲಿರಿಸಿ :

ಓಂ ಹ್ರೂಂ ಸ್ರೂಂ ರಾಂ ಪ್ರಾಂ ಋಋಮಪಿ ಶ್ರೀ ಮಾಂ ಕ್ಷಾಂ ಕ್ಷಮಸಿ, ಕ್ಷಾಂ ಕ್ಷಾಂ ಹ್ರೂಂ ನಮಃ ಎಂಬ ಮಂತ್ರದಿಂದ ಅಭಿಮಂತ್ರಿಸಿ,

ಮರಳಿ, ರುದ್ರಾಕ್ಷವೃಕ್ಷ ಬೀಜಾಯ ಭೂತಿ ಸಂಭೂತಿ ಹೇತವೇ
ನೇತ್ರತ್ರಯಾಯ ರುದ್ರಾಯ ನಮೋ ಲೋಕ ಹಿತಾರ್ಥಿನೇ
ಎಂಬ ಮಂತ್ರದಿಂ ಧ್ಯಾನಿಸಿ, ನಮಸ್ಕರಿಸಿ,

ಬಳಿಕ ಶಿಖಿ ಶಿರಸ್ಸು ಮೂರ್ಧ್ನಿ ಕರ್ಣದ್ವಯ ಕಂಠ ಉರ ಬಾಹುದ್ವಯ ಮಣಿಬಂಧದ್ವಯ ಯಜ್ಞಸೂತ್ರಸ್ಥಾನ ಉದರಂಗಳಲ್ಲಿ ಕ್ರಮದಿಂ

ಓಂ ಶ್ರೀ ಸದಾಶಿವಾಯ ನಮಃ
ಓಂ ವಹ್ನಿ ಸೂರ್ಯ ಸೋಮಾಧಿಪಾಯ ಶ್ರೀ ಶಿವಾಯ ನಮಃ
ಓಂ ಷಟ್ತ್ರಿಂಶ ತತ್ತ್ವಾತ್ಮಕಾಯ ಪರಶಿವಾಯ ನಮಃ
ಓಂ ಶ್ರೀ ಸೋಮಾಯ ನಮಃ
ಓಂ ತ್ರಿಯಂಬಕ ಕಲಾತ್ಮನೇ ಶ್ರೀಕಂಠಾಯ ನಮಃ
ಓಂ ಶ್ರೀ ಕಂಠಾದಿ ಮೂರ್ತ್ಯಾತ್ಮಕಾಯ ಶ್ರೀ ಸರ್ವಜ್ಞಾಯ ನಮಃ
ಓಂ ಸುಖಾಸನಾದಿ ಷೋಡಶ ಮೂರ್ತ್ಯಾತ್ಮಕಾಯ ಶ್ರೀಕಂಠಾಯ ನಮಃ
ಓಂ ಶ್ರೀ ಸೋಮಕಲಾತ್ಮಕಾಯ ಶ್ರೀ ಸೋಮನಾಥಾಯ ನಮಃ
ಓಂ ದ್ವಾದಶಾದಿತ್ಯಾಭಿಷ್ಟಾಯ ಶ್ರೀ ಮಹಾದೇವಾಯ ನಮಃ
ಓಂ ಕೇಶವಾದಿಪತ್ಯಾಧಿಪಾಯ ಶ್ರೀ ಉಮಾಪತಯೇ ನಮಃ
ಓಂ ಶತರುದ್ರ ವಿದ್ಯೇಶ್ವರಾತ್ಮಕಾಯ ಶ್ರೀ ವಿಘ್ನೇಶ್ವರಾಯ ನಮಃ
ಓಂ ಚತುಷಷ್ಠಿ ಕಲೋಪೇತಾಯ ನಮಃ

"ಓಂ ಹ್ರೀಂ ಜನನಸ್ಥಾನ ವಿಭೂತಯೇ ಸರ್ವಾತ್ಮನೇ ಸರ್ವಕಾಲ ರೂಪಾಯ ಶ್ರೀ ಉಮಾಪತಯೇ ನಮಃ" ಎಂಬ ಮಂತ್ರಂಗಳಿಂ ಪೂರ್ವೋಕ್ತ ಸಂಖ್ಯಾಕ್ರಮದಿಂ ರುದ್ರಾಕ್ಷಮಾಲೆಗಳಂ ಧರಿಸಿ; ಬಳಿಕ,

ಶಿವಾಯ ನಮಃ	ರುದ್ರಾಯ ನಮ:	ಪಶುಪತಯೇ ನಮಃ
ನೀಲಕಂಠಾಯ ನಮಃ	ಮಹೇಶ್ವರಾಯ ನಮಃ	ಹರಿಕೇಶಾಯ ನಮಃ
ವಿರೂಪಾಕ್ಷಾಯ ನಮಃ	ಪಿನಾಕಿನೇ ನಮಃ	ತ್ರಿಪುರಾಂತಕಾಯ ನಮಃ
ಶಂಭವೇ ನಮಃ	ಶೂಲಿನೇ ನಮಃ	ಮಹಾದೇವಾಯ ನಮಃ

ಎಂಬ ದ್ವಾದಶ ಮಂತ್ರೋಚ್ಚಾರಣದಿಂ ಪುಷ್ಪಾಂಜಲಿಯಂ ಕೊಟ್ಟು

ವೀರಶೈವ ಶಿವಸಮರ್ಜನ :

ಬಳಿಕ ಪರಶಿವನು ನಿತ್ಯ ನಿಷ್ಕಲನಾದೊಡಂ ಭಕ್ತಹಿತಾರ್ಥಮಾಗಿ ಘೃತಕಾಠಿಣ್ಯದಂತೆ ಮೂರ್ತಿತ್ವದಿಂದುಪಚರಿಸಿಕೊಳಲು, ಯೋಗ್ಯನಪ್ಪುದರಿಂದ ಆ ಲಿಂಗದ ಮೂಲದಲ್ಲಿ ಪಾದಂಗಳನು, ಲಿಂಗಾಂಗ್ರದಲ್ಲಿ ಮುಖವನು, ಲಿಂಗಪಾರ್ಶ್ವದಲ್ಲಿ ಭುಜಂಗಳನು, ಲಿಂಗದ ಹಿಂದೆ ಪೃಷ್ಠಾದಿಗಳಂ ಪರಿಭಾವಿಸಿ,

ಬಳಿಕ,'ಓಂ ಹ್ರೇಂ ತತ್ಪುರುಷಾಯ ನಮಃ' ಎಂಬ ಮಂತ್ರದಿಂ
ಸ್ವಾಭಿಮುಖಂ ಮಾಡಿ, ಮತ್ತೆ ಆ ಲಿಂಗಕ್ಕೆ "ಓಂ ಹ್ರಾಂ ಸದ್ಯೋಜಾತಾಯ ನಮಃ

ಪಾದ್ಯಂ ಸ್ವಾಹಾ; ಓಂ ಹ್ರೀಂ ವಾಮದೇವಾಯ ನಮಃ
ಆಚಮನೀಯಂ ಸ್ವಾಹಾ; ಓಂ ಹ್ರೂಂ ಅಘೋರಾಯ ನಮಃ
ಆರ್ಘ್ಯಸ್ವಾಹಾ" ಎಂಬ ಆಯಾಯ ಮಂತ್ರಂಗಳಿಂ ಪಾದ್ಯಾದಿಗಳಂ ಕೊಟ್ಟು,

ಪಂಚಗವ್ಯಾಭಿಷೇಕ :

ಮರಳಿ, ಓಂ ಹ್ರಾಂ ಸದ್ಯೋಜಾತಾಯ ನಮಃ ಗೋಮೂತ್ರಂ ಸ್ವಾಹ
ಓಂ ಹ್ರೀಂ ವಾಮದೇವಾಯ ನಮಃ ಗೋಮಯಂ ಸ್ವಾಹ
ಓಂ ಹ್ರೂಂ ಅಘೋರಾಯ ನಮಃ ಗೋಕ್ಷೀರಂ ಸ್ವಾಹ
ಓಂ ಹ್ರೈಂ ತತ್ಪುರುಷಾಯ ನಮಃ ಗೋದಧಿ ಸ್ವಾಹ
ಓಂ ಹ್ರೋಂ ಈಶಾನಾಯ ಸ್ವಾಹ ಗೋಘೃತಂ ಸ್ವಾಹಾ
ಎಂದು ಆಯಾಯ ಮಂತ್ರಂಗಳಿಂ ಲಿಂಗಕ್ಕೆ ಪಂಚಗವ್ಯಾಭಿಷೇಕಮಂ ಮಾಡಿ

ಪಂಚಾಮೃತಾಭಿಷೇಕ :

ಮರಳಿ, ಆಪ್ಯಾಯ ಸ್ವಸಮೇತುತೇ ವಿಶ್ವತಃ ಸೋಮ ವೃಷ್ಟಿಯಂ
ಭವಾವಾಜಸ್ಯ ಸಂತುಷೇ, ಓಂ ಕ್ಷೀರೇಣ ಸ್ನಾಪಯಾಮಿ,
ಎಂದು ಕ್ಷೀರಸ್ನಾನವಂ ಮಾಡಿ, ಮೇಲೆ ಸದ್ಯೋಜಾತ ಮಂತ್ರದಿಂ ಜಲಸ್ನಾನಂಗೆಯ್ದು,
ಮತ್ತೆ, ದಧಿಕ್ರಾವಣ್ಣೋ ಅಕಾರಿಷಂ ಜಿಷ್ಣೋರಶ್ವವಾಜಿನಃ
ಸುರಭಿನೋ ಮುಖಾಕರತ್ಪ್ರಣ ಆಯೂಂಷಿ ತಾರಿಷತ್ ಓಂ
ದಧ್ನಾ ಸ್ನಾಪಯಾಮಿ,
ಎಂದು ದಧಿಸ್ನಾನವಂ ಮಾಡಿ, ಮೇಲೆ ವಾಮ ದೇವ ಮಂತ್ರದಿಂ ಜಲಸ್ನಾನಂಗೆಯ್ದು,
ಬಳಿಕ ಶುಕ್ರಮಸಿ ಜ್ಯೋತಿರಸಿ ತೇಜೋಸಿ ದೇವೋ ವಸ್ಯ
ವಿತೋತ್ಪುನಾತ್ವಚ್ಛಿದ್ರೇಣ ಪವಿತ್ರೇಣ ವಸೋಸ್ಸೂರ್ಯಸ್ಯರಶ್ಮಿಭಿಃ
ಓಂ ಘೃತೇನ ಸ್ನಾಪಯಾಮಿ,
ಬಳಿಕ, ಮಧುವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ ।
ಮಾಧ್ವೀರ್ನಸ್ಸಂತ್ವೋಷಧೀಃ ।
ಮಧುನಕ್ತಮುತೋಷಸೋ ಮಧೂಮತ್ಪಾರ್ಥಿವಂ ರಜಃ ।
ಮಧು ದ್ಯೌರಸ್ತು ನಃ ಪಿತಾ ।
ಮಧುಮಾನ್ನೋ ವನಸ್ಪತಿರ್ಮಧುಮಾ ಅಸ್ತು ಸೂಯಃ
ಮಾರ್ಧ್ವಿಗಾರ್ವೋ ಭವಂತು ನಃ ।
ಓಂ ಮಧುನಾ ಸ್ನಾಪಯಾಮಿ, ಎಂದು ಮಧುಸ್ನಾನಂ ಮಾಡಿ,
ಮೇಲೆ ತತ್ಪುರುಷ ಮಂತ್ರದಿಂ ಜಲಸ್ನಾನಂಗೆಯ್ದು,
ಬಳಿಕ, ಓಂ ಭೂರ್ಭುವ: ಸ್ವಾಹಾ, ತತ್ಸವಿತುರ್ವರೇಣ್ಯ ಭರ್ಗೋ ದೇವಸ್ಯ
ಧೀ ಮಹೀ ದೀಯೋ ಯೋನಃ ಪ್ರಚೋದಯಾತ್
ಓಂ ಶರ್ಕರಯಾ ಸ್ನಾಪಯಾಮಿ

ಎಂದು ಶರ್ಕರಾಸ್ನಾನಂ ಮಾಡಿ, ಮೇಲೆ ಈಶಾನ ಮಂತ್ರದಿಂ ಜಲಸ್ನಾನಂಗೆಯ್ದು ಬಳಿಕ ಈ ಪಂಚಾಮೃತಾಭಿಷೇಕಾನಂತರದಲ್ಲಿ ಗೋಧೂಮ ಚೂರ್ಣಾದಿಕದಿಂ ಲಿಂಗಕ್ಕೆ ಉದ್ವರ್ತನಂ ಮಾಡಿ ಮಂದೋಷ್ಣವಾರಿಯಿಂ ಸ್ನಾನಗೆಯ್ದು, ಬಳಿಕ

ಓಂ ಹ್ರಾಂ ಈಶಾನಾಯ ನಮಃ ಎಂದು ಗಂಧೋಧಕಮಂ ಕೊಟ್ಟು

ಓಂ ಹ್ರೈಂ ತತ್ಪರುಷಾಯ ನಮಃ ಎಂದು ಪುಷ್ಪೋದಕವನೆರೆದು

ಓಂ ಹ್ರೂಂ ಅಘೋರಾಯ ನಮಃ ಎಂದು ಸ್ವರ್ಣೋಧಕಮಂ ಸಮರ್ಪಿಸಿ,

ಓಂ ಹ್ರೀಂ ವಾಮದೇವಾಯ ನಮಃ ಎಂದು ರತ್ನೋದಕವನಿತ್ತು,

ಓಂ ಹ್ರಾಂ ಸದ್ಯೋಜಾತಾಯ ನಮಃ ಎಂದು ಮೂಲಮಂತ್ರೋದಕದಿಂ ನಿವೇದಿಸಿ, ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಃ ಎಂ ಶಿವಾಂಗ ಮಂತ್ರದಿಂ ತಿಲೋದಕಾಭಿಷೇಕಂಗೆಯ್ದು, ಮೇಲೆ ತೀರ್ಥೋದಕವನೆರೆದು, ಮತ್ತಂ ಆ ತೀರ್ಥೋದಕದಿಂದವೆ ಶ್ರೀ ರುದ್ರ, ಪಂಚ ಬ್ರಹ್ಮ, ಪುರುಷ ಸೂಕ್ತ, ಮೂಲ ಮಂತಾದಿಗಳಿಂ ಮಹಾಸ್ನಾನಂ ಮಾಡಿ, ಬಳಿಕ ಓಂ ಹ್ರಾಂ, ಹ್ರೀಂ ಹೃದಯಾಯ ನಮಃ ಎಂಬ ಮಂತ್ರದಿಂ ಪಾದ್ಯ, ಆಚಮನ ಅರ್ಘ್ಯಂಗಳಂ ಕೊಟ್ಟು, ಬಳಿಕ ಅಂಗುಷ್ಠ ಅನಾಮಿಕೆಗಳಿಂ ವಿಭೂತಿಯಂ ತೆಗೆದು ಮಂತ್ರೋದಕದಿಂ ಕಲಸಿ, ಓಂ ಹ್ರೀಂ ತತ್ಪುರುಷಾಯ ನಮಃ ಎಂಬ ಮಂತ್ರದಿಂದಾ ವಿಭೂತಿಯಂ ಲಿಂಗಕ್ಕೆ ಧರಿಸಿ,

ಮೇಲೆ, ಓಂ ಹ್ರಾಂ ಹೃದಯಾಯ ನಮಃ ವಸ್ತ್ರಂ ಸ್ವಾಹಾ

ಓಂ ಹ್ರೈಂ ಕವಚಾಯ ಹುಂ ಉಪವೀತಂ ಸ್ವಾಹ

ಓಂ ಹ್ರೀಂ ವಾಮದೇವಾಯ ನಮಃ ಗಂಧಂ ಸ್ವಾಹ

ಓಂ ಹುಃ ಅಸ್ತ್ರಾಯ ಫಟ್ ಅಕ್ಷತಾನ್ ಸ್ವಾಹ

ಓಂ ನಮಃ ಶಿವಾಯ ಪುಷ್ಪಂ ಸ್ವಾಹ ಎಂದು ಆಯಾಯ ಮಂತ್ರಗಳಿಂ ತತ್ ತತ್ ದ್ರವ್ಯಂಗಳಿಂ ಸಮರ್ಪಿಸಿ, ಮತ್ತಂ ಆ ಪುಷ್ಪಗಳಿಂದವೆ ಅಂಗುಷ್ಠ ಮಧ್ಯಮ ಅನಾಮಿಕೆಗಳಿಂ,

ಓಂ ಹರಾಯ ನಮಃ ಪಾದೌ ಪೂಜಯಾಮಿ

ಓಂ ಶಂಭವೇ ನಮಃ ಗುಲ್ಫೌ ಪೂಜಯಾಮಿ

ಓಂ ಶುಭಾಯ ನಮಃ ಜಾನುನೀಂ ಪೂಜಯಾಮಿ

ಓಂ ಸರ್ವನಿವಾಸಾಯ ನಮಃ ಊರುಂ ಪೂಜಯಾಮಿ

ಓಂ ಸರ್ವಾಶ್ರಯಾಯ ನಮಃ ಕಟಿಂ ಪೂಜಯಾಮಿ

ಓಂ ಸರ್ವರಕ್ಷಾಯ ನಮಃ ಜಘನಂ ಪೂಜಯಾಮಿ

ಓಂ ದಿಗ್ವಾಸಸೇ ನಮಃ ಮಧ್ಯಂ ಪೂಜಯಾಮಿ,

ಓಂ ನಕ್ಷತ್ರಮಾಲಿನೇ ನಮಃ ನಾಭಿಂ ಪೂಜಯಾಮಿ,

ಓಂ ಸರ್ವೇಶ್ವರಾಯ ನಮಃ ಕುಕ್ಷಿಂ ಪೂಜಯಾಮಿ

ಓಂ ಉಮಾಕಾಂತಾಯ ನಮಃ ವಕ್ಷಸ್ಥಲಂ ಪೂಜಯಾಮಿ
ಓಂ ನೀಲಕಂಠಾಯ ನಮಃ ಕಂಠಂ ಪೂಜಯಾಮಿ
ಓಂ ತ್ರಿಪುರಸಂಹರ್ತೆ ನಮಃ ಬಾಹೂನ್ ಪೂಜಯಾಮಿ
ಓಂ ಶಂಕರಾಯ ನಮಃ ಕರಾನ್ ಪೂಜಯಾಮಿ
ಓಂ ವೃಷಭಾಯ ನಮಃ ಬಹಿಃ ಕಂಠಂ ಪೂಜಯಾಮಿ
ಓಂ ಕ್ರತು ಫಲದಾಯಿನೇ ನಮಃ ಮುಖಂ ಪೂಜಯಾಮಿ
ಓಂ ನಾಗಹಾರಾಯ ನಮಃ ನಾಸಿಕಂ ಪೂಜಯಾಮಿ,
ಓಂ ಇಂದ್ವರ್ಕವಹ್ನಿ ನೇತ್ರಾಯ ನಮಃ ನೇತ್ರಾಣಿ ಪೂಜಯಾಮಿ
ಓಂ ಕಾಪಾಲಿನೇ ನಮಃ ಲಲಾಟಂ ಪೂಜಯಾಮಿ
ಓಂ ಫಣಿಕುಂಡಲಾಯ ನಮಃ ಕರ್ಣೌ ಪೂಜಯಾಮಿ,
ಓಂ ಗಂಗಾಧರಾಯ ನಮಃ ಜಟಾಂ ಪೂಜಯಾಮಿ
ಓಂ ಸೋಮಭೂಷಣಾಯ ನಮಃ ಕಪರ್ದಂ ಪೂಜಯಾಮಿ,
ಓಂ ಶುಭದಾಯಿನೇ ನಮಃ ಸರ್ವಾಂಗಾನಿ ಪೂಜಯಾಮಿ
ಎಂದು ಲಿಂಗದವಯವ ಪೂಜೆಗಳಂ ವಿಸ್ತರಿಸಿ, ಅನಂತರದಲ್ಲಿ,

ಮಾತೃಕಾಕ್ಷರಾದಿ ನ್ಯಾಸ :

ಓಂ ಹ್ರಾಂ ಹೃದಯಾಯ ನಮಃ ಓಂ ಹ್ರೀ ಶಿರಸೇ ಸ್ವಾಹಾ
ಓಂ ಹ್ರೂಂ ಶಿಖಾಯೈ ವಷಟ್ ಓಂ ಹ್ರೈಂ ಕವಚಾಯಹುಂ
ಓಂ ಹ್ರೌಂ ನೇತ್ರತ್ರಯಾ ವೌಷಟ್ ಓಂ ಹ್ರಃ ಅಸ್ತ್ರಾಯ ಫಟ್
ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಂ ಎಂಬ ಶಿವಾಂಗ ಮಂತ್ರಮಂ
ಓಂ ಹಂ ಹ್ರೌಂ ಹಂ ಹ್ರೂಂ ಹಂಸ ಎಂಬ ಪಂಚ ಪ್ರಸಾದ ಮಂತ್ರಮಂ
ನಮಃ ಶಿವಾಯ ಎಂಬ ಪಂಚಾಕ್ಷರ ಮಂತ್ರಮಂ
ಓಂ ನಮಃ ಶಿವಾಯ ಎಂಬ ಮೂಲ ಪಂಚಾಕ್ಷರ ಮಂತ್ರಮಂ
ಓಂ ಹ್ರಾಂ ಹ್ರೀಂ ಹ್ರೂಂ ನಮಃ ಶಿವಾಯ ಎಂಬ ಸ್ಥೂಲ ಪಂಚಾಕ್ಷರ ಮಂತ್ರಮಂ
ಓಂ ಹ್ರೀಂ ಹ್ರೂಂ ಹ್ರೈಂ ನಮಃ ಶಿವಾಯ ಎಂಬ ಮಾಯಾಖ್ಯ ಪಂಚಮಂತ್ರಮಂ
ಓಂ ಹ್ರಾಂ ಹ್ರೀಂ ಹ್ರೈಂ ನಮಃ ಶಿವಾಯ ಎಂಬ ಪ್ರಸಾದ ಪಂಚಾಕ್ಷರ ಮಂತ್ರಮಂ
ಓಂ ಹಃ ಅನಂತ ಶಕ್ತಿಧಾಮ್ನೇ ಜ್ಯೋತಿ ರೂಪಾಯಿ ಶಿವಾಸ್ತ್ರಾ ಫಟ್ ಎಂಬ
ಶಿವಾಸ್ತ್ರ ಮಂತ್ರಮಂ
ಓಂ ಆಂ ಈಂ ಊಂ ವ್ಯೋಮ ವ್ಯಾಪಿನೇ ವ್ಯೋಮಸ್ತ್ರಾಯ ಫಟ್
ಎಂಬ ವ್ಯೋಮಾಸ್ತ್ರ ಮಂತ್ರಮಂ,
ಓಂ ಶಿಂ ಪಶುಹುಂ ಫಟ್ ಎಂಬ ಪಾಶುಪಾತಾಸ್ತ್ರ ಮಂತ್ರಮಂ

ಓಂ ಚಿಚ್ಛಿಖಿ ಚಿಚ್ಛಿದಿಕ್ಷು ಕೃತಕ್ಷುರಿತಾಸ್ತ್ರಾಯ ಫಟ್ ಎಂಬ ಕ್ಷುರಿತಾಸ್ತ್ರ ಮಂತ್ರಮಂ

ಓಂ ಪ್ರಸ್ಫುರ ಪ್ರಸ್ಫುರ, ಘೋರ ಘೋರ, ತಮ ತಮ ರೂಪ ತನುರೂಪ ಚಟ ಚಟ, ಕಹ ಕಹ, ವಮ ವಮ, ಬಂಧ ಬಂಧ, ಘಾತಾಯ, ಹುಂ ಫಟ್ ಎಂಬ ಅಘೋರಾಸ್ತ್ರ ಮಂತ್ರಮಂ ಲಿಂಗಮಧ್ಯದೊಳು ಅನುಸಂಧಾನಿಸಿ,

ಬಳಿಕ, ಅಕಾರ ಆಕಾರಂಗಳೇ ಕ್ರಮದಿಂ ಮೂರ್ಧ್ನಿ ಲಲಾಟಂಗಳು
ಇಕಾರ ಈಕಾರಂಗಳೇ ದಕ್ಷಿಣ ವಾಮ ನೇತ್ರಂಗಳು
ಉಕಾರ ಊಕಾರಂಗಳೇ ದಕ್ಷಿಣವಾಮ ಶ್ರೋತ್ರಂಗಳು
ಋಕಾರ ೠಕಾರಂಗಳೇ ದಕ್ಷಿಣ ಮಾಮ ಕಪೋಲಂಗಳು
ಌಕಾರೣಕಾರಂಗಳೇ ದಕ್ಷಿಣ ಮಾಮ ನಾಸಾ ಪುಟಂಗಳು
ಏಕಾರ ಐಕಾರಂಗಳೇ ಊರ್ಧ್ವ ಅಧೋಷ್ಠಂಗಳು
ಓಕಾರ ಔಕಾರಂಳೇ ಊರ್ಧ್ವ ಅಧೋ ದಂತಪಙ್ತಿಗಳು
ಅಂ ಕಾರ ಅಃಕಾರಗಳೇ ಮೇಲು ಕೆಳಗನಾವಸಡುಗಳು
ಕಾದಿ ಪಂಚಾಕ್ಷರಂಗಳೇ ದಕ್ಷಿಣ ಪಂಚಹಸ್ತಂಗಳು
ಚಾದಿ ಪಂಚಾಕ್ಷರಂಗಳೇ ವಾಮ ಪಂಚಕರಂಗಳು
ಟಾದಿ ತಾದಿ ಪಂಚಾಕ್ಷರಂಗಳೇ ದಕ್ಷಿಣ ವಾಮ ಪಾದಂಗಳು
ಪಕಾರವೇ ಉದರ, ಫಕಾರ ಬಕಾರಂಗಳೇ ದಕ್ಷಿಣವಾಮ ಪಾರ್ಶ್ವಂಗಳು
ಭಕಾರವೇ ಸ್ಕಂದ, ಮಕಾರವೇ ಹೃದಯ
ಯಕಾರಾದಿ ಸಕಾರಾಂತಮಾದ ಅಕ್ಷರಂಗಳೇ ತ್ವಗಾದಿ ಸಪ್ತಧಾತುಗಳೂ
ಹಕಾರವೇ ಆತ್ಮನು, ಕ್ಷರಾವೇ ಪೂಜಕರ ಜನ್ಮಾದಿರಿಪು
ವಿಷಯಮಾದ ಕ್ರೋಧವಹುದು.

ಎಂದು ಲಿಂಗಮಧ್ಯದಲ್ಲಿ ಮಾತೃಕಾಕ್ಷರ ನ್ಯಾಸವನಿಂತು ಸ್ಮರಿಸಿ,

ಕಲಾನ್ಯಾಸ ಪೂಜಾದಿಗಳು :

ಮತ್ತಂ, ಆ ಲಿಂಗಮಧ್ಯದಲ್ಲಿ ಕಲಾನ್ಯಾಸ ಬ್ರಹ್ಮನ್ಯಾಸಂಗಳು ನೆನೆದು, ಮರಳಿ,

'ಓಂ ಹ್ರೌಂ ನೇತ್ರತ್ರಯಾಯ ವೌಷಟ್ ಧೂಪಂ ಸ್ವಾಹಾ' ಎಂಬ ಮಂತ್ರದಿಂ ಧೂಪಮಂ ಬೀಸಿ,

'ಓಂ ಹ್ರೈಂ ಕವಚಾಯ ಹುಂ ದೀಪಂ ಸ್ವಾಹಾ' ಎಂಬ ಮಂತ್ರದಿಂ ನೀರಾಜನಾದಿ ದೀಪಮಂ ಬೆಳಗಿ,

'ಓಂ ಶಿವಾಯ ನಮಃ' ಎಂಬ ಮೂಲ ಮಂತ್ರದಿಂ ಪರಮಾನ್ನಾದಿ ನೈವೇದ್ಯಮಂ ಪತಾಕಮುದ್ರೆಯಿಂ ಸಮರ್ಪಿಸಿ, ಮೇಲೆ,

ಓಂ ನಮಃ ಶಿವಾಯ ಪಾನೀಯಂ ಸ್ವಾಹಾ
ಓಂ ಹ್ರಾಂ ಹೃದಯಾಯನಮಃ ಆಚಮನಂ ಸ್ವಾಹಾ
ಓಂ ನಮಃ ಶಿವಾಯ ಅನುಲೇಪನಂ ಸ್ವಾಹಾ
ಓಂ ಹ್ರೀಂ ತತ್ಪುರುಷಾಯ ನಮಃ ತಾಂಬೂಲಂ ಸ್ವಾಹಾ
ಓಂ ಹಂ ಹ್ರೌಂ, ಹಂ ಹ್ರೌಂ, ಹಂಸಃ ಆಭರಣಂ ಸ್ವಾಹಾ

ಎಂದು ತತ್‌ತತ್ ಮಂತ್ರದಿಂದಾಯಾಯ ವಸ್ತುಗಳಂ ನಿವೇದಿಸಿ,

ಬಳಿಕ,

'ಓಂ ನಮಃ ಶಿವಾಯ ದರ್ಪಣಂ ಸ್ವಾಹ' ಎಂದು ದರ್ಪಣಾದಿ ಛತ್ರ ಚಾಮರ ವ್ಯಜನಾದಿಗಳಂ ಸಮರ್ಹಿಸಿ, ಬಳಿಕ ಲೌಕಿಕ ವೈದಿಕಾದಿ ಸ್ತೋತ್ರಂಗಳಂ ಮಾಡಿ,

ಮರಳಿ, ಭವಾಯದೇವಾಯ ನಮಃ ಪಶುಪತಯೇ ದೇವಾಯನಮಃ
ಶರ್ವಾಯ ದೇವಾಯ ನಮಃ ಉಗ್ರಾಯ ದೇವಾಯ ನಮಃ
ರುದ್ರಾಯ ದೇವಾಯ ನಮಃ ಭೀಮಾಯ ದೇವಾಯ ನಮಃ
ಸಹಮಹತೇ ದೇವಾಯ ನಮಃ ಈಶಾನಾಯ ದೇವಾಯ ನಮಃ

ಎಂಬ ಅಷ್ಟಮಂತ್ರದಿಂದ ಅಷ್ಟಪುಷ್ಪಂಗಂಳಂ ಸಮರ್ಪಿಸಿ,

ಬಳಿಕ, ಪೂರ್ವೋಕ್ತ 'ಶಿವಾಯನಮಃ' ಎಂಬುದು ಮೊದಲಾದ ದ್ವಾದಶ ಮಂತ್ರದಿಂದವೆ ಪುಷ್ಪಾಂಜಲಿಯಂ ಕೊಟ್ಟು, ಮೇಲೆ ತ್ರಿಯಂಬಕ ಮಂತ್ರದಿಂ ಮಂತ್ರ ಪುಷ್ಪಮಂ ಸಮರ್ಪಿಸಿ, ಬಳಿಕ ದಕ್ಷಿಣ ಕರಾಂಜಲಿಯಂ ಪುಷ್ಪೋದಕಂ ಗಳಂ ತಳೆದು ಚತುರಂಗುಲಿಗಳಿಂ ಆಕುಂಚನಂ ಗೈದು, "ಪೂಜಾಂ ಸಮರ್ಪಯಾಮಿ" ಎಂದು ಆ ಪೂಜಾ ಪುಷ್ಪೋದಕಂಗಳಂ ತನ್ನ ಪಾದಮೂಲದೆಡೆಗೆ ಕನಿಷ್ಠಾಂಗುಲಿಯಂ ಎರೆದು ಪೂಜಾಸಮಾಪ್ತಗೆಯ್ಯಲ್ವೇಳ್ಕುಂ.

ವೀರಶೈವ ಷಟ್‌ಸ್ಥಲ ವಿಷಯ :

ಮತ್ತಂ, ಆ ವಿಶೇಷ ವೀರಶೈವನು ತನಗೆ ಶ್ರೀಗುರುವಿಂದುಪದೇಶಮಾದ ವೇದ ಪುರಾಣ ಆಗಮಸಾರಮಪ್ಪ ಪುರಾತನ ಮಾರ್ಗಮಾದ, ಸರ್ವೋತ್ಕೃಷ್ಟಮಾದ ಷಟ್‌ಸ್ಥಲಗಳಲ್ಲಿ ಭಕ್ತಿ, ಕರ್ಮಕ್ಷಯ, ನಿರ್ಮಲ ಮತಿ, ವಿಚಾರ, ದರ್ಪಸಂಕ್ಷಯ ಸಮ್ಯಜ್ಞಾನವೆಂಬ ಆರು ಫಲಕ್ರಮಂಗಳನುಳ್ಳ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯವೆಂಬ ಷಟ್‌ಸ್ಥಲಂಗಳಂ;

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಆತ್ಮರೆಂಬ ಷಡಂಗಗಳಂ;
ಚಿತ್ತ ಮನ ಬುದ್ಧಿ ಅಹಂಕಾರ ಜ್ಞಾನ ಭಾವಂಗಳೆಂಬ ಆರು ಹಸ್ತಗಳಂ;
ಕರ್ಮಸಾದಾಖ್ಯ ಕರ್ತೃಸಾದಾಖ್ಯ ಮೂರ್ತಿಸಾದಾಖ್ಯ ಅಮೂರ್ತಿಸಾದಾಖ್ಯ ಶಿವಸಾದಾಖ್ಯ ಮಹಾಸಾದಾಖ್ಯವೆಂಬ ಆರು ಸಾದಾಖ್ಯಂಗಳಂ;

ಕ್ರಿಯಾಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿಯೆಂಬ ಆರು ಶಕ್ತಿಗಳಂ;

ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂಬ ಷಡ್ವಿಧಲಿಂಗಂಗಳಂ;

ನಿವೃತ್ತಿ ಪ್ರತಿಷ್ಠೆ ವಿದ್ಯೆ ಶಾಂತಿ ಶಾಂತ್ಯಾತೀತೆ ಶಾಂತ್ಯಾತೀತೋತ್ತರ ಎಂಬ ಆರು ಕಲೆಗಳಂ;

ಘ್ರಾಣ ಜಿಹ್ವ ನೇತ್ರ ತ್ವಕ್ಕು ಶ್ರೋತ್ರ ಹೃದಯವೆಂಬ ಆರು ಮುಖಗಳಂ;

ಗಂಧ ರಸ ರೂಪು ಸ್ಪರ್ಶ ಶಬ್ದ ಪರಿಣಾಮವೆಂಬ ಆರು ಪದಾರ್ಥಂಗಳಂ;

ಶ್ರದ್ಧಾಭಕ್ತಿ, ನಿಷ್ಠಾಭಕ್ತಿ ಅವಧಾನ ಭಕ್ತಿ ಅನುಭಾವ ಭಕ್ತಿ ಆನಂದ ಸಮರಸ ಭಕ್ತಿ ಎಂಬ ಷಡ್ವಿಧ ಭಕ್ತಿಗಳಂ; ಪರಿವಿಡಿದು ತಪ್ಪದೆ ಆಚರಿಸುವಲ್ಲಿ, ಮೊದಲ ಭಕ್ತಸ್ಥಲದೊಳು ಆಚಾರಾದಿ ಷಡ್ವಿಧ ಲಿಂಗಂಗಳೊಂದು ಕ್ರಿಯಾಭೇದದಿಂ ಮೂರುಮೂರಾಗಿ ಹದಿನೆಂಟು ತೆರನಾಗಿರ್ಪವು, ಅದೆಂತೊಡೆ,

ಆಚಾರತ್ರಯ :

ಸದಾಚಾರ ನಿಯತಾಚಾರ ಗಣಾಚಾರವೆಂದು ಆಚಾರ ತ್ರಿವಿಧವು ಅವರಲ್ಲಿ:

ಆವುದಾನೊಂದು ತನ್ನ ಸನ್ಮಾರ್ಗದಿಂ ಸಕಲಶರಣರ್ಗೆ ಸಂತೋಷಮಹುದೇ ಸದಾಚಾರ, ಭಕ್ತಿಯಿಂ ತಾನು ಪಿಡಿದ ಆಚಾರಮಂ ಪ್ರಾಣಾಂತಮಾಗಿ ನಡೆಸೂದೆ ನಿಯತಾಚಾರ, ಶಿವ ಮಾಹೇಶ್ವರ ನಿಂದಕರುಗಳಂ ಶಿಕ್ಷಿಸುವೆನೆಂಬುದೇ ಗಣಾಚಾರಚಕ್ಕುಂ ೨೬೪

ತ್ರಿವಿಧ ಗುರುಲಿಂಗ :

ಬಳಿಕ, ದೀಕ್ಷೆ ಶಿಕ್ಷೆ ಸ್ವಾನುಭಾವವೆಂದು ಗುರುಲಿಂಗ ತ್ರಿವಿಧವು ಆವರಲ್ಲಿ :

೧. ಆಗಮೋಕ್ತವಿಧಾನದಿಂ ಕುಂಡ ಮಂಡಲಾದಿರಚನೆಗಳಿಂ, ಷಡ್ವಿಧ ಶುದ್ಧಾದಿಗಳಂ ಮಾಳ್ಪುದೇ ದೀಕ್ಷೆಯೆನಿಸೂದು,
೨. ಜಂಗಮವೆಂಬಿದು ಮೊದಲಾದ ಸಮ್ಯಜ್ಞಾನವು ಸತ್ಪುಷರುಗಳಿಂದಹುದೆ ಶಿಕ್ಷೆಯೆನಿಸೂದು.
೩. ಪೂರ್ವಜನ್ಮ ಸಂಸ್ಕಾರ ಬಲದಿಂ ಭಕ್ತಿಜ್ಞಾನಾದಿಕಂ ತಾನೆ ತೋರ್ಪುದೇ ಸ್ವಾನುಭಾವಮಕ್ಕುಂ. ೨೬೫

ತ್ರಿವಿಧ ಶಿವಲಿಂಗ :

ಬಳಿಕ ಇಷ್ಟಲಿಂಗ ಪ್ರಾಣಲಿಂಗ ತೃಪ್ತಿ (ಭಾವ) ಲಿಂಗವೆಂದು ತ್ರಿವಿಧವು.

೧. ಶ್ರೀ ಗುರುವು ಶಿವದೀಕ್ಷೆಯಿಂದ ಇತ್ತುದೇ ಇಷ್ಟಲಿಂಗವೆನಿಸೂದು,
೨. ದೇಹಗುಣವ್ಯಾಪ್ತಿಯಂ ಬಿಟ್ಟು ಶಿವ ಲಿಂಗಸ್ವರೂಪದಲ್ಲಿ ಮನವಂ ಮುಟ್ಟೂದೇ ಪ್ರಾಣಲಿಂಗ ವೆನಿಸೂದು

೩. ಸಕಲಾವಸ್ಥೆಗಳಲ್ಲಿಯೂ ಶಿವಲಿಂಗದೊಡನೆ ಅನನ್ಯ ಭಾವನೆಯೇ ತೃಪ್ತಿಲಿಂಗವೆನಿಸೂದು. ೨೬೬

ಜಂಗಮಲಿಂಗ ತ್ರಿವಿಧ :

ಬಳಿಕ, ಸ್ವಯಲಿಂಗ ಚರಲಿಂಗ, ಪರಲಿಂಗವೆಂದು ಜಂಗಮಲಿಂಗ ತ್ರಿವಿಧವು

೧. ಶಿವಲಾಂಛನಮಂ ಧರಿಸಿ ತಾನೇ ಲಿಂಗವೆಂದರಿದು ಬಾಹ್ಯಕರ್ಮ ಪರಿತ್ಯಾಗದಿಂದ ಸದಾ ಆನಂದಿಯಾಗಿಹುದೇ ಸ್ವಯಲಿಂಗವೆನಿಸೂದು.

೨. ಶಿವಲಿಂಗದೊಡನೆ ಸರ್ವೇಂದ್ರಿಯಂಗಳು, ಎರಕಮಾಗಿ ಭೇದ ಭ್ರಾಂತಿ ಮರಳಿಪುಟ್ಟದೆ ನಿಜಾನಂದದಿಂ ಸ್ವೇಚ್ಛೆಯಿಂ ವಿಹರಿಪುದೇ ಚರಲಿಂಗವೆನಿಸೂದು,

೩. ಸ್ಥಾವರ ಜಂಗಮಾದಿ ಸಕಲಕ್ಕೆ ಅಧಿಷ್ಠಾತೃ ತಾನಪ್ಪುದೇ ಪರಲಿಂಗಮಕ್ಕುಂ, ೨೬೭

ತ್ರಿವಿಧ ಪ್ರಸಾದಲಿಂಗ :

ಬಳಿಕ, ಶುದ್ಧ ಸಿದ್ಧ ಪ್ರಸಿದ್ಧವೆಂದು ಪ್ರಸಾದಲಿಂಗ ತ್ರಿವಿಧವು.

I ೧. ಗುರುಭುಕ್ತ ಶೇಷವೇ ಶುದ್ಧವೆನಿಸೂದು

೨. ಲಿಂಗಭುಕ್ತ ಶೇಷವೇ ಸಿದ್ಧವೆನಿಸೂದು

೩. ಜಂಗಮಭುಕ್ತ ಶೇಷವೇ ಪ್ರಸಿದ್ಧವೆಸೂದು

II ೧. ಪೂರ್ವಸಕಲಕರ್ಮಗುಣಂಗಳಂ ತ್ಯಜಿಸಿ ಕಾಮಾದಿಗಳಂ ಬಿಟ್ಟು ಲಿಂಗಾಣತಿವಿಡಿದಿಹುದೇ ಶುದ್ಧವೆನಿಸೂದು.

೨. ಶಿವಜ್ಞಾನೋದಯಮಾದುದೇ ಸಿದ್ಧವೆನಿಸೂದು,

೩. ಶಿವೋಹಂ ಭಾವ ನಿಶ್ಚಲೀಕೃತಮಾದುದೇ ಪ್ರಸಿದ್ಧಮಕ್ಕುಂ ೨೬೮

ತ್ರಿವಿಧ ಮಹಾಲಿಂಗ :

ಬಳಿಕ, ಪಿಂಡಜಲಿಂಗ, ಅಂಡಜಲಿಂಗ, ಬಿಂದ್ವಾಕಾಶಮೆಂದು ಮಹಾಲಿಂಗ ತ್ರಿವಿಧವು.

೧. ದೇಹವೇ ದೇಗುಲ, ಆತ್ಮವೇ ಲಿಂಗನೆಂಬ ನಿಶ್ಚಯವೇ ಪಿಂಡಜಲಿಂಗವೆನಿಸೂದು,

೨. ಭೂಮಿಯೇ ಪೀಠ, ಆಕಾಶವೇ ಲಿಂಗವೆಂಬ ವಿಕಲ್ಪರಹಿತ ಭಾವನೆಯೇ ಅಂಡಜಲಿಂಗವೆನಿಸೂದು

೩. ಆಕಾಶವೇ ತನ್ನೊಡನೆ, ತನ್ನೊಡನೆ ಆಕಾಶವನೆ ಅನ್ಯೋನ್ಯವ್ಯಾಪ್ತಿಗೆಯ್ದು ಅನುಸಂಧಾನಿಸುವುದೆ ಬಿಂದ್ವಾಕಾಶಲಿಂಗಮಕ್ಕುಂ ೨೬೯

ಆಚಾರ ಲಿಂಗ ಷಡ್ಭಕ್ತರು :

ಮತ್ತಂ ಆ ಭಕ್ತನ ಆಚಾರಾದಿ ಷಡ್ವಿಧ ಲಿಂಗಂಗಳಲ್ಲಿ, ವರ್ತನಾಬೇದದಿಂದ ಆರಾರಾಗಿ ಮೂವತ್ತಾರು ತೆರನಾಗಿರ್ಪನು; ಅದೆಂತೆಂದೊಡೆ :

ಆಚಾರಲಿಂಗಮೋಹಿ, ಆಚಾರಲಿಂಗಭಕ್ತನು, ಆಚಾರಲಿಂಗಪೂಜಕನು; ಆಚಾರಲಿಂಗವೀರನು, ಆಚಾರಲಿಂಗಪ್ರಸಾದಿ, ಆಚಾರಲಿಂಗಪ್ರಾಣಿ ಎಂದು ಆಚಾರಲಿಂಗದಲ್ಲಿ ಷಡ್ವಿದ ಲಿಂಗವು.

ಅವರೊಳಗೆ :

೧. ಆಚಾರ ಹೀನರಾದ ಸ್ತ್ರೀಪುತ್ರಾದಿಗಳಂ ಬಿಟ್ಟು ನಿರ್ಮೋಹಿಯಾಗಿಪ್ಪಾತನೇ ಆಚಾರಲಿಂಗಮೋಹಿ.

೨. ಶಿವಾಚಾರಕ್ಕೆ ವಿರುದ್ಧಮಾದ ತನ್ನ ಪೂರ್ವಾಚಾರಮಂ ಬಿಟ್ಟಾತನೆ ಆಚಾರಲಿಂಗಭಕ್ತ.

೩. ಅನ್ಯದೇವತಾ ಭಜನೆಯನುಳಿದು ಲಿಂಗಾರ್ಚನಾ ತತ್ಪರನೇ ಆಚಾರಲಿಂಗಪೂಜಕನು.

೪. ತಾನು ಪಿಡಿದ ಆಚಾರವಮಂ ಪ್ರಾಣತ್ಯಾಗವಾದರೂ ಬಿಡದಾತನೇ ಆಚಾರಲಿಂಗವೀರನು.

೫. ಶುಚಿತ್ವ ಅಶುಚಿತ್ವಾದಿ ಸಂಕಲ್ಪರಹಿತನೇ ಆಚಾರಲಿಂಗ ಪ್ರಸಾದಿ.

೬. ಶಿವಮಾಹೇಶ್ವರರ ನಿಂದೆಗಳನಾಡದೆ, ಆಲಿಸದಿಪ್ಪವನೆ ಆಚಾರಲಿಂಗ ಪ್ರಾಣಿ ಎನಿಸಿಕೊಳ್ವಂ. ೨೭೦

ಗುರುಲಿಂಗ ಷಡ್ಭಕ್ತರು :

ಬಳಿಕ,

೧. ಮಾತಾಪಿತೃಗಳಲ್ಲಿ ಮೋಹಂಗಳಂ ಬಿಟ್ಟು ಗುರುವಿನಲ್ಲಿ ಪ್ರೀತನೇ ಗುರುಲಿಂಗಮೋಹಿ.

೨. ಬಂಧುಗಳ ಉಪಚಾರವನುಳಿದು ಗುರುವಿನೊಳು ಅನುರಾಗ ಉಳ್ಳನೇ ಗುರುಲಿಂಗ ಭಕ್ತನು.

೩. ಬೇರೊಂದು ಪೂಜೆಯನೊಲ್ಲದೆ ಗುರುಭಜನಾನ್ವಿತನೇ ಗುರುಲಿಂಗ ಪೂಜಕನು.

೪. ಅನ್ಯಮಾರ್ಗಂ ತ್ಯಜಿಸಿ, ಗುರೂಕ್ತಿಮಾರ್ಗವರ್ತಿಯೇ ಗುರುಲಿಂಗ ವೀರನು.

೫. ಗುರುವಿನ ಆಜ್ಞಾವಶಂಗತನೇ ಗುರುಲಿಂಗ ಪ್ರಸಾದಿ.

೬. ಅನ್ಯಸೇವೆಯನು ಉಲ್ಲಂಘಿಸಿ ಗುರುಸೇವಾ ರತನೇ ಗುರುಲಿಂಗಪ್ರಾಣಿ ಎನಿಸಿಕೊಳ್ವಂ. ೨೭೧

ಶಿವಲಿಂಗಷಡ್‌ಭಕ್ತನು :

೧. ಅನ್ಯಮೋಹವಿಲ್ಲದಾತನೇ ಶಿವಲಿಂಗಮೋಹಿ

೨. ಅನ್ಯದೈವ ನಿರಾಸಕನೇ ಶಿವಲಿಂಗಭಕ್ತನು

೩. ಅನ್ಯದೈವಭಜನೆ ಇಲ್ಲದಾತನೇ ಶಿವಲಿಂಗಪೂಜಕನು.

೪. ಅನ್ಯಪುಣ್ಯಕ್ಷೇತ್ರ ಯಾತ್ರಾದಿಗಳನುಳಿದಾತನೇ ಶಿವಲಿಂಗವೀರನು

೫. ಸುಖದುಃಖಾದಿಗಳಂ ಸೈರಿಸುವಾತನೇ ಶಿವಲಿಂಗಪ್ರಸಾದಿ.

೬. ಸ್ತ್ರೀ ಸಂಭೋಗಾದಿಕಮಿಲ್ಲದಾತನೇ ಶಿವಲಿಂಗ ಪ್ರಾಣಿಯೆನಿಸಿಕೊಳ್ವಂ. ೨೭೨

ಜಂಗಮಲಿಂಗಷಡ್ಭಕ್ತರು :

೧. ತನ್ನಪೂರ್ವಾಚಾರಂಗಳಂ ನಿಷೇಧಿಸಿದಾತನೇ ಜಂಗಮಲಿಂಗ ಮೋಹಿ.

೨. ಜಾತಿಕುಲ ಅಭಿಮಾನಮಂ ನೇತಿಗಳೆದಾತನೇ ಜಂಗಮಲಿಂಗ ಭಕ್ತನು.

೩. ಅನ್ಯಾರ್ಚನೆಗೆ ಎಳಸದಾತನೆ ಜಂಗಮಲಿಂಗಪೂಜಕನು.

೪. ಅರ್ಥಪ್ರಾಣಾದಿಗಳಂ ಜಂಗಮಕಿತ್ತು ಮರಳಿ ಮೋಹಿಸದಾತನೇ ಜಂಗಮಲಿಂಗವೀರನು.

೫. ಜಂಗಮಕ್ಕೆ ಸಕಲದ್ರವ್ಯಂಗಳಂ ಕೊಟ್ಟಲ್ಲದೆ ಕೊಳ್ಳದಾತನೆ ಜಂಗಮಲಿಂಗಪ್ರಸಾದಿ.

೬. ಜಂಗಮವೇ ಸಾಕ್ಷಾತ್ ಶಿವನೆಂಬ ವಿಶ್ವಾಸಿಯೇ ಜಂಗಮಲಿಂಗಪ್ರಾಣಿಯೆನಿಸಿಕೊಳ್ವಂ. ೨೭೩

ಪ್ರಸಾದಲಿಂಗ ಷಡ್ಭಕ್ತರು :

ಬಳಿಕ;

೧. ಅನ್ಯರುಚಿಯನರಿಯದಾತನೇ ಪ್ರಸಾದಲಿಂಗಮೋಹಿ

೨. ಪೂರ್ವಾಹಾರಂಗಳಂ ಬಿಟ್ಟಾತನೇ ಪ್ರಸಾದಲಿಂಗ ಭಕ್ತನು.

೩. ಅನ್ಯಜನರೊಡನೆ ಸ್ನೇಹ ಸಂಭಾಷಣ, ದಾನ ಪ್ರತಿಗ್ರಹಗಳಿಲ್ಲದಾತನೇ ಪ್ರಸಾದಲಿಂಗ ಪೂಜಕನು.

೪. ಅನ್ಯದ್ರವ್ಯಾದಿಗಳಂ ಕೈಯಿಂ ಮುಟ್ಟದೆ ಇರ್ಪನೆ ಪ್ರಸಾದಲಿಂಗ ವೀರನು.,

೫. ಜೀವ ಹಿಂಸಾದಿಗಳನೆಲ್ಲಿಯೂ ಮಾಡದೆ, ಮಾಡಿಸದಾತನೇ ಪ್ರಸಾದಲಿಂಗ ಪ್ರಸಾದಿ,

೬. ಆತ್ಮನಿಗ್ರಹಂಮಂ ಮಾಡದಾತನೆ ಪ್ರಸಾದಲಿಂಗ ಪ್ರಾಣಿಯೆನಿಸಿಕೊಳ್ವಂ. ೨೭೪

ಮಹಾಲಿಂಗಷಡ್ಭಕ್ತರು :

ಬಳಿಕ;

೧. ಲೋಕವೃತ್ತಾಂತಮಂ ನೆನೆಯದಾತನೇ ಮಹಾಲಿಂಗಮೋಹಿ.

೨. ಪೂರ್ವಭಕ್ತ್ಯಾದಿ ಅನುಸಂಧಾನವಿಲ್ಲದಾತನೇ ಮಹಾಲಿಂಗಭಕ್ತನು.

೩. ಅಜ್ಞಾನಿಗಳೊಡನೆ ಸಂಗ ಸಂಭಾಷಣಾದಿಗಳಂ ಮಾಡದಾತನೆ ಮಹಾಲಿಂಗಪೂಜಕನು.

೪. ಉತ್ಪತ್ತಿ ಸ್ಥಿತಿ ಲಯಂಗಳಲ್ಲಿಯು ಚಿಂತಿಸದಾತನೇ ಮಹಾಲಿಂಗವೀರನು.

೫. ಪಙ್ತಿ ಭೋಜನಾದಿಕವನು ಉಳಿದಾತನೇ ಮಹಾಲಿಂಗಪ್ರಸಾದಿ

೬. ಬಾಹ್ಯದ ಅರ್ಚನೆ ಅರ್ಪಣಾದಿಕವನು ಒಲ್ಲದ ಅಂತರಂಗ ಕ್ರಿಯಾನಿಷ್ಠನೇ ಮಹಾಲಿಂಗಪ್ರಾಣಿಯೆನಿಸಿಕೊಳ್ವಂ. ೨೭೫

ನೂರೊಂದು ಸ್ಥಲ :

ಬಳಿಕ, ಇಂತು ಷಟ್‌ಸ್ಥಲ ಭೇದೋಪಭೇದಂಗಳನು ಆರೈದು ವರ್ತಿಸುವಲ್ಲಿ ಪಿಂಡಾದಿ ಜ್ಞಾನಶೂನ್ಯಾಂತಮಾದ ಏಕೋತ್ತರಶತಸ್ಥಲ ಕ್ರಮವಾಗಿಹುದು. ಆ ನೂರೊಂದು ಸ್ಥಲಂಗಳೊಳಗೆ ಮೊದಲು ಲಿಂಗಸ್ಥಲ ನಾಲ್ವತ್ತನಾಲ್ಕು ಎನಿಸಿ ಮೇಲೆ ಲಿಂಗಸ್ಥಲ ಐವತ್ತೇಳೆನಿಸಿಕೊಂಬವು. ಅವರೊಳಗೆ ಲಿಂಗಸ್ಥಲ ನಾಲ್ವತ್ತನಾಲ್ಕು ಭಕ್ತಾದಿ ಐಕ್ಯಾಂತಮಾದ ಲಿಂಗಸ್ಥಲವು ಆರಕ್ಕೆ ಕ್ರಮದಿಂ ಹಸಿಗೆಯಾಗಿಹವು. ಮತ್ತೆ ಆ ಅಂಗಸ್ಥಲ ಐವತ್ತೇಳು ಆಚಾರಾದಿ ಮಹಾಲಿಂಗಾಂತಮಾದ ಆರು ಲಿಂಗಸ್ಥಲಗಳಿಗೆ ಪರಿವಿಡಿದು ವಿಭಾಗಪಡೆದು, ಕ್ರಮದಿಂ ಭಕ್ತಾದಿ ಐಕ್ಯಾಂವಾದ ಆರು ಸ್ಥಲಂಗಳ ತನುತ್ರಯದ ಮೇಲೆ ಲಿಂಗತ್ರಯಾನುಗುಣ್ಯಮಾಗಿ ವರ್ತಿಸುತ್ತಪ್ಪವು ಎಂದು ಇಂತು ಲಿಂಗಾಂಗ ಸ್ಥಲಕುಳಸಂಬಂಧ ವಿಚಾರಮುಖದಿಂ, ಗುರು ಲಿಂಗ ಜಂಗಮಕ್ಕೆ ತನು ಮನ ಧನಂಗಳಂ ವಂಚಿಸದಾತನಾಗಿ ಸಕಲ ಸದಾಚಾರ ಸಂಪನ್ನನಾಗಿ ಭಕ್ತಸ್ಥಲವನು ಅಂಗಂಗೊಂಡು ಇರ್ಪಾತನೇ ವಿಶೇಷ ವೀರಶೈವನಪ್ಪಂ. ೨೭೩

ನಿರಾಭಾರಿವೀರಶೈವ ವಿಷಯ :

ಮರಳಿ, ಗೃಹಾದಿ ಸರ್ವಸಂಸಾರಸೌಖ್ಯ ಪರಿಗ್ರಹಂಗಳಂ ಬಿಟ್ಟು, ವಿದ್ಯೆಯೇ ಸತಿ, ಸಂತೋಷವೇ ಸುತನು, ವಿರಾಗವೇ ಬಂಧು, ಕ್ಷಮೆಯೇ ಪರಿಚಾರಕನು, ಶಾಂತಿಯೇ ಸಖನು, ಭಕ್ತಿಯೇ ಮಾತೆ, ಆಚಾರವೇ ತಂದೆ, ಸತ್ಯವೇ ಸುತೆ, ಶ್ರದ್ಧೆಯೇ ಸೊಸೆ, ಮೈತ್ರಾದಿ ಸದ್ಗುಣವೇ ಪೌತ್ರರು, ಜ್ಞಾನವೇ ದೇಹ, ವಿಚಾರವೇ ಕ್ಷೇತ್ರ, ಅಹಿಂಸೆಯೇ ದಾಸಿ, ಅಸ್ತೇಯವೇ ದಾಸನು, ಧರ್ಮವೇ ವಾಹನ, ದಯೆಯೇ ಆಚಾರ್ಯನು, ಮುಕ್ತಿಯೇ ದೇಶಮೆಂಬ ಈ ಪರಮಾರ್ಥಮಾದ ಕುಟುಂಬಮುಳ್ಳಾತನಾಗಿ;

ಕಂಥೆ ದಂಡ ಕಮಂಡಲು ಭಿಕ್ಷಾಪಾತ್ರೆ ಭಸ್ಮಘುಟಿಕೆಯೆಂಬ ಬಾಹ್ಯದ ಪಂಚಮುದ್ರೆಗಳಂ ಆಯಾ ಮಂತ್ರಪೂರ್ವಕಮಾಗಿ ಧರಿಸಿ, ಅಂತರಂಗದಲ್ಲಿ, ಸಮತೆಯೇ ಕಂಥೆ, ಜ್ಞಾನವೇ ದಂಡ, ದಯುವೇ ಕಮಂಡಲು, ವೈರಾಗ್ಯವೇ ಭಿಕ್ಷಾಪಾತ್ರೆ, ಕ್ಷಮೆಂಯೇ ಭಸ್ಮಘಟಿಕೆಗಳುಳ್ಳಾತನಾಗಿ;

ತುರುಬು ಜಡೆ ಬೋಳು ಅಜಿನ ವಲ್ಕ ದಿಗಂಬರಾದಿ ವಿಚಿತ್ರ ಶಿವವೇಷಗಳನಾದರೂ ಸ್ವೀಕರಿಸಿ;

ನಿಯತಮಾದ ಭಿಕ್ಷಾಹಾರಮಂ ಕೊಂಡು; ಭಸ್ಮೋದ್ಧೂಳನ ತ್ರಿಪುಂಡ್ರಧಾರಣ ಶಿವಲಿಂಗಾರ್ಚನ ಶಿವಮಂತ್ರಜಪ ಸ್ಥಲಕುಳವಿಚಾರ ಲಿಂಗಾಂಗ ಸಂಯೋಗಾದಿ ಜ್ಞಾನ ಕ್ರಿಯಾಸಂಪನ್ನನಾಗಿ,

ರಸ–ರಸಾಯನ ವಾದ ವಶ್ಯ ಜೋತಿಷ ಕ್ರಯ ವಿಕ್ರಯಾದಿ ಲೌಕಿಕ ವ್ಯವಹಾರಂಗಳಂ ಬಿಟ್ಟು, ವನಿತಾದಿ ವಿಷಯ ವಿರಕ್ತನಾಗಿ;

ಬಳಿಕ ಈ ಭವಾರಣ್ಯಾ ಮಧ್ಯದ ಲೋಭಮೆಂಬ ಪಂಕಮಂ ಪುಗದೆ, ಇಂದ್ರಿಯಂಗಳೆಂಬ ರಿಪುಗಳಂ ಲೆಕ್ಕಿಸದೆ, ಮೋಹವೆಂಬ ಪಿಶಾಚಭಯಂದೋರದೆ, ಕ್ರೋಧವೆಂಬ ವ್ಯಾಘ್ರಂಗೆ

ಸಿಲ್ಕದೆ, ಮಮತೆಯೆಂಬ ಸರ್ಪಭೀತಿಯಿಲ್ಲದೆ, ಮನ್ಮಥನೆಂಬ ಚೋರಂಗೆ ಒಣಗಾಗದೆ, ಮದವೆಂಬ ಅಂಧಕಾರದಲ್ಲಿ ಕಣ್ಗೆಡದೆ, ತಾಪತ್ರಯವೆಂಬ ಕುಳಿಯೊಳುಬೀಳದೆ, ವಿಷಯಂಗಳೆಂಬ ಕಂಟಕಂಗಳಂ ಮೆಟ್ಟದೆ, ಅಸೂಯೆಯೆಂಬ ವಿಷಲತೆಯೊಳ್ತೊಡಂಕದೆ ಅಹಂಕಾರಮೆಂಬ ಮಡುವಿನೊಳಗಾಳದೆ, ಸರ್ವಾವಧಾನಿಯಾಗಿ ಜಂಗಮ ಸ್ಥಲವನಂಗಂಗೊಂಡು, ಸಂಚರಿಸುವಾತನೇ ನಿರಾಭಾರಿ ವೀರಶೈವನಪ್ಪಂ ೨೭೭

ಪ್ರಾಣಿಗಳ ತಾರತಮ್ಯ :

ಬಳಿಕ, ಈ ಷಟ್‌ಸ್ಥಲ ಜ್ಞಾನಿಯಾದ ವೀರಶೈವನೇ ಸರ್ವೋತ್ಕರ್ಷನೆಂಬಲ್ಲಿ (ಅದಕ್ಕೆ ದೃಷ್ಟಾಂತಮೆನೆ): ಕ್ರಿಮಿ ಕೀಟ ಪತಂಗ ಜಾತಿಯಂ ಪಶುಗಳಧಿಕ, ಆ ಪಶುಗಳಿಂಮನುಷ್ಯರಧಿಕ, ಆ ಮನುಷ್ಯರಿಂ ದ್ವಿಜರಧಿಕ, ಆ ದ್ವಿಜರಿಂ ವಿಪ್ರರಧಿಕ, ಆ ವಿಪ್ರರಿಂ ಕ್ರತುಬುದ್ಧಿಗಳಧಿಕ, ಆ ಕ್ರತುಬುದ್ಧಿಗಳಿಂ ಕರ್ತಾರರಧಿಕ, ಅವರಿಂ ಸನ್ಯಾಸಿಗಳಧಿಕ, ಆ ಸನ್ಯಾಸಿಗಳಿಂ ಜ್ಞಾನಿಗಳಧಿಕ, ಆ ಜ್ಞಾನಿಗಳಿಂ ಶಿವಾರ್ಚಕರಧಿಕ, ಶಿವಾರ್ಚಕರಿಂ ಲಿಂಗಾಂಗ ಸಂಗಿಗಳಧಿಕ, ಆ ಲಿಂಗಾಂಗಸಂಗಿಗಳಿಂ ಷಟ್‌ಸ್ಥಲಜ್ಞಾನಿಗಳಧಿಕ ಆಷಟ್‌ಸ್ಥಲಜ್ಞಾನಿಗಳಿಗೆಯು ಮೂರುಲೋಕದಲ್ಲಿಯೂ ಸಮಾನವಿಲ್ಲಾಗಿ ಮುಮುಕ್ಷುಗಳಿಂದ ಆ ಷಟ್‌ಸ್ಥಲಜ್ಞಾನಿಗಳಾದ ವೀರಶೈವರೇ ವಂದಿಸಲು, ಪೂಜಿಸಲು ಯೋಗ್ಯರಹುದೆಂಬಿವು ಮೊದಲಾದವೆಲ್ಲವಂ ಕ್ರಿಯಾಪಾದದಲ್ಲಿ ಪ್ರತಿಪಾದ್ಯಮಕ್ಕುಂ, ೨೭೮

ಚರ್ಯಾಪಾದ :

ಮತ್ತಂ ಚರ್ಯಾಪಾದದಲ್ಲಿ ಪ್ರಯಶ್ಚಿತ್ತ ಪವಿತ್ರಾರೋರಣ, ಉಮಾಮಹೇಶ್ವರ ಲಕ್ಷಣ, ಸ್ಕಂದನಂದ್ಯಾದಿ ಗಣೇಶ್ವರರಲಕ್ಷಣ, ಜಪಮಾಲಾಲಕ್ಷಣ, ಸಕಲಾಶ್ರಮ ಲಕ್ಷಣಾದಿಗಳೆಲ್ಲಂ ಪ್ರತಿಪಾದ್ಯಂಗಳು, ಅವರೊಳಗೆ ಆಶ್ರಮ ಧರ್ಮಂಗಳಂ ಪುರಾಣಾಗಮಾದಿ ರೀತಿಯಿಂ ಪ್ರತಿಪಾದಿಸುವೆಂ. ಅದೆಂತೆಂದೊಡೆ: ೨೭೯

ಆಶ್ರಮಚತುಷ್ಟಯ :

ದಧೀಚಿ ಗೌತಮ ಅಗಸ್ತ್ಯ ದೂರ್ವಾಸರೆಂಬ ಋಷಿಚತುಷ್ಟಯಕ್ಕೆ ಕ್ರಮದಿಂದ ಅನುಮತವಾದ ಬ್ರಹ್ಮ ವಿಷ್ಣು ಸೂರ್ಯ ಮಹೇಶ್ವರರೆಂಬವರೆ ಪರಿವಿಡದ ಅಧಿದೇವತೆಯಾದ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಯತಿಗಳೆಂಬರೆ ಚತುರಾಶ್ರಮಿಗಳು ಅವರಲ್ಲಿ:

ಬ್ರಹ್ಮಚರ್ಯಾಶ್ರಮ :

ಶಿಖಾ ಯಜ್ಞೋಪವೀತಿಯಾಗಿ, ಕಟಿಸೂತ್ರ, ಕಾಷಾಯಾಂಬರ, ಶುಭ್ರವಸ್ತ್ರ, ಕೃಷ್ಣಾಜಿನ, ಪಾಲಾಶಾದಿ ದಂಡ ಭಸ್ಮಧಾರಣಾದಿಗಳಂ ಸೂತೋರ್ಕ್ತ ಮಂತ್ರಂಗಳಿಂ ಧರಿಸಿ, ಏಕಕಾಲಸ್ನಾನ ಉದಯಾಸ್ತಮಾನ ಸಂಧ್ಯಾವಂದನೆ, ಪಿತೃಮಾತೃಸೇವೆ, ಬಂಧುಬಾಂಧವ ಮೈತ್ರಿ, ಗುರುದೇವತಾಭಕ್ತಿ, ವಿದ್ವಜ್ಜನೋಪಾಸ್ಥೆ, ಪುಷ್ಪಪತ್ರಾದಿಕದಿಂದಗ್ನಿಕಾರ್ಯ,

ನಿತ್ಯನೈಮತ್ತಿಕಾದಿ ಕರ್ಮ, ವಿಶ್ವಾಸಂಗಳನುಳ್ಳಾತನಾಗಿ, ತಾಂಬೂಲ ಚರ್ವಣಮಂ ತ್ಯಜಿಸಿ, ಕಾಮಕ್ರೋದಾಧಿಗಳಂ ಬಿಟ್ಟು, ಬ್ರಾಹ್ಮಣಜಾತಿಯಲ್ಲೇ ಆಗಲಿ, ಅಲ್ಲಾಮತ್ತೆ ಕ್ಷತ್ರಿಯ ವೈಶ್ಯರಲ್ಲಿಯಾಗಲಿ 'ಭವತಿ ಭಿಕ್ಷಾಂ ದೇಹಿ' ಎಂದು ಭಿಕ್ಷಾನ್ನಮಂ ಯಾಚಿಸಿ ತಂದು. ಬಳಿಕ ಕರಚರಣಾದಿಗಳೂ ತೊಳೆದು, ದ್ವಿರಾಚಮನಂಗೆಯ್ದು, ಮೇಲೆ ಆ ಭಿಕ್ಷಾನ್ನಮಂ ತನ್ನ ಶ್ರಿ ಗುರುವಿಂಗೆ ಸಮರ್ಪಿಸಲಿತ್ತು, ಮರಳಿ ತದನುಜ್ಞೆಯಿಂ ತಾನು ಪೂರ್ವೋತ್ತರದೊಳೊಂದು ದಿಙ್ಮುಖನಾಗಿ ಕುಳ್ಳಿರ್ದು "ಪ್ರಾಣಾಯ ಸ್ವಾಹಾ...."ಎಂಬುದು ಮೊದಲಾದ ಮಂತ್ರಗಳಿಂ ಕಬಳ ಗಣನೆಯಿಲ್ಲದೆ ಯಥೇಷ್ಟಮಾಗಿ ಭೋಜನಂಗೈದು, ಸದಾ ವೇದಾಧ್ಯಯನತತ್ಪರನಾಗಿ, ಉಳಿದ ಮಂತ್ರಾನುಷ್ಠಾನವನುಳಿದು, ಲೌಕಿಕ ವೈದಿಕ ಅಧ್ಯಾತ್ಮಿಕಾದಿ ಶಾಸ್ತ್ರಾಭ್ಯಾಮವನಾದೊಡಂ ಮಾಡುತ್ತೆ, ಜಿತೇಂದ್ರಿಯತ್ವಾದಿ, ಸದ್ಗುಣ ಸಂಪನ್ನನಾಗಿ, ಗಾಯತ್ರಿಬ್ರಹ್ಮಚಾರಿ, ಪ್ರಜಾಪತ್ಯ ಬ್ರಹ್ಮಚಾರಿ, ವೈದಿಕ ಬ್ರಹ್ಮಚಾರಿ, ನೈಷ್ಠಿಕ ಬ್ರಹ್ಮಚಾರಿಯೆಂದು ನಾಲ್ಕು ತೆರನಾಗಿರ್ಪಾತನೇ ಬ್ರಹ್ಮಚಾರಿಯಪ್ಪಂ ೨೮೦

ಗೃಹಸ್ಥಾಶ್ರಮ :

ಮತ್ತಂ, ಆ ಬ್ರಹ್ಮಚರ್ಯಾಶ್ರಮದಲ್ಲಿ ವೇದಾಧ್ಯಯನಾದಿಕಮಂ ಲೇಸಾಗೆ ಮಾಡಿದ ಬ್ರಹ್ಮಚಾರಿಯು, ತನಗೆ ವಿರಾಗತೆಪುಟ್ಟೆ ವಾನಪ್ರಸ್ಥಾಶ್ರವನಾದರೂ, ಯತ್ಯಾಶ್ರಮವನಾದರೂ ಸ್ವೀಕರಿಸೂದು, ಇಲ್ಲವೆ, ರಾಗಮುಕ್ತನಾದೊಡೆ ಆಚಾರ್ಯನ ಆಜ್ಞೆಯಿಂದ ಬ್ರಹ್ಮಚರ್ಯಾಶ್ರಮವನುಳಿದು ಸ್ವಜಾತಿಯಲ್ಲಿಯೇ ಕನ್ನಿಕೆಯಂ ತರುವಲ್ಲಿ ಶಕುನಾದಿಕಮಂ ಪರೀಕ್ಷಿಸಿ, ೨೮೧

ಕನ್ಯಾದುರ್ಲಕ್ಷಣ :

ಬಳಿಕ ಮರ ಪಕ್ಷಿ ತೊರೆ ತಿಪ್ಪೆ ಗಿರಿವೆಸರುಳ್ಳ, ಬಲುದೋರೊಡಲ, ಉರುಗಿದಂಗದ, ನೆರೆ ದೀರ್ಘದೇಹದ, ಕಡುಗಿಡ್ಡಿಯ, ಕೆಂಚುತಲೆಗೂದಲಿ, ತರಟುದಲೆಯ, ಬಂಗುಮೊಗದ, ಕುಳಿಕಣ್ಣ, ಕೆಂಗಣ್ಣ, ನಪ್ಪೆಮೂಗಿವ, ಮೊರಗಿವಿಯ, ಜೋಲ್ದುಟಿಯ, ಉರುಗಾಗಿ ತೆರಪಾದ ಹೊರಹಲ್ಲ, ಕುಸಿಗೊರಲ, ಹೆಚ್ಚು ಕುಂದಾದ ಕುಚದ, ನೇರವಲ್ಲದ ತೋಳ, ಕೈ ವೆರಳ, ಸುರೇಖೆಯಿಲ್ಲದ ಕರದ, ಚಿಬ್ಬು ಕಂಕುಳಿನ, ಉದ್ದವಾದ ಉಬ್ಬಿದ ಬೆನ್ನ, ಮೈನವಿರುಳ್ಳ ಕಾಲ ಸೆರೆಯ, ಕಾಲ್ಬೆರಳು ನೇರವಿಲ್ಲದ, ಕಿರುಕುಣಿಕೆ ನೆಲವಂ ಮುಟ್ಟದ ನೆಲನದಿರೆ ನಡೆವ, ಹೆದ್ದನಿಯ, ಉಣುತ್ತ ಅಳುತ್ತ ಕೊರಗುವ, ತೊಕಡಿಸುವ, ಹೀನಸ್ವರದ ಶೀಘ್ರಗೆಲಸವರಿಯದ, ಜಗಳಗಂಟಿಯ, ಚತುರತೆಯಿಲ್ಲದವಳಂ ಬಿಟ್ಟು, ೨೮೨

ಕನ್ಯಾಲಕ್ಷಣ :

ಬಳಿಕ, ನೆಲೆಯಾದ ಅಸಿಯೊಡಲ, ನೀಲಗುರುಳ, ಬಟ್ಟಮೊಗದ, ಬಗಸೆಗಣ್ಣ, ನೇರಿತ್ತಾದ ನಾಸಿಕದ, ಕಿರುವಾಯ, ರಂಗುದುಟಿಯ, ಸಸಿನಮಾದ ದಂತ ಪಙ್ತೆಯ, ಕಂಬುಗ್ರೀವದ, ನಿಡುದೋಳ, ಕರತಳದಲ್ಲಿ ಅಂಕುಶ ಶಂಖ ಧ್ವಜ ಪದ್ಮಾದಿ ಸುರೇಖೆಗಳನುಳ್ಳ ಸಣ್ಣವೆರಳ್ಗಳ, ಸಮಾನವಾದ ಕುಚದ, ಮೈನವಿರಿಲ್ಲದ ತೆಳುವಸುರ

ಬಡನಡುವಿನ, ವೃತ್ತ ಜಘನದ, ಸುಣ್ಪೊಡೆಯ ಚೆಲುವೆತ್ತ ಕಣಕಾಲ, ಮೃದುಪದದ, ಅಲ್ಪಾಹಾರ ಅಲ್ಪನಿದ್ರೆಗಳನುಳ್ಳ, ಶೀಘ್ರಗೆಲಸದ ಸುಸ್ವರದ, ಕಲಹವರಿಯದ ಕಡುಜಾಣೆಯಾದ ಸರ್ವಲಕ್ಷಣ ಸಂಪನ್ನೆಯಪ್ಪ ಸಚ್ಚರಿತ್ರಮುಳ್ಳ ಸತಿಯಂ ಸೂತ್ರೋಕ್ತ ಪ್ರಕಾರದಿಂ ವಿವಾಹಮಾಗಿ, ೨೮೩

ಶೈವ ನಿತ್ಯ ಕರ್ಮವಿಚಾರ :

ಆ ಧರ್ಮಪತ್ನಿ ಸಹಿತನಾಗಿಯೆ ಸಕಲಧರ್ಮಂಗಳನಾಚರಿಸುವಲ್ಲಿ; ಶಿಖಾ ಯಜ್ಞೋಪವೀತ ವೇಣುದಂಡ ಕಮಂಡಲ ದೋತ್ರ ಬಹಿರ್ವಾಸಂಗಳನು ಉಳ್ಳಾತನಾಗಿ, ಪ್ರಾತಃಕಾಲದಲ್ಲಿ ಶಿವಸ್ಮರಣದಿಂದೆದ್ದು, ನಿರ್ಭಯಮಾದ ನಿರ್ಜನ ಪ್ರದೇಶದಲ್ಲಿ ಮೌನಾದಿ ವಿಧಿಗಳಿಂ ಮಲಮೂತ್ರಗಳಂ ತ್ಯಜಿಸಿ, ಗುದಗುಹ್ಯಂಗಳಂ ಮೃತ್ತಿಕೆ ಜಲಂಗಳಿಂ ದುರ್ಗಂಧ ನಿವೃತ್ಯರ್ಥಮಾಗಿ, ಮನಃ ಶುದ್ಧಿ ಪರಿಯಂತರಂ ಶೌಚಂಗೆಯ್ದು, ಬಳಿಕ ಆಚಮನಂಮಾಡಿ ಅಪಾಮಾರ್ಗಾದಿಗಳಿಂ ದಂತದಾವನಂಗೆಯ್ದು, ಮೇಲೆರಡುವೇಳೆ ಆಚಮನಂ ಮಾಡಿ ಇಂತು, ಮಲಸ್ನಾನಾಂತರದಲ್ಲಿ ತ್ರಿಕಾಲದಲ್ಲಿಯೂ ವಿಧಿಸ್ನಾನಂ ತಪ್ಪದೆ ತ್ರಿಯಂಬಕ ಮಂತ್ರ, ಮೂಲಮಂತ್ರಗಳಿಂ ಕ್ರಮದಿಂ ಭಸ್ಮೋದ್ಧೂಳನ ತ್ರಿಪುಂಡ್ರಧಾರಣಂ ಮಾಡಿ, ರುದ್ರಾಕ್ಷಮಾಲೆಗಳಂ ಮಸ್ತಕಾದಿ ಸ್ಥಾನಂಗಳಲ್ಲಿ ವಿಧ್ಯುಕ್ತಮಾಗಿ ಧರಿಸಿ, ೨೮೪

ಗಾಯತ್ರಿ ಜಪವಿಧಾನ :

ಬಳಿಕ ಪ್ರಾಣಾಯಾಮ ತ್ರಯಮಂ ವಿಸ್ತರಿಸಿ, ಮೇಲೆ ಸಾಂಖ್ಯಾಯನ ಗೋತ್ರನಾದ, ಶ್ವೇತವರ್ಣಮಪ್ಪ, ಪ್ರಣವಪೂರ್ವಕಮಾದ, ಭೂರಾದಿ ಸಪ್ತವ್ಯಾಹೃತಿಯನುಳ್ಳ, ತದಾದಿ ಚತುರ್ವಿಂಶತಿ ಅಕ್ಷರಗಳಿಂದೆಸೆವ, ಬಳಿಕ ವಿಶ್ವಾಮಿತ್ರನೆ ಋಷಿ, ಗಾಯತ್ರಿ ಛಂದಸ್ಸು, ರವಿಯೇ ದೇವತೆ, ಶಿವನಧಿದೇವತೆಯಾಗಿ ಮೆರೆವ,

ಮತ್ತಂ ಆ ಸಪ್ತವ್ಯಾಹೃತಿಗಳಿಗೆಯು, ಚತುರ್ವಿಂಶತಿ ಅಕ್ಷರಂಗಳಿಗೆಯೂ, ಬೇರೆ ಬೇರೆ ಋಷಿ, ಛಂದ, ದೇವತೆ, ವರ್ಣ, ಮುದ್ರೆ ನ್ಯಾಸಾದಿಸಾಂಗಿಕಮಾದ ಪರಶಿವನೇ ತನಗೆ ಅರ್ಥಮಾದ, ಮರಳಿ ನಿತ್ಯ ಪ್ರಾತಃಕಾಲದಲ್ಲಿ ಸಾವಿರಜಪಮಾಗಿ ಇಪ್ಪತ್ತನಾಲ್ಕು ಲಕ್ಷ ಜಪಮಂ ಮಾತಿ, ನಾಲ್ಕು ಸಾವಿರ ಆಜ್ಯಾಹುತಿಯಂ, ಕಲ್ಪೋಕ್ತ ಪ್ರಕಾರದಿಂ ಪುರಶ್ಚರಣ ಜಪಂಗೆಯ್ದು ಅನಂತರದಲ್ಲಿ ಬೇರೆ ಬೇರೆ ಕ್ಷೀರಾದಿ ಹೋಮ ಸಂಖ್ಯಾನಿಯತಮಾದ ಜಪಂಗಳಿಂ.

ಗಾಯತ್ರಿಮೂರ್ತಿ ಸ್ವರೂಪ :

ಸಕಲ ಸಿದ್ಧಿಪ್ರದಮಾದ ಬಳಿಕ ಋಗ್ವೇದ ಯಜುರ್ವೇದ, ಸಾಮವೇದ,ವೆಂಬ ತ್ರಿಪಾದದಿಂದೆಸೆವ, ಪೂರ್ವ, ದಕ್ಷಿಣ ಪಶ್ಚಿಮ ಉತ್ತಜ ಊರ್ಧ್ವ ಅಧಃ, ಎಂಬ ಆರು ಕುಕ್ಷಿಯಿಂದೊಪ್ಪುವ, ಆಕಾಶವೇ ಕುಕ್ಷಿಯೊಳಗು, ಅಷ್ಟಾದಶಪುರಾಣಾನೇ ನಾಭಿ, ಜಗವೇ ಶರೀರ, ವೇದಾಂತ ಶಾಸ್ತ್ರವೇಸೂಕ್ಷ್ಮತನು, ಶಿಕ್ಷಾದೀಕ್ಷಾದಿಗಳೇ ಅಂಗರೋಮಂಗಳು,

ಧರ್ಮವೇ ಹೃದಯ, ಛಂದಂಗಳೇ ಸ್ತನಂಗಳು, ನ್ಯಾಯಸಾಂಖ್ಯೆಂಗಳೇ ಕರ್ಣದ್ವಯಂಗಳು, ಅಗ್ನಿಯೇ ಮುಖ, ಜ್ಯೋತಿಷ್ಯಗಳೇ ನಯನಂಗಳು, ವ್ಯಾಕರಣ, ಶಿಕ್ಷ ಕಲ್ಪ, ನಿರುಕ್ತ, ಜ್ಯೋತಿಷ್ಯವೆಂಬೈದು ಶಿರಂಗಳು, ಬ್ರಹ್ಮನೇ ಮೂರ್ಧ್ನಿ, ರುದ್ರನೇ ಶಿಖಿ, ವಿಷ್ಣುವೇ ಆತ್ಮನು, ಈಶ್ವರನೇ ಅಂತರಾತ್ಮನು, ಮೀಮಾಂಸೆಯೇ ಲಕ್ಷಣ ಅಥರ್ವಣವೇ ಚೇಷ್ಟೆಗಳಾಗುಳ್ಳ, ವೇದಮಾತೆಯಾದ ಗಾಯತ್ರಿಯಾದೊಡೆ, ೨೮೫

ಉದಯಕಾಲ ಗಾಯತ್ರಿ ಧ್ಯಾನ :

ಉದಯಕಾಲದಲ್ಲಿ ನಾಭಿಸ್ಥಾನದ ರಕ್ಷಪದ್ಮಾಸನದಲ್ಲಿ ರಕ್ತವರ್ಣ, ರಕ್ತವಸ್ತ್ರಾಭರಣ, ಗಂಧಮಾಲ್ಯಾದಿಗಳಿಂದ ಅಲಂಕೃತಮಾತಿ, ಚತುರ್ಮುಖ ದ್ವಾದಶಲೋಚನಗಳಿಂ, ದಂಡ ಕಮಂಡಲು, ಅಕ್ಷಮಾಲೆ ಸುರಭಿವಿಡಿದ ವಾಮ ದಕ್ಷಿಣ ಕರಚತುಷ್ಟಯದಿಂ ಹಂಸವಾಹನದಿಂ, ಋಗ್ವೇದಮಯವಾಗಿ ರಜೋಗುಣಾಧಿಕ್ಯದಿಂ ಬ್ರಹ್ಮಾದಿ ದೇವತೆಯೆನಿಸಿ, ಗಾಯತ್ರಿ ಬ್ರಾಹ್ಮಿಯೆಂಬ ಪೆಸರ್ವಸೆದು, ಕರ್ಮಜ್ಞಾನಾರ್ಥಮಾಗಿ ಧ್ಯಾನಿಸಲು ಯೋಗ್ಯಮಾಗಿಹುದೆಂದು ಅನುಸಂಧಾನಿಸಿ, ೨೮೬

ಮಧ್ಯಾಹ್ನ ಗಾಯತ್ರಿ ಧ್ಯಾನ :

ಬಳಿಕ ಮಧ್ಯಾಹ್ನ ಕಾಲದಲ್ಲಿ ಹೃದಯಸ್ಥಾನದಲ್ಲಿ ಶ್ವೇತಪದ್ಮಾಸನದಲ್ಲಿ ಶ್ವೇತವರ್ಣ ಶ್ವೇತವರ್ಣ, ಶ್ವೇತವಸ್ತ್ರಾಭರಣ, ಗಂಧಮಾಲ್ಯಾನುಲೇಪನಗಳಿಂದ ಅಲಂಕೃತಮಾಗಿ ಏಕಮುಖ, ದ್ವಿಲೋಚನಂಗಳಿಂ, ಚಕ್ರ ಅಕ್ಷಮಾಲೆ ಕಮಂಡಲು, ಸುರಭಿವಿಡಿದ ವಾಮದಕ್ಷಿಣ ಕರಚತುಷ್ಟದಿಂ ಗರುಡ ವಾಹನದಿಂ, ಯಜುರ್ವೇದಮಯವಾಗಿ, ಸತ್ವಗುಣಾಧಿಕ್ಯದಿಂ, ವಿಷ್ಣುವು ಅಧಿದೇವತೆಯೆನಿಸಿ, ಸರಸ್ವತಿ ವೈಷ್ಣವಿಯೆಂಬ ಪೆಸರ್ವಡೆದು ಕರ್ಮಜ್ಞಾನಾರ್ಥಮಾಗಿ, ಧ್ಯಾನಿಸಲು ಯೋಗ್ಯಮಾಗಿಹುದೆಂದು, ೨೮೭

ಸಾಯಂಕಾಲ ಗಾಯತ್ರಿ ಧ್ಯಾನ :

ಬಳಿಕ ಸಾಯಂಕಾಲದಲ್ಲಿ ಭ್ರೂಮಧ್ಯದ ಕೃಷ್ಣಪದ್ಮಾಸನದಲ್ಲಿ ಕೃಷ್ಣವರ್ಣ, ಕೃಷ್ಣವಸ್ತ್ರಾಭರಣ, ಗಂಧಮಾಲ್ಯಾದಿಗಳಿಂದ ಅಲಂಕೃತಮಾಗಿ, ಏಕಮುಖ ತ್ರಿಲೋಚನಗಳಿಂ, ಶೂನ ಅಕ್ಷಮಾಲೆ ಕಮಂಡಲು ಸುರಭಿವಿಡಿದ ವಾಮ ದಕ್ಷಿಣ ಕರಚತುಷ್ಟಯದಿಂ, ವೃಷಭವಾಹನದಿಂ, ಸಾಮವೇದಮಯವಾಗಿ, ತಮೋಗುಣಾಧಿಕ್ಯದಿಂ ರುದ್ರಾದಿದೇವತೆಯೆನಿಸಿ, ಸಾವಿತ್ರಿ ಮಾಹೇಶ್ವರಿಯೆಂಬ ಪೆಸರ್ವಡೆದು ಕರ್ಮಜ್ಞಾನಾರ್ಥಮಾಗಿ ಧ್ಯಾನಿಸಿಕೊಳಲು ಯೋಗ್ಯಮಾಗಿಹುದೆಂದು ಮನನಂಗೆಯ್ದು, ಇಂತು ಗಾಯತ್ರಿ ಮಂತ್ರಮಂ ವಿಧ್ಯುಕ್ತಮಾಗಿ ಜಪಂಗೆಯ್ದು, ಬಳಿಕ ಶಿವಲಿಂಕ ಪೂಜೆಯಂ ಶುದ್ಧ ಶೈವೋಕ್ತ ಕ್ರಮದಿಂ ವಿಸ್ತರಿಸಿ, ೨೮೮

ಯಜ್ಞ ಪ್ರಕ್ರಿಯಾ :

ಬಳಿಕ, ಜ್ಯೋತಿಷ್ಟೋಮ ರಾಜಸೂಯ ಪುತ್ರಕಾಮೇಷ್ಟಿಕಾದಿಯಾಗ, ಅಗ್ನಿಹೋತ್ರಾದಿ ಯಜ್ಞಭೇದಂಗಳಂ ವಿವೇಕಿಸಿ, ಬಳಿಕ, ಅಗ್ನಿ, ಇಂದ್ರ, ಆಧ್ವರ್ಯು

ಉದ್ಗಾತ್ರ ಹೋತೃ ಮೈತ್ರಾವರುಣ ಪ್ರತಿಷ್ಠಾತೃ, ಪೋತೃ ವೇಷ್ಟರೆಂಬ ಇವರೇ ಮೊದಲಾದ ಹದಿನೈದು ಋತ್ವಿಕ್ಕುಗಳೊಡಗೂಡಿ, ಮೇಲೆ ಕುಶ ತುರಗಪಾಲ ವಿಶ್ವಾಮಿತ್ರ ತೃಣದೂರ್ವೆಯೆಂಬ ನಾಲ್ಕು ದರ್ಭೆಗಳಂ; ಗಂಧ ಪುಷ್ಪ, ಆಜ್ಯ ಪಾತ್ರಾದಿ ಯಜ್ಞಸಾಧಕಂಗಳಂ ಸಂಗ್ರಹಿಸಿ; ಮರಳಿ ಚತುರಸ್ರ ಭಗಾಕಾರ ಅರ್ಧಚಂದ್ರಾಕಾರ ತ್ರಿಕೋನ ವೃತ್ತ ಷಡಸ್ರ, ಪದ್ಮಾಕಾರ ಅಷ್ಟಕೋನ ರೂಪಮಾದ ಎಂಟು ತೆರದಿಂದ; ಉತ್ತಮವಾದ ಕುಂಡಸ್ಥಲಮೆಂಬ, ಮಧ್ಯಮವಾದ ಸ್ಥಂಡಿಲವೆಂಬ, ಕನಿಷ್ಟಮಾದಿ ಶುಭಸ್ಥಲವೆಂಬ ಸ್ಥಾನತ್ರಯದಲ್ಲಿ; ವೇದಿಕೆ ಯೂಪಸ್ತಂಭಾದಿ ರಚನೆಗಳಂ ಮಾಡುತ್ತ, ಅಲ್ಲಿ ಯೋಗ್ಯಮಾದ ಆಸನದಲ್ಲಿ ಕುಳ್ಳಿರ್ದು ಪ್ರಾಣಾಯಾಮಮಂ ಮಾಡಿ; ಯಜ್ಞಮಂ ಮಾಡುತ್ತಿದ್ದೇನೆ ಎಂದು ಸಂಕಲ್ಪಿಸಿ, ೨೮೯

ರುದ್ರಾಗ್ನಿ ಮೂರ್ತಿ :

ಮೇಲೆ ಮಥಿತಾಗ್ನಿಯಾಗಲಿ, ಶ್ರೋತ್ರೀಯಾಗಾರಾಗ್ನಿಯಾಗಲಿ ಅದನು ಅಶ್ವತ್ಥ ಪಾಲಾಶಾದಿ ಯೋಗ್ಯಮಾದ ಕಾಷ್ಠಂಗಳಿಂದ ಆಯಾ ಮಂತ್ರಪೂರ್ವಕಮಾಗಿ, ದಕ್ಷಿಣಾಗ್ನಿ ಗಾರ್ಹಪತ್ಯಾಗ್ನಿ ಆಹವನೀಯಾಗ್ನಿ ಎಂಬ ಅಗ್ನಿತ್ರಯಾತ್ಮಕಮಾಗಿ ಸಂಸ್ಕರಿಸಿ, ಬಳಿಕ, ಧೂಮ್ರ, ಅರ್ಚಿಷ ಊಷ್ಮ ಜ್ವಲಿನಿ ಜ್ವಾಲಿನಿ ವಿಸ್ಫುಲಿಂಗಿನಿ ಸಶ್ರೀ ಸ್ವರೂಪ ಕಪಿಲ ಹವ್ಯಕವ್ಯವಹಾ ಎಂಬ ದಶಕಲಾವೃತಮಾದ ಅಗ್ನಿಮಂಡಲ ಮಧ್ಯದಲ್ಲಿ ಎರಡು ಶಿರಸ್ಸು ಚತುಃಶೃಂಗ ಕಪರ್ದ ಚಂದ್ರಕಲೆ ತ್ರಿನೇತ್ರ ಯಜ್ಞಸೂತ್ರ ತ್ರಿಮೇಖಲೆ ತ್ರಿಪಾದಗಳಿಂ, ವಾಮಭಾಗಸ್ಥಿತ ಸ್ವಾಹಾಶಕ್ತಿಯಿಂ ಶಕ್ತಿ ಅಗ್ನಿ ಸೃಕ್ಕು ಸೃವೆಗಳುಳ್ಳ ದಕ್ಷಿಣಕರ ಚತುಷ್ಟಯದಿಂ, ತೋಮರ ತಾಲವೃಂತ ಘೃತಪಾತ್ರೆಗಳನುಳ್ಳ ವಾಮಹಸ್ತ ತ್ರಯದಿಂ, ರಕ್ತವರ್ಣ ರಕ್ತಾಂಬರ ರಕ್ತಗಂಧಾದಿಗಳಿಂದ ಅಲಂಕೃತಮಾಗಿ ಮೆರೆವ ಶಿವಾಗ್ನಿಮೂರ್ತಿಯಂ ಸ್ಮರಿಸಿ ಬಳಿಕ, ಆ ಅಗ್ನಿಯ ಹರಿಣವರ್ಣ ಗಗನವರ್ಣಮಾದೇಳು ಜಿಹ್ವೆಗಳಿಗೆ ಕ್ರಮದಿಂ ಸಮಿತ್ತು ಸಾಸಿವೆ ಅರಳು ತುಪ್ಪ ಹಾಲು ಅನ್ನ ಎಳ್ಳುಗಳೆಂಬ ಸಪ್ತ ಆಹುತಿಗಳಂ ಪ್ರಮಾಣಿಸಿ, ಯಜ್ಞ ಪೂಜಾಯೋಗ್ಯಮಾದ ದೇವತೆಗಳಂ ವಿಷಯೀಕರಿಸಿ ಕೊಟ್ಟು ವಿಧ್ಯುಕ್ತವಾಗಿ ಯಜ್ಞವನು ಇಂತು ವಿಸ್ತರಿಸಿ, ೨೯೦

ಗೃಹೀಧರ್ಮಾನುಶಾಸನ :

ಬಳಿಕ ವೇದಾಧ್ಯಯನರೂಪಬ್ರಹ್ಮಯಜ್ಞ, ಅಗ್ನಿಹೊತೃರೂಪ ದೇವಯಜ್ಞ, ಅತಿಥಿ ಪೂಜಾರೂಪ ಮನುಷ್ಯಯಜ್ಞ, ಪಿತೃತರ್ಪಣರೂಪ ಪಿತೃಯಜ್ಞ, ಭೂತಬಲಿರೂಪ ಭೂತಯಜ್ಞವೆಂಬ ಈ ಪಂಚಯಜ್ಞಗಳಂ ನಡೆಸುತ್ತೆ; ಋತುಕಾಲಮಂ ಮೀರದೆ ಸಂತಾನಾರ್ಥಮಾಗಿ ವೇದಮಂತ್ರ ಸ್ಮರಣದಿಂ ಸ್ವಸ್ತ್ರೀ ಸಂಭೋಗಸುಖಿಯಾಗಿ; ಗುರುಯಾತ್ರೆ ದೇವಯಾತ್ರೆ ತೀರ್ಥಯಾತ್ರೆ ಯಜ್ಞಧರ್ಮಂಗಳೆಂಬ ಇವಕ್ಕಾಗಿಯೇ ದ್ರವ್ಯಾರ್ಜನೆಯಂ ಮಾಡುತ್ತೆ; ಆತ್ಮಾರ್ಥವೆನ್ನದೆ ದೇವತಾರ್ಥ ಯಜ್ಞಾರ್ಥ ಭಿಕ್ಷಾರ್ಥಮಾಗಿಯೆ ಪಾಕಪ್ರಯತ್ನಂಗೆಯ್ದು; ತಾನು ಒಂದು ವೇಳೆಯಾದರೂ, ಮೇಣು ಎರಡು ವೇಳೆಯಾದರೂ, ಮುಷ್ಟಿಮಾತ್ರದ ಮೂವತ್ತೆರಡು ತುತ್ತುಗಳಿಂ

ಭೋಜನಂಗೆಯುತ್ತೆ; ಬಳಿಕ ಸರ್ವಭೂತದಯ, ಸತ್ಯವಚನ, ಪರೋಪಕಾರ ಪುಣ್ಯಕರ್ಮ ಅನುಷ್ಠಾನಾದಿ ಸದ್ಗುಣ ಸಹಿತನಾಗಿ ; ವಾರ್ತಾವೃತ್ತಿ, ಸ್ವಾಧೀನವೃತ್ತಿ, ಯಾಯಾರವೃತ್ತಿ, ಮೌನ ಸನ್ಯಾಸಿಯೆಂದು ನಾಲ್ಕು ತೆರನಾಗಿರ್ಪಾತನೇ ಗೃಹಸ್ಥಾಶ್ರಮಿಯಪ್ಪಂ. ೨೯೧

ಪಂಚಕರ್ಮ ವಿಭಾಗ:

ಮತ್ತಂ ಆ ಗೃಹಸ್ಥನಿಂದ ಅನುಷ್ಠಸಲ್ತಕ್ಕ ಕರ್ಮವಾದೊಡೆ : ನಿತ್ಯ, ನೈಮಿತ್ತಿಕ, ಪ್ರಾಯಶ್ಚಿತ್ತ, ಕಾಮ್ಯ ನಿರ್ಮಲವೆಂದು ಪಂಚವಿಧವಾಗಿಹುದು, ಅವರಲ್ಲಿ :

೧. ಸಂಧ್ಯಾವಂದನಾದಿಕವೇ ನಿತ್ಯಕರ್ಮವೆನಿಸೂದು,

೨. ಶುಭಕಾಲದೇಶಾದಿಗಳಲ್ಲಿ ಮಾಳ್ಪ ವಿಧಿ ವಿಶೇಷವೆ ನೈಮಿತ್ತಕ ಕರ್ಮವೆನಿಸೂದು.

೩. ಬ್ರಹ್ಮಹತ್ಯಾದಿ ದೋಷ ಪರಿಹಾರ ಕ್ರಿಯೆಯೇ ಪ್ರಾಯಶ್ಚಿತ್ತಕರ್ಮವೆನಿಸೂದು.

೪. ಜ್ಯೋತಿಷ್ಟೋಮ ಯಾಗಾದಿಕವೇ ಕಾಮ್ಯಕರ್ಮವೆನಿಸೂದು.

೫. ಈಶ್ವರೋಪಾಸನೆಯೇ ನಿರ್ಮಲಕರ್ಮವೆನಿಸೂದು. ೨೯೨

ನಿರ್ಮಲ ಕರ್ಮವಿವೇಕ :

ಮತ್ತಂ ಆ ನಿರ್ಮಲ ಕರ್ಮವೆಂಬುದು ಅದೊಂದೇ, ತಪಸ್ಸು, ಕರ್ಮ, ಜಪ, ಧ್ಯಾನ, ಜ್ಞಾನಮೆಂದು ಐದು ತೆರನಾಗಿರ್ಪುದು.

ಅವರಲ್ಲಿ,

೧. ದೋಷ ಪರಿಹಾರಾರ್ಥಮಾಗಿ ಶರೀರ ಬಾಧಾತ್ಮಕತ್ವದಿಂ ಮಹಾಕಷ್ಟಂಗಳಾದ ತಪ್ತಕೃಚ್ಛ್ರ, ಮಹಾತಪ್ತಕೃಚ್ಛ್ರ, ಶೀತಕೃಚ್ಛ್ರ, ಪಾದಕೃಚ್ಛ್ರ, ಪ್ರಜಾಪತ್ಯಕೃಚ್ಛ್ರ, ದೇವಕೃಚ್ಛ್ರ, ಯಾವತಕೃಚ್ಛ್ರರ, ಪರಾಕಕೃಚ್ಛ್ರಾದಿ ಅಷ್ಟಕೃಚ್ಛ್ರಂಗಳಿಂ; ಪಕ್ಷ ಮಾಸಾದಿಗಳಲ್ಲಿ ಅನ್ನಮಂ ಪೆಚ್ಚಿಸಿ ತಗ್ಗಿಸಿಕೊಂಬುದು ಮೊದಲಾದುದೇ ಲಕ್ಷಣಮಾದ, ಚಾಂದ್ರಾಯಣ, ಯುವಪಾಂದ್ರಯಣ, ಪಿಪೀಲಿಕಾಚಾಂದ್ರಾಯಣ, ಋಷಿಚಾಂದ್ರಾಯಣ, ಶಿಷ್ಯಚಾಂದ್ರಾಯಣ, ಯತಿಬಾಂದ್ರಾಯಣಾದಿ ಚಾಂದ್ರಾಯಣಾದಿಗಳಿಂ; ಪ್ರಜಾಪತ್ಯಾದಿ ವ್ರತಗಳಿಂ; ಧರ್ಮಾರ್ಥಕಾಮ್ಯಮಾಗಿ ಶರೀರ ಶೋಷಣಂಗೆಯ್ವುದೇ **ತಪ**ವೆನಿಸೂದು.

೨. ಬಾಹ್ಯಾಭ್ಯಾಂತರ ಸಾಧನಂಗಳಿಂ ಸಗುಣ ನಿರ್ಗುಣನಾದ ಈಶ್ವರಾರ್ಚನೆಯೇ **ಕರ್ಮ**ವೆನಿಸೂದು.

೩. ಪ್ರಣವಾದಿ ಮಂತ್ರಂಗಳಂ ಸಾಂಗಿತಮಾಗಿ ಉಚ್ಚರಿಪುದೆ **ಜಪ**ವೆನಿಸೂದು.

೪. ಹೃತ್ಕಮಲಕರ್ಣಿಕಾಮಧ್ಯದೊಳು ಈಶ್ವರಚಿಂತನೆಗೆಯ್ವುದೇ **ಧ್ಯಾನ**ವೆನಿಸೂದು.

೫. ಪ್ರತ್ಯಗಾತ್ಮರ ಐಕ್ಯವಿಚಾರವೇ **ಜ್ಞಾನ**ವೆನಿಸೂದು.

ಇಂತಿವೆಲ್ಲಂ ಗೃಹಸ್ಥಂಗೆ ಕರ್ತವ್ಯಮಕ್ಕುಂ. ೨೯೩

ನೀತಿಸಂಗ್ರಹ:

ಮತ್ತಂ, ಆ ಗೃಹಸ್ಥನು ತನ್ನ ಕುಲಗುರು ಕುಲದೇವತಾರಾಧನೆಯಂ ಬಿಡದೆ ಮಾಡಬೇಕು; ಮಾತಾಪಿತೃಗಳ ಮಾತಂ ಮೀರದಿರಬೇಕು; ಸ್ತ್ರೀ ಪುತ್ರ ಬಂಧು ಬಾಂಧವಾದಿಗಳಲ್ಲಿ ವಿನಯ ಉಪಚಾರವಂತನಾಗಿರಬೇಕು; ಸತಿ ಸುತರನು ಅತಿಕ್ರಮಿಸಲೀಯದೆ ಆಜ್ಞೆಯಿಂದ ಆಳಬೇಕು; ತಪೋ ವಿದ್ಯಸಂಪನ್ನನಾದ ಸತ್ಪಾತ್ರಂ ಬರಲು ಆವುದನಾದರೂ ಇಲ್ಲೆನ್ನದೆಈಯಬೇಕು; ಅರಿಯಲ್ಪಡದ ಕುಲನಾಮಂಗಳುಳ್ಳ ಪಥಶ್ರಾಂತನಾದ ಅನ್ನಕಾಮನಪ್ಪ ಅತಿಥಿ ಬರಲ್ ಆತನಂ ಸರ್ವಥಾ ಸತ್ಕರಿಸಬೇಕು. ವಿದ್ಯಾವ್ಯಸನಿಯಾಗಬೇಕು. ಬುದ್ಧಿವಂತನಾದ ಬಾಲಕನಾದರೂ ಬೆಸಗೊಳ್ಳಬೇಕು. ಆವಕಾರ್ಯವನಾದರೂ ತರಹರದಿಂ ವಿಚಾರಿಸಿ ಮಾಡಬೇಕು. ಸಂಪತ್ತು ಬಂದಲ್ಲಿ ಕುಸುಮದಂತೆ ಮೃದುಹೃದಯನಾಗಿರಬೇಕು. ವಿಪ್ಪತ್ತು ಅಡಸಿದಲ್ಲಿ ಶಿಲೆಯಂತೆ ಕಠಿಣಚಿತ್ತನಾಗಿರಬೇಕು. ವೃಕ್ಷಾದಿಕದಂತೆ ಸ್ವಕಾರ್ಯವನು ಉಳಿದಾದರೂ ಪರೋಪಕಾರಮಂ ಮಾಡಬೇಕು. ಸರ್ವವೂ ದೈವಾಧೀನಮೆಂದು ಆಲಸ್ಯಭಾವದಿಂದರದೆ ಪುರುಷಪ್ರಯತ್ನದಿಂದ ಉದ್ಯೋಗಂ ಗೆಯ್ಯಬೇಕು. ಪರಗುಣ ಪರಮಾಣುವಾದರು ಪರ್ವತೋಪಸಮಾನವಾಗಿ ನುತಿಸಬೇಕು. ನಿಜಗುಣಾತಿಶಯಮಂ ಮರಸಬೇಕು. ದೂರವಾದರೂ ತಾನು ಸುಖಮಿರ್ಪೆಡೆಗೆ ಎಯ್ದಬೇಕು. ತನಗೆ ಬಾಧೆಯಾದ ವನನಾದರೂ ಬಿಡಬೇಕು. ವ್ಯವಹಾರದಲ್ಲಿ ಸತ್ಯವಂತನಾಗಿ ಇರಬೇಕು.

ಬಳಿಕ, ಪಗಲು ಉತ್ತರಮುಖನಾಗಿ, ರಾತ್ರಿ ದಕ್ಷಿಣಮುಖನಾಗಿ ಮಲಮಂ ತ್ಯಜಿಸೂದು. ಅಲ್ಲಿ ಶೌಚಂಗೆಯ್ವ ಅನ್ನೆಗಂ ನುಡಿಯಲಾಗದು, ವಪನ ತೈಲಾಭ್ಯಂಗನ ಸ್ನಾನಾದಿಗಳನು ಆದಿತ್ಯ ಮಂಗಳ ಬೃಹಸ್ಪತಿ ಶುಕ್ರವಾರ ಜನ್ಮವಾರಂಗಳನ್ನು ಬಿಟ್ಟು ಮಿಕ್ಕದಿನಂಗಳೊಳು ಪೂರ್ವೋತ್ತರ ದಿಙ್ಮುಖನಾಗಿ ಕುಳ್ಳಿರ್ದು ಅನುಗೆಯ್ವದಲ್ಲದೆ ಉಳಿದ ದಿಙ್ಮುಖನಾಗೆ ಕುಳ್ಳಿರಲಾಗದು. ಬುಧ ಬೃಹಸ್ಪತಿ ಶನಿವಾರಂಗಳಲ್ಲಿ ನೂತನ ವಸ್ತ್ರಮಂ ಚಂದ್ರಸ್ವರದಿಂದುಟ್ಟು ಪೊದೆವುದಲ್ಲದೆ, ಮಿಕ್ಕವಾರಂಗಳಲ್ಲಿ ಸೂರ್ಯಸ್ವರದಿಂ ಪೊದೆದುಡಲಾಗದು. ಪೂರ್ವ ದಕ್ಷಿಣ ಪಶ್ಚಿಮ ಮುಖನಾಗಿಯೇ ಸೂರ್ಯಸ್ವರದಿಂ ಭೋಜನಂಗೆಯ್ವುದಲ್ಲದೆ, ಉತ್ತರಾಭಿಮುಖನಾಗಿ ಚಂದ್ರಸ್ವರದಿಂ ಭೋಜನಂಗೆಯ್ಯಲಾಗದು. ೨೯೫

ಅಸಾಕ್ಷಿಕನಾಗಿ ಉಣಲಾಗದು. ತಾಮ್ರದಲ್ಲಿ ಗೋಕ್ಷೀರಪಾನಂಗೆಯ್ಯಲಾಗದು. ಉಪ್ಪುವೆರಸಿದ ಪಾಲ್ಗುಡಿಯಬಾರದು. ಕಂಚಿನಲ್ಲಿ ನಾಳಿಕೇರಾಂಬುವಂ ಕೊಳಲಾಗದು. ವಾಮಕರದಿಂ ನೀರ್ಗುಡಿಯಲಾಗದು. ತರ್ಜನಿಯಿಂ ದಂತಧಾವನಂಗೆಯ್ಯಲಾಗದು, ಅಡಕೆಯನೊಡೆಯದೆ ಎಲೆಯಂ ತೊಳೆಯದೆ ಸುಣ್ಣಮಂ ಶೋಧಿಸದೆ ತಾಂಬೂಲಮಂ ಸ್ವೀಕಾರಂ ಮಾಡಲಾಗದು. ವಾಮಹಸ್ತದಿಂ ಎಲೆಗಳಿಗೆಯಂ ಕೊಳಲಾಗದು. ಚೂರ್ಣಪರ್ಣಮಂ ಮೆಲಲಾಗದು. ೨೯೬

ಮೂಡಲು ತೆಂಕಲು ಮಂಡೆಯಾಗಿ ಮಲಗೂದಲ್ಲದೆ, ಪಡುವಲು ಬಡಗಲು ಮಂಡೆಯಾಗಿ ಮಲಗಲಾಗದು, ದಿವಾಮೈಥುನ ದಿವಾನಿದ್ರೆಗಳಂ ಮಾಡಬಾರದು.

ದಾಸಿ ವೇಶಿಯರೊಡಗೂಡಲಾಗದು. ದೇಹಿಯೆಂದವರಿಗೆ ನಾಸ್ತಿಯೆನಲಾಗದು. ಆವುದಾದರೂ ತನಗೆ ಬರಲುಳ್ಳದೇಬಹುದು. ಬಾರದುದನು ಏನ ಮಾಡಿದರೆಯು ಬಾರದಾಗಿ ಸ್ಥಿತಿಗತಿಗೆ ಚಿಂತಿಸಲಾಗದು. ಧನಕ್ಷಯವನು ದ್ರವ್ಯಾರ್ಜನೆಯನು ಗೃಹಛಿದ್ರವನು ತನಗಾದ ಮನ್ನಣೆಯನು ಪ್ರಕಟಿಸಲಾಗದು. ಸೂಪಕಾರನನು, ಕವಿಯನು ವೈದ್ಯನನು ಮರ್ಮಜ್ಞನನು ಕೋಪಿಸಲಾಗದು. ೨೯೭

ಕರೆಯದ ಆರಗೃಹಮಂ ಪುಗಲಾಗದು. ಬೆಸಗೊಳದೆ ಏನನೂ ಹೇಳಲಾಗದು. ಆತ್ಮಸತ್ತುತಿ ಪರನಿಂದೆಯುನಾಡಲಾತದು. ಶಿವಾರಾಮ ಶಿವಕ್ಷೇತ್ರಂಗಳಲ್ಲಿ ಮಲಮೂತ್ರಾದಿಗಳಂ ಬಿಡಲಾಗದು. ಪಂಚಸೂತಕಮಂ ಪೊರ್ದಲಾಗದು. ಲೌಕಿಕಾಚಾರಮಂ ಮೀರಲಾಗದು. ಜಾತಿಸಂಕರಮಂ ಮಾಡಲಾಗದು, ಲೋಕ ವಾರ್ತೆಯನು ಉಪೇಕ್ಷಿಸಲಾಗದು. ದಾಸಿಭೃತ್ಯರಂ ಅಶನ ಆಚ್ಛದನಾದಿಗಳಿಂ ನೋಯಿಸಲಾಗದು. ತೃಣ ಅಂಬುಶಯನ ಸ್ಥಲಾದಿಗಳಿಂ ಗೋರಕ್ಷಣೆಗೆ ಅಲಸಲಾಗದು. ದೀರ್ಘದ್ವೇಷಗಳಂ ಮಾಡಲಾಗದು. ಮೊರನ ಗಾಳಿ ಕಸಿಕಿಲುಗಳಂ ಸೋಂಕಲಾಗದು. ದುರ್ಜನರೊಡನೆ ಆಡಲಾಗದು. ಪಾಪಕೃತ್ಯಮಂ ಮಾಡಲಾಗದು. ತನು ಧನ ವನಿತಾದಿಗಳು ಅನಿತ್ಯವಪ್ಪುದರಿಂ ದೃಢಾನುರಾಗಂ ಮಾಡಲಾಗದು. ಖ್ಯಾತಿ ಲಾಭಾರ್ಥಮಾಗಿ ಪೂಜಾದಿಕಮಂ ಮಾಡಲಾಗದು ಎಂಬಿವು ಮೊದಲಾದವೆಲ್ಲಂ ಗೃಹಸ್ಥಂಗೆವಿಹಿತ ಆಚಾರಮಕ್ಕುಂ. ೨೯೮

ವಾನಪ್ರಸ್ಥಾಶ್ರಮ:

ಮತ್ತಂ ಆ ಗೃಹಸ್ಥಂಗೆ ವಿರಕ್ತಿಪುಟ್ಟಿ, ವಾನಪ್ರಸ್ಥಾಶ್ರಮವನಾದರೂ, ಯತ್ಯಾಶ್ರಮವನಾದರೂ ಸ್ವೀಕರಿಸೂದು. ಅಲ್ಲಿ ಸತಿಸಮೇತನಾಗಾದರೂ, ಅಲ್ಲಮತ್ತೆ ವನಿತಾದಿ ಗೃಹಭಾರಮಂ ಪುತ್ರಂಗೆವಹಿಸಿ, ಮೇಲೆ ಸರ್ವಸಂಗ ಪರಿತ್ಯಾಗಮಂ ಮಾಡಿ ಹೋಗುವ ಸಮಯದಲ್ಲಿ ತಪಃಕಾರ್ಯ ಸಿದ್ಧ್ಯರ್ಥಮಾಗಿ ಉತ್ತರಾಯನ ಶುಕ್ಲಪಕ್ಷ ಶುಭತಿಥಿ ಶುಭವಾರ ಶುಭಲಗ್ನ ಶುಭನಕ್ಷತ್ರ ಶುಭ ಮುಹೂರ್ತಂಗಳಂ ವಿಚಾರಿಸಿ. ೨೯೯

ಪ್ರಯಾಣ ವಾರಶೂಲೆಗಳು :

ಬಳಿಕ ಶನಿವಾರ ಸೋಮವಾರಂಗಳೆ ಮೂಡಲೆಯ್ದುಬಾರದು. ಆದಿತ್ಯವಾರ ಶುಕ್ರವಾರಂಗಳೆ ಪಡುವಲೆಯ್ದುಬಾರದು, ಬುಧವಾರ ಮಂಗಳವಾರಂಗಳೆ ಬಡಗಲೆಯ್ದುಬಾರದು. ಬೃಹಸ್ಪತಿವಾರವೆ ತೆಂಕಲೆಯ್ದುಬಾರದೆಂದು ವಾರಶೂಲವನರಿದು.

ಶುಭಶಕುನಗಳು :

ಮೇಲೆ ಹರಡೆ ಗಾರ್ದಭಗೌಳಿಗಳು ವಾಮದಲ್ಲುಲಿಯೆ, ಹಸುಬನೆ ಬಲದಲ್ಲಿ ನುಡಿಯೆ, ಹರಿಣ ಭಾರದ್ವಾಜ ಹಂಗಂಗಳು ತಡೆಯೆ, ನರಿ ನವಿಲು ನಕುಲ ವಾಯಸಂಗಳು ತಿರ್ದೆ ಶುಭಶಕುನಗಳೆಂದಾರ್‍ಯೆದು.

ದುರ್ದರ್ಶನಗಳು :

ಮರಳಿ ತಕ್ರ ತೈಲಾಭ್ಯಂಗನ ಸರ್ಪ ಧೂಮವೆರಸಿದ ಅಗ್ನಿ ಏಕವಿಪ್ರನು, ಭಿನ್ನನಾಸಿಕನು, ಆರ್ದ್ರವಸ್ತ್ರ ಕಾರ್ಪಾಸ ಕಾಷ್ಠಭಾರಿ, ಸೂತಕಿಯಾದವಿಧವೆ, ಶೂನ್ಯಘಟಾದಿಗಳೆಂಬ ದುರ್ದರ್ಶನಂಗಳಿಲ್ಲದೆ.

ಶುಭದರ್ಶನ :

ಬಳಿಕ ಕನ್ನಿಕೆ ಗೋವು ಭೇರಿ ಶಂಖ ದಧಿ ಫಲ ಕುಸುಮ ಉರಿವಅಗ್ನಿ ಅಂದಳ ವಿಪ್ರದ್ವಯ ಹಯ ಗಜ ವೃಷಭ ಸುರಾಭಂಡ ಮತ್ಸ್ಯದ್ವಯ ಸಿದ್ಧಮಾದ ಅನ್ನ, ವೇಶ್ಯಾಸ್ತ್ರೀ ಮಾಂಸ ಶುಭವಾರ್ತೆ ಪೂರ್ಣಕುಂಭಂಗಳೆಂಬ ಶುಭದರ್ಶನಮಾಗೆ,

ಆರಣ್ಯವಾಸ :

ಮೇಣು, ದೂರದಪಯಣಕ್ಕೆ ಚಂದ್ರಸ್ವರ, ಸಮೀಪದ ಪಯಣಕ್ಕೆ ಸೂರ್ಯಸ್ವರವಾಗಬೇಕು, ಎಂಬಿವು ಮೊದಲಾದ ಮಾಂಗಲ್ಯ ಸೂಚನೆಗಳಿಂ ಗೃಹಮಂ ಪೊರಮೆಟ್ಟು ಪುಣ್ಯವನ ಪ್ರವೇಶವಹುದು. ಅಲ್ಲಿ ಪರ್ಣಶಾಲೆಯಲ್ಲಾಗಲಿ ವೃಕ್ಷಾಶ್ರಯದೊಳಾದೊಡಂ ನೆಲಸಿ.

ವಾನಪ್ರಸ್ಥ ದೀಕ್ಷೆ :

ಜಟಾಧಾರಣ ಯಜ್ಞೋಪವೀತ ಕೃಷ್ಣಾಜಿನಗಳಂ ತಳೆದು, ನಖ ರೋಮಂಗಳಂ ತ್ಯಜಿಸದೆ, ಸಕಲ ನಿಷಿದ್ಧಂಗಳಂ ಬಿಟ್ಟು, ಗ್ರಾಮಾದಿಕದೊಳು ಅನ್ನಮಂ ಯಾಚಿಸದೆ, ಶಾಖಾಮೂಲ ಫಲಾದಿಕಮಂ ಷೋಡಶ ಕಬಳದಿಂ ಭೋಜನಂಗೆಯ್ದು, ಕಾಮಕ್ರೋಧಾದಿಗಳಂ ತೊರೆದು, ದ್ರವ್ಯಪ್ರತಿಗ್ರಹಮಿಲ್ಲದೆ ತ್ರಿಕಾಲಸ್ನಾನಂ ತಪ್ಪದೆ, ಬಸ್ಮೋದ್ಧೂಳನ ಧಾರಣಂಗಳಂ ಕ್ರಮದಿಂ ತ್ರಿಯಂಬಕಮಂತ್ರ ಮೂಲಮಂತ್ರಂಗಳಿಂ ಮಾಡಿ, ಗಾಯತ್ರಿಜಪ ಶಿವಾರ್ಚವೆ ಅಗ್ನಿಹೋತ್ರ ಪಂಚಮಹಾಯಜ್ಞ ಯಮ ನಿಯಮಾದಿ ಅಷ್ಟಾಂಗಯೋಗಾದಿಗಳೊಡಗೂಡಿ, ಕೃಚ್ಛ್ರ ಚಾಂದ್ರಾಯಣ ಉಪವಾಸ ಪಯಃಪಾನ ಗೋಮಯಭಕ್ಷಣ ವಾಯುಸೇವನ ಪರ್ಣಾಶನ ನಿರಾಹಾರ ಭೂಶಯನ ಶೀತವಾತಾದಿ ದ್ವಂದ್ವ ತಿತೀಕ್ಷೆಗಳನುಳ್ಳಾತನಾಗಿ. ೩೦೦

ಪಂಚಾಗ್ನಿ ಮಧ್ಯ ತಪಸ್ಸು :

ಬಳಿಕ ದೇಹದೊಳಗೆ ಮೂಲಾಧಾರಾದಿ ಸ್ಥಾಂಗಳಲ್ಲಿರ್ಪ ಕಾಲಾಗ್ನಿ ವಡಬಾಗ್ನಿ ಪಾಷಾಣಾಗ್ನಿ ವೈದ್ಯುತಾಗ್ನಿ ಸೂರ್ಯಾಗ್ನಿಯೆಂಬ ಸೂಕ್ಷ್ಮ ಬಿಂದುರೂಪ ಪಂಚಾಗ್ನಿ ಧ್ಯಾನಯುಕ್ತನಾಗಿ, ಹೊರಗೆ ನಿದಾಘಕಾಲಾಗ್ನಿ ಸೂರ್ಯಾತಪಾಗ್ನಿ ರವಿಕಾಂತಾಗ್ನಿ ದಾವಾಗ್ನಿ ಉದರಾಗ್ನಿಯಂ ಪಂಚಾಗ್ನಿಮಧ್ಯಯದಲ್ಲಿ ಏಕಪಾದಸ್ಥಿತಿ ಮೊದಲಾದವುಗಳಿಂದ ತಪಸ್ಸನಾಚರಿಸುವಾತನಾಗಿ, ಔದುಂಬರ ವೈಪಾಸಿಕ ಪ್ರಕ್ಷಾಲಿನಿ ಪೌರ್ಣಮನೆಂದು ಚತುರ್ವಿಧನಾಗಿರ್ಪಾತನೇ ವಾನಪ್ರಸ್ಥನಪ್ಪಂ. ೩೦೧

ಯತ್ಯಾಶ್ರಮ:

ಬಳಿಕ ವಾನಪ್ರಸ್ಥಂಗೆ ವೈರಾಗ್ಯಂ ಜನಿಸೆ ಯತ್ಯಾಶ್ರಮಮಂ ಕೊಂಬುದು, ಆ ಯತಿಯೇ ವೃತ್ತಿ ಭೇದದಿಂ ಕುಟೀಚಕ, ಬಹೂದಕ, ಹಂಸ, ಪರಮಹಂಸರೆಂದು ನಾಲ್ಕು ತೆರನಾಗಿರ್ಪರು, ಅವರಲ್ಲಿ

ಕುಟೀಚಕ ಯತಿ:

ಶಿಖಾ ಯುಜ್ಞೋಪವೀತಿಯಾಗಿ, ತ್ರಿದಂಡ ಕಮಂಡಲು ಭಿಕ್ಷಾಪಾತ್ರೆ ಕಾಷಾಯಾಂಬರಗಳನುಳ್ಳಾತನಾಗಿ, ತ್ರಿಸಂಧ್ಯೆಯಲ್ಲಿಯೂ ಭಸ್ಮೋದ್ಧೂಳನ ತ್ರಿಪುಂಡ್ರಧಾರಣ ರುದ್ರಾಕ್ಷಾಭರಣ ಶಿವಲಿಂಗಾರ್ಚನ ಗಾಯತ್ರಿಜಪಂಗಳಂ ವಿಶ್ವಾಸದಿಂ ಮಾಡುತ್ತೆ, ಸ್ವಜಾತಿಯಾಗಲಿ ತನ್ನಪುತ್ರ ಬಂಧುಗಳಲ್ಲಿಯಾಗಲಿ ಭಿಕ್ಷಾನ್ನಮಂ ತಂದು ಭೋಜನಂಗೆಯ್ದು ಸುಖಿಯಾಗಿರ್ಪನೆ ಕುಟೀಚಕನಪ್ಪಂ.

ಬಹೂದಕ ಯತಿ :

ಮತ್ತಂ ಶಿಖಾ ಯಜ್ಞೋಪವೀತಿಯಾಗಿ, ಗೋವಾಲರಚಿತ ರಜ್ಜು ಸಂಬಂಧಮಾದ ತ್ರಿದಂಡಂಗಳಂ ಹಿಡಿದು, ಮೃತ್ಪಾತ್ರೆ, ಕಾಂಶ್ಯಪಾತ್ರೆ ದಾರುಪಾತ್ರೆಯೊಳು ಒಂದಂ ಸ್ವೀಕರಿಸಿ, ಕಂಥೆ ಕೌಪೀನ ಆಚ್ಛಾದನ ಕೃಷ್ಣಾಜಿನ ಕೊಡೆ ಪಾದುಕೆ ಸೂಚಿ ಕರ್ತರಿ ಯೋಗವಟ್ಟಾದಿ ಪರಿಕರಂಗಳನುಳ್ಳಾತನಾಗಿ, ಭಸ್ಮೋದ್ಧೂಳನ ಧಾರಣ ರುದ್ರಾಕ್ಷಾಭರಣ ಶಿವಲಿಂಗಾರ್ಚನ ಸಾವಿತ್ರಿಜಪಂಗಳಂ ತ್ರಿಸಂಧ್ಯೆಯಲ್ಲಿಯು ಬಿಡದೆ ಆಚರಿಸುತ್ತೆ, ವೇದಾಧ್ಯಯನವನುಳಿದು ಈಶ್ವರಧ್ಯಾನತತ್ಪರನಾಗಿ ಏಕಾನ್ನವನೊಲ್ಲದೆ, ಬಂಧು ಪುತ್ರಾದಿ ಗೃಹಮಂ ಪುಗದೆ, ಬೇರೆ ಏಳು ಮನೆಯಲ್ಲಿ ಭಿಕ್ಷಾನ್ನಮಂ ತಂದು ಅನುಭವಿಸುತ್ತೆ ಸಹಜಮಯನಾಗಿರ್ಪಾತನೇ ಬಹೂದಕನಪ್ಪಂ.

ಹಂಸಯತಿ :

ಮತ್ತಂ ಶಿಖಾ ಯಜ್ಞೋಪವೀತಂಗಳಂ ತ್ಯಜಿಸಿ, ವೇಣುದಂಡಮೊಂದಂ ಪಿಡಿದು, ಕಮಂಡಲು ಮೃತ್ಪಾತ್ರೆ ಪಾಣಿಪಾತ್ರೆ ಕಂಥೆ, ಕೌಪೀನ ಆಚ್ಛಾದನ ದೋತ್ರ ಬಹಿರ್ವಾಸಂಗಳನುಳ್ಳಾತನಾಗಿ; ಭಸ್ಮೋದ್ಧೂಳನಧಾರಣ ರುದ್ರಾಕ್ಷಾಭರಣ ಶಿವಾರಾಧನ ಸಾವಿತ್ರಿಜಪಂಗಳಂ ತ್ರಿಸಂಧ್ಯೆಯಲ್ಲಿಯೂ ಬಿಡದೆ ಆಚರಿಸುತ್ತೆ; ಒಂದೇ ಕಾಲದಲ್ಲಿ ಭಿಕ್ಷಾನ್ನವನು ಎಂಟು ಗ್ರಾಸವನುಂಡು ಅಜಿಹ್ವ ಷಂಡಕ ಪಂಗು ಅಂಧಕ ಬದಿರ ಮುಗ್ಧನೆ ಷಡ್ಗುಣಯುಕ್ತನಾಗಿ; ವನಿತಾದಿ ವಿಷಯಮಾಗಿ ಕಾಮಿಸುವುದು, ಕೊಂಡಾಡುವುದಿ, ವಿನೋದಿಸುವುದು, ನೋಡುವುದು, ನುಡಿಸುವುದು, ರತಿಗೆಳಸುವುದು, ಒಡಂಬಡುವುದು, ಕೂಡುವುದು ಡಂಬ ಅಷ್ಟವಿಧ ಮೈಥುನಂಗಳಂ ತ್ಯಜಿಸಿ ಅಧ್ಯಾತ್ಮಿಕ ಚಿಂತಕನಾಗಿರ್ಪಾತನೇ ಹಂಸನಪ್ಪಂ. ೩೦೨

ಪರಮಹಂಸಯತಿ :

ಮತ್ತಂ ಶಿಖಾ ಯಜ್ಞೋಪವೀತ ನಿತ್ಯಕರ್ಮಾದಿಗಳಂ, ತ್ರಿದಂಡ ಕಮಂಡಲು

ಮೊದಲಾದ ಪರಿಕರಗಳಂ ತ್ಯಜಿಸಿ, ಕಂಥೆ ಕೌಪೀನ ಪಾಣಿಪಾತ್ರಾದಿ ವಸ್ತುಗಳಂ, ಶಿತಾದಿಬಾಧ್ಯಾ ಪರಿಹಾರಾರ್ಥಮಾಗಿ ಸ್ವೀಕರಿಸಿ ಬಳಿಕ ದಿವ್ಯಸ್ನಾನ ವಾರುಣಸ್ನಾನ ವಾಯವ್ಯಸ್ನಾನ ಮಾನಸಸ್ನಾನ ಆಗ್ನೇಯಸ್ನಾನವೆಂಬ ಪಂಚವಿದಸ್ನಾನಂಗಳೊಳಗೆ, ಆಗ್ನೇಯುಮೆಂಬ ಭಸ್ಮಸ್ನಾನವೇ ಸಕಲಸ್ನಾನಂಗಳೊಳಗೆ ಕೋಟಿಕೋಟಿ ಗುಣಾಧಿಕಮಪ್ಪುದರಿಂದವು ವೇದಸಿದ್ಧಮಪ್ಪುದರಿಂದವು ಆವ ಆಶ್ರಮಿಗಳಿಂದಲೂ ತ್ಯಜಿಸಲು ಯೋಗ್ಯವಲಾಗಿ ಅಗ್ನಿರಿತ್ಯಾದಿ ಮಂತ್ರದಿಂ ಭಸ್ಮೋದ್ಧೂಳನಮಂ ಪ್ರಣವಪೂರ್ವಕಮಾದ ಹಂಸಮಂತ್ರದಿಂ ತ್ರಿಪುಂಡ್ರಧಾರಣಂಗೆಯ್ದು; ರುದ್ರಾಕ್ಷಿಗಳಂ ಧರಿಸಿ, ಶಿವಲಿಂಗಾರ್ಚನೆಯಂ ಸರ್ವಥಾ ಬಿಡದೆ ಆಚರಿಸುತ್ತೆ; ತ್ರಿಸಂಧ್ಯೆಯಲ್ಲಿಯೂ ಪ್ರಣವಪೂರ್ವಕಮಾಗಿ, ಷಟ್ಪ್ರಾಣಾಯಾಮದಿಂದ ಅಷ್ಟೋತ್ತರಶತ ಪ್ರಣವಜಪಂಗೆಯ್ದು; ಏಕಾಂತವಾಸಿಯಾಗಿ ಸ್ವಸ್ಥಮಾದ ಆಸನದಲ್ಲಿ ಕುಳ್ಳಿರ್ದು, ಯಥಾಶಕ್ತಿ ಸಮಾಧಿನಿಷ್ಠನಾಗಿ, ಮಾಧೂಕರ ಅಸಂಕ್ಲುಪ್ತ ಪ್ರಾಕ್ಪ್ರಣಿತ ಅಯಾಚಿತ ತಾತ್ಕಾಲಿಕಮೆಂಬ ಪಂಚವಿಧ ಭಿಕ್ಷಂಗಳನಾದೊಡಂ ಏಕಾನ್ನವ ನಾದೊಡಂ, ಯಥೇಷ್ಟಮಲ್ಲದೆ ಅಲ್ಪಮಲ್ಲದೆ ರೋಗಾನುಗುಣ್ಯವಾಗಿ ಭೋಜನಂಗೆಯ್ದು, ಗುರುಪಾಸ್ಥೆಯಿಂದ ಆತ್ಮಜ್ಞಾನಾಭ್ಯಾಸಿಯಾಗಿ; ಸ್ನಾನ, ಶೌಚ ಸತ್ಯ ಅನೃತ ಕಾಮ ಕ್ರೋಧ ಲೋಭ ಮೋಹ ಶೋಕ ಹರ್ಷ ದಂಭ ದರ್ಪಾದಿಗಳಂ ಬಿಟ್ಟು, ಚಾತುರ್ಮಾಸವನಾಚರಿಸುತ್ತೆ, ತನ್ನಿಂ ಪೂರ್ವಾಂತ್ರವಾಚಾರವನುಳಿದು ಉತ್ತರಾಚಾರನಿಷ್ಪ್ರನಾಗಿರ್ಪಾತನೇ ಪರಮಹಂಸನಪ್ಪಂ. ೩೩

ಅತ್ಯಾಶ್ರಮಿ :

ಬಳಿಕ ಸೂರ್ಯೋದಯಕ್ಕೆ ಮೊದಲು ಇದು ಖದ್ಯೋತ ಇದು ದೀಪ ಇದು ನಕ್ಷತ್ರ ಇದು ಚಂದ್ರನೆಂದು ಇಂತು ಬೇರೆ ಬೇರೆ ಲಕ್ಷಿಸಿಕೊಳುತ್ತಿರ್ದ, ಪ್ರಕಾರಾಂತರಂಗಳು, ಆ ಸೂರ್ಯೋದಯುಮಾಗಲೊಡನೆ, ತಾವು ಆ ಸೂರ್ಯದೀಪ್ತಿಯೊಳು ಅಂತರ್ಭಾವಮಪ್ಪಂತೆ, ಜ್ಞಾನೋತ್ಪತ್ತಿಗೆ ಮುನ್ನವೆ ಭಿನ್ನ ಭಿನ್ನಮಾಗಿ ಅಭಿಮಾನಿಸಿಕೊಳಲು ಯೋಗ್ಯಮಾಗಿರ್ದ ಚತುರಾಶ್ರಮಧರ್ಮಂಗಳಿಂದ ಅಂತಃಕರಣಶುದ್ಧನಾಗಿ ಮೇಲೆ ಸಾಧನಚತುಷ್ಟಯ ಸಂಪನ್ನನಾಗೆ, ಬಳಿಕ ಶ್ರೀಗುರೂಪದೇಶದಿಂ ವೇದೋಕ್ತಮಾದ ಜೀವ ಪರಮೈಕ್ಯ ವಿಷಯಮಪ್ಪ ಸಮ್ಯಜ್ಞಾನಿಯಾದ ಅನಂತರದೋಳು, ಆ ಜ್ಞಾನಕ್ಕೆ ಬೇರೊಂದು ಅತಿಶಯವಿಲ್ಲಾಗಿ, ತನಗೊಂದು ಆಶ್ರಮಾಭಿಮಾನವಿಲ್ಲದೆ, ವಿದಿ ನಿಷೇದಾತೀತನಾಗಿ ಸರ್ವ ಆಶ್ರಮಂಗಳಿಂ ತಾನೇ ಪೂಜ್ಯನಾಗಿ, ಜೀವನ್ಮುಕ್ತನೆಂದು, ಬ್ರಾಹ್ಮಣನೆಂದು ಪೆಸರ್ವಡೆದಿರ್ಪಾತನೆ ಅತ್ಯಾಶ್ರಮಿಯಪ್ಪಂ. ೩೦೪

ಶಿವಯೋಗಾಧಿಕಾರಿಗಳು :

ಬಳಿಕ, ಇಂತು ಪೂರ್ವೋಕ್ತ ಸಕಲಶೈವರು, ವರ್ಣಾಶ್ರಮಿಗಳಲ್ಲಿ, ಶುದ್ಧವೈದಿಕರೆಂದು, ತಾಂತ್ರಿಕ ವೈದಿಕರೆಂದು, ಶುದ್ಧತಾಂತ್ರಿಕರೆಂದು, ವೈದಿಕ ತಾಂತ್ರಿಕರೆಂದು ಜ್ಞಾನಕ್ರಿಯಾಭೇದದಿಂದ ನಾಲ್ಕುತೆರದ ಅಧಿಕಾರಿಗಳಾಗಿ ಇರ್ಪರು, ಅವರಲ್ಲಿ;

೧. ತಂತ್ರವಾಸನೆಮುಗದೆ ವೈದಿಕನಿಷ್ಠರೇ ಶುದ್ಧವೈದಿಕರು.
೨. ವೇದ ಸ್ಮೃತಿಗಳೆರಡರಲ್ಲಿಯೂ ಪ್ರೀತಿಯುಕ್ತರೇ ತಾಂತ್ರಿಕ ವೈದಿಕರು.
೩. ವೇದವಾಸನೆ ಮುಗದೆ ತಂತ್ರೈಕನಿಷ್ಠರೇ ಶುದ್ಧತಾಂತ್ರಿಕರು.
೪. ತಂತ್ರ ವೇದ ಉಭಯ ಪ್ರೀತರೇ ವೈದಿಕ ತಾಂತ್ರಿಕರಕ್ಕುಂ.

ಪ್ರಮಾಣ ಗ್ರಂಥ ವಿಭಾಗ :

ಮತ್ತಂ, ಅಧಿಕಾರಿಗಳ್ಗೆ ಮಾರ್ಗಸಂಕರಮಾಗದಂತೆ ಬೇರೆ ಬೇರೆ ವಿಧಿ ಪ್ರತಿಪಾದಕಂಗಳು ಆವಾವೆಂದೊಡೆ: ಸೂತಸಂಹಿತೆ, ಪಾರಾಶರ ಪುರಾಣಾದಿಗಳೇ ಶುದ್ಧ ವೈದಿಕ ಪ್ರತಿಪಾದಕಂಗಳು; ಶಿವರಾಘವ ಸಂವಾದ, ವಾಯವೀಯ ಸಂಹಿತಾದಿಗಳೇ ತಾಂತ್ರಿಕವೈದಿಕ ಪ್ರತಿಪಾದಕಂಗಳು; ಶೈವ ಪಾಶುಪತ ಸೋಮ ಲಾಕುಳಮೆಂಬ ಶಾಸ್ತ್ರಾಂತರಂಗಳೇ ಶುದ್ಧ ತಾಂತ್ರಿಕ ಪ್ರತಿಪಾದಕಂಗಳು; ಭಾಗವತ ಶಿವಸಿದ್ಧಾಂತಾದಿಗಳೇ ವೈದಿಕ ತಾಂತ್ರಿಕ ಪ್ರತಿಪಾದಕಂಗಳೆಂದು ಪೇಳ್ದುದೇ ಚರ್ಯಾಪಾದಮಕ್ಕುಂ. ೩೦೫

ಯೋಗಪಾದ

ಯೋಗಾಚಾರ್ಯ ಲಕ್ಷಣ :

ಮತ್ತಂ ಯೋಗಪಾದದಲ್ಲಿ ಶ್ರೀಕಂಠೇಶ್ವರನಿಂದ ಉಪದೇಶ ಪಡೆದ ಶ್ವೇತ ಸದಾವ ದಮನ ಸಹೋತ್ರ ಕಂಕ ಲೋಕಾಕ್ಷ ಜನಿಷತ್ಯ ದಧಿವಾಹ ವೃಷಭ ಉಗ್ರ ಅತ್ರಿ ಸುಬಾಲಕ ಗೌತಮ ವೇದಶಿರ ಗೋಕರ್ಣ ಗುಹಾವಾಸಿ ಶಿಖಂಡಿ ಜಟಾಮಾಲಿ ಅಟ್ಟಹಾಸ ದಾರುಕ ಲಾಂಗುಲಿ ಮಹಾಕಾಯ ಶೂಲಿ ಡಿಂಡಿ ಮುಂಡಿ ಸಹಿಷ್ಣು ಸೋಮಶರ್ಮ ಲಕುಲಿಶರೆಂಬ ಅಷ್ಟವಿಂಶತಿ ಯೋಗಾಚಾರ್ಯರಾದ ಮುನೀಶ್ವರರಾದೊಡೆ, ಒಬ್ಬೊಬ್ಬರಿಗೆ ನಾಲ್ವರು ಶಿಷ್ಯರುಗಳಾದಿ ಶ್ವೇತ-ಶಿಖಾದಿ, ಮಿಶ್ರ ಕರಿಷ್ಯನೆಂಬಾತಂ ಕಡೆಯಾದ ನೂರಹನ್ನೆರಡು ಶಿಷ್ಯರೊಡಗೂಡಿ, ಭಸಿತ ಅಕ್ಷ ಯೋಗದಂಡ ಯೋಗಪಟ್ಟಾದಿಗಳಿಂದ ಅಲಂಕೃತರಾಗಿ, ಏಕಶಿಖಿ ಬಹುಶಿಖಿ ಪಂಚಶಿಖಿ ಕೇಶಪಾಶ ಮುಂಡನಂಗಳುಳ್ಳವರಾಗಿ ಶಾಂತ ತೇಜೋಮಯರಾರ್ಗಿರೆಂದು ಯೋಗಾಚಾರ್ಯಲಕ್ಷಣಂಗಳು. ೩೦೬

ಯೋಗಾಧಿಕಾರಿಗಳು ಮತ್ತು ಯೋಗಭೇದಗಳು :

ಬಳಿಕ ಈಶ್ವರನಲ್ಲಿ ಚಿತ್ತದ ಏಕತ್ವವೇ ಲಕ್ಷಣಮಾದ ಯೋಗದ, ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗವೆಂಬವೆ ನಾಲ್ಕು ಯೋಗಭೇದಂಗಳು. ಮೃದುವೆಂದು ಮಧ್ಯವೆಂದು ಅತಿಮಾತ್ರವೆಂದು ಅತಿಮಾತ್ರತರವೆಂದು ಚತುರ್ವಿಧಕ್ರಮದಿಂದ ಆ ಮಂತ್ರಾದಿ ಯೋಗಾಧಿಕಾರಿಗಳು. ಬಳಿಕ ನಾಲ್ಕು ಯೋಗಾನುಕ್ರಮದಿಂದವೆ ಪ್ರಣವಹಂಸಾದಿ ವಿಧಿಗಳುಂ; ದಶನಾದ ದಶಬಿಂದುಲಕ್ಷಣಗಳುಂ; ಯಮ ನಿಯಮ

ಆಸನ ಪ್ರಾಣಯಾಮ ಪ್ರತ್ಯಹಾರ ಧ್ಯಾನ ಧಾರಣ ಸಮಾಧಿಗಳೆಂಬ ಈ ಸಗುಣ ನಿರ್ಗುಣ ರೂಪಮಾದ ಅಷ್ಟಾಂಗ ಯೋಗವಿಧಿಗಳುಂಟು.

ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಕ್ಷಮೆ ಧೃತಿ ದಯೆ ಆರ್ಜವ ಮಿತಾಹಾರ ಶೌಚಮೆಂಬ ಯಮದ ದಶಭೇದಂಗಳುಂ;

ತಪಸ್ಸು ಸಂತೋಷ ಆಸ್ತಿತ್ಯ ದಾನ ಈಶ್ವರಪೂಜೆ ಸಿದ್ಧಾಂತಶ್ರವಣ ಲಜ್ಜೆ ಮತಿ ಜಪ ವ್ರತವೆಂಬ ನಿಯಮದ ದಶಭೇದಂಗಳು.

ಬಳಿಕ ಯಮಾದಿಭೇದಂಗಳ ಲಕ್ಷಣವೆಂತೆನೆ; ಯಜ್ಞಾರ್ಥಮಾದ ಪಶುಹಿಂಸೆ ಇದೊಂದು ಹೊರತಾಗಿ, ಮತ್ತೆ ಎಲ್ಲಾ ಕಡೆಯಲ್ಲಿಯೂ ಸಕಲ ಪ್ರಾಣಿಗಳ್ಗೆ ಕ್ಲೇಶಮಂ ಪುಟ್ಟಿಸದಿರ್ಪುದೇ **ಅಹಿಂಸೆ** ಸನಿಸೂದು.

ಗುರುದೇವತಾ ಪ್ರಯೋಜನಮಾದ ಒಂದೆಡೆಯಲ್ಲದೆ ತನಗೆ ಬಂದ ಆಪತ್ತು ಭೀತಿಗಳಲ್ಲಿಯೂ ಪುಸಿಯದಿರ್ಪುದೇ **ಸತ್ಯ**ವೆನಿಸೂದು.

ಚೌರ್ಯದಿಂದಾದರೂ ಬಲಾತ್ಕಾರದಿಂದಾದರೂ ಪರದ್ರವ್ಯವನು ಅಪಹರಿಸಿದಿರ್ಪುದೇ ಅಸ್ತೇಯವೆನಿಸೂದು.

ವನಿತಾದಿ ವಿಲಾಸಮಂ ಕಂಡು ಕೇಳ್ದು, ಅಲ್ಲಿ ಮನೋವಾಕ್ಕಾಯಂಗಳಿಂ ಮಾತೃವೆಂದು ಬಗೆವುದೇ ಬ್ರಹ್ಮಚರ್ಯವೆನಿಸೂದು.

ಪರರು ಮಾಳ್ಪ ಅಪಕಾರಮಂ ತಾನು ಸಮರ್ಥನಾಗಿದ್ದು ಸೈರಿಪುದೇ ಕ್ಷಮೆಯೆನಿಸೂದು.

ಆಪ್ತಬಂಧು, ಸುತಾದಿಗಳ ಪ್ರಾಪ್ತ್ಯಾಪ್ರಾಪ್ತಿಗಳಲ್ಲಿ ಹರ್ಷಶೋಕಮಿಲ್ಲದೆ ಇರ್ಪುದೆ ಧೃತಿಯೆನಿಸೂದು.

ರೋಗಾದಿಗಳಿಂ ಪೀಡಿತರಾದ ಶತ್ರುಮಿತ್ರಾದಿಗಳ ರಕ್ಷಣಾಭಿಮುಖ ಮಪ್ಪುದೇ ದಯವೆನಿಸೂದು.

ಹರ್ಷ ಶೋಕಂಗಳೆಡೆಯಲ್ಲಿ ಬುದ್ಧಿ ಕದಡದಿರ್ಪುದೇ ಆರ್ಜವವೆನಿಸೂದು.

ಅಲ್ಪವಲ್ಲದೆ ಯಥೇಷ್ಟವಲ್ಲದೆ ಯೋಗಾನುಗುಣ್ಯಮಾಗಿ ಭೋಜನಂಗೆಯ್ವುದೇ ಮಿತಾಹಾರವೆನಿಸೂದು.

ಸ್ವದೇಹ ಮಲವಿಮೋಚನಾರ್ಥಮಾಗಿ ಮೃತ್ತಿಕೆ ಜಲಗಳಿಂ ಮನೋಮಲ ಹರಾರ್ಥಮಾಗಿ ಮಂತ್ರಧ್ಯಾನಾದಿಗಳಂ ಮಾಳ್ಪುದೇ ಶೌಚವೆನಿಸೂದು. ೩೦೭

ನಿಯಮಾದಿಗಳ ಭೇದವೆಂತೆಂದೊಡೆ :

ಎನಗೀ ಸಂಸಾರವೇನುಕಾರಣ ಬಂದಿತ್ತು, ಇದು ಎಂತು ಬಿಡುವುದು ಎಂದು ಆಳೋಚಿಸಿ ತಿಳಿವುದೇ ತಪವೆನಿಸೂದು.

ತನಗೆ ಇನಿತು ದೊರಕಿದನಿತರಲ್ಲಿಯೇ ಪರಿಣಾಮಿಸಿರ್ಪುದೇ ಸಂತೋಷವೆನಿಸೂದು.

ಪುಣ್ಯಪಾಪ ಸ್ವರ್ಗನರಕಾದಿಗಳುಂಟೆಂದು ತಿಳಿವುದೇ ಆಸ್ತಿಕ್ಯವೆನಿಸೂದು.

ತಾನುಗಳಿಸಿದ ಅನ್ನಾದಿ ದ್ರವ್ಯಂಗಳ ಧರ್ಮಾರ್ಥಮಾಗಿ ವಿಧಿಪೂರ್ವದಿಂ ದೇಶ ಕಾಲ ಪಾತ್ರವರಿದು ಈವುದೇ ದಾನವೆನಿಸೂದು.

ಸ್ಮರಣ ಸ್ತುತಿ ಭಜನೆಗಳಿಂ ಮನೋ ವಾಕ್ಕಾಯಂಗಳಲ್ಲಿ ಶಿವಭಕ್ತಿ ಧೃಢಮಾದುದೇ ಈಶ್ವರಪೂಜೆಯೆನಿಸೂದು.

ವೇದಾರ್ಥವಿಚಾರಮಂ ಮಾಳ್ಪುದೇ ಸಿದ್ಧಾಂತಶ್ರವಣವೆನಿಸೂದು.

ಲೌಕಿಕ ವೈದಿಕ ವಿರೋಧಮಾದ ಮಾರ್ಗದತ್ತ ಚಿತ್ತವನು ಎರಗಲು ಈಯದಿರ್ಪುದೇ ಲಜ್ಜೆಯೆನಿಸೂದು.

ವಿಹಿತಮಾದ ಸ್ವಧರ್ಮದಲ್ಲಿಯ ವಿಶ್ವಾಸವೇ ಮತಿಯೆನಿಸೂದು.

ಪ್ರಣವ ಶತರುದ್ರೀಯಾದಿಗಳ ಸ್ವಾಧ್ಯಾಯವೇ ಜಪವೆನಿಸೂದು.

ಧರ್ಮಾರ್ಥಮಾತ್ಮ ಸಿದ್ಧ್ಯರ್ಥಮಾದ ಉಪಾಯಗ್ರಹಣವೇ ವ್ರತವೆನಿಸೂದು. ಇವೆಲ್ಲಂ ಅಹಿಂಸಾದಿಗಳ ಲಕ್ಷಣಂಗಳು. ೩೦೭ ಅ

ಶಿವಯೋಗಾಸನಗಳು :

ಬಳಿಕ ಸ್ಥಿರಸುಖದಿಂ ನಿಶ್ಚಲಾತ್ಮಕಮಾದ ಆಸನದಲ್ಲಿ:

ಸಿದ್ಧಾಸನ ಸಿಂಹಾಸನ ಸ್ವಸ್ತಿಕಾಸನ ಸವ್ಯಾಸನ ಶೂಲಾಸನ ಸುಖಾಸನ ಸರ್ವತೋಭದ್ರಾಸನ ಗೋಮುಖಾಸನ ಗರುಡಾಸನ ಮಯೂರಾಸನ ಮತ್ಸ್ಯೇಂದ್ರಾಸನ ಮುದ್ಗರಾಸನ ಮಂಡುಕಾಸನ ಮೃಗಾಸನ ನಾಗಾಸನ ಕುಕ್ಕುಟಾಸನ ಕುಂಜರಾಸನ ಕೂರ್ಮಾಸನ ಕ್ರೌಂಚಾಸನ ಕಾಷ್ಠಾಸನ ಖಡ್ಗಾಸನ ಕಾಮದಹನಾಸನ ಯೋನ್ಯಾಸನ ವ್ಯಾಘ್ರಾಸನ ವೈಣಿಕಾಸನ ವಸ್ತ್ರಾಸನ ವಾಸನಾಸನ ವೀರಾಸನ ವರಾಹಾಸನ ಪರ್ಯಂಕಾಸನ ಪದ್ಮಾಸನ ಪಥಾಸನ ಪಶ್ಚಿಮತಾಣಾಸನ ತ್ರಿಸದಾಸನ ಹಸ್ತಿಕರ್ಣಾಸನ ಹೈಮಾಸನ ಆರ್ಧಾಸನಾದಿ ಎಂಭತ್ತನಾಲ್ಕಾಸನ ಭೇದಂಗಳುಂ.

ಯೋಗಕ್ಕೆ ಘಟಚಕ್ರಾದಿವಿವೇಕ :

ಬಳಿಕ ಶರೀರ ಜನಿತ ವಾಯುನಿರೋಧವೇ ಲಕ್ಷ್ಯಮಾದ ಪ್ರಾಣಾಯಾಮ ವಿಧಿಗೆ ಮೊದಲು ಪ್ರಾಕಾರ ವೇದಿಕೆ ಕೂಪ ಅಲ್ಪದ್ವಾರ ಆರಂದ್ರ ವಿತಾನ ಸಕಲಬಾಧಾ ರಹಿತತ್ವಾದಿಸಲ್ಲಕ್ಷಣ ಯೋಗಮಂಟಪ ರಚನಾಪ್ರಕಾರಮುಂ; ಕುಶ ಕೃಷ್ಣಾಜಿನಾದಿ ಯೋಗಗೃಹೋಪಕರಣ ಪ್ರಕಾರಂಗಳುಂ; ತೈಲ ಪಿಣ್ಯಾಕಾದಿ ಯೋಗೀಶ್ವರ ನಿಷೇಧ ದ್ರವ್ಯಂಗಳುಂ; ಮುದ್ಗ ಪಟೋಲಕ ಗೋದುಮಾದಿ ಯೋಗಿಶ್ವರ ಸ್ವೀಕಾರವಸ್ತು ನಿಯಮಂಗಳುಂ; ಮೇಲೆ ಪ್ರಾಣಾಯಾಮ ಪ್ರಾರಂಭದಲ್ಲಿ ಶ್ರೀಗುರು ಸರಸ್ವತಿ ವಿಘ್ನೇಶ್ವರ ವಿಶಾಖಾದಿ ದೇವತಾ ಪೂಜಾ ವಿಧಾನಂಗಳುಂ; ಬಳಿಕ ಸಕಲ ಮನುಷ್ಯರ ಶರೀರವೇ ತಮ್ಮತಮ್ಮ ತೊಂಬತ್ತಾರಂಗುಲದ ಉದ್ಧವಹುದು, ಅಲ್ಲಿ ಗುದಸ್ಥಾನದಿಂದ ಎರಡಂಗುಲದ ಮೇಲೆ ಶಿಶ್ನ, ಶಿಶ್ನದಿಂದ ಎರಡಂಗುಲದ ಕೆಳಗೆ ಮಧ್ಯ ಒಂದಂಗುಲ ಪ್ರಮಾಣಿನ ಸ್ಥಾನವೇ ದೇಹಮಧ್ಯವೆನಿಸೂದು, ಅದೇ ಮೂಲಾಧಾರವೆಂದೂ, ಶಿಖಿಸ್ಥಾನವೆಂದೂ,

ಪೆಸರನುಳ್ಳುದಾಗಿ ತ್ರಿಕೋಣಾಕಾರಮಾಗಿ ತಪ್ತ ಸುವರ್ಣಕಾಂತಿಮಯವಾಗಿಹುದು. ಮತ್ತೆ ಅದರಿಂ ನವಾಂಗುಲದುದ್ದದಲ್ಲಿ ಚತುರಂಗುಲ ವಿಸ್ತಾರವಾದ ಕುಕ್ಕುಟಾಂಡಾಕಾರಮಪ್ಪ ನಾಡೀಕಂದವಿಹುದು. ಅದರ ಮಧ್ಯವೇ ನಾಭಿಯೆನಿಸೂದು, ಆ ನಾಡೀ ಕಂದದಿಂದ ಎರಡಂಗುಲದಕೆಳಗೆ ಕುಂಡಲಿ ಸ್ಥಾನವಿಹುದು. ಅಲ್ಲಿ ಕುಂಡಲಿ ಸರ್ಪನು ಅಷ್ಟಪ್ರಕೃತಿ ರೂಪದಿಂ ಸಪ್ತ ಕುಟಿಲಾಕೃತಿಯಾಗಿ ನಾಡೀಕಂದದ ಮಧ್ಯದ ಸುಷುಮ್ನೆಯೆಂಬ ನಾಡೀ ದ್ವಾರಮಂ ತನ್ನ ಮುಖದಿಂ ಮುಚ್ಚಿ ಮರಸಿ ನಿದ್ರಿತಮಾಗಿಹುದು. ಬಳಿಕ ನಾಡೀ ಕಂದದಿಂ ದ್ವಾದಶಾಂಗುಲದುದ್ದಮಾದ ನಾಳದಿಂ ಪತ್ರಾಷ್ಟಕದಿಂ ಚತುರಂಗುಲ ವಿಸ್ತಾರದಿಂ ಕದಳೀ ಕುಸುಮದಂತೆ ಅಧೋಮುಖಮಾಗಿ ಪೂರ್ವಹೃದಯ ಕಮಲವಿಹುದು. ಅಲ್ಲಿ ಜೀವಹಂಸನು ಕರ್ಮಪಾಶಬದ್ಧನಾಗಿ ವಾಲಾಗ್ರ ಶತಭಾಗೆಯೊಳು ಒಂದರ ಅನಿತು ಸೂಕ್ಷ್ಮನಾಗಿ ಮನದ ನಡವಳಿಕೆಯಂ ಗಮಿಸುತ್ತಿಹನು. ೩೦೭ಕ

ಮತ್ತೆ ನಾಡೀ ಕಂದದಿಂ ಪೊರಮಟ್ಟು ಜಾಲಸೂತ್ರಂಗಳಂತೆ ಮೇಲುಕೆಳಗೆ ಎಡಬಲಂಗಳಿಗೆಯ್ದಿ, ಮನಃಪ್ರಾಣಾದಿ ದಶವಾಯುಗಳ ಸಂಚಾರಮಾರ್ಗಗಳೆನಿಸಿದ ಎಪ್ಪತ್ತೆರಡು ಸಾವಿರ ನಾಡಿಗಳೊಳಗೆ ಮುಖ್ಯವೆನಿಸಿದ ಚತುರ್ದಶನಾಡಿಗಳು, ಅವರಲ್ಲಿ ಈಶ್ವರನಧಿದೇವತೆಯಾದ ಸುಷುಮ್ನೆಯೇ ಮಸ್ತಕಾಂತ ಮಾಗಿಹುದು. ವಿಷ್ಣುದೇವತೆಯಾದ ಈಡೆಯೇ ವಾಮನಾಸಾಪುಟಾಂತಮಾಗಿಹುದು. ಬ್ರಹ್ಮನಧಿದೇವತೆಯಾದ ಪಿಂಗಲೆಯೇ ದಕ್ಷಿಣನಾಸಾ ಸಂಪುಟಾಂತ ಮಾಗಿಹುದು. ಇಂದ್ರನಧಿದೇವತೆಯಾದ ಗಾಂಧಾರಿಯೇ ವಾಮನೇತ್ರಾಂತವಾಗಿಹುದು. ದಿಕ್ಕಧಿದೇವತೆಯಾದ ಪೂಷೆಯೇ ದಕ್ಷಿಣ ನೇತ್ರಾಂತವಾಗಿಹುದು. ಚಂದ್ರನಧಿದೇವತೆಯಾದ ಶಂಖಿನಿಯೇ ವಾಮ ಕರ್ಣಾಂತಮಾರಿಹುದು. ಪ್ರಜಾಪತಿಯಧಿದೇವತೆಯಾದ ಪಯಸ್ವಿನಿಯೇ ದಕ್ಷಿಣ ಕರ್ಣಾಂತಮಾಗಿಹುದು. ವಿರಾಡಧಿದೇತೆಯಾದ ಸರಸ್ವತಿಯೇ ಜಿಹ್ವಾಂತಮಾಗಿಹುದು. ಭೂಮಿಯಧಿದೇವತೆಯಾದ ಲಕುಹು ಎಂಬುದೇ ಶಿಶ್ನಾಂತವಾಗಿಹುದು. ವರುಣನಧಿದೇವತೆಯಾದ ಹಸ್ತಿಜಿಹ್ವೆಯೇ ವಾಮಪಾದಾಂಗುಷ್ಟಾಂತಮಾಗಿಹುದು. ಮಾಯುದೇವತೆಯಾದ ವಾರುಣಿಯೆ ಸರ್ವಾಂಗ ಗಾಮಿನಿಯಾಗಿಹುದೆಂದು ಶರೀರಾಭ್ಯಾಂತರ ನಾಡೀಚಕ್ರ ವಿಚಾರಂಗಳುಂ. ೩೦೮

ಬಳಿಕ ನಾಡೀ ಶೋಧನ ಕ್ರಮಂಗಳು

ಯೋಗತಂತ್ರ ಪರಿಚಯ :

ರೇಚಕ ಪೂರಕ ಕುಂಬಕ ವಿಧಗಳುಂ; ತನ್ನ ಜಾನುವಂ ದಕ್ಷಿಣ ಹಸ್ತದಿಂ ಪ್ರದಕ್ಷಿಣಂಗೈದು ಒಂದು ಚಿಟುಕನಿಕ್ಕಲದೇ ಮಾತ್ರೆಯಹುದಾಗಿ ಷೋಡಶಾದಿ ಮಾತ್ರಾನಿಯಮಂಗಳುಂ; ತನುಲಾಘವ ದೀಪನ ಜಠರಾಗ್ನಿ ವರ್ಧನಾದಿ ನಾಡಿ ಶುದ್ಧಿ ಚಿಹ್ನಂಗಳುಂ; ಸೂರ್ಯಭೇದನ ಉಜ್ಜಾಯಿ ಸೀತ್ಕಾರಿ ಶೀತಳಿ ಭಸ್ತ್ರಿಕೆ ಭ್ರಮರಿ ಮೂರ್ಛೆ ಕೇವಲ ಎಂಬ ಅಷ್ಟಕುಂಬಕ ಪ್ರಕಾರಂಗಳುಂ; ಮೂಲಬಂಧ ಉದ್ಯಾಣಬಂಧ ಜಾಲಂಧರಬಂಧವೆಂಬ ಬಂಧತ್ರಯಂಗಳುಂ; ಪ್ರಾಕೃತ ವೈಕೃತಮಾದ ರೇಚಕ ಪೂರಕ

ಕುಂಭಕ ಉತ್ಕರ್ಷ ಅಪಕರ್ಷ ಶೂನ್ಯ ಉತ್ಕ್ರಾಂತಿ ಎಂಬ ಸಪ್ತ ಪ್ರಾಣಾಯಾಮ ಲಕ್ಷಣಂಗಳುಂ; ಸ್ವೇದ ಕಂಪನ ದೇಹೋತ್ಥಾನಮೆಂಬ ಕ್ರಮದಿಂ ಕನಿಷ್ಠ ಮಧ್ಯಮ ಉತ್ತಮ ಪ್ರಾಣಾಯಾಮ ಸಿದ್ಧಿಸೂಚನೆಗಳು; ಪಶ್ಚಿಮದ್ವಾರಗಮನ ಬ್ರಹ್ಮಾದಿ ಗ್ರಂಥಿಭೇದದ ಶಿರೋಮದ್ಯಗತ ಚಂದ್ರಾಮೃತ ಸೇವನಾದಿ ಕ್ರಮಂಗಳುಂ; ೩೦೯.

ಸರ್ವಯೋಗಾಂಗ ಫಲಾದಿ ಸಂಗ್ರಹ :

ಬಳಿಕ ಈ ಪ್ರಾಣಾಯಾಮದಿಂ ಪಾಪಕ್ಷಯ ರೂಪ ಶಾಂತಿ, ಅಜ್ಞಾನ ನಿವೃತ್ತಿರೂಪ ಪ್ರಶಾಂತಿ, ಜ್ಞಾನ ಪ್ರಕಾಶರೂಪ ದೀಪ್ತಿ, ಬುದ್ಧಿ ನಿರ್ಮಲರೂಪ ಪ್ರಸಾದವೆಂಬ ಚತುರ್ವಿಧ ಸಿದ್ಧಿಗಳು ಅಹಮೆಂಬುದುಂ; ಬಳಿಕ ಬಾಹ್ಯಕರ್ಮಪರಿತ್ಯಾಗದಿಂ ಚಿತ್ತವನು ಅಂತರ್ಮುಖಕ್ಕೆ ಎಯ್ದಿಸುವುದೇ ಲಕ್ಷಣಮಾದ ಪ್ರತ್ಯಾಹಾರದ ಅನೇಕ ಭೇದಂಗಳುಂ; ಬಳಿಕ ಪರಶಿವನೆಂಬ ಶುಭಾಶ್ರಯದಲ್ಲಿ ಚಿತ್ತಸ್ಥಾಪನವೇ ಲಕ್ಷಣಮಾದ ಧಾರಣದ ಭೂಧಾರಣಾದಿ ಬಹುಪ್ರಕಾರಂಗಳುಂ; ಮತ್ತಂ ವಿಷಯಾಂತರಕ್ಕೆರಗದೆ ಶಿವಚಿಂತಾ ಪ್ರವಾಹರೂಪಮಾದ ಧ್ಯಾನದ ನಾನಾವಿಧಂಗಳುಂ; ಧ್ಯೇಯ ವಸ್ತುವಿನಲ್ಲಿ ಮನೋನಿಶ್ಚಲಾತ್ಮಕಮಾದ ಸಮಾಧಿಯ ಜ್ಞಾತಾಜ್ಞಾತಾದಿ ಭೇದಂಗಳುಂ; ಬಳಿಕ ಅಣಿಮಾದ್ಯನೇಕ ಸಿದ್ಧಿಭೇದಂಗಳೇ ಫಲಂಗಳ್. ೩೧೦ಅ

ಯೋಗ ವಿಘ್ನಾದಿಗಳು :

ಆಲಸ್ಯ ವ್ಯಾಧಿ ಪ್ರಮಾದ ಸ್ಥಾನಸಂಶಯ ಅನವಸ್ಥಿತಿ ಅಶ್ರದ್ಧೆ ಭ್ರಾಂತಿದರ್ಶನ ದುಃಖ ದೌರ್ಮನಸ್ಯ ವಿಷಯಲೋಲುಪ್ತವೆಂಬ ದಶ ಯೋಗವಿಘ್ನಂಗಳುಂ; ಲಯ ವಿಕ್ಷೇಪ ಕಾಷಾಯಮೆಂಬ ದೋಷತ್ರಯಂಗಳುಂ; ಆಯಾಯ ವಿಘ್ನ ದೋಷೋಪಶಾಂತಿ ಪ್ರಕಾರಂಗಳುಂ ಅಕ್ಕುಂ. ೩೧೦ಬ

ಯೋಗ ಫಲಾದಿಗಳು :

ಮತ್ತಂ ಆ ಯಮಾದ್ಯಷ್ಟಾಂಗದೊಳಗೆ ಮೊದಲ ಯಮಾದಿನಾಲ್ಕಂಗವೇ ಬಾಹ್ಯವೆನಿಸಿಹವು. ಮಿಕ್ಕ ಪ್ರತ್ಯಹಾರಾದಿ ನಾಲ್ಕಂಗವೇ ಅಂತರಂಗವೆನಿಸಿಹವು. ಅವರಲ್ಲಿ: ಅಹಿಂಸಾದಿ ಅವಾಂತರಂಗಮುಳ್ಳ ನಿಯಮಕ್ಕೆ ಅಭಿಮತ ದೇವತಾ ಸಂದರ್ಶನಾದಿಗಳು.

ಸ್ವಸ್ತಿಕಾದಿ ಭೇದಮುಳ್ಳ ಆಸನಕ್ಕೆ ದೇಹಾರೋಗ್ಯ ಅನಿಲಸ್ಯಾದಿಗಳು. ರೇಚಕಾದಿ ಸಪ್ತಭೇದಮುಳ್ಳ ಪ್ರಾಣಾಯಾಮಕ್ಕೆ ಸಕಲ ದೋಷ ನಿವೃತ್ಯಾದಿಗಳು. ಇಂದ್ರಿಯಂಗಳನು ಅಂತರಂಗಕ್ಕೆ ಆಕರ್ಷಣಂ ಮಾಳ್ಪ ಪ್ರತ್ಯಾಹಾರಕ್ಕೆ ವೈರಾಗ್ಯ ಲಕ್ಷಣ ವಹ್ನಿಯಿಂ ತತ್ತದ್ವಿಷಯವರ್ಗವನದಹನಾದಿಗಳುಂ, ಶುಭಾಶ್ರಯದಲ್ಲಿ ಚಿತ್ತಬಂಧನರೂಪಧಾರಣಕ್ಕೆ ಪಾಪಕ್ಷಯಾದಿಗಳುಂ, ಸಗುಣ ನಿರ್ಗುಣ ಧ್ಯಾನಕ್ಕೆ ಅನೀಶ್ವರತ್ವಂ ನಿವೃತ್ತ್ಯಾದಿಗಳುಂ ಜ್ಞಾತಾದಿ ಸಮಾಧಿಗೆ ಪ್ರಜ್ಞಾ ಪ್ರತಿಷ್ಠಾದಿಗಳೇ ಫಲಂಗಳೆಂಬುದು. ೩೧೦ಕ

ಅಷ್ಟಾಂಗಾಧಿಕಾರಿ ಭೇದ:

ಮತ್ತಮ ಆ ಅಷ್ಟಾಂಗದೊಳಗೆ ಯಮಾದಿ ಅಷ್ಟಾಂಗ ಅಭ್ಯಾಸಿಗಳೇ ಕನಿಷ್ಠರು.

ಆಸನಾದಿ ಷಡಂಗಾದಿ ಅಭ್ಯಾಸಿಗಳೇ ಮಧ್ಯಮರು. ಪ್ರತ್ಯಹಾರಾದಿ ಚತುರಂಗ ಅಭ್ಯಸಿಗಳೇ ಉತ್ತಮರು. ಧ್ಯಾನಾದಿ ದ್ವಯಾಂಗ ಅಭ್ಯಾಸಿಗಳೇ ಉತ್ತಮೊತ್ತಮರೆಂಬ ಅಂಗಾಧಿಕಾರಿ ಭೇದಂಗಳಕ್ಕುಂ. ೩೧೧

ನಿರ್ಗುಣಾಷ್ಟಾಂಗ ಯೋಗ ಲಕ್ಷಣ :

ಅನಂತರದಲ್ಲಿ:

ದೇಹೇಂದ್ರಿಯಾದಿ ವೈರಾಗ್ಯವೇಯಮ, ಪರಮಾರ್ಥಾಭಿರತಿಯೇ ನಿಯಮ, ಸರ್ವವಸ್ತುವಿನೊಳು ಉದಾಸೀನವೆ ಆಸನ,ವಿಷಯಾರ್ಥಮಾದ ಇಂದ್ರಿಯ ನಿರೋಧವೇ ಪ್ರಾಣಾಯಾಮ, ವಿಷಯ ವಿಮುಖತೆಯೇ ಪ್ರತ್ಯಾಹಾರ, ಸ್ವಾತ್ಮನಿಷ್ಠೆಯೇ ಧಾರಣ, ಬ್ರಹ್ಮವು ತಾನೆಂಬುದೇ ಧ್ಯಾನ,

ಎಚ್ಚರಿಲ್ಲದೆ ಮರವೆಯಿಲ್ಲದ ಸಂವಿತ್ ಮಾತ್ರಾವಭಾಸನವೇ ಸಮಾಧಿ, ಎಂಬೀ ನಿರ್ಗುಣ ಅಷ್ಟಾಂಗಯೋಗ ಲಕ್ಷಣಂಗಳ್. ೩೧೨

ಷಟ್‌ಚಕ್ರ ವಿಷಯ ವಿವೇಕ :

ಮತ್ತಂ, ಆಧಾರ ಸ್ವಾಧಿಷ್ಟಾನ ಮಣಿಪೂರಕ ಅನಾಹತ ವಿಶುದ್ಧಿ ಆಗ್ನೇಯವೆಂಬ ಷಟ್ಚಕ್ರಂಗಳುಂ; ಕ್ರಮದಿಂದ ಅವಕ್ಕೆ ದೇಹಮಧ್ಯ ಲಿಂಗ ನಾಭಿ ಹೃದಯ ಕಂಠ ಭ್ರೂಮಧ್ಯವೆಂಬ ಆರುಸ್ಥಾನಂಗಳುಂ; ಚತುರಸ್ರ ಅರ್ಧಚಂದ್ರಾಕಾರ ತ್ರಿಕೋಣ ಷಟ್ಕೋಣ ವೃತ್ರ ವಿಚಿತ್ರವಾದ ಆರು ಆಕಾರಂಗಳುಂ; ಪೃಥುವ್ಯಾದಿ ಮಾನಸಾಂತಮಾದ ಆರು ಭೂತಂಗಳುಂ; ಪೀತ ಶ್ವೇತ ರಕ್ತಿ ನೀಲ ಸ್ಫಟಿಕ ಮಾಣಿಕ್ಯವೆಂಬ ಆರುವರ್ಣಂಗಳುಂ; ಚತುರ್ದಳ ಷಡ್ದಳ ದಶದಳ ದ್ವಾದಶದಳ ಷೋಡಶದಳ ದ್ವಿದಳನ್ನುಉಳ್ಳಕಮಲಂಗಳುಂ; ವಾದಿಸಾಂತ ಬಾದಿಲಾಂತ ಡಾದಿಪಾಂತ ಕಾದಿಲಾಂತ ಅದಿವಿಸರ್ಗಾಂತ ಹಕಾರಕ್ಷಕಾರಂಗಳೆಂಬ ಆರು ವರ್ಗದಳಾಕ್ಷರಂಗಳುಂ; ನಕಾರಾದಿ ಪ್ರಣವಾಂತಮಾದ ಆರು ಕರ್ನಿಕ ಅಕ್ಷರಂಗಳುಂ; ಬ್ರಹ್ಮಾದಿ ಜೀವಾತ್ಮ ಅಂತ್ಯವಾದ ಅಧಾರದೇವತೆಗಳುಂ; ಮೇಲೆ ಬ್ರಹ್ಮಚಕ್ರ ಶಿಖಾಚಕ್ರ ಪಶ್ಚಿಮಚಕ್ರಮೆಂಬ ಚಕ್ರತ್ರಯಂಗಳುಂ; ಕ್ರಮದಿಂದ ಅವಕ್ಕೆ ಮಸ್ತಕ ಶಿಖಿ ಶಿಖಾಂತಮೆಂಬ ಸ್ಥಾನತ್ರಯಂಗಳುಂ; ಸಹಸ್ರದಳ, ತ್ರಿದಳ, ಶತದಳಮಾದ ಪದ್ಮತ್ರಯಂಗಳುಂ; ಜೋತಿವರ್ಣ ಮಹಾಜೋತಿವರ್ಣ ಅಪ್ರದರ್ಶನಮೆಂಬ ವರ್ಣತ್ರಯಂಗಳುಂ; ಅಕ್ಷರಾತ್ಮಕನಾದ ಅನಕ್ಷರಾತ್ಮಕನಾದ, ನಿಶ್ಶಬ್ದಮೆಂಬ ನಾದತ್ರಯಂಗಳುಂ; ಆಂತರಾತ್ಮ ಪರಮಾತ್ಮ ಪರಬ್ರಹ್ಮವೆಂಬ ಆದಿದೇವತಾತ್ರಯಂಗಳಕ್ಕುಂ. ೩೧೩

ಯೋಗವಿದ್ಯಾ ಪರಿವೇಷ :

ಬಳಿಕ ಸೋಮ ಸೂರ್ಯ ಅಗ್ನಿಮಂಡಲತ್ರಯ ಸ್ಥಾನ ಕಾಂತಿಪ್ರಕಾರಂಗಳುಂ; ಬಾಹ್ಯ ಮಧ್ಯಮ ಅಂತರ್ಲಕ್ಷ್ಯತ್ರಯಂಗಳುಂ; ಗುಣರಹಿತ್ಯಾದಿ ಆಕಾಶ ಪಂಚಕಂಗಳುಂ; ಪೂರ್ವ ಮಧ್ಯ ಉತ್ತರಮೆಂಬ ತಾರಕತ್ರಯಂಗಳುಂ; ಷಣ್ಮುಖಿ ಖೇಚರಿ ಶಾಂಭವಿ

ಮೊದಲಾದ ಮುದ್ರಾಭೇದಂಗಳುಂ; ಉನ್ಮನಿ ಮನೋನ್ಮನಿ ಸಹಜಾದಿ ಅವಸ್ಥಾಕ್ರಮಂಗಳುಂ; ವಿಕ್ಷೇಪ ಗತಾಗತ ಸಂಶ್ಲಿಷ್ಟ ಸ್ವಲೀನವೆಂಬ ಮನೋವೃತ್ತಿ ಚತುಷ್ಟಯಂಗಳುಂ; ಬಾಲ ಉನ್ಮತ್ತ ಪಿಶಾಚವೆಂಬ ಯೋಗೀಶ್ವರ ಚಿಹ್ನತ್ರಯಂಗಳುಂ; ಎಂಬಿವು ಮೊದಲಾದವೆಲ್ಲಂ ಯೋಗ ಪಾದದಲ್ಲಿ ಪ್ರತಿಪಾದ್ಯಂಗಳಕ್ಕುಂ. ೩೧೪

ಜ್ಞಾನಪಾದ

ಮತ್ತಂ ಆ ಜ್ಞಾನಪಾದದನ್ನಿ ಪತಿ ಪಶು ಪಾಶವೆಂಬ ತ್ರಿಪದಾರ್ಥ ಪ್ರತಿಪಾದಕಮಾಗಿಹುದು, ಅವರಲ್ಲಿ:

"ಪತಿ" ಪದಾರ್ಥ ವಿಚಾರ :

ಅನಾದಿ ನಿರ್ಮಲ ಚಿದ್ಧವ್ಯೈಕ್ಯತ್ವದಿಂ ಸೃಷ್ಟಿ ಸ್ಥಿತಿ ಸಂಹಾರ ತಿರೋಭಾವ ಅನುಗ್ರಹವೆಂಬ ಪಂಚಕೃತ್ಯ ಕತೃತ್ವವೇ ತನಗೆ ಅಸಾಧಾರಣ ಧರ್ಮಮಾಗಿ ಉಳ್ಳದೇ 'ಪತಿ' ಪದಾರ್ಥಮಕ್ಕುಂ. ೩೧೫

ಸೃಷ್ಟಿ ಸ್ವರೂಪ :

ಬಳಿಕ ಆ ಸೃಷ್ಟ್ಯಾದಿ ಪಂಚಕೃತ್ಯದ ವಿವರಮೆಂತೆನೆ: ಕರಣಕರ್ತೃತ್ವ ಸಂಕಲ್ಪಕರ್ತೃತ್ವ ಸನ್ನಿಧಾನಕರ್ತೃತ್ವಮೆಂಬ ತ್ರಿವಿಧ ಕಾರ್ಯಕರ್ತೃತ್ವದೊಳಗೆ ಕುಲಾಲಾದಿಕದಂತೆ ವಿಕಾರಾತ್ಮಕಮಾದ ಕರಣ ಕರ್ತೃತ್ವಮಂ ಬಿಟ್ಟು; ಬಳಿಕ ಸಂಕಲ್ಪಮೆಂಬುದು ಸ್ಮರಣವಿಶೇಷಮಪ್ಪುದರಿಂ, ವಿಶ್ವಕರ್ಮಾದಿಕದಂತೆ ಅಜ್ಞತ್ವಾದಿ ದೋಷಯುಕ್ತಮಾದ ಸಂಕಲ್ಪ ಕರ್ತೃತ್ವಮಂ ನೇತಿಗಳೆದು; ಮೇಲೆ ಕುಮುದ ಕಮಲ ಮಧೂಚ್ಛಿಷ್ಟ ಮೃತ್ತಿಕೆಗಳ ಸಂಕೋಚ ವಿಕಾಸ ದ್ರವ್ಯ ಶುಷ್ಕಂಗಳೆಂಬ ಕ್ರಮ ವಿಷಯಮತಿ ವಿಕಾರಂಗಳಿಗೆ ನಿರ್ವಿಕಾರನಾದ ಸೂರ್ಯನಂತೆ ಸನ್ನಿಧಾನ ಕರ್ತೃತ್ವಯುಕ್ತನೆನಿಸಿ; ಬಿಂದುವಿನ ಅಧಿಕಾರ ಅವಸ್ಥೆಯ ಉಪಾಧಿಯಿಂದ ಈಶಸಂಜ್ಞೆಯುಳ್ಳ ಪರಶಿವನ ಸಕಲ ಕಾರ್ಯೋತ್ಪಾದಕಮಾದ ವ್ಯಾಪಾರವಿಶೇಷವೇ ಸೃಷ್ಟಿಯಕ್ಕುಂ, ೩೧೬

ಸ್ಥಿತಿ ಸ್ವರೂಪ:

ಬಳಿಕ ಆತ್ಮರ್ಗೆ ಪರಮಾನಂದ ಉತ್ಪಾದಕಮಪ್ಪುದರಿಂ, ಭೋಗಾವಸ್ಥೆಯ ನೆಯ್ದಿದ ಬಿಂದೂಪಾದಿಯಂ, ಸದಾಶಿವನಾಮಧೇಯಮುಳ್ಳ ಪರಶಿವನ ಸಮಸ್ತ ಜಗತ್ಪಾಲನಾತ್ಮಕ ಕೃತ್ಯವಿಶೇಷವೇ ಸ್ಥಿತಿಯಕ್ಕುಂ.

ಸಂಹಾರ ಸ್ವರೂಪ :

ಮತ್ತಂ, ಸಂಸಾರದಿಂ ದುಃಖಿತರಾದ ಪಶುವಿಶ್ರಮಣಾರ್ಥಮಾಗಿ ಶಿವನ ನಿಯಾಮಕ ಶಕ್ತಿಯಿಂ ಸಕಲತತ್ವ ಭುವನಾದಿ ಕಾರ್ಯವರ್ಗಂ ಸಂಕುಚಿತಮಾಗಿ ಲಯಾವಸ್ಥೆಯನೆಯ್ದಿದ ಬಿಂದೂಪಾಧಿಯಿಂದ ಈಶ ಸಂಜ್ಞಿಕನಾದ ಪತಿಯ ವ್ಯಾಪಾರ ವಿಶೇಷವೇ ಸಂಹಾರಮಕ್ಕುಂ.

ತಿರೋಭಾವ ಸ್ವರೂಪ

ಮತ್ತಂ ಸರ್ವಾತ್ಮರ ಭೋಗಸಾಧನಮಾದ ಬಿಂದೂಪಾಧಿಯಂ ಕ್ರಮಾನುಸಾರದಿಂದ ಆಯಾಯ ತತ್ತ್ವಭುವನಾದಿಗಳಲ್ಲಿ ಇರ್ದಭೋಗವನು ಉಣಿಪುದರಿಂ ವಾಮ ನಾಮಧೇಯವನುಳ್ಳ ಪರಶಿವನ ಕೃತ್ಯ ವಿಸೇಷವೇ ತಿರೋಭಾವಮಕ್ಕುಂ.

ಅನುಗ್ರಹ ಸ್ವರೂಪ :

ಮತ್ತಂ ನಿಃಶೇಷಮಾಗಿ ನಷ್ಟವಹುದಕ್ಕೆ ಯೋಗ್ಯಮಾದ ಮಲಪರಿಪಾಕ ಅನುಸಾರದಿಂದ ಅತ್ಯಂತ ಸಾಶಪರಿಣಾಮ ವಿಶೇಷಕ್ಕ ಉಪಯೋಗಮಾದ ತನ್ನ ಕಾರ್ಯವರ್ಗಂ ಗರ್ಭೀಕಾರಕ್ಕೆ ಅಭಿಮುಖವಪ್ಪ ಬಿಂದೂಪಾದಿಯಿಂ ಲಭ್ಯಮಾದ ನಿರಧಿಕರಣ ಸಾಧಿಕರಣ ಶಿವಧರ್ಮಿಣಿ ಲೋಕಧರ್ಮಿಣಿ ನೈಷ್ಠಿಕಿ ಭೌತಿಕಿ ಸದ್ಯೋನಿರ್ವಾಣ ಕ್ರಿಯಾವತಿ ಜ್ಞಾನವತಿ ಚಾಕ್ಷುಷಿ ಸ್ಪಾರ್ಷಿಕಿ ಮಾಂತ್ರಿಕಿ ವಾಚಕಿ ಶಾಸ್ತ್ರಿ ಯೌಗಿಕಿ ಹೌತ್ರಿಕಿ ಎಂಬಿವು ಮೊದಲಾದ ದೀಕ್ಷಾದ್ವಾರದಿಂದ ಈಶಾನ ಸಂಜ್ಞಿತನಾದ ಪತಿಯ ಸ್ವಸಾಮ್ಯತಾರೂಪ ವಿಶುದ್ಧ ಆತ್ಮಾಭಿವ್ಯಕಿಗೆ ಕಾರಣಮಾದ ವ್ಯವಹಾರ ವಿಶೇಷವೇ ಅನುಗ್ರಹವಹುದು. ೩೧೭

ಪಶು ಪದಾರ್ಥ :

ಮತ್ತಂ, ಅನಾದಿಮಲ-ರುದ್ಧ-ಜ್ಞಾನ-ಕ್ರಿಯಾಶಕ್ತಿಯುಕ್ತ ಚೈತನ್ಯವೇ ಪಶುವಕ್ಕುಂ. ೩೧೮

ಪಶುಭೇದಂಗಳು :

ಬಳಿಕ ಆ ಪಶುವೇ ಮನ ಮಾಯೆ ಕರ್ಮವೆಂಬ ಪಾಶತ್ರಯಸಂಬಂಧದಿಂ ಸಕಲನೆಂದು;

ಮಲ ಕರ್ಮವೆಂಬ ಪಾಶದ್ವಯ ಸಂಬಂಧದಿಂ ಪ್ರಳಯಾಕಲನೆಂದು; ಮಲಏಕಪಾಶ ಸಂಬಂಧದಿಂ ವಿಜ್ಞಾನ ಕೇವಲನೆಂದು ತ್ರಿವರ್ಗಮಾಗಿಹುದು. ಅಲ್ಲಿ ಮೊದಲ ಸಕಲ ವರ್ಗವೆ ಪಕ್ವತ್ರಿಪಾಶರೆಂದು, ಅಪಕ್ವತ್ರಿಪಾಶರೆಂದು ದ್ವಿವಿಧಮಾಗಿಹುದು. ೩೧೯

ಪಕ್ವತ್ರಿಪಾಶ ಪಶುಗಳು :

ಅಲ್ಲಿ ಪಕ್ವತ್ರಿಪಾಶರೊಳಗೆ ಕಲಾಮಸ್ತಕದಲ್ಲಿರ್ದ ಮಂಡಲೇಶ್ವರರು ಎಂಟು; ಗುಣಮಸ್ತಕದಲ್ಲಿರ್ದ ಕ್ರೋಧೇಶಾದಿಗಳು ಎಂಟು; ಸೂಕ್ಷ್ಮ ತನ್ಮಾತ್ರವರ್ಗದಲ್ಲಿರ್ದ ಶತರುದ್ರರಿಗೆ ವೀರಭದ್ರನು, ಗುಣತತ್ವದಲ್ಲಿರ್ದ ಬ್ರಹ್ಮವಿಷ್ಣ್ವಾದಿಗಳಿಗೆ ಕರ್ಚ್ಯವಾದ ಶ್ರೀಕಂಠೇಶದ್ವರನು, ಬ್ರಹ್ಮಾಂಡ ರಕ್ಷಕರಾದ ಶತರುದ್ರರೆಂಬ ನೂರಹದಿನೆಂಟನೂ ಪರಶಿವನು ತಾನೆ ನಿರಧಿಕರಣ ದೀಕ್ಷೆಯಿಂ ಮಂತ್ರೇಶ್ವರರಂ ಮಾಡಿ. ಆಯಾಯ ಕೃತ್ಯಾಧಿಕಾರಿಗಳಾಗಿ ನಿಲಿಸಲು ಅವರೆಲ್ಲಂ ದೇಹಯುಕ್ತರಾದೊಡಂ ಆ ದೇಹವಶಂಗತರಾಗದೆ ಸರ್ವಜ್ಞರಾಗಿ ಪತಿಪದಾರ್ಥವೆನಿಸಿಕೊಳುತಿರ್ಕುಂ. ೩೨೦

ಅಪಕ್ವತ್ರಿಪಾಶ ಪಶುಗಳು :

ಮತ್ತಂ, ಅಪಕ್ವ ತ್ರಿಪಾಶರೊಳಗೆ ಕೆಲಂಬರೇ ವಿಷಮೂರ್ಛಿತರಂತೆ ಮಲನಿರೋಧದಿಂ ಕೇವಲಾವಸ್ಥರಾಗಿರ್ದು ಮೇಲೆ ಶಿವನಿಂ ಕಲಾ ಯೋಗ ಭೋಗ ಕರ್ಮಕ್ಷಯ ಮಲಪರಿಪಾಕಾದಿಕ್ರಮಯೋಗಂಬಡೆದು, ಬಳಿಕ ಮೋಕ್ಷದಲ್ಲಿಯ ಲವಲವಿಕೆ ಸಂಸಾರದಲ್ಲಿಯ ಜಿಗುಪ್ಸೆ ಶಿವಭಕ್ತರುಗಳಲ್ಲಿ ಭಕ್ತಿ, ಶ್ರೀ ಗುರೂಪಾಸ್ಥೆ ಶಿವಾಗಮಂಗಳಲ್ಲಿವಿಶ್ವಾಸಂ ಮೊದಲಾದ ಚಿಹ್ನಂಗಳನುಳ್ಳ ಶಕ್ತಿಪಾತದ ಮಂದ, ಮಂದತರ, ತೀವ್ರ, ತೀವ್ರತರವೆಂಬ ಭೇದಪರೀಕ್ಷೆಯಿಂ ಪರಶಿವನು ಗುರುಮೂರ್ತಿಯನು ಅಧಿಷ್ಠಿಸಿ, ಮಾಳ್ಪ ಸಾಧಿಕರಣ ದೀಕ್ಷಾಕ್ರಮದಿಂ ಶಿವಸಮಾನರೂಪ ಮೋಕ್ಷವನು ಎಯ್ದುತಿರ್ಕುಂ. ೩೨೧

ಅಪಕ್ವತ್ರಿಪಾಶ ಪ್ರಳಯಾಕಲರು :

ಬಳಿಕ ಅಪಕ್ವ ತ್ರಿಪಾಶರೊಳಗೆ ಉಳಿದವರುಗಳೆ ಕರ್ಮಫಲ ಭೋಗಾದಿಕದಿಂದ ಇಂತು ಮುಕ್ತರಾಗಲೋಸುಗ ಶಿವನು ನಾನಾ ಯೋನಿಯೊಳು ಪಸರಿಸೆ, ಕಿಂಚಿಜ್ಞತ್ವ ಕಿಂಚಿತ್ಕರ್ತೃತ್ವದಿಂ ಸುಖದುಃಖ ಮೋಹಂಗಳನು ಉಳ್ಳವರಾಗಿ, ಆಯಾ ದೇಹಿಗಳೆನಿಸುತ್ತ ಅಲ್ಲಿ ಸಮಯಾಂತರ ದೀಕ್ಷಾವಿಶೇಷದಿಂ ಪಶುತ್ವ ಏಕದೇಶದಿಂ ಪಿಂಗೆ ಶಿವತ್ವ ಏಕದೇಶಾಭಿವ್ಯಕ್ತಿ ಘಟಿಸೆ ಮಾಯಾಪಾಶ ವಿಮೋಚನದಿಂ ಮಲಕರ್ಮಮೆಂಬ ಪಾಶದ್ವಯ ಯುಕ್ತರಾಗಿ ಪ್ರಳಯಾಕಲ ಸಂಜ್ಞೆಯಂ ತಾಳಿರ್ಕುಂ. ೨೭೭

ಪ್ರಳಯಾಕಲರಲ್ಲಿ ವಿಧಗಳು :

ಮತ್ತಂ ಆ ಪ್ರಳಯಾಕಲರೇ ಪಕ್ವಪಾಶದ್ವಯರೆಂದು, ಅಪಕ್ವಪಾಶ ದ್ವಯರೆಂದು ದ್ವಿವಿಧಮಕ್ಕುಂ. ಬಳಿಕ ಇಲ್ಲಿ ಪಕ್ವಪಾಶದ್ವಯರೇ ಪರಶಿವನ ನಿರಧಿಕರಣ ದೀಕ್ಷಾ ಸಾಮರ್ಥ್ಯದಿಂ ನಿಜ ಮೋಕ್ಷವನೆಯ್ದುತ್ತಿಹರು, ಮತ್ತಂ ಆ ಅಪಕ್ವಪಾಶದ್ವಯರೇ ಪುರ್ಯಷ್ಟಕ ದೇಹಯುಕ್ತರಾಗಿ ಕರ್ಮಾಧೀನದಿಂದ ಆಯಾಯ ಭುವನಜ ದೇಹ ಸಂಬಂಧಿಗಳಹರು. ಮತ್ತೆ ಅವರೊಳಗೆ, ಲೋಕಪಾಲಾಷ್ಟಕರು, ಗುಹ್ಯಾಷ್ಟಕರು, ಅತಿಗುಹ್ಯಾಷ್ಟಕರು ಪವಿತ್ರಾಷ್ಟಕರೆಂಬ ಪಂಚಾಷ್ಟಕರುಗಳೇ ಮಂತ್ರ ಮಹೇಶ್ವರನಾದ ಅನಂತೇಶ್ವರನಿಂದ ಅನುಗ್ರಹೀತರಾಗಿ, ಸರ್ವಜ್ಞರೆನಿಸಿ, ಭುವನ ಪತಿಗಳಾಗಿರ್ಕುಂ. ೩೨೩

ಮತ್ತಂ ಆ ಅಪಕ್ವಪಾಶದ್ವಯರೇ ವಿಜ್ಞಾನಯೋಗದ ಸನ್ಯಾಸಿಗಳಿಂ ಕರ್ಮಕ್ಷಯಮಾಗಿ ಮಲಏಕಪಾಶಬಂಧದಿಂ ದರ್ಶನಾಂತರಕ್ಕೆ ಮುಕ್ತಿಸ್ಥಾನವೆನಿಪ ಮಾಯಾತತ್ತ್ವ ಶುದ್ಧ ವಿದ್ಯಾತತ್ತ್ವದ್ವಯದ ಅಂತರಾಳಲಕ್ಷಣ ಕೈವಲ್ಯ ಪದದೊಳುನಿಂದು ವಿಜ್ಞಾನ ಕೇವಲ ಸಂಜ್ಞೆಯಂ ತಾಳಿರ್ಕುಂ. ೩೨೪

ವಿಜ್ಞಾನ ಕೇವಲರು :

ಮತ್ತಂ ಆ ವಿಜ್ಞಾನ ಕೇವಲರೇ ಮಲವಿಶಿಷ್ಟ ಪರಿಪಾಕ ತಾರತಮ್ಯದಿಂ ಶಿವನಿಂ ಸಂಪ್ರಾಪ್ತ ನಿರಧಿಕರಣ ದೀಕ್ಷಾತಿಶಯದಿಂ ವಿದ್ಯೆ ವಿದ್ಯೇಶ್ವರ ಸದಾಶಿವಾದಿ ಭೇದದಿಂದ

ಉತ್ತರೋತ್ತರಮಾದ ಅಧಿಕಾರಾವಸ್ಥೆಯಂ ಸ್ವೀಕರಿಸಿ ಪರಮುಕ್ತರಂತೆ, ದುಃಖಲೇಶವಿಲ್ಲದೆ ನಿರತಿಶಯ ಸಮಸ್ತ ಬೈಂದವಾನಂದವನು ಆಸ್ವಾದನಂಗೈದು, ಬಳಿಕ ಆ ಭೋಗದೊಳ್ ವಿರಕ್ತಿಪುಟ್ಟಿ, ಪ್ರಯೋಜ್ಯಕರ್ತೃತ್ವದ ಆಯಾಸಮಂ ಬಿಸುಟು ಸಕಲ ಬೈಂದವೋತ್ತೀರ್ಣಮಾಗಿ, ತತ್ತ್ವಾತೀತಮಾದ ಸರ್ವಾಭಿವ್ಯಕ್ತ ನಿರ್ವಿಕಲ್ಪ ಶಿವಸಮಾನಲಕ್ಷಣಜ್ಞಾನ ಕ್ರಿಯಾಶಕ್ತಿಯುಕ್ತ ಪರಮ ಮುಕ್ತರೆನಿಸಿರ್ಪರೆಂಬುದೇ ದ್ವಿತೀಯ ಪದಾರ್ಥಮಕ್ಕುಂ. ೩೨೫

ಪಾಶ ಪದಾರ್ಥ – ಪಂಚಬೇದ :

ಮತ್ತಂ ಅನಾದಿಯಿಂ ಶಿವ–ಶಕ್ತಿಯಿಂದ ಅಧಿಷ್ಠಿತಮಾಗಿ ಪಶುಜ್ಞಾನ ಕ್ರಿಯಾಶಕ್ತಿಯಂ ತಿರಸ್ಕರಿಸಿಕೊಂಡಿರ್ಪುದೇ ಪಾಶಪದಾರ್ಥಮಕ್ಕುಂ, ಬಳಿಕ ಆ ಪಾಶವೆ ಮಲ ಮಾಯೆ ಕರ್ಮ ಬಿಂದು ತಿರೋದಾನವೆಂದು ಪಂಚವಿಧವಹುದು. ಅಲ್ಲಿ ೩೨೬

ಮಲ ಪಾಶವಿವೇಕ :

ಪಶುಗಳ ಚೈತನ್ಯ ಪ್ರಕಟತೆಯಂ ನಲಿಸಿ, ಮಾಯಾಬೀಜಾಂಕುರಕ್ಕೆ ಸಾಧನವಹತನದಿಂದ ಆತ್ಮರ್ಗೆ ಭೋಕ್ತೃತ್ವವನು ಆಪಾದಿಸಿ ತಾನೊಂದೆಯಾದೊಡಂ, ಪ್ರತ್ಯೇಕ ಆತ್ಮರನು ಆವರಿಸಿರ್ದ ಅನೇಕಶಕ್ತಿಯುಕ್ತನಾಗಿ; ತನ್ನ ಪರಿಪಾಕವಶದಿಂ ಸಂಪ್ರಾಪ್ತಮಾದ ದೀಕ್ಷಾವಿಶೇಷದಿಂ ತೊಲಗಲುಳ್ಳ ಆಯಾ ಶಕ್ತಿಸಹಿತಮಾಗಿ; ಅಜ್ಞಾನ ಅವಿದ್ಯೆ ಅವೃತ್ತಿ ಅಂಜನ ಅಶುದ್ಧಿ ಆಣವ ಅನಿರ್ಮಲ ಮೃತ್ಯು ಮೂರ್ಛೆ ತಿರಸ್ಕಾರ ರುಕ್ ಪಶುತ್ವವೆಂಬಿವು ಮೊದಲಾದ ಪರ್ಯಾಯ ನಾಮಂಗಳನುಳ್ಳ; ಮೋಹ ಮದ ರಾಗ ತಾಪ ಶೋಷ ವಿಷಾದ ವೈಚಿತ್ರಮೆಂಬ ಸಪ್ತಾವಸ್ಥೆಯನುಳ್ಳ; ಮೋಹ ಮಹಾಮೋಹ ಮಿಶ್ರ ತಾಮಿಶ್ರ ಅಂಧತಾಮಿಶ್ರ _____ ______ ಎಂಬ ಸಪ್ತಾವಸ್ಥೆಯನುಳ್ಳಕೂಟಸ್ಥನು ಆದಿಯಾದ ಪಾಶವಿಶೇಷವೇ ಮಾಯೆಯಕ್ಕುಂ. ೩೨೭

ಗಣಕರ್ಮವಿವೇಕ :

ಮತ್ತಂ ಆ ಮಾಯೆಗೆ ಕರ್ಮಾಶ್ರಯಮೆಂತೆನೆ ಸಕಲಾತ್ಮರೂ ಮಾಳ್ಪ ಸುಕೃತ ದುಷ್ಕೃತರೂಪ ಕರ್ಮವೇ ಕ್ರಮದಿಂ ಧರ್ಮ ಜ್ಞಾನ ಐಶ್ವರ್ಯ ವೈರಾಗ್ಯಮೆಂಬ; ಅಧರ್ಮ ಆಜ್ಞಾನ ಅನೈಶ್ವರ್ಯ ಅವೈರಾಗ್ಯವೆಂಬ ಅಷ್ಟ ಭಾವಾತ್ಮಕತ್ವದಿಂ, ಬುದ್ಧಿಯ ಗುಣಮೆನಿಸಿ ಅಪೂರ್ವಮೆಂಬ; ಪೆಸರಿಂ ಸಂಸ್ಕರಿಸಿಹುದು, ಆ ಗುಣಂಗಳೊಳಗೆ ಮೊದಲ ಧರ್ಮಾದಿಚತುಷ್ಟಯವೇ ಸಾತ್ವಿಕ ಗುಣಂಗಳು, ಮಿಕ್ಕ ಅಧರ್ಮಾದಿತ್ರಯವೇ ತಾಮಸಂಗಳು, ಮೇಲೆ ಅವೈರಾಗ್ಯವೇ ರಾಜಸಮಕ್ಕುಂ. ೩೨೮

ಗುಣ ಸಂಸ್ಕಾರ ಭೇದಂಗಳು :

ಮತ್ತಂ ಆ ಗುಣಂಗಳು ಆವುವು ಎಂತೆಂದೊಡೆ ಸಾಂಸಿದ್ಧಿಕಮೆಂದು ವೈನೈಮಿಕಮೆಂದು ಪ್ರಾಕೃತಮೆಂದು ತ್ರಿವಿಧಮಾಗಿರ್ಪುದು. ಅವರಲ್ಲಿ :

೧. ಇಷ್ಟಪೂರ್ತ್ಯಾದಿ ಧರ್ಮ ಸಂಸ್ಕಾರಿಗಳೇ ದೇಹವಳಿದಮೇಲೆ ಜನ್ಮಾಂತರದಲ್ಲಿ ಮೊದಲ ಸಂಸ್ಕಾರಂ ತಾನೇ ಉದ್ಬೋಧಮಾಗಲ್ ಅದೇ ಸಾಂಸಿದ್ಧಿಕಮೆನಿಸೂದು.

೨. ಬಳಿಕ ದೇಹತ್ಯಾಗದಿಂ ಮೇಲೆ ಪುನರ್ಜನ್ಮದಲ್ಲಿ ಲೋಕಬುದ್ಧಿ ಗುರು ಶಾಸ್ತ್ರಾದಿಗಳಿಂ ಆಯಾಯ ಸಂಸ್ಕಾರಾನುಸಾರಮಾದ ಗುಣಂದೋರ್ಪುದೇ ವೈನೈಮಿಕಮೆನಿಸೂದು.

೩. ಬಳಿಕ ಸ್ವಪ್ನಮೂರ್ಛಾದಿಕದಿಂದ ಎಚ್ಚತ್ತಾತಂಗೆ ಯಥೋಚಿತ ಸಂಸ್ಕಾರವಳಪಡುವಂತೆ, ವರ್ತಮಾನದೇಹದಲ್ಲಿಯೇ ಆಯಾಯ ಗುಣಾಭಿವ್ಯಕ್ತಿಹುದು. ಇದೇ ಪ್ರಾಕೃತಮಕ್ಕುಂ. ೩೨೯

ಬಳಿಕ ಅವರಲ್ಲಿ ಸಾಂಸಿದ್ಧಿಕಮಾದ ಧರ್ಮದಿಂ ವಶ್ಯಾದಿಗಳು, ಜ್ಞಾನದಿಂ ಧರ್ಮಪರಿಜ್ಞಾನ ಸಂಬಂಧಾದಿಗಳು, ಐಶ್ವರ್ಯದಿಂ ವಿಘ್ನಸಮೂಹ ನಿವೃತ್ತ್ಯಾದಿಗಳು, ವೈರಾಗ್ಯದಿಂ ಭೋಗಪರಿತ್ಯಾಗಾದಿಗಳು, ಅಧರ್ಮದಿಂ ಭೋಗಶಕ್ತ್ಯಾದಿಗಳು, ಅಜ್ಞಾನದಿಂ ತಿರಸ್ಕಾರಾದಿಗಳು, ಅನೈಶ್ವರ್ಯದಿಂ ವಿಘ್ನಾದಿಗಳು, ಅವೈರಾಗ್ಯದಿಂ ಜನ್ಮಾಂತರಂಗಳಕ್ಕುಂ. ೩೩೦

ಬಳಿಕ ವೈನೈಮಿಕ ಪ್ರಾಕೃತಂಗಳಾದಧರ್ಮದಿಂ ಸ್ವರ್ಗಾದಿಗಳು, ಜ್ಞಾನದಿಂ ಮುಕ್ತ್ಯಾದಿಗಳು, ಐಶ್ವರ್ಯದಿಂ ಅಷ್ಟಸಿದ್ಧ್ಯಾದಿಗಳು, ವೈರಾಗ್ಯದಿಂ ಪ್ರಕೃತಿಲಯಾದಿಗಳು, ಅಧರ್ಮದಿಂ ಪಶು ಪಕ್ಷಿ ಮೃಗ ಸರ್ಪ ಸ್ಥಾವರಮೆಂಬ ಪಂಚವಿಧ ತಿರ್ಯಗ್ಯೋನಿ ಪ್ರಾಪ್ತ್ಯಾದಿಗಳು, ಅಜ್ಞಾನದಿಂ ನರಕಭಯಾದಿಗಳು, ಅನೈಶ್ವರ್ಯದಿಂ ವಿಘ್ನಾದಿಗಳು, ಅವೈರಾಗ್ಯದಿಂ ಬಂಧಾದಿಗಳಹವು. ಇಂತು ಸಕಲ ಕರ್ಮಸಂಸ್ಕಾರಂಗಳೆಲ್ಲಂ ಬುದ್ಧಿಯಲ್ಲಿರ್ಪುವು, ಆ ಬುದ್ಧಿಯಾದೊಡೆ ಪ್ರಳಯದಲ್ಲಿ ಮಾಯೆಯಲ್ಲಿ ಅಡಗಲ್ ಆ ಸಂಸ್ಕಾರದಲ್ಲಿರ್ದು ಕಾಲವಶದಿಂ ಫಲಿಸುತ್ತಿಹುದಾಗಿ ಮಾಯೆಯೇ ಕರ್ಮಾಶ್ರಯವೆಂದರ್ಥಂ. ೩೩೧

ದರ್ಮಾಧರ್ಮಾದಿ ಕಾರ್ಯಗಳು :

ಮತ್ತಂ ಮನೋವಾಕ್ಕಾಯಮೆಂಬ ತ್ರಿವಿಧ ಕರಣದಿಂ ಜನಿಸಿ, ಸುಖದುಃಖಾದ್ಯನೇಕ ಗುಣಕ್ಕೆ ಕಾರಣಮಾದ ಧರ್ಮಾಧರ್ಮ ಸ್ವರೂಪದಿಂ ವಿಚಿತ್ರಮಾಗಿ ಉತ್ಕ್ಷೇಪಣ, ಅಪೇಕ್ಷಣ, ಅಕುಂಚನ, ಪ್ರಸಾರಣ, ಗತಿಗಳೆಂಬ ಪಂಚವ್ಯಾಪಾರ ಸಂಭವಮಾಗಿ; ಉತ್ಪಾದ್ಯ, ಪ್ರಾತ್ಯ, ವಿಕಾರ್ಯ, ಸಂಸ್ಕಾರ್ಯವೆಂಬ ಚತುರ್ವಿಧ ಫಲಂಗಳನುಳ್ಳುದೆನಿಸಿ; ಜಾತಿಪ್ರದ ಆಯುಃಪ್ರದ ಭೋಗಪ್ರದಮಾಗೆ ಅಧ್ಯಾತ್ಮಾದಿ ತ್ರಿಸಾಧನಮೆನಿಸಿ; ಸುರನರ ತಿರ್ಯಗಾದಿಯೋನಿಪ್ರಾಪ್ತಿ ನಿಯಮದೊಳು ಅನುಗುಣವಾದ ಕಲಾದಿ ಮಾಯಾಕಾರ್ಯಜನಿಪುದಕ್ಕೆ ಸಹಕಾರಿಯಾಗಿ ಬೀಜವೃಕ್ಷ ನ್ಯಾಯದಿಂ ಪ್ರವಾಹನಾದಿಯಪ್ಪ ಪಾಶವಿಶೇಷವೇ ಕರ್ಮವಕ್ಕುಂ. ೩೩೨

ಭೋಗ ಲಕ್ಷಣ :

ಬಳಿಕ ಈ ಕರ್ಮ ಭೋಗಪ್ರದತ್ವಮುಂಟಾಗಲು ಆ ಭೋಗ ಲಕ್ಷಣ ಮೆಂತೆನೆ: ಚಕ್ಷುರಾದಿ ಇಂದ್ರಿಯಂಗಳೇ ಬಾಹ್ಯದ ವನಿತಾದಿ ವಿಷಯಂಗಳಂ ಪ್ರಕಾಶಿಸಲು ಅವರಲ್ಲಿರ್ದ ಗುಣದೋಷಂಗಳಂ ಪರಾಮರ್ಶಂಗೆಯ್ವುದೇ ಮನಸ್ಸು. ಬಳಿಕ ಆ

ಬುದ್ಧಿಯಾದೊಡೆ ಆ ವಿಷಯಂಗಳಂ ನಿಶ್ಚೈಸುತ್ತ ಅಲ್ಲಿಯ ಲೇಸು ಹೊಲ್ಲೆಯಗಳಂ ತಾನೆ ಸುಖದುಃಖ ರೂಪದಿಂ ಪರಿಣಾಮಿಸಿ, ಸಾಕ್ಷಾತ್ ಭೋಗ್ಯಮೆನಿಸಲದನೆ ಕಲೋದ್ಧರಿತ ಚೈತನ್ಯನಾದ ಆತ್ಮನು ವಿದ್ಯಯೆಂಬ ಅಂತಃಕರಣದಿಂ ಕಂಡು, ಮೇಲೆ ಅಹಂಕಾರಮೆಂಬಕರಣದಿಂ ನಾನು ಸುಖಿ, ನಾನು ದುಃಖಿಯೆಂದಿಂತು ಅಭ್ಯಾಸದಿಂದಾ ಭೋಗ್ಯರೂಪ ಬುದ್ಧಿಯನರಿವತನವೇ ಭೋಗಮಕ್ಕುಂ. ೩೩೩

ಬಿಂದುಪಾಶ ಸ್ವರೂಪ :

ಅನಂತರದೊಳು ಅತ್ಯಂತ ವಿಶಿಷ್ಟಾಧಿಕಾರಿಗಳಿಗೆ ಮಾಯೆ ಕರ್ಮಂಗಳ ಸೋಂಕಿಲ್ಲದಿರ್ಪುದರಿಂ ನಿರಂತರಮಾದ ನಿರತಿಶಯ ಸುಖಾನುಭವಲಕ್ಷ್ಯ ಭೋಗಸಾಧನ ಕಾರ್ಯಜಾತಂ ಜನಿಪುದಕ್ಕೆ ಉಪಾದಾನಕಾರಣಮಾಗಿ, ಮನಕ್ಷಯದೊಡವೆ ತೊಲಗಲುಳ್ಳ ಆಗಂತುಕ ಪಾಶವೆನಿಸಿಕೊಂಡು, ಮಹಾಮಾಯೆ ಕುಟಿಲೆ ಕುಂಡಲಿ ಕ್ರಿಯಾಶಕ್ತಿ ಪರನಾದ ಪರಬಿಂದು ಪರಿಗ್ರಹಶಕ್ತಿ, ಪರವಿದ್ಯೆ ಶಬ್ದತತ್ವ ಶಬ್ದಬ್ರಹ್ಮ ಶುದ್ಧಮಾಯೆ ಶಿವತತ್ವ ಷಡಧ್ವಬೀಜ ಶಿವಲಿಂಗಪೀಠ ಯೋಗಪೀಠ, ಮಂತ್ರಪೀಠ ವ್ಯೋಮ ವಿದ್ಯಾಶಕ್ತಿ ವಾಗೀಶ್ವರಿ ಅನಾಹತ ಅಘೋಷವಾಕ್ಕು ಬ್ರಹ್ಮವೆಂಬಿವು ಮೊದಲಾದ ಪರ್ಯಾಯನಾಮಂಗಳು ಉಳ್ಳುದೆನಿಸಿ, ಕ್ಷಕಾರದಿಂ ಮೊದಲಾದ ಐವತೊಂದು ವರ್ಣಾಧ್ವಕ್ಕೆ, 'ಓಂ ಶಿವಾಯ ನಮೋನಮಃ' ಎಂಬುದು ಮೊದಲದ ಎಂಭತ್ತೊಂದು ಪದಾಧ್ವಕ್ಕೆ, "ಹೃದಯಾಯ ನಮಃ" ಎಂಬುದೇ ಮೊದಲಾದ ಏಕಾದಶ ಮಂತ್ರಾಧ್ವಕ್ಕೆ, ಪೃಥುವ್ಯಾದಿ ಶುದ್ಧಾಶುದ್ಧರೂಪ ಷಟ್ತ್ರಿಂಶ ತತ್ತ್ವಾಧ್ವಕ್ಕೆ, ಕಾಲಾಗ್ನಿ ಮೊದಲಾದ ಅನೇಕ ಭುವನಾಧ್ವಕ್ಕೆ, ನಿವೃತ್ತ್ಯಾದಿ ಪಂಚಕಲಾಧ್ವಕ್ಕೆ, ಬಳಿಕ ವೈಖರ್ಯಾದಿ ಚತುರ್ವಿಧ ವಾಕ್ಕುಗಳಿಗೆಯೂ ಆಧಾರ ಪರಿಣಾಮರೂಪದಿಂ ಕಾರಣಮಾಗೆ, ನಿರ್ವಿಕಲ್ಪ ಜ್ಞಾನೋಪೇತನಾದ ಪರಶಿವನೆಂಬ ಅಶರೀರ ಕರ್ತೃಕಮಾದ ಪರಿಪೂರ್ಣ ಪರಂಜೋತಿ ಸ್ವರೂಪಮಪ್ಪ ಪಾಶವಿಶೇಷವೇ ಬಿಂದುವಕ್ಕುಂ. ೩೩೪

ಚತುರ್ವಿಧ ವಾಕ್ಕುಗಳು :

ಮತ್ತಂ ಆ ಬಿಂದುವೆ ಚತುರ್ವಿದವಾಕ್ಕುಗಳ್ಗೆ ಕಾರಣವೆಂತೆಂದೊಡೆ: ಆ ವಾಕ್ಕುಗಳ ಸ್ವರೂಪವೆಂತೆನೆ: ಪರೆ ಪಶ್ಯಂತಿ ಮಧ್ಯಮೆ ವೈಖರಿಗಳೆಂಬವೆ ಚತುರ್ವಿಧವಾಕ್ಕುಗಳು.

೧. ಅವರಲ್ಲಿ ಆವನಾನೊರ್ವ ವಕ್ತೃವಿನ ಮೂಲಾಧಾರದಲ್ಲಿ ಸೂಕ್ಷ್ಮನಾದಸ್ವರೂಪದಿಂದ ಆತ್ಮನೊಡನೆ ಏಕರಸವಾಗಿ ಸಮಸ್ತಕ್ಕೆ ಕಾರಣಮಾಗಿರ್ದ ವಾಣಿಯೇ ಪರೆಯೆನಿಸೂದು.

೨. ಬಳಿಕ ಅದೇ ನಾಭಿಸ್ಥಾನದಲ್ಲಿ ಮಯೂರಾಂಡರಸಗತ ಪಾದ ಪಕ್ಷ್ಯಾದ್ಯವಯವಂಗಳಂತೆ ಅರ್ಥವಾಚಕ ವರ್ಣಕ್ರಮವಿಲ್ಲದೆ ನಿರ್ವಿಕಲ್ಪಮಾಗಿ ಉಜ್ವಲಿಸುತ್ತಿರ್ಪ ವಾಣಿಯೇ ಪಷ್ಯಂತಿಯೆನಿಸೂದು.

೩. ಬಳಿಕ ಅದೇ ಹೃದಯಸ್ಥಾನದಲ್ಲಿ ಪದಾರ್ಥಂಗಳ ವಾಚಕ ವರ್ಣ ಅನುಸಂಧಾನರೂಪದಿಂ ಪ್ರಾಣವೃತಿಯೊಡಗೂಡದೆ ಸವಿಕಲ್ಪ ಮಾಗಿರ್ದ ವಾಣಿಯೇ ಮಧ್ಯಮೆಯೆನಿಸೂದು.

೪. ಬಳಿಕ ಅದೇ ಉರ ಕಂಠ ಜಿಹ್ವಾಮೂಲ ತಾಲುಗೆ ಓಷ್ಠ ದಂತ ನಾಸಿಕ ಶಿರಸ್ಸೆಂಬ ಎಂಟು ಸ್ಥಾನದಲ್ಲಿ ಪ್ರಾಣವಾಯು ಸಂಬಂಧಮಾಗಲು, ಅಲ್ಲಿ ಪುಟ್ಟುವ ಅರ್ಣ ವರ್ಣ ಬೀಜ ಲಿಂಗ ಮಾತೃಕೆ ಶುದ್ಧಗೆಯೆಂಬ ಪರ್ಯಾಯ ಸಂಜ್ಞೆವಿಡಿದ, ಪ್ರತ್ಯೇಕ ವರ್ಣಾದಿದೇವತಾಫಲಂಗಳನುಳ್ಳ, ಸ್ವರ ವ್ಯಂಜನಮೆಂದು ಇತ್ತೆರನಾದ ಐವತ್ತೊಂದು ಅಕ್ಷರಾಭಿವ್ಯಕ್ತಿಯಿಂ, ಇದು ಘಟ, ಇದು ಪಟವೆಂದು ಪೇಳೆ ಪರಶ್ರವಣಗೋಚರಮಾಗಿ ಸಕಲ ಸಂಸಾರ ವ್ಯಾಪಾರಕ್ಕೆ ಕಾರಣಮಪ್ಪುದರಿಂ ಮುಖ್ಯ ಬಿಂದುರೂಪಮಾದ ವಾಣಿಯೇ ವೈಖರಿಯಕ್ಕುಂ. ೩೩೫

ವಾಗಾಧಿಕಾರಿಗಳು :

ಬಳಿಕ ಇವರಲ್ಲಿ ಬಾಹ್ಯದೊಳೊಂದು, ಅಭ್ಯಂತದಲ್ಲಿ ಮೂರು ವರ್ತಿಸುತ್ತಿರ್ಪವು. ಅವರೊಳಗೆ ಮುಂದೆ ಪೇಳ್ವ ಶುದ್ಧಾಧ್ವವರ್ತಿಗಳಿಗೆ ಪರೆಯೆಂಬ ನಾದ ಸಂಜ್ಞೆಯುಳ್ಳ ಕಾರಣ ವಾಕ್ಕೇ ಮುಖ್ಯಮಾಗಿಹುದು. ಮಿಶ್ರಾಧ್ವವಾಸಿಗಳಲ್ಲಿ ಪಶ್ಯಂತಿ ಮಧ್ಯಮೆ ಎಂಬ ಎರಡು ಬಿಂದು ಸಂಜ್ಞೆಯುಳ್ಳ ಸೂಕ್ಷ್ಮವಾಕ್ಕುಗಳೇ ವರ್ತಿಸುತ್ತಿಹವು. ಆ ಶುದ್ಧಾಧ್ವಸ್ಥಿತರೇ ವೈಖರಿಯೆಂಬ ಆರ್ಣಸಂಜ್ಞೆಯುಳ್ಳ ಸ್ಥೂಲವಾಕ್ಕಿನಿಂದವೆ ವ್ಯವಹರಿಸುತ್ತಿರ್ಪುಂ. ೩೩೬

ವಾಗ್ಮಿ ವಿಭಾಗ :

ಬಳಿಕ ಇಲ್ಲಿ ವೃಕ್ಷಾದಿಗಳಿಗೆ ಪರೆ, ಸರ್ಪಾದಿಗಳಿಗೆ ಪಶ್ಯಂತಿ, ಪಶ್ವಾದಿಗಳಿಗೆ ಮಧ್ಯಮೆ, ಮನುಷ್ಯರ್ಗೆ ವೈಖರಿಯೇ ಪ್ರಧಾನಮಾಗಿರ್ಪುಂ

ವೈಖರಿ ವಿಶೇಷ ವಿವೇಕ :

ಮತ್ತಂ ಆ ವೈಖರಿರೂಪ ಶಬ್ದ ಸಮೂಹವೇ ವಾಚಕಮೆಂದು, ಲಾಕ್ಷಣಿಕಮೆಂದು, ವ್ಯಂಜಕಮೆಂದು ತ್ರಿವಿಧಮಾಗಿಹುದು. ಅವರಲ್ಲಿ,

೧. ವೃದ್ಧ ಸಂಕೇತಮಾಗಿ ಇದು ಘಟ, ಇದು ಪಟ ಎಂದು ಮುಖ್ಯಾರ್ಥಮಂ ಗೋಚರಿಪ ಶಬ್ದಾದಿಕವೆ ವಾಚಕ ಶಬ್ದವೆನಿಸೂದು.

೨. ಅಟ್ಟಣೆ ಕೂಗಿತ್ತೆಂಬಲ್ಲಿ ಅಚೇನಮಾದ ಅಟ್ಟಣೆ ಕೂಗಲರಿದು ತತ್ಸಂಬಂದಿಯಾದ ಮಾನವನೇ ಕೂಗಿದನೆಂದು ಅನ್ಯಾರ್ಥಮಂ ಲಕ್ಷಿಪ ಶಬ್ದಾದಿಕವೇ ಲಾಕ್ಷಣಿಕ ಶಬ್ದವೆನಿಸೂದು.

೩. ಸೂರ್ಯನು ಅಸ್ತಂಗತನಾದನು ಎಂಬಲ್ಲಿ ಸುಕೃತಿಗಳ ಅಪೇಕ್ಷೆಯಿಂ ದೇವಪೂಜೆ ಸಂಧ್ಯಾವಂದನಾದಿಕಮಂ ಮಾಡಲಕ್ಕುದೆಂದು ಬೇರೋಂದರ್ಥಮಂ ಸೂಚಿಪ ಶಬ್ದಾದಿಕವೆ ವ್ಯಂಜಕ ಶಬ್ದಮಕ್ಕುಂ. ೩೩೭

ಸವಿಕಲ್ಪಕ ಜ್ಞಾನಗುರುಪರಂಪರೆ:

ಬಳಿಕಲ್ಲಿ ಘಟಾದಿ ಸಮಲ ವಿಷಯಂಗಳ ವಾಚ್ಯವಾಚಕಸಂಬಂಧ ಸಂಕೇತ ಲಕ್ಷಣ ಸವಿಕಲ್ಪಕಜ್ಞಾನಮಾದೊಡೆ, ಮೊದಲು ನಿರ್ವಿಕಲ್ಪಕತ್ವದಿಂ ಸರ್ವವಸ್ತುವಿನ ಯಥಾರ್ಥ ಗ್ರಾಹಕನಪ್ಪ ಸರ್ವಜ್ಞನಾದ ಪರಮೇಶ್ವರ ಪ್ರಸಾದದಿಂದ ಅನಂತೇಶ್ವರಾದಿಗಳಿಗೆ

ಬಂದಿತ್ತು. ಬಳಿಕ ಅವರಿಂ ರುದ್ರಾದಿಗಳಿಗೆ ಐದಿತ್ತು, ಮೇಣವರಿಂ ಬ್ರಹ್ಮಾದಿಗಳಿಗೆ ಲಭಿಸಿತ್ತು, ಮರಳಿ ಅವರಿಂ ದೇವತೆಗಳಿಗೆ ಒದಗಿತ್ತು. ಮತ್ತವರಿಂ ಋಷಿಗಳಿಗೆ ಅಳವಟ್ಟಿತ್ತು. ಬಳಿಕ ಅವರಿಂದ ಸ್ಕಂದಾದಿ ಪಿತೃ ಪಿತಾಮಹರಿಗೆ ಸಾರಿತ್ತು, ಮಗುಳವರಿಂದ ಅಸ್ಮದಾದಿಗಳಿಗೆ ಸಿದ್ಧಿಸಿತ್ತು ಎಂದು ಅರಿಯಲ್ಕೆಳ್ಳುಂ. ೩೩೮

ತಿರೋಧಾನ ಪಾಶಸ್ವರೂಪ :

ಬಳಿಕ ಇಂತು ಪೇಳ್ದ ಮಲಾದಿ ಚತುರ್ವಿಧಪಾಶವು ಅಚೇತನವಪ್ಪುದರಿಂ, ತಮ್ಮ ತಮ್ಮ ವ್ಯಾಪಾರದೊಳು ತಾವೆ ಪ್ರವರ್ತಿಸಲು ಅರಿಯವಾಗಿ, ಆಯಾಯಾ ಪಾಶಾನುಗ್ರಹ ಲಕ್ಷಣಮಾದ, ಆಯಾಯಾ ಪಾಶವ್ಯಾಪಾರ ಅನುಸಾರಣಮಪ್ಪ ಶಿವ-ಶಕ್ತಿ ವಿಶೇಷವೇ ತಿರೋಧಾನವಹುದೆಂಬುದೇ ತೃತೀಯ ಪದಾರ್ಥಮಕ್ಕುಂ. ೩೩೯

ಸಿದ್ಧಾಂತ ಉಪಸಂಹಾರ :

ಬಳಿಕ ಈ ಪ್ರಕಾರದಿಂ ಪೇಳ್ದ, ಇವು ಮೊದಲಾದ ಅಸಂಖ್ಯಾತಮಪ್ಪ ಅವಾಂತರ ಭೇದಯುಕ್ತಮಾದ ಪತ್ಯಾದಿ ಪದಾರ್ಥ ಪ್ರತಿಪಾದಕಮಾದುದೇ ಜ್ಞಾನ ಪಾದವಹುದು. ಇಂತು ಕ್ರಿಯಾಪಾದಂ ಮೊದನಾದ ನಾಲ್ಕು ಪಾದಪ್ರವರ್ತಕಮಪ್ಪ ಶಿವಾಗಮ, ಶ್ರವಣ, ಪಠಣ, ಗ್ರಹಣ, ಮನನ, ನಿಧಿಧ್ಯಾಸಂಗಳಿಂದ ಉತ್ಪನ್ನಮಾದ ಆತ್ಮನ ಯಥಾರ್ಥ ಜ್ಞಾನದೃಢತೆಯಿಂ ಪುಟ್ಟಿದ ಸಮಸ್ತ ಪ್ರಾಕೃತ ಮಾಯೆಯ ಬೈಂದವ ಭೋಗ ನಿಸ್ಪೃಹಲಕ್ಷಣ ಪರಮವೈರಾಗ್ಯಬಲದಿಂ ಷಡಧ್ವಾತೀತಮಪ್ಪ ಶಿವಸಾಮ್ಯ ನಾನಪ್ಪೆನೆಂಬ ನಿಶ್ಚಯಮುಳ್ಳಾತನೇ ಚರಮಕೃತಾರ್ಥನೆಂದು ಪೇಳ್ವುದೇ ಶಿವಸಿದ್ಧಾಂತದರ್ಥ ವಿಸ್ತಾರಮಕ್ಕು. ೩೪೦

ಇತಿ ಶಿವಾಗಮಾರ್ಥ ವರ್ಣನಂ

ದ್ವಿತೀಯ ಪರಿಚ್ಛೇದ

ಪರಿಸಮಾಪ್ತಂ

■■

ತೃತೀಯ ಪರಿಚ್ಛೇದ

ಕಂದ॥ ಸಕಲಾಗಮಾರ್ಥಮಮಂ ಸಾ
ಧಕರರಿವಂತೆಯ್ದೆ ಪೇಳ್ದೆನಿಂತನುನಯದಿಂ।
ಪ್ರಕಟಿಸುವೆನಿನ್ನ ಜಾಂಡಾ
ದಿಕಮಂ ಕೌತುಕಮಿದೆಂದು ಕೇಳ್ವಂತಿಳೆಯೊಳ್॥

ಅದೆಂತೆಂದೊಡೆ :

ಆಗಮರೀತ್ಯ ಷಟ್ತ್ರಿಂಶ ತತ್ತ್ವಗಳು :

ಪೂರ್ವೋಕ್ತ ಬಿಂದುವಿನ ಕಾರ್ಯಮಾದ ವರ್ಣಾದಿ ಕಲಾಂತಮಪ್ಪ ಷಡಧ್ವ ವಿಚಾರವಾಗಮಂಗಳಲ್ಲಿ ಪ್ರಸಿದ್ಧಮಪ್ಪುದರಿಂದವರೊಳಗೆ ತತ್ತ್ವಾಧ್ವ ಭುವನಾಧ್ವಂಗಳೆರಡನೇ ಚೆಲುಪಾಲು ಸಕ್ಕರೆ ತುಪ್ಪಂಗಳೊಂದುಗೂಡಲತಿ ಮಧುರವಪ್ಪಂತೆ ವೇದಾಗಮ ಪುರಾಣಸಮ್ಮತಿಗೂಡಿ ಪೇಳ್ವೆನು, ಅದೆಂತೆಂದೊಡೆ:

ಶಿವ-ಶಕ್ತಿ ಸದಾಶಿವ ಈಶ್ವರ ವಿದ್ಯೆ ಕಾಲ ಕಲೆ ನಿಯತಿ ಅವಿದ್ಯೆ ರಾಗ ಪುರುಷ ಪ್ರಕೃತಿ ಗುಣ ಬುದ್ಧಿ ಅಹಂಕಾರ ಚಿತ್ತ ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣ ವಾಕ್ಕು ಪಾಣಿ ಪಾದ ಪಾಯು ಉಪಸ್ಥ ಶಬ್ದತನ್ಮಾತ್ರೆ ಸ್ಪರ್ಶತನ್ಮಾತ್ರೆ ರೂಪತನ್ಮಾತ್ರೆ ರಸತನ್ಮಾತ್ರೆ ಗಂಧತನ್ಮಾತ್ರೆ ನಭ ವಾಯು ವಹ್ನಿ ಜಲ ಭೂಮಿಗಳೆಂಬ ಮೂವತ್ತಾರು ತತ್ವಂಗಳು, ಅವರಲ್ಲಿ ಸೃಷ್ಟಿಕ್ರಮ ಸ್ವರೂಪಸಿದ್ಧಿ ಗುಣ ಕರ್ಮ ಪ್ರಯೋಜನಾದಿಗಳ ವಿಸ್ತಾರವನು ಆಗಮಂಗಳಲ್ಲಿ ವಿಚಾರಂಗೆಯ್ಯಲ್ಪಟ್ಟುದು, ಅವರೊಳಗೆ ೩೪೧

ಶುದ್ಧಾಧ್ವ ತತ್ತ್ವಗಳು :

ಮೊದಲ ಶಿವಾದಿ ವಿದ್ಯಾಂತಮಾದ ಐದೈದು ತತ್ತ್ವಂಗಳೇ ಬಿಂದುಮಯವಾಗಿ ಶುದ್ಧಾಧ್ವವೆನಿಸಿಕೊಂಡು ವಿಜ್ಞಾನಕೇವಲರೆಂಬ ಆತ್ಮವರ್ಗಕ್ಕೆ ಶರೀರಾದಿ ಭೋಗಸಾಧನಂಗಳಾಗಿ ಇರ್ಕುಂ.

ಮಿಶ್ರಾಧ್ವ ತತ್ತ್ವಗಳು :

ಮತ್ತಂ ಕಾಲಾದಿ ಪ್ರಕೃತಿ ಕಡೆಯಾದ ಏಳು ತತ್ತ್ವಂಗಳೇ ಮಾಯಾದಿಕಾರಮಾಗಿ ಮಿಶ್ರಾಧ್ವವೆನಿಸಿಕೊಂಡು ಪ್ರಳಯಾಕಲರೆಂಬ ಆತ್ಮವರ್ಗಕ್ಕೆ ಕರಣಾದಿ ಭೋಗ ಸಾಧನಂಗಳಾಗಿರ್ಕುಂ.

ಅಶುದ್ಧಾಧ್ವ ತತ್ತ್ವಗಳು :

ಬಳಿಕ ಆ ಗುಣಾದಿ ಭೂಮ್ಯಾಂತಮಾದ ಇಪ್ಪತ್ತನಾಲ್ಕು ತತ್ತ್ವಂಗಳೇ ಪ್ರಕೃತಿ ಕಾರ್ಯಮಾಗಿ ಆಶುದ್ಧಾಧ್ವವೆನಿಸಿಕೊಂಡು ಸಕಲರೆಂಬ ಆತ್ಮವರ್ಗಕ್ಕೆ ಭುವನಾದಿ ಭೋಗ ಸಾಧನಂಗಳಾಗಿರ್ಕುಂ.

ಸುಕ್ಷ್ಮ ತತ್ತ್ವಗಳು :

ಬಳಿಕ ಅವರಲ್ಲಿ ಕಾಲಾದಿ ಭೂಮಿ ಅವಧಿಯಾದ ಮೂವತ್ತೊಂದು ತತ್ತ್ವಂಗಳು ಆವಾವು ಎಂತೆಂದೊಡೆ: ಸ್ಥೂಲ ಸೂಕ್ಷ್ಮಭೇದದಿಂದ ಇತ್ತೆರನಪ್ಪುವು, ಅವರೊಳಗೆ, ಸೂಕ್ಷ್ಮರೂಪಂಗಳೇ ಭೂತ, ತನ್ಮಾತ್ರೆ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣ, ಗುಣ, ಪ್ರಕೃತಿ, ಕಲಾದಿಕಮೆಂದು ಎಂಟು ವರ್ಗಮಾಗಿ, ಬೇರೆ ಬೇರೆ ಪುರ್ಯಷ್ಟಕ ಶರೀರವೆನಿಸಿಕೊಂಡು ಸೃಷ್ಟಿತೊಡಗಿ ಪ್ರಳಯ ಅವಧಿಯಾಗಾದರೂ, ಅಲ್ಲವೆ ಮೋಕ್ಷಾಂತಮಾಗಾದರೂ ಕೆಡದಿರ್ದು, ತಮ್ಮ ತಮ್ಮ ವ್ಯಾಪಾರಮುಖದಿಂ, ಪಿಶಾಚ ಯಕ್ಷ ರಾಕ್ಷಸ ಗುಹ್ಯಕ ಇಂದ್ರ ಬ್ರಾಹ್ಯ ಸೋಮ ಪ್ರಜಾಪತ್ಯ ಪಶು ಪಕ್ಷಿ ಸರ್ಪ ಮೃಗ ವೃಕ್ಷ ಮನುಷ್ಯರೆಂಬ ಚತುರ್ದಶಸೃಷ್ಟಿ ಯೋಗ್ಯರಾದ ಪ್ರತ್ಯೇಕಾತ್ಮರ್ಗೆ ಭೋಗ ಸಾಧನಂಗಳಾಗಿರ್ಕುಂ. ೩೪೨

ಸ್ತೂಲ ತತ್ತ್ವಂಗಳ ಪಂಚೀಕರಣ:

ಬಳಿಕ ಉಳಿದ ಸ್ತೂಲ ರೂಪಂಗಳು ಈ ಭುವನಂಗಳಿಗೆ ಆಧಾರಮಾಗಿರ್ಪವು, ಅದೆಂತೆಂದೊಡೆ: ಪರಮೇಶ್ವರ ಪ್ರೇರಣೆಯಿಂ ಬ್ರಹ್ಮನು ಪೃಥುವ್ಯಾದಿ ಸ್ಥೂಲ ಪಂಚಭೂತಂಗಳನು ಒಂದೊಂದನು ಎರಡೆರಡಾಗಿ ವಿಭಾಗಿಸಿ, ಬಳಿಕ ಅವರೊಳು ಒಂದೊಂದು ಭಾಗವನೇ ಮಹಾಭೂತಮಾಗಿರಿಸಿ, ಮಿಕ್ಕ ಒಂದೊಂದು ಭಾಗಮನೆ ಮತ್ತೆ ಎರಡು ಭಾಗಂಗೆಯ್ದು, ಮೇಣ್ ಆ ಭಾಗದ್ವಯದೊಳಗೆ ಮೊದಲ ಮೊದಲ ಭಾಗಮಂ ಮತ್ತೆ ನಾಲ್ಕು ನಾಲ್ಕು ಭಾಗಂ ಮಾಡಿ, ಮೇಲೆ ಆ ನಾಲ್ಕು ನಾಲ್ಕು ಭಾಗಮಂ ತಮ್ಮ ತಮ್ಮ ದ್ವಿತೀಯ ಭಾಗದೊಳು ಬೆರಸದೆ, ಮಿಕ್ಕವೆರಡು ಎರಡನೆಯ ಭಾಗದ ಒಂದಂ ಕೂಡಲು ಇಪ್ಪತ್ತೈದು ಭಾಗಮಪ್ಪುದು, ಎಂತೆಂದೊಡೆ;

ಆಕಾಶ ಪಂಚೀಕರಣ:

ಆಕಾಶದ ದ್ವಿತೀಯಭಾಗವೆ ಜ್ಞಾತೃವೆನಿಸೂದು. ಅನಿಲನ ದ್ವಿತೀಯ ಭಾಗದೊಳು ಬೆರೆದುದೇ ಮನಸ್ಸು, ಅನಲನ ದ್ವಿತೀಯ ಭಾಗದೋಳು ಬೆಳೆದುದೇ ಬುದ್ಧಿ, ವಾರಿಯ ದ್ವಿತೀಯ ಭಾಗದೊಳು ಬೆರೆದುದೇ ಅಹಂಕಾರ. ಇಂತು ಐದೈದು ಅಂತಃಕರಣಂಗಳು ಆಕಾಶದ ಪಂಚೀಕರಣಂಗಳಕ್ಕುಂ.

ವಾಯುಪಂಚೀಕರಣ :

ಬಳಿಕ ವಾಯುವಿನ ದ್ವಿತೀಯ ಭಾಗವೇ ವ್ಯಾನವೆನಿಸೂದು. ನಭದ ದ್ವಿತೀಯ ಭಾಗದೊಳು ಕೂಡಿದುದೆ ಸಮಾನ, ವಹ್ನಿಯ ದ್ವಿತಿಯ ಭಾಗದೊಳು ಕೂಡಿದುದೆ

ಉದಾನ, ಜಲದ ದ್ವಿತೀಯ ಭಾಗದೊಳು ಕೂಡಿದುದೆ ಅಪಾನ, ಧರೆಯ ದ್ವಿತೀಯ ಭಾಗದೊಳು ಕೂಡಿದುದೆ ಪ್ರಾಣವಿಂತು ಐದು ಮಾರುತಂಗಳೇ ವಾಯುವಿನ ಪಂಚೀಕರಣಂಗಳುಕ್ಕುಂ.

ಅಗ್ನಿಯ ಪಂಚೀಕರಣ :

ಬಳಿಕ ಅಗ್ನಿಯ ದ್ವಿತೀಯ ಭಾಗವೇ ನೇತ್ರವೆನಿಸೂದು. ವ್ಯೋಮದ ದ್ವಿತೀಯ ಭಾಗದೊಳು ಒಂದಿದುದೇ ಶ್ರೋತ್ರ, ಸಮೀರನ ದ್ವಿತೀಯ ಭಾಗದೊಳು ಒಂದಿದುದೇ ತ್ವಕ್ಕು, ಸಲಿಲದ ದ್ವಿತೀಯ ಭಾಗದೊಳು ಒಂದಿದುದೇ ಜಿಹ್ವೆ, ಅವನಿಯ ದ್ವಿತೀಯ ಭಾಗದೊಳು ಒಂದಿದುದೇ ಘ್ರಾಣ, ಇಂತು ಐದು ಜ್ಞಾನೇಂದ್ರಿಯಂಗಳೇ ಅಗ್ನಿಯ ಪಂಚೀಕರಣಂಗಳಕ್ಕು.

ಅಪ್ಪುವಿನ ಪಂಚೀಕರಣ :

ಬಳಿಕ ಅಪ್ಪುವಿನ ದ್ವಿತೀಯ ಭಾಗವೆ ಪಾಯುವೆನಿಸೂದು. ಗಗನದ ದ್ವಿತೀಯ ಭಾಗದೊಡವೆರದುದೇ ಶಬ್ದ, ಪವನನ ದ್ವಿತೀಯಭಾಗದೊಡವೆರದುದೇ ಸ್ಪರ್ಶ, ಪಾವಕನ ದ್ವಿತೀಯ ಭಾಗದೊಡವೆರದುದೇ ರೂಪು, ಧರಣಿಯ ದ್ವಿತೀಯ ಭಾಗದೊಡವೆರದುದೇ ಗಂಧ, ಇಂತು ಐದು ವಿಷಯಂಗಳೇ ಅಪ್ಪುವಿನ ಪಂಚೀಕರಣಂಗಳಕ್ಕುಂ.

ಪೃಥುವಿಯ ಪಂಚೀಕರಣ :

ಬಳಿಕ ಪೃಥುವಿಯ ದ್ವಿತೀಯ ಭಾಗವೇ ವಾಯುವೆನಿಸೂದು. ಅಂಬರದ ದ್ವಿತೀಯ ಭಾಗದೊಳು ಎಯ್ದುದೇ ವಾಕ್ಕು, ಪವನನ ದ್ವಿತೀಯ ಭಾಗದೊಳೆಯ್ದುದೇ ಪಾಣಿ, ಜ್ವಲನನ ದ್ವಿತೀಯ ಭಾಗದೊಳೆಯ್ದುದೇ ಪಾದ, ಉದಕದ ದ್ವಿತೀಯ ಭಾಗದೊಳು ಯೆಯ್ದುದೇ ಉಪಸ್ಥ. ಇಂತು ಐದು ಕರ್ಮೇಂದ್ರಿಯಂಗಳೇ ಪೃಥುವಿಯ ಪಂಚೀಕರಣಂಗಳು.

ಎಂಭತ್ತನಾಲ್ಕು ಲಕ್ಷ ಜೀವಯೋನಿಗಳು :

ಇಂತು ಪಂಚೀಕೃತ ಭೂತಂಗಳಿಂ ಬ್ರಹಾಂಡವು; ಆ ಬ್ರಹ್ಮಾಂಡದಲ್ಲಿ ಕಾಲಾಗ್ನಿ ಮೊದಲಾದ ಭುವನ; ಆ ಭುವನದಲ್ಲಿ ಅಂಡಜ ಸ್ವೇದಜ ಉದ್ಭಿಜ ಜರಾಯುಜ ಮಂತ್ರಜವೆಂಬ ಐದು ಯೋನಿಭೇದಂಗಳೊಳಗೆ, ನವಲಕ್ಷ ಮನುಷ್ಯ ಜಾತಿಗಳ, ಹದಿನಾಲ್ಕುಲಕ್ಷ ದೇವಜಾತಿಗಳ, ಹತ್ತಲಕ್ಷ ಜಲಚರಪ್ರಾಣಿಗಳ, ಹತ್ತುಲಕ್ಷ ಯುಗಪಾದ ಜಾತಿಗಳ, ಹತ್ತುಲಕ್ಷ ಸರ್ಪಜಾತಿಗಳ, ಹತ್ತುಲಕ್ಷ ಖೇಚರಜನ್ಮಿಗಳ, ಒಂದುಲಕ್ಷ ಭೂಗತ ಚರಾಚರ ಜೀವಿಗಳ, ಇಪ್ಪತ್ತುಲಕ್ಷ ಸ್ಥಾವರ ಜಾತಿಗಳ, ಸಂಖ್ಯಾ ಭೇದದಿಂ ಎಂಭತ್ತನಾಲ್ಕು ಲಕ್ಷ ಜೀವರಾಜಿಗಳ ಸ್ಥೂಲ ಶರೀರಗಳು ಉದಿಸುತ್ತಿಕ್ಕುಂ. ೩೪೩

ಸ್ಥೂಲಶರೀರದಲ್ಲಿ ಪಂಚೀಕೃತ :

ಮತ್ತಂ ಆ ಸ್ಥೂಲಶರೀರದಲ್ಲಿಯೆ ಪೃಥುವ್ಯಾದಿ ಭೂತ ಪಂಚೀಕರಿಸಿರ್ಪವು, ಅವರಲ್ಲಿ :

ಅಸ್ಥಿ ಚರ್ಮಾದಿ ಪಂಚಕಂಗಳೇ ಪೃಥ್ವಿ
ಮೂತ್ರ ರಕ್ತಾದಿ ಪಂಚಕಂಗಳೇ ಅಪ್ಪು
ಕ್ಷುಧಾ ತೃಷ್ಣಾದಿ ಪಂಚಕಂಗಳೇ ಅಗ್ನಿ
ಧಾವನ ಚಲನಾದಿ ಪಂಚಕಂಗಳೇ ವಾಯು
ಕಾಮ ಕ್ರೋಧಾದಿ ಪಂಚಕಂಗಳೇ ಆಕಾಶ ಮಕ್ಕುಂ ೩೪೪

ಭೋಗ ಸಾಧನ ಸೂಕ್ಷ್ಮ ಸ್ಥೂಲಂಗಳು :

ಬಳಿಕ ಇಂತು ಪೇಳ್ದ ತತ್ತ್ವಪುರ್ಯಷ್ಟಕಮಾದ ಸೂಕ್ಷ್ಮ ಶರೀರ, ಭುವನಜಮಾದ ಸ್ಥೂಲದೇಹಂಗಳೊಳಗೆ ತತ್ತ್ವಂಗಳೇ ಜೀವರ್ಗೆಯೂ, ಭೋಗಾಶ್ರಯಂಗಳಾಗಿ ಸಾಧಾರಣಂಗಳೆನಿಸಿಕೊಂಬವು.

ಸೂಕ್ಷ್ಮ ಶರೀರಂಗಳೇ ಬೇರೆ ಬೇರೆ ಒಬ್ಬೊಬ್ಬ ಜೀವರ ಭೋಗಕ್ಕೆಯೇ ಸಾಧನಂಗಳಾಗಿ ಅಸಾಧಾರಣಂಗಳೆನಿಸಿಕೊಂಬವು.

ಸ್ಥೂಲ ದೇಹಂಗಳೇ ಅನ್ಯೋನ್ಯ ಜೀವರ್ಗೆಯುಂ ಭೋಗ ಸಾಧನಂಗಳಾಗಿ ಸಾಧಾರಣ ಅಸಾಧಾರಣಂಗಳೆನಿಸಿಕೊಳುತ್ತಿರ್ಕ್ಕುಂ. ೩೪೫

ಬ್ರಹ್ಮಾಂಡಾದಿ ಲಕ್ಷಣ ಮತ್ತು ಸೃಷ್ಟಿ :

ಮತ್ತಂ ಆ ಬ್ರಹ್ಮಾಂಡ ಭುವನಾದಿಗಳ ಲಕ್ಷಣಮೆಂತೆನೆ:- ಪಂಚೀಕರಿಸಿದ ಮೂಲ ಪೃಥ್ವೀತತ್ವದ ದಶಾಂಶದ ಏಕದೇಶದೊಳು ಬಂದು ಕೋಟಿ ಯೋಜನದಳತೆಯ ದಟ್ಟದ ಸುವರ್ಣಮಯವಾದ ಹಂಚನುಳ್ಳ, ಒಂದರ್ಬುದ ಯೋಜನ ಸ್ಥೂಲಮಾದ ನೂರುಕೋಟಿ ಯೋಜನ ಪ್ರಮಾಣಿನ ವಿಶಾಲೋನ್ನತಮಾದ, ಒಳವಳಯಮಾದ ಅಂಡಾಕಾರಮಪ್ಪುದೇ ಬ್ರಹ್ಮಾಂಡ. ಆ ಬ್ರಹ್ಮಾಂಡವನೆ ಬ್ರಹ್ಮನು ಮಧ್ಯದಲ್ಲಿ ಸಮಾನ ಮಾದ ಕೊಪ್ಪರಿಗೆಯಾಕಾರದಿಂದ ಎರಡು ಹೋಳಾಗಿ ಮಾಡಿ, ತಾನು ಒಳಹೊಕ್ಕು ಮತ್ತೆ ಕರಂಡಗೆಯ ಮುಚ್ಚಳವನು ಅಮರ್ಚಿಸಿದಂತೆ ಮೊದಲ ಹಾಂಗೆ ದೃಢಮಾಗಿ ಸೇರಿಸುತ್ತ ಅದರೊಳು ಅತಿವಿಚಿತ್ರಮಾದ ಭುವನರಚನೆಗಳ ಮಾಡಿದನು. ಅದರಿಂ ಬ್ರಹ್ಮಾಂಡವೆನಿಸಿತ್ತು. ೩೪೬

ಬ್ರಹ್ಮಾಂಡದ ಅಂತರ್ವಿವೇಕ:

ಆ ಬ್ರಹ್ಮಾಂಡದ ಅಡಿಯಣ ಖರ್ಪರದ ಒಳವಳಯದೊಳಗೆ ಘನಗಂಭೀರಮಾದ ವಾರಿ ಪೂರಿತ ಮಾಗಿಹುದು, ಅದರ ನಟ್ಟನಡುವೆ ವಿಶ್ವಕರ್ಮ ನಿರ್ಮಿತ ದಿವ್ಯ ಸಿಂಹಾಸನದ ಮೇಲೆ ಜಲಸ್ತಂಭತತ್ವದಿಂ ಮೆರೆವ ಆಧಾರ ಶಕ್ತಿಯಾದೊಡೆ.

ಆಧಾರ ಶಕ್ತಿ-ಕಮಠ- ಅಷ್ಟದಿಗ್ಗಜಗಳು:

ಹಿರಣ್ಮಯ ಶರೀರದಿಂ ಏಕವಕ್ತ್ರ ತ್ರಿಲೋಚನಂಗಳಿಂ ವರದಾಭಯ ಕಲಶೋತ್ಪಲವಾಂತ ವಾಮ ದಕ್ಷಿಣ ಕರಚತುಷ್ಟಯಂಗಳಿಂದೆಸೆದು, ಶಿವಧ್ಯಾನದಿಂ

ನಿಶ್ಚಲಾತ್ಮಕಿಯಾಗಿರ್ಪಳ್, ಆ ಶಕ್ತಿಯ ಮಸ್ತಕದಲ್ಲಿ ಸೂಡಿದ ಹೊಂದಾವರೆಯಂತೆ ಎಸೆವ ದಶಕೋಟಿ ಯೋಜನದ ಅಗಲದ ಸುವರ್ಣಮಯ ಕೂರ್ಮನಹುದು. ಆ ಕೂರ್ಮನ ಬೆನ್ನ ಉರುಗಿನೊಳ್ ಇಂದ್ರಾದಿ ದಿಕ್ಕು ಎಂಟರಲ್ಲಿ ಕ್ರಮದಿಂದ ಐರಾವತ ಪುಂಡರೀಕ ವಾಮನ ಕುಮುದ ಅಂಜನ ಪುಶ್ಪದಂತ ಸಾರ್ವಭೌಮ ಸುಪ್ರತೀಕಮೆಬ ಎಂಟು ದಿಗ್ಗಜಗಳು, ಆದೊಡೆ ಅಭ್ರಮು ಕಪಿಲೆ ಪಿಂಗಲೆ ಅನುಪಮೆ ತಾಮ್ರಪರ್ಣಿ ಶುಭ್ರದಂತಿ ಅಂಗನೆ ಅಂಜನಾವತಿಯೆಂಬ ತಮ್ಮ ತಮ್ಮ ಸ್ತ್ರೀಯರುಗಳೊಡನೆ ಕ್ರಮದಿಂ ಕೂಡಿ ಭೂಮಿಯಂ ವಹಿಸಿರ್ಪವು. ೩೪೭

ಅಷ್ಟಕುಲ ಫಣಿಗಳು–ಮಹಾಶೇಷನು:

ಅವಕ್ಕೆ ಸ್ತಂಭಕತ್ವದಿಂ ಕೊರಳಂ ಬಳಸಿ ತಮ್ಮ ತಮ್ಮ ಪೆಡೆಗಳಿಂದಾ ಇಂದ್ರ ಅಗ್ನಿ ಮೊದಲಾದೆಂಟು ದಿಕ್ಕಿನ ಭೂಮಿಯಂ ಕ್ರಮದಿಂ ಹೊತ್ತು, ಅನಂತ ತಕ್ಷಕ ವಾಸುಕಿ ಶಂಖಪಾಲ ಪದ್ಮ ಕರ್ಕೋಟಕ ಕ್ರೋಢ ಕಾಳಮೆಂಬ ಅಷ್ಟಕುಲ ಫಣಿಗಳಿರ್ಕುಂ.

ಬಳಿಕ ಆ ಕೂರ್ಮನ ನಡುಬೆನ್ನಮೇಲೆ ನೆಲಸಿ ಪರಮ ಐಶ್ವರ್ಯ ಸಂಪನ್ನನಾಗಿ ಮೆರೆವ ಆದಿಶೇಷನಾದೊಡೆ, ಒಂದೊಂದು ಮೂವತ್ತುಸಾವಿರಯೋಜನದ ಅಗಲದ ಪೆಡೆ ಸಹಸ್ರಂಗಳಿಂದೊಪ್ಪಿರ್ಪನು. ಅ ಗಜಫಣಿ ಮಹಾಶೇಷನೆಂಬ ಇವರ ಒಂದೊಂದರ ಆಹಾರ ಸಮಯದೊಳು ಉಳಿದುಳಿದಿರ್ಪವೆ ಭೂಮಿಯಂ ತಳೆದಿರ್ಕುಂ. ೩೪೮

ದಶಲೋಕೇಶ್ವರರು :

ಮತ್ತಂ, ಇಂತು ಗಜಂಗಳ ಮಸ್ತಕ, ಫಣಿ ಮಹಾಶೇಷಂಗಳ ಪೆಡೆಗಳಮೇಲೆ ಒಂದುಕೋಟಿ ಯೋಜನದಳತೆಯ, ದಟ್ಟಮುಳ್ಳ ಅತಿ ವಿಶಾಲಮಾದ ಸರ್ವಾಧಾರಮಪ್ಪ ಸುವರ್ಣಮಯ ಭೂಮಿ ಕಂಗೊಳಿಸುತ್ತಿಹುದು. ಅದರ ಮೇಲೆ ಮೇಲುಕೆಳಗೆ ಇಂದ್ರಾದಿ ದಶದಿಕ್ಕುಗಳಲ್ಲಿ, ಕ್ರಮದಿಂದೆಸೆವ ಪ್ರಶ್ನ ಅನಂತ ಈಶ್ವರ ಪಿಂಗಳ ಕಾಲ ಕ್ರೋಧೇಶ ಜಲದ ಬಲದ ಧನದ ಶಂಕರರೆಂಬ ದಶಲೋಕೇಶ್ವರರ ಭುವನಮಧ್ಯದೊಳು, ೩೪೯

ಕಾಲಾಗ್ನಿರುದ್ರಮೂರ್ತಿ:

ಏಕಾದಶ ಭುವನವೆನಿಸಿಕೊಂಡು ಕಾಲಾಗ್ನಿರುದ್ರಭುವನ ಐದುಕೋಟಿ ಯೋಜನದ ಅಗಲದಿಂದಿಹುದು. ಅದರ ಮಧ್ಯದರಮನೆಯಲ್ಲಿ ಎರಡುಕೋಟಿ ಯೋಜನದ ಅಗಲಿ, ಒಂದುಕೋಟಿ ಯೋಜನದ ಉದ್ದದಿಂ ನಾನಾರತ್ನಖಚಿತಮಾದ ದಿವ್ಯ ಸಿಂಹಾಸನಾಗ್ರದಲ್ಲಿ ಮೆರೆವೆ ಕಾಲಾಗ್ನಿರುದ್ರನಾದೊಡೆ, ಮಹಾತೇಜೋಮಯನಾಗಿ ರಕ್ತವರ್ಣದ ಒಂದುಕೋಟಿಯೋಜನದ ದೀರ್ಘಶರೀರದಿಂ, ಕರಾಳವದನ ಚತುಷ್ಟಯದಿಂದ, ದೀರ್ಘಸ್ಮಶ್ರುಗಳಿಂ, ದ್ವಾದಶಾಕ್ಷಂಗಳಿಂ, ಖಡ್ಗ ಖಟ್ವಾಂಗ ಪಾಶ ಬಾಣ ವರಂಗಳನುಳ್ಳ ದಕ್ಷಿಣ ಪಂಚಹಸ್ತಂಗಳಿಂ, ಶೂಲ ಅಂಕುಶ ದಂಡ ಧನು ಅಭಯವಾಂತ ವಾಮಕರ ಪಂಚಕಂಗಳಿಂದ ಎಸೆದು, ತಾನು ಊರ್ಧ್ವಮುಖನಾಗೆ ಜಗತ್ತು ಸಂಹಾರವಾದಪುದೆಂದು,

ಅದೋಮುಖನಾಗಿ ತನಗೆ ಸಮಾನಮಾದ ಕೋಟಿ ರುದ್ರರುಗಳಿಂದ ಆವೃತನಾಗಿರ್ಪನು. ಆತನ ಜ್ವಾಲೆ ದಶಕೋಟಿ ಯೋಜನಾಂತಮಾಗಿ ಮೇಲೆ ಆವರಿಸಿಹುದು, ಅದರ ಧೂಮ ಐದುಕೋಟಿ ಯೋಜನಾವಧಿಯಾಗಿ ತೀವಿರ್ಕುಂ. ೩೫೦

ಯಮಲೋಕ :

ಬಳಿಕ, ಅಲ್ಲಿಂದ ಮೇಲೆ ಯಮರಾಜನ ಆಜ್ಞಾಸೀಮೆಯಾದ ಪ್ರತ್ಯೇಕ ಒಂಭತ್ತು ಯೋಜನದ ಅಂತರಾಳವನುಳ್ಳ, ಮೂವತ್ತಮೂರು ಘಟಕಂಗಳ ಮಧ್ಯದಲಿ ಒಂದು ಲಕ್ಷ ಯೋಜನ ಅವಕಾಶಮಪ್ಪ, ಪಾಪಾತ್ಮಕರ ವೇದನೆಗೋಸುಗ ಅಜನಿಂ ಕಲ್ಪಿತಮಾದ ನರಕಲೋಕವಿಗುದು, ಅಲ್ಲಿ ರೌರವಾದಿ ಮೂವತೆರಡು ಮುಖ್ಯ ನರಕಂಗಳು ಇರ್ಪವು. ಅವು ಆವಾವೆದೊಡೆ, ನಾಲ್ಕುಭಾಗದಿಂದ ಎಂಟೆಂಟೆನಿಸಿ ನರಕ ಮಹಾನರಕ ರಾಜನರಕ ರಾಜರಾಜೇಶ್ವರನರಕಂಗಳೆನಿಸಿಪ್ಪವು. ಅವರಲ್ಲಿ,

ನರಕಾಷ್ಟಕ :

ರೌರವ ಧ್ವಾಂತ ಶೀತ ಉಷ್ಣಸಂತಾಪ ಅಂಬುಜ ಮಹಾಂಬುಜ ಕಾಲ ಸೂತ್ರಂಗಳೆಂಬವೇ ಅಷ್ಟನರಕಂಗಳು. ೩೫೧

ಮಹಾನರಕಾಷ್ಟಕ :

ಸೂಚೀಮುಖ ಕಾಲಖಡ್ಗ ಕ್ಷುರಧಾರೆ ಆಂಬರೀಷಕ ತಪ್ತಾಂಗಾರ ದಾಹ ಮಹಾದಾಹ ಸಂತಾಪ ಇವುಗಳೆಂಬವೆ ಮಹಾನರಕಂಗಳು. ೩೫೨

ಅಷ್ಟರಾಜನರಕಂಗಳು :

ಲಾಕ್ಷಾಪ್ರಲೇಪ ಮಾಂಸಾದ ನಿರುಚ್ಛ್ವಾಸ ಸನಿಚ್ಛ್ವಾಸ ಯಗ್ಮಾದ್ರಿ ಶಾಲ್ಮಲಿ ಲೋಹಪ್ರದೀಪ ಕ್ಷುತ್ಪಿಪಾಸಾಕ್ರಮಿಕುಂಗಳೆಂಬವೆ ರಾಜನರಕಾಷ್ಟಕಂಗಳು. ೩೫೩

ರಾಜರಾಜೇಶ್ವರಜ ನರಕಾಷ್ಟಕಂಗಳು:

ಲೋಹಸ್ತಂಭ ವಿಣ್ಮೂತ್ರ ವೈತರಿಣಿನದಿ ತಾಮಿಶ್ರ ಆಂಧತಾಮಿಶ್ರ ಕುಂಭಿಪಾಕ ಮಹಾರೌರವ ಮಹಾಪಥಾನುಗವೀಚಿಗಳೆಂಬವೆ ರಾಜರಾಜೇಶ್ವರ ನರಕಾಷ್ಟಕಂಗಳು.

ರಾಜ ಮಂತ್ರಿ ನರಕಂಗಳು:

ಮತ್ತಂ ಆ ನರಕಂಗಳಲ್ಲಿ ರೌರವ ಮಹಾರೌರವ ತಮ ಶೀತ ಉಷ್ಣಂಗಳೆಂಬವೈದು ಮಂತ್ರಿನರಕಗಳಿಂದ ಆವೃತಮಾಗಿ, ಘೋರಮೆಂಬ ಅರಸು ನರಕವಿಹುದು.

ಸುದಮನ ಸತೀಕ್ಷ್ಣ ಪದ್ಮ ಸಂಜೀವನ ಶತಮಹಾಸನವೆಂಬೈದು ಮಂತ್ರಿನರಕಂಗಳಿಂ ಪರಿವೇಷ್ಟಿಸಿ, ಸುಘೋರಮೆಂಬರಸು ನರಕವಿಹುದು.

ವಿಲೋಮ ಸುಭೀಮ ಕಟಂಕಟ ತೀವ್ರ ವೇಗ್ರ ಕರಾಳವೆಂಬೈದು ಮಂತ್ರಿನರಕಂಗಳಿಂ ಬಳಸಿ, ಅತಿಘೋರಮೆಂಬ ಅರಸು ನರಕವಿಹುದು.

ವಿಕರಾಳ ಪ್ರಕಂಪ ಪದ್ಮ ಸುವಕ್ತ್ರ ಕಾಲವೆಂಬೈದು ಮಂತ್ರಿನರಕಂಗಳಿಂ ಕೂಡಿ, ಅಘೋರಮೆಂಬ ಅರಸುನರಕವಿಹುದು.

ಪ್ರಮರ್ದನ ಸೂಚೀಮುಖ ಅಸುನೇಮಿ ಸುಪೀಡನ ಬಾಧಕವೆಂಬೈದು ಮಂತ್ರಿನರಕಂಗಳಿಂ ಪರಿವೇಷ್ಟಿಸಿ, ಘೋರಮೆಂಬ ಅರಸು ನರಕವಿಹುದು.

ಕುಂಭಿಪಾಕ ಸುಪಾಕ ಪ್ರಮುಖ ದಾರುಣ ಅಂಗಾರಮೆಂಬೈದು ಮಂತ್ರಿ ನರಕಂಗಳಿಂದಾವರಿಸಿ ತರಳತಾರಮೆಂಬರಸು ನರಕವಿಹುದು.

ದಹನ ಅಶ್ರುಪ್ರದ ತೀಕ್ಷ್ಣಾಯಸ್ತುಂಡ ಶಕುನಿಪಾಯಹ್ರದ ಮಹಾಸುವರ್ತಕಮೆಂಬೈದು ಮಂತ್ರಿ ನರಕಂಗಳಿಂದೊಡಗೂಡಿ ಭಯಾನಕವೆಂಬರಸು ನರಕವಿಹುದು.

ಕ್ರತು ಪೂತಿಮಾಂಸ ತಪ್ತಜತುಲೇಪ ದ್ರವತ್ರಪು ಉಚ್ಛ್ವಾಸಮೆಂಬೈದು ಮಂತ್ರಿನರಕಂಗಳಿಂದೊಂದಿ, ಕಾಳರಾತ್ರಿಯೆಂಬ ಅರಸುನರಕವಿಹುದು.

ನಿರುಚ್ಛ್ವಾಸ ಸುದೀರ್ಘ ಕೂಟಶಾಲ್ಮಲಿ ಅರಷ್ಟ ಸುಮನವೆಂಬೈದು ಮಂತ್ರಿನರಕಂಗಳೊಡನೆ, ಭಯೋತ್ಕಟವೆಂಬ ಅರಸು ನರಕವಿಹುದು.

ನಾದ ಪ್ರವಾಹ ಋಕ್ಷ ಸುಪ್ರವಾಹ ಮೇಷವೆಂಬೈದು ಮಂತ್ರಿ ನರಕಂಗಳ ಮಧ್ಯದಲ್ಲಿ, ಚಂಡವೆಂಬರಸು ನರಕವಿಹುದು.

ಸಕಲ ಶಲ್ಯ ಸಿಂಹ ಗಜಾನನ ವ್ಯಾಘ್ರವೆಂಬೈದು ಮಂತ್ರಿನರಕಂಗಳ ಮೇಳದಲ್ಲಿ ಮಹಾಚಂಡವೆಂಬ ಅರಸು ನರಕವಿಹುದು.

ಶುನಕ ಸೂಕರ ಅಜ ಮಹಿಷ ಆಮಿಕವೆಂಬೈದು ಮಂತ್ರಿನರಕಂಗಳ ನಡುವೆ ಚಂಡಕೋಳಾಹಳಮೆಂಬರಸು ನರಕವಿಹುದು.

ಉಗ್ರ ವೃಕಾಸ್ಯ ಗ್ರಾಹ ಕುಂಭಿ ನಕ್ರವೆಂಬೈದು ಮಂತ್ರಿನರಕಂಗಳ ಮೇಳದಿಂ, ಪ್ರಚಂಡನೆಂಬರಸು ನರಕವಿಹುದು.

ಸರ್ಪ ಕೂರ್ಮ ವಾಯಸ ಗೃಧ್ರ ಉಲೂಕಮೆಂಬೈದು ಮಂತ್ರಿ ನರಕಗಳಿಂ ಸಂಯೋಗಿಸಿ, ಪದ್ಮವೆಂಬರಸು ನರಕವಿಹುಸು.

ಜಲೂಕ ಮಹಾವ್ಯಾಘ್ರ ಮರ್ಕಟ ಕರ್ಕಟ, ಗಂಡಕವೆಂಬೈದು ಮಂತ್ರಿ ನರಕಂಗಳ ಸಹಾಯದಿಂ ಮಹಾಪದ್ಮಮೆಂಬರಸು ನರಕವಿಹುದು.

ಪೂತಿವಕ್ತ್ರ ರಕ್ತ ಪೂತಿ ಮೃತ್ತಿಕೆ ಕಣಧೂಮಮೆಂಬವೈದು ಮಂತ್ರಿನರಕಂಗಳಿಂ ಬೆರೆದು ಭೀಮವೆಂಬರಸು ನರಕವಿಹುದು.

ತುಷಾಗ್ನಿ ಕ್ರಿಮಿಸಂಘ ಅಮೇಧ್ಯ ಅಪ್ರತಿಷ್ಠಿಮೂತ್ರವೆಂಬೈದು ಮಂತ್ರಿ ನರಕಂಗಳಂ ಸುತ್ತಿ ಭೀಮ ಭೀಷಣಮೆಂಬರಸು ನರಕವಿಹುದು.

ಮಲಭಕ್ಷಣ ಆತ್ಮಭಕ್ಷಣ ರುಧಿರಾಂಬುಭಕ್ಷಣ ಸರ್ವಭಕ್ಷಣ ಸುಧಾರಣವೆಂಬವೈದು ಮಂತ್ರಿ ನರಕಂಗಳಿಂ ಕಲಿತಮಾಗಿ ಕರಾಳಮೆಂಬರಸು ನರಕವಿಹುದು.

ಅಂಬರೀಷ ಕಟ ತಪ್ತಲೋಹಶಯನ ವೈತರಣಿನದಿ ಕಷ್ಟವೆಂಬೈದು

ಮಂತ್ರಿನರಕಂಗಳಿಂ ಮುಕ್ತಮಾಗಿ, ವಜ್ರಮೆಂಬರಸು ನರಕವಿಹುದು.

ಸಂಕಟ ವಿಸಂಕಟ ಸುವಿಶಾಮ ಕಟಿ ವಿಕಟವೆಂಬೈದು ಮಂತ್ರಿ ನರಕಗಳಿಂ ಮೋಹಿಸಿ ವಿಕರಾಳಮೆಂಬರಸು ನರಕವಿಹುದು.

ಅಸಿತಾಳವನ ಅಸಿತಿಯಂತ್ರ ಪ್ರಪೀಡನ ತಿಲಯಂತ್ರ ಇಕ್ಷುಯಂತ್ರವೆಂಬೈದು ಮಂತ್ರಿ ನರಕಂಗಳಿಂ ಬೆರೆದು ತ್ರಿಕೋಣಮೆಂಬರಸು ನರಕವಿಹುದು.

ಮಹಾಚೂರ್ಣ ದಲಾಸಂಚೂರ್ಣ ಕೂಟವೇಷ ಪ್ರಮರ್ದನಲೋಹಮಯ. ತಪ್ತತೈಲಮಯವೆಂಬೈದು ಮಂತ್ರಿ ನರಕಂಗಳ ಸಹಚರ್ಯದಿಂ ಪಂಚಕೋಣವೆಂಬರಸು ನರಕವಿಹುದು.

ಪರ್ವತಯುಗಳ ಪರ್ವತ ಕ್ಷುರಧಾರೆ ಮೂತ್ರ ಕೂಪವಿಷ್ಠಾಕೂಪವೆಂಬೈದು ಮಂತ್ರ ನರಕಂಗಳಾದಿಪತ್ಯದಿಂ ಸುದೀರ್ಘವೆಂಬರಸು ನರಕವಿಹುದು.

ಕ್ಷಾರದಕೂಪ ಅಂಧಕೂಪ ತಾತನಮುಸಲ ಉಲೂಖಲಯಂತ್ರ ಶಿಲಾಶಕಟವೆಂಬೈದು ಮಂತ್ರಿ ನರಕಂಗಳಿಂದೊಪ್ಪಿ, ವರ್ತುಳಮೆಂಬರಸು ನರಕವಿಹುದು.

ಲಾಗೂಲ ತಾಳಪತ್ರ ಅಸಿಗಹನ ಮಶಕಮಂದಿರ ಮೋಹನವೆಂಬೈದು ಮಂತ್ರಿನರಕಂಗಳಿಂದಲಂ ಕೃತಮಾಗಿ, ಸಪ್ತಭೌಮವೆಂಬರಸು ನರಕವಿಹುದು.

ಅಸ್ಥಿಭಂಗ ತಪ್ತಶೂಲಮಯ ತಪ್ತಗೂಢ ಬಹುದುಖಜ ಮಹಾದುಃಖಜಮೆಂಬೈದು ಮಂತ್ರಿನರಕಗಳಿಂ ರಂಜಿಸಿ ಅಷ್ಟಭೌಮನೆಂಬರಸು ನರಕವಿಹುದು.

ಶಾಲ್ಮಲ ಶಕಲ ಹಾಳಾಹಳ ವಿರೂಪ ಸ್ವರೂಪವೆಂಬೈದು ಮಂತ್ರಿ ನರಕಂಗಳಿಂ ಆಢ್ಯಮಾಗಿ ದೀಪ್ತಮೆಂಬರಸುನರಕವಿಹುದು.

ಯಮಾನುಗ ಏಕಪಾದ ದ್ವಿಪಾದ ತೀವ್ರ ಆಚಿರಂತನವೆಂಬೈದು ಮಂತ್ರಿ ನರಕಂಗಳಿಂ ಸಂಪನ್ನಮಾಗಿ, ಮಾಯಾಖ್ಯವೆಂಬರಸು ನರಕವಿಹುದು.

ಇಪ್ಪತ್ತೆಂಟು ಅರಸು ನರಕಂಗಳಾದೊಡೆ ಒಂದೊಂದುಕೋಟಿ ನಾಯಕ ನರಕಂಗಳಿಂದ ಅನೇಕ ಪರಿವಾರ ನರಕಂಗಳಿಂ ಆವೃತಮಾಗಿ ತೀವ್ರ ವೇದನಾ ರೂಪಂಗಳಾಗಿಹವೆಂದು ನಿಶ್ಚಿತಮಕ್ಕುಂ.

ಪಾಪಸ್ವರೂಪ :

ಮತ್ತಂ ಆ ನರಕಪ್ರಾಪ್ತಿಗೆ ಹೇತುಭೂತಮಾದ ಪಾಪವಾದೊಡೆ; ಬ್ರಹ್ಮಹತ್ಯವೆಂಬ ಶಿರಸ್ಸಿನಿಂ, ಸುವರ್ಣಸ್ತೇಯಮೆಂಬ ಭುಜದ್ವಯದಿಂ, ಸುರಾಪಾನವೆಂಬ ಹೃತ್ಪ್ರದೇಶದಿಂ, ಗುರುತಲ್ಪಗಮನಮೆಂಬ ಜಘನಯುಗದಿಂ, ಪಾತಕಮೆಂಬಂಗ ಪ್ರತ್ಯಂಗದಿಂ, ಉಪಪಾತಕಾದಿಗಳೆಂಬ ರೋಮಂಗಳಿಂ ಕಾರ್ಗತ್ತಲೆಯಂತಪ್ಪ ಕಾರೊಡಲಿಂ, ಭಯಂಕರವದನದಿಂ, ಕೆಂಡದಂತಿರ್ಪ ಕಂಗಳಿಂ, ಜುಂಜುವೆತ್ತ ಕರ್ಕಶಮಾದ ಮೀಸೆಗಳಿಂ, ಹಲಗೆ ಖಡ್ಗವಾಂತ ಕರಯುಗದಿಂ, ಭಯಾನಕಮೂರ್ತಿಯಾಗಿ ಜೀವರ ವಾಮಕುಕ್ಷಿಯಲ್ಲಿರ್ಪಂ ೨೫೫

ದಶವಿಧಪಾತಕಗಳು :

ಮನೋವಾಕ್ಕಾಯವೆಂಬ ತ್ರಿಕರಣದಲ್ಲಿ ಮಹಾಪಾತಕವೆಂದು, ಅತಿಪಾತಕವೆಂದು, ಪ್ರಾಸಂಗಿಕಮೆಂದು, ಪಾತಕಮೆಂದು, ಉಪಪಾತಕಮೆಂದು, ಜಾತಿಭ್ರಂಶಕಮೆಂದು ಸಂಕೀರ್ಣಮೆಂದು, ಅಪಾತ್ರೀಕರಣಮೆಂದು, ಮಲಾವಹಮೆಂದು, ಪ್ರಕೀರ್ಣಕಮೆಂದು ದಶವಿಧವಾದ ಪಾತಂಗಳನು ಉದ್ಘೋಷಿಸುತಿರ್ಕುಂ. ೩೫೬

ಪಂಚಮಹಾಪಾತಕ :

ಮತ್ತಂ, ಅವರಲ್ಲಿ ಬ್ರಹ್ಮಹತ್ಯ ಸುರಾಪಾನ ಸುವರ್ಣಸ್ತೇಯ ಗುರುತಲ್ಪ ಗಮನ ವತ್ಸರೇಕತತ್ಸಂಬಂಧಯೋಗಮೆಂಬವೆ ಮಹಾಪಾತಕಂಗಳು. ೩೫೭

ಅತಿಪಾತಕಂಗಳು :

ಮಾತೃ ಪುತ್ರಿಯರಗಮನ, ಸೊಸೆ ಅಗ್ರಜೆಯರ ಗಮನ, ಬ್ರಹ್ಮವಿಷ್ಣ್ವಾದಿಮೂರ್ತಿ ಸ್ಥಾಪನ ಪಾತನಾದಿಗಳೇ ಅತಿಪಾತಕಂಗಳು : ೩೫೮

ಪ್ರಾಸಂಗಿಕ ಪಾತಕಂಗಳು :

ಕ್ಷತ್ರಿಯ ಸೂತಕ ಗರ್ಭಿಣಿ ಬಂಧುಗಳೆಂಬವರವಧೆ, ದೇವಬ್ರಾಹ್ಮಣ ತಪಸ್ವಿಗಳ ಭೂಮಿಯ ಹರಣ, ಅತ್ತೆ ರಾಜಸ್ತ್ರೀಯರ ಗಮನ ಕೂಟಸಾಕ್ಷಿತ್ವಾದಿಗಳೆ ಪ್ರಾಸಂಗಿಕ ಪಾತಕಂಗಳು. ೩೫೯

ಸಾಧಾರಣ ಪ್ರಬಲ ಪಾತಕಂಗಳು :

ಮಾತಾ ಸಹೋದರಿ, ಮಾತಾಸಖಿ, ಸುತೆ, ಅತ್ತಿಗೆ ಸೊಸೆಯರ ಗಮನ; ಭಸ್ಮಧಾರಣವನುಳಿದು, ಊರ್ಧ್ವಪುಂಡ್ರಾಂಕ ಧಾರಣ; ಅಂಕುಶ ಗದಾದಂಡ ಶಂಖ ಚಕ್ರ ಶರೀರಾಂಕನಾದಿಗಳೇ ಸಾಧಾರಣ ಪ್ರಬಲ ಪಾತಕಂಗಳು. ೨೬೦

ಮುಖ್ಯ ಉಪಪಾತಕಂಗಳು :

ಆಚಾರ್ಯ ಋತ್ವಿಕ್ಕು ಮಿತ್ರರ ಸ್ತ್ರೀಯರ ಗಮನ ಸ್ವಸ್ತೀಸಖೀಗಮವ ಸಗೋತ್ರ ಕನ್ನಿಕಾಗಮನ ತನ್ನಮರೆಹೊಕ್ಕ ಸ್ತ್ರೀಯರ ಗಮನ, ಆದಿತ್ಯದುರ್ಗಾದಿ ದೇವತಾ ಪತನ ಪಾಷಂಡಿಗಳೊಳತಣ ಸಂಬಂಧಾದಿಗಳೇ ಮುಖ್ಯ ಉಪಪಾತಕಂಗಳು. ೩೬೧

ಗುಣೋಪ ಪಾತಕಂಗಳು :

ಪುಸಿ ಕೊಂಡೆಯ ಗುರುನಿರಾಕರಣ ವೇದನಿಂದೆ ವೇದಾಧ್ಯಯನತ್ಯಾಗ ಯಜ್ಞತ್ಯಾಗ ಪುತ್ರೋತ್ಪತ್ತಿತ್ಯಾಗ ಪಿತೃಮಾತೃ ಸಹೋದರ ಸ್ವಸ್ತ್ರೀಯರ ಪರಿತ್ಯಾಗ, ಅಭಕ್ಷ್ಯಾಭಕ್ಷಣ ಪರದ್ರವ್ಯಾಪಹರಣ ಪರದಾರಾಗಮನ ಗುಲ್ಮಲತಾವನಭೇದನ ಅಭಿಚಾರಕ್ರಿಯೆ ಬ್ರಹ್ಮಚರ್ಯವರ್ಜನ ಕುಶಾಸ್ತ್ರಾಭ್ಯಾಸ ಕುಶೀಲಕುಮತಗ್ರಹಣಾದಿಗಳೇ ಗುಣ ಉಪಪಾತಕಂಗಳು. ೩೬೨

ಜಾತಿಭ್ರಂಶಕ ಪಾತಕಂಗಳು :

ಸುರೆಯವಾಸನೆ ಹೆಣದದುರ್ಗಂಧ ಮಹಿಷೀಪುರುಷಮೈಥುನಾದಿಗಳೇ ಜಾತಿಭ್ರಂಶ ಪಾತಕಂಗಳು. ೨೬೩

ಸಂಕೀರ್ಣಪಾತಕಂಗಳು :

ಗ್ರಾಮ ಅರಣ್ಯದ ಪಶು ಮೃಗ ಹಿಂಸಾದಿಗಳೇ ಸಂಕೀರ್ಣ ಪಾತಕಂಗಳು ೩೬೪

ಅಪಾತ್ರೀಕರಣ ಪಾತಕಂಗಳು :

ನಿಂದಿತರ ದ್ರವ್ಯಗ್ರಹಣ, ನಿಂದಿತರಿಗೆ ಅನ್ನದಾನ ಪುಸಿದುಮಾಡುವ ವ್ಯವಹಾರ ಅದೀಕ್ಷಿತ ಶೂದ್ರರ ವೇದಾಧ್ಯಯನಾದಿಗಳೇ ಅಪಾತ್ರೀಕರಣಮೆಂಬ ಪಾತಕಂಗಳು. ೩೬೫

ಮಾಲಾವಹ ಪಾತಕಂಗಳು :

ವನ ತಟಾಕಸ್ಥಳಗಳಲ್ಲಿರ್ದ ಪಕ್ಷಿಘಾತಕತನ, ನಿಷಿದ್ಧಸೋಂಕಿದ ಅನ್ನ ಭಕ್ಷಣಾದಿಗಳೇ ಮಲಾವಹಮೆಂಬ ಪಾತಕಂಗಳು. ೩೬೬

ಪ್ರಕೀರ್ಣ ಪಾತಕಂಗಳು :

ಇಂತು ಪೇಳದೆ ಉಳಿದ ಸಕಲ ಪಾತಕಂಗಳೇ ಪ್ರಕೀರ್ಣ ಪಾತಕಂಗಳು.

ಮರಣ ಸೂಚನೆಗಳು :

ಮತ್ತೀ ಆ ಪಾತಕಂಗಳು ಅತಿವಿಶೇಷಮಾಗಲು ಇಹದಲ್ಲಿಯೆ ಮೂರುವರ್ಷ ಮೂರು ತಿಂಗಳು ಮೂರು ಪಕ್ಷ, ಮೂರು ದಿನಂಗಳೊಳಗೆ ಫಲಿಸಿ ಮಹಾದುಃಖಂಗಳ ನೀವುತ್ತಿಹವು. ಅಲ್ಲದೆ ಮರಣವಾದ ಮೇಲೆ ನರಕಬಾಧೆಗಳಂ ಕೊಡುತ್ತಿರ್ಪವಾಗಿ ಜನಿಸಿದಾತಂಗೆ ಮರಣ ತಪ್ಪದು. ಆದ ಕಾರಣ ಆ ಮರಣ ಸೂಚನೆಗಳು ಎಂತೆಂದೊಡೆ:-

ಧ್ರುವನು ಆರುಂಧತಿ ಚಂದ್ರಛಯೆ ಮಹಾಪಥಂಗಳಂ ಕಾಣದಿರ್ದೊಡೆ ಒಂದು ವರ್ಷಕ್ಕೆ ಮೃತಿ.

ರಶ್ಮಿಸಹಿತಮಾಗಿ ಸೂರ್ಯನಂ ರಶ್ಮಿಯುಕ್ತನಾಗಿ ಪಾವಕನಂ ಕಂಡೊಡೆ ಹನ್ನೊಂದು ತಿಂಗಳಿಗೆ ಮೃತ್ಯು.

ಸ್ವಪ್ನದಲ್ಲಾಗಲಿ ಪ್ರತ್ಯಕ್ಷಮಾಗಲಿ ಸುವರ್ಣರಜತಾದಿಗಳ ವಮನವಾಗೆ ಹತ್ತು ತಿಂಗಳ ಬಾಳುವೆ.

ಭೂತಪ್ರೇತ ಪಿಶಾಚ ಗಂಧರ್ವನಗರ ರಕ್ತವರ್ಣದ ಧ್ರುಮಾದಿಗಳಂ ಕಂಡೊಡೆ ಒಂಭತ್ತು ತಿಂಗಳ ಬದುಕು.

ಆಕಸ್ಮಿಕದಿಂ ತನ್ನನು ಅತಿ ಸ್ಥೂಲನಾಗಿ, ಅತಿಕೃಶನಾಗಿ ಅತಿ ಕೃಷ್ಣವರ್ಣಮಯನಾಗಿ ಕಂಡೊಡೆ ಎಂಟು ತಿಂಗಳ ಸ್ಥಿತಿ.

ಮಳಲಲ್ಲಾಗಲಿ ಕೆಸರಲ್ಲಾಗಲಿ ತನ್ನ ಹೆಜ್ಜೆಯ ಹಿಂದಾಗಲಿ ಮುಂದಾಗಲಿ ಅರ್ಧವೇ ತೋರಿದಡೆ ಏಳು ತಿಂಗಳಿಗೆ ದೇಹದ ಅಳಿವು.

ಕಾಗೆ ಗೂಗೆ ಕಪೋತಾದಿ ಪಕ್ಷಿಗಳು ತನ್ನಮಸ್ತಕದ ಮೇಲೆ ಕುಳ್ಳಿರಲು ಆರು ತಿಂಗಳಿಗೆ ಪಂಚತ್ವವಹುದು.

ಮಳಲಮಳೆ ತನ್ನಮೇಲೆ ಕರೆವುದಂ, ತನ್ನ ನೆಳಲಲ್ಲಿ ಕರಚರಣ - ವಿಕೃತಿ ಮೊದಲಾದವಂ ಕಂಡೊಡೆ ಐದು ತಿಂಗಳು ನಾಲ್ಕು ತಿಂಗಳಿಗೆ ನಿಧನವು.

ದಕ್ಷಿಣದಿಕ್ಕಿನಲ್ಲಿ ಮುಗಿಲಿಲ್ಲದೆ ಮಿಂಚನು, ಉದಕದೊಳು ಇಂದ್ರಚಾಪಮಂ ಕಂಡೊಡೆ ಮೂರುತಿಂಗಳು ಎರಡುತಿಂಗಳೊಳಗೆ ನಾಶವಹುದು.

ನಿರ್ಮಲದರ್ಪಣದಲ್ಲಿ ತನ್ನನು ಶಿರವಿಲ್ಲದಾತನಾಗಿ ತಾನೆಯಾದೊಡಂ ಅನ್ಯ ಪುರುಷರಾದೊಡಂ ಕಂಡೊಡೆ ಒಂದು ತಿಂಗಳಿಗೆ ಕಾಲಭೀತಿ.

ತನ್ನ ದೇಹವು ವಸ್ತು ಗಂಧಮಾಗಿ ಶವಗಂಧಮಾಗಿ ನಿಂಬಗಂಧಮಾಗಿ ತೋರಲು ಅರ್ಧಮಾಸಕ್ಕೆ ಪ್ರಾಣತ್ಯಾಗವಹುದು.

ಎದೆಯೊಣಗಿ ಸದಾ ಕಂಪನಂ ಪುಟ್ಟಿದೊಡೆ ಹತ್ತು ದಿನಕ್ಕೆ ಅಸುವಿಯೋಗವಹುದು.

ಸ್ವಪ್ನದಲ್ಲಿ ಕರಡಿ ಕಪಿಗಳೊಡಗೂಡಿ ಪಥದಲ್ಲಿ ತಾನು ದಕ್ಷಿಣದಿಙ್ಮುಖನಾಗಿ ಪೋಪುದಂ ಕಂಡದೆ ಮರಣ ಸಮೀಪವಹುದು.

ಕೃಷ್ಣಾಂಬರಧರರಾದ ಸ್ತ್ರೀಪುರುಷರೊಡಗೂಡಿ ತಾನು ದಕ್ಷಿಣದೆಸೆಗಾಗಿ ಸ್ವಪ್ನದಲ್ಲಿ ಗಮಿಸೆ ಶೀಘ್ರದಲ್ಲಿ ಮೃತ್ಯುವಹುದು.

ಸ್ವಪ್ನದಲ್ಲಿ ತನ್ನನ್ನು ಕೃಷ್ಣಾಂಬರಧರನಾಗಿ ನೀಲಛತ್ರವಿಡಿದು, ದಿಗಂಬರನಾದರೂ ಕಂಡೊಡೆ ಮೃತಿ ತ್ವರಿತವಹುದು.

ಪಗಲಿಲ್ಲಿ ಬಹುನಕ್ಷತ್ರಂಗಳು, ರಾತ್ರಿಯೊಳಿಂದ್ರಚಾಪಮಂ, ರಕ್ತವರ್ಣಮಾಗಿ ಚಂದ್ರಮನಂ, ಕೃಷ್ಣವರ್ಣಮಾಗಿ ಸೂರ್ಯನಂ ಕಂಡೊಡೆ ಮೃತ್ಯುಸಮೀಪವಹುದು.

ಸ್ವಪ್ನದಲ್ಲಿ ಕೃಷ್ಣವರ್ಣದ ಬೋಳುದಲೆಯ ಪುರುಷರಿಂ ಕಲ್ಲುಗುಂಡುಗಳಿಂ ತಾನು ಬಾಧೆಪಡುವುದಂ ಕಂಡೊಡೆ ಮರಣಂ ತ್ವರಿತವಹುದು.

ಸೂರ್ಯೋದಯದಲ್ಲಿ ತನ್ನನ್ನು ಜಂಬುಕಂ ಧ್ವನಿಗೆಯ್ಯುತ್ತೆ ಬಂದಡಸೆ ಶೀಘ್ರದಲ್ಲಿಯೆ ಮೃತ್ಯುವಹುದು.

ಸ್ವಪ್ನದಲ್ಲಿ ತಾನು ಮುಕ್ತಕೇಶನಾಗಿ ಪಾಡುತ್ತ ಆಡುತ್ತ ದಕ್ಷಿಣದಿಕ್ಕಿಗೆ ಎಯ್ದುತ್ತಿಹುದಂ ಕಂಡೊಡೆ ಮರಣಂ ತನುಕ್ಷಯವಹುದು.

ಒಂಟೆ ಗಾರ್ದಭಗಳೊಡಗೂಡಿ ರಥಾರೂಢನಾಗಿ ಕನಸಿನಲ್ಲಿ ತಾನು ತೆಂಕದೆಸೆಗೆ ಪೋಪುದಂ ಕಂಡೊಡೆ ಶೀಘ್ರದಲ್ಲಿ ತನುಕ್ಷಯವಹುದು.

ಕನಸಿನಲ್ಲಿ ಶ್ವೇತವರ್ಣದ ಗಜಾದಿಗಳಂ ತೆಂಕದಿಕ್ಕಿನಲ್ಲಿ ಕಂಡೊಡೆ ಮೃತ್ಯು ಸಮೀಪವಹುದು.

ಸ್ವಪ್ನದಲ್ಲಿ ಕುಳಿಯಲ್ಲಿ ಅಗ್ನಿಯಲ್ಲಿ ತಾನು ಬೀಳ್ವುದಂ ಕಂಡೊಡೆ ಸಾವು ತಳುವಿಲ್ಲವೆಂಬಿವು ಮೊದಲಾದ ಮರಣ ಸೂಚನೆಗಳಂ ಸೂತಸಂಹಿತೆ ಮೊದಲಾದವರಲ್ಲಿ ಪೇಳಲ್ಪಟ್ಟಿರ್ಕುಂ. ೩೬೭

ಸ್ವರಭೇದದಿಂದ ಆಯುಷ್ಯ ಪ್ರಮಾಣವನರಿವ ಕ್ರಮ :

ಈಡ ಪಿಂಗಳವೆಂಬೆರಡು ನಾಳಂಗಳು. ಆ ಒಂದೊಂದು ನಾಳದಲ್ಲಿ ಪೃಥ್ವಿ ಸ್ವರ, ಅಪ್ಪುಸ್ವರ, ತೇಜಸ್ವರ, ವಾಯುಸ್ವರ, ಆಕಾಶಸ್ವರ ಇಂತೀ ಪಂಚಸ್ವರಗಳು ಒಂದೊಂದು ನಾಳದಲ್ಲಿ ಐದೈದು ಘಳಿಗೆ ಚರಿಸುತ್ತಿಹವು. ಇದು ಶತವರ್ಷದ ಆಯುಷ್ಯ ಪ್ರಮಾಣುವಿನ ಕಟ್ಟಳೆ.

ಒಂದೊಂದು ನಾಳದಲ್ಲಿ ಈ ಸ್ವರವು ವಿಶೇಷವಾಗಿ ನಡೆಯಲು ಆಯುಷ್ಯವು ಕ್ಷಯವಾಗಿರ್ಪುದು. ಅದು ಹೇಗೆಂದೊಡೆ :

ಐದು ಘಳಿಗೆ ನಡೆದೊಡೆ ನೂರಯಿಪ್ಪತ್ತು ವರ್ಷದ ಆಯುಷ್ಯ
ಆರು ಘಳಿಗೆ ನಡೆದೊಡೆ ನೂರು ವರ್ಷದ ಆಯುಷ್ಯ
ಏಳು ಘಳಿಗೆ ನಡೆದೊಡೆ ಎಂಭತ್ತು ವರ್ಷದ ಆಯುಷ್ಯ
ಎಂಟು ಘಳಿಗೆ ನಡೆದೊಡೆ ಅರುವತ್ತು ವರ್ಷದ ಆಯುಷ್ಯ
ಹತ್ತು ಘಳಿಗೆ ನಡೆದೊಡೆ ಐವತ್ತು ನಲವತ್ತು ವರ್ಷದ ಆಯುಷ್ಯ
ಹದಿನೈದು ಘಳಿಗೆ ನಡೆದೊಡೆ ನಲವತ್ತು ವರ್ಷದ ಆಯುಷ್ಯ
ಇಪ್ಪತ್ತು ಘಳಿಗೆ ನಡೆದೊಡೆ ಮೂವತ್ತು ವರ್ಷದ ಆಯುಷ್ಯ
ಮೂವತ್ತು ಘಳಿಗೆ ನಡೆದೊಡೆ ಹದಿನೈದುವರ್ಷದ ಆಯುಷ್ಯ
ನಾಲ್ವತ್ತು ಘಳಿಗೆ ನಡೆದೊಡೆ ಹತ್ತು ವರ್ಷದ ಆಯುಷ್ಯ
ಐವತ್ತು ಘಳಿಗೆ ನಡೆದೊಡೆ ಐದು ವರ್ಷದ ಆಯುಷ್ಯ
ದಿವಾರಾತ್ರಿ ಒಂದೇ ನಾಳದಲ್ಲಿ ನಡೆದೊಡೆ ಆರು ತಿಂಗಳ ಆಯುಷ್ಯ.
ಈ ಉಪಾಧಿಯಲ್ಲಿ ಆಯುಷ್ಯ ಕ್ಷಯವೆಂದರಿವುದು. ೩೬೮

ಸ್ವರಭೇದದಿಂ ವ್ಯಾದಿ ಮರಣ ಸೂಚನೆ :

ಸೂರ್ಯನಾಡಿ ಅಹೋರಾತ್ರಿ ಐದು ದಿನ ನಡೆದೊಡೆ ಮೂರು ತಿಂಗಳ ರೋಗ ಹಾನಿ ಮರಣ. ಹತ್ತು ದಿನ ನಡೆದೊಡೆ ತಿಂಗಳಿಗೆ ರೋಗಹಾನಿ, ಮರಣ.

ಹದಿನಾಲ್ಕು ದಿನ ಅಡಸಿ ನಡೆದೊಡೆ ಹದಿನೈದು ದಿನಕ್ಕೆ ಹೊಲ್ಲೆಯಂ ತೋರಿತ್ತೊದರಿವುದು ಇಂತು ಸೂರ್ಯನಾಡಿ ಪ್ರಕರಣಂ ಸಮಾಪ್ತಿ.

ಬಳಿಕ ಚಂದ್ರನಾಡಿ ಐದು ದಿನ ನಡೆದೊಡೆ ಒಂದು ವರ್ಷಕ್ಕೆ ಹಾನಿ, ರೋಗ ಹುಟ್ಟಿತ್ತಂದರಿವುದು. ಹದಿನೈದು ದಿನ ಅಡಸಿ ನಡೆದೊಡೆ ಆರು ತಿಂಗಳಿಗೆ ವಿಘ್ನ

ಬಂದಿತ್ತೆಂದರಿವುದು. ಇಪ್ಪತ್ತು ಇನ ಅಡಸಿ ನಡೆದೊಡೆ ತಿಂಗಳು ಮೂರಕ್ಕೆ ವಿಘ್ನ ಬಂದಿತ್ತೆಂದರಿವುದು. ತಿಂಗಳು ಅಡಸಿ ನಡೆದೊಡೆ ಕಡೆಯ ದಿನ ಪ್ರಾಪ್ತವಾಯಿತೆಂದು ಅರಿವುದು. ಇಂತು ಚಂದ್ರನಾಡಿ ಪ್ರಕರಣಂ ಸಮಾಪ್ತಿ. ೩೬೯

ಧನಂಜಯವಾಯುಗತಿ ಸೂಚನೆ :

ಧನಂಜಯವಾಯು ಬ್ರಹ್ಮರಂಧ್ರ ಸ್ಥಾನದಲ್ಲಿರ್ದು ಕರ್ಣದಲಿ ಸಮುದ್ರ ಘೋಷಮಂ ಘೋಷಿಸಿ ಮರಣಕಾಲಕ್ಕೆ ನಿರ್ಘೋಷಮಪ್ಪುದು. ೩೭೦

ಮರಣಕ್ಕೆ ಸಾಧಾರಣ ನಿಮಿತ್ತಗಳು :

ರೋಗ ಸಂಭವಿಸಿದೊಡೆ, ಅರಸು ಕೋಪಿಸಿದೊಡೆ, ವ್ಯವಹಾರ ನಷ್ಟವಾಗುತ್ತ ಬಂದೊಡೆ, ಬಂಧುಗಳ ಕೂಡೆ ಕದನ ಹುಟ್ಟಿದೊಡೆ ಕಾಲ ಬಂದಿತ್ತೆಂದರಿವುದು.

ಮರಣ ಕಾಲ ಸೂಚನೆ :

ದೇಹ ಕಾಂತಿ ಕುಂದಿದೊಡಂ, ಇಂದ್ರಿಯಂಗಳು ಕೆಟ್ಟೊಡಂ, ಕೆಂಪುಳ್ಳವಂ ಕೆಂಪುಗೆಟ್ಟಡಂ, ರೂಪಿಲ್ಲದವ ರೂಪಾದೊಡಂ, ಉಗ್ರಂ ಶಾಂತನಾದೊಡಂ, ತ್ಯಾಗಿ ಭೋಗಿಯಾದೊಡಂ, ಭೋಗಿತ್ಯಾಗಿಯಾದೊಡಂ, ನೆಳಲು ಶ್ವೇತ ಪೀತ ವರ್ಣವಾದೊಡಂ, ಬಯಲು ಕಣ್ಣಿಗೆ ರೂಪಾಗಿತೋರ್ದಡಂ, ನೆಲನು ಚದುರಂಗದಂತೆ ತೋರ್ಪೊಡಂ, ಉದಯಂಗೆಯ್ದಿರ್ದ ಆದಿತ್ಯ ಚಂದ್ರನಾಗಿ ತೋರ್ಪೊಡಂ, ಚಂದ್ರಮಂಡಲ ರವಿಯಾಗಿ ತೋರ್ಪೊಡಂ, ಚಂದ್ರಮಂಡಲ ರವಿಯಾಗಿ ತೋರ್ಪೊಡಂ, ನಂದಿದ ಸೊಡರವಾಸನೆ ಅರಿಯಬಾರದೆ ಇರ್ದಡಂ, ಅರುಂಧತಿ ಧ್ರುವ ಎರಡು ನಕ್ಷತಂ ಕಾಣಬಾರದಿರ್ದೊಡಂ, ಮೃದುವಸ್ತು ದಟ್ಟಿತ್ತಾದೊಡಂ, ಇಂತಪ್ಪ ವಿಪರೀತ ಸಂಜ್ಞೆಗ್ಳಂ ಅನರ್ಥಂಗಳಂ ಕಂಡೊಡಂ ಅನಿಷ್ಟ ಮಕ್ಕುಂ

ಕನ್ನಡಿಯೊಳು ರೂಹಂ ಕಾಣಬಾರದಿರ್ದಡಂ ಪಗಲಂ ಇರುಳೆಂಬರಂ, ಇರುಳಂ ಪಗಲೆಂಬರಂ, ತನ್ನ ಹುಬ್ಬು ತನಗೆ ಕಾಣಂಬಾರದಿರ್ದಡಂ, ಒಂಭತ್ತು ದಿವಸ ಸಮುದ್ರಘೋಷಮಿಲ್ಲದೆ ಇರ್ದಡಂ, ಏಳು ದಿವಸ ಚಕ್ಷು ಜ್ಯೋತಿಯುಂ ಕಾಣಬಾರದಿರ್ದಡಂ, ಐದು ದಿವಸ ಮೂಗಿನ ಕೊನೆಯಂ ಕಾಣಬಾರದಿರ್ದಡಂ, ಮೂರುದಿವಸ ನಾಲಿಗೆಯ ಕೊನೆಯಂ ಕಾಣಬಾರದಿರ್ದೊಡಂ ಅರಿಷ್ಟಮಕ್ಕುಂ.

ಪ್ರಕೃತಿ ವಿಕೃತಿಯಪ್ಪೊಡಂ ಅರಿಷ್ಟಂ, ಕನಸಿನಲ್ಲಿ ಪಂಚಲೋಹವ ಪಿಡಿವುದಂ ಹತ್ತಿಯ ಪಿಡಿವುದಂ, ಮದುವೆಪ್ಪುದಂ, ಎಣ್ಣೆಯಂ ಮಂಡೆಗೆ ಪೂಸಿ ಬರುಮಂಡೆಯಪ್ಪುದಂ, ಕುಣಿವುದಂ ಲಿಂಗಿಯಪ್ಪುದಂ, ಹಲ್ಲಿ ಹೋಹುದಂ, ತನ್ನ ಕಟ್ಟುವುದಂ,ಕೆಸರಪೊಗುವುದಂ, ಕೆಚ್ಚನೆಯ ಸೀರೆಯನುಟ್ಟು ಕೆಚ್ಚನೆಯ ಮಾಲೆಯ ಹಾಕಿ ತೆಂಕ ಮುಖವಾಗಿ ಹೋಹುದಂ ಬಂಡಿ, ಎಮ್ಮೆ, ಹೋರಿ, ಕತ್ತೆ, ಒಂಟೆಯೆಂಬವಂ ಏರಿ ಪಯಣ ಪೋಪುದಂ, ಮಾಡವನೇರಿ ಬೀಳ್ವುದಂ, ಕಣ್ಣಂ ಕಾಗೆ ಕುತ್ತಿರಿವುದಂ, ನೀಲಿಯ ಸೀರೆಯನು ಉಡುವರಂ, ಇಟ್ಟಿ ಮೊದಲಾದ ಕಂಟಕ ವೃಕ್ಷಂಗಳಂ, ಹೊಸ

ಮಡಕೆಗಳಂ ಅಡಗತಿಂಬವರಂ, ಆಕಾಶಗಮನಂಗೆಯ್ವರಂ ಪೇಲೂದಂ ಇಂತಪ್ಪ ದುಃಸ್ವಪ್ನಗಳಂ ಕಂಡೊಡಂ ಸಾವರು. ೩೭೨

ನರಕ ನಿವೃತ್ತಿಗುಪಾಯ :

ಪ್ರತ್ಯಕ್ಷಮಾಗಿ ಕಂಡಾದರೂ, ಮನುಷ್ಯರುಗಳು ಪಾಪಕರ್ಮವನ್ನು ಉಳಿದು ಶೋಕ ಮೋಹಾದಿಗಳಂ ಬಿಟ್ಟು, ದೃಢಚಿತ್ತರಪ್ಪುದು, ಏಕೆಂದೊಡೆ : ದೇಹಾವಸಾನ ಸಮಯದೊಳು ಆವಾತಂಗೆ ಆವಾವ ಭಾವನೆ ದೊರೆಕೊಂಬುದು, ಆಯಾಯ ಭಾವನಾರೂಪ ಗತಿಗಳಪ್ಪವು ಎಂದರಿದು, ಬಳಿಕ ವಾರಣಾಸಿ ಶ್ರೀಶೈಲ ಪೊನ್ನಾಂಬಲಾದಿ ಶಿವಕ್ಷೇತ್ರಂಗಳನಾಶ್ರೈಸಿ, ಅಲ್ಲಮತ್ತೆ ತಮ್ಮ ತಮ್ಮ ಆಶ್ರಮಂಗಳಲ್ಲಾದಡು, ಶಿರವೇ ಶ್ರೀಪರ್ವತ, ಲಲಾಟನೇ ಕೇತಾರ, ಭ್ರೂಮಧ್ಯವೇ ವಾರಣಾಸಿ, ಕುಚಸ್ಥಾನವೇ ಕುರುಕ್ಷೇತ್ರ, ಹೃದಯವೇ ಪ್ರಯಾಗಮೆಂಬ ಭಾವನಾಯುಕ್ತರಾಗಿ ಅನ್ನ ವಸ್ತ್ರ ಸುವರ್ಣಾದಿ ದಾನ ಧರ್ಮಯುತರಾಗಿ ಭಸ್ಮರುದ್ರಾಕ್ಷಧಾರಣನಿಷ್ಠರಾಗಿ, ಪಾದೋದಕ ಪ್ರಸಾದ ಸ್ವೀಕಾರಿಗಳಾಗಿ ನರಕಬಾಧೆಗಳಂ ಜಯಿಸಿ, ಪರ ಭೋಗಮೋಕ್ಷಂಗಳನೆ ಸರ್ವಥಾ ಪಡೆಯ ಬೇಕೆಂಬುದೇ ಹಿತೋಪದೇಶಮಕ್ಕುಂ ೩೭೩

ಕೂಷ್ಮಾಂಡ ರುದ್ರಲೋಕ :

ಮತ್ತಂ ಆ ನರಕಲೋಕದತ್ತಣಿಂ ಮೂವತ್ತುಸಾವಿರದ ಯೋಜನಾಂತರದ ಮೇಲೆ ನವಲಕ್ಷ ಯೋಜನ ಪ್ರಮಾಣಿನ ಭೂಮಿಯಿರ್ಪುದು. ಅದಾದೊಡೆ: ನಾಲ್ಕುವರೆಲಕ್ಷ ಯೋಜನವೆ ಸುವರ್ಣಮಯಘಟ, ಉಳಿದ ನಾಲ್ಕುವರೆಲಕ್ಷ ಯೋಜನಮುಳ್ಳ ಅಧೋಘಟವೆ ಸಮಭಾಗದಿಂ ಮೃಣ್ಮಯ ಲೋಹಮಯವಾಗಿಹುದು. ಅಲ್ಲಿ ಪೂರ್ವೋಕ್ತ ನರಕಂಗಳಿಗೆ ಅಧಿಪತಿಯಾದ ಯಮರಾಜನ ಮೇಲಿದ್ದು ಅದಕಧಿಕಾರಯಾದ ಕೂಷ್ಮಾಂಡನೆಂಬ ರುದ್ರನು ಅತ್ಯಂತ ಭೀಕರಾಕಾರದಿಂ, ಕಾಲಾನಲ ಪ್ರತಿಪ್ರತಿಪ್ರಕಾಶದಿಂ, ಚಾಪ ಬಾಣ ಫಲಕ ಖಡ್ಗವಾಂತ ಕರಚತುಷ್ಟಿಯದಿಂ ತನಗೆ ಸಮಾನ ಭೂತಗಣ ಕೋಟಿಗಳೊಡಗೂಡಿರ್ಪಂ. ೩೭೪

ಸಪ್ತ ಪಾತಾಳ ಲೋಕಂಗಳು :

ಬಳಿಕ ಇಲ್ಲಿಂದ ಮೇಲೆ ಒಂದುಮಾವಿರ ಯೋಜನದಿಂದ ಉತ್ತರೋತ್ತರಮಾಗಿ, ಪ್ರತ್ಯೇಕ ನವಸಹಸ್ರಯೋಜನ ಉನ್ನತಮಾದ ಇಪ್ಪತ್ತುಸಾವಿರಯೋಜನದ ಅಗಲಂಗಳೆನಿಸಿ ಪಾತಾಳ, ಮಹಾತಳ, ರಸಾತಳ, ತಳಾತಳ, ಸುತಳ, ವಿತಳ, ಅತಳಂಗಳೆಂಬ ಸಪ್ತ ಪಾತಾಳಂಗಳ್ ಕ್ರಮದಿಂ: ಸುವರ್ಣ ರಜತ ತಾಮ್ರ ಕಾಂಸ್ಯ ಲೋಹ ವಾಲುಕ ಮೃಣ್ಮಯನಾದ ಭೂಮಿಗಳುಳ್ಳವಾಗಿ; ಪ್ರಾಕಾರ ಪುರ ಗೋಪುರಾದಿ ವಿಚಿತ್ರ ರಚನೆಗಳಿಂ; ಸಕಲ ಭೋಗ ಸಾಧನಂಗಳಿಂ ಸಂಪನ್ನಮಾಗಿ ಸ್ವರ್ಗಲೋಕ ಸಮಾನವಾಗಿರ್ಪವು, ಅವಕೆ : ಬಲ ಅತಿಬಲ ಬಲವಾನ್ ಬಲವಿಕ್ರಮ ಬಲೇಶ ಬಲಶಾಲಿ ಬಲಾಧ್ಯಕ್ಷರೆಂಬರೆ ಕ್ರಮದಿಂ ಕರ್ತೃಗಳಾಗಿರ್ಕುಂ. ೩೭೫

ಪಾತಾಳಾಧಿಪತಿಗಳು :

ಬಳಿಕ ಅವಾದೊಡೆ ಒಂದೊಂದು ಮೂರುಮೂರು ಖಂಡಮಾಗಿ ದೈತ್ಯರು ಭುಜಂಗರು ರಾಕ್ಷಸರು ಇವರುಗಳಿಗೆ ಆಶ್ರಯಂಗಳಾಗಿರ್ಪವು. ಅವರಲ್ಲಿಃ ಶಂಖಕರ್ಣ ಪ್ರಹ್ಲಾದ ಶಿಶುಪಾಲ ಕಕುಂದಕ ಹಿರಣ್ಯಾಕ್ಷ ಬೃಹದ್ಗರ್ಭ ಬಲಿಗಳೆಂಬವರೆ ಆ ಸಪ್ತ ಲೋಕಕೆ ಕ್ರಮದಿಂದ ಅಲ್ಲಲ್ಲಿಯ ದೈತ್ಯಪತಿಗಳಕ್ಕುಂ. ಬಳಿಕ, ಕುಟಿಲಕ ವಾಸುಕಿ ಕಂಬಲ ಕರ್ಕೋಟಕ ಕಾಳಾಂಗ ದುರ್ದಶ ತಕ್ಷಕರೆಂಬವರೆ ಭುಜಂಗಪತಿಗಳಕ್ಕುಂ. ಬಳಿಕ ವಿಕಟ, ಲೋಹಿತಾಕ್ಷ, ಯಮ, ವಿಕಟಾನನ, ಭೀಮ, ನಿರ್ಹಾದ, ಪಿಂಗಲರೆಂಬವರೆ ಪರಿವಿಡಿದು ರಾಕ್ಷಸಪತಿಗಳಕ್ಕುಂ. ಬಳಿಕ ಈ ಸಪ್ತ ಪಾತಾಳಂಗಳಲ್ಲಿಯ, ದೈತ್ಯ ಭುಜಂಗ ರಾಕ್ಷಸರೆಲ್ಲಂ ತಮ್ಮ ತಮ್ಮ ಲೋಕಂಗಳಲ್ಲಿ ಕ್ರಮದಿಂದಿರ್ಪ ಶಿವ, ಶಂಭು, ಶಂಕರ, ನೀಲಕಂಠ, ಉಮಾಪತಿ, ಸರ್ವೇಶ್ವರ, ಶ್ರೀನೀಲಕಂಠನಾಮಧೇಯದ ಲಿಂಗಂಗಳಂ ಮಹಾಭಕ್ತಿಯಿಂ ಭಜಿಸುತ್ತಮಿರ್ಕುಂ. ೩೭೬

ಪಾಟಕೇಶ್ವರ ರುದ್ರಭುವನ :

ಬಳಿಕ ಅಲ್ಲಿಂದ ಮೇಲೆ ಭೂ ಪೃಷ್ಠಾಂತಮಾಗಿ ಎಂಭತ್ತೆಂಟುಲಕ್ಷಾದಿಕಮಾದ ಎರಡು ಕೋಟಿ ಯೋಜನದ ಪ್ರಮಾಣಿನಲ್ಲಿ ಸಪ್ತಪಾತಾಳಂಗಳಿಗೆ ಅಧಿಪತಿಯಾದ ಪಾಟಕೇಶ್ವರನೆಂಬ ರುದ್ರನು ಆದೊಡೆ, ಮಹಸ್ರ ಯೋಜನ ವಿಸ್ತಾರಮಾದ ಮಣಿಖಚಿತ ದಿವ್ಯಸಿಂಹಾಸನದ ಮೇಲೆ ಕೋಟಿಕಂದರ್ಪ ಲಾವಣ್ಯದಿಂದೆಸೆದು ಸಮಸ್ತ ಸುರ ಸಿದ್ಧರುಗಳಿಂದ ಓಲೈಸಿಕೊಳುತ್ತಿರ್ಪಂ. ೩೭೭

ಪಾತಾಳ ಪ್ರಕಾಶ :

ಮತ್ತಂ ಆ ಕಾಲಾಗ್ನಿ ಮೊದಲು ಪಾಟಕೇಶ್ವರಾಂತಮಾದ ಸಪ್ತ ಪಾತಾಳಂಗಳಲ್ಲಿ ಆಯಾರ್ಯಾ ಭುವನ ನಿವಾಸಿಗಳ ಕಾಯಕಾಂತಿ, ರತ್ನಾಭರಣಂಗಳ ಪ್ರಕಾಶಂಗಳೇ ಸಕಲ ವಿಷಯಂಗಳಂ ಬೆಳಗುವವು, ಅಲ್ಲದೆ ಚಂದ್ರ ಅರ್ಕರನ್ ಅಪೇಕ್ಷಿಸಲಿಲ್ಲ ಎಂದು ಅರಿಯಲ್ವೇಳ್ಕುಂ. ೩೭೮

ಅಧಃ ಕಟಾಹ ಯೋಜನ ಪ್ರಮಾಣ :

ಬಳಿಕ ಇಂತು ನೋಡಲು ಆ ಬ್ರಹ್ಮಾಂಡದ ಅಡಿಯಣ ಖರ್ಪರದ ಒಳವಳಯದ ಕಾಲಾಗ್ನಿರುದ್ರ ಭುವನವು ಒಂದುಕೋಟಿ ಯೋಜನವು. ಆತನ ಜ್ವಾಲೆ ದಶಕೋಟಿ ಯೋಜನವು, ಅದರಧೂಮ ಐದುಕೋಟಿ ಯೋಜನವು. ಅದರ ಮೇಲೆ ನರಕಲೋಕವು, ಎರಡುಲಕ್ಷಾದಿಕಮಾದ ಮೂವತ್ತೆರಡು ಕೋಟಿ ಯೋಜನವು, ಅದರ ಮೇಲೆ ಕೂಷ್ಮಾಂಡ ರುದ್ರಭುವನ ಒಂಭತ್ತುಲಕ್ಷಮುಂ ಮೂವತ್ತು ಸಾವಿರ ಯೋಜನಮುಂ, ಅದರ ಮೇಲೆ ಸಪ್ತಪಾತಾಳಂಗಳ ಅಂತರಾಳ ಸಹಿತಮಾಗಿ ಎಪ್ಪತ್ತು ಸಾವಿರ ಯೋಜನವು, ಅದರ ಮೇಲೆ ಪಾಟಕೇಶ್ವರ ರುದ್ರಭುವನಂ ಭೂ ಪೃಷ್ಠಾಂತಮಾಗಿ ಎಂಭತ್ತೆಂಟುಲಕ್ಷಾದಿಕಮಾದ ಎರಡುಕೋಟಿಯೋಜನ. ಅದರಮೇಲೆ ಮುಂದೆ ಪೇಳ್ವ ಭೂಮಿ ಒಂದುಕೋಟಿ

ಯೋಜನವು, ಅಂತು ಬ್ರಯ್ಮಾಂಡದ ಅಧಃ ಕಟಾಹದಿಂ ಭೂಮ್ಯಾಂತಮಾಗಿ ಪಂಚಾಶತ್ಕೋಟಿ ಯೋಜನೋನ್ನತವೆಂದು ನಿರ್ಧರಿಸಲ್ವೇಳ್ಕುಂ. ೩೭೯

ಇತಿ ನಾಗಲೋಕ ಸ್ಥಿತಿ ವರ್ಣನಂ

ತೃತೀಯ ಪರಿಚ್ಛೇದ

■■

ಚತುರ್ಥ ಪರಿಚ್ಛೇದ

ಕಂದ॥ ಗಣಿಸಿದೆನಜಾಂಡದೊಳಗಡಿ
ಯಣ ಖರ್ಪರದಲ್ಲಿ ಮೆರೆವ ಭುವನಂಗಳನಿಂ।
ತಣಿಯರದೊಳೀಗಳೀ ಧಾ
ರುಣಿಯ ವಿಚಿತ್ರತೆಯನೊಲಿದು ಪೇಳ್ವೆನನೂನಂ ॥

ಅದೆಂತೆಂದೊಡೆ :

ಭೂಲೋಕ :

ಪೂರ್ವೋಕ್ತ ಪಾಟಕೇಶ್ವರ ರುದ್ರಭುವನದಿಂ ಮೇಲೆ ಒಂದು ಕೋಟಿ ಯೋಜನದ ಅಳತೆಯ ದೆಟ್ಟಮುಳ್ಳ ಜಂಬೂದ್ವೀಪಂ ಮೊದಲಾದ ಸಪ್ತದ್ವೀಪ, ಸಪ್ತ ಸಮುದ್ರಂಗಳಿಂದ ಅನೇಕ ಗಿರಿ ನದಿ ನಂದನಾದಿಗಳಿಂ, ವಿಚಿತ್ರ ರಚನೆಯುಳ್ಳ ಭೂಲೋಕವು ಅತಿರಮ್ಯವೆನಿಸಿ ರಂಜಿಸುತ್ತಿಹುದು, ಅದಕ್ಕೆ ೩೮೦

ಚತುರ್ದಶ ಮನುಗಳು :

ಪೂರ್ವದಲ್ಲಿ ಸ್ವಯಂಭು ಸ್ವರೋಚಿಷ ರೈವತ ಚಾಕ್ಷುಷ ಉತ್ತಮ ಮಧ್ಯಮ ವೈವಸ್ವತ ಬ್ರಹ್ಮಸಾವರ್ಣಿಕ ವಿಷ್ಣುಸಾವರ್ಣಿಕ, ರುದ್ರಸಾವರ್ಣಿಕ ಸೂರ್ಯಸಾವರ್ಣಿಕ ತೈಜಸಾವವರ್ಣಿಕ ವೇದಸಾವರ್ಣಿಕ ಧರ್ಮಸಾವರ್ಣಿಕರೆಂಬ ಹದಿನಾಲ್ಕು ಮನುಗಳೊಳಗೆ, ೩೮೧

ಭರತಖಂಡ :

ಮೊದಲು ಸ್ವಯಂಭುಮನುವಿಂಗೆ ಉತ್ತಾನಪಾದಿಯೆಂದು, ಪ್ರಿಯವ್ರತವೆಂದು ಈರ್ವರು ಮಕ್ಕಳು, ಮತ್ತವರೊಳು ಉತ್ತಾನಪಾದಿಗೆ ಧ್ರುವನೆಂಬುವನೊಬ್ಬನೇ ಮಗನಾದನು. ಈತನು ನಕ್ಷತ್ರಮಂಡಲಕ್ಕೆ ಅಧಿಕಾರತ್ವದಿಂದ ಐಶ್ವರ್ಯ ಸಂಪನ್ನನಾಗಿ ಮುಂದೆ ಪೇಳ್ವ ಭುನರ್ಲೋಕಾಗ್ರಸ್ಥಿತನಾಗಿರ್ಪಂ, ಬಳಿಕ ಪ್ರಿಯವ್ರತನೆಂಬಾತಂಗೆ ಅಗ್ನಿರಿದ್ಧ ಮೇಧಾತಿಥಿ ವಪುಷ್ಮಂತ ಜೋತಿಷ್ಮಂತ ದ್ಯತಿಮಂತ ಬಸವ ಎಂಭವ್ವ ಏಳು ಮಕ್ಕಳು. ಅವರಿಗೆ ಆ ಪ್ರಿಯವ್ರತನು ಆ ಜಂಬೂದ್ವೀಪ ಮೊದಲಾದ ಏಳು ದ್ವೀಪಂಗಳಂ

ಹಂಚಿಕೊಟ್ಟನು. ಬಳಿಕ ಅವರೊಳು ಆ ಹಿರಿಯಮಗನಾದ ಅಗ್ನರಿಧ್ರನಿಗೆ ನಾಭಿ ಕಿಂಪುರುಷ ಹರಿ ಇಳಾವ್ರತ ರಮ್ಯಕ ಹಿರಣ್ಯಕ ಉತ್ತರಕುರು ಭದ್ರಾಶ್ವ ಕೇತುಮಾಲರೆಂಬ ಒಂಭತ್ತು ಮಕ್ಕಳುಗಳು, ಅವರಿಗೆ ಆ ಅಗ್ನಿರಿಧ್ರನು ತನ್ನದಾದ ಜಂಬೂದ್ವೀಪಮಂ ನವಖಂಡಂ ಮಾಡಿಕೊಡಲು, ಅವರವರ ಹೆಸರಿನಲ್ಲಿ ಆಯಾಯಾ ಖಂಡಂಗಳಿರ್ಪವು. ಅವರೊಳು ಆ ನಾಭಿಯ ಮಗನೆ ವೃಷಭ, **ಆ ವೃಷಭನ ಮಗನೆ ಭರತ, ಆ ಭರತನ ಹೆಸರಿನಲ್ಲಿ ಈ ಭರಲಖಂಡವಾಯಿತ್ತು**. ಆ ಸಕಲ ಪ್ರಪಂಚವು ಎಂತೆನೆ. ೩೮೨

ಜಂಬೂದ್ವೀಪ

ಪೂರ್ವೋಕ್ತ ಭೂಮಿಯ ನಟ್ಟನಡುವೆ ವೃತ್ತಾಕಾರಮೆನಿಸಿಕೊಂಡು ಲಕ್ಷಯೋಜನ ವಿಶಾಲಮಾದ ವಿಚಿತ್ರ ವರ್ಣದ ಭೂಮಿಯನುಳ್ಳ ಜಂಬೂದ್ವೀಪವು ಆ ಭೂಕಾಂತೆಯ ನಾಭಿ ಮಂಡಲದಂತೆ ಪರಿಶೋಭೆವಡೆದು ವಿಚಿತ್ರ ವಿಷಯಂಗಳನು ಉಳ್ಳದು ಎನಿಸಿಹುದು. ಅದರ ನಟ್ಟನಡುವೆ. ೩೮೩

ಮಹಾಮೇರು ವರ್ಣನೆ :

ಸುವರ್ಣಮಯ ಮೇರು ಪರ್ವತವು ಆ ಭೂಕಾಂತೆಯ ಹೃದಯಕಮಲ ಕರ್ಣಿಕಾಕೃತಿಯಂ ಪಡೆದು ಎಸೆವ ವೃತ್ತಮೆನಿಸಿ ಪದಿನಾಲ್ಕುಸಾವಿರ ಯೋಜನ ಭೂಮಿಯೊಳ್ ನಟ್ಟು ಎಂಭತ್ತನಾಲ್ಕುಸಾವಿರ ಯೋಜನೋನ್ನತಮಪ್ಪುದರಿಂದ ಒಂದು ಲಕ್ಷಯೋಜನ ಪ್ರಮಾಣ ಮುಳ್ಳುದಾಗಿ, ಮೂಲದೊಳ್ ಪದಿನಾರುಸಾವಿರಯೋಜನದ ಪೀನತ್ತಮನ್, ಅಗ್ರದಲ್ಲಿ ಮೂವತ್ತೆರಡುಸಾವಿರ ಯೋಜನ ವಿಸ್ತಾರಮಂ ತಾಳ್ದು, ತೊಂಭತ್ತಾರು ಸಾವಿರ ಯೋಜನದ ಬಳಸು ಉಳ್ಳುದಾಗಿರ್ಕುಂ. ೩೮೪

ಬ್ರಹ್ಮಾದಿ ದೇವಸ್ಥಲ :

ಬಳಿಕ ಆ ಮೇರುವಿನ ಅಗ್ರದಲ್ಲಿ ಬ್ರಹ್ಮಂಗೆ ಮಾನವತಿಯೆಂಬ ಪೆಸರಿನ ಚತುರ್ದಶ ಸಹಸ್ರಯೋಜನದ ಅಗಲದ ರತ್ನಕೋಂಟೆ, ಮೌಕ್ತಿಕದ ತೆನೆಗಳುಳ್ಳದಾಗಿ, ಸಕಲ ದೇವತೆಗಳಿಂದ ಅಲಂಕೃತಮಾದ ಸರ್ವಸುಖಭೋಗ ಪರಿಕರಗಳಿಂದ ಆಢ್ಯಮಪ್ಪ ಪಟ್ಟಣಮೊಂದು ರಮ್ಯಮೆನಿಸಿ ರಂಜಿಸುತ್ತಿಹುದು. ಅದರ ಪಶ್ಚಿಮ ದಿಕ್ಕಿನಲ್ಲಿ ನಾರಾಯಣಂಗೆ ನಿವಾಸಮಾದ ಬೆಳ್ಳಿಯ ಕೋಂಟೆ ರಂಜಿಸುತ್ತಿರ್ಕುಂ. ಮತ್ತಂ ಆ ಮಾನವತಿಯ ದಕ್ಷಿಣದಿಕ್ಕಿನೊಳ್ ಪಿತಾಮಹಂಗೆ ಸುಖಾಶ್ರಯಮಾದ ಸುವರ್ಣಮಯ ಶಿಖರವಿರ್ಕುಂ. ಮತ್ತಂ ಆ ಪುರದ ಈಶಾನ್ಯ ದಿಕ್ಕಿನೊಳ್ ಸರ್ವೇಶ್ವರಂಗೆ ನೆಲೆವನೆಯಾದ ರತ್ನಮಯ ಶೃಂಗವೆ ಜೋತಿಷ್ಪವತಿಯೆಂಬ ನಾಮಧೇಯದಿಂದ ಇರ್ಪುದು. ಅದರ ನಿತಂಬಗಳಲ್ಲಿ ಸ್ಕಂದ ನಂದಿ ಮಹಾಕಾಳ ಗಣೇಶಾದಿಗಳ ರಮ್ಯಾಶ್ರಯಂಗಳು ಅನೇಕಂಗಳುಂಟು. ಅದೇ ಬ್ರಹ್ಮ ಇಂದ್ರ ಉಪೇಂದ್ರಾದಿ ಮುಖ್ಯ ದೇವತೆಯರಿಂ ವಂದ್ಯಮಾನಮಾಗಿರ್ಕುಂ. ಮತ್ತಂ ಆ ಪುರದಗಳುಗಳೆಂಬಂತೆ ಸಿತೆ, ಅಳಕನಂದೆ, ಚಕ್ಷ ಭದ್ರೆಗಳೆಂಬ ನಾಲ್ಕು ದೇವನದಿಗಳಿರ್ಕುಂ. ೩೮೫

ಮೇರು ಕಂಕಣತ್ರಯ :

ಬಳಿಕ ಆ ಮೇರುವಿನ ಅಂತರದಲ್ಲಿ ಸಕಲ ರತ್ನೋಜ್ವಲಿತಮಾದ ನೇಮಿಗಳೆನಿಸಿ ವಲಯಾಕಾರಮಪ್ಪ ಕಂಕಣತ್ರಯವು ಒಂದೊಂದು ಮೂರುಮೂರು ಸಾವಿರ ಯೋಜನದ ಅಳತೆಯ ದಟ್ಟಮುಳ್ಳುದಾಗಿ ಇಪ್ಪತ್ತೈದುಸಾವಿರ ಯೋಜನಕ್ಕೆ ಒಂದೊಂದು ಅಂತರಮಾಗಿರ್ಕುಂ. ೩೮೬

ಲೋಕಪಾಲಾಷ್ಟಕ ಪುರವರ್ಣನೆ:

ಮತ್ತಂ ಅವರೊಳ್ ಊರ್ಧ್ವಕಂಕಣದಿ ಪೂರ್ವಾದಿ ಅಷ್ಟದಿಕ್ಕಿನ ಮಿಸುನಿಯ ಕೋಡುಗಳು ಎಂಟರ ಅಗ್ರದಲ್ಲಿ ಇಂದ್ರಂಗೆ ಸುವರ್ಣದ ಕೋಂಟೆ ನೀಲದತೆನೆಗಳಿಂದ ಒಪ್ಪುವ ಅಮರಾವತಿ,

ಅಗ್ನಿಗೆ ಕಮಲ ಲೋಹಿತವರ್ಣದ ಕೋಂಟೆ, ವಜ್ರದ ತೆನೆಗಳಿಂದೆಸೆವತೇಜೋವತಿ.
ಯಮಂಗೆ ಅಂಜನವರ್ಣದ ಕೋಂಟೆ, ಪುಷ್ಯರಾಗದ ತೆನೆಗಳಿಂಚೆರೆವ ಸಂಯಮಿನಿ,
ನೈರುತ್ಯಂಗೆ ಕೃಷ್ಣಲೋಹಿತ ವರ್ಣದಕೋಂಟೆ, ಮೌಕ್ತಿಕದತೆನೆಗಳಿಂ ರಂಜಿಸುವ ರಕ್ಷಾವತಿ,
ವರುಣಂಗೆ ಸುಧಾಕರ ವರ್ಣದ ಕೋಂಟೆ, ಮಿಸುನಿಯತೆನೆಗಳಿಂ ಕಂಗೊಳಿಪ ಶುದ್ಧವತಿ,
ವಾಯವ್ಯಂಗೆ ಪಚ್ಚೆಯ ಕೋಂಟೆ, ವೈಡೂರ್ಯದತೆನೆಗಳಿಂ ವಿರಾಜಿಪ ಗಂಧವತಿ,
ಕುಬೇರಂಗೆ ನಾನಾವರ್ಣದ ಕೋಂಟೆ, ಮುತ್ತಿನ ತೆನೆಗಳಿಂ ತೋರ್ಪ ಮಹೋದಯೆ,
ಈಶಾನ್ಯಂಗೆ ಶುಭ್ರವರ್ಣದ ಕೋಂಟೆ, ರತ್ನದ ತೆನೆಗಳಿಂದ ಅಲಂಕೃತಮಾದ ಯಶೋಮತಿಯೆಂಬ ಪೆಸರಿನ ಪುರಂಗಳುಂಬು, ಅವು ಎಂಟು ಪುರಂಗಳ್ ಪ್ರತ್ಯೇಕಮಾಗಿ ಆರು ಸಾವಿರ ಯೋಜನದ ಆಗಲಂಗಳಕ್ಕುಂ. ೩೮೭

ಉಪ ದೇವನಗರಂಗಳು :

ಮತ್ತಂ ಮೇಘವಿಘ್ನಾವತಿ ಸುಂದರಕಾಮಾವತಿ ಸೌವರ್ಣಸುಮತಿ ಕುಸುಮಾವತಿ ಎಂಬ ಐದು ಇಂದ್ರನ ಅಮರಾವತಿಯ ವಳಿತದ ಪಟ್ಟಣಂಗಳು, ಅವರಲ್ಲಿ ಕ್ರಮದಿಂ ಸುರ ಅಪ್ಸರ ಸಿದ್ಧ ದ್ವಾದಶಾದಿತ್ಯರು ಸಾಧ್ಯರುಗಳಿರ್ಕುಂ.

ಬಳಿಕ ತದ್ವಹ್ನಿ ರೈವತಿ ಎಂಬ ಎರಡು ಅಗ್ನಿಯ ತೇಜೋವತಿಯ ವಳಿತದ ಪಟ್ಟಣಂಗಳು ಅವರಲ್ಲಿ ಕ್ರಮದಿ ಮಯಣ ವಿಶ್ವಕರ್ಮಾದಿಗಳಾದ ದೇವಶಿಲ್ಪಗಳಿರ್ಕುಂ.

ಬಳಿಕ ಮಾತೃನಂದೆ ರೋಹಿತೆ, ಗುಣಾವತಿಯೆಂಬ ಮೂರು ಯಮನ ಸಂಮಯನಿಯ ವಳಿತದ ಪಟ್ಟಣಂಗಳು, ಅವರಲ್ಲಿ ಕ್ರಮದಿಂ ಪಿತೃಗಳು ರುದ್ರರುಗಳು ಏಕಾದಶರುದ್ರರುಗಳಿರ್ಕುಂ.

ಬಳಿಕ ಪಿಂಗಳೆ ಕೃಷ್ಣವತಿ ಸುಖಾವತಿ ಗಾಂಧಾರಿಯೆಂಬ ನಾಲ್ಕು ನೈರುತ್ಯನ ರಕ್ಷೋವತಿಯು ಪಟ್ಟಣಂಗಳು, ಅವರಲ್ಲಿ ಕ್ರಮದಿಂ ಕರ್ಮದೇವತೆಗಳು ಪಿಶಾಚಾದಿಗಳಿರ್ಕುಂ.

ಬಳಿಕ ಸಿದ್ಧಸೇನೆ ಹೇಮಸಂಜ್ಞೆ ಸಿದ್ಧಾವತಿ ಎಂಬ ಮೂರು ವರುಣನ ಶುದ್ಧಾವತಿಯ ವಳಿತದ ಪಟ್ಟಣಂಗಳು, ಅವರಲ್ಲಿ ಕ್ರಮದಿಂ ಭೂತರು, ವಸುಗಳು, ವಿದ್ಯಾಧರರುಗಳಿರ್ಕುಂ.

ಬಳಿಕ ಸಿದ್ಧೆಯೆಂಬುದೊಂದೇ ವಾಯುವಿನ ಗಂಧವತಿಯ ವಳಿತದ ಪಟ್ಟಣ. ಅದರಲ್ಲಿ ಕಿನ್ನರರಿರ್ಕುಂ.

ಬಳಿಕ ಗಂಧರ್ವೆ ಚಿತ್ರೆ ಶುಭೆ ಪ್ರಮದೆ ಚತ್ರವತಿ ಎಂಬ ಐದು ಕುಬೇರನ ಮಹೋದಯೆಯ ವಳಿತದ ಪಟ್ಟಣಂಗಳು ಅವರಲ್ಲಿ ಕ್ರಮದಿಂ ಚಿತ್ರರಥನು, ಶಾರದೆ, ತುಂಬುರರು ಕರ್ಮದೇವತೆಗಳುಂ ಗುಹ್ಯಕರುಂ ಇರ್ಕುಂ.

ಬಳಿಕ ವೈಕುಂಠ, ಪದ್ಮಾವತಿ, ಕಾಮಶೋಭೆಯೆಂಬ ಮೂರು ಈಶಾನ್ಯದ ಯಶೋವತಿಯ ವಳಿತದ ಪಟ್ಟಣಂಗಳು, ಅವರಲ್ಲಿ ಕ್ರಮದಿಂ ವಿಷ್ಣು ಬ್ರಹ್ಮ ಧನ್ವಂತರಿಗಳಿರ್ಕುಂ. ೩೮೮

ದಿಕ್ಪಾಲಕರ ಸ್ವರೂಪ :

ಅನಂತರದೊಳು ಆ ಇಂದ್ರಾದಿ ಲೋಕಪಾಲಾಷ್ಟಕರಾದೊಡೆ ಪೀತ ರಕ್ತ ಕೃಷ್ಣ ಧೂಮ್ರ ಶುಕ್ಲ ಧೂಮ ಶುಭ್ರವರ್ಣಂಗಳಿಂ; ಕರಿ ಟಗರು ಕೋಣ ನರ ಮಕರ ಯರಳೆ ಹಸು ವೃಷಭವೆಂಬ ವಾಹನಂಗಳಿಂ; ವಜ್ರ ಶಕ್ತಿ ದಂಡ ಖಡ್ಗ ಪಾಶ ಅಂಕುಶ ಗದೆ ಶೂಲವೆಂಬ ಆಯುಧಗಳಿಂ ಪರಿವಿಡಿದು ಒಪ್ಪುತ್ತಿರ್ಕುಂ. ೩೮೯

ನವನಿಧಿಗಳು :

ಬಳಿಕ ದಿಕ್ಪಾಲಕರೊಳು ಆ ಕುಬೇರನೆ ಪದ್ಮ ಮಹಾಪದ್ಮ ಶಂಖ ಮಕರ ಕಚ್ಛಪ ಮುಕುಂದ ಕುಂದ ನೀಲ ಚರ್ಚಂಗಳೆಂಬ ನವನಿಧಿಗೆ ಒಡೆಯನಾಗಿ ಈಶ್ವರಂಗೆ ಸಖನಾಗಿರ್ಪಂ. ೩೯೦

ನಂದಿಕೇಶ್ವರನ ಸ್ಥಾನ :

ಮತ್ತಂ ಆ ಈಶ್ವಾನ್ಯ ದಿಕ್ಕಿನೊಳು ಈಶ್ವರಿಕ್ಷೇತ್ರವೆಂಬುದು ಒಂದು ಸ್ಥಾನಮುಂಟು, ಅಲ್ಲಿ ನಂದಿಕೇಶ್ವಜನಾದೊಡೆ ಕನಕವರ್ಣಮಯ ಶರೀರದಿಂ; ಏಕಮುಖ ತ್ರಿನೇತ್ರ ಚತುರ್ಭುಜಂಗಳಿಂ; ಶ್ವೇತವಸ್ತ್ರ ದಿವ್ಯಾಭರಣ ಗಂಧಪುಷ್ಪಾದಿಗಳಿಂದ ಅಲಂಕೃತನಾಗಿ; ಶೂಲಾಯುಧವಿಡಿದು ಸನತ್ಕುಮಾರಾದಿ ಸಕಲ ಶಿಷ್ಯರೊಡಗೂಡಿ ಶಿವಾರಾಧನಾ ತತ್ಪರನಾಗಿರ್ಪಂ. ೩೯೧

ಸಿದ್ಧಾದಿ ಸ್ಥಾನಗಳು :

ಮತ್ತಂ ಆ ಮೇರುವಿನ ಮಧ್ಯಕಂಕಣದಲ್ಲಿ ಸಿದ್ಧ ಮನು ಮುನಿಗಳು ಮಹಾಸುಖದಿಂದ ಇಹರು. ಬಳಿಕ ಅದಃ ಕಂಕಣದಲ್ಲಿ ದನುಜ ದಿವಿಜ ಗಂಧರ್ವಾದಿಗಳುಹರು. ಬಳಿಕ ಆ ಮೇರುವಿನ ಮೂಲದ ಗುಹಾಂತರಂಗಳಲ್ಲಿ ಮರುದ್ಗಣಂಗಳಿರ್ಪರೆಂಬುದೇ ಸಿದ್ಧಮಕ್ಕುಂ. ೩೮೨

ಕೀಲಕ ಪರ್ವತಗಳು :

ಅನಂತರದೊಳು ಆ ಮೇರುವಿನ ದೃಢತ್ವಕ್ಕೋಸುಗ ಅಜನಿಂ ಕಲ್ಪಿತಮಪ್ಪ ಕೀಲಕ ಪರ್ವತಂಗಳು ಒಂದೊಂದು ಐವತ್ತುಸಾವಿರ ಯೋಜನೋನ್ನತವೆನಿಸಿ ಇರ್ಪವು. ಅವರಲ್ಲಿ ಶ್ವೇತವರ್ಣದ ಮಂದರಪರ್ವತವೇ ಮೇರುವಿಗೆ ಮೂಡಲಿಹುದು. ನೀಲವರ್ಣಮಾದ ವಿಪುಲನಗವೇ ಪಡುವಲಿಹುದು. ಪೀತವರ್ಣಮಾದ ಗಂಧಮಾದನ ಶೈಲವೆ ತೆಂಕಲಿಹುದು. ಮೇಲೆಯು ಸದಾಶಿವನಾಮಧೇಯದ ಲಿಂಗಂಗಳಂ ದೇವತೆಗಳು ಆರಾಧಿಸುತ್ತಿರ್ಕುಂ. ಮತ್ತಂ ಆ ಮಂದರಾದಿ ಕೀಲಕ ಪರ್ವತಂಗಳ ಅಗ್ರದಲ್ಲಿ ಕ್ರಮದಿಂ ಕದಂಬ ಜಂಬು ಅಶ್ವತ್ಥ ವಟ ಸಂಜ್ಞಿತಂಗಳಾದ ವಿಸ್ತಾರಂಗಳಿಂದ ಇರ್ಕುಂ. ೩೯೪

ಜಂಬೂವೃಕ್ಷ :

ಮತ್ತಂ ಅವರೊಳು ಆ ದಕ್ಷಿಣ ದಿಕ್ಕಿನ ಗಂಧಮಾದನಮೆಂಬ ಕೀಲಕ ಪರ್ವತದ ಮೇಲಿಪ್ಪ ಜಂಬೂ ವೃಕ್ಷದಲ್ಲಿ ಮಹಾಗಜಪ್ರಮಾಣಿವ ಫಲಂಗಳು ಅಸಂಖ್ಯಾತಳಗಳುಂಟು. ಅಲ್ಲಿ ಮಹಾಗಜ ಪ್ರಮಾಣಮೆಂತೆಂದೊಡೆ "ನರರ ನಾನೂರು ಮೊಳದ ಉದ್ದವಹುದು" – ಆ ಪ್ರಕಾರಮಾದ ಫಲಂಗಳು ಆ ಗಿರಿಯ ಮೇಲುದಿದಿರ್ದು ಕಳಿತು ಉಕ್ಕಿದರಸವೇ ತೆರೆಮಸಗಿ ಜಂಬೂನದಿಯೆನಿಸಿ ವಿಶಾಲಮಾಗಿ ಮೇರುವಿನ ಮೂಲಮಂ ಬಳಸಿ ಪರಿದು, ಆ ಮೇರುವನು ಆವರಿಸಿರ್ದ ಇಳಾವೃತ ವರ್ಷ ಭೂಮಿಯಂ ಪದಿನಾರುಬಣ್ಣದ ಕನಕಮಯಮಂ ಮಾಡಿ, ತನ್ನನಾಶ್ರಯಿಸಿದ ಸಕಲ ಪ್ರಾಣಿಗಳ ಶರೀರಂಗಳಂ ಸುವರ್ಣಕಾಂತಿಮಯಂ ಮಾಡುತ್ತಿಹುದು. ಆ ನದಿಯಿಂದಾದ ಚಿನ್ನವೇ ದೇವತೆಗಳ ಆಭರಣಕ್ಕೆ ಯೋಗ್ಯಮಾಗಿರ್ಕುಂ. ೩೯೫

ಮಂದರಗಿರಿಯ ಮೂಲದಲ್ಲಿನ ದ್ಯಾದಿ ಕ್ಷೇತ್ರ :

ಮತ್ತಂ ಆ ಮಂದರಗಿರಿಯ ಮೂಲದಲ್ಲಿ ನಂದೆಯೆಂಬ ನದಿಯು ಕುಬೇರಾದಿಗಳ ಕ್ರಿಡಾರ್ಥಮಪ್ಪ ಚೈತ್ರರಥಮೆಂಬ ವನಮುಂ ಹೇಮಾಬ್ಜಮಂಡಿತಮಾದ ಅರುಣೋದಕಮೆಂಬ ಕಾಸಾರಮುಂ, ಸುರಾರ್ಚಿತಮಾದ ತತ್ಪುರುಷನಾಮ ಲಿಂಗಕ್ಷೇತ್ರ ಮುಂ ಕಣ್ಗೊಳಿಸುತಿರ್ಕುಂ. ೩೯೬

ಗಂಧಮಾದನ ಪರ್ವತದಡಿಯಲ್ಲಿ ಭದ್ರಾನದಿಕ್ಷೇತ್ರ :

ಮತ್ತಂ ಆ ಗಂಧಮಾದನ ಪರ್ವತದ ಅಡಿಯಲ್ಲಿ ಭದ್ರೆಯೆಂಬ ನದಿಯು ಗಂಧರ್ವಾದಿಗಳಿಂದ ಆವೃತಮಾದ ನಂದನಮೆಂಬ ಈ ವನಮುಂ ಮನೋಹರಮಾದ ಮಾನಸವೆಂಬ ಸರಸಿಯುಂ, ಅಮರಾರ್ಚಿತಮಾದ ಅಘೋರನಾಮ ಲಿಂಗಕ್ಷೇತ್ರಮುಂ ಮೆರೆದಿರ್ಕುಂ. ೩೯೭

ಸುರಭಿನದಿ ಕ್ಷೇತ್ರ :

ಮತ್ತಂ ಆ ವಿಫುಲಾದ್ರಿಯ ಅಧೋಭಾಗದಲ್ಲಿ ಸುರಭಿಯೆಂಬ ನದಿಯುಂ

ಸುರಸಂತತಿಗೆ ಆಸ್ಪದಮಾದ ವೈಭ್ರಾಜಮೆಂಬ ವನಮುಂ ರವಿಕಿರಣ ಕಾಂತಿಮಯವಾದ ಕಂಜರಂಜಿತಮಪ್ಪ ಶೀತೋದಕಮೆಂಬ ಸರೋವರಮುಂ ದೇವಾರ್ಚಿತಮಾದ ಸದ್ಯೋಜಾತನಾಮ ಲಿಂಗಕ್ಷೇತ್ರಮುಂ ಪರಿಶೋಭಿಸುತಿರ್ಕುಂ. ೩೯೮

ಸುಮನೋನದಿ ಮತ್ತು ಕ್ಷೇತ್ರ :

ಮತ್ತಂ ಆ ಸುಪಾರ್ಶ್ವ ಶಿಖರಿಯ ಮೊದಲಲ್ಲಿ ಸುಮನೆಯೆಂಬ ನದಿಯುಂ ಪಿತೃಗಳಿಂ ಸೇವ್ಯಮಾದ ಧೃತಿಮತ್ ಎಂಬ ವನಮುಂ, ಸುಗಂಧ ಕಮಲಗಳಿಂ ಅಲಂಕೃತಮಪ್ಪ ಭದ್ರಕಮೆಂಬ ಕೊಳಮುಂ, ವಿಬುಧಾರ್ಚಿತಮಾದ ವಾಮದೇವನಾಮ ಲಿಂಗಕ್ಷೇತ್ರಮು ವಿರಾಜಿಸುತ್ತಿರ್ಕುಂ. ೩೯೯

ದೇವ ವನಾದಿಗಳು :

ಅನಂತರದೊಳು ಆ ಚೈತ್ರರಥಾದಿ ನಾಲ್ಕು ವನಂಗಳ ಮಧ್ಯದಲ್ಲಿ ಒಂದೊಂದು ನಾನಾರತ್ನಮಯವಾದ ಮಾಡುವೆಟ್ಟಮುಂ; ಮಂದಾರ ಪಾರಿಜಾತ ಸಂತಾನ ಕಲ್ಪವೃಕ್ಷ ಹರಿಚಂದನವೆಂಬ ಐದು ಸುರತರುಗಳುಂ ; ಕಾಮಧೇನು ಚಿಂತಾಮಣಿ ಮರುಜವಣಿ ಪರುಷದಕಣಿ ಸಿದ್ಧರಸಾದಿ ವಸ್ತುಗಳುಂ; ಅಮೃತಮಯವಾದ ವಾಪಿ ಕೂಪ ತಟಾಕ ನದಿ ಪರಿವಕಾಲುವೆಗಳುಂ; ಕಮಲ ಕುಮುದ ಕಲ್ಹಾರಾದಿ ಕಂಪಕುಸುಮಂಗಳು; ಚಕೋರ ಚಕ್ರವಾಕ ಹಂಸ ರಾಜಹಂಸಾದಿ ನೀರ್ವಕ್ಕಿಗಳುಂ; ಜಾಜಿ ಮೊಲ್ಲೆ ಮಲ್ಲಿಗೆ ಮಾಧವಿ ಮಧುದೂತಿ ಮೊದಲಾದ ಕಲ್ಪಲತಾ ವಿತಾನಂಗಳು; ಇಕ್ಷು ಪುಂಡ್ರೇಕ್ಷು ಬಾಳೆ ಕರ್ಪೂರಬಾಳೆ ತೆಂಗು ಚೆಂದೆಂಗು ಪಲಸು ಬಕ್ಕವಲಸು ಮಾವು ಇಮ್ಮಾವು ನೇರಿಲು ಅರಸುನೇರಿಲು ಬದರಿ ರಾಮಬೋರೆ ಪೂಗ ಕರ್ಜೂರ ಕದಂಬ ಕೇಸರ ಮಧು ಮಲಯಜ ಮಂದಾರ ಪಾದರಿ ಪಾರಿಜಾತ ಜಾಲ ಪಾಲಾಶ ದಾಡಿಮಾದಿ ಸಕಲ ಸುಖಮಯ ಸರ್ವಕರ್ತೃಕಮಾದ ತರುನಿಕರಂಗಳುಂ. ೪೦೦

ದೋಹದ ವೃಕ್ಷಾದಿಗಳು :

ವನಿತೆಯುರೊಡೆದೊಡೆ ಮೆಲುಗುಳಿದೊಡೆ ಸೋಂಕಿದೊಡೆ ನೆಕ್ಕೊಡೆ ನೋಡಿದೊಡೆ ಆಲಿಂಗಿಸಿದೊಡೆ ನುಡೆದೊಡೆ ಉಸಿರುಸೋಂಕಿದೊಡೆ ಪಾಡಿದೊಡೆ ಮುಖ ಪ್ರಸನ್ನತೆಗೊಂಡೊದೆ ಕ್ರಮದಿಂ ಕುಸುಮತಂಗಳಪ್ಪ ಅಶೋಕೆ ಬಕುಳ ಚೂತ ಹೊನ್ನೆ ತಿಲಕ ಕುರವಕ ಕರ್ಣಿಕಾರ ಸಿಂಧುವಾರ ಪ್ರಿಯಾಳು ಚಂಪಕಗಳೆಂಬ ದಶದೋಹಳ ವೃಕ್ಷಜಾತಿಗಳು; ಅಂಕುರ ಪಲ್ಲವ ದಳ ಕೋರಕ ಕುಸುಮ ಫಲ ಪಕ್ವಫಲ ಪಜ್ಜೆಗಳುಂ. ೪೦೧

ಪಕ್ಷಿಮೃಗವಿಶೇಷಂಗಳು :

ಶುಕ ಪಿಕ ಮಧುಕರ ಮಯೂರ ಕಪೋತ ಪಾರಿವ ಪುರುಳಿ ಮೊದಲಾದ ವಿಚಿತ್ರ ಪಕ್ಷಿ ಪ್ರಕರಂಗಳುಂ; ಮೃಗ ಕಸ್ತೂರಿಮೃಗ ಪುರುಷಾಮೃಗಾದಿ ಸಾಧು ಮೃಗ

ಸಮೂಹಂಗಳುಂ; ಶೈತ್ಯ ಸೌರಭ್ಯ ಮಾಂದವ್ಯಮಯ ಮಲಯ ಮಾರುತನಿಂ ಮನೋರಹಮಾಗಿರ್ಪಂ. ೪೦೨

ದೇವ ವಿಟರು ಮತ್ತು ಗಣಿಕೆಯರು :

ಮತ್ತಂ ಆ ವನಂಗಳಲ್ಲಿಯ ಚಿತ್ರಶಾಲೆ ಚಂದ್ರಶಾಲೆ ಶಿಶಿರಶಾಲೆ ಸುರಭಿಶಾಲೆ ಲತಾಮಂಟಪಂಗಳಲ್ಲಿ ತರುಗಳತಣ್ಣೆಳಲ್ಗಳಲ್ಲಿ ಪಳುಕಿನ ಪಾಸರೆಗಳಲ್ಲಿ ಶಶಿಕಾಂತ ವೇದಿಕೆಗಳಲ್ಲಿ ಹೂವಿನ ಹಾಸಿಗೆಗಳಲ್ಲಿ ಪುಳಿನಸ್ಥಳಂಗಳಲ್ಲಿ ತಿಳಿಗೊಳನ ತೀರಂಗಳಲ್ಲಿ ಕೃತಕಾಚಲಂಗಳಲ್ಲಿ ನೆರೆದು ಪರಿದು, ಬೇರೆ ಬೇರೆ ವಸ್ತ್ರಾಭರಣ ಗಂಧಮಾಲ್ಯಾದಿಗಳಿಂದ ಅಲಂಕೃತರಾಗಿ, ಗಾಡಿಯಿಂ ಗಮಕಂಬೆತ್ತು ಸಂಚರಿಪ ವಿದ್ಯಾಧರ ಅಪ್ಸರ ಯಕ್ಷ ರಕ್ಷ ಗಂಧರ್ವ ಕಿನ್ನರ ಪಿಶಾಚ ಗುಹ್ಯಕ ಸಿದ್ಧ ಭೂತ ಬೇತಾಳರೆಂಬ ದೇವತಾಭೇದಂಗಳಲ್ಲಿ, ಸಕಲ ಸುರ ಶ್ರೇಷ್ಠರುಗಳಲ್ಲಿ, ಕೊನಬುಗಳಾದ ಮಕರಧ್ವಜ ನಳಕೂಬರ ಜಯಂತ ಅನಿರುದ್ಧ ಕೂಚಿಮಾರ ಪಾಂಚಾಲ ಪಲ್ಲವ ಪ್ರವೀಣಾದಿ ದೇವತಾ ವಿಟರುಂ; ರಂಭೆ ಊರ್ವಶಿ ತಿಲೋತ್ತಮೆ ಚಿತ್ರಲೇಖೆ ಮಂಜುಘೋಷೆ ಸುಕೇಶಿ ಮೊದಲಾದ ದೇವಗಣಿಕೆಯರುಂ, ಸಂಗೀತ ಸಾಹಿತ್ಯಾದಿ ವಿದ್ಯಾಗೋಷ್ಠಿಗಳಿಂ, ಮಲ್ಲ ಮಹಿಷಾದಿ ಯುದ್ಧಂಗಳಿಂ, ನೆತ್ತ ಚದುರಂಗಾದಿ ದ್ಯೂತವ್ಯಸನಂಗಳಿಂ ನಾನಾ ವಿನೋದಗಳಾಗಿ ವಿರಾಜಿಸುತ್ತಿರ್ಕುಂ. ೪೦೩

ಕೇಸರಾಚಲಂಗಳು :

ಅನಂತರದೊಳು ಆ ಮೇರುವಿನ ಪೂರ್ವಾದಿ ನಾಲ್ಕು ದಿಕ್ಕಿನಲ್ಲಿರ್ದ ಮಂದರಾದಿ ಕೀಲಕ ಪರ್ವತಂಗಳ ಮಧ್ಯದಲ್ಲಿ ಕೇಸರಾಚಲಂಗಳು ಇರ್ಪವು, ಅವು ಆವವೆಂತೆಂದೊಡೆ; ಸಿತಾಂತ ಚಾರುಕುಂದ ಕರರಿ ಮಾಲ್ಯಾವಾನ್ನು ವೈಕಂಠವೆಂಬವೈದು ನಗಂಗಳು, ಇವು ಮೂಡಣ ಮಂದರಗಿರಿಯ ತೆಂಕಣ ಕಂಧಮಾದನ ಶೈಲದ ನಡುವಿಹವು. ತ್ರಿಕೂಟ ಕುರುವಿಂದ ಪತಂಗ ಖಚರ ನಿಷಧವೆಂಬೈದು ಗಿರಿಗಳೇ ತೆಂಕಣ ಗಂಧಮಾದನ ಶೈಲದ ಪಡುವಣ ವಿಪುಲಾದ್ರಿಯಲ್ಲಿಹವು. ಶಿಖಿವಾಸ ವೈಡೂರ್ಯ ಕಪಿಲ ಗಂಧಮಾದನ ಚಾರುದಿಯೆಂಬವೈದು ಮಹೀಧರಂಗಳೇ ಪಶ್ಚಿಮ ವಿಫುಲದ ಉತ್ತರದ ಸುಪಾರ್ಶ್ವದ ಅಂತರಾಳದಲ್ಲಿಹವು. ಶಂಖ ಕೂಟ ವೃಷಭ ಹಂಸ ಕಾಳಾಂಜನಶಿಖರಿಗಳೆಂಬವೈದು ಗಿರಿಗಳೆ ಉತ್ತರದ ಸುಪಾರ್ಶ್ವ ಮೂಡಣ ಮಂದರದ ನಡುವಿಹವು, ಇಂತು ಇಪ್ಪತ್ತು ಕೇಸರಾಚಲಂಗಳು ಒಂದೊಂದು ಆರುಸಾವಿರ ಯೋಜನದ ಉದ್ದಂಗಳೆನಿಸಿ ಸಮಸ್ತ ಸುರಸಂತತಿಗೆ ಆಶ್ರಯಂಗಳಾಗಿರ್ಕುಂ. ೪೦೪

ನವಖಂಡ ವಿಚಾರ, ಸೀಮಾಗಿರಿತ್ರಯಂಗಳು :

ಅನಂತರದೊಳು ಈ ಪ್ರಕಾರವಾದ ವಿಚಿತ್ರ ರಚನೆಯುಳ್ಳ ಮಹಾಮೇರುವಂಬಳಸಿರ್ದ ನವಖಂಡ ವಿಚಾರವೆಂತೆಂದೊಡೆ; ಮೇರುವಿನ ಉತ್ತರದಿಕ್ಕಿನಲ್ಲಿ ನೀಲ ಶ್ವೇತ ಶೃಂಗಂಗಳೆಂಬ ಸೀಮಾಗಿರಿತ್ರಯಂಗಳು ಒಂದೊಂದು ದ್ವಿಸಹಸ್ರ ಯೋಜನ ವಿಶಾಲಂಗಳುಂ, ದಶಸಹಸ್ರ ಯೋಜನೋನ್ನತಂಗಳುಂ ನವಸಹಸ್ರ

ಯೋಜನದ ಅಂತರಾಳಂಗಳನು ಉಳ್ಳವು ಎನಿಸಿ, ಪೂರ್ವ ಪಶ್ಚಿಮ ಲವಣಾಬ್ಧಿ ಪರಿಯಂತರಂ ನೀಳಮಾಗಿರ್ಪವು. ಆ ಗಿರಿತ್ರಯಂಗಳ ಮೇಲೆ ನಾನಾ ವರ್ಣದ ವೃಕ್ಷಂಗಳುಂಟು, ಅಲ್ಲಿ ಕ್ರಮದಿಂ ದೇವ ಮಹೇಶ್ವರ ರುದ್ರನಾಮಧೇಯದ ಲಿಂಗಗಳಂ ನಿರ್ಜರರು ಓಲೈಸುತ್ತಿರ್ಪುಂ. ೪೦೫

ದಕ್ಷಿಣ ಸೀಮಾ ಗಿರಿತ್ರಯಂಗಳು :

ಮತ್ತಂ ಆ ಮೇರುವಿನ ದಕ್ಷಿಣ ಭಾಗದಲ್ಲಿ ನಿಷಧ ಹೇಮಕೂಟ ಹಿಮಾದ್ರಿಗಳೆಂಬ ಸೀಮಾಪರ್ವತ ತ್ರಯಂಗಳು, ಆ ನೀಲಾದಿ ಗಿರಿಗಳ ಯೋಜನ ಪ್ರಮಾಣಿನ ವಿಶಾಲ ಉನ್ನತ ಅಂತರಾಳ ಆಯತಂಗಳನುಳ್ಳವಾಗಿಹವು. ಆ ಗಿರಿತ್ರಯಂಗಳ ಮೇಲೆ ವಿಚಿತ್ರವರ್ಣದ ವೃಕ್ಷಂಗಳುಂಟು. ಅಲ್ಲಿ ಕ್ರಮದಿಂ ಈಶಾನ ಈಶ್ವರ ಪಾರ್ವತಿಪತಿಯೆಂಬ ನಾಮಧೇಯದ ಲಿಂಗಗಳಂ ದೇವತೆಗಳು ಆರಾಧಿಸುತಿರ್ಪುಂ. ೪೦೬

ಪಶ್ಚಿಮ ಸೀಮಾನಗ ದ್ವಯಂಗಳು :

ಮತ್ತಂ ಆ ಮೇರುವಿನ ಪೂರ್ವಪಶ್ಚಿಮದಿಕ್ಕುಗಳಲ್ಲಿ ಕ್ರಮದಿಂದ ಒಂದೊಂದು ನವಸಹಸ್ರ ಯೋಜನಾಂತರದಲ್ಲಿ ಮಾಲ್ಯಾವಂತ ಗಂಧಮಾದನಮೆಂಬ ಸೀಮಾ ನಗದ್ವಯಂ ಒಂದೊಂದು ಸಾವಿರ ಯೋಜನದ ಅಗಲದಿಂದ್ಯೈದುಸಾವಿರ ಯೋಜನದ ಉದ್ದದಿಂ, ದಕ್ಷಿಣೋತ್ತರಮಾತಿ ಪೂರ್ವೋಕ್ತ ನೀಲ ನಿಷಧಗಳೆಂಬ ಉತ್ತರ ದಕ್ಷಿಣ ಸೀಮಾಗಿರಿಯುಗಳಂಗಳನ್ನು ಅವಲಂಬಿಸಿಹವು. ಆ ಗಿರಿದ್ವಯಂಗಳ ಮೇಲೆ ಬಹುವರ್ಣದ ವೃಕ್ಷಗಳುಂಟು, ಅಲ್ಲಿ ಕ್ರಮದಿಂ ಮಹಾದೇವ ಮಹೇಶ್ವರ ನಾಮಧೇಯದ ಲಿಂಗಂಗಳಂ ಸಮಸ್ತ ಸುರರು ಅರ್ಚಿಸುತಿರ್ಪುಂ. ೪೦೭

ಇಳಾವೃತ ದೇಶಂಗಳು :

ಬಳಿಕ ಈ ವಿಭಾಗ ಶೈಲಾಷ್ಟಕಂಗಳ ಅಂತರಾಳದೇಶಂಗಳ್ಗೆ ವರ್ಷಂಗಳೆಂಬ ಪೇರಕ್ಕುಂ. ಅವಕ್ಕೆ ಪೂರ್ವೋಕ್ತಮಾದ ಇಳಾವೃತಾದಿ ನಾಮಧೇಯಮುಳ್ಳವರೆ ಕರ್ತೃಗಳಪ್ಪರು. ಅವರ ವಿಚಾರಮೆಂತೆಂದೊಡೆ; ಮೇರುವಿನ ಉತ್ತರ ದಕ್ಷಿಣ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಕ್ರಮವಿಡಿದಿರ್ದ ನೀಲ ನಿಷಧ ಮಾಲ್ಯಾವಂತ ಗಂಧಮಾದನಮೆಂಬ ಸೀಮಾಗಿರಿ ಚತುಷ್ಟಯದ ವಳವಳಯವೇ ಅದರಲ್ಲಿ ಸಿತಾಂತ ಚಾರುಕುಂದ ಕುರರಿ ಅಚಲೋತ್ತಮ ಮಣಿಶಿಲಾದ್ರಿ ವೃಕ್ಷವಾನ್ನು ಋಚಕ ಬಿಂದುವಾನ್ನು ಮಂದರ ಮೇಣುವಾನ್ ಮೇಘಗಿರಿ ನಿಷಧ ದೇವನಗಮೆಂಬ ಹದಿಮೂರು ಕುಲಶೈಲಂಗಳೆ ಪೂರ್ವೋಕ್ತ ಮಂದರಮೆಂಬ ಕೀಲಕಪರ್ವತಕ್ಕೆ ಮೂಡಣ ದಿಕ್ಕಿನಲ್ಲಿಹವು. ಬಳಿಕ ಶೈಲೆ ದ್ವಿಶಿಖರಿ ತ್ರಿಶಿಖರಿ ಏಕಶೃಂಗಿ ಮಹಾಶೃಂಗಿ ಮಹಾಶೈಲ ಗಜಶೈಲ ಪಿಶಾಚಶೈಲ ಪಂಚಶೈಲ ಕೈಲಾಸ ಹೇಮವಾನ್ನುಗಳೆಂಬ ದಶಕುಲಪರ್ವತಂಗಳೆ ಪೂರ್ವೋಕ್ತ ಗಂಧಮಾದನಮೆಂಬ ಕೀಲಕ ಪರ್ವತಕ್ಕೆ ತೆಂಕದಿಕ್ಕಿನಲ್ಲಿಹವು. ಮತ್ತಂ ಸುಗಂಧಿ ಶಿಖಿ ತ್ರಿಶೃಂಗಿ ಪುಷ್ಪಕ ಸುಪಕ್ಷ ಕಂಕುಶೈಲ ವೈಡೂರ್ಯ ಕಪಿಲ ಭದ್ರ ಕುಮುದ ಮಧುಮಾನ್ ಆಂಜನ ಮಕುಟ ಪಾಂಡುರ ಸಹಸ್ರಶಿಖರಿ ಪಾರಿಜಾತಮೆಂಬ ಹದಿನಾರು ಕುಲಾಚಲಂಗಳೆ ಪೂರ್ವೋಕ್ತ

ವಿಘುಲಮೆಂಬ ಕೀಲಕ ಪರ್ವತಕ್ಕೆ ಪಶ್ಚಿಮದಿಕ್ಕಿನಲ್ಲಿಹವು. ಬಳಿಕ ಶಂಖಕೂಟ ಮಹಾನಗ ಹಂಸಗಿರಿ ನಾಕಶೈಲ ಕಪಿಲಾದ್ರಿ ಇಂದ್ರಗಿರಿ ಸಾನುಮಾನ್ ಚಾರುಧಿ ಹೇಮಕೂಟ ನೀಲಭದ್ರ ಕಟುಶೃಂಗ ಪುಷ್ಪರಾಗ ಮೇಘಪರ್ವತ ಹೇಮಪ್ರಭ ವಹಗಿರಿ ಮಯೂರನಗ ಚಾರುಧಿಶೈಲೇಂದ್ರಮೆಂಬ ಹದಿನೇಳು ಕುಲಗೋತ್ರಂಗಳೇ ಪೂರ್ವೋಕ್ತ ಸುಪಾರ್ಶ್ವಮೆಂಬ ಕೀಲಕ ಪರ್ವತಕ್ಕೆ ಬಡಗದಿಕ್ಕಿನಲ್ಲಿಹವು. ಇಂತು ಐವತ್ತಾರು ಕುಲಾದ್ರಿಗಳುಂ ಸುರ ಸಿದ್ಧ ಸಂತತಿಗೆ ಆಶ್ರಯಂಗಳಾಗಿರ್ಕುಂ. ೪೦೮

ಇಳಾವೃತ ನಗರಂಗಳು :

ಅನಂತರದೊಳು ಈ ಇಳಾವೃತ ವಿಷಯದಲ್ಲಿಯ ಬೇರೆ ಬೇರೆ ಎರಡೆರಡು ಸಾವಿರಯೋಜನೋನ್ನತವಾಗಿ ತೋರುವ ಇಪ್ಪತ್ತನಾಲ್ಕು ಗಿರಿಗಳ ಮೇಲೆ ಮಹಾಪಟ್ಟಣಂಗಳು ಉಂಟು. ಅವಾವು ಎಂತೆಂದೊಡೆ :

ಚಂದ್ರಕಾಂತ ಶುಕ್ರಪಾರಿಜಾತ ಕುಮುದವತಿಯೆಂಬ ನಗರತ್ರಯಂಗಳಲ್ಲಿ ದಾನವರಿಗೆ ಎಂಟುನೂರು ಪುರಂಗಳು.

ತ್ರಿಕೂಟಚಾರುಧಿಯು ಸಹಸ್ರ ಶಿಖರಿಯಲ್ಲಿ ನಮುಚಿ ಮಹಾನಟ ಮಹಾದಂಭ ಅಗ್ನಿಮುಖ ಕಾಲನೇಮ ವಿರೋಚನ ಸುಪರ್ವ ಚಪಲ ಮುಚುಕುಂದ ಸುಕುಂದರೆ ಎಂಬವರ್ ಮೊದಲಾದ ದೈತ್ಯರುಗಳಿಗೆ ಅನಂತಪಟ್ಟಣಂಗಳು,

ಶತಶೃಂಗ ಪರ್ವತದಲ್ಲಿ ಕ್ರವ್ಯಾದ ಮೊದಲಾದ ರಾಕ್ಷಸರುಗಳಿಗೆ ಎರಡುಲಕ್ಷ ಪುರಂಗಳು,

ಸುವ್ರತಮೆಂಬಗಿರಿಯಲ್ಲಿ ನೀಲಾದಿ ಹಯಗ್ರೀವರಿಗೆ ತೊಂಭತ್ತಾರು ಪುರಂಗಳು
ಮಹಾನೀಲಗಿರಿಯಲ್ಲಿ ಕಿನ್ನರರಿಗೆ ಐನೂರು ಪುರಂಗಳು.
ಶ್ವೇತೋದಕ ಪರ್ವತದಲ್ಲಿ ಹಳಚಿ ಅಶ್ವಸ್ಕಂದ ರೇಣುಖ ಉಲೂಕ.
ಸ್ವಸನರೆಂಬವರ್ಗೆ ಮೊದಲಾಗಿ ಸುಪರ್ಣರಿಗೈದು ಸಾವಿರಪುರಂಗಳು.
ವೇಣುಸಾನುಗಿರಿಯಲ್ಲಿ ವಿದ್ಯಾಧರರಿಗೆ ಏಳುನೂರು ಪುರಂಗಳು.
ಕರಂಜಪರ್ವತದಲ್ಲಿ ಗಂಧರ್ವರಿಗೆ ಆನಂತಪುರಂಗಳು.
ವಸುಧಾರ ಪರ್ವತದಲ್ಲಿ ವಸುಗಳಿಗೆ ಎಂಟು ಪುರಂಗಳು.
ರತ್ನಧಾರಪರ್ವತದಲ್ಲಿ ಸಿದ್ಧಚಾರಣರ್ಗೆ ಅಸಂಖ್ಯಾತಪುರಂಗಳು. ೪೦೯

ಋಷಿ ಸ್ಥಾನಂಗಳು :

ಸುಮೇಘಪರ್ವತದಲ್ಲಿ ಅತ್ರಿ ಆಂಗೀರಸ ಅಗಸ್ತ್ಯ ಭಾರ್ಗವ ಭಾರದ್ವಾಜ ಭೃಗು ವ್ಯಾಸ ವಿಶ್ವಾಮಿತ್ರ ವಶಿಷ್ಠ ಉದಂಕ ಶುಕ ಶಾಕಲ್ಯ ಸಾಲಂಕಾಯನ ಸೂತ ವ್ಯಾಸ ಶೌನಕ ಗಾಲವ ಗೌತಮ ಗಾರ್ಗ್ಯ ಮರೀಚಿ ಮತಂಗ ಮೃಕಂಡು ಮಾಂಡುಕ್ಯ ಕಣ್ವ ಕೌಶಿಕ ಕಪಿಲ ಜಮದಗ್ನಿ ಜೈಮಿನಿ ಜಹ್ನು ಜಾಬಾಲ ರೋಮಜ ಪತಂಗ ಪತಂಜಲಿ

ಪರಾಶರ ಪುಲಸ್ತ್ಯಸಾನಂದ ಶ್ವೇತಕೇತು ಉಪಮನ್ಯು ಮೊದಲಾದ ಅಷ್ಟಾಶೀತಿಸಹಸ್ರ ಋಷೀಶ್ವರರ್ಗೆ ಅನಂತಾಶ್ರಮಂಗಳುಂ. ೪೧೦

ನಾರದ ಮೊದಲಾದವರ ಸ್ಥಾನಂಗಳು :

ಪುಷ್ಯಕೇತುಪರ್ವತದಲ್ಲಿ ನಾರದ ತುಂಬುರ ಭರತ ಕೋಲಾಹಲಾದಿ ದೇವಮುನಿಗಳ ಮಹಾಮಂದಿರಂಗಳು .

ಹೇಮಕೂಟಪರ್ವತದಲ್ಲಿ ದ್ವಾದಶಾದಿತ್ಯರ ನಗರಂಗಳು.

ಪಂಚಕೂಟ ಪರ್ವತದಲ್ಲಿ ಮಣಿಭದ್ರ ಸುವೀರ ಪಾಂಚಿಕ ವಿಭಾಂಡಕ ದೃತರಾಷ್ಟ್ರ ಪೂರ್ಣಭದ್ರ ವಿರೂಪಾಕ್ಷರೆಂಬಿವರ್ ಮೊದಲಾದ ಐದುಕೋಟಿ ಯಕ್ಷರ ಪಟ್ಟಣಂಗಳು.

ಕುಮುದಪರ್ವತದಲ್ಲಿ ಪದ್ಮ ಮಹಾಪದ್ಮ ಶಂಖಕುಳಿಕಾದಿ ನಾಗರ್ಕಳ ನಿಕೇತಂಗಳು
ಪಾರಿಯಾತ್ರ ಪರ್ವತದಲ್ಲಿ ಕುಬೇರನಗರಿ
ಮರ್ಯಾದಾ ಪರ್ವತದಲ್ಲಿ ವಿಘ್ನೇಶ್ವರನಗರಿ
ಗಜೋತ್ತುಂಗ ಪರ್ವತದಲ್ಲಿ ದುರ್ಗಿಯ ನಗರಿ
ಏಕಶೃಂಗ ಪರ್ವತದಲ್ಲಿ ಬ್ರಹ್ಮನಗರಿ
ಗಿರಿಕೂಟಪರ್ವತದಲ್ಲಿ ವಿಷ್ಣುನಗರಿ
ಶ್ರೀಕಂಠಪರ್ವತದಲ್ಲಿ ಈಶ್ವರನ ರಾಜಧಾನಿ ರಂಜಿಸುತ್ತಿರ್ಕುಂ. ೪೧೧

ಸಿದ್ಧವಟವೃಕ್ಷ :

ಮತ್ತಂ ಆ ಶೀಕಂಠಗಿರಿಯ ಸಮೀಪದ ಹೇಮಕೂಟಮೆಂಬ ಗಿರಿಯೊಳಗೆ ವಜ್ರ ವೈಡೂರ್ಯ ಗೋಮೇದ ಪುಷ್ಯರಾಗ ಪದ್ಮರಾಗ ನೀಲ ವಿದ್ರುಮ ಮೌಕ್ತಿಕ ಮರಕತಂಗಳೆಂಬ ನವರತ್ನಮಯವಾದ ಕೋಡುಗಲ್ಗಳುಂಟು. ಅವರ ಮಧ್ಯದಲ್ಲಿ ಪ್ರಣವವೇ ಮೂಲಛಂದಸ್ಸಾದಿಗಳೇ ಶಾಖೆ, ಋಗ್ವೇದವೇದಳ ಯಜುರ್ವೇದವೆ ಪುಷ್ಪ ಸಾಮವೇದವೆ ಫಲ ಅಥರ್ವಣ ವೇದವೇ ಫಲರಸ ಯಜ್ಞವೇ ಶೀತಳ ಛಾಯೆಗಳಾಗಿ ಮೆರೆವ ವಟಸಂಜ್ಞಿಕಮಾದ ಮಹಾಕಲ್ಪವೃಕ್ಷಮಿರ್ಪುದು ಅದೆಂತೆಂದೊಡೆ ೪೧೨

ಶ್ರೀ ಗುರು ದಕ್ಷಿಣಾಮೂರ್ತಿ :

ಸಹಸ್ರಯೋಜನ ವಿಶಾಲೋನ್ನತಮಪ್ಪ ಆ ವೃಕ್ಷದ ಮೂಲದಲ್ಲಿ ಕನಕಮಣಿ ಖಚಿತ ದಿವ್ಯ ಸಿಂಹಸನದ ಮೇಲೆ ದಕ್ಷಿಣಾಮೂರ್ತಿಯಾದೊಡೆ ; ಅಮೃತಮಯ ಶರೀರದಿಂ ಜಟಾಬಂಧ ಚಂದ್ರಕಲೆ ಏಕಮುಖ ತ್ರಿನೇತ್ರ ಫಣಿಕುಂಡಲ ನೀಲಗೀವ ಸರ್ಪಯಜ್ಞೋಪವೀತ ನಾಗಯೋಗ ಪಟ್ಟಂಗಳಿಂ ; ಪೊದೆದು ಉಟ್ಟ ವ್ಯಾಘ್ರ ಗಜಾಜಿನಗಳಿಂ; ವಿದ್ಯಾಮುದ್ರೆ ಅಕ್ಷಸೂತ್ರ ಸುಧಾ ಕಲಶ ಪುಸ್ತಕಂಗಳಾಂತ ದಕ್ಷಿಣ ವಾಮಕರ ಚತುಷ್ಟಯದಿಂ ; ಗಂಧ ಮಾಲ್ಯಾಭರಣಗಳಿಂದ ಅಲಂಕೃತನಾಗಿ ವೀರಾಸನದಲ್ಲಿ ಕುಳ್ಳಿರ್ದು ಮೋಹಾಪಸ್ಮಾರನ ಮೇಲೆ ಇರಿಸಲ್ಪಟ್ಟ ದಕ್ಷಿಣಪಾದ ಕಮಲಗಳಿಂದ ಎಸೆದು,

ವಿಚಿತ್ರ ವೇಷಧಾರಿಗಳಾದ ಗಜಾನನ ಷಣ್ಮುಖಾದಿ ಗಣೇಶ್ವರರ್ಗೆ ನಾರದಾದಿ ಮುನಿಜನಂಗಳಿಗೆ, ಸಾಂಖ್ಯಾದಿ ನಾನಾ ಸಮಯ ಸಾಧಕರ್ಗೆ ವೇದಾದಿ ಸಮಸ್ತ ಶಾಸ್ತ್ರಂಗಳನ್ ಉಪನ್ಯಾಸಂಗೆಯ್ದು ಕೃತಾರ್ಥರಂ ಮಾಡುತ್ತಿರ್ಪಂ. ೪೧೩

ಇಳಾವೃತದಲ್ಲಿನ ಜನರು :

ಬಳಿಕ ಇಂತು ಸಕಲ ದೇವತೆಗಳಿಗೆ ಸುಖಾಸ್ಪದಮಾದ ಇಳಾವೃತ ವರ್ಷದಲ್ಲಿಯ ದಿವ್ಯ ದೇಹಾನ್ವಿತರಾದ ಜನರು ಸಾವಿರ ಬಣ್ಣಮಪ್ಪುದರಿಂ, ಮಹಾಪ್ರಕಾಶಮಯವಾದ ಮೇರುವಿನ ದೀಪ್ತಿಯಿಂದವೆ ಕಾಣಲ್ಪಟ್ಟ ವಿಷಯವಿಸರಂಗಳನು ಉಳ್ಳವರಾಗಿ ಜಂಬುವೆಂಬ ಕಲ್ಪವೃಕ್ಷದ ಫಲಾಹಾರದಿಂ ಪದಿಮೂರು ಸಾವಿರದ ಆಯುಷ್ಯವಂತರೆನಿಸಿ ಈಶ್ವರನಾಮ ಲಿಂಗಪೂಜಕರಾಗಿ ನಿತ್ಯಸುಖಿಗಳಾಗಿರ್ಕುಂ. ೪೧೪

ಭದ್ರಾಶ್ವ ವರ್ಷ :

ಅನಂತರಿದೊಳು ಆ ಮೇರುವಿನ ಮೂಡಲು ಒಂಭತ್ತು ಸಾವಿರ ಯೋಜನಾಂತರದಲ್ಲಿರ್ಪ ಮಾಲ್ಯವಂತ ಎಂಬ ಸೀಮಾಗಿರಿವಿಡಿದು, ಪೂರ್ವ ಲವಣ ಸಮುದ್ರಾವಧಿಯಾಗಿ ಚಂದ್ರಕಾಂತ ವರ್ಣದ ಭೂಮಿಯುಳ್ಳುದೇ ಭದ್ರಾಶ್ವ ವರ್ಷನದು. ಮೂವತ್ತೆರಡು ಸಾವಿರ ಯೋಜನದಳತೆಯ ಚತುರಶ್ರವಹುದು, ಅದರಲ್ಲಿ ಸಪ್ತಕುಲಪರ್ವತಂಗಳುಂಟು. ಅಲ್ಲಲ್ಲಿ ಪುಟ್ಟಿದ ಪುಣ್ಯನದಿಗಳುಂಟು. ಆ ವರ್ಷದಲ್ಲಿಯ ಶಶಿಕಾಂತಮಯ ಜನರು ನೀಲಾಬ್ಜವೆಂಬ ಕಲ್ಪಲತಾ ಫಲಾಶನದಿಂದ ಇಪ್ಪತ್ತು ಸಾವಿರವರ್ಷ ಜೀವಿಗಳಾಗಿ ಮಹಾದೇವನಾಮ ಲಿಂಗಪೂಜಕರಾಗಿ ದುಃಖವರ್ಜಿತರೆನಿಸಿರ್ಕುಂ. ೪೧೫

ಕೇತುಮಾಲಾವರ್ಷ :

ಮತ್ತಂ ಆ ಮೇರುವಿನ ಪಡುವಣ ಒಂಭತ್ತುಸಾವಿರ ಯೋಜನಾಂತರದಲ್ಲಿ ಇರ್ಪ ಗಂಧಮಾಧನಮೆಂಬ ಸೀಮಾಶೈಲತೊಡಗಿ ಪಶ್ಚಿಮ ಲವಣಸಾಗರಂ ಕಡೆಯಾಗಿ ಕನ್ನೆಯ್ದಲ ಕಾಂತಿಮಯ ಭೂಮಿಯುಳ್ಳುದೇ ಕೇತುಮಾಲ್ಯವರ್ಷವುಂ ಅದು ಮೂವತ್ತೆರಡುಸಾವಿರ ಯೋಜನದ ಅಳತೆಯ ಚತುರಸ್ರವಹುದು. ಅದರಲ್ಲಿ ಸಪ್ತಕುಲಗಿರಿಗಳ, ಅಲ್ಲಲ್ಲಿ ಜನಿಸಿದ ಮಹಾನದಿಗಳು ಅನಂತಂಗಳುಂಟು. ಆ ವರ್ಷದಲ್ಲಿಯ ನೀಲಾಬ್ಜಛವಿಯ ಜನರು ಪನಸಮೆಂಬ ಕಲ್ಪವೃಕ್ಷ ಫಲಾನ್ನದಿಂದ ಇಪ್ಪತ್ತು ಸಾವಿರ ವರ್ಷದ ಆಯುಷ್ಯವಂತರೆನಿಸಿ ಮಹಾದೇವನಾಮ ಲಿಂಗಪೂಜಕರಾಗಿ ಬಲವಾನ್ನುಗಳಾಗಿರ್ಕುಂ ೪೧೬

ರಮ್ಯಕ ವರ್ಷ :

ಮತ್ತಂ ಆ ಮೇರುವಿನ ಉತ್ತಜದಲ್ಲಿ ನೀಲ ಶ್ವೇತಮೆಂಬ ಸೀಮಾಗಿರಿಯುಗಳದ ಅಂತರಾಳದ ನವಸಹಸ್ರಯೋಜನ ಪ್ರದೇಶಮೇ ನೀಲವರ್ಣದ ಭೂಮಿಯನುಳ್ಳ ರಮ್ಯಕ ವರ್ಷವು. ಅದು ಪೂರ್ವಪಶ್ಚಿಮ ಲವಣಾಬ್ಧಿ ಪರ್ಯಂತರಂ ನೀಳವಹುದು.

ಅದರಲ್ಲಿ ಸಪ್ತಕುಲ ಪರ್ವತಂಗಳಲ್ಲಿ ಪುಟ್ಟಿದ ವಿಶಾಲನದಿಗಳುಂಟು. ಆ ವರ್ಷದಲ್ಲಿಯ ನೀಲಾಬ್ಜಛವಿಯ ಜನರು ಇಕ್ಷುವೆಂಬ ಕಲ್ಪವೃಕ್ಷರಸಾನ್ನದಿಂ ಪನ್ನೆರಡುಸಾವಿರ ವರ್ಷದ ಆಯುಷ್ಯಂ ತಳೆದು ದೇವನಾಮ ಲಿಂಗಪೂಜಕರಾಗಿ ಸದಾ ಆನಂದದಿಂದಿರ್ಪುರ್. ೪೧೭

ಹಿರಣ್ಯಕ ವರ್ಷ :

ಮತ್ತಂ ಆ ಶ್ವೇತಶೃಂಗಮೆಂಬ ಸೀಮಾಪರ್ವತ ದ್ವಯಂಗಳ ನಡುವಣ ಒಂಭತ್ತು ಸಾವಿರ ಯೋಜನಸ್ಥಲವೆ ಧವಲ ವರ್ಣದ ಭೂಮಿಯನುಳ್ಳ ಹಿರಣ್ಯಕ ವರ್ಷವು. ಅದು ಮೂಡಲು ಪಡುವಲು ನೀಳಮಾಗಿ ಲವಣಸಾಗರ ಅವಧಿಯಾಗಿರ್ಪುದು. ಅದರಲ್ಲಿ ಸಪ್ತಕುಲಗಿರಿಗಳಲ್ಲಿ ಸಂಜನಿತ ಮನೋಹರಮಾದ ನದಿಗಳುಂಟು. ಆ ವರ್ಷದಲ್ಲಿಯ ಚಂದ್ರಪ್ರಭಾಮಯ ಜನರು ಲಾಕುಳಮೆಂಬ ಕಲ್ಪವೃಕ್ಷ ಫಲಾಹಾರದಿಂ ಪನ್ನಿರ್ಚ್ಛಾಸಿರವಷದ ಆಯುಷ್ಯಂಬಡೆದು ಮಹೇಶ್ವರನಾಮ ಲಿಂಗಪೂಜಕರಾಗಿ ಸುಕ್ಷೇಮದಿಂದಿರ್ಪುರ್. ೪೧೮

ಕುರುವರ್ಷ :

ಮತ್ತಂ ಆ ಶೃಂಗವಿಡಿದು ಉತ್ತರ ಕ್ಷಾರೋದಧಿ ಕಡೆಯಾಗಿ ನವಸಹಸ್ರ ಯೊಜನಸ್ಥಲಮೆ ಲೋಯಿಸರದ ಪೂವಣ್ಣದ ಭೂಮಿಯನುಳ್ಳುದೇ ಕುರುವರ್ಷ. ಅದು ಅರ್ಧಚಂದ್ರಾಕಾರವು. ಅದರಲ್ಲಿ ಸಪ್ತಕುಲಾದ್ರಿಗಳು. ಅಲ್ಲಲ್ಲಿ ಪ್ರಾದುರ್ಭವಿಸಿದ ಮನೋರಮ್ಯ ನದಿಗಳುಂಟು. ಆ ವರ್ಷದಲ್ಲಿ ಪ್ರಿಯಂಗು ಲತಾಕುಸುಮದ್ಯುತಿಯ ಜನರು ಇಚ್ಛಾಕಲ್ಪವೃಕ್ಷ ಫಲಾಹಾರದಿಂ ಮೂವತ್ತುಸಾವಿರ ವರ್ಷದ ಆಯುಷ್ಯ ಸಮೇತರೆನಿಸಿ ರುದ್ರನಾಮ ಲಿಂಗಪೂಜಕರಾಗಿಪಟು. ಅಲ್ಲಿಯ ಸ್ತ್ರೀಯರು ಒಂದೇ ಸಮಯದಲ್ಲಿ ಕನ್ಯಾ ಕುಮಾರರಂ ಪಡೆಯುವರ್ ಅವರೇ ಮುಂದೆ ದಂಪತಿಗಳೆನಿಸಿ ನಿಷೇಧಮಿಲ್ಲದೆ ನಿಜಾನಂದಿಗಳಾಗಿರ್ಪುರ್.

ಮತ್ತಂ ಆಕುರುವರ್ಷದೊಳು ಆ ಸಮುದ್ರ ಸಮೀಪದಲ್ಲಿ ನಾಲ್ವತ್ತುಸಾವಿರ ಯೋಜನದ ಆಳತೆಯೊಳು ಉತ್ತರ ದಿಕ್ಕು ಮತ್ತು ವಾಯವ್ಯದಿಕ್ಕುಗಳಲ್ಲಿ ಸಿದ್ಧ ಮುನಿ ಮುಖ್ಯರ್ಗಾಸ್ಪದವಪ್ಪ ಕನ್ನೆಯ್ದಿಲುವರ್ಣದ ಭೂಮಿಯನುಳ್ಳ ಚಂದ್ರಾಕಾರ ಭದ್ರಾಕಾರಮೆಂಬ ದ್ವೀಪದ್ವಯಂ ಕೂಡಿ ವರ್ತಿಸುತ್ತಿರ್ಪವು. ಅವರಲ್ಲಿ ಕ್ರಮದಿಂ ಶಶಿದ್ಯುತಿ ಲೀಲಾಬ್ಜಕಾಂತಿಯ ಜನರು ಜಂಬುವೆಂಬ ಕಲ್ಪವೃಕ್ಷ ಫಲಾಹಾರಿಗಳಾಗಿ ಪದಿಮೂರು ಸಾವಿರ ವರ್ಷದ ಆಯುಷ್ಯಪಡೆದು ರುದ್ರನಾಮ ಲಿಂಗಪೂಜಕರಾಗಿ ಸಂತೋಷಿಗಳಾಗಿರ್ಪುರ್. ೪೧೯

ಹರಿವರ್ಷ:

ಬಳಿಕ ಆ ಮೇರುವಿನ ದಕ್ಷಿಣದಿಕ್ಕಿನಲ್ಲಿ ನಿಷಧ ಹೇಮಕೂಟವೆಂಬ ಸೀಮಾ ನಗಯುಗಂಗಳ ಅಂತರಾಳದ ನವಸಹಸ್ರಯೋಜನ ಪ್ರದೇಶವೇ ರಜತವರ್ಣದ ಭೂಮಿಯುಳ್ಳ ಹರಿವರ್ಷವು. ಅದು ಪೂರ್ವಪಶ್ಚಿಮ ಲವಣಾಬ್ಧಿ ಪರ್ಯಂತಮಾಗಿ ನೀಳವಹುದು. ಅದರೊಳು ಏಳುಕುಲಗಿರಿಗಳು. ಅಲ್ಲಲ್ಲಿ ಜನಿಸಿದ ದಿವ್ಯನದಿಗಳುಂಟು.

ಆ ವರ್ಷದಲ್ಲಿಯ ರಜತಪ್ರಭಾಮಯ ಜನರು ಇಕ್ಷುವೆಂಬ ಕಲ್ಪವೃಕ್ಷ ರಸಾಸ್ವಾದನದಿಂ ಪನ್ನೆರಡುಸಾವಿರ ವರ್ಷದ ಆಯುಷ್ಯಂಬೆತ್ತು ಈಶಾನನಾಮಲಿಂಗಪೂಜಕರಾಗಿ ಚಿರಸುಖಿಗಳಾಗಿರ್ಕುಂ. ೪೨೦

ಕಿಂಪುರುಷವರ್ಷ:

ಬಳಿಕ ಆ ಹೇಮಕೂಟ ಹಿಮವತ್ಪರ್ವತದ ಅಂತರಾಳದ ಒಂಭತ್ತು ಸಾವಿರ ಯೋಜನಸ್ಥಲಮೆ ಸುವರ್ಣಮಯ ಭೂಮಿಯನುಳ್ಳ ಕಿಂಪುರುಷವರ್ಷವು. ಅದು ಮೂಡಲುಪಡುವಲು ನೀಳಮೆನಿಸಿ ಲವಣ ಸಮುದಾವಧೊಯಾಗಿಹುದು. ಅದರೊಳು ಏಳು ಕುಲಗಿರಿಗಳು ಅಲ್ಲಲ್ಲಿ ಪುಟ್ಟಿದ ಸುರುಚಿರ ನದಿಗಳುಂಟು. ಆ ವರ್ಷದಲ್ಲಿಯ ಹೇಮವರ್ಣದ ಜನರು ಪ್ಲಕ್ಷವೆಂಬ ಕಲ್ಪವೃಕ್ಷಫಲಾಹಾರದಿಂದ ಇಪ್ಪತ್ತು ಸಾವಿರ ವರ್ಷದ ಆಯುಷ್ಯದಿಂದ ಈಶಾನಲಿಂಗನಾಮ ಪೂಜಕರಾಗಿ ಸುಖಜೀವಿಗಳಾಗಿರ್ಕುಂ.

ಬಳಿಕ ಈ ಪ್ರಕಾರಮಾದ ವರ್ಷಾಷ್ಟಕಗೊಳ್ ಇರ್ಪ ಜನರ್ಗೆ ಕೃತಾದಿ ಯುಗಾನುಕ್ರಮದಿಂ ಜ್ಞಾನ ಆಯಸ್ಸು ತೇಜ ಬಲ ಸಂಪದಾದಿಗಳಿಗೆ ವೃದ್ಧಿ ಕ್ಷಯಮಿಲ್ಲದೆ ಒಂದೇ ತೆರದಿಂದಿರ್ಕುಂ. ೪೨೧

ಭಾರತ ವರ್ಷ:

ಮತ್ತಂ ಆ ಹಿಮವತ್ಪರ್ವತದಿಂದ ದಕ್ಷಿಣಸಾಗರ ಪರ್ಯಂತಮಾಗಿ ನವಸಹಸ್ರ ಯೋಜನ ಪ್ರದೇಶಮೆ ನಾನಾವರ್ಣದ ಭೂಮಿಯನುಳ್ಳ ಭಾರತವರ್ಷವು. ಅದು ಹೆದೆಯೇರಿಸಿದ ಬಿಲ್ಲನಾಕಾರವಹುದು. ಆ ಭರತವರ್ಷದೊಂದೇ ಬಹು ಖಂಡಮಾಗಿರ್ಪುದು, ಅದೆಂತೆನೆ– ೪೨೨

ಷಟ್ ಚಕ್ರವರ್ತಿಗಳು :

ಪೂರ್ವದಲ್ಲಿ ಹರಿಶ್ಚಂದ್ರ ನಳ ಪುರಪುಷ್ಕ ಪುರೂರವ ಸಗರ ಕಾರ್ತ್ಯವೀರರೆಂಬ ಷಟ್ ಚಕ್ರವರ್ತಿಗಳುಂ; ಗಯ ಅಂಬರೀಷ ಶಶಿಬಿಂದು ರಂತಿ ಪೃಥು ಮರುತ್ವಾನ್ ಭರತ ಸಹೋತ್ರ ದಿಲೀಪ ರಘು ರಾಮ, ನೃಗ ರಂತಿದೇವ ಯಯಾತಿ ಮಾಂಧಾತೃ ಭಗೀರಥರೆಂಬ ಷೋಡಶ ಮಹಾ ರಾಯರುಗಳುಂ; ತಮ್ಮತಮ್ಮ ಸ್ಥಿತಿಕಾಲಂಗಳಲ್ಲಿ ದಾಸಿ ಭೃತ್ಯ ಪುತ್ರ ಬಂಧು ವಸ್ತ್ರ ವಾಹನ ಧನ ಧಾನ್ಯವೆಂಬ ಅಷ್ಟೈಶ್ವರ್ಯಯುಕ್ತರಾಗಿ; ಸತಿ ಸ್ನಾನ ಭೋಜನ ವಸ್ತ್ರ ಗಂಧ ಪುಷ್ಪ ತಾಂಬೂಲ ಶಯ್ಯಂಗಳೆಂಬ ಅಷ್ಟಭೋಗಂಗಳಿಂ ಸಂಪನ್ನರೆನಿಸಿ; ತಟಾಕ ಧನನಿಕ್ಷೇಪ ಬ್ರಹ್ಮಸ್ಥಾನ ಸುರಾಲಯ ವನ ಸತ್ಕೃತಿ ಪುತ್ರರೆಂಬ ಸಪ್ತಸಂತಾನಾನ್ವಿತರಾಗಿ, ೪೨೩

ರಾಜಲಕ್ಷಣ :

ಸಾಮ ದಾನ ಭೇದ ದಂಡವೆಂಬ ಚತುರೋಪಾಯಗಳು ಉಳ್ಳವರೆನಿಸಿ; ಸಂಧಿ ವಿಗ್ರಹ ಯಾನ ಆಸನ ದ್ವೈಧೀಭಾವ ಆಶ್ರಮವೆಂಬ ಸದ್ಗುಣ ಸಮೇತರಾಗಿ; ಭೇದತಂತ್ರ ಪರೀಕ್ಷಾತಂತ್ರ ವಿಶ್ವಾಸತಂತ್ರ ವಂಚನತಂತ್ರ ಮಿತ್ರಕಾರ್ಯಾತಂತ್ರವೆಂಬ

ಪಂಚತಂತ್ರ ಪ್ರವೀಣರೆನಿಸಿ; ಪ್ರಭುಶಕ್ತಿ ಉತ್ಸಾಹಶಕ್ತಿ ಮಂತ್ರಶಕ್ತಿಯೆಂಬ ಶಕ್ತಿತ್ರಯ ಸಹಿತರಾಗಿ; ಕ್ಷಯ ಸ್ಥಾನ ವೃದ್ಧಿ-ಯಜ ತೇಜ ಸುಪ್ರಭಾವ-ಪ್ರತಾಪ ಆಕ್ರೋಶ ದಂಡಜವೆಂಬ ವರ್ಗತ್ರಯ ವಿಶಿಷ್ಠರೆನಿಸಿ; ಹಸ್ತಿ ಅಶ್ವ ರಥ ಪದಾತಿಯೆಂಬ ಚತುರಂಗಬಲ ಸಮಗ್ರತೆಯಿಂದ ಅಲಂಕೃತರಾಗಿ; ವಿದ್ವಾಂಸರು ಕವಿಗಳು ಭಟ್ಟರು ಗಾಯಕರು ಪರಿಹಾಸಕರು ಇತಿಹಾಸಜ್ಞರು ಪುರಾಣಿಕರೆಂಬ ಸಭಾ ಸಪ್ತಾಂಗ ಪರಿವೇಷ್ಟಿತರೆನಿಸಿರ್ಕುಂ. ಮತ್ತಂ ಆ ಸಭಾಮಧ್ಯಸ್ಥಿತ ದಿವ್ಯ ಸಿಂಹಾಸನದ ಇಕ್ಕೆಲದ ಓಲಗದಲ್ಲಿ ಕಕ್ಕಿರಿಗಿರಿದು ಕುಳ್ಳಿರ್ದ ಮಂತ್ರಿ ಮನ್ನೆಯ ಸಂಧಿವಿಗ್ರಹಿ ಸಾಮಂತ ಮೊದಲಾದ ಸಕಲ ನಿಯೋಗಿ ನಿಕರಂಗಳಿಂ. ೪೨೪

ಛಂದಸ್ಸು :

ಮತ್ತಂ, ಅಲ್ಲಿ: ಉಕ್ತ ಅತ್ಯುಕ್ತ ಮಧ್ಯಮ ಪ್ರತಿಷ್ಠೆ ಸುಪ್ರತಿಷ್ಠೆ ಗಾಯತ್ರಿ ಉಷ್ಣಿಕ್ ಅನುಷ್ಟುಪ್ ಬೃಹತಿ ಪಜ್ತೆ ತ್ರಿಷ್ಟುಪ್ ಜಗತಿ ಅತಿಜಗತಿ ಶಕ್ವರಿ ಅತಿಶಕ್ವರಿ ಅಷ್ಟಿ ಅತ್ಯಷ್ಟಿ ಧೃತಿ ಅತಿಧೃತಿಕೃತಿ ಪ್ರಕೃತಿ ಅತಿಕೃತಿ ವಿಕೃತಿ ಸಂಸ್ಕೃತಿ ಆಕೃತಿ ಉತ್ಕೃತಿ ಎಂಬ ಇಪ್ಪತ್ತಾರು ಛಂದಸ್ಸುಗಳನರಿದು. ೪೨೫

ಅಲಂಕಾರಗಳು :

ಸಮಾಸೋಕ್ತಿ ಪರ್ಯಾಯೋಕ್ತಿ ಆಕ್ಷೇಪ ವ್ಯಾಜಸ್ತುತಿ ಉಪಮೆಯೋಪಮೆ ಅನನ್ವಯ ಅತಿಶಯೋಕ್ತಿ ಪರಿಕರ ಅಪ್ರಸ್ತುತಪ್ರಶಂಶೆ ರೂಪಕ ಪರಿಣಾಮ ಸಂದೇಹ ಭ್ರಾಂತಿಮತ್ತ ಉಲ್ಲೇಖನ ಅಪಹ್ನವ ಉತ್ಪ್ರೇಕ್ಷೆ ಸ್ಮೃತಿಸಾಮ್ಯ ಯೋಗೀತೆ ದೀಪಕ ಪ್ರತಿವಸ್ತೂಪಮೆ ದೃಷ್ಟಾಂತ ಸಹೋಕ್ತಿ ವ್ಯತಿರೇಕ ನಿದರ್ಶನ ಶ್ಲೇಷೆ ಉಪಮೆ ವಿನೋಕ್ತಿ ವಿರೋಧ ವಿಭಾವನೆ ವಿಶೇಷೋಕ್ತಿ ವಿಷಮ ಅರ್ಥಾಂತರನ್ಯಾಸ ಉದ್ಯೋಗ ಅಧಿಕ ಅನ್ಯೋನ್ಯ ಕಾರಣಮಾಲೆ ಏಕಾವಲಿ ವ್ಯಾಘಾತ ಸೂಕ್ಷ್ಮ ಉತ್ತರ ಮಾಲಾದೀಪಕ ವಾಚ್ಯಲಿಂಗ ಅನುಮಾನ ಸಾರ ಅರ್ಥಾಪತ್ತಿ ಯಥಾಸಂಖ್ಯಾ ಪರ್ಯಾಯ ಪರಿವೃತ್ತಿ ವಿಕಲ್ಪ ಪರಿಸಂಖ್ಯೆ ಸಮುಚ್ಚಯ ಸಮಾಧಿ ಪ್ರತ್ಯಾನೀಕ ಪ್ರತೀಪ ಸಮಾನ್ಯ ಸತ್ಯಸಂಗತಿ ತದ್ಗುಣ ಅತದ್ಗುಣ ವಿಶೇಷ ಮಿಲನ ವಾಚ್ಯೋಕ್ತಿ ವಕ್ರೋಕ್ತಿ ಸ್ವಭಾವೋಕ್ತಿ ಭಾವಿಕ ಉದಾತ್ತಮೆಂಬ ಅರವತ್ತೈದು ಅಲಂಕಾರಗಳೊಡಗೂಡಿ. ೪೨೬

ಮಹಾಕಾವ್ಯ ವರ್ಣನಾದಿಗಳು :

ಪುರ ಗಿರಿ ಋತು ನಂದನ ಸೋಮೋದಯ ಸೂರ್ಯೋದಯ ಸಮುದ್ರ ಜಲಕೇಳಿ ಮಧುಪಾನಗೋಷ್ಠಿ ಸಂಭೋಗ ವಿಪ್ರಲಂಭ ವಿವಾಹ ಪುತ್ರೋತ್ಸಾಹ ಮಿತ್ರೋತ್ಸಾಹ ಮಂತ್ರ ನೃಪತಿ ದ್ಯೂತ ಮೃಗಯಾನವೆಂಬ ಹದಿನೆಂಟು ವರ್ಣನೆ ಸಹಿತಮಾಗಿ; ಶ್ಲೇಷ ಪ್ರಸಾದ ಸಮತೆ ಮಾಧುರ್ಯ ಸುಕುಮಾರತೆ ಅರ್ಥವ್ಯಕ್ತಿ ಉದಾರತ್ವ ಓಜಸ್ಸು ಕಾಂತಿ ಸಮಾಧಿಗಳೆಂಬ ದಶಗುಣ ಪ್ರಾಣವಿಡಿದು. ೪೨೭

ಕಾವ್ಯರೀತ್ಯಾದಿಗಳು :

ಗೌಡರೀತಿ ವೈದರ್ಭಿರೀತಿ ಪಾಂಚಾಲರೀತಿಯೆಂಬ ರೀತಿತ್ರಯ ಸಮೇತಮಾಗಿ; ರಸ, ಭಾವ, ಚಿತ್ರ, ಚಮತ್ಕಾರಂದೋರಿ; ಸಂಧಿ ನಾಮ ಸಮಾಸ ತದ್ಧಿತ ಆಖ್ಯಾತ ಧಾತು ಅಪಭ್ರಂಶ ಅವ್ಯಯಂಗಳೆಂಬ ಅಷ್ಟಪ್ರಕಾರಮಂ ಪ್ರಪಂಚಿಸುವ ವ್ಯಾಕರಣದೊಪ್ಪಂ ತಪ್ಪದೆ; ಅನರ್ಥಕ ಶ್ರುತಿಕಠೋರ ವ್ಯಾಹತಾರ್ಥ ಅಲಕ್ಷಣ ಸ್ವಸಂಕೇತ ಪ್ರಕ್ಲುಪಾರ್ಥ ಅಸಮ್ಮತ, ಅಪಕ್ರಮವೆಂಬ ಎಂಟು ಪದದೋಷಂ ಪೊರ್ದದೆ; ಖಂಡಿತ ವ್ಯಸ್ತಸಮಬಂಧ ಅಸಮ್ಮತ ಅಪಕ್ರಮ, ಛಂದೋನೀತಿ ಯತಿಭ್ರಷ್ಟ ದುಷ್ಟ ಅಸತ್ಕ್ರಿಯೆ ಎಂಬ ಎಂಟು ವಾಕ್ಯದೋಷಮಿಲ್ಲದೆ; ಶಬ್ದಪುನರುಕ್ತಿ ಅರ್ಥಪುನರಕ್ತಿ ಅರ್ಥಶೂನ್ಯ ವಿರುದ್ಧಾರ್ಥ ಚ್ಯುತಕ್ರಮ ವ್ಯವಹಿತ ವಿಸಂಧಿ ನೇಯಾರ್ಥಮೆಂಬ ಎಂಟು ಶಬ್ದದೋಷಂ ಸಮನಿಸದೆ; ಗದ್ಯ ಪದ್ಯ ಚಂಪುವೆಂಬ ತ್ರಿವಿಧಕಾವ್ಯ ಪ್ರಬಂಧಮಂ; ಸಂಸ್ಕೃತ ಪ್ರಾಕೃತ ಅಪಬ್ರಂಶ ಪೈಶಾಚಿಕಾದಿ ಬಾಷಾಬೇದಮಂ ಪೇಳ್ವ ಲಾಕ್ಷಣಿಕರಪ್ಪ ಕವೀಶ್ವರರಿಂ. ೪೨೮

ಗಮಕಿಗಳು :

ಮತ್ತಂ ತಾನಮಾನಂದೋರಿ ವಿಶ್ರಮಣವರಿದು ಪದನಂ ವ್ಯಕ್ತಿಗೆಯ್ದು ಕೇಳ್ವರಂ ಕಿವಿಗೊಳಿಸಿ ಮೃದು ಮಧುರ ವರ್ಣೋಚ್ಚಾರಣಂ ಮಾಳ್ಪ ಗಮಕಿಗಳಿಂ. ೪೨೯

ವಾದಿಗಳು :

ಮತ್ತಂ, ನ್ಯಾಯ ವೈಶೇಷಿಕ ಖಂಡನ ಚಿಂತಾಮಣ್ಯಾದಿ ಶಾಸ್ತ್ರ ಕೋವಿದರಪ್ಪ ವಾದಿಗಳಿಂ.

ವಾಗ್ಮಿಗಳು:

ಮತ್ತಂ ಮಧುರ ರಸಮೊಸರ್ವ ನವೀನ ವಚನ ರಚನೆಗಳಿಂ ಕೇಳ್ವರ ಕರ್ಣರಸಾಯನಮಾಗೆ ವಾಗ್ವಿಭವಂ ತೋರ್ಪ ವಾಗ್ಮಿಗಳಿಂ.

ನವರಸ ವ್ಯಾಪಾರ ಪಾರಂಗತರು :

ಬಳಿಕ, ರತಿ ಹಾಸ ಶೋಕ ಕ್ರೋಧ ಉತ್ಸಾಹ ಭಯ ಜಿಗುತ್ಸೆ ವಿಸ್ಮಯ ಶಮೆ ಎಂಬ ಕ್ರಮದಿಂ, ಶೃಂಗಾರಾದಿ ನವರಸಕ್ಕೆ ಬೀಜ ಭೂತಂಗಳಾದ ಸ್ಥಾಯಿಭಾವಂಗಳ್ಗೆ, ದಕ್ಷಿಣಾದಿ ನಾಯಕಹೃದಯದಲ್ಲಿ ಸ್ಥಾಯಿಯಾಗಿರ್ದು; ಬಳಿಕ ಸ್ವತೀಯ ಮೊದಲಾದ ನಾಯಕಿಯರೆಂಬ ಆಲಂಬನ ವಿಭಾವಂಗಳಿಂದ ಅಂಕುರಿಸಿ; ಬಳಿಕ ಇಂದು ಮಂದಾನಿಲಾದಿ ಉದ್ದೀಪನ ವಿಭಾವಂಗಳಿಂ ಪ್ರಕಟಿಸಿ; ಮೇಲೆ ಪರ ಶರೀರಗತಂಗಳಾಗಿ ಆಯಾ ರಸಕಾರ್ಯಮಪ್ಪುದರಿಂ, ರಸಾನಂತರಭಾವಿಗಳಾದ ಸ್ತಂಭ ಸ್ವೇದ ರೋಮಾಂಚ ಸ್ವರಭೇದ ಕಂಪನ ವಿವರ್ಣ ಅಶ್ರು ಪ್ರಳಯವೆಂಬ ಅಷ್ಟ ಸಾತ್ವಿಕಂಗಳಿಂ; ದರಹಸನ ಕಟಾಕ್ಷೇಕ್ಷಣ ಭ್ರೂವಿಕ್ಷೇಪಣಾದಿ ಚೇಷ್ಟಾವಿಶೇಷಂಗಳೆಂಬ ಅನುಭಾವಂಗಳಿಂ; ಮತಿ ಲಜ್ಜೆ ಆವೇಗ ಶಂಕೆ ಮರಣ ಚಪಲತೆ ಹರ್ಷ ನಿರ್ವೇಗ ದೈನ್ಯ ಸ್ಮೃತಿ ಮೋಹ ಆಲಸ್ಯ ಗರ್ವ ಶ್ರಮ ಮದ ಜಡತೆ ಜ್ಞಾನ ಸುಪ್ತಿ ನಿದ್ರೆ ಧೃತಿ ತರ್ಕ ಉನ್ಮಾದ ಬೋಧ ಆಮಯ

ಭಯ ವಿಷಾದ ಔತ್ಸುಕ್ಯ ಅಮರ್ಷ ಚಿಂತೆ ಅಸೂಯೆ ಅವಹಿತ್ಥ ಉಗ್ರ ಅಪಸ್ಮಾರವೆಂಬ ಮೂವತ್ತಮೂರು ಸಂಚಾರಿ ಭಾವಂಗಳಿಂ ಪರಿವರ್ದಿಸಿ; ಬಳಿಕ ಶೃಂಗಾರ ಹಾಸ್ಯ ಕರುಣ ರೌದ್ರ ವೀರ ಭಯಾನಕ ಬಿಭಿತ್ಸ ಅದ್ಭುತ ಶಾಂತಂಗಳೆಂಬ ನವರಸಾವಸ್ಥೆಯಂ ಪಡೆವುತ್ತಿರ್ಪವೆಂದು ಲೌಕಿಕಮಾದ ನವರಸ ವ್ಯಾಪಾರ ಪಾರಂಪಗತರಿಂ. ೪೩೦

ರತ್ಯಾತ್ಮಕ ಮನೋವೃತ್ತಿ ವೈಕಲ್ಯ :

ಬಳಿಕ, ಪರಮಾರ್ಥದಲ್ಲಿಯಾದೊಡೆ, ರತಿಯೊಂದೇ ಆಯಾಯ ಉಪಾಧಿ ವಿಷಯಭೇದದಿಂದ ಆಯಾಯ ಸ್ಥಾಯಿಭಾವಾಂತರ ಸಂಜ್ಞೆಯಂ ಪಡೆದು, ಆಯಾಯ ವಿಭಾವ ಅನುಭಾವ ಸಾತ್ವಿಕ ಸಂಚಾರಿ ಭಾವಂಗಳಿಂದ ಆಯಾಯ ಶೃಂಗಾರಾದಿ ರಸ ಸಂಜ್ಞೆಯಂ ಪಡೆವುತ್ತಿರ್ದುದು, ಅದೆಂತೆಂದೊಡೆ: ರತಿಯೊಂದೇ ಕಾಂತಾದಿಗಳ ವಿಷಯಮಾಗಿ ರಾಗಮಯವಹತನದಿಂ ಶೃಂಗಾರಸಂಜ್ಞೆಯಂ; ಪುತ್ರಾದಿಗಳ ವಿಷಯಮಾಗಿ ಭಕ್ತಿ ವಾತ್ಸಲ್ಯನಾಮಧೇಯಮಂ; ಮಿತ್ರಾದಿಗಳ ವಿಷಯಮಾಗಿ ಸ್ನೇಹನಾಮಮಂ; ಬಂಧುವಿಷಯಮಾಗಿ ಪ್ರೇಮಾಹ್ವಯಮಂ; ನೃಪ ಗುರು ದೇವತಾ ವಿಷಯಮಾಗಿ ಭಕ್ತಿವಾಚಕಮಂ; ಆತ್ಮ ವಿಷಯಮಾಗಿ ಪರಮ ಪ್ರೀತಿವೆಸರಂ; ಅಪ್ರಾಪ್ತವಸ್ತು ವಿಷಯಮಾಗಿ ಇಚ್ಛಾಭಿದಾನಮಂ ಪಡೆದು, ಬಳಿಕ, ಹಸಿತವ್ಯ ಶೋಚ್ಯ ದ್ವೇಷ್ಯ ಪ್ರತಿಭಟ ಭೀಷಣ ಜಿಗುಪ್ಸನೀಯ ಆಶ್ಚರ್ಯ, ಸೌಮ್ಯಾಸ್ಪಂದಗಳೆಂಬ ಎಂಟು ಆಲಂಬನ ವಿಭಾವಂಗಳಿಂ; ಕ್ರಮದಿಂ, ಹಾಸ್ಯ ಕರುಣ ರೌದ್ರ ವೀರ ಭಯಾನಕ ಜಿಗುಪ್ಸೆ ವಿಸ್ಮಯ ಶಾಂತಂಗಳೆಂಬ ಅಷ್ಟರಸಂಗಳಹವೆಂದು ಅಲೌಕಿಕಮಾದ ನವರಸಸ್ಥಿತಿ ವಿಪಶ್ಚಿತರಿಂ. ೪೩೧

ನಾಯಿಕಾದಿ ಭೇದಗಳು :

ಬಳಿಕ, ಧಿರೋದಾತ್ತ ಧೀರೋದ್ಧಿತ ಧೀರಲಲಿತ ಧೀರಶಂತರೆಂಬ ಚತುರ್ವಿಧ ಮಹಾನಾಯಕರಿಂ; ಅನುಕೂಲ ದಕ್ಷ ಶಠ ದುಷ್ಟರೆಂಬ ನಾಲ್ಕುತೆರದ ಶೃಂಗಾರನಾಯಕರಿಂ; ಶಶ ವೃಷ ಹಯರೆಂಬ ಪ್ರಮಾಣಪುರುಷರಿಂ; ಮಂದವೇಗ ಮಧ್ಯವೇಗ ಚಂಡವೇಗರೆಂಬ ರತಿಪರಿಣತರಿಂ; ಬಳಿಕ ವಿಟ ವಿದೂಷಕ ಪೀಠಮರ್ದನ ನಾಗರಿಕರೆಂಬ ಚತುರ್ವಿಧ ಭೋಗ ಸಖರಿಂ. ೪೩೨

ನಾಯಕಾದಿಗಳು :

ಬಳಿಕ, ಸ್ವಕೀಯ ಪರಕೀಯ ಪಣ್ಯೆಯರೆಂಬ ತ್ರಿವಿಧನಾಯಕಿಯರಿಂ; ಜೇಷ್ಠೆ ಕನಿಷ್ಠೆಯರೆಂಬ ದ್ವಿವಿಧ ಗುಣವಿಶೇಷ ವನಿತೆಯರಿಂ; ಎಂಟು ಒಂಭತ್ತು ಹನ್ನೆರಡು ಇಪ್ಪತ್ತು ಮೂವತ್ತು ನಾಲ್ವತ್ತು ಐವತ್ತು ವರ್ಷಾನುಕ್ರಮದಿಂ ಮೊಳೆಜವ್ವನ ಎಳೆಜವ್ವನ ನೆರೆಜವ್ವನ ತುಂಬುಜ್ವನ ಮೀಟುಜಪ್ಪನ ಬಲುಜವ್ವನ ಬೀಡುಜವ್ವನಂಗಳಿಂ; ಗೌರಿ ಕನ್ನಿಕೆ ಬಾಲೆ ಮುಗ್ಧೆ ವಿದಗ್ಧೆ ಪ್ರಗಲ್ಭೆ, ಇಚ್ಚೆಗಾರ್ತಿಯರೆಂದು ಪೆರ್ಸಡೆದ ಸಪ್ತವಯೋವಿಶಿಷ್ಟ ಕಾಂತೆಯರಿಂ; ಶ್ಲೇಧೆ ಮಧ್ಯೆ ಘನೆಯರೆಂಬ ಆಕಾರಯುಕ್ತ ಸೀಮಂತಿನಿಯರಿಂ; ಉತ್ತಮೆ ಮಧ್ಯಮೆ ಜಘನೆಯರೆಂಬ ತ್ರಿವಿಧಕೋಪ ಪ್ರಮಾದ ಲಕ್ಷಣ ಲಕ್ಷಿತ ಲಲನೆಯರಿಂ;

ಧೀರೆ ಅಧೀರೆಯರೆಂಬ ದ್ವಿವಿಧ ಪ್ರೌಢಾಂಗನೆಯರಿಂ, ಕನ್ಯೆ ಊಢೆಯರೆಂಬ ಎರಡು ಪ್ರಕಾರದ ಪರಕೀಯಭೇದ ನಾರಿಯರಿಂ. ೪೩೩

ನಾಯಿಕಾ ವಿಶೇಷಗಳು :

ಸ್ವಾಧೀನಪತಿಕೆ ಖಂಡಿತೆ ವಿಪ್ರಲಂಭೆ ಅಭಿಸಾರಿಕೆ ವಾಸಸಜ್ಜಿಕೆ ಗತಭರ್ತಾರಿಕೆ ಅಭಿಸಂಧಿತೆ ಸಮತ್ಯೆಯರೆಂಬ ಎಂಟುತೆರದ ಅವಸ್ಥಾಕಾಮಿನಿಯರಿಂ; ಮೋಷ್ಟಾಯಿತೆ ಬಿಬ್ಬೋಕೆ ಲಲಿತೆ ಲೀಲೆ ಕಲಕಿಂಚಿತೆ ವಿಚ್ಚಿತೆ ವಿಳಾಸೆ ವಿಹೃತೆ ವಿಭ್ರಮೆ ಕುಟ್ಟಿಮತೆಯರೆಂಬ ದಶಕೇಳಿಭಾವ ವಿಳಾಸಿನಿಯರಿಂ; ಹಸ್ತಿನಿ ಶಂಕಿನಿ ಚಿತ್ತಿನಿ ಪದ್ಮಿನಿಯರೆಂಬ ನಾಲ್ಕು ಜಾತಕ ಸ್ತ್ರೀಯರಿಂ; ಹರಿಣಿ ಅಶ್ವೆ ಇಭಕೆಯರೆಂಬ ಪ್ರಮಾಣ ಪರಿಮಿತ ಪ್ರಮದೆಯರಿಂ; ಮಂದವೇಗಿ ಮಧ್ಯವೇಗಿ ಚಂಡವೇಗಿಯರೆಂಬ ರತಿಭೇದ ಕಾಂತೆಯರಿಂ; ದೇವಸತ್ವ ಯಕ್ಷಸತ್ವ ಗಂಧರ್ವಸತ್ವ ನರಸತ್ವ ನಾಗಸತ್ವ ಕಾಕಸತ್ವ ವಾನರಸತ್ವ ಮುನಿಸತ್ವ ಪಿಶಾಚಸತ್ವ ರಾಕ್ಷಸತ್ವ ಕಿನ್ನರಸತ್ವ ಖರಸತ್ವಮೆಂಬ ದ್ವಾದಶ ಸತ್ವಸತಿಯರಿಂ. ೪೩೪

ಸಖೀಪ್ರಮುಖರು :

ಬಳಿಕ, ಸಾರಿಕೆ ಚತುರಿಕೆ ಸಹಸಂಚಾರಿಕೆ ದೂತಿಕೆಯರಿಂಬ ಚತುರ್ವಿಧ ಸಖಿಯರಿಂ; ಅಭಿಮಾನಪ್ರೀತಿ ವಿಭವಪ್ರೀತಿ ಸದೃಶಪ್ರೀತಿ ವಿಷಯಪ್ರೀತಿಯೆಂಬನಾಲ್ಕು ತೆರೆದ ಪ್ರೀತಿತತ್ಪರರಿಂ; ಲಜ್ಜಾಮೋಹ ವಿಭವಮೋಹ ಕರುಣಮೋಹ ನಿಜಮೋಹವೆಂಬ ಮೋಹಚತುಷ್ಟಯ ವಿಶಿಷ್ಟರಿಂ; ಕೂರ್ಮಮೋಹ ಮತ್ಸ್ಯಮೋಹ ಮೃಗಮೋಹಮೆಂಬ ಮಧ್ಯ ಅಧಮ ಮೋಹಮಯರಿಂ; ಬಳಿಕ, ಬೊಟ್ಟು ಅಡಿ ಪರಡು ಮೊಳಕಾಲು ಜಘನ ಮೊಕ್ಕಳು ಎದೆ ಕುಚ ಕಕ್ಷ ಕೊರಲು ಕದಪು ತುಟಿ ಕಣ್ಣು ಪಣೆ ನೆತ್ತಿಗಳೆಂಬ ಪಂಚದಶ ಕಲಾಸ್ಥಾನ ಶುಕ್ಲಪಕ್ಷಾದಿ ತಿಥಿಯೋಗ ಕ್ರಮ ವಿಚಕ್ಷಣರಿಂ. ೪೩೫

ಆಲಿಂಗನ ಚುಂಬನಾದಿಗಳು :

ಪುಷ್ಕರ ವಿವಿಧಕ ದೃಷ್ಟಕ ಪೀಡನ ವೃಕ್ಷಾರೋಹಣ ಲತಾವೇಷ್ಟನ ತಿಲತಂಡುಲಾಖ್ಯ ಕ್ಷೀರನೀರ ಊರೂಪಗೂಡ ಜಘನೋಪಗೂಡ ಸ್ತನಾಶ್ಲೇಷೆ ಲಲಾಟಕಮೆಂಬ ದ್ವಾದಶಾಲಿಂಗಿಗಳಿಂ; ನಿಮಿತ್ತಿಕ ಸದ್ವಟಿಕ ಸ್ಫುರಿತಕ ಭ್ರಾಂತಕ ತಿರ್ಯಕ್ಕು ಅತಿತೃಷ್ಟಕ ಉತ್ತರ ಸಂಘಟಕ ಜಿಹ್ವಾಮೇಳನ ಪ್ರತಿಬೋಧ ಜಿಹ್ವಿಕೆ ಮಾದು ಜಿಹ್ವಾಯೋಗಮೆಂಬ ದ್ವಾದಶಚುಂಬನ ಸಂಭ್ರಮಗಳಿಂ. ೪೩೬

ದಂತಕ್ಷತ ನಖಕ್ಷತಾದಿಗಳು :

ಗೋಪಗೂಢ ಅಂಕುಲಯಾನಕ ಪ್ರವಾಳಮಣಿ ಮಣಿಮಾಲೆ ಖಂಡಾಭ್ರಕ ಮಂಡಲಾಕೃತಿ ಕ್ರೋಡಚರ್ವಿತ ವರಾಹಚರ್ವಿತಮೆಂಬ ಅಷ್ಟವಿಧವಾದ ನಖಕ್ಷತಾ ಲಾಕ್ಷಣಿಕರಿಂ; ಪಂಚನಖಯೋಗ ದ್ವಂದ್ವಯೋಗ ಅರ್ಧಚಂದ್ರಕ ಮಂಡಲಕ ಮಯೂರಪಥ ಶಶಪ್ಲುತ ಉತ್ಪಳಮೆಂಬ ಸಪ್ತವಿಧ ನಖರೋಪಹತಿ ವಿಹಿತರಿಂ; ಮದನಾಂದೋಳನ ಮದನಛತ್ರ ಪೂರ್ಣಚಂದ್ರಾದಿ ನಾಡಿ ಮರ್ಮಜ್ಞರಿಂ. ೪೩೭

ರತಿ ಚತುರರು :

ಶಯ್ಯಾತೋರು ಕರಣ, ವಿಕೃತೋರುಕರಣ, ತಿರ್ಯಕ್ಕರಣ ಸ್ಥಿರೀಕರಣ ಉದಾನಕಾದಿ ಅನೇಕ ಕರಣಪರಿಣತರಿಂ; ಪ್ರಚ್ಛನ್ನಸಂಭೋಗ ಪ್ರಕಾಶಸಂಭೋಗವೆಂಬ ರತಿಕಲಕುಶಲರಿಂ; ಆದಿ ಮಧ್ಯ ಅಂತ್ಯಮೆಂಬ ರತಿತಂತ್ರ ಚಾತುರ್ಯರಿಂ; ಪೂರ್ವಾನುರಾಗ ಮಾನಾಖ್ಯ ಪ್ರವಾಸ ಕರುಣಾತ್ಮಕಮೆಂಬ ವಿಯೋಗ ಚತುಷ್ಟಯ ವಿಶಿಷ್ಟರಿಂ; ಪ್ರಚ್ಛನ್ನ ಪ್ರಕಾಶ ವಿಪ್ರಲಂಭವಿದಗ್ಧರಿಂ; ಕಾರ್ಶ್ಯ ಜಾಗರಣ ಸಂತಾಪನಮೆಂಬ ಅವಸ್ಥಾತ್ರಯ ಪರಿಶ್ಕಕರಿಂ; ಉನ್ಮದನ ಮದನ ಮೋಹನ ಸಂತಾಪನ ವಶೀಕರಣಮೆಂಬ ಪಂಚಮಂತ್ರಬಾಣ ಪ್ರತಾಪ ಪ್ರವೀಣರಿಂ; ಅಶೋಕೆ ಅರವಿಂದ ಚೂತ ಮಲ್ಲಿಗೆ ನೈದಿಲೆಯೆಂಬ ಪಂಚಕುಸುಮಾಸ್ತ್ರ ಕೋವಿದರಿಂ. ೪೩೮

ದಶ ಕಾಮಾವಸ್ಥೆಗಳು :

ಬಳಿಕ ಪಂಚಬಾಣಂಗಳಿಗೆ ಲಕ್ಷ್ಯಸ್ಥಾಣಮಾದ ಮಸ್ತಕ ಮುಖ ವಕ್ಷ ಪೃಷ್ಠ ಹೃದಯವೆಂಬ ಪಂಚ ಅವಯವಂಗಳಿಂ; ಕ್ರಮದಿಂದ ಒಂದಕ್ಕೆ ಎರಡೆರಡಾಗಿ ಪುಟ್ಟುವ ಅಭಿಲಾಶೆ ಚಿಂತೆ ಸಂಸ್ಕೃತಿ ವಿಭುಗುಣನುಡಿ ಸಂತಾಪನ ಕ್ರಿಯಾದ್ವೇಷ ವಿಕಳ ಮೌನ ಮೂರ್ಛೆ ಮರಣಮೆಂಬ ದಶಾವಸ್ಥಾ ವಿಚಾರಪರರಿಂ. ೪೩೯

ಸಂಗೀತ ವಿಚಾರ

ಸ್ವರೋತ್ಪತ್ತ್ಯಾದಿ ಕ್ರಮ:

ಅನಂತರದಲ್ಲಿ ಅಕರ ಉಕಾರ ಮಕಾರವೆಂಬ ಮೂರು ಬೀಜಾಕ್ಷರಗಳು. ಅಕಾರವೇ ರಜೋಗುಣಾತ್ಮಕ ಬ್ರಹ್ಮನು, ಉಕಾರವೆ ಸತ್ವಗುಣಾತ್ಮಕ ವಿಷ್ಣುವು. ಮಕಾರವೇ ತಮೋಗುಣಾತ್ಮಕ ರುದ್ರನು. ಮತ್ತಂ ಆ ಅಕಾರವೆ ವಾಮ ನಾಸಾಪುಟದ ಈಡೆಯೆಂಬ ಚಂದ್ರನು. ಉಕಾರವೇ ದಕ್ಷಿಣ ನಸಾಪುಟದ ಪಿಂಗಳೆಯೆಂಬ ಸೂಯನು. ಮಕಾರವೇ ತನ್ಮಧ್ಯದ ಸುಷುಮ್ನೆಯಂಬ ಅಗ್ನಿಯು. ಬಳಿಕ ಅಕ್ಷರತ್ರಯದಿ ಒಂದುಗೂಟದಿಂ ಸಕಲ ದೇವತಾ ಮಂತ್ರಾತ್ಮಕಮಾದ ಓಂಕಾರವಾಯಿತ್ತು. ೪೪೦

ದಶವಿಧನಾದಗಳು :

ಮತ್ತಂ ಆ ಓಂಕಾರಮೆಂಬ ನಾದದಿಂ, ಸ್ವರ ನಿರ್ಘೋಷ ನಿರ್ಣಯಧ್ವನಿ ವಾಸಧ್ವನಿ ಕಹಳಧ್ವನಿ ಶಂಖಧ್ವನಿ ಮೇಘಧ್ವನಿ ಮೃದಂಗಧ್ವನಿ ಭೇರಿಧ್ವನಿ ಮಂದ್ರ ಧ್ವನಿಯೆಂಬ ದಶನಾದಂಗಳು ಆದವು. ಅವರಲ್ಲಿ ಮೊದಲ ಸ್ವರವೇ ನಾಭಿ ಉರ ಕಂಠಮೆಂಬ ತ್ರಿಸ್ಥಾನದಿಂ ಪುಟ್ಟುಗುಂ, ಅದು ಜೀವನಿಷ್ಟಮಾದ ಮಾರುತೋದ್ಗತಿಯಿಂದ ಅಭಿವ್ಯಕ್ತಮಾಗಿ, ಹೃದಯ ಕಂಠ ಶಿರಸ್ಸು ಎಂಬ ಸ್ಥಾನತ್ರಯದಲ್ಲಿ ಕ್ರಮದಿಂ ಮಧುರ ಮಂದ್ರ ತಾರವೆಂಬ ತ್ರಿವಿಧಸ್ವರ ಭೇದಾತ್ಮಕತ್ವಮಂ ಪಡೆಯಿತ್ತು. ಆ ಸ್ವರಗಳಿಂದವೇ ಷಡ್ಜಾದಿ ಸಪ್ತಸ್ವರಂಗಳಾದವೆಂದು ಪರಿಭಾವಿಸಿ. ೪೪೧

ಸಪ್ತ ಸ್ವರೋತ್ಪತ್ತಿ ಸ್ಥಾನ ಮುಂತಾದ ಗಾನ ಶಾಸ್ತ್ರ :

ಬಳಿಕ ಸಪ್ತಸ್ವರಂಗಳ ಉತ್ತಪತ್ತಿ ಕ್ರಮದಲ್ಲಿ ಪರಶಿವನ ಈಶ್ವರ ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ ನಿರಂಗಮೆಂಬ ಏಳುಮುಖ ಕ್ರಮವಿಡಿದು ಷಡ್ಜ ಋಷಭ ಗಾಂಧಾರ ಮಧ್ಯಮ ಪಂಚಮ ದೈವತ ನಿಷಾದಮೆಂಬ ಸಪ್ತಸ್ವರಂಗಳಾದವು. ಬಳಿಕ ಕಂಠ ಶಿರಸ್ಸು ನಾಸಿಕ ಹೃದಯ ಮುಖ ತಾಲುಗೆ ಪೂರ್ವಾಂಗಮೆಂಬವೆ ಪರಿವಿಡಿದು ಆ ಷಡ್ಜಾದಿ ಸ್ವರ ಜನನ ಸ್ಥಾನಂಗಳು: ೪೪೨

ಸ್ವರ ಕಾಲ ಧ್ವನಿ ನಕ್ಷತ್ರಾದಿಗಳು:

ಉದಯ ಮಧ್ಯಾಹ್ನ ಅಪರಾಹ್ನ ಅಸ್ತಮಯ ಪೂರ್ವರಾತ್ರ ಮಧ್ಯರಾತ್ರ ನಿಶಾವಸಾನವೆಂಬವೆ ತರುವಾಯಿಂದ ಷಡ್ಜಾದಿ ಸ್ವರೋತ್ಪತ್ತಿ ಕಾಲಂಗಳು. ಮಯೂರಧ್ವನಿ ವೃಷಭಧ್ವನಿ ಅಜಧ್ವನಿ ಸಿಂಹಧ್ವನಿ ಕೋಕಧ್ವನಿ ಜಾತ್ಯಶ್ವಧ್ವನಿ ಮದಗಜಧ್ವನಿ ಎಂಬವೆ ಪರಿಪಾಟಿಯಿಂದ ಅಷಡ್ಜಾದಿ ಸ್ವರಭೇದಂಗಳು; ಆರ್ದ್ರ ಪೂರ್ವಾಷಾಡ ರೇವತಿ ವಿಶಾಖ ಮೂಲ ಅನೂರಾಧ ಮಖ ಎಂಬವೆ ಪರಿಕ್ರಮದಿಂದ ಆ ಷಡ್ಜಾಧಿ ಸ್ವರಜನನ ನಕ್ಷತ್ರಂಗಳೂ; ಅಮಾವಾಸ್ಯೆ ತ್ರಯೋದಶಿ ಪಂಚಮಿ ಅಷ್ಟಮಿ ಸಪ್ತಮಿ ತದಿಗೆ ನವಮಿ ಎಂಬವೆ ತರುವಾಯಿಂದ ಷಡ್ಜಾಬಿ ಸ್ವರತಿಥಿಗಳು; ಆಂಗೀರಸ ಭೃಗು ಕಶ್ಯಪ ವಶಿಷ್ಠ ನಾರದ ಅತ್ರಿ ಕಪಿಲರೆಂಬವರೆ ಕ್ರಮದಿಂ ಷಡ್ಜಾದಿ ಸ್ವರ ಋಷಿಗಳು; ಚಾಮುಂಡಿ ಬ್ರಾಹ್ಮಿ ಮಾಹೇಶ್ವರಿ ಕೌಮಾರಿ ವೈಷ್ಣವಿ ವಾರಾಹಿ ಮಾಹೇಂದ್ರಿ ಎಂಬವರೆ ಕ್ರಮದಿಂದ ಆ ಷಡ್ಜಾದಿ ಸ್ವರದದೇವತೆಗಳು; ಅರುಣಾಬ್ಜ ಕಪಿಲ ಹೇಮ ನೀಲೋಲ್ಪಲ ಕೃಷ್ಣ ಶ್ವೇತ ಬಹುವರ್ಣವೆಂಬವೆ ಅನುಕ್ರಮದಿಂ ಷಡ್ಜಾದಿ ಸ್ವರ ವರ್ಣಂಗಳು; ಷಡ್ಜ ಮಧ್ಯಮ ಪಂಚಮವೆಂಬವು ಮೂರು ಬ್ರಾಹ್ಮಣಜಾತಿ, ಋಷಭ ದೈವತವೆಂಬೆರಡು ಕ್ಷತ್ರಿಯ ಜಾತಿ, ಗಾಂಧಾರ ನಿಷಾದವೆಂಬೆರಡು ವೈಶ್ಯಜಾತಿಗಳು. ಶೃಂಗಾರ ಹಾಸ್ಯ ಕರುಣ ರೌದ್ರ ವೀರ ಭಯಾನಕ ಭೀಭತ್ಸಗಳೆಂಬವೆ ಕ್ರಮದಿಂ ಷಡ್ಜಾದಿ ರಸಂಗಳು, ಆಯುರ್ವೃದ್ಧಿ ಸೌಭಾಗ್ಯ ಶೋಭನ ಸುವರ್ಣಲಾಭ ಪಾಪಕ್ಷಯ ಐಶ್ವರ್ಯ ಕಾರ್ಯಸಿದ್ಧಿಗಳೆಂಬವೆ ಪರಿವಿಡಿದ ಆ ಷಡ್ಜಾದಿ ಸ್ವರಫಲಗಂಗಳೆಂದು ನಿಶ್ಚೈಸಿ. ೪೪೩

ಸ್ವರದಿಂ ಶ್ರುತಿಸಮುತ್ಪತ್ತಿ :

ಬಳಿಕ ಗಹ್ವತಿ ನಿಷ್ಕಳೆ ಗೂಢ ಸರಳೆಯೆಂಬ ನಾಲ್ಕು ಶ್ರುತಿಗಳೆ ಷಡ್ಜಸ್ವರದಿಂದ ಹುಟ್ಟಿದವು; ಮಧುರೆ ಮಾವಳಿ ಏಕಾಕ್ಷರಿ ಎಂಬ ಮೂರು ಶ್ರುತಿಗಳೆ ಋಷಭಸ್ವರದಿಂದ ಜನಿಸಿದವು; ಭೃಂಗಜಾತಿ ಪರಂಗೀತೆ ಎಂಬೆರಡು ಶ್ರುತಿಗಳೆ ಗಾಂಧಾರ ಸ್ವರದಿಂದ ಉದಯಿಸಿದವು; ರಂಜಕಿ ಪೂರ್ಣೆ ಅಲಂಕಾರಿಣಿ ವಾಂಸೆಯೆಂಬ ನಾಲ್ಕು ಶ್ರುತಿಗಳೆ ಮಧ್ಯಮ ಸ್ವರದಿಂದಾದವು; ರೇಣುಕ ಲಲಿತೆ ವಸ್ತುವಾಂಸೆ ಸ್ವರವಾಂಸೆ ಎಂಬ ನಾಲ್ಕು ಶ್ರುತಿಗಳೆ ಪಂಚಮ ಸ್ವರದಿಂದ ಒಗೆದವು; ಭಾಷಾಂಗಿ ವರ್ತಕಿ ಸಂಪೂರ್ಣೆ ಎಂಬ ಮೂರು ಶ್ರುತಿಗಳೆ ದೈವತ ಸ್ವರದಿಂದ ಜನಿಸಿದವು; ಪ್ರಸನ್ನ ಸರ್ವವ್ಯಾಪಿಯೆಂಬೆರಡು ಶ್ರುತಿಗಳೆ ನಿಷಾದ ಸ್ವರದಿಂದ ಉತ್ಪತ್ತಿಯಾದವು. ಇಂತು ಸಪ್ತ ಸ್ವರದಿಂದ ಇಪ್ಪತ್ತೆರಡು ಶ್ರುತಿಗಳಾದವು ಎಂದು ಪ್ರಮಾಣಿಸಿ. ೪೪೪

ಶ್ರುತಿಗಮಕ ದೇಶೀಗಮಕಂಗಳು :

ಬಳಿಕ ಸ್ಫರಿತ ಪ್ರಮಳಿತ ದೀರ್ಘ ಲಲಿತೋಚ್ಚದ ಗಿರುಸ್ತ್ರಿತ ಉಲ್ಲಾಸಿತ ಉಲೋಸಿತ ಸೂಕ್ಷ್ಮಿತ ದೀರ್ಘಿತ ದೀರ್ಘಲೋಲಿತ ಲೀಲೋಚ್ಚರಿತ ಲೀಲೋದೀರ್ಘ ದೀರ್ಘಲಾಲಿತ ಪ್ರಸ್ತುತ ಕಾಂದಿತ ಊರ್ಜಿತ ಕ್ಷಿಪ್ತ ಹತ ಅಕ್ಷಿಪ್ತ ಸಮುಲ್ಲಾಸಿತ ಕೋಮನವೆಂಬ ಇಪ್ಪತ್ತೆರಡು ಶ್ರುತಿ ಗಮಕಂಗಳು. ಕಂಪಿತ ಸ್ಫುರಿತ ಕಲಿನ ತ್ರಿಭಿನ್ನ ಸಪ್ತದ ಆಂದೋಳಿತ ಆಹತವೆಂಬವೇಳೂ ದೇಸೀ ಗಮಕಂಗಳೆಂದು ಬಗೆದು. ೪೪೫

ರಾಗೋತ್ಪತ್ತಿ ಲಕ್ಷಣ ಮತ್ತು ಗ್ರಾಮಾದಿಗಳು :

ಬಳಿಕ ಇಂತು ಪೇಳ್ದ ಶ್ರುತಿ ಗಮಕಂಗಳಿಂ ಪುಟ್ಟಿದ ಗೀತಮಾದೊಡೆ: ಸ್ವರ ಸುಸ್ವರ ಮಧುರ ಅಕ್ಷರ ಅಲಂಕಾರವೆಂಬ ಆರು ಲಕ್ಷಣಂಗಳನುಳ್ಳುದಾಗಿಹುದು. ಆ ರಾಗೋತ್ಪತ್ತಿಗೆ ಷಡ್ಜ ಗ್ರಾಮ ಮಧ್ಯಗ್ರಾಮ ಗಾಂಧಾರಗ್ರಾಮಮೆಂಬ ಗ್ರಾಮತ್ರಯಂಗಳುಂಟು ಅಲ್ಲಿ ಗಾಂಧಾರಗ್ರಾಮವೆ ದೇವಲೋಕದಲ್ಲಿಯೇ ವರ್ತಿಸೂದು. ಉಳಿದೆರಡು ಗ್ರಾಮವೆ ಮರ್ತ್ಯಲೋಕದಲ್ಲಿ ವರ್ತಿಸುತ್ತಿಹುದು. ಅಲ್ಲಿ ದೈವತಿ ನಿಷಾದಿನಿ ಷಡ್ಜ ಗ್ರಾಮದಿಂದಾದ ರಾಗಂಗಳು. ಗಾಂಧಾರಿ ರಕ್ತಗಾಂಧಾರಿ ಪಂಚಾಮೇಂದ್ರಿ ನಂದಯಂತಿ ಕರ್ಮವ್ಯಭಿಚಾರಿ ಕೌಶಿಕೆ ಎಂಬ ಹತ್ತು ಮಧ್ಯಮಗ್ರಾಮದಿಂದಾದ ರಾಗಂಗಳು ಅಂತು ಗ್ರಾಮದ್ವಯದಿಂ ಹದಿನೈದು ರಾಗಂ ಪುಟ್ಟಿದವೆಂದು ಪತಿಕರಿಸಿ. ೪೪೬

ರಾಗಜಾತಿಗಳು :

ಬಳಿಕ, ಶುದ್ಧ ಭಿನ್ನ ಗೌಡ ಅಷ್ಟಸಾಧಾರಣ ಸಪ್ತಸಾಧಾರಣ ಷಟ್‌ಸ್ವರವೆಂಬ ಆರು ಜಾತಿಗಳು ಅವರಲ್ಲಿ: ಷಡ್ಜಗ್ರಾಮ ಮಧ್ಯಮಗ್ರಾಮ ಗೌಡ ಪಂಚಮ ಕೌಶಿಕೆ ಸಾಧಾರಣ ಮಾಳವ ಕೌಶಿಕ ಎಂಬ ಆರು ಶುದ್ಧ ಜಾತಿಯಿಂದಾದ ರಾಗಂಗಳು : ಭಿನ್ನಷಡ್ಜ ಭಿನ್ನತಾನ ಭಿನ್ನಕೌಶಿಕೆ ಮಧ್ಯಮ ಭಿನ್ನಮೆಂಬ ನಾಲ್ಕು ಭಿನ್ನಜಾತಿಯಿಂದಾದ ರಾಗಂಗಳು; ಗೌಡಪಂಚಮ ಗೌಡಕೌಶಿಕೆ ಗೌಡಮಧ್ಯಮವೆಂಬ ಮೂರು ಗೌಡಜಾತಿಯಿಂದಾದ ರಾಗಂಗಳು; ಷಡಾರ ಡಕ್ಕಾರಾಗ ಮಾಳವಿ ಪಂಚಮಮಾಳವಿ ಕೌಶಿಕೆ ಡಕ್ಕಕೌಶಿಕೆ ಸೌವೀರ ಹಿಂದೋಳವೆಂಬ ಎಂಟು ಅಷ್ಟಸಾಧಾರಣದಿಂದಾ ರಾಗಂಗಳು ; ನರ್ತಕಿ ಕಕುಂಭ ಷಡ್ಜಕೌಶಿಕೆ ಭ್ರಮಾಳ ಪಂಚಭ್ರಮಾಳ ಪಂಚಮಗಾಂಧಾರ ರೂಪಸಾಧಾರಣಮೆಂಬ ಏಳು ಸಪ್ತಸಾಧಾರಣ ಜಾತಿಯಿಂದಾದ ರಾಗಂಗಳು; ಠಕ್ಕೆ ಸೈಂಧವಿ ಪಂಚಮ ಷಡಾವ ದೇವಗಿಪ್ತ ಗಾಂಧಾರಗುಪ್ತ, ಕೌಟಿಕಗುಪ್ತ ಉಪಾಂಗಮೆಂಬ ಎಂಟು ಷಟ್ ಸ್ವರಜಾತಿಯಿಂದಾದ ರಾಗಂಗಳು. ಇಂತು ಆರು ಜಾತಿಯಿಂ ಮೂವತ್ತಾರಿ ರಾಗಂಗಳು ಉದಿಸಿದವೆಂದು ವಿಧಿಸಿ. ೪೪೭

ರಾಗಾಂಗಗಳು :

ಬಳಿಕ ರಾಗಾಂಗ ಭಾಷಾಂಗ ಕ್ರಿಯಾಂಗ ಉಪಾಂಗಮೆಂಬ ನಾಲ್ಕು ಆಂಗಗಳು, ಅದರಲ್ಲಿ :

೧.	ಮಧುಮಾಧವಿ	ಶಂಕರಾಭರಣ	ಹಿಂದೋಳ	ಬಂಗಾಳ	ಗುಂಡಕ್ರಿ
	ಶ್ರೀರಾಗ	ಸಾಳಗಿ	ಅಭ್ರಪಂಚಮೆ	ದಿವಿ	ಘಂಟಾರಾಗ
	ಗುಜ್ಜರಿ	ಸೋಮರಾಗ	ಧನ್ಯಾಸಿ	ದೇಶಿ	ದೇಶಾಕ್ಷಿ
	ಮಾಳವಶ್ರೀ	ವರಾಳಿ	ನಾರವರಾಳಿ	ನಾಗದೀವಿ	ಕರ್ನಾಟಕ

ವೆಂಬ ಇಪ್ಪತ್ತು ರಾಗಾಂಗದಿಂದಾದ ರಾಗಂಗಳು.

೨.	ಕೌಶಿಕೆ	ವೇಳಾವಳಿ	ಶುದ್ಧಾವಳಿ	ಕಾಂಬೋದಿ	ನಾಟಿ
	ಸೋಹರಿ	ಲಲಿತೆ	ಅಂದೋಳಿ	ಗೌಡಿ	ಸೈಂಧವಿ
	ನಾಗಧ್ವನಿ	ಆಹರಿ	ತ್ರಾವಳಿ	ಶುದ್ಧಾಹರಿ	ಕಾಂಬೋಜಿ
	ಶ್ರೀಕಂಠ	ಬೃಹಸ್ಪತಿ	ದಕ್ಷಿಣಾದಿತ್ಯ	ದೊಂಬಾಕ್ರಿ	ಗದಾಷ್ಟ್ರ
	ಪೌರಾಣಿ	ಭಿನ್ನಪೌರಾಣಿ	ಚಮ್ರಾಳಿ	ಮಧುಕರಿ	ಕಾಳಿಂದಿ
	ಪುಳಿಂದಿ	ತರಂಗಿ	ಮೇಘರಂಜಿ	ಕುರಂಜಿ	ಶುದ್ಧವಾಹಿನಿ
	ಪ್ರಥಮ	ಮಂಜರಿ	ನಟನಾರಾಯಣಿ	ಫಳಮಂಜರಿ	ಸಯಶೋಧರೆ

ಎಂಬ ಮೂವತ್ತನಾಲ್ಕು ಭಾಷಾಂಗದಿಂದಾದ ರಾಗಂಗಳು.

೩.	ನೀಲೋತ್ಪಲಿನಿ	ಏಕಚ್ಛವಿ	ಜೋಹಂ	ಉತ್ಪಳಿನಿ	ಕನರಿಕೆ
	ಗೀತೆ	ರಾಯೆ	ತರಂಗಿಣಿ	ಗಾಂಧಾರಿ	ಗೊಲ್ಲಿ
	ರಕ್ಕಸಿ	ನಾದೋತ್ತರಿ	ವಸಂತ	ಭೈರವಿ	ಸಾಳಂಗ
	ಗಂಧಿಕಾಂಬೋದಿ	ಸಿಂಹಾವಳಿ	ಕಾಮೋದಿ	ದೇವಾಳ	ನಾದತ್ತರಿ
	ವಸಂತ ಬಂಗಾಳ	ಉಪಾಂಗ			

ಎಂಬ ಇಪ್ಪತ್ತೆರಡು ಕ್ರಿಯಾಂಗದಿಂದಾದ ರಾಗಂಗಳು

೪. ಅ. ಸಿಂಧುವರಾಳಿ ಕನ್ನಡವರಾಳಿ ದ್ರಾವಿಡವರಾಳಿ ಪ್ರಥಮವರಾಳಿ ಯೆಂಬ ನಾಲ್ಕು ಉಪಾಂಗವರಾಳಿಗಳು.

ಆ. ಮಹಾರಾಷ್ಟ್ರಗುಜ್ಜರಿ ಸೌರಾಷ್ಟ್ರಗುಜ್ಜರಿ ದ್ರವಿಡ ಗುಜ್ಜರಿಗಳು ದಕ್ಷಿಣಗುಜ್ಜರಿಯೆಂಬ ನಾಲ್ಕು ಉಪಾಂಗಗಳು.

ಇ. ಕರ್ನಾಟಕಗೌಳ ದೇಶಗೌಳ ತುರುಷ್ಕಗೌಳ ಮಾಳವಗೌಳ ಛಾಯಾಗೌಳ ಸೌರಾಷ್ಟ್ರಗೌಳ ದ್ರವಿಡಗೌಳವೆಂಬ ಏಳು ಉಪಾಂಗಗೌಳಂಗಳು

ಈ. ಛಾಯಾತೋಂಡಿ ತುರುಷ್ಕತೋಂಡಿ ಎಂಬೆರಡು ಉಪಾಂಗತೋಂಡಿಗಳು

ಉ. ಮಲಹರಿ ಭೈರವಿ ಎಂಬೆರಡು ಸಾಳಗೋಪಾಂಗಗಳು

ಊ. ಗೋರಿ ರಾಮಕರ್ನಿ ಎಂಬೆರಡು ನಾಟಿ ಉಪಾಂಗಗಳು

ಎ. ಸಾಳಗನಾಟಿ, ಛುಲ್ಲಜಕುರಂಜಿ ಎಂಬೆರಡು ಲಲಿತೆಯುಪಾಂಗಗಳು

ಏ. ಕೋಳಾಹಳ ರಾಮಕ್ರೀಯೆಂಬ ಎರಡು ರಾಮಕ್ರೀ ಉಪಾಂಗಗಳು.

ಐ. ದೇವಕ್ರೀ ತ್ರಿಸೇತ್ರಕ್ರಿ ಭೂತಾಳಕ್ರಿ ಎಂಬ ಮೂರು ಕೋಳಾಹಳದ ಉಪಾಂಗಗಳು. ಇಂತು ಚತುರ್ವಿಧಾಂಗದಿಂ ನೂರಾರು ರಾಗಂಗಳು ಜನಿಸಿದವು. ಈ ಪ್ರಕಾರದಿಂ ಗ್ರಾಮ ಜಾತಿ ಲಿಂಗಮೆಂಬ ತ್ರಿವಿಧದಿಂದಾ ನೂರ್ಹೈವತ್ತೇಳು ರಾಗಂಗಳಂ ೪೪೮

ಮೂವತ್ತೆರಡು ರಾಗಂಗಳು :

ಬಳಿಕ ಈ ಸಮಸ್ತ ರಾಗಂಗಳೊಳಗೆ:

ರಾಮಕ್ರಿ	ಭೂಪಾಳಿ	ವಸಂತ	ನಾಟಿ	ಸಾಳಗ	ಭೌಳಿ	ಕಾಂಬೋದಿ
ಗುಜ್ಜರಿ	ಭೌರವಿ	ಗುಂಡಕ್ರಿ	ಮಲಹರಿ	ಧನ್ಯಾಸಿ	ಲಲಿತೆ	ಫಲಮಂಜರಿ
ಬಂಗಾಳ	ದೇಶಿ	ಮೇಘರಂಜಿ	ಕುರಂಜಿ	ಆಹರಿ	ಶ್ರೀರಾಗ	ದೇವಗಾಂಧಾರಿ
ಪಹಡಿ	ಗೌಳ	ಶಂಕರಾಭರಣ	ಭುಲ್ಲರಿ	ದೇಶಾಕ್ಷಿ	ವರಾಳಿ	ಸಿಂಧುರಾಮಕ್ರಿ
ದೇವಗುಪ್ತಿ	ಆರಭಿ	ನಾರಾಯಣಿ	–	–	–	ಮಂಗಳಕೌಶಿ

ಎಂಬ ಮೂವತ್ತೆರಡು ರಾಗಂಗಳೇ ಪ್ರಸಿದ್ಧಮಾಗಿಹುದು, ಅವರಲ್ಲಿ ೫೫೯

ಮಿತ್ರ ರಾಗಂಗಗಳು :

ರಾಮಕ್ರಿ ಭೂಪಾಳಿ ವಸಂತ ನಾಟಿ ಸಾಳಗ ಚೌಳಿ ಕಾಂಬೋದಿ ಗುಜ್ಜರಿ ಈ ಮೊದಲ ಎಂಟು ರಾಗಂಗಳೇ ಪುರುಷರಾಗಂಗಳು.

ಮಿಕ್ಕ ಇಪ್ಪತ್ತನಾಲ್ಕು ರಾಗಂಗಳೆ ಕ್ರಮದಿಂದ ಒಂದೊಂದು ಮೂರು ಮೂರು ಸ್ತ್ರೀರಾಗಂಗಳೆಂದು ಅಭ್ಯಾಸಂಗೆಯ್ದು.

೧. ವಸಂತಭೌರವಿ ಶಾಂತಮಲಹರಿ ನಾದರಾಮಕ್ರಿ ಎಂಬವೆ ರಾಮಕ್ರಿಯ ಮಿತ್ರರಾಗಂಗಳು

೨. ಮುಖಾರಿ ಹಿಂದೋಳ ವಸಂತವೆಂಬವೆ ರಾಮಕ್ರಿಯ ಮಿತ್ರರಾಗಂಗಳು

೩. ನಾಟಿ ಆಹರಿನಾಟಿ ಸಾಳಗನಾಟಿ ಹಮ್ಮೀರನಾಟಿ ಗುಜ್ಜರಿನಾಟಿ ಎಂಬವೆ ಪಂಚವಿಧನಾಟಿಗಳು

೪. ಸೌರಾಷ್ಟ್ರಗೌಳ ಮಾಳವಗೌಳ ಕೇತಾರಗೌಳ ಛಾಯಾಗೌಳ ಕನ್ನಡಗೌಳ ವಸಂತಗೌಳ ಪ್ರತಾಪಗೌಳ ಮೋಹನಗೌಳಮೆಂಬ ಅಷ್ಟಗೌಳಂಗಳೇ ಸಾಳಗದ ಮಿತ್ರ ರಾಗಂಗಳು.

೫. ಮೇಛಭೌಳಿಯೆ ಭೌಳಿಯ ಮಿತ್ರರಾಗವಹುದು.

೬ ಗುಮ್ಮಗಾಂಬೋದಿ ತೆಲುಗಕಾಂಬೋದಿ ಎಂಬವೆ ಕಾಂಬೋದಿಯು ಮಿತ್ರರಾಗಂಗಳು

೭ ಶೋಕವರಾಳಿ ವಸಂತವರಾಳಿ ಜೋನಿಗವರಾಳಿ ಪತ್ರವರಾಳಿ ಪ್ರತಾಪವರಾಳಿ ನಾಗವರಾಳಿ ಲಕ್ಷಣವರಾಳಿ ಎಂಬವೆ ಸಪ್ತವರಾಳಿಗಳಿವು ಮೊದಲಾದ ಸಕಲ ಮಿತ್ರರಾಗಂಗಳನಾರ್ಹೈದು. ೪೫೦

ಗಾನವೈಖರಿ :

ಮತ್ತಂ ಆ ರಾಗಂಗಳಲ್ಲಿ ಶುದ್ಧ ಮಿಶ್ರ ಸಂಕೀರ್ಣ ಭೇದಂಗಳಂ ವಿಭಾಗಿಸಿ; ಗ್ರಾಮ ವರ್ಜ್ಯಂಗಳಂ ಪರೀಕ್ಷಿಸಿ; ಜನ್ಯ ಜನಕಂಗಳಂ ಕಂಡು; ಕೌಟಳ ಬೊಂಬಾಳ ನಾರಾಟ ಮಿಶ್ರಿತವೆಂಬ ಚತುರ್ವಿಧ ಸುಸ್ವರಂಗಳಂ ಪರುಠವಿಸಿ; ಆಳಾಪ ಭಜಾವಣೇ ಛಾಯೆದಪ್ಪದೆ; ನಾದಾವತಿ ನಂದಾವತಿ ಭದ್ರಾವತಿ ವಿನಯಾವತಿ ಭೋಗಾವತಿ ಎಂಬ ಐದು ತರದಿಂದ ಆಳಾಪಿಸುವ ಪದಕ್ರಮದ; ಗೌಡಿ ವೈದರ್ಭಿ ಪಾಂಚಾಲಿಯೆಂಬ ರೀತಿಕ್ರಮಂ ಕೂಡಿ; ದರು ಪರಿ ವಿಕೃತಿ ವಿಂದಾಣವೆಂಬ ಚತುರ್ವಿಧ ದಂಡಿಯಲ್ಲಿ ರಂಗು ರಕ್ತ ರೀತಿದೋರಿ; ಕಂಪಿತ ಚಿಂತಿತ ಅನುನಾಸಿಕ ಶಿರೋದ್ಗತ ಕಂಠದೂಷಣ ವಿಕ್ಲಿಷ್ಟ ನೀರಸ ನಿಷ್ಠೂರ ನಿಃಸಾರ ಚಿತ್ರಾಂತ ಶ್ರುತಿವರ್ಜಿತ ಕಾಕಸ್ವರ ಪ್ರಮಾಣಿ ಅಸಮಾನ ತಾಳಹೀನಮೆಂಬ ಪದಿನೈದು ಸ್ವರದೂಷಣಂ ಪೊರ್ದದೆ ಪಾಡಿ ಮೋಹಿಸುವ ಗಾಯಕರಿಂ ೪೫೧

ವಾದ್ಯ ಭೇದಂಗಳು :

ಬಳಿಕ, ೧. ತಂತ್ರಿಯಂ ಕಟ್ಟಿಬಾಜಿಸುವ ವೀಣಾದಿಕವೆ ತತವೆನಿಸೂದು.

೨. ಚರ್ಮಮಂ ಕಟ್ಟಿ ಬಾಜಿಸುವ ಆವುಜೆ ಮೊದಲಾದವೆ ಅನದ್ಧವೆನಿಸೂದು.

೩. ಊದಿ ಬಾಜಿಸುವ ವಾಸ ಮೊದಲಾದವೆ ಸುಷಿರವೆನಿಸೂದು ಕಂಚಿನ ತಾಳದಿಕವೇ ಘನವೆನಿಸೂದು.

೪. ಇಂತು ಚತುರ್ವಿಧವಾದ್ಯ ಭೇದಮಾದ, ಕಹಳೆ ಪಟಹ ಶಂಖ ಭೇರಿ ಜಯಗಂಟೆ ಎಂಬ ಪಂಚ ಮಹಾವಾದ್ಯ ವಿಚಕ್ಷಣರಿಂ ೪೫೨

ತಂತ್ರಿವಾದ್ಯಗಳು :

ಬಳಿಕ ವಿಪಂಚಿಕೆ ಚಿತ್ರಿಕೆ ಚಿತ್ರಿಘೋಷಾವಳಿ ಲಕುಲಾಷ್ಠಿ ಕೂರ್ಮಿಕಿ ಕುಬ್ಜರಿ ಪರಿವಾದಿನಿ ಕಿನ್ನರಿ ತುಂಬುರವೀಣೆ ತಿಸತಿ ರಾವಣಹಸ್ತ ಚಕನ ವಲ್ಲಕಿ ಆಳಾವಲಿನಿ ಅನಾವಿಧೆ ಕಾಸ್ಯಪವೀಣೆ ಬ್ರಹ್ಮವೀಣೆ ಸಾರಂಗವೀಣೆ ಸರವೀಣೆ, ಆಕಾಶವೀಣೆ ಅಂತರವೀಣೆ ರುದ್ರವೀಣೆ ಎಂಬ ಇಪ್ಪತ್ತೆರಡು ತೆರದ ತಂತ್ರಿವಾದ್ಯವೆಂಬುದು.

ದುಕ್ಕಡಿ ಗೀತಾನುಗಂತ ಶ್ರುತಾನುಗಂತ ಉಭಯಾನುಗಂತ ವೀಣಾನುಗಂತವೆಂಬ ಐದ ತೆರನಾಗಿಹುದು, ಅವರಲ್ಲಿ ದಂಡ ಜಾತಿ ಮುಖ ಬೈಸಣಿಗೆ ಮುಂತಾದವಂ ಪ್ರಮಾಣಿಸಿ ಆಯಾಯ ರಾಗಾನುಗುಣ್ಯಮಾಗಿ ಮೇಳೈಸಿ, ತಂತಿಗಳಂ ಕಳೇಯೇರಿಸಿ, ಸಪ್ತಸ್ವರ ಭೇದವನರಿದು, ಜನ್ಯ ಜನಕರಾಗಂಗಳನಾರೈದು ಬಾಜಿಸಿ ಕೇಳ್ವರಂ ಕಿವಿಗೊಳಿಪ ತಂತ್ರಿವಾದ್ಯ ವೇದ್ಯರಿಂ ೪೫೩

ವಾಸ ವಿಲಾಸಿಗಳು :

ಬಳಿಕ ಹದಿನೆಂಟುಅಂಗುಲ ಹದಿನೇಳುಅಂಗುಲ ಹದಿನಾರುಅಂಗುಲ ಹದಿನೈದುಅಂಗುಲ ಹದಿನಾಲ್ಕುಅಂಗುಲ ಹದಿಮೂರುಅಂಗುಲ ಹನ್ನೆರಡುಅಂಗುಲ

ಹನ್ನೊಂದುಅಂಗುಲ ಆರಂಗುಲ ಒಂಭತ್ತುಅಂಗುಲ ಎಂಟುಅಂಗುಲ ಏಳುಅಂಗುಲ ಆರಂಗುಲ ಐದಂಗುಲ ನಾಲ್ಕಂಗುಲ ಮೂರಂಗುಲ ಎರಡಂಗುಲ ಒಂದಂಗುಲ ಪ್ರಮಾಣಿನ ಕ್ರಮವಿಡಿದು

ಜಾತಿವಾಸ ಸಜಾತಿವಾಸ ಸುಕುಮಾರವಾಸ ಪಕ್ಷವಾಸ ಭವನವಾಸ ಶ್ವೇತವಾಸ ಆದಿತ್ಯವಾಸ ರುದ್ರವಾಸ ಹರಿವಾಸ ವಿಧಿವಾಸ ದಿಗುವಾಸ ಋಷಿವಾಸ ಕುಮಾರವಾಸ ಅಘೋರವಾಸ ಬ್ರಹ್ಮವಾಸ ತ್ರಿಪುರವಾಸ ಶಿವಶಕ್ತಿವಾಸ ಭುವನಾಧಿಪತಿವಾಸವೆಂಬ ಹದಿನೆಂಟು ತರದ ವಾಸಂಗಳ ಲಕ್ಷಣವರಿದು, ಆ ಜಾತಿ ಮುಖದ ಕಳೆಯ ಮಯಣಮಂ ಸೈತುಮಾಡಿ, ಪೂತ್ಕಾರ ಪೊಣ್ಮಲು, ಆಳಾಪ ಕಾಳಾಪ ಹೆಲ್ಲಣೆ ವ್ಯಾಪ್ತಿ ಮುಂತಾದ ಇಪ್ಪತ್ತನಾಲ್ಕು ತೆರದಲ್ಲಿ ಸ ರಿ ಗ ಮ ಪ ದ ನಿ ಎಂಬ ಸಪ್ತ ಸ್ವರಾಕ್ಷರಂಗಳನಾರೋಹಿ ಅವರೋಹಿ ಮುಂತಾದ ನಾಲ್ವತ್ತಾರು ಭೇದವರಿದು ಆಳಾಪಿಸಿ, ಕೇಳಿಸುವ ಭಾಸುರತರ ವಾಸವಿಲಾಸಿಗಳಿಂ. ೪೫೪

ಮರ್ದಳೆಕಾರರು:

ಬಳಿಕ ಶುದ್ಧ ಸಾಳಗ ಸಂಕೀರ್ಣ ಠವಣೆಗಳೆಂಬ ಚತುರ್ವಿಧ ಮೃದಂಗಮಂ ಮೇಳೈಸಿ; ಕತ್ತರ ಯೊಟ್ಟು ಗಡಾದಿ ಭೇದಂಗಳನು ಅನುವದಿಸಿ; ತ್ವಂಕ್ಯ ಆಲಿಂಗ್ಯ ಊರ್ಧ್ವಕಮೆಂಬ ತ್ರಿವಿಧ ಕ್ರಮವಿಡಿದು ನುಡಿಸುವ ಕಡುಜಾಣರಪ್ಪ ಮದ್ದಳೆಕಾರರಿಂ;

ಬಳಿಕ ಕಂಥಾವುಜ ಪಟಾವುಜ ಕುದುಪಾವುಪ ಅಡಾವುಜಮೆಂಬ ನಾಲ್ಕು ತೆರದ ಆವುಜಮನ್ ಓಜೆಯಿಂ ಬಾಜಿಸುವ ಆವುಜಕಾರರಿಂ. ೪೫೫

ತಾಳಪ್ರಕ್ರಿಯೆ :

ಬಳಿಕ 'ತಾ' ಕಾರವೆ ರುದ್ರನು, 'ಳ' ಕಾರವೆ ಪಾರ್ವತಿ. ಆ ಉಭಯ ಸಂಪುಟಮಾದ ನಾದವೆ ಈಶ್ವರನಹುದು. ಆ ತಾಲವೆರಡರ ಕೂಟವೆಂಬುದು ಒಂದು ಧೃವವೆನಿಸೂದು. ಆ ಧೃವವೆರಡು ಒಂದುಮಾತ್ರೆಯೆನಿಸೂದು. ಆ ಮಾತ್ರೆ ಎರಡೆಂಬುದು ಗುರುವೆನಿಸೂದು, ಮೂರು ಮಾತ್ರಯೆಂಬುದು ಒಂದು ಪ್ಲುತವೆನಿಸೂದು, ಒಂದು ಪ್ಲುತ ಮತ್ತು ಪ್ಲುತದರ್ಧ ನಾಲ್ಕೂವರೆ ಮಾತ್ರೆಯೆಂಬುದು ಒಂದು ವಿರಾಮ ಮಾತ್ರಯೆನಿಸೂದು. ಇಂತೀ ಮಾತ್ರೆ ಹೆಚ್ಚಲು ಸೂಕ್ಷ್ಮ, ನಿಮಿಷಾರ್ಧಕ್ಕೆ ವ್ಯಂಜನಕಾಲ. ಅತೀತ ಅನಾಗತ ವರ್ತಮಾನದಿಂ ಕ್ರಿಯಾಕಾರಮನ್ ಏಕಮಾಡಿ ತಾಳೋತ್ಪತ್ತಿ ಯಾಯಿತೆಂದು, ತಾಳೋದಯಮಂ ತಿಳಿದು, ಬಳಿಕ ಆ ತಾಳದಿ, ಕಾಲ ಮಾರ್ಗ ಕ್ರಿಯೆ ಅಂಗ ಜಾತಿ ಗ್ರಹ ಕಳೆ ಲಯ ಯತಿ ಪ್ರಸ್ತಾರವೆಂಬ ದಶಪ್ರಾಣಂಗಳನಾರೈದು. ೪೫೬

ತಾಳ ಭೇದಗಳು :

ಬಳಿಕ ಧೃವ ಮಠಯ ರೂಪಕ ಜಂಪೆ ತಿವುಡೆ ಆಟ ಏಕ ಚಚ್ಚಪುಟ ಚಾಚಪುಟ ಷಡ್ಗೀತ ಪತ್ರಚ್ಛದ ಸವ್ಯಾಚಿತೆ ಸಮ್ಮಿತ ಎಳಜೋಬಡೆ ಗಾರ್ಹಡಕ್ಕೆ ಯಡಡಕ್ಕೆ ಸ್ವರಕರಣ

ಪಾಠಕರಣ ಪಿಂಡಕರಣ ಕ್ರೌಂಚಪದ ಕಳಹಂಸೆ ಅದಿಲಲಿತೆ ಮತ್ತಮಾತಂಗ ಪಳಚಕ್ರ ಆಸ್ಥಾನಮಂಟಪಮಯಮಂದರೆ ಯಕ್ಕಸರ ರಚ್ಚೆ ಉತ್ತರಪಾಣಿ ಪಂಚಪಾಣಿ ಸಂಕ್ಲಿಷ್ಟ ಖಂಡ ಖಂಜಾಖಂಜ ಅಖಂಡಿತ ವಿಲಂಬಿತ ಕುಟಿಲ ಚತುರಾಶ್ರ ವೃದ್ಧ ಉಪವೃದ್ಧ ಸುಭದ್ರ ಸಂಗತ ಪ್ರಚ್ಛನ್ನಾಲಯ ಚಾಚಲ್ಯಾಣ ಗೋಷ್ಠಿಯಾಣ ಧೃವಲಯ ಹರಿಣಿ ಜೊಂಬಾಯರ ವಿಷಮ ವಿದ್ಯುಧರ ಮಾತಂಗ ಬ್ರಹ್ಮನಂದನ ಸರಸ್ವತಿ ಕಂಠಾಭರಣ ಆದಿಮಠಯ ಜಂಪಮಠಯ ತೆಗದಮಾನಮಠಯ ಪೂರ್ವಕಂಕಣ ಕಾಮ್ಯಕಂಕಣ ಪ್ರಶಸ್ತ ಕೋಕಿಲಪ್ರಿಯ ಸಿಂಹನಂದನ ಸಿಂಹವಿಕ್ರೀಡಿತ ಸಿಂಹನಾದ ಸಪ್ತಮುದ್ರಿಕ ಜಯಾಳಮೆಂಬಿವು ಮೊದಲಾದ ನೂರೊಂದು ತಾಳಂಗಳಾದೊಡೆ, ಭಂಗತಾಳ ಉಪಭಂಗತಾಳ ವಿಭಂಗತಾಳ ಶುದ್ಧತಾಳ ಅನುತಾಳ ದೀರ್ಘತಾಳವೆಂದು ಆರು ವರ್ಗ ಸಂಖ್ಯಾಭೇದವಾಗಿಹುದೆಂದು ಪೇಳ್ವ ಭರತಶಾಸ್ತ್ರ ಪ್ರವೀಣ್ಯರಪ್ಪ ತೌಳಧಾರಿಗಳಿಂ. ೪೫೭

ನೃತ್ಯ ಭೇದಂಗಳು :

ಬಳಿಕ ನಾಟಕದಲ್ಲಿ ದಿನದಿನಕ್ಕೆ ಅಭಿನಯಿಸಲ್ತಕ್ಕ ರಸ ಭಾವ ಸಂವಿಧಾನ ಆಶ್ರಯಂಗಳೆಂಬ ಚತುರ್ವಿಧ ಪ್ರಬಂಧಾಂಶಮಂ ತಿಳಿದು; ಮುಖದೃಷ್ಟಿ, ಹಸ್ತಪಾದಂಗಳ ಅಭಿನವ ಸಲ್ಲಕ್ಷಣಂ ತಪ್ಪದೆ, ಮೇಲೆ:

ಮುಖರಸವೆ ಹಾವ ; ನೇತ್ರವಿಲಾಸವೆ ಭಾವ

ಪದನ್ಯಾಸವೆ ವಿಲಾಸ; ಭ್ರೂವಿಕ್ಷೇಪಣವೆ ವಿಭ್ರಮವೆಂಬ ಚತುರ್ವಿಧ ಮೋಹನಂ ಮೈವೆತ್ತು ;

ಶುದ್ಧ ದೇಶೀಯಮೆಂಬ ಮಾರ್ಗದ್ವಯಮನ್ ಮನಂಗೊಂಡು; ತಾಂಡವ ನಾಟ್ಯ ನೃತ್ಯ ಲಾಸ್ಯ ಗುಂಡಿಲು ಪೆಕ್ಕಣ ಲಚ್ಚಣ ಅಪರಿಪಾತ್ರ ಸುಪಾತ್ರ ಸರ್ವತೋಭದ್ರಮೆಂಬ ದಶವಿಧ ಪಾತ್ರಂಗಳಂ ತೋರಿ ರಂಜಿಸುವ ನರ್ತಕಿಯರಿಂ; ಬಳಿಕ ಇಂತು ಪೇಳ್ವ ಗೀತಾನುಗುಣ್ಯಮಾದ ವಾದ್ಯಾನುಸಾರಮಾದ ನೃತ್ಯಮೆಂಬ ತೂರ್ಯತ್ರಯಂ ಮೊದಲಾದ ಸಂಭ್ರಮಗಳಿಂದ ಇಂಬುವಡೆದು. ೪೫೮

ರಾಜಭೋಗ :

ಅನಂತರದೊಳು ಆಂದೋಳನ ವಸ್ತ್ರ ಆಭರಣ ವಾಹನ ರಾಜ್ಯ ವಧು ಕರ್ಪೂರವೀಳ್ಯವೆಂಬ ತ್ಯಾಗಾಂಗಸಪ್ತಕ ಸಂಯುಕ್ತರೆನಿಸಿ, ಸಮಸ್ತ ಸಮುದ್ರಾಧೀಶರಾಗಿ ಪ್ರಜಾಪಾಲನಾದಿ ಸದ್ಗುಣ ಸಂಪನ್ನರೆನಿಸಿ ದಶದಿಕ್‌ಭರಿತ ಪುಣ್ಯಕೀರ್ತಿಮಯರಾಗಿ ರಾಜ್ಯಂಗೆಯ್ವುತ್ತಿರ್ಪುಂ. ೪೫೯

ಸಗರ ಸಾಗರಾದಿವಿಷಯ :

ಮತ್ತಂ ಅವರೊಳು ಆ ಸಗರ ಚಕ್ರವರ್ತಿಗೆ ಅರುವತ್ತುಸಾವಿರ ಕುಮಾರರು ಅವರು ಒಂದು ಅಶ್ವಮೇಧಯಾಗದ ನೆವದಿಂ ದಕ್ಷಿಣ ಸಮುದ್ರದ ತಡಿವಿಡಿದು

ಎಂಟುಸಾವಿರ ಯೋಜನದ ಅಗಲ ಅರುವತ್ತು ಸಾವಿರ ನೀಳದಲ್ಲಿ ಪೂರ್ವಪಶ್ಚಿಮವಾಗಿ ಅಗೆಯಲು ಅವರು ಅಗೆದ ಭೂಮಿಯೊಳು ಆ ಸಮುದ್ರೋದಕವು ಆವರಿಸಿರ್ದ ಎಡೆ ದಿಕ್ಕುಗಳೆ ಪೂರ್ವಾದ್ರಿಯಾಗಿ ಇಂದ್ರದ್ವೀಪ ಕುಶದ್ವೀಪ ತಾಮ್ರಪರ್ಣಿದ್ವಿಪ ಗಭಸ್ತಿಮಾನ್ ನಾಗದ್ವೀಪ ಸೌಮ್ಯದ್ವೀಪ ಗಂಧರ್ವದ್ವೀಪ ವಾರುಣದ್ವೀಪವೆಂಬ ಎಂಟು ದ್ವೀಪಂಗಳಾದವು, ಅವೆಲ್ಲಂ ಪ್ರತ್ಯೇಕಮಾದ ಒಂದುಸಾವಿರ ಯೋಜನದ ಅಗಲಂಗಳನು ಉಳ್ಳವಾಗಿ ಮ್ಲೇಚ್ಛಾದಿ ಹೀನ ಜಾತಿಗಳಿಗೆ ಆಶ್ರಯಂಗಳಾಗಿರ್ಕುಂ. ೪೬೦

ಕರ್ಣಿಕಾ ದ್ವೀಪಾದಿ ಸ್ಥಾನ :

ಮತ್ತಂ ಅವರು ಅಗೆಯದೆ ಉಳಿದ ಸಾವಿರ ಯೋಜವ ವಿಶಾಲದ ಭೂಮಿಯ ಹಿಮವತ್ ಪರ್ವತ ಪರಿಯಂತಂ ಕರ್ಣಿಕಾ ದ್ವೀಪವೆಂಬ ಪೆಸರಂ ಪಡೆದು ಬ್ರಾಹ್ಮಣಾದಿ ಸಕಲ ವರ್ಣಂಗಳಿಗೆ ಆಸ್ಪದಮಾಗಿಹುದು ಅವರೊಳಗೆ ಮರ್ಯಾದಾ ಪರ್ವತ ಸವಾಲಕ್ಷ ಪರ್ವತ ಸಹ ಮುನ್ನೂರು ಯೋಜವ ಸ್ಥಲಮೆ ಪ್ರಸಿದ್ಧಮಾಗಿ ಭರತಖಂಡಮೆನಿಸಿತ್ತು. ಅದರೊಳಗೆ ; ೪೬೧

ಮಹಾಕುಲ ಶೈಲ, ಸಪ್ತ ನದಿಗಳು :

ಮಹೇಂದ್ರ ಮಲಯ ಸಹ್ಯ ಶುಕ್ತಿಮಾನ್ ವೃಕ್ಷ ವಿಂಧ್ಯ ಪಾರಿಯಾತ್ರವೆಂಬ ಸಪ್ತಕುಲ ಪರ್ವತಂಗಳುಂಟು; ಅವರಲ್ಲಿ ಜನಿಸಿದ ನದಿಗಳಾವೆನೆ: ತ್ರಿಸಾಮೆ ಋಷಿಕುಲಮೆಂಬರಡು ನದಿಗಳು ಮಹೇಂದ್ರ ಪರ್ವತದಲ್ಲಿ ಪುಟ್ಟಿದವು. ಕೃತಮಾಲಿನಿ ತಾಮ್ರಪರ್ಣಿಗಳೆಂಬ ಮೂರು ನದಿಗಳು ಸಹ್ಯಪರ್ವತದಲ್ಲಿ ಪುಟ್ಟಿದವು. ಗೋದಾವರಿ ಭೀಮರತಿ ಕೃಷ್ಣವೇಣಿಗಳೆಂಬ ಮೂರು ನದಿಗಳು ಸಹ್ಯ ಪರ್ವತದಲ್ಲಿ ಪುಟ್ಟಿದವು. ತಾಪಿ ಪಯೋಷ್ಣಿಗಳೆಂಬೆರಡು ನದಿಗಳು ವೃಕ್ಷ ಪರ್ವತದಲ್ಲಿ ಪುಟ್ಟಿದವು. ನರ್ಮದೆ ಸುರಸೆಗಳೆಂಬೆರಡು ನದಿಗಳು ವಿಂಧ್ಯ ಪರ್ವತದಲ್ಲಿ ಪುಟ್ಟಿದವು. ವೇದ ಸ್ಮೃತಿಗಳೆಂಬೆರಡು ನದಿಗಳು ಪಾರಿಯಾತ್ರ ಪರ್ವತದಲ್ಲಿ ಪುಟ್ಟಿದವು. ಶತದ್ರು ಚಂದ್ರಭಾಗೆಯೆಂಬೆರಡು ನದಿಗಳು ಹಿಮವತ್ ಪರ್ವತದಲ್ಲಿ ಪುಟ್ಟಿದವೆಂದು ತಿಳಿದುಲ್ವೇಳ್ಕುಂ. ೪೬೨

ನದೀ ವಿಶೇಷಂಗಳು :

ಮತ್ತಂ ಮಲಪ್ರಹರಿ ಮಣಿಮುಕ್ತೆ ಮಂದಾಕಿನಿ ಗೋಮತಿ ಗಂಗೆ ತುಂಗೆ ಗಂಡಕಿ ಕಾವೇರಿ ಕಪಿಲೆ ಕಾಂಡಲಿ ಕೌಶಿಕೆ ಕೇಸರಿ ಸರಯು ಸರಸ್ವತಿ ಸುವರ್ಣಮುಖಿ ಶೋಣೆ ವರುಣೆ, ಭದ್ರೆ ನಿರಂಜನೆ ಜಾಹ್ನವಿ ಮೊದಲಾದ ಮಹಾನದಿಗಳೈನೂರು, ಮಹಾನಂದಿ ಮೊದಲಾದ ಪುಣ್ಯಕ್ಷೇತ್ರಗಳೊಂದು ಕೋಟಿಯು, ೪೬೩

ಅಷ್ಟ ಷಷ್ಟೀ ಕ್ಷೇತ್ರಂಗಳು :

ಶ್ರೀಶೈಲ ಸೇತು ಕೇದಾರ ಕಾಶಿ ಕಾಳಹಸ್ತಿ ಕುಂಭಕೋಣ ಕುರುಕ್ಷೇತ್ರ ಕನಕಾಚಲ ಕಕುದ್ಗಿರಿ ಅಭ್ರಸಭೆ ಅರುಣಾಚಲ ಆದಿಗ್ರಾಮ ಅಗಸ್ತ್ಯನಾಥ ವಾಲ್ಮೀಕ ವೃದ್ಧಚಲ ಗಯೆ ಗೋಕರ್ಣ ಸೋಮೇಶ್ವರ ಭೀಮೇಶ್ವರ ಜಪ್ಪೇಶ್ವರ ವೇದಾರಣ್ಯ

ಶ್ವೇತಾರಣ್ಯ ಗಜಾರಣ್ಯ ನೈಮಿಷಾರಣ್ಯ ಹಾಲಾಖ್ಯ ನೀಲಕಂಠ ಮಧ್ಯಾರ್ಜುನ ಪರಶುರಾಮಕ್ಷೇತ್ರಾದಿ ಮಹಾಕ್ಷೇತ್ರಂಗಳು ಅರುವತ್ತೆಂಟು. ೪೬೪

ಅಷ್ಟಾದಶಪೀಠಗಳು :

ಬಳಿಕ ವಾರಣಾಸಿಯಲ್ಲಿ ವಿಶಾಲಾಕ್ಷಿ, ಕಂಚಿಯಲ್ಲಿ ಕಾಮಾಕ್ಷಿ, ಲಂಕೆಯಲ್ಲಿ ಶಾಂಕರಿ ಕೊಲ್ಲಾಪುರದಲ್ಲಿ ಲಕ್ಷ್ಮಿ, ಜಾಲಂಧರೆಯಲ್ಲಿ ಮಹಾದೇವಿ, ಕನ್ಯಕುಬ್ಜೆಯಲ್ಲಿ ಕುಬ್ಜಿಕೆ, ಸಿಂಹಳದಲ್ಲಿ ಸಿಂಹಿಕೆ, ಚಕ್ರವಾಟಿಯಲ್ಲಿ ಮಾಣಿಕೇಶ್ವರಿ, ಸುವರ್ಣ(ಪೂರ್ಣ) ಕ್ಷೇತ್ರದಲ್ಲಿ ಪೂರ್ಣಿಕಾದೇವಿ, ಪರ್ವತದಲ್ಲಿ ಪಾರ್ವತಿ, ಶ್ರೀಶೈಲದಲ್ಲಿ ಭ್ರಮರಾಂಬಿಕೆ, ವಿಂಧ್ಯಾದ್ರಿಯಲ್ಲಿ ವಿಂಧ್ಯಾವಾಸಿನಿ, ಕಾಲಕ್ಷೇತ್ರದಲ್ಲಿ ರೌದ್ರೇಶ್ವರಿ, ಯೋಗಿಣೀಪುರದಲ್ಲಿ ಯೋಗಿಣಿ, ಉಜ್ಜಯಿನಿಯಲ್ಲಿ ಮಹಾಕಾಳಿ, ಹಿಮಾಚಲದಲ್ಲಿ ಭೀಮರೂಪಿ, ಶ್ವೇತದ್ವೀಪದಲ್ಲಿ ಪದ್ಮವಾಸಿನಿ, ಸುಮೇರುವಿನಲ್ಲಿ ಸುಪ್ರಭಾದೇವಿಯರೆಂಬ ಹದಿನೆಂಟು ಶಕ್ತಿಯೋಗ ಪೀಠಂಗಳಾದೊಡೆ, ಆ ಶಕ್ತಿದೇವಿಯರುಂ ಬಾಲಾರ್ಕತೇಜದಿಂ, ತ್ರಿಣೇತ್ರದಿಂ, ಪಾಶಾಂಕುಶ ಚಾಪ ಬಾಣವಾಂತ ಕರಚತುಷ್ಟಯದಿಂ, ಸರ್ವಾಲಂಕಾರಗಳಿಂದೆಸೆದು ತ್ರಿಸಂಧ್ಯೆಯಲ್ಲಿ ತಮ್ಮ ಧ್ಯಾನಪೂರ್ವಕವಾಗಿ ನಾಮಜಪಕರ್ಗೆ ರಾಜವಶ್ಯಾದಿಸಿದ್ಧಿ ಪ್ರದಾಯಕಿಯರಾಗಿರ್ಕುಂ. ೪೬೫

ಮುಕ್ತಿಕ್ಷೇತ್ರ ಸಪ್ತಕ :

ಬಳಿಕ ಇಲ್ಲಿ ಅಯೋಧ್ಯೆ ಮಧುರೆ ಮಾಯಾಪುರಿ ಕಾಶಿ ಕಾಂಚಿ ಅವಂತಿ ದ್ವಾರಾವತಿಯೆಂಬ ಸಪ್ತಪುರಂಗಳೇ ತಮ್ಮನು ಆಶ್ರಯಿಸಿರ್ದ ಪ್ರಾಣಿಗಳಿಗೆ ಮುಕ್ತಿದಾಯಕಂಗಳಾಗಿ ಇರ್ಪವು. ಅವರೊಳಗೆ ಕಾಶಿಯೆಂಬುದೊಂದೇ ವಾರಣಾಸಿ ಕಾಶಿ ಅವಿಮುಕ್ತ ಅಂತರ್ಗೇಹಮೆಂದು ನಾಲ್ಕು ತೆರನಾಗಿರ್ಪುದು. ಅಲ್ಲಿ ಮರಣವಾದ ಪಿಪೀಲಿಕಾದಿ ಸಕಲ ಪ್ರಾಣಿಗಳಿಗೆ ವಿಶ್ವೇಶ್ವರನು ತಾನೇ ದಕ್ಷಿಣ ಕರ್ಣದಲ್ಲಿ ತಾರಕ ಬ್ರಹ್ಮೋಪದೇಶಂಗೆಯ್ದು ಸದ್ಯೋನ್ಮುಕ್ತಿಯಹುದೆಂದು ಸುರಾಭಾಂಡೇಶ್ವರಾದಿ ಲಿಂಗ ದೃಷ್ಟಾಂತಪೂರ್ವಕಮಾಗಿ ವೇದಾಗಮ ಪುರಾಣಂಗಳಲ್ಲಿ ಪ್ರಸಿದ್ಧಮಪ್ಪುದರಿಂದ ಕಾಶಿಯೇ ಸರ್ವೋತ್ಕೃಷ್ಟವಹುದು. ಉಳಿದವು ಅಂತು ಅಲ್ಲವಾಗಿ ಸಾಮಾನ್ಯಂಗಳೆಂದು ವಿವೇಕಸಲ್ವೇಳ್ಕುಂ. ೪೬೬

ಐವತ್ತಾರು ದೇಶಂಗಳು :

ಅಂಗ ವಂಗ ಕಳಿಂಗ ತೆಲುಂಗ ಕೊಂಗ ಲಾಳ ಬಂಗಾಲ ಚೋಳ ಕೇರಳ ಗೌಳ ಪಾಂಚಾಲ ಸಿಂಗಳ ಕುಂತಳ ನೇಪಾಳ ಮಲೆಯಾಳ ಮಾಳವ ಹೈವ ಹಿಂದವ ಸೈಂಧವ ಕೊಂಕಣ ಕುರು ಕಂಭಾತಿ ಕಲಹತಿ ಕಿರಾತ ಮುಂಗಲ ಮಗಧ ಮಾರುಕ ತುರುಷ್ಕ ತಿರುಗುತ್ತಿ ತ್ರಿಗರ್ತ ಅರ್ಯಾವರ್ತ ಭೋಟ ಮಹಾಬೋಟ ಆರಭಟ ಮರಹಟ ಚೇದಿ ಚೀನ ಮಹಾಚೀನ ಪರ್ಪರ ಖರ್ಪರ ಮಧ್ಯರಾಷ್ಟ್ರ, ಮಹಾರಾಷ್ಟ್ರ ಸೌರಾಷ್ಟ್ರ ಹೂಣ ಹಮ್ಮೀರ ಕಾಶ್ಮೀರ ಸಂವೀರ ಶಾಡ್ವರು ಪಾಂಡು ಪಾಂಡೀಯ ಪಾರ್ಶ್ವೀಕ ಯವನ ಆಂಭಷ್ಟ ಮ್ಲೇಚ್ಛ ದ್ರಾವಿಡ ಕರ್ನಾಟಕಮೆಂಬ ಐವತ್ತಾರು ದೇಶಂಗಳಿರ್ಕುಂ. ೪೬೭

ದೇಶಾಲಂಕಾರ ರಕ್ಷಕಂಗಳು :

ಮತ್ತಂ ಆ ಚಪ್ಪನ್ನ ದೇಶಂಗಳಾದೊಡೆ ಬೇರೆ ಬೇರೆ ನಗರ ಪಟ್ಟಣ ಗ್ರಾಮ ಖೇಡ ಖರ್ವಡ ದ್ರೋಣ ಮಡಬಾದಿಗ್ರಾಮ ಭೇದಂಗಳಿಂ; ಸ್ವಾಮಿ ಅಮಾತ್ಯ ಬಂಧು ಕೋಶ ರಾಷ್ಟ್ರ ದುರ್ಗ ಬಲಂಗಳೆಂಬ ರಾಜ್ಯಾಂಗ ಸಪ್ತಕಂಗಳಿಂ; ಜಲದುರ್ಗ ವನದುಗಾ ಗಿರಿದುರ್ಗ ಕೃತಕಾವನಿದುರ್ಗಾಮೆಂಬ ದುರ್ಗಚತುಷ್ಟಯಂಗಳಿಂದ ಅಲಂಕೃತಮಾಗಿ ದ್ವಾದಂಯೋಜನಕ್ಕೆ ಒಂದೊಂದು ವಿಭಾಗವಡೆದು, ಜಾತಿ ರೀತಿ ನೀತಿ ಮಾತು ಉಡಿಗೆ ತೊಡಿಗೆ ಮೊದಲಾದ ಕ್ರಿಯಾಭೇದಂಬಡೆದಿರ್ಕುಂ. ೪೬೮

ಜನಜೀವನ ಕ್ರಮ :

ಮತ್ತಂ ಆ ಭರತವರ್ಷದಲ್ಲಿಯ ಬಹುವರ್ಣದಜನರು ಕೃತಾದಿ ಯುಗಾನುಕ್ರಮದಿಂ ಜ್ಞಾನೈಶ್ವರ್ಯ ತೇಜೋಬಲಾದಿಗಳ ಹೆಚ್ಚು ಕುಂದು ಉಳ್ಳವರಾಗಿ ಕೃಷಿ ಸೇವೆ ಯಾಚನೆ ಮೊದಲಾದನೇಕ ವ್ಯಾಪಾರಗಳಿಂದವೆ ಗಳಿಸಲ್ಪಟ್ಟ ಕಷ್ಟಾನ್ನ ಭೋಕ್ತೃಗಳೆನಿಸಿ; ಅಶುಚಿ ಅನಿತ್ಯ ಅನಾತ್ಮ ಅಸುಖಂಗಳಲ್ಲಿ ಕ್ರಮದಿಂ ಶುಚಿ ನಿತ್ಯ ಆತ್ಮ ಸುಖಗಳೆಂದು ಮಾಯೆಯಂ ಮೋಹಿಸಿ; ಅವಿದ್ಯೆ ಅಸ್ಮಿತೆ ರಾಗ ದ್ವೇಷ ಅಭಿನಿವೇಶಮೆಂಬ ಕ್ಲೇಶಪಂಚಕದಿಂ ಘಾಸಿಯಾಗಿ; ಜ್ಞಾನವಿಕೃತಿಭಾವ ವರ್ತನ ವಿಕೃತಿಭಾವ ಮೋಹನವಿಕೃತಿ ಭಾವವೆಂಬ ಭಾವತ್ರಯದಿಂ ಭ್ರಮಿಸಿ; ಅರ್ಥೇಷಣ ಪುತ್ರೇಷಣ ದಾರೇಷಣವೆಂಬ ಈಷಣತ್ರಯದಿಂ ದೋಷಂ ಮಿಕ್ಕು; ಜಾತಿ ವರ್ಣ ಆಶ್ರಮ ಕುಲ ಗೋತ್ರ ನಾಮಂಗಳೆಂಬ ಷಟ್‌ಭ್ರಮೆಯಿಂ ವಿಭ್ರಾಂತಿಸಿ; ಪ್ರಾಣ ಬುದ್ಧಿ ದೇಹಂಗಳಿಗೆ ಕ್ರಮದಿಂದೆಡರಾದ ಅಶನ ಪಿಪಾಸೆ ಶೋಕ ಮೋಹ ಜರೆ ಮರಣಮೆಂಬ ಷಡೂರ್ಮಿಯಿಂ ಪೆರ್ಮೆಯ್ಯುಡುಗಿ; ತನುವ್ಯಸನ ಮನವ್ಯಸನ ಧನವ್ಯಸನ ರಾಜ್ಯವ್ಯಸನ ವಿಶ್ವವ್ಯಸನ ಉತ್ಸಾಹವ್ಯಸನ ಸೇವಕವ್ಯಸನಮೆಂಬ ಸಪ್ತವ್ಯಸನದಿಂ ಹಸಂಗೆಟ್ಟು; ಕುಲ, ಚಲ ಧನ ರೂಪು ಯೌವನ ವಿದ್ಯೆ ರಾಜ ತಪದೇಳ್ಗೆಯೆಂಬ ಅಷ್ಟಮದದಿಂ ಮದಿಸಿ; ತೃಷೆ ಶಂಖೆ ಭೀತಿ ಲಜ್ಜೆ ಜಿಗುಪ್ಸೆ ಕುಲ ಶೀಲ ಗರ್ವಮೆಂಬ ಅಷ್ಟಪಾಶದಿಂ ಬಿಗಿವಡೆದು; ಭೂಮಿ ಜಲ ವಹ್ನಿ ವಾಯು ನಭ ಮನ ಬುದ್ಧಿ ಅಹಂಕಾರವೆಂಬ ಅಷ್ಟಪ್ರಕೃತಿಯಿಂ ವಿಕರಿಸಿ; ಬುದ್ಧಿ ಸುಖ ದುಃಖ ರಾಗ ದ್ವೇಷ ಯತ್ನ ನಿರಾಶೆ, ಧರ್ಮ ಅಧರ್ಮಭಾವನೆಯೆಂಬ ನವಗುಣದಿಂ ವ್ಯವಹರಿಸಿ; ಅಸುರವಾಸನೆ ದೈವವಾಸನೆ ಲೋಕವಾಸನೆ ಶಾಸ್ತ್ರವಾಸನೆ ಎಂಬೀ ಮೊದಲಾದ ಅನೇಕ ವಾಸನೆಗಳಿಂ ಘಾಸಿಯಾಗಿ; ವಿಯದಾದಿಭೂತ ಶ್ರೋತ್ರಾದಿಜ್ಞಾನೇಂದ್ರಿಯ ವಾಗಾದಿಕರ್ಮೆಂದ್ರಿಯ ಪ್ರಾಣಾದಿವಾಯು ಮನಸಾದ್ಯಂತಃಕರಣ ಕಾಮ ಕರ್ಮ ತಮವೆಂಬ ಅಷ್ಟಪುರದೊಳ್ ಚರಿಸಿ; ಜ್ಞಾನೇಂದ್ರಿಯ ಕಮೇಂದ್ರಿಯ ಚಿತ್ತ ಮನ ಅಹಂಕಾರ ವಿದ್ಯೆ ವಾಕ್ಕು ಶಕ್ತಿಗಳೆಂಬ ಷೋಡಶಕಲೆಯಿಂ ವಿಕಲಮಾಗಿ; ಜನನ ಮರಣ ರಾಗ ದ್ವೇಷ ಜರೆ ರುಜೆ ಮದ ಮೋಹ ಸ್ವೇದ ಖೇದ ವಿಷಾದ ನಿದ್ರಾ ಕಾಂಕ್ಷೆ ಕ್ಷುಧೆ ತೃಷ್ಣೆ ಭ್ರಮೆ ಚಿಂತೆ ಕ್ಲೇಶಮೆಂಬ ಪದಿನೆಂಟು ದೋಷದಿಂ ದೂಷಿತನಾಗಿ; ಪರದಾರಾಗಮನ ಪರದ್ರವ್ಯಾಪಹರಣ ಅಭಕ್ಷ್ಯಭಕ್ಷಣ ಹಿಂಸೆಯೆಂಬ ಈ ನಾಲ್ಕು ಕಾಯಕ ದೋಷದಿಂ; ಚಂಡಾಲಾದಿ ಹೀನಯೋನಿಯನೆಂಯ್ದಿ ಅನುಚಿತತ್ವ ನಿಷ್ಠುರತ್ವ ಪುಸಿ ಪೈಶೂನ್ಯಮೆಂಬ

ಈ ನಾಲ್ಕು ವಾಚಕ ದೋಷದಿಂ; ಪಶು ಪಕ್ಷಿಗಳಾಗಿ ಪುಟ್ಟಿ ಜನವಿರುದ್ಧ ಕಾರ್ಯಾಪೇಕ್ಷೆ ಅನಿಷ್ಟಚಿಂತನೆ ಅನ್ಯಸತಿ ಅನ್ಯಧನಕಾಂಕ್ಷೆಯೆಂಬಿವು ನಾಲ್ಕು ಮಾನಸದೋಷದಿಂ ಕಲ್ಮರಂಗಳಾಗಿ ಮಟ್ಟಿಗಳಾಗಿ; ದೇಹಾಭಿಮಾನ ಮಂದಮತಿ ಮೋಸ ಜಡಭಾವ ನಿದ್ರೆ ನಿಷೇಧಕರ್ಮ ಆಲಸ್ಯ ಚಪಲಚಿತ್ತಾದಿ ತಾಮಸಗುಣದಿಂದ ಕಾಮ ಕಪಟ ಕೋಪ ಕದನ ಕರ್ಕಶ ಕಡುಶೋಕ ಲೋಭಾದಿ ರಜೋಗುಣದಿಂ ಮಧ್ಯಲೋಕಸ್ಥಮಾಗಿ; ವಿರತಿ ವಿವೇಕ ವಿತರಣ ವಿನಯ ದಯೆ ಧರ್ಮ ಧೈರ್ಯ ನಿರಭಿಮಾನ ನಿರ್ಧಾರಣಾದಿ ಸಾತ್ವಿಕ ಗುಣದಿಂ ಊರ್ಧ್ವಲೋಕಮಂ ಸಾರ್ದು. ೪೬೮

ಪೂರ್ವಜನ್ಮಾಂತರದಲ್ಲಿ ಮಾಡಿದ ಸುಕೃತದುಷ್ಕೃತ ಕರ್ಮವೆ ಸಂಸ್ಕಾರರೂಪದಿಂದ ಅನೇಕಭವಂಗಳಿಗೆ ಬೀಜಮಾಗಿ ಬುದ್ಧಿಯಲ್ಲಿರ್ಪ ಸಂಚಿತ ಕರ್ಮವೆಂಬ, ಆ ಸಂಚಿತ ಕರ್ಮದೊಳು ಈಗಲೊಂದು ದೇಹಾಂತರವನಾರಂಭಿಸಿ ಭೋಗವನೀವ ಪ್ರಾರಬ್ಧಕರ್ಮವೆಂಬ, ಆ ಪ್ರಾರಬ್ಧ ಭೋಗವನುಣುತ್ತವೆ ಮಾಡಿದ ಪಾಪಾದಿಕವೆ ಮುಂದಕ್ಕೆ ಆಗಾಮಿಕರ್ಮವೆಂಬ ಈ ಕರ್ಮತ್ರಯದಿಂದ ಉಮ್ಮಳಿಸಿ, ಪಾಪಕರ್ಮಾದೀನದಿಂ ವ್ಯಾಕುಲತೆಯುಳ್ಳ ಚಿತ್ತವೆಂಬ ಅಧ್ಯಾತ್ಮಿಕದಿಂ ಪುಟ್ಟಿದ ದುಃಖರೂಪಮಾದ ಆಧ್ಯಾತಿಕಮೆಂಬ ವ್ಯಾಘ್ರ ಭುಜಂಗಾದಿಕಮೆಂಬ ಆದಿಭೂತ ಭಯದಿಂ ಪುಟ್ಟಿದ ದುಃಖರೂಪಮಾದ ಆದಿಭೌತಿಕಮೆಂಬ, ಅನಿಷ್ಟವಾದ ವರ್ಷಾದಿಕಮೆಂಬ ಆದಿದೈವದಿಂ ಪುಟ್ಟಿದ ದುಃಖರೂಪಮಾದ ಆದಿದೈವಿಕಮೆಂಬ ತಾಪತ್ರಯದಿಂ ರೂಪುಗೆಟ್ಟು; ಎಂಭತ್ತೊಂದು ತೆರನಾದ ವಾತ, ಅರುವತ್ತುನಾಲ್ಕು ಬಗೆಯ ಪಿತ್ಥ, ಇನ್ನೂರ ಹದಿನೈದು ವಿಧವಾದ ಶ್ಲೇಷ್ಮಭೇದದಿಂ ಮುನ್ನೂರ ಅರುವತ್ತು ತೆರನಾದ ರೋಗರೂಪ ದೋಷತ್ರಯದೇಳ್ಗೆಯಿ ಬಾಳ್ಗೆಟ್ಟು.

ಖರವಾಹನವೇರಿ ಇಕ್ಷುದಂಡಮಂ ಪಿಡಿದು, ಪೀತವರ್ಣರೂಪಮಾದ **ಕಾಮ**ದಿಂ ಗುರುದಾರಾದಿಗಳುಪಿ,

ಮಹಿಷವಾಹನವನೇರಿ ಡಾಣೆಯಂ ಪಿಡಿದು ರಕ್ತವರ್ಣರೂಪಮಾದ **ಕ್ರೋಧ**ದಿಂದ ಒಡಲೊಡವೆಗಳು ಕೆಡಿಸಿ.

ಮಾರ್ಜಾಲವಾಹನವನೇರಿ ಸುರಗಿವಿಡಿದು ತಮೋವರ್ಣರೂಪಮಾದ **ಲೋಭ** ದಿಂದ ಇಹಪರಭೋಗಮಂ ನೀಗಿ.

ಶುನಕವಾಹನವನೇರಿ ಸಿಕ್ಕುಗೋಲು ಪಿಡಿದು ಬಹುವರ್ಣರೂಪಮಾದ **ಮೋಹ**ದಿಂ ನಿತ್ಯಾನಿತ್ಯ ವಿವೇಕಹೀನನಾಗಿ,

ಸೂತರವಾಹನವನೇರಿ ಅಂಕುಶವಿಡಿದು ಕೃಷ್ಣವರ್ಣರೂಪಮಾದ **ಮದದಿಂ** ನೀತಿ ಬೀತು,

ಅವಿವಾಹನವನೇರಿ ಮುಸಲವಿಡಿದು ಮೇಘವರ್ಣರೂಪಮಾದ ಮತ್ಸರದಿಂ ಪರಗುಣಮಂ ನಿರಾಕರಿಸುತ್ತ ಇಂತು ಮನೋವಿಕಾರ ರೂಪಮಾದ ಅರಿಷಡ್ವರ್ಗದಿಂ ಪರಿಭವಿಸಿ,

ಪೂರ್ವದಳದಲ್ಲಿ ಪುಣ್ಯಮತಿ, ಅಗ್ನಿದಳದಲ್ಲಿ ನಿದ್ರಾಲಸ್ಯ, ಯಮದಳದಲ್ಲಿ ಕ್ರೋಧಬುದ್ಧಿ, ನೈರುತ್ಯದಳದಲ್ಲಿ ಪಾಪಕೃತ್ಯ, ವರುಣದಳದಲ್ಲಿ ವಿನೋದ, ವಾಯವ್ಯದಳದಲ್ಲಿ ಗಮನ, ಕುಬೇರದಳದಲ್ಲಿ ರತಿ ಪ್ರೀತಿ, ಈಶಾನ್ಯದಳದಲ್ಲಿ ದ್ರವ್ಯದಾನ, ಮಧ್ಯದಲ್ಲಿ ವೈರಾಗ್ಯವೆಂಬ ಹೃದಯ ಕಮಲದ ಅಷ್ಟಗತಿಗಳಿಂ ತೊಳಲಿಬಳಲಿ,

ಲಿಂಗ ಈಶ ಸೂತ್ರ ವಿರಾಟ ರುದ್ರ ಬ್ರಹ್ಮ ವಿಷ್ಣು ವಿಘ್ನೇಶ್ವರ ವೀರ ಕುಮಾರ ವೃಷಭ ಭೈರವ ಮೈಲಾರ ಯಕ್ಷ ರಾಕ್ಷಸ ಗೌರಿ ದುರ್ಗಿ ಲಕ್ಷ್ಮಿ ಶಾರದೆ ಮಾತೃಕೆ ಯಕ್ಷಿಣಿ ಯೋಗಿಣಿ ಮಾರಿ ಮಸಣಿ ವಿಪ್ರ ಕ್ಷತ್ರಿಯ ವೈಶ್ಯ ಶೂದ್ರ ಗವಾಶ್ವ ಮೃಗ ಪಕ್ಷಿ ಘಟ ಸಾಲಗ್ರಾಮ ಪುಸ್ತಕ ಅಶ್ವತ್ಥ ಜಲ ಪಾಷಾಣ ಕಾಷ್ಠ ಮೃತ್ತಿಕೆ ಚಿತ್ರ ಬಾಜಿ ಗುದ್ದಲಿ ದೇಹಳಿ ತೃಣಾದಿ ಬಹುದೇವತಾ ಭಜನೆಗಳಿಂದ ಆಯಾಯಾ ಪೂಜ್ಯಾನುಸಾರಮಾದ ತಾರತಮ್ಯ ಗತಿವಡೆದು ಇಂತು ಸಕಲ ಸಂಸಾರಿಗಳಾಗಿರ್ಪುಂ. ೪೬೯

ಕರ್ಮಭೂಮಿ ಜನರು :

ಬಳಿಕ ಈ ಭರತ ಖಂಡದಲ್ಲಿ ಮಾಡಿದ ಕರ್ಮಫಲಮಂ, ಪೂರ್ವೋಕ್ತಮಾದ ಇಳಾ ವೃತಾದಿ ವರ್ಷಾಷ್ಟಕಂಗಳಲ್ಲಿಯುಂ, ಮುಂದೆ ಪೇಳ್ವ ದ್ವೀಪಾಂತರಂಗಳಲ್ಲಿಯುಂ, ಸ್ವರ್ಗಾದಿ ಲೋಕಂಗಳಲ್ಲಿಯುಂ, ಅನುಭವಿಸುತ್ತಿಹರಾಗಿ, ಇದೆ ಕರ್ಮಭೂಮಿ, ಮಿಕ್ಕವೆಲ್ಲಂ ಭೋಗಭೂಮಿಯಪ್ಪುದರಿಂದ ಆ ಭೋಗಭೂಮಿಗಳಿಗೆ ಈ ಕರ್ಮಭೂಮಿಯೆ ಕಾರಣಮಪ್ಪುದರಿಂದಲು, ೪೭೦

ಪ್ರಾಣಿಗಳ ಆಯುರ್ನಿರ್ಣಯ :

ಬಳಿಕ ಇಲ್ಲಿಯ ಸಕಲ ಪ್ರಾಣಿಗಳಿಗೆ ಅಕಾಲಮರಣವಿಲ್ಲದಿರ್ದೊಡೆ ವಿಧಿಕಲ್ಪಿತಮಾದ, ಆಯುಷ್ಯವು, ಇರುಹೆಗೆ ಹದಿನೈದು ದಿನ, ಆಡಿಗೆ ಹನ್ನೆರಡು ವರ್ಷ, ಶುನಕಂಗೆ ಹದಿನೈದು ವರ್ಷ, ಗೋವಿಗೆ ಇಪ್ಪತ್ತು ವರ್ಷ, ಒಂಟೆಗೆ ಇಪ್ಪತ್ತೆರಡು ವರ್ಷ, ಮಹಿಷಗೆ ಮೂವತ್ತು ವರ್ಷ, ಕುದುರೆಗೆ ಮೂವತ್ತೆರಡು ವರ್ಷ, ಆನೆಗೆ ನೂರುವರ್ಷ, ವೃಕ್ಷ ಸರ್ಪಂಗಳಿಗೆ ಸಾವಿರವರ್ಷದಾಯುಷ್ಯ, ನರರಿಗೆ ಶತಾಯುವಹುದು. ೪೭೧

ಆಯುರ್ಹ್ರಾಸ ಕಾರಣಗಳು :

ಆ ಶತಾಯುವಿನೊಳಗೆ ಬಾಲ್ಯ ವೃದ್ಧಿ ಬಲ ನೇತ್ರ ಚರ್ಮ ಮತಿ ಶ್ರೋತ್ರ ವಿಷಯ ಉತ್ಥಾನ ಪತನವೆಂಬ ದಶಕಂಗಳು ಅನುಕ್ರಮದಿಂ ಹತ್ತು ಹತ್ತು ವರ್ಷಕ್ಕೆ ಒಂದೊಂದು ನಷ್ಟವಪ್ಪುದರಿಂದವೂ; ಬಳಿಕ ಇಲ್ಲಿಯ ವನಿತಾದಿ ವಿಷಯ ಜಾತಂಗಳಿಗೆ ತಾತ್ಕಾಲಿಕ ಭೋಗಹೇತುತ್ವ, ಪರಿಣಾಮತ್ವ, ನೀರಸತ್ವ, ಅವಿಚಾರಿತ್ವ, ಅರಮಣೀಯತ್ವ ಕ್ಷಣಭಂಗಿರತ್ವಾದಿಗಳು ಸ್ವಪ್ನ ಪ್ರಪಂಚದೊಡನೆ ಸಮಾನವಪ್ಪುದರಿಂದವೂ; ಬಳಿಕ ಇಲ್ಲಿಯ ಸಕಲ ವಿಷಯಂಗಳೆಲ್ಲಂ ಸುರಬಾಪ ಸುಳಿಗಾಳಿ ಸಂಜೆಗೆಂಪು ಮಂಜು ಮಿಂಚು ತೆರೆ ನೀರಕ್ಕರ ಆಲಿಕಲ್ಲು ಬೊಬ್ಬುಳಿಕೆ ದೀಪಜ್ವಾಲೆ ಮೊದಲಾದವರಂತೆ ಸ್ಥಿತಿ ನಿಯಮವಿಲ್ಲದೆ ಕೆಡಲುಳ್ಳುದರಿಂದವೂ; ಸರ್ವಥಾ ಸುಸ್ಥಿತವಲ್ಲವೆಂಬುದನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿದ, ವಿವೇಕಿಗಳು ಈ ಭರತಖಂಡದಲ್ಲಿಯೇ ಮುಂದೆ ನಿತ್ಯ ಸುಖರೂಪಂಗಳಾದ

ಜೀವತ್ವವನೀವ ಯಜ್ಞಂಗಳಂ ಸಂಪದಗಳನೀವ ಸಾಧನಂಗಳಂ, ಮುಕ್ತಿಯನೀವ ಸಮ್ಯಕ್‌ಜ್ಞಾನಂಗಳಂ ಸಮ್ಯಕ್ಕಾಗಿ ಆಚರಿಸಲ್ವೇಳ್ಕುಂ ಎಂಬುದೇ ಸತ್ಯಸಲ್ಲಾಪಮಕ್ಕುಂ.

ಮತ್ತಂ ಇಂತು ಪೇಳ್ದ ಭಾರತವರ್ಷಂ ಮೊದಲಾದ ನವಖಂಡವು ಅವರ ವಿಭಾಗ ಶೈಲಂಗಳ ಯೋಜನಕ್ರಮದಿಂದ ಒಂದುಲಕ್ಷಯೋಜನ ವಿಶಾಲಮಾಗಿ ಮನೋಹರಮಾಗಿ ಇರ್ಪುದೇ ಜಂಬೂದ್ವೀಪಮಕ್ಕು, ೪೭೨

ಇತಿ ಜಂಬೂದ್ವೀಪ ಸ್ಥಿತಿ ವರ್ಣನಂ

ಚತುರ್ಥ ಪರಿಚ್ಛೇದ.

■■

ಪಂಚಮ ಪರಿಚ್ಛೇದ

ಕಂದ॥ ಇಂಬಾಗಿರೆ ಭೂಲೋಕದ
ಜಂಬೂದ್ವೀಪವನೆ ಪೇಳ್ವೆನಿಂತೊಲಿದು ಬಳಿ
ಕ್ಕಂ ಬೇರುಳಿದ ದ್ವೀಪ ಕ
ದಂಬಂಗಳನಂಬುಧಿಗಳನಭಿವರ್ಣಿಸುವೆಂ॥

ಅದೆಂತೆಂದೊಡೆ :

ಆ ಜಂಬೂದ್ವೀಪದ ಪೊರವಳಸಿನಲ್ಲಿ ಲವಣ ಸಮುದ್ರಂ ಒಂದು ಲಕ್ಷ ಯೋಜನದ ವಿಶಾಲಮಾಗಿಹುದು, ಆದೊಡೆ; ಕಮಠ ಕರ್ಕಟಕ ಜಳೂಕ ಜಲಕುಂಭಿ ಚಕ್ರ ನಕ್ರ ಮಕರ ಮತ್ಸ್ಯ ಬಕ ಭೇಕಾದಿ ಮಹಾಜಲಚರ ಪ್ರಾಣಿ ಹತ್ತುಲಕ್ಷಜಾತಿಗಳಿಗೆ ಆಶ್ರಯಮಾಗಿ, ಮುತ್ತು ಮಾಣಿಕ ಪವಳಂಗಳುದಿಸುವೆಡೆಯೆನಿಸಿ, ಫೇನ ತರಂಗಾದಿಗಳಿಂದ ಅತಿ ಘೋಷಿಸುತ್ತಿರ್ಕುಂ.

ಶಾಕದ್ವೀಪ :

ಮತ್ತಂ, ಆ ಲವಣ ಸಮುದ್ರದಿಂ ಹೊರಗಾವರಿಸಿ ಶುಭ್ರವರ್ಣದ ಭೂಮಿಯನುಳ್ಳ ಶಾಕದ್ವಿಪವು ಎರಡುಲಕ್ಷ ಯೋಜನ ವಿಶಾಲದಿಂದಿಹುದು. ಅದಕ್ಕೆ ಮೇಧಾತಿಥಿ ಎಂಬವನು ಅರಸಾಗಿರ್ಪನು, ಆತಂಗೆ ಶಾಂತಭಯ ಶಿಶಿರ ಸುಬೋಧ ಅನಂತ ಶಿವ ಕ್ಷೇಮಕ ಧ್ರುವರೆಂಬಏಳು ಮಕ್ಕಳು. ಬಲಿಕ ಆ ದ್ವೀಪವನು ಏಳು ಭಾಗಂ ಮಾಡಿಕೊಡಲವರವರ ಪೆಸರಿನಲ್ಲಿ ಆಯಾಯಾ ಖಂಡಂಗಳಿರ್ಪವು. ಅವರ ವಿಭಾಗ ಶೈಲಂಗಳ್ ಆವವು ಎಂದೊಡೆ; ಪೂರ್ವಾದಿ ಪ್ರದಕ್ಷಿಣಮಾಗಿ ಗೋಮೇಧಗಿರಿ ಚಂದ್ರಗಿರಿ ನಾರದಗಿರಿ ದುಂದುಭಿಗಿರಿ ಸುಮನಸಗಿರಿ ಅಲಂಘ್ಯಗಿರಿ ವೈಭ್ರಾಜಗಿರಿಗಳೆಂಬವರವರಲ್ಲಿ ಜನಿಸಿದ ನದಿಗಳಾವಾವೆನೆ; ಅನುತಪ್ತೆ ಶಿಖಿ ವಿಷಾಪೆ ತ್ರಿದಿವೆ ಕ್ಷಮಹರೆ ಅಮೃತೆ ಸುಕೃತಿಗಳೆಂಬ ಏಳುನದಿಗಳು ಆಯಾಯ ಖಂಡಂಗಳಲ್ಲಿ ಕ್ರಮದಿಂ ಸುಳಿದು ಸಮುದ್ರಗಾಮಿಗಳಾದವು. ಆ ಖಂಡಂಗಳ ಏಳರಲ್ಲಿಯೂ ಏಳೇಳು ಕುಲಪರ್ವತಂಗಳುಂ, ಕ್ಷುದ್ರಗಿರಿ, ನದಿ, ವನಾದಿ ಶೋಭನಂಗಳು ಅನಂತಂಗಳು ಉಂಟು. ಅಲ್ಲಿಯ ಜನರು ಮೂರು ತಾಳುದ್ದದವರಾಗಿ ಕಲ್ಪವೃಕ್ಷ ಫಲಾಹಾರದಿಂದ ಇಪ್ಪತ್ತು ಸಾವಿರ ವರ್ಷದ ಆಯುಷ್ಯದಿಂದ ಜರೆ ರುಜೆಗಳಿಲ್ಲದೆ ಹರನಾಮ ಲಿಂಗಪೂಜಕರಗಿ ಪರಮೈಶ್ವರ್ಯದಿಂದ ಇರ್ಕುಂ. ೪೭೩

ಕ್ಷೀರ ಸಮುದ್ರ :

ಮತ್ತಂ ಆ ಶಾಕದ್ವೀಪದ ಪೊರವಳಸಿನಲ್ಲಿ ಕ್ಷೀರಸಮುದ್ರವು ಎರಡು ಲಕ್ಷ ಯೋಜನ ವಿಶಾಲದಿಂದ ಇಹುದು. ಅದರಲ್ಲಿ: ಅಹಲ್ಯೆ ಸಿರಿ ತಾರಾದೇವಿ ಸುಧೆ ಸುಧಾಂಶು ಸುರತರು ಸುರಧೇನು ಚಿಂತಾಮಣಿ ಮೊದಲಾದ ಮುಖ್ಯಸಂಪತ್ತುಗಳು ಉದಿಸಿದ ಎಡೆಯೆನಿಸಿ ಮೋರಿಸುತ್ತಿಹುದು. ಅಲ್ಲಿ ಹತ್ತುಸಾವಿರ ಯೋಜನ ವಿಶಾಲದ ಕನಕಮಣಿಮಯವಾದ ಅರಮನೆಯಲ್ಲಿ ನಾರಾಯಣನು ಅನಂತಶಯನನಾಗಿರ್ಪಂ. ೪೭೪

ಕುಶದ್ವೀಪ :

ಮತ್ತಂ ಆ ಕ್ಷೀರಸಮುದ್ರಮಂ ಪೊರವಳಸಿದ ನೀಲವರ್ಣದ ಭೂಮಿಯನುಳ್ಳ ಕುಶದ್ವೀಪವೆ ನಾಲ್ಕುಲಕ್ಷ ಯೋಜನದ ಅಗಲವು. ಅದಕ್ಕೆ ವಪುಷ್ಮಂತನೆಂಬಾತನು ಅಧಿಪತಿ. ಆತಂಗೆ ಶ್ವೇತ ಹರಿತ ಜೀಮೂತ ಲೋಹಿತ ವೈದ್ಯುತಕ ಮಾನಸ ಸುಪ್ರಭರೆಂಬ ಏಳು ಮಕ್ಕಳು, ಬಳಿಕ ಅವರಿಗೆ ಆ ದ್ವೀಪವನು ಏಳುಭಾಗಂ ಮಾಡಿ ಕೊಡಲು ಅವರವರ ಪೆಸರಿನಲ್ಲಿ ಆಯಾಯಾ ಖಂಡಂಗಳಿರ್ಪವು. ಅವರ ಸೀಮಾ ಪರ್ವತಂಗಳೇ ಪೂರ್ವಾದಿ ಪ್ರದಕ್ಷಿಣಮಾಗಿ ಕುಮುದನಗ ಉನ್ನತನಗ ವಲಾಹನಗ ಕೇತುನಗ ದ್ರೋಣಕನಗ ಮಹಿಷಕ ನಗ ಕಕುತ್ಮಾನಗ ಎಂಬವು. ಇವರಲ್ಲಿ ಪುಟ್ಟಿದ ನದಿಗಳೆ ಯೋಗಿ ವಿತೃಷ್ಣೆ ಚಂದ್ರೆ ಶುಕ್ಲೆ ವಿಮೋಚಿನಿ ವಿವೃತ್ತೆಯೆಂಬ ಏಳು ನದಿಗಳು ಆಯಾಯ ವರ್ಷಂಗಳಲ್ಲಿ ಕ್ರಮದಿಂ ಸುಳಿದು ಸಮುದ್ರಮಂ ಬೆರಸಿದವು. ಆ ಖಂಡಂಗಳೇಳರಲ್ಲಿಯು ಏಳೇಳು ಕುಲಾಚಲಂಗಳುಂ, ಸಾಮಾನ್ಯಗಿರಿ ನದಿ ನಂದನಾದಿ ರಚನೆಗಳು ಅಸಂಖ್ಯಾತಂಗಳುಂಟು, ಅಲ್ಲಿಯ ಜನರು ಒಂದು ತಾಳುಉದ್ದದವರು. ಅವರು ಕಲ್ಪವೃಕ್ಷ ಫಲಾಹಾರಿಗಳಾಗಿ ಇಪ್ಪತ್ತುಸಾವಿರ ವರ್ಷ ಜೀವಿಗಳೆನಿಸಿ, ಜರೆ ರುಜೆಗಳಿಲ್ಲದೆ ರುದ್ರನಾಮಕ ಲಿಂಗಪೂಜಕರಾಗಿ ನಿತ್ಯ ಸುಖಿಗಳಾಗಿರ್ಪರ್. ಅಲ್ಲಿ ತಾಳಪ್ರಮಾಣಮೆಂದೊಟೆ, ನರರ ನಾಲ್ವತ್ತುಗೇಣುದ್ದವಹುದು ಅದರಿಂದ ಐದಾಳು ಉದ್ದಮಕ್ಕುಂ. ೪೭೫

ದಧಿ ಸಮುದ್ರ – ಕ್ರೌಂಚ ದ್ವಿಪ :

ಮತ್ತಂ ಆ ಕುಶಕ್ವೀಪಮಂ ಪೊರಗಾವರಿಸಿರ್ದ ದಧಿಸಮುದ್ರವೆ ನಾಲ್ಕುಲಕ್ಷ ಯೋಜನದ ಅಗಲಮಾಗಿರ್ಕುಂ. ಬಳಿಕ ಅದನ್ ಆವರಿಸಿದ ಕಪಿಲವರ್ಣದ ಭೂಮಿಯನುಳ್ಳ ಕ್ರೌಂಚದ್ವೀಪವು ಎಂಟುಲಕ್ಷ ಯೋಜನವಿಶಾಲವು ಅದಕ್ಕೆ ಜ್ಯೋತಿಷ್ಮಂತನೆಂಬಾತನೆ ಕರ್ತೃವು. ಆತಂಗೆ ಉದ್ಭಿಜ ವೇಣುಮಾದನ್ನು ಸ್ವೈರದ ಲಂಬ ಧೃತಿ ಪ್ರಭಾಕರ ಕಪಿಲರೆಂಬವರೇಳು ಮಕ್ಕಳು. ಬಳಿಕ್ಕವರಿಗೆ ಆ ದ್ವೀಪವನೇಳು ಭಾಗಂಗೆಯ್ದು ಕೊಡಲು ಅವರ ಹೆಸರಿನಲ್ಲಿ ಆಯಾಯಾ ಖಂಡಂಗಳಿರ್ಪವು. ಅವರ ಸೀಮಾಪರ್ವತಂಗಳೆ ಪೂರ್ವಾದಿ ಪ್ರದಕ್ಷಿಣಮಾಗಿ ವಿದ್ರುಮಪರ್ವತ ಹೇಮಪರ್ವತ ದ್ಯುತಿಮಾನ್‌ಪರ್ವತ ಪುಷ್ಪವಾನ್‌ಪರ್ವತ ಕುಶೇಷಯಪರ್ವತ ರತ್ನಪರ್ವತ

ಮಂದರಪರ್ವತಗಳೆಂಬವು ಇವರಲ್ಲಿ ಪುಟ್ಟಿದ ನದಿಗಳೇ ದೂತಪಾಪೆ ಶಿವೆ ಪವಿತ್ರೆ ಸುಮತಿ ದ್ಯುತಿದಂಜಿ ಮಹೀಚಿಕೆ ಸರ್ವಪಾಪಹರೆಗಳೆಂಬ ಏಳು ನದಿಗಳು ಆಯಾಯಾ ವರ್ಷಂಗಳಲ್ಲಿ ಕ್ರಮದಿಂ ಚರಿಸಿ ಸಮುದ್ರಮಂ ಕೂಡಿದವು. ಆ ಖಂಡಂಗಳ ಏಳರಲ್ಲಿಯು ಏಳೇಳು ಕುಲಗೋತ್ರಂಗಳುಂ ಸಾಧಾರಣ ಗಿರಿ ನದಿ ವನಾದಿ ಪರಿಕಲ್ಪಿತಂಗಳು ಅನಂತಂಗಳುಂಟು. ಆ ವರ್ಷದಲ್ಲಿಯ ಜನರು ಮೂರುತಾಳು ಉದ್ದದವರಾಗಿ ಕಲ್ಪವೃಕ್ಷ ಫಲಾಹಾರದಿಂದ ಇಪ್ಪತ್ತುಸಾವಿರವರ್ಷದ ಆಯುಷ್ಯವಂತರೆನಿಸಿ ಜರೆ ರುಜೆಗಳಿಲ್ಲದೆ ಸ್ಥಾಣುನಾಮ ಲಿಂಗಪೂಜಕರಾಗಿ ಸದಾ ಆನಂದಿಗಳಾಗಿರ್ಕುಂ. ೪೭೬

ಘೃತಸಮುದ್ರ – ಶಾಲ್ಮಲಿ ದ್ವೀಪ :

ಅನಂತರದೊಳು ಆ ಕ್ರೌಂಚದ್ವೀಪದ ಪೊರೆಗೆ ಆವರಿಸಿದ ಘೃತಸಮುದ್ರವು ಎಂಟುಲಕ್ಷ ಯೋಜನದ ಅಗಲಮಾಗಿರ್ಕುಂ. ಬಳಿಕ ಅದನ್ನು ಆವರಿಸಿದ ರಕ್ತವರ್ಣದ ಭೂಮಿಯನುಳ್ಳ ಶಾಲ್ಮಲಿದ್ವೀಪವೆ ಹದಿನಾರುಲಕ್ಷ ಯೋಜನದ ಅಳವಿ, ಅದಕ್ಕೆ ದ್ಯುತಿಮಂತನೆಂಬಾತನೆ ರಾಜನು. ಆತಂಗೆ ಕುಶಲ ಮನೋಹರ ಉಲೋಷ್ಣ ಪ್ರವರ ಅಂಧಕಾರ ಮುನಿ ವರಿಷ್ಟರೆಂಬವರು ಏಳು ಮಕ್ಕಳು. ಬಳಿಕ ಅವರಿಗೆ ಆ ದ್ವೀಪವನು ಏಳು ಭಾಗಂಗೆಯ್ದು ಕೊಡಲು ಅವರವ ಪೆಸರಿವಲ್ಲಿ ಆಯಾಯಾ ಖಂಡಂಗಳಿರ್ಪವು. ಅವರ ಸೀಮಾಪರ್ವತಂಗಳೆ ಪೂರ್ವಾದಿ ಪ್ರದಕ್ಷಿಣಮಾಗಿ ಕ್ರೌಂಚನಗ ನಾಮನಗ ಅಂಧಕಾರಶೈಲ ವಿವಾವೃಟ್‌ಪರ್ವತ ವಿವಿಧಶಿಖರಿ ಪುಂಡರೀಕಾದ್ರಿ ದುಂದಭಿಗೋತ್ರವೆಂಬವು ಇವರಲ್ಲಿ ದೇವಗಂಧರ್ವರು ಇರ್ಪರು. ಅಲ್ಲಿ ಜನಸಿದ ನದಿಗಳೆ ಗೌರಿ ಕುಮುದ್ವತಿ ಸಂಧ್ಯಾರಾಗೆ ಮನೋಜವೆ ಖ್ಯಾತಿ ಪುಂಡರೀಕೆ ಪುಣ್ಯವತಿಗಳೆಂಬ ಏಳು ನದಿಗಳು ಆಯಾಯಾ ಖಂಡಗಳಲ್ಲಿಯ ಏಳೇಳು ಕುಲಗೋತ್ರಂಗಳುಂ, ಸಾಮಾನ್ಯ ಗಿರಿ ನಂದನಾದಿ ವಿಚಿತ್ರಗಳುಂಟು, ಆ ವರ್ಷಂಗಳಲ್ಲಿಯ ಜನರು ಮೂರು ತಾಳು ಉದ್ದದವರು. ಕಲ್ಪವೃಕ್ಷ ಫಲಾಹಾರದಿಂದ ಇಪ್ಪತ್ತು ಸಾವಿರ ವರ್ಷದ ಆಯುಷ್ಯದಿಂ ಜರೆ ರುಜೆಗಳಿಲ್ಲದೆ ಭೀಮೇಶ್ವರನಾಮ ಲಿಂಗಪೂಜಕರಾಗಿ ಸುಖಸ್ವರೂಪರಾಗಿರ್ಕುಂ. ೪೭೭

ಇಕ್ಷು ಸಮುದ್ರ – ಗೋಮೇಧಿಕ ದ್ವೀಪ :

ಅನಂತರದೊಳು ಆ ಶಾಲ್ಮಲಿ ದ್ವೀಪದ ಪೊರಗಾವರಿಸಿದ ಇಕ್ಷುರಸ ಸಮುದ್ರವೆ ಹದಿನಾಲ್ಕುಲಕ್ಷ ಯೋಜನದ ಅಗಲಮಕ್ಕುಂ. ಬಳಿಕ ಅದನು ಆವರಿಸಿದ ರಕ್ತವರ್ಣದ ಭೂಮಿಯನುಳ್ಳ ಗೋಮೇಧಿಕ ದ್ವೀಪವೆ ಮೂವತ್ತೆರಡುಲಕ್ಷ ಯೋಜನದ ಅಗಲವು. ಅದಕ್ಕೆ ಭವ್ಯನೆಂಬಾತನೆ ವಲ್ಲಭನು.ಆತಂಗೆ ಜಲದ ಕುಮಾರಕ ಮಣೀಚಿಕೆ ಸುಕರ ಉತ್ತಮ ತೌದಾಕಿ ವಿಶಿಷ್ಟರೆಂಬವರು ಏಳು ಮಕ್ಕಳು. ಬಳಿಕ ಅವರಿಗೆ ಆ ದ್ವೀಪವನು ಏಳು ಭಾಗಂ ಮಾಡಿಕೊಡಲು ಅವರ ಪೆಸರಿವಲ್ಲಿ ಆಯಾಯ ಖಂಡಂಗಳಿರ್ಪವು ಅವರ ಸೀಮಾ ಪರ್ವತಂಗಳೆ ಪೂರ್ವಾದಿ ಪ್ರದಕ್ಷಿಣಮಾಗಿ, ಉದಯಾಚಲ ಜಲದಾಚಲ ರೈವತಕ ಮಹೇಂದ್ರ ಶಾಮಾದ್ರಿ ಅಂಬೋದ್ರಿ ಅಂಬಿಕಾದ್ರಿ ರಮ್ಯಕಾದ್ರಿಗಳೆಂಬವು, ಇವರಲ್ಲಿ

ಜನಿಸಿದ ನದಿಗಳು: ಪಾಪಭಯ ಪುಣ್ಯ ಕುಮಾರಿ ಸುಕುಮಾರಿ ನಳಿನಿ ವೇಣುಕೆ ಜಯೆ ಎಂಬ ಏಳು ನದಿಗಳು ಆಯಾಯ ಖಂಡಂಗಳಲ್ಲಿ ಕ್ರಮದಿಂ ಪರಿದು ಸಮುದ್ರಗಾಮಿಗಳಾದವು. ಆ ಖಂಡಂಗಳ ಏಳರಲ್ಲಿಯೂ ಏಳೇಳು ಕುಲಗಿರಿಗಳುಂ ಕ್ಷುದ್ರಗಿರಿಗಳುಂ, ನದಿವನಾದಿಗಳು ಅನಂತಂಗಳುಂಟು. ಆ ವರ್ಷದಲ್ಲಿಯ ಜನರು ಮೂರು ತಾಳುದ್ದದವರು. ಅವರು ಕಲ್ಪವೃಕ್ಷ ಫಲಾಹಾರಿಗಳಾಗಿ ಇಪ್ಪತ್ತು ಸಾವಿರ ವರ್ಷದ ಆಯುಷ್ಯದಿಂ ಜರೆ ರುಜೆಗಳಿಲ್ಲದೆ ವಿಶ್ವೇಶ್ವರನಾಮ ಲಿಂಗಪೂಜಕರಾಗಿ ಸ್ವಸ್ಥಚಿತ್ತರಾಗಿರ್ಕುಂ. ೪೭೮

ಸುರಾ ಸಮುದ್ರ– ಪುಷ್ಕರದ್ವೀಪ :

ಅನಂತರದೊಳು ಆ ಗೋಮೇಧ ದ್ವೀಪದ ಪೊರಗಾವರಿಸಿದ ಸುರಾ ಸಮುದ್ರವೆ ಮೂವತ್ತೆರಡು ಲಕ್ಷ ಯೋಜನದ ಅಗಲಮಕ್ಕುಂ. ಬಳಿಕ ಅದರ ಪೊರವಳಿಸಿದ ಧವಲವರ್ಣದ ಭೂಮಿಯನುಳ್ಳ ಪುಷ್ಕರ ದ್ವೀಪವು ಅರುವತ್ತು ನಾಲ್ಕು ಲಕ್ಷ ಯೋಜನದ ಅಳವಿಯು. ಅದಕ್ಕೆ ಸವನೆಂಬವನೆ ನೃಪನು ಆತಂಗೆ; ಧಾತಕಿ ಸುಖೋತ್ಕರರೆಂಬರು ಈರ್ವರು ಮಕ್ಕಳು. ಬಳಿಕ ಅವರಿಗೆ ಆ ದ್ವೀಪವನು ಎರಡು ಭಾಗಂ ಮಾಡಿಕೊಡಲು ಅವರವರ ಪೆಸರಿನಲ್ಲಿ ಆಯಾಯಾ ಖಂಡಗಳಿರ್ಪವು. ಅವರ ಮಧ್ಯದಲ್ಲಿ ವೃತ್ತಾಕಾರಮಾದ ಮಾನಸೋತ್ತರವೆಂಬುದೊಂದು ಪರ್ವತವಿಹುದು. ಅದರ ಮೇಲೆ ಯಕ್ಷ ರಕ್ಷ ಗರುಡ ಗಂಧರ್ವಾದಿಗಳ ಪಟ್ಟಣಂಗಳು ಅನಂತಂಗಳುಂಟು. ಆ ಗಿರಿಯಿಂದ ಉತ್ತರಭಾಗವೆ ಧಾತಕಿ ಎಂಬಾತನದು. ಆ ಖಂಡದ್ವಯದಲ್ಲಿ ಮಹಾನದಿಗಳು ಕ್ಷುದ್ರ ಗಿರಿ ನಂದನಾದಿ ನಾನಾ ರಂಜನೆಗಳುಂಟು. ಅ ವರ್ಷದಲ್ಲಿಯ ಜನರು ಮೂರುತಾಳು ಉದ್ದದವರು. ಕಲ್ಪವೃಕ್ಷ ಫಲಾಹಾರದಿಂದ ಇಪ್ಪತ್ತು ಸಾವಿರ ವರ್ಷದ ಆಯುಷ್ಯದಿಂ ಜರೆ ರುಜೆಗಳಿಲ್ಲದೆ ಸೋಮೇಶ್ವರನಾಮ ಲಿಂಗಪೂಜಕರಾಗಿ ನಿತ್ಯ ಸುಖದಿಂದಿರ್ಕುಂ. ೪೭೯

ಸ್ವಾದೂದಕ ಸಮುದ್ರ :

ಮತ್ತಂ ಆ ಪುಷ್ಕರ ದ್ವೀಪಲಮಂ ಪೊರಗೆ ಆವರಿಸಿದ ಸ್ವಾದೂದಕ ಸಮುದ್ರವು ಅರುವತ್ತುನಾಲ್ಕುಲಕ್ಷ ಯೋಜನದ ಅಗಲಮಾಗಿ, ಸಮಸ್ತ ಮೇಘಮಾಲೆಗಳಿಗೆ ಉದಕವನಿತ್ತು ಸಕಲ ಲೋಕೋಪಕಾರಮಾಗಿರ್ಕುಂ. ಬಳಿಕ ಅದರ ಪೊರವಳಸಿ ಸರ್ವದೇವತಾ ಕ್ರೀಡಾರ್ಥಮಾದ ಹಿರಣ್ಮಯಭೂಮಿ ದಶಕೋಟಿ ಯೋಜನದ ಅಗಲದಿಂ ಜಂಘಾಮಾತ್ರ ಪ್ರಮಾಣಿನ ಜಲಮಯವಾಗಿ ನಿರ್ಜರ ಪ್ರದೇಶಮಾಗಿರ್ಕುಂ. ೪೮೦

ಲೋಕಾಲೋಕ ಮಹಾಗಿರಿ :

ಮತ್ತಂ, ಅದನಾವರಿಸಿದ ಸುರಸಂತತಿಗೆ ಆಸ್ಪದವಾದ ಸೂರ್ಯನ ರಥಸಂಚರಣದ ಎಡೆಯೆನಿಪ ತನ್ನ ಲಕ್ಷಣಭಾಗಮಾದ ಕಡೆಯೊಳು ಆ ಸೂರ್ಯನ ಪ್ರಕಾಂ ಪ್ರವೇಶವಿಲ್ಲದಾಗಿ ತಮಸ್ಸುಗಳು ಉಳ್ಳುದರಿಂ ಲೋಕಾಲೋಕ ಪರ್ವತವೆಂಬ ಪೆಸರ್ವಡೆದಿಹುದು. ಆ ಮಹಾಗಿರಿಯೆ ಕೋಂಟೆಯಂತೆ ಅ ಹಿರಣ್ಮಯ ಭೂಮಿಯಂ

ಬಳಸಿ ಹತ್ತುಸಾವಿರ ಯೋಜನದಗಲ ಐವತ್ತು ಸಾವಿರ ಯೋಜನದ ಉದ್ದವಾಗಿರ್ಪುದು. ಆ ಗಿರಿಯು ಮೇಲೆ ಆ ಸೂರ್ಯನ ರಥಕ್ಕೆ ಆ ತಮೋಭೂಮಿಯಿಂ ರಾಕ್ಷಸರ ವಿಘ್ನಮಾಗದಂತೆ ಇಂದ್ರಾದಿ ದಿಕ್ಪಾಲಕರ ಪದಾತಿ ಬಲಂ ತಮ್ಮ ತಮ್ಮದೆನಿಸಿ ಅಲ್ಲಿ ಕಾಯ್ದುಕೊಂಡಿರ್ಕುಂ. ೪೮೧

ತಪೋಭೂಮಿ :

ಮತ್ತಂ ಅದರಾಚೆಯಲ್ಲಿ ಬರಿಯ ತಮಸ್ಸುಮುಸುಕಿಹ ಭೂಮಿ ಮೂವತ್ತೈದು ಕೋಟಿಯುಂ ಹತ್ತೊಂಭತ್ತು ಲಕ್ಷಮುಂ ನಾಲ್ವತ್ತುಸಾವಿರ ಯೋಜನ ಪ್ರಮಾಣವು. ಅದರಲ್ಲಿ ನಿಶಾಚರಜಾದಿ ರಾಕ್ಷಸರಿರ್ಕುಂ.

ಗರ್ಭೋದಕ ಸಮುದ್ರ :

ಮತ್ತಂ ಅದರಾಚೆಯಲ್ಲಿ ಗರ್ಭೋದಕ ಸಮುದ್ರವು ಒಂದು ಕೋಟಿ ಇಪ್ಪತ್ತೇಳು ಲಕ್ಷಯೋಜನ ವಿಶಾಲದಿಂದಿಹುದು. ಅಲ್ಲಿ ಬಲಮುರಿಯ ಶಂಖದಗಿರಿಯುಂ; ತಿಮಿತಿ ತಿಮಿಂಗಿಲಾದಿ ಮಹಾಜಲಚರ ಪ್ರಾಣಿಗಳುಂ; ಆ ತಿಮಿತಿಮಿಂಗಿಲಮೆಂಬ ಮೀನ್ಗಳನೊಂದೊಂದನೀಕ್ಷಿಸಿ ಬೆರಸಿ ಸಂಯೋಗ ಮಥನದಿಂದ ಆ ಗರ್ಭೋದಕ ಸಮುದ್ರಂ ತುಳುಂಕಿ ಮೇರೆಗಳೆದು, ಸಮಸ್ತ ದ್ವೀಪಂಗಳನೊಳಕೊಂಡು, ಜಲಪ್ರಳಯಂ ಅಗದಂತೆ ಅವರ ಮಧ್ಯದಲ್ಲಿ ಮಹಾಪರ್ವತಾಕಾರಮಾದ ಕಮಠವೊಂದು ಮರೆಯಾಗಿ ಮೆರೆಯುತ್ತಿರ್ಕುಂ. ಮತ್ತೆ ಅದರಾಚೆಯಲ್ಲಿ ಬ್ರಹ್ಮಾಂಡ ಕಟಾಹಾಂತಮಾದ ಬಯಲು ಒಂದು ಕೋಟಿ ಯೋಜನ ವಿಶಾಲಮಾಗಿರ್ಕುಂ. ೪೮೨

ಭೂಲೋಕ ಯೋಜನ ಸಂಖ್ಯೆ :

ಬಳಿಕ ಈ ಕ್ರಮದಿಂ ಯೋಜನ ಪ್ರಮಾಣವನು ಎಣಿಸಿನೋಡೆ ಜಂಬೂದ್ವೀಪಂ ಮೊದಲಾದ ದ್ವೀಪ ಏಳಕ್ಕೆ ಒಂದು ಕೋಟಿಯುಂ ಇಪ್ಪತ್ತೇಳು ಲಕ್ಷ ಯೋಜನ ಪ್ರಮಾಣವಹುದು.

ಕ್ಷಾರಾದಿ ಸಮುದ್ರವೇಳಕ್ಕೆ ಒಂದು ಕೋಟಿಯುಂ ಇಪ್ಪತ್ತೇಳುಲಕ್ಷ ಯೋಜನ ಪ್ರಮಾಣವಹುದು.

ಆ ಹಿರಣ್ಮಯ ಭೂಮಿಯೆ ದಶಕೋಟಿ ಯೋಜನಪ್ರಮಾಣವಹುದು.

ಲೋಕಾಲೋಕ ಪರ್ವತವೆ ಹತ್ತುಸಾವಿರ ಯೋಜನ ಪ್ರಮಾಣವಹುದು.

ಆ ತಮೋಭೂಮಿಯೆ ಮೂವತ್ತೈದು ಕೋಟಿಯು ಹತ್ತೊಂಭತ್ತು ಲಕ್ಷ ನಾಲ್ವತ್ತು ಸಾವಿರ ಯೋಜನ ಪ್ರಮಾಣವಹುದು.

ಅದರಾಚೆಯ ಗರ್ಭೋದಕ ಸಮುದ್ರಂ ಒಂದು ಕೋಟಿಯುಂ ಇಪ್ಪತ್ತೇಳು ಲಕ್ಷ ಯೋಜನ ಪ್ರಮಾಣವಹುದು.

ಮತ್ತಂ ಅದರಾಚೆಯ ಬಯಲು ಒಂದುಕೋಟಿ ಯೋಜನ ಪ್ರಮಾಣವಹುದು. ಇಂತು ಐವತ್ತು ಕೋಟಿಯುಂ, ಐವತ್ತು ಸಾವಿರ ಯೋಜನಕ್ಕೆ ಒಂದು ಲಕ್ಷ ಯೋಜನ

ಪ್ರಮಾಣಮಾದ, ಆ ಜಂಬೂದ್ವೀಪಕ್ಕೆ ಮೇರು ಮಧ್ಯಸ್ಥವಾದ ಕಾರಣದಿಂ, ಮೇಲಣ ಐವತ್ತು ಸಾವಿರ ಯೋಜನಮಂ ಕಳೆದು, ಮೇರುವಿನ ಅರ್ಧದಿಂ ಬ್ರಹ್ಮಾಂಡ ಕಟಾಹಾಂತಮಾದ ಭೂಮಿ ಪಂಚಾಶತಕೋಟಿ ಯೋಜನ ಪ್ರಮಾಣವಹುದು. ಈ ಕ್ರಮದಿಂ ಅ ಮೇರುವಿನ ಪೂರ್ವ ಪಶ್ಚಿಮ ದಕ್ಷಿಣ ಉತ್ತರದೊಳು ನೋಡೆ ಬ್ರಹ್ಮಾಂಡದ ಆಯತಂ ನೂರು ಕೋಟಿ ಯೋಜನ ಪ್ರಮಾಣಮೆಂದು ನಿಶ್ಚಿತಮಕ್ಕುಂ. ೪೮೩

ಇತಿ ಮರ್ತ್ಯಲೋಕ ಸ್ಥಿತಿ ವರ್ಣನಂ

ಪಂಚಮ ಪರಿಚ್ಛೇದ

■■

ಷಷ್ಠಮ ಪರಿಚ್ಛೇದ

ಕಂದ ॥ ಅನುನಯದಿಂ ಭೂಲೋಕದ
ಘನತೆಯನುಸುರ್ದೆನೂರ್ಧ್ವ ಲೋಕಂಗಳನೀ ।
ಜನವರಿದಚ್ಚರಿವಡುವಂ
ತಿನಿವಾತುಗಳಿಂದ ಪೇಳ್ವೆನೀಗಳನೂನಮ ॥

ಅದೆಂತೆಂದೊಡೆ,

ಭುವಲೋಕ ವಾಯುಗತಿ :

ಭೂತಳದಿಂ ಧ್ರುವಮಂಡಲ ಪರಿಯಂತಮಾಗಿ ಪದಿನೈದುಲಕ್ಷ ಯೋಜನ ಪ್ರಮಾಣಮಪ್ಪುದೇ ಭುವರ್ಲೋಕವು. ಅದರಲ್ಲಿ ವಾಯುವು ಆಧಾರಮಾದ ಸಮಸ್ತ ಮೇಘಂಗಳುಂ, ಸಿದ್ಧಗಂಧರ್ವಾದಿಗಳ ಆಶ್ರಯಂಗಳುಂ ಸೂರ್ಯಾದಿ ನವಗ್ರಹಂಗಳುಂ ಕ್ರಮದಿಂದ ಉತ್ತರೋತ್ತಮಾಗಿರ್ಪ್ಪವು. ಅದೆಂತೆಂದೊಡೆ : ಮೊದಲು ತನ್ವಾಯುವು ಈ ಭೂತಳದಿಂ ಮೇಲೆ ಉನ್ನತ ಐವತ್ತು ಯೋಜನ ಪರಿಯಂತವಾಗಿ ವ್ಯಾಪಿಸಿಕೊಂಡಿರ್ದು.ಭೂಮಿಯ ಸಕಲ ಔಷಧಿಗಳಂ ವಾಯುವು ಈ ಧರೆಯಂ ವ್ಯಾಪಿಸಿ ಸಮಸ್ತರ್ಗೆ ದೀಪನಂ ಪುಟ್ಟಿಸಿ, ದನುಜರ ಗಮನಕ್ಕೆ, ಪಕ್ಷಿಗಳು ಹಾರುವುದಕ್ಕೆಯು ಆಧಾರಮಾಗಿ ಸುಖಂಕರಮಾಗಿಹುದು. ಮತ್ತಂ ಆ ವಾಯುವಿನೊಳು ಉದಯಿಸಿದ ಪ್ರಚೇತಸನೆಂಬ ವಾಯುವು, ತಾನೊಂದು ವೇಳೆ ಬಿರುಗಾಳಿಯಾಗಿ ಬೀಸಿ ವೃಕ್ಷಂಗಳಂ ಮುರಿದು, ಪಾವಕನೆಬ್ಬಿಸಿ, ಗೃಹಂಗಳಂ ದಹಿಸಿ, ಸಮುದ್ರದ ವಡವಾಗ್ನಿಯಂ ಪಟುಮಾಡಿಕೊಂಡಿರ್ಕುಂ. ೪೮೮೪

ವರ್ಷಪ್ರದವಾಯು :

ಮತ್ತಂ ಅಲ್ಲಿಂದಂ ಮೇಲೆ ಉನ್ನತಯೋಜನಾಂತರದಲ್ಲಿ ಇರ್ದ ಸೇಚನೀಯಮೆಂಬ ವಾಯು ಮಿಂಚುವರ್ಣದ ಮೂಕಮೆಂಬ ಮೇಘಂಗಳಂ ಸ್ವಾದೋದಕ ಸಮುದ್ರಕ್ಕಾದರೂ ಲವಣಸಮುದ್ರಕ್ಕಾದರೂ ಸಾಗಿಸಿಕೊಂಡುಪೋಗಿ ಆ ಸಮುದ್ರೋದಕಂಗಳಂ ಮೊಗೆದೆತ್ತಿ ಮೇಘಂಗಳಂ ತುಂಬಿ ಭೂಮಿಯ ಮೇಲೆ ಉನ್ನತ ನೂರೈವತ್ತು ಯೋಜನಾಂತರದೊಳು ಆ ಮೇಘಂಗಳಂ ತೆಪ್ಪದಂತೆ ತೇಲಿಸಿ ತಂದು ಧರೆಮ ಮೇಲೆ ಹರಿದಾರಿಯ ಹವಣಿನೊಳು ಆ ಮೇಘಂಗಳಂ ನಿಲಿಸಿ, ಬಳಿಕ ಅಲ್ಲಿದ್ದ ಉದಕಮಂ ಚಳಯಂಗುಡುವಂತೆ ಕೆದರಿ ಚೆಲ್ಲಿ ವೃಷ್ಟಿಗಳಾಗಿ ಕರೆದು. ಮತ್ತಂ ಅ ಮೇಘಂಗಳಂ ಮೇಲಕ್ಕೆ ಮೊದಲಂತೆ

ತೇಲಿಸಿಕೊಂಡು ಪೋಗಿ, ಗಿರಿ ವನ ಕ್ಷೇತ್ರ ಗ್ರಾಮಾದಿ ಯೋಗ್ಯಮಾದ ನೆಲವ ಸಸಿನಕ್ಕೆ ಇಳುಹಿ ತಂದು, ಮೊದಲ ಹವಣಿನಲ್ಲಿಯೇ ನಿಲಿಸಿದೊಡೆ ಅಲ್ಲಲ್ಲಿಯೆ ಮಳೆಗಳಪ್ಪವು. ಆ ಮೇಘಂಗಳ ಅಂಗಕ್ರಾಂತಿಯ ಮಿಂಚು ವಾಯು ವಹ್ನಿ ಜಲಸಂಬಂಧದಿಂ ವಾರಿಕಲ್ಲುಗಳಕ್ಕುಂ. ಮತ್ತಂ ಆ ಸ್ವಾದೋದಕಂ ಎಂತು ಭೂಮಿಯ ಸಂಬಂಧದಿಂ ರಸವಿಚಿತ್ರಮಪ್ಪಂತೆ, ಲವಣ ಸಮುದ್ರಮಾದರು ಆಯಾಯಾ ಬಹುವಾಸನಾ ಮೇಘಸಂಪರ್ಕದಿಂ. ವಾಯುವಶದಿಂ ಸ್ವಾದೋದಕಮಕ್ಕುಂ.

ಮತ್ತಂ ಆ ಮಳೆಯಾಗಿವಲ್ಲಿಯುಂ, ಭೂಮಿಯ ಮೇಲೊಂದು ಹರಿಹಾದಿಯ ಹವಣಿನಲ್ಲಿಯೆ ಮೇಘಂಗಳು ಎರಗಿ ನಿಂದಿಹುದೆಂದು ತಿಳಿಯಲ್ವೇಳ್ಕುಂ.

ಮತ್ತಂ ಆ ನೂರೈವತ್ತುಯೋಜನದಿಂ ಮೇಲೆ ಉನ್ನತ ನೂರು ಯೋಜನಾನಂತರದೊಳು ಅ ಸೇಚನೀಯವೆಂಬ ವಾಯುವೆ ಸತ್ವವಹಮೆಂಬ ಮೇಘಂಗಳಿಂ ತಂದ ಉದಕದಲ್ಲಿ ಮಂಡೂಕ ಮತ್ಸ್ಯ ಕೂರ್ಮವೆರಸಿದ ಮಳೆಗಳಿಂ ದುರ್ದಿನಂಗಳಕ್ಕುಂ. ೪೮೫

ವಾಯುವಿನಿಂ ವೃಷ್ಟಿ ಭೇದ :

ಮತ್ತಂ ಅಲ್ಲಿಂದಂ ಮೇಲೆ ಉನ್ನತ ಐವತ್ತು ಸಾವಿರ ಯೋಜನಾಂತರದಲ್ಲಿರ್ದ ಮೋಘವೆಂಬ ವಾಯು ರೌಷದಮೆಂಬ ಮೇಘಂಗಳಿಂ ತಂದ ಜಲಂವೃಷ್ಟಿಯಾಗಿ ಧರೆಯ ಪ್ರಾಣಿಗಳಿಗೆ ಆ ತಜ್ಜಲಪಾನಾದಿಗಳಿಂ ದುಃಖಂಗಳಕ್ಕುಂ.

ಮತ್ತಂ ಅಲ್ಲಿಂದ ಮೇಲೆ ಉನ್ನತೋನ್ನತ ಐವತ್ತುಯೋಜನಾಂ ತರದಲ್ಲಿರ್ದ ಅಮೋಘವೆಂಬ ವಾಯು ಮಾರಕವೆಂಬ ಮೇಘಂಗಳಿಂ ತಂದ ಜಲಂ ಮಳೆಯಾಗೆ ಧರೆಯ ಪ್ರಾಣಿಗಳಿಗೆ ಆ ಜಲಪಾನಾದಿಗಳಿಂ ಮರಣಂಗಳಕ್ಕುಂ.

ಮತ್ತಂ ಅಲ್ಲಿಂದ ಮೇಲೆ ಉನ್ನತ ಐವತ್ತುಯೋಜನಾಂತರದಲ್ಲಿರ್ದ ವಜ್ರಾಂಗಮೆಂಬವಾಯು ಫಲಕಾಹ್ವಯಮೆಂಬ ಮೇಘಂಗಳಿಂ ತಂದ ಜಲಂ ಕರೆಯೆ ಭೂಮಿಯ ಸಕಲ ವೃಕ್ಷಾದಿಕಮೆಲ್ಲಂ ಪಲ್ಲವ ಕುಸುಮ ಫಲಭರಿತಂಗಳಕ್ಕುಂ.

ಮತ್ತಂ ಅಲ್ಲಿಂದ ಮೇಲೆ ಉನ್ನತ ಐವತ್ತು ಯೋಜನಾಂತರದಲ್ಲಿರ್ದ ವೈದ್ಯುತವೆಂಬ ವಾಯು ವೈದ್ಯುತವೆಂಬ ಮೇಘಂಗಳ ಸಂಬಂಧದಿಂದ ಆ ಧ್ವನಿಯೆ ಗುಡುಗು, ಭೂಮಿಗೆ ನಾನೂರೈವತ್ತು ಯೋಜನಾಂತರದಲ್ಲಿ ಪುಟ್ಟುತ್ತಿರ್ಕುಂ.

ಮತ್ತಂ ಅಲ್ಲಿಂದ ಮೇಲೆ ಉನ್ನತ ಐವತ್ತು ಯೋಜನಾಂತರದಲ್ಲಿರ್ದ ರೈವತಕಮೆಂಬ ವಾಯು ಪುಷ್ಟಿವಹಮೆಂಬ ಮೇಘಂಗಳಿಂ ತಂದ ಜಲಂ ವರ್ಷಮಾಗೆ ತಜ್ಜಲ ಪಾನಾದಿಗಳಿಂ ಧರೆಯ ಜನರ್ಗೆ ಪುಷ್ಟಿಗಳಕ್ಕುಂ.

ಮತ್ತಂ ಅಲ್ಲಿಂದ ಮೇಲೆ ಉನ್ನತ ಐವತ್ತು ಯೋಜನಾಂತರದಲ್ಲಿರ್ದ ಸಂವರ್ತಕಮೆಂಬ ವಾಯು ದೋಷದಮೆಂಬ ಮೇಘಂಗಳಿಂ ತಂದ ಜಲಂ ಧಾರೆಯಾಗೆ, ತಜ್ಜಲ ಪಾನಾದಿಗಳಿಂ ಧರೆಯ ಜನರ್ಗೆ ವ್ಯಾಧಿಗಳಕ್ಕುಂ.

ಮತ್ತಂ ಅಲ್ಲಿಂ ಮೇಲೆ ಉನ್ನತ ಐವತ್ತು ಯೋಜನಾಂತರದಲಿರ್ದ ವಿಸಂವರ್ತಮೆಂಬ ವಾಯುಕ್ರೋಧಮೆಂಬ ಮೇಘಂಗಳಿಂ ತಂದ ಜಲಂ ಸೋನೆಮಾಗೆ ತಜ್ಜಲ ಪಾನಾದಿಗಳಿಂ ಭೂಮಿಯ ಜನರ್ಗೆ ಕ್ರೋಧ ಯುದ್ಧಂಗಳಪ್ಪವು. ಆ ದೃಷ್ಟಿಯಿಂದವೆ ರಾಕ್ಷಸ ಸಂಹಾರಮಕ್ಕುಂ.

ಬಳಿಕ ಇಲ್ಲಿ ಧೂಮ ಜ್ಯೋತಿ ಸಲಿಲ ಮಾರುತಂಗಳ ಒಂದು ಗೂಟವೆ ಮೇಘಂಗಳು, ಆ ಮೇಘಂಗಳಿಂ ಮಳೆಗರೆವವು ಅಲ್ಲಿ. ೪೮೬

ಜ್ಯೋತಿಶ್ಚಕ್ರ – ರಾಶಿ– ಗ್ರಹಗಳು :

ಮೇಷ ವೃಷಭ ಮಿಥುನ ಕಟಕ ಸಿಂಹ ಕನ್ಯ ತುಲ ವೃಶ್ಚಿಕ ಧನಸ್ಸು ಮಕರ ಕುಂಬ ಮೀನಮೆಂಬ ಹನ್ನೆರಡು ರಾಶಿಗಳುಂ,

ಅಶ್ವಿನಿ	ಭರಣಿ	ಕೃತ್ತಿಗೆ	ರೋಹಿಣಿ	ಮೃಗಶಿರ
ಆರ್ದ್ರೆ	ಪುನರ್ವಸು	ಪುಷ್ಯ	ಆಶ್ಲೇಷ	ಮಖ
ಪುಬ್ಬೆ	ಉತ್ತರ	ಹಸ್ತ	ಚಿತ್ತ	ಸ್ವಾತಿ
ವಿಶಾಖ	ಅನುರಾಧ	ಜ್ಯೇಷ್ಠ	ಮೂಲ	ಪೂರ್ವಾಷಾಡ
ಉತ್ತರಾಷಾಡ	ಶ್ರವಣ	ಧನಿಷ್ಠ	ಶತಭೀಷ	ಪೂರ್ವಾಭಾದ್ರ,
ಉತ್ತರಾಭಾದ್ರ	ರೇವತಿ			

ಎಂಬವು ಇಪ್ಪತ್ತೇಳು ನಕ್ಷತ್ರಂಗಳುಂ. ತಮ್ಮ ತಮ್ಮ ಅಧಿಕಾರಮಂ ಮಾಡುತ್ತಿರ್ಪವು. ಅದರೊಳು ಒಂದೊಂದು ನಕ್ಷತ್ರಕೆ ನಾಲ್ಕು ನಾಲ್ಕು ಪಾದವಾಗಿ, ಮೇಷಾದಿ ಹನ್ನೆರಡು ರಾಶಿಗಳೊಂದೊಂದಕ್ಕೆ ಒಂಭತ್ತು ಪಾದವೆನಿಸಿ, ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಂಗಳುಂ ಕ್ರಮದಿಂ ಹಸುಗೆಯಾಗಿರ್ಪವು. ಅಲ್ಲಿ : ೪೮೭

ವರ್ಷ ಯೋಗ :

ಮೇಷಾದಿ ರಾಶಿಗಳ ಉದಯವೇ ಲಗ್ನ, ಆ ಲಗ್ನದ ಶುಭಾಶುಭರೂಪದಿಂ ಹೊಣೆಯಾದ ನಕ್ಷತ್ರಂಗಳಿಂ ದೇಶ ಕಾಲ ಕರ್ಮವಶದಿಂ ಸುವೃಷ್ಟಿ ಅಲ್ಪವೃಷ್ಟಿಗಳಾಗಿ, ಭೂಲೋಕದ ಜನರ್ಗೆ ಅನ್ನಾದಿ ಭೋಗಸಾಧನಂಗಳಂ ವರ್ಷಕರಣಾಧಾರವು ಇಂದ್ರನಾಣತಿಗಳಿಂ ನಡವುತ್ತಿರ್ಪ್ಪವು. ಇಂತು ವಾಯು ಮೇಘ ಮಳೆ ಮಿಂಚು ಮೊಳಗಿ ಆಲಿಕಲ್ಗಳ್ಗೆ ಅಧಿಪತಿಗಳಾದವನಂ ಅರಿಯಲ್ವೇಳ್ಕುಂ. ೪೮೮

ಸಪ್ತ ಪವನಾಧಾರಾದಿಗಳು :

ಬಳಿಕ ಇಲ್ಲಿಂದಂ ಮೇಲೆ ಒಂಭತ್ತುಸಾವಿರದಮುನ್ನೂರು ಯೋಜನ ಪ್ರಮಾಣಿನೊಳಗಾಗಿ ಮೋಘ, ಅಮೋಘ ವಜ್ರಾಂಗ ವೈದ್ಯುತ ರೈವತಕ ಸಂವರ್ತಕ ವಿಸಂವರ್ತಕಮೆಂಬ ಏಳು ಪವನಾಧಾರದಿಂದ ಉತರೋತ್ತರಮಾದ ವಿಚಿತ್ರ ಮೇಘಾಶ್ರಯಂಗಳಾದ ಪಟ್ಟಣಂಗಳಲ್ಲಿ ಇರ್ಪವರು ಆರಾರೆಂದೊಡೆ.

ಅಭ್ರ ನಗರ ನಿವಾಸಿ ಬಾಲಗ್ರಹ ದೇವತೆಗಳು :

ಮೊದಲು ಮೋಘವೆಂಬ ಪವನಾಧಾರದ ಮೇಘಾಶ್ರಯದ ಪಟ್ಟಣದಲ್ಲಿ ಮೂವತ್ತು ಸಾವಿರ ರೌದ್ರಮೂರ್ತಿಗಳಪ್ಪ ಕಾಮರೂಪಿಗಳಾದ ಮಹಾಪರಾಕ್ರಮಿಗಳೆನಿಸುವ ಭೂಮ್ಯಾದಿ ಸಕಲಲೋಕ ಸಂಚಾರಿಗಳೆನಿಪ ಷಣ್ಮುಖನನು ಆರಾಧಿಸುತ್ತಿರ್ಪ ಪಿಶಾಚ ದೇವತೆಗಳುಂ;

ಧನದೆ ಭೀಷಣೆ ಕಾಳಿಕೆ ಭೀಮರೂಪಿ ಹಂಗಿನಿ ಪೂತನಿ ಮುಕ್ತಕೇಶೀ ಹಾಹಾಸಿನಿ ಹರಿಕೆ ರೋಧಿನಿ ಶಕುನಿ ಭೂಮಾಳಿ ಉತ್ತಮೆ ಪಿಂಗಳಿ ಗೋಕರ್ಣಿ ಪಂಕಜೆ ಶ್ರೀಮುಖಿ ಜನಿ ಕುಂಭಕರ್ಣಿ ತಾಪಿತೆ ಕಾಳರಕ್ಕಸಿ ನಂದಿನಿ ಕ್ರೋಧಿನಿ ಧನೆ ಶಾಕಿನಿ ಪಂಚಳೆ ಕಾಮಿನಿ ಮೇಧಿನಿ ನಳಿನಿ ಮಹಾಕುಂಭಿನಿ ಹರಿ ಹಾಹಾಕರ್ಣಿ ವಾಯವಿ ಚಿಕ್ಕಣಿ ಸುಗಂಧಿನಿ ವನದೇವಿ ಕುಂತಣಿ ಎಂಬ ಪೆಸರಿನ ದೇವತೆಗಳಿರ್ದು, ಈ ಲೋಕದಲ್ಲಿನ ಹತ್ತುದಿನ ಹನ್ನೊಂದು ತಿಂಗಳು ಹದಿನಾರು ವರ್ಷದ ಬಾಲಕರಂ ಕ್ರಮದಿಂ ಗ್ರಹಂಗಳಾಗಿ ಪಿಡಿದು ತಮ್ಮ ತಮ್ಮ ವಿಕಾರಂಗಳಂ ಸೂಚಿಸಿ ಬೇರೆ ಬೇರೆ ಬಲಿ ಭೋಜನಂಗೊಳುತ್ತಿರ್ಕುಂ. ೪೮೯

ವಿನಾಯಕರು :

ಬಳಿಕ ಅಲ್ಲಿಂದಂ ಮೇಲೆ ಅಮೋಘಮೆಂಬ ಎರಡನೆಯ ಪವನಾಧಾರೊ ಮಾಘಾಶ್ರಯದ ಪಟ್ಟಣದಲ್ಲಿ ರುದ್ರನಿಂ ಪುಟ್ಟಿದ ನೀಲಾಂಜನ ಛಾಯೆಯ, ಸ್ಥೂಲಕಾಯದ, ಮಹೋದರದ ಗಜವಕ್ತ್ರದ ಸರ್ಪಾಭರಣನಾದ ಮೂವತ್ತುಸಾವಿರಕೋಟಿ ವಿನಾಯಕರಿರ್ದು ಮರ್ತ್ಯಲೋಕದ ದುರ್ಮಾರ್ಗಿಗಳು ಮಾಳ್ಪ ಸತ್ಕರ್ಮಫಲವನು ಅಪಹರಿಸುತ್ತೆ ಮಹಾಬಲವಂತರಾಗಿಹರು.

ಬಳಿಕ ಅಲ್ಲಿಂದಂ ಮೇಲೆ ವಜ್ರಾಂಗಮೆಂಬ ಮೂರನೆಯ ಪವನಾಧಾರೊ ಮೇಘಾಶ್ರಮದ ಪಟ್ಟಣದಲ್ಲಿ ಭಿನ್ನಾಂಜನ ಕಾಂತಿಯ ಭೀಮ ಕಾಯದ ಕೋಟ್ಯಾನುಕೋಟಿ ವೀರರಿಹರು, ಅಲ್ಲಿಗೆ ಈ ಭೂ ಲೋಕದಲ್ಲಿಯ ಸುಡುಗಾಡಿನಲ್ಲಿ ವೀರಗಲ್ಲ ರೂಪಿನಲ್ಲಿ ಬಲಿಗೊಳುತ್ತಿಹರು. ೪೯೦

ವೀರಸ್ವರ್ಗ :

ಬಳಿಕ ಅಲ್ಲಿಂದಂ ಮೇಲೆ ವೈದ್ಯುತಮೆಂಬ ನಾಲ್ಕನೆಯ ಪವನಾಧಾರದ ಮೇಘಾಶ್ರಯದ ಪಟ್ಟಣದಲ್ಲಿ ಸುರಪನ ಆಣತಿಯ ಅಪ್ಸರರೆನಿಸುವ ದೇವತೆಗಳಿಹರು ಅಲ್ಲಿಗೆ ಈ ನರಲೋಕದ ಕಮ್ಮರಿ ಅಗ್ನಿ ಜಲ ಸಂಗ್ರಾಮ ಗೋಗ್ರಹಣಾದಿಗಳಲ್ಲಿ ಪರಾಕ್ರಮದಿಂದ ಅಳಿದವರನು ಅಲ್ಲಿಯ ದೇವ ಕನ್ಯೆಯರು ಅನಂತ ಸಂಭ್ರಮದಿಂ ಮಣಿಖಂಚಿತ ವಿಮಾನದಿಂದ ಒಯ್ವರು. ಅದೇ ವೀರಸ್ವರ್ಗಮಕ್ಕುಂ. ೪೯೧

ಸಿದ್ಧವಿದ್ಯಾಧರಾದಿ ಲೋಕಗಳು :

ಬಳಿಕ ಅಲ್ಲಿಂದಮ ಮೇಲೆ ರೈವತಕಮೆಂಬ ಐದನೆಯ ಪವನಾಧಾರದ ಮೇಘಾಶಯ್ರದ ಪಟ್ಟಣದಲ್ಲಿ ಮಹಾಸಿದ್ಧರಿಹರು ಅಲ್ಲಿಗೆ ಧರೆಯ ಕೆಲವು ಮಂತ್ರಸಿದ್ಧ

ಸಾಧಕರ್ಯೆದುತ್ತಿಹರು.

ಬಳಿಕ ಅಲ್ಲಿಂದಂ ಮೇಲೆ ಸಂವರ್ತಕಮೆಂಬ ಆರನೆಯ ಪವನಾಧಾರದ ಮೇಘಾಶ್ರಯದ ಪಟ್ಟಣದಲ್ಲಿ ಮೂರು ಕೋಟಿ ವಿದ್ಯಾಧರರೆ ಮಹದೈಶ್ವರ್ಯಾದಿಂದಿಹರು. ಬಳಿಕ ಅಲ್ಲಿಂದಂ ಮೇಲೆ ವಿಸಂವರ್ತಮೆಂಬ ಏಳನೆಯ ಪವನಾಧಾರದ ಮೇಘಾಶ್ರಯದ ಪಟ್ಟಣದಲ್ಲಿ ವೀಣಾವಾದ ತಂತ್ರಸಿದ್ಧರಾದ ಪಕ್ಷಿಕುಲವಿರ್ಪವು. ಇಂತು ಏಳು ಪವನಾಧಾರದ ಮೇಘಾಶ್ರಯದ ಸ್ಥಿತರ ಭೇದಂಗಳಕ್ಕುಂ. ೪೯೨

ದಶಮೇಘ ಸ್ಥಾನಂಗಳ ವಿಚಾರಂ :

ಮತ್ತಂ ಅಲ್ಲಿಂದ ಮೇಲೆ ನೂರು ಯೋಜನಾಂತರದಲ್ಲಿ ಹತ್ತು ಮಾರುತಾಧಾರದಿಂ ಮೆರೆವ ಬ್ರಹ್ಮಸೃಷ್ಟಿಯ ದಶಮೇಘ ಸ್ಥಾನಂಗಳು ಉತ್ತರೋತ್ತಜಮಾಗಿರ್ಪವು. ಅಲ್ಲಿ ಮೊದಲ ಮಾರುತಾಧಾರದ ಮೇಘಸ್ಥಾನದಲ್ಲಿ ಕಶ್ಯಪಬ್ರಹ್ಮನಿಂದ ಉದ್ಭವಿಸಿದ ಬೇರೆ ಮಳೆ ಮಿಂಚು ಸಿಡಿಲ್ಗಳ್ಗೆ ಕಾರಣಮಾದ ಸುರಪನಾಣತಿಯ ಹತ್ತುಕೋಟಿ ವಾರಿಧರ ಮೇಘಂಗಳಾದೊಡೆ ಬಿಂಗದ ಹೊರೆಗಳಂತೆ ಒಡಗೂಡಿರ್ಪವು. ಆ ವಾರಿಧರ ಮೇಘಂಗಳುಂ ಸ್ವತಂತ್ರ ಗಮನವಿಲ್ಲಾಗಿ ವಾಯುಗಳೆ ಸಾಗಿಸಿ ತಂದು ಪೂರ್ವೋಕ್ತ ಪ್ರಕಾರದಿಂ ಭೂಲೋಕಕ್ಕೆ ಮಳೆಗರಸಿ, ಗಾಳಿಪಟದಂತೆ ತೇಲಿಸಿಕೊಂಡು ಪೋಗಿ ಮೊದಲ ಸ್ಥಾನದಲ್ಲಿ ಇರಿಸುತ್ತಿರ್ಪವು. ಆ ವಾರಿಧರ ಮೇಘಂಗಳಿರ್ಪ ಪ್ರಥಮ ಸ್ಥಾನವು ಈ ಭೂಮಿಗೆ ಹತ್ತು ಸಾವಿರ ಯೋಜನಾಂತರಮಕ್ಕುಂ. ೪೯೩

ಗಂಧರ್ವರ ಭೇದ :

ಮತ್ತಂ ಅಲ್ಲಿಂದಂ ಮೇಲೆ ಹತ್ತು ಸಾವಿರ ಯೋಜನಾಂತರದ ದ್ವಿತೀಯ ಮಾರುತಾಧಾರದ ಮೇಘಸ್ಥಾನದಲ್ಲಿ ಸ್ಥೂಲಕಾಯದ ಜೀಮೂತರೆನಿಪ ವಿದ್ಯಾಧರರುಂ ಗಂಧರ್ವರುಂ ವಿಶಾಲ ಚಿತ್ರಗೃಹಂಗಳಲ್ಲಿ ಇರ್ಪರು. ಆ ಗಂಧರ್ವರೆ ದೇವಗಂಧರ್ವರೆಂದು ಮರ್ತ್ಯಗಂಧರ್ವರೆಂದು ದ್ವಿವಿಧಪ್ರಕಾರವಹುದು. ಅಲ್ಲಿ ಪೂರ್ವಯುಗದಲ್ಲಿಯ ಪುಣ್ಯಪರಿಪಾಕದಿಂದ ಈ ಸೃಷ್ಟಿ ಪ್ರಾರಂಭದಲ್ಲಿಯೇ ತತ್ಪದಸ್ಥರಾದವರು ಹಳೇ ದೇವಗಂಧರ್ವರುಗಳು. ಬಳಿಕ ಈ ಸೃಷ್ಟಿಯಲ್ಲಿ ಮನುಷ್ಯರಾಗಿ ಜನಿಸಿ ಮೇಲೆ ಪುಣ್ಯಾಧೀನದಿಂದ ಆ ಪದವನೆಯ್ದಿದವರುಗಳೇ ಮರ್ತ್ಯಗಂಧರ್ವರುಗಳಕ್ಕುಂ. ೪೯೪

ಸಪ್ತಮಾತೃಕಾ ಮತ್ತು ಯೋಗಶಕ್ತಿಗಳು :

ಮತ್ತಂ ಅಲ್ಲಿಂದಂ ಮೇಲೆ ಹತ್ತುಸಾವಿರ ಯೋಜನಾಂತರದ ಮೂರನೆಯ ಮಾರುತಾಧಾರದ ಮೇಘಸ್ಥಾನದಲ್ಲಿ ಬೇರೆ ಬೇರೆ ಆಕಾರ ವಾಹನ ಆಯುಧಾದಿಗಳನ್ನುಳ್ಳ ಅಗ್ನಿಕನ್ನಿಕೆಯರಾದ ಬ್ರಾಹ್ಮಿ ಮಾಹೇಶ್ವರಿ ಕೌಮಾರಿ ವೈಷ್ಣವಿ ವಾರಾಹಿ ಮಾಹೇಂದ್ರಿ ಚಾಮುಂಡಿಯರೆಂಬ ಸಪ್ತಮಾತೃಕೆಯರುಂ, ಕೆಲವರು ರುದ್ರಕನ್ನಿಕೆಯರುಂ, ಸಾಮರ್ಥ್ಯಸಿದ್ಧರುಂ ಇರ್ಪರು. ದೇವಿ ದಿವ್ಯಯೋಗಿನಿ ದೂರ್ಜಟಿ ಧೂಮಾಕ್ಷಿ ಧ್ವಂಸಿನಿ

ದಂಡಧಾರಿಣಿ ಮೇಧಿನಿ ಮಾರಿ ಮಹಾಯೋಗಿನಿ ಶುಷ್ಕಾಂತಿ ಸೌಂದರಿ ಶಾಂಕರಿ ಸಿದ್ಧಯೋಗಿನಿ ಮಾರಿಕೆ ಕಾಳಿ ಪ್ರೇತಾಶನಿ ಪ್ರಸಾದಿನಿ ಸರ್ವೇಶಿ ಕ್ರೋಧಿನಿ ಪ್ರೇತಭೂಷಿಣಿ ಕಂಕಾಳಿ ವ್ಯಾಘ್ರಿ ಪರಮೇಶ್ವರಿ ಕಾಳರಾತ್ರಿ ಕಿಂಕಿಣಿ ಕಪಾಲಿ ಕಲಹಪ್ರಿಯೆ ಕಾಕದೃಷ್ಟಿ ಉಗ್ರಿ ವೀರಕೌಮಾರಿ ಕಾಮರೂಪಿ ವೀರಭದ್ರೆ ವಿಶಾಲಾಕ್ಷಿ ವಿರೂಪಾಕ್ಷ ವಿಶ್ವರೂಪಿ ತುಷ್ಟಿ ವಿಷಲಂಘಿನಿ ಧನುರ್ಧರಿ ಊರ್ಧ್ವಕೇಶಿ ತಾಟಕ ತ್ರಿಪಲುರಾಂತಕಿ ವಾರಾಹಿರೌದ್ರಿ ತ್ರಿಪುಂಡ್ರಧಾರಿಣಿ ಭೂತಶಂಕೆ ರಕ್ತಾಕ್ಷಿ ಭಯಂಕರಿ ರೌದ್ರವೇತಾಳಿ ರಾಕ್ಷಸಿ ಲಕ್ಷ್ಮಿ ಲಂಬೋಷ್ಠಿ ನಿಶಾಚರಿ ಭೈರವಿ ಭೇಸುರಿ ಭೀಷಣಿ ನರಭೋಜಿನಿ ಘೋರೆ ಅಧೋಮುಖಿ ಡಾಕಿನಿ ಗಣೇಶಿ ಚಂಡಿ ಯಕ್ಷಿಣಿ ಈಶೆ ಹೂಂಕಾರಿಯೆಂಬ ಚೌಷಷ್ಠಿ ಯೋಗಿಣಿಯರುಂ ತಮ್ಮ ನಾಮೋಚ್ಚರಣೆ ಮಾತ್ರದಿಂ ಗ್ರಹಗಚ್ಛಾಟನಾದಿ ಸಮಸ್ತ ವಿಘ್ನಂಗಳಂ ಪರಿಹರಿಸುತ್ತಿರ್ಕುಂ. ೪೯೫

ಬತ್ತೀಸ ಆಯುಧಪಾಣಿ ದೇವತೆಗಳು :

ಮತ್ತಂ ಅಲ್ಲಿಂದಂ ಮೇಲೆ ಹತ್ತುಸಾವಿರಯೋಜನಾಂತರದ ನಾಲ್ಕನೆಯ ಮಾರುತಾಧಾರದ ಮೇಘಸ್ಥಾನದಲ್ಲಿ, ಖಡ್ಗ ಕರಾಚೂರಿ ಕಕ್ಕಡ ಕಡುಗತ್ತಿ ಸೆಣೆಗತ್ತಿ ಸಬಳ ಇಟ್ಟಿ ಬಾಣ ಇದಿರುಗತ್ತಿ, ಚಕ್ರ ಚೆಂಡು ನರಾದಿ ಚೆಲ್ಲೆಹ ಬಲ್ಲೆಹ ಶೂಲ ಶಿಲಾದಿ ಗದೆಯ ಕಬ್ಬುನಕೋಲು ಬಾಕು ಪೋತಿ ಚೂರಿ ಕಿರಸೆ ಚಿಕ್ಕತಾರಿ ಪರಶು ಪಾಶ ಪಟ್ಟೆಯ ಅಂಕುಶ ಮಟ್ಟಿ ಜವದಾಡೆ ಅಂಕುಚೂರಿ ವಂಕಿ ತೌಡಿಯೆಂಬ ಬತ್ತೀಸಾಯುಧ ಪಾಣಿಗಳಾದ ಘನ ದೇವತೆಗಳಿರ್ಕುಂ. ೪೯೬

ಐರಾವತ – ಗರುಡ – ದೇವಗಂಗೆ :

ಮತ್ತಂ ಅಲ್ಲಿಂದಂ ಮೇಲೆ ಹತ್ತುಸಾವಿರ ಯೋಜನಾಂತರದ ಪಂಚಮ ಮಾರುತಾಧಾರದ ಮೇಘಸ್ಥಾನದಲ್ಲಿ ಇಂದ್ರನ ಐರಾವತಾದಿ ಗಜಗಳಿರ್ಕುಂ.

ಮತ್ತಂ ಅಲ್ಲಿಂದ ಉನ್ನತ ಹತ್ತು ಸಾವಿರ ಯೋಜನಾಂತರದ ಸಪ್ತಮ ಮಾರುತಾಧಾರದ ಮೇಘ ಸ್ಥಾನದಲ್ಲಿ ದೇವಗಂಗೆ ದಶಲಕ್ಷ ಯೋಜನ ವಿಸ್ತಾರದಿಂ ವಿಚಿತ್ರ ವರ್ಣದ ಕಮಲ ಕುಮುದ ಹಂಸಾದಿಗಳಿಂದ ಅಲಂಕೃತಮಾಗಿ ದೇವ ಮನು ಮುನಿ ಸಿದ್ಧ ಗಂಧರ್ವಾದಿಗಳಿಗೆ ತನ್ನ ದರ್ಶನ ಸ್ಪರ್ಶನ ಸ್ನಾನಪಾನಾದಿಗಳಿಂ ಪರಮ ಪಾವನತೆಯನು ಈವುತ್ತಿರ್ಕುಂ. ೪೯೭

ನಂದಿಕೇಶ್ವರ :

ಮತ್ತಂ ಅಲ್ಲಿಂದಂ ಮೇಲೆ ಹತ್ತುಸಾವಿರ ಯೋಜನಾಂತರದ ಎಂಟನೆಯ ಮಾರುತಾಧಾರದ ಮೇಘಸ್ಥಾನದಲ್ಲಿ ಗಣನಿಕರದಿಂ ಕೂಡಿ ನಂದಿಕೇಶ್ವರನಿರ್ಪಂ, ಮತ್ತಂ ಅಲ್ಲಿಂದ ಮೇಲೆ ಹತ್ತು ಸಾವಿರ ಯೋಜನದ ಒಂಭತ್ತನೆಯ ಮಾರುತಾಧಾರದ ಮೇಘಾಶ್ರಯಂಗಳಲ್ಲಿ ಇರ್ದವರ ಲಿಂಗಕಾಂತಿ ರತ್ನಾಭರಣಾದಿ ದ್ಯುತಿಗಳಿಂದ ಅಲ್ಲಲ್ಲಿಯ ವಿಷಯ ಪ್ರಕಾಶವಲ್ಲದೆ ಸೋಮ ಸೂರ್ಯದೀಪ್ತಿಗಳ ಅಪೇಕ್ಷೆ ಇಲ್ಲ ಎಂದರಿಯವೇಳ್ಕುಂ. ೪೯೮

ಏಕಾದಶರುದ್ರ ಗಣಾದಿಸ್ಥಾನಂಗಳು :

ಬಳಿಕ ಅಲ್ಲಿಂದಂ ಮೇಲೆ ಹತ್ತು ಸಾವಿರದ ಯೋಜನಾಂತರದ ಹತ್ತನೆಯ ಮಾರುತಾಧಾರದ ವಿಮಾನ ಸ್ಥಾನವೆನಿಸುವ ಸೂರ್ಯನ ಭುವರ್ಲೋಕವಿಹುದು. ಅಲ್ಲಿ ಮಹೇಶ್ವರನ ಮಾನಸೋದ್ಭವರಾದ ವೀರಭದ್ರ ಶಂಭು ಗಿರೀಶ ಅಜ ಏಕಪಾತ್ತು ಅಹಿರ್ಬುದ್ನ ಪಿನಾಕ ಸ್ಥಾಣು ಪಶುಪತಿ ಭವ ತ್ರಿಷಾಂಪತಿಗಳೆಂಬ ಏಕಾದಶ ರುದ್ರರು ಅತಿಪೂಜ್ಯರಾಗಿರ್ಪರು. ಅಲ್ಲಿಯ ಧಾತ್ರಾದಿ ಪ್ರಭವಾಂತಮಾದ ಅಷ್ಟಮನುಗಳುಂ ದ್ವಾದಶಾದಿತ್ಯರು ಮೊದಲಾದರೆಲ್ಲಂ ಕೂಡಿ ವರ್ತಿಸುತ್ತಿರ್ಕುಂ. ೪೯೯

ಸೂರ್ಯರಥ ಪರಿಮಾಣ ಗತಿಸ್ಥಿತ್ಯಾದಿಗಳು :

ಬಳಿಕ ಆ ಸ್ಥಾನವು ಭೂಮಿಗೆ ಒಂದು ಲಕ್ಷ ಯೋಜನಪ್ರಮಾಣವಿಹುದು. ಅಲ್ಲಿ ಆ ಭುವರ್ಲೋಕಾಧಿಶ್ವರನಾದ ಸೂರ್ಯನು ರಥಾರೂಢನಾಗಿ ಮಹಾಮೇರು ಪರ್ವತಮಂ ಪ್ರದಕ್ಷಿಣಮಾಗಿ ತಿರುಗಿ ಭೂಲೋಕದ ದಿವರಾತ್ರಿಗಳಂ ನಡಸುತ್ತಿರ್ಪನು. ಆತನ ರಥಕ್ಕೆ ಒಂದೇ ಗಾಲಿ ಎಪ್ಪತ್ತುಸಾವಿರ ಯೋಜನದ ಅಗಲವು, ಅದರ ನೇಮವತ್ತಿಗೆಯೆ ಸಾವಿರಯೋಜನ ವಿಶಾಲ. ಅದಕ್ಕೆ ಐದುಮೊಳೆ. ಆ ಗಾಲಿ ಸಾವಿರ ಯೋಜನದ ಮಂದ. ಆ ಗಾಲಿ ತಿರುಗುವ ಮಧ್ಯದಲ್ಲಿ ಹತ್ತುಸಾವಿರ ಯೋಜನದ ಅಳತೆಯ ವಜ್ರವೇದಿಕೆಯುಂಟು. ಆ ಗಾಲಿ ಪೂರ್ವೋಕ್ತ ಭೂಮಿಯ ಲೋಕಾಲೋಕ ಪರ್ವತದ ಮೇಲೆ ಆಳುವೇರಿಯಲ್ಲಿ ತಿರುಗುವಂತೆ ಚರಿಸಿ ಬರುತ್ತಿಹುದು. ಅದರ ನಾಭಿಯೊಳು ಪ್ರವೇಶಿಸಿದ ವಜ್ರಮಯವಾದ ಅಚ್ಚು ಹದಿನಾಲ್ಕುಕೋಟಿ ಯೋಜನದ ನೀಳವಹುದು. ಗಾಣದ ಕತ್ತರಿಯಾಕಾದಿಂ ಮೇರುವಿನ ತಿರುಗುಣಿಯ ಶಂಖಕ್ಕೆ ಅಮರಿಹುದು. ಆ ಅಚ್ಚಿನ ಮೇಲುವಲಗೆಯೆ ಮಿಗೆ ವಿಶಾಲವಾದ ಎರಡು ಸಾವಿರ ಯೋಜನದ ಅಳತೆಯ ದಟ್ಟವು, ಆ ಹಲಗೆಮ ಮೇಲೆ ಅಚ್ಚಿನ ಮಧ್ಯದಲ್ಲಿ ವಿಶ್ವಕರ್ಮ ನಿರ್ಮಿತಮಪ್ಪ ಮಹಾವಿಶಾಲೋನ್ನತಮಾದ ವಿಮಾನವೇ ನವರತ್ನಮಯ ಸ್ತಂಭಂಗಳಿಂ ಪತಾಕಾದಿ ವಿಚಿತ್ರ ರಚನೆಗಳಿಂ ಸಿಂಗರಂ ಬೆತ್ತು ಕಣ್ಗೊಳಿಸುತ್ತಿಹುದು. ೫೦೦

ರವಿ ಕಲಾಕಿರಣಾದಿಗಳು :

ತಪಿನಿ ತಾಪಿನಿ ಧೂಮ್ರ ಮರೀಚಿ ಜ್ವಾಲಿನಿ ರುಚಿ ಸುಷುಮ್ನ ಬೋಗದಾ ವಿಶ್ವಬೋಧಿನಿ ಧರಣಿ ಕ್ಷಮಾ ಪ್ರಭಾ ಎಂಬ ದ್ವಾದಶಕಲಾವೃತನಾಗಿ ಹಿಮಕಿರಣ ಮುನ್ನೂರ ಮೂವತ್ತಮೂರು, ಉಷ್ಣಕಿರಣ ಮುನ್ನೂರ ಮೂವತ್ತ ಮೂರು, ವರ್ಷಕಿರಣ ಮುನ್ನೂರ ಮೂವತ್ತಮೂರು, ಬೀಜ ಭೂತಕಿರಣ ಒಂದು, ಅಂತು ಸಹಸ್ರಕರನೆನಿಸಿ ಕಾಲಕ್ರಮಾತ್ಮಕನಾಗಿ, ಹಿರಣ್ಮಯಕೇಶ ಮುಖಲೋಮಗಳಿಂ, ಕಮಲಾದಿಕವಿಡಿದ ಚತುರ್ಭುಜಗಳಿಂ, ಕಿರೀಟ, ಕೇಯೂರ, ಕುಂಡಲ್ಯಾದ್ಯಾಭರಣ ವಸ್ತ್ರ ಗಂಧಮಾಲ್ಯಾದಿಗಳಿಂದ ಅಲಂಕೃತಮಾದ, ಸಿಂಧೂರವರ್ಣದ ಒಂಭತ್ತುಸಾವಿರ ಯೋಜನದ ದೀರ್ಘ ಶರೀರದಿಂದ ಇಪ್ಪತ್ತೇಳುಸಾವಿರದ ಯೋಜನ ಅಗಲಮಾದ ತನ್ನ ಪ್ರಭಾಮಂಡಲಂಗೂಡಿ, ಮೂವತ್ತಾರುಸಾವಿರ ಯೋಜನ ವಿಶಾಲದಿಂದ ಎಸೆದಿರ್ಪಂ.

ಮತ್ತಂ ಅ ಸೂರ್ಯನ ರಥದ ಈಶಾದಂಡದ ತುದಿಯನೊಗದ ಮಧ್ಯದಲಿ ಒಂದು ಕುದುರೆ. ಆ ನೊಗದ ಎಡಬಲದ ಕಡೆಕಡೆಯಲ್ಲಿ ಮೂರು ಮೂರು ಕುದುರೆಗಳು. ಇಂತು ಏಳು ಪಾರುವ ಕುದುರೆಗಳೆ ಸರ್ಪರಜ್ಜುವಿನಿಂ ಬಿಗಿದು, ಕುಲಾಲ ಚಕ್ರ ಭ್ರಮಣದಂತೆ ಪ್ರದಕ್ಷಿಣಮಾಗಿ ತಿರುಗಿ ಬರುತ್ತಿರ್ಪವು. ಆ ರಥವು ನರರ ಉಛ್ವಾಸ ಒಂದಕ್ಕೆ ಇಪ್ಪತ್ತೊಂದು ಸಾವಿರದ ಆರು ನೂರು ಯೋಜನಂ ನಡೆವುದು. ಘಳಿಗೆ ಒಂದಕ್ಕೆ ಎಪ್ಪತ್ತೇಳು ಲಕ್ಷದ ಮೇಲೆ ಎಪ್ಪತ್ತಾರು ಸಾವಿರ ಯೋಜನಂ ನಡೆವುದು. ಈ ಕ್ರಮದಿಂದ ಇರುಳುಪಗಲಿಂದ ಒಂದು ದಿನಕ್ಕೆ ನಲ್ವತ್ತಾರು ಕೋಟಿಯುಂ ಅರುವತ್ತೈದು ಲಕ್ಷಮುಂ ಮೇಲೆ ಅರುವತ್ತು ಸಾವಿರ ಯೋಜನಂ ನಡೆವುದು. ೫೦೧

ಅಹೋರಾತ್ರ ಕಲ್ಪನೆ :

ಇಂತು ನಡೆದು ಪಗಲೊಂದರಲ್ಲಿ ಪೂರ್ವಾದ್ರಿಯಿಂ ಪಶ್ಚಿಮಾದ್ರಿಗೆ ಎಯ್ದಲು, ಆ ಮೇರು ಮರೆಯಾಗಿ ಪಶ್ಚಿಮ ಗಡಿಯಾದ ಉತ್ತರ ಭಾಗವೆಲ್ಲಂ ಕತ್ತಲೆಗವಿದು ರಾತ್ರಿಯಹುದು. ಬಳಿಕ ಆ ಮೇರುವಿನ ಉತ್ತರ ಭಾಗವೆಲ್ಲಂ ಬೆಳಕಾಗಿ ಹಗಲಹುದು, ಇಂತು ನಡೆದಲ್ಲಿ ಪೂರ್ವಾದ್ರಿಗೆಯ್ದಲು ಆ ಮೇರು ಮರೆಯಾಗಿ ಪೂರ್ವಾದ್ರಿ ಪಶ್ಚಿಮಾ ಗಡಿಯಾರ ಉತ್ತರ ಭಾಗವೆಲ್ಲಂ ಕತ್ತಲೆ ಮುಸುಂಕಿ ರಾತ್ರಿಯಹುದು. ಬಳಿಕ ಆ ದಕ್ಷಿಣ ಭಾಗವೆಲ್ಲಂ ಬೆಳಕಾಗಿ ಮೊದಲಂತೆ ಪಗಲಕ್ಕುಂ. ೫೦೧

ಅಹೋರಾತ್ರ ಸಂಧ್ಯಾಸ್ವರೂಪ :

ಬಳಿಕ ಇಲ್ಲಿ ಪಗಲಿರುಳಿನ ಸ್ವರೂಪಮಾವುದೆನೆ: ಪ್ರಥಮ ಸೃಷ್ಟಿಯಲ್ಲಿ ಪಿತಾಮಹನು ತಮೋಮಯವಾದ ದೇಹಮಂ ಧರಿಸಿ ರಾಕ್ಷಸರಂ ನಿರ್ಮಿಸುತ್ತಾ ದೇಹಮಂ ಬಿಡಲು ಅದೇ ಮರ್ತ್ಯರ್ಗೆ ರಾತ್ರಿಯಾಯಿತ್ತು. ಬಳಿಕ ಆ ಬ್ರಹ್ಮನು ಸತ್ವಮಯಶರೀರಮಂ ತಳೆದು ದೇವತೆಗಳಂ ಸೃಜಿಸುತ್ತಾ ಶರೀರಮಂ ಬಿಡಲು, ಅದೇ ಮರ್ತ್ಯರ್ಗೆ ದಿವಸ ಸ್ವರೂಪವಾಯಿತ್ತು. ಮತ್ತಂ ಆ ಚತುರ್ಮುಖನು ಸ್ವಾತಿಕತನುವಂ ಸ್ವೀಕರಿಸಿ ಪಿತೃಗಳಂ ಪಡೆದು ಆ ತನುವಂ ಬಿಡಲು ಅದೇ ಪಗಲ ಸಂಧ್ಯಾರೂಪಮಾಯಿತ್ತು. ಮತ್ತಂ ಆ ಕಮಲಜನು ರಾಜಸಕಾಯಮಂ ಕೈಕೊಂಡು ನರಕಮಂ ಕಲ್ಪಿಸುತ್ತಾ ಆ ಕಾಯಕಮಂ ಬಿಡಲು ಅದೇ ನರರ್ಗೆ ರಾತ್ರಿಯ ಕೌಮುದಿ ಸ್ವರೂಪಮಾಯಿತ್ತು. ಈ ಪ್ರಕಾರಮಾದ ದಿವರಾತ್ರಿಗಳಂ ನಡೆಸುತ್ತ ಸೂರ್ಯನು ತನಗೆ ಅಡ್ಡ ಬರ್ಪ ಮಂದೇಹರೆಂಬ ಮಹಾರಾಕ್ಷಮನಿಕರಮಂ ಸಂಹರಿಸುತ್ತೆ, ಸಂಚರಿಸಲಾಗುವ ಘಳಿಗೆ ದಿನ ಪಕ್ಷ ಮಾಸ ವತ್ಸರ ಯುಗಂಗಳ ಲಕ್ಷಣಮಂ ಮುಂದೆ ಪೇಳ್ವೆನು. ೫೦೩

ರವಿಯಾನಗತಿಕ್ರಮ ವಿಚಾರ ಮತ್ತು ಪರಿವಾರ :

ಆ ಸೂರ್ಯನು ತಿರುಗುವಲ್ಲಿ ಚೈತ್ರಾದಿ ಹನ್ನೆರಡು ಮಾಸಂಗಳಲ್ಲಿ ಕ್ರಮದಿಂದ ಒಬ್ಬೊಬ್ಬರಿಧಿಪತಿಗಳಾಗಿ, ಆ ರಥ ಸಿಂಹಾಸನವೇರಿ ಚರಿಸುವ ದ್ವಾದಶಾದಿತ್ಯರನು ಅವರವರ ಸಹ ಚರ್ಯರ ನಾಮಕ್ರಮ ವರ್ಣನವು ಎಂತೆಂದೊಡೆ: ಧಾತ ಅರಿಯಮ ಮಿತ್ರ ವರುಣ ಇಂದ್ರ ವಿವಸ್ವಾನ್ ಪರ್ಜನ್ಯ ಪೂಷ ಅಂಶುಮಾನ್ ಗಭಸ್ತಿಮಾನ್ ತ್ವಷ್ಟ

ವಿಷ್ಣುಗಳೆಂಬವರೆ ಕ್ರಮದಿಂ ದ್ವಾದಶಾದಿತ್ಯರು. ಪುಲಸ್ತ್ಯ ಪುಲಹ ಅತ್ರಿ ವಶಿಷ್ಠ ಆಂಗೀರಸ ಭೃಗು ಭಾರದ್ವಾಜ ಗೌತಮ ಕಶ್ಯಪ ಕ್ರತು ಜಮದಗ್ನಿ ಕೌಶಿಕರೆಂಬ ದ್ವಾದಶ ಋಷಿಗಳೆ ಕ್ರಮದಿಂದ ಅವರಿವರಿಂ ಕೀರ್ತಿಸುವರು. ವಾಸುಕಿ ಕಂಕವೀರ ತಕ್ಷಕ ನಾಗ ಏಲಾಪತ್ರ ಶಂಖಪಾಲ ವೀರಾವತ ಧನಂಜಯ ಮಹಾಪದ್ಮ ಕರ್ಕೊಟಕ ಕಂಬಲ ಅಶ್ವತರೆಂಬ ದ್ವಾದಶ ಸರ್ಪಂಗಳೇ ಪಿರಿವಿಡಿದು ಆ ವಾಜಿ ಬಂಧಾಧಿಕಾರಿಗಳು. ತುಂಬುರ ನಾರದ ಹಾಹಾ ಹೂಹೂ ವಿಶ್ವಾವಸು ಅಗ್ರಸೇನ ವಸುರುಚಿ ಸರ್ವಾಸು ಚಿತ್ರಸೇನ ಉರ್ನಾಹ ದೃತರಾಷ್ಟ್ರ ಸೂರ್ಯವರ್ಚ್ಯರೆಂಬ ದ್ವಾದಶಗಂಧರ್ವರೆ ಪರಿಪಾಟಿಯಿಂ ಪಾಡುವರು. ಕೃತಸ್ಥಲೆ ಪುಂಜಿತಸ್ಥಲೆ ಮೇನಕೆ ಸಹಜನ್ಯೆ ಪ್ರಮೋಚಂತಿ ಅನುಮೋಚಂತಿ ವಿಶ್ವಾಚಿ ಘೃತವಾಚಿ ಊರ್ವಶಿ ಪೂರ್ವಚಿತ್ತೆ ತಿಲೋತ್ತಮೆ ರಂಭೆಯರೆಂಬ ದ್ವಾದಂ ಅಪ್ಸರಸ್ತ್ರೀಯರು ತರುವಾಯ ನೃತ್ಯವನಾಡುವರು. ರಥಭೃಕು ರಥೌಜ ರಥಚಕ್ರ ರಥಾಶ್ವ ವೃತ್ತ ಅರುಣ ಸುಷೇಣ ಸೇನಜಿತು ತಾರ್ಕ್ಷ್ಯ ಅರಿಷ್ಟನೇಮಿ ರುತಜಿತು ಸತ್ಯಜಿತುಗಳೆಂಬ ದ್ವಾದಶಗಾಮಿಗಳೇ ಪರಿಕ್ರಮದಿಂ ಸಾರಥಿಗಳು. ಪ್ರಹೇತಿ ಪೌರುಕ್ಷೇಯ ವಧ ದರ್ಪ ವ್ಯಾಘ್ರ ಕ್ರೂರ ಆಪಸ್ಸು ವಾತ ವಿದ್ಯುತ್ತು ದಿವಾಕರ ಬ್ರಹ್ಮವೇತ ಯಜ್ಞವೇತರೆಂಬ ದ್ವಾದಶ ರಾಕ್ಷಸರೇ ಕ್ರಮದಿಂದ ಅವರವರ ಮೈಗಾವಲವರು, ಅಂಗುಷ್ಠಮಾತ್ರದ ಸೂರ್ಯಕಿರಣಂಗಳಂ ಸೇವಿಸುವ ಗೋವಿನ ಪಾದಾಂಕಿತಸ್ಥಲದ ಪರಮ ಪವಿತ್ರ ಉದಕದಿಂ ಸ್ನಾನಪಾನಾದಿಗಳನುಳ್ಳ ಮಹಾಋಷೀಶ್ವರರಾದ ಅರವತ್ತು ಸಾವಿರ ವಾಲಖಿಲ್ಯರೇ ಸಾಮಾನ್ಯದಿಂ ದ್ವಾದಶಾದಿತ್ಯರ ಸಭಾಸದರುಗಳು, ಮೇಲೆ ಧ್ರುವನು ಪ್ರವಾಹಮೆಂಬ ವಾಯುರಜ್ಜುವಿನಿಂ ಪಿಡಿದು ಆ ರಥಮಂ ನಡಸುತ್ತಿರ್ಪನೆಂಬುದೇ ಸೂರ್ಯಸಿದ್ಧಾಂತಮಕ್ಕುಂ. ೫೦೪

ಸಪರಿವಾರ ಚಂದ್ರಮಂಡಲ ಕಲಾದಿಗಳು :

ಬಳಿಕ ಆ ಸೂರ್ಯನಿಂ ಮೇಲೆ ಒಂದು ಲಕ್ಷ ಯೋಜನಾಂತರದಲ್ಲಿ ಚರಲೋಕವಾಸಿಗಳಾದ ಕ್ರತು ದಕ್ಷ ಪುಪುಸ್ಸು ಸತ್ಯಕಾಮ ಕಾಲ ಧ್ವನಿರುಚ ಪುರೂರವ ಆರ್ದ್ರವರೆಂಬ ವಿಶ್ವದೇವತೆಗಳೊಡನೆಯುಂ, ಅಗ್ನಿಶ್ವಂತ ಮೊದಲದ ಪಿತೃದೇವತೆಗಳೊಡನೆಯುಂ ಕೂಡಿರ್ಪ ಚಂದ್ರನಾದೊಡೆ ಅಮೃತ ಮಾನದ ಪೂಷಾ ತುಷ್ಟಿ ಪುಷ್ಟಿ ರತಿ ಧೃತಿ ಶಶಿನಿ ಚಂದ್ರಿಕಾ ಕಾಂತಿ ಜ್ಯೋತ್ಸ್ನಾ ಶರರೀ ಅಂಗದಾ ಪೂರ್ಣ ಪೂರ್ಣಾಮೃತ ಕಾಮದಾಯಿನಿಯೆಂಬ ಷೋಡಶ ಕಲಾಭರಿತನಾಗಿ, ಧವಲ ವರ್ಣಮಯ ಶರೀರದಿಂ, ಸಕಲೋಷಧಿಶ್ವರನಾಗಿ ರಂಜಿಸುತ್ತಿರ್ಪನು. ಆತನ ರಥಕ್ಕೆ ರಜತದ ಮೂರು ಗಾಲಿ, ಮೂವತ್ತುಮೊಳೆ, ಹತ್ತು ಬಿಳಿಯ ಕುದುರೆ, ಸ್ಫಟಿಕರಜತಮಯಮಾಗಿರ್ಪ ಆ ರಥಮಾದೊಡೆ ಸೂರ್ಯನ ವಿಮಾನಕ್ಕೆ ದ್ವಿಗುಣವಹುದು, ಆ ಪುಷ್ಪಕಾರೂಢನಾದ ಚಂದ್ರನ ಕಿರಣಗಳ ಅಮೃತಮಂ ಕೃಷ್ಣಪಕ್ಷದ ಪಾಡ್ಯಂ ಮೊದಲ ಅಮಾಸೆ ಪರ್ಯಂತಮಾಗಿ ಅಗ್ನಿಮುಖ್ಯ ಸಕಲ ದೇವತೆಗಳುಂ, ಪಿತೃಗಣಗಳುಂ ಪಾನವಮಾಡೆ, ಕ್ಷಯವಾದ ಕಲೆಗಳಂ ಸೂರ್ಯನು ತನ್ನ ಸುಷುಮ್ನೆಯೆಂಬ ಕಿರಣಸೂತ್ರದಿಂದ ಆ ಚಂದ್ರನಂ ಶುಕ್ಲ ಪಕ್ಷದ ಪಾಡ್ಯಂ ಮೊದಲು ಹುಣ್ಣಿಮೆ ಪರಿಯಂತರಂ ದಿನದಿನಕ್ಕೆ ವರ್ಧಿಸುತ್ತಿಹನು.

ಮೇಲೆ ಆ ಚಂದ್ರನ ರಥಮಂ ಧ್ರುವನು ಸಂವಾಹಮೆಂಬ ವಾಯುರಜ್ಜುವಿಂ ಪಿಡಿದು ನಡಸುತ್ತಿಹನು. ೫೦೫

ನಕ್ಷತ್ರಮಂಡಲ :

ಬಳಿಕ ಆ ಚಂದ್ರನಿಂ ಮೇಲೆ ಒಂದು ಯೋಜನಾಂತರದಲ್ಲಿ ಮೊಲ್ಲೆಯ ಹೂವಿನೋಪಾದಿಯ ಬಿಳಿದಾದ, ಚಂದ್ರನೋಪಾದಿಯ ಶಾಂತಿಮಯುವಾದ ಪುಷ್ಪಕಾರೂಢ ಮಾಗಿರ್ಪ ನಕ್ಷತ್ರಮಂಡಲವಿಹುದು. ಆ ನಕ್ಷತ್ರಮಂಡಲಮಂ ಮೇಲೆ ಧ್ರುವನು ವಿವಹಮೆಂಬ ವಾಯುಸೂತ್ರದಿಂ ಪಿಡಿದು ನಡಸುತ್ತಿಹನು. ೫೦೬

ಕುಜಾದಿ ಪಂಚಗ್ರಹಂಗಳು :

ಬಳಿಕ ಆ ನಕ್ಷತ್ರ ಮಂಡನದಿಂ ಮೇಲೆ ಎರಡು ಯೋಜನಾಂತರದಲ್ಲಿ ಪದ್ಮರಾಗವರ್ಣದ ಮಂಗಳನಿಹನು. ಆತಂಗೆ ಪವಳದ ವಿಮಾನ, ಅದಕ್ಕೆ ಪವಳದ ಗಾಲಿನಾಲ್ಕು, ಎಂಟು ಕುದುರೆಗಳಿರ್ಕುಂ.

ಬಳಿಕ ಮಂಗಳನಿಂ ಮೇಲೆ ಎರಡುಲಕ್ಷ ಯೋಜನಾಂತರದಲ್ಲಿ ಕುಂಕುಮ ವರ್ಣದ ಬುದನಿಹನು. ಆತಂಗೆ ರತ್ನದ ವಿಮಾನ, ಅದಕ್ಕೆ ಪಚ್ಚೆಯ ಗಿಲಿ ನಾಲ್ಕು, ಪಿಂಗಳ ವರ್ಣದ ಹತ್ತು ಕುದುರೆಗಳಿರ್ಕುಂ.

ಬಳಿಕ ಆ ಬುಧನಿಂ ಮೇಲೆ ಎರಡು ಲಕ್ಷ ಯೋಜನಾಂತರದಲ್ಲಿ ತಪ್ತಕಾಂಚನವರ್ಣ ಬೃಹಸ್ಪತಿಯಿಹನು. ಆತಂಗೆ ಸುವರ್ಣರಥ ಅದಕ್ಕೆ ಮಾಣಿಕ್ಯದ ಗಾಲಿ ನಾಲ್ಕು ಕುಂಕುಮ ವರ್ಣದ ಎಂಟು ಕುದುರೆಗಳಿರ್ಕುಂ.

ಬಳಿಕ ಆ ಬೃಹಸ್ಪತಿಯಿಂ ಮೇಲೆ ಎರಡು ಲಕ್ಷ ಯೋಜನಾಂತರದಲ್ಲಿ ಕುಂದವರ್ಣದ ಶುಕ್ರನಿಹನು. ಆತಂಗೆ ರಜತವಿಮಾನ, ಅದಕ್ಕೆ ವೈಡೂರ್ಯದ ಗಾಲಿ ನಾಲ್ಕು ಚಿತ್ರವರ್ಣದ ಹತ್ತು ಕುದುರೆಗಳಿರ್ಕುಂ.

ಬಳಿಕ ಆ ಶುಕ್ರ ನಿಂ ಮೇಲೆ ಎರಡು ಲಕ್ಷ ಯೋಜನಾಂತರದಲ್ಲಿ ಭಿನ್ನಾಂಜನವರ್ಣದ ಕ್ರೋಧದೃಷ್ಟಿಯನುಳ್ಳ ಭಯಂಕರಿ ಮೂರ್ತಿಯಾದ ಶನೀಶ್ವರನಿಹನು. ಆತಂಗೆ ಕರ್ಬೊನ್ನ ವಿಮಾನ. ಅದಕ್ಕೆ ನೀಲದ ನಾಲ್ಕು ಗಾಲಿ. ಕೃಷ್ಣವರ್ಣದ ಎಂಟುಕುದುರೆಗಳಿರ್ಕುಂ.

ಬಳಿಕ ಈ ಮಂಗಳಾದಿ ಪಂಚಗ್ರಹಗಳಿಂ ಮೇಲೆ ಧ್ರುವನು ಪರಾಹಮೆಂಬ ವಾಯುರಜ್ಜುವಿಡಿದು ರುಜುಗತಿ ವಕ್ರಗತಿಗಳಾಗಿ ನಡಸುತ್ತಿರ್ಪಂ. ೫೦೭

ರಾಹು-ಕೇತುಗಳು :

ಬಳಿಕ ಆ ಶನೀಶ್ವರ ಮಂಡಲದಲ್ಲಿಯ ಕ್ರಮದಿಂದಂಜನ ವರ್ಣದ ಧೂಮ್ರ ವರ್ಣದ ರಾಹು ಕೇತುಗಳಿಹವು. ಅವಕ್ಕೆ ಉಕ್ಕಿನ ರಥ. ಅದಕ್ಕೆ ವಜ್ರದ ಗಾಲಿಗಳೆಂಟು. ಕುದುರೆಗಳೆಂಟು. ಆ ರಾಹುಕೇತುಗಳೆರಡನು ಮೇಲೆ ಧ್ರುವನು ಪರಿವಹಮೆಂಬ ವಾಯುಸೂತ್ರದಿಂ ಪಿಡಿದು ನಡಸುತ್ತಿರ್ಪಂ. ೫೦೮

ಗ್ರಹಮಂಡಲ ಪರಿಣಾಂ :

ಬಳಿಕ ದಿವ್ಯ ದೇಹಾನ್ವಿತರಾದ ಸಮಸ್ತಗ್ರಹಂಗಳೊಳಗೆ ಮೊದಲು ಹೇಳ್ದ ಸೂರ್ಯಮಂಡಲಕೆ ಇಮ್ಮಡಿ ಚಂದ್ರಮಂಡಲ. ಅವರೀರ್ವರ ಸಮಾನವೇ ರಾಹು ಮಂಡಲ. ಆ ಚಂದ್ರಮನ ಷೋಡಶಾಂಶವೆ ಶುಕ್ರಮಂಡಲ. ಆ ಶುಕ್ರನ ನಾಲ್ಕು ಭಾಗೆಯೊಳಗೆ ಒಂದು ಭಾಗ ಹೀನವಾದುದೇ ಬೃಹಸ್ಪತಿಯ ಮಂಡಲ, ಆ ಶುಕ್ರನ ನಾಲ್ಕು ಭಾಗೆಯೊಳಗೆ ಒಂದು ಭಾಗ ಹೀನವಾದುದೇ ಬೃಹಸ್ಪತಿಯ ಮಂಡಲ, ಆ ಬೃಹಸ್ಪತಿಯ ನಾಲ್ಕಂಶದೊಳಗೆ ಒಂದಂಶ ಹೀನವಾದುದೇ ಶನಿಮಂಡಲ. ಅದರ ಸಮಾನವೆ ಮಂಗಳನ ಮಂಡಲ. ಅದರ ನಾಲ್ಕು ಭಾಗೆಯೊಳೊಂದು ಭಾಗ ಹೀನವಾದುದೆ ಬುಧನ ಮಂಡಲ. ಆ ಬುಧನಿಗೆ ಸಮಾನವಾದ ಉಳಿದ ನಕ್ಷತ್ರಂಗಳೊಳಗೆ ನೂರುಯೋಜನ, ಎಂಭತ್ತುಯೋಜನ. ಐವತ್ತುಯೋಜನದ ಅಗಲದ ಮಂಡಲಗಳನುಳ್ಳವಲ್ಲದೆ, ಅದಕ್ಕೆ ಕಡಿಮೆಯಾದ ನಕ್ಷತ್ರಂಗಳಿಲ್ಲವೆಂದೆ ಕಾಣಲ್ವೇಳ್ಕುಂ. ೫೦೯

ಸೂರ್ಯ ಚಂದ್ರಗ್ರಹಣಂಗಳು :

ಬಳಿಕ ಆ ಗ್ರಹಂಗಳ ಮಧ್ಯದಲ್ಲಿ ಚಂದ್ರ ಸೂರ್ಯ ಗ್ರಹಣಂಗಳು ಎಂತೆನೆ; ಆವ ಸಂವತ್ಸರದಲ್ಲಿ ಆವ ಮಾಸದಲಾದರೂ, ಹುಣ್ಣಿಮೆ ಅಮಾವಾಸೆಗಳಲ್ಲಿ ಮೇಷಾದಿ ಹನ್ನೆರಡು ರಾಶಿಗಳೊಳಗೆ ಚಂದ್ರ ಸೂರ್ಯರಿರ್ದ ರಾಶಿಗೆ ರಾಹು ಬಂದು ಯೋಗ ಮಾದೊಡೆ ಆಯಾಯ ಗ್ರಹಣಂಗಳಪ್ಪವು. ಆ ರಾಶಿಗಳಲ್ಲಿ ವರ್ತಿಸುತ್ತಿರ್ದ ಅಶ್ವಿನಿ ಮೊದಲಾದ ನಕ್ಷತ್ರಂಗಳ ಒಂದುಪಾದ, ಎರಡುಪಾದ, ಮೂರುಪಾದ ನಾಲ್ಕುಪಾದ ಕ್ರಮದಿಂದ ಒಂದಂಶಗ್ರಹಣ, ಎರಡಂಶಗ್ರಹಣ, ಅಂಶತ್ರಯಗ್ರಣ ಪೂರ್ಣಗ್ರಹಣವಹುದೆಂದು ನಿಶ್ಚಿತಮಕ್ಕುಂ. ೫೧೦

ಸಪ್ತರ್ಷಿ ಮಂಡಲ :

ಮತ್ತಂ ಆ ಶನೀಶ್ವರನಿಂ ಮೇಲೆ ಎರಡು ಲಕ್ಷಯೋಜನಾಂತರದಲ್ಲಿ, ಮರೀಚಿ ಅತ್ರಿ ಅಂಗೀರಸ ಪುಲಸ್ತ್ಯ ಪುಲಹ ಕ್ರತು ವಶಿಷ್ಠರೆಂಬ ಸಪ್ತರ್ಷಿ ಮಂಡಲ ಮಿರ್ಕುಂ. ಬಳಿಕ ಇಂತು ಪೇಳ್ದ ಭೂಲೋಕದಿಂ ಮೇಲೆ ಭುವರ್ಲೋಕದ ಸಪ್ತರ್ಷಿಚಂಡಲದ ಪರ್ಯಂತರಂ ವಿಚಿತ್ರಮಾಗಿರ್ಪ ಸ್ಥಾನಂಗಳೆಲ್ಲಂ ಮಾರುತಾಧಾರದ ಮೇಘಾಶ್ರಯಂಗಳು. ಬಳಿಕ ಸಪ್ತರ್ಷಿ ಮಂಡಲದಿಂ ಮುಂದೆ ಪೇಳ್ವ ರುದ್ರಲೋಕ ಪರ್ಯಂತಮಾಗಿ ತೋರುವ ಸ್ಥಾನಂಗಳೆಲ್ಲಂ ಪವನಾಧಾರದ ವಿಮಾನಂಗಳೆಂದೇ ವಿವರಿಸಲ್ವೇಳ್ಕುಂ. ೫೧೧

ಭುವರ್ಲೋಕದ ಶಿಂಶುಮಾರ :

ಮತ್ತಂ ಆ ಸರ್ಪರ್ಷಿ ಮಂಡಲದಿಂ ಮೇಲೆ ಒಂದು ಲಕ್ಷ ಯೋಜನಾಂತರದಲ್ಲಿ ಶೀಂಶುಮಾರ ಚಕ್ರವಿಹುದು. ಆ ಶೀಂಶುಮಾರನು ಮೊಸಳೆಯಾಕಾರದ ಧರ್ಮಸ್ವರೂಪನಪ್ಪುದರಿಂ ಮಹಾ ವೃಷಭನೆನಿಸಿಕೊಂಬನು. ಅದರ ಶಿರವೇ ಈಶ್ವರನು, ಧರ್ಮವೇ ಮೂರ್ಧ್ನಿ, ಬ್ರಹ್ಮನೇ ಉತ್ತರಾಹನು. ಯಜ್ಞವೇ ಅಧರ, ವಿಷ್ಣುವೇ ಹೃದಯ,

ಸಂವತ್ಸರವೇಗರ್ಭ, ಅಶ್ವಿನಿದೇವತೆಗಳೇ ಪೂರ್ವಪಾದದ್ವಯಂಗಳು. ಅತ್ರಿಯೇ ಮಧ್ಯ, ಮಿತ್ರಾ ವರುಣರೆ ಅಪರ ಪಾದದ್ವಯಂಗಳು. ಅಗ್ನಿಯೇ ಬಾಲದಮೊದಲು, ಇಂದ್ರನು ಆ ಬಾಲದ ಮಧ್ಯ ಪ್ರಜಾಪತಿಯೇ ಆ ಬಾಲದ ಅಗ್ರ, ಅಭಯವು ಆ ಬಾಲದ ತುದಿಗಳಾಗಿರ್ಪವು. ಬಾಲದ ಕೊನೆಯಲ್ಲಿ ಸ್ತಂಭಕತ್ವದ ಸೂತ್ರಮಂ ವಿಶ್ವಕರ್ಮಂ ನಿರ್ಮಿಸಲು ಆ ಧ್ರುವನಲ್ಲಿರ್ದು ಮೊದಲು ಪೇಳ್ದ ವಾಯು ಸೂತ್ರಂಗಳಂ ಪಿಡಿದು ಆ ಗ್ರಹ ತಾರೆಗಳಂ ನಡೆಸುತ್ತಿರ್ಪಂ. ೫೧೨

ಸ್ವರ್ಲೋಕದ ದೇವೆಂದ್ರನು :

ಮತ್ತಂ ಆ ಪ್ರಕಾರದ ಭುವರ್ಲೋಕದಿಂ ಮೇಲೆ ಎಂಭತ್ತೈದುಲಕ್ಷ ಯೋಜನಾಂತರದಲ್ಲಿ ಸ್ವರ್ಲೋಕವಿಹುದು. ಅದಕ್ಕೆ ಕರ್ತೃವು ಆ ಇಂದ್ರನಾದೊಡೆ, ಹಿರಣ್ಮಯ ಶರೀರದಿಂ ಏಕಮುಖ ಚತುರ್ಭುಜ ಸಹಸ್ರ ಲೋಚನಂಗಳಿಂ ವಸ್ತ್ರ ಆಭರಣ ಗಂಧ ಮಾಲ್ಯಾದಿಗಳಿಂದ ಅಲಂಕೃತನಾಗಿ, ದಧೀಚಿ ಋಷೀಶ್ವರನ ಬೆನ್ನ ನೆಟ್ಟೆಲುವೆನಿಪ ವ್ರಜ್ರಾಯುಧವಿಡಿದು, ಶಚಿದೇವಿಸಹಿತನಾಗಿ ಸಕಲೈಶ್ವರ್ಯ ಸಂಪನ್ನನೆನಿಸಿ ಸಮಸ್ತ ಮನು ಮುನಿ ದೇವತೆಗಳಿಂದ ಓಲೈಸಿಕೊಳುತ್ತಿರ್ಪಂ. ೫೧೩

ದೇವತಾ ಭೇದಂಗಳು :

ಮತ್ತಂ ಆ ದೇವತೆಗಳಾದೊಡೆ ಆಜಾನ ದೇವತೆಗಳೆಂದು, ಕರ್ಮ ದೇವತೆಗಳೆಂದು ಎರಡುತೆರನಲ್ಲಿ ಸೃಷ್ಟಿಪ್ರಾರಾಂಭದೊಳು ಆ ಪದವನೆಯ್ದಿದವರುಗಳೇ ಆಜಾನ ದೇವತೆಗಳು, ಮನುಷ್ಯರಾಗಿ ಜನಿಸಿ ಬಳಿಕ ಅಶ್ವಮೇಧಾದಿ ಯಜ್ಞ ಇಷ್ಟಾರ್ಥಪೂರಿತಾದಿ ಕರ್ಮಗಳಿಂದ ಆ ಪದಮಂ ಪಡೆದವರುಗಳೇ ಕರ್ಮದೇವತೆಗಳು. ಇಂದ್ರ ಅಗ್ನಿ ಯಮ ಬೃಹಸ್ಪತಿ ಮೊದಲಾದವರುಗಳೆ ಆಜಾನರೆಂದು ಅರಿಯಲ್ವೇಳ್ಕುಂ. ೫೧೪

ದೇವತೆಗಳ ಸ್ವರೂಪ :

ಮತ್ತಂ ಆ ಸಕಲ ದೇವತೆಗಳು ಅಮೃತಮಯ ಶರೀರದಿಂ, ಕಂದರ್ಪಸಮಾನ ಲಾವಣ್ಯದಿಂದ ಅನಿಮಿಷಲೋಚನದಿಂ, ಮಹದೈಶ್ವರ್ಯದಿಂ, ಸುರಸ್ತ್ರೀಯರ ಸಂಭೋಗದಿಂ ಮಹಾಸುಖದಿಂ ಇರ್ಪರು. ಅವರು ಉಂಡ ಸುಧೆ ಮೊದಲಾದ ಆಹಾರವೆ ಮದನಾಂಬುವಾಗಿಯೇ ಪೋಪುದಲ್ಲದೆ ಮಲ ಮೂತ್ರಮಾಗಿ ಪರಿಣಮಿಸಲಿಲ್ಲೆಂದು ತಿಳಿಯಲ್ವೇಳ್ಕುಂ. ೫೧೫

ಮಹರ್ಲೋಕದ ಮಾರ್ಕಂಡೇಯ ಋಷಿ :

ಮತ್ತಂ ಆ ಸ್ವರ್ಗಲೋಕದಿಂ ಮೇಲೆ ಎರಡು ಕೋಟಿ ಯೋಜನಾಂತರದಲ್ಲಿ ಮಹರ್ಲೋಕವಿರ್ಪುದು. ಅದಕ್ಕೆ ಮೃಕಂಡುವಿನ ಆತ್ಮಜನಾದ ಮಾರ್ಕಂಡೇಯ ಮುನೀಶ್ವರನು ಅಧಿಪತಿಯುಗಿ, ಮರೀಚಿ ಮುಂತಾದ ಮುನಿಳೊಡಗೂಡಿ ಪರಮೇಶ್ವರಾರಾಧನೆಯ ಬಲದಿಂ ನಿತ್ಯತ್ವಮಂ ಪಡೆದು ಸುಖಸ್ವರೂಪನಾಗಿರ್ಪಂ. ೫೧೬

ಜನಲೋಕ (ಪಿತೃಲೋಕ) :

ಮತ್ತಂ ಆ ಮಹರ್ಲೋಕದಿಂ ಮೇಲೆ ಎಂಟುಕೋಟಿ ಯೋಜನಾಂತರದಲ್ಲಿ ಜನಲೋಕವಿಹುದು. ಅದಕ್ಕೆ ವಶಿಷ್ಠಾದಿ ಋಷೀಶ್ವರರು ಅಧಿಪತಿಗಳಾಗಿ ಪಿತೃಲೋಕವೆನಿಸಿ, ಪಿತೃ ಜಹ್ನು ಜನಂಗಳೊಡಗೂಡಿ ತಪೋರಾಜ್ಯಂಗೆಯ್ಯುತ್ತಿರ್ಪರು. ಅಲ್ಲಿಯೆ ಋಷಿಗಳ ಪಿತೃಪಿತಾಮಹರೆ ಭೂಲೋಕದ ಬ್ರಾಹ್ಮಣರ ಗೋತ್ರವಪ್ಪುದರಿಂದವೆ ಪಿತೃಲೋಕವೆನಿಸಿಕೊಳುತ್ತಿರ್ಕುಂ. ೫೧೭

ತಪೋಲೋಕ :

ಮತ್ತಂ ಆ ಜನಲೋಕದಿಂ ಮೆಲೆ ಹನ್ನೆರಡು ಕೋಟಿ ಯೋಜನಾಂತರದಲ್ಲಿ ತಪೋಲೋಕವಿಹುದು. ಅದಕ್ಕೆ ಬ್ರಹ್ಮನ ಮಾನಸ ಪುತ್ರರಾದ ಸನಕ ಸನಂದ ಸನಾತನ ಸನತ್ಸುಜಾತ ಸನತ್ಕುಮಾರರೆಂಬ ಐವರು ರಾಜರ್ಷೀಶ್ವರರು ಅಧಿಪತಿಗಳಾಗಿ ಯೋಗ ನಿಷ್ಠರಾಗಿರ್ಕುಂ. ೫೧೮

ಸತ್ಯಲೋಕ– ಚತುರ್ಮುಖ ಬ್ರಹ್ಮನು :

ಮತ್ತಂ ಅಲ್ಲಿಂದಂ ಮೇಲೆ ಹದಿನಾರು ಕೋಟಿ ಯೋಜನಾಂತರದಲ್ಲಿ ಸತ್ಯಲೋಕವಿಹುದು. ಅದಕ್ಕೆ ರಜೋಗುಣದಿಂ ಜಗದುತ್ಪತ್ತಿ ಕರ್ತೃವಪ್ಪ ಪಿತಾಮಹನೆ ಕರ್ತೃವು. ಆತನಾದೊಡೆ ಸುವರ್ಣಕಾಂತಿಮಯ ಶರೀರದಿಂ ಚತುರ್ಮುಖ ಲೋಚನಾಷ್ಟಕ ಯಜ್ಞ ಸೂತ್ರಂಗಳಿಂ, ಅಕ್ಷಮಾಲೆ ಪಾಶ ದಂಡ ಕಮಂಡಲಂಗಳುಳ್ಳ ವಾಮ ದಕ್ಷಿಣಕರ ಚತುಷ್ಟಯದಿಂ, ದಿವ್ಯ ವಸ್ತ್ರಾಭರಣಗಂಧ ಪುಷ್ಪಾದಿಗಳಿಂದ ಅಲಂಕೃತನಾಗಿ, ಸರಸ್ವತಿ ಸಹಿತನಾಗಿ ಮೂರ್ತಿವೆತ್ತ ವೇದಪುರುಷರಿಂ, ಮರೀಚ್ಯಾದಿ ನವಬ್ರಹ್ಮರಿಂ, ಸಕಲ ಮುನಿಜನಂಗಳಿಂ, ವಾಸವಾದಿ ಸುರಸಂತತಿಗಳಿಂದ ಓಲೈಸಿಕೊಳುತ್ತಿರ್ಪಂ. ೫೧೯

ಅರುವತ್ತು ನಾಲ್ಕು ಸಿದ್ಧಿಗಳಲ್ಲಿ ಪಾರ್ಥಿವ ಸಿದ್ಧಿಗಳೆಂಬು :

ಮತ್ತಂ ಆ ಬ್ರಹ್ಮಂಗೆ ಅರುವತ್ತು ನಾಲ್ಕು ಸಿದ್ಧಿಗಳುಂಟು. ಅವಂಪೇಳ್ವ ನೆವದಿಂ, ಪಿಶಾಚಾದಿ ದೇವತೆಗಳ ಅಂತರಂಗಳ ಪದವಿಗಳ ತಾರತಮ್ಯಮಂ ತೋರ್ಪೆನು, ಅದೆಂತೆಂದೊಡೆ:

ಸ್ಥೂಲನಾಗುರ್ದ ಸೂಕ್ಷ್ಮನಾಗುಹ ಬಾಲನಾಗುಹ ಯೌನವವಾಗುಹ ವೃದ್ಧನಾಗುಹ ನಾನಾ ಜಾತಿರೂಪನೆಯ್ದುಹ, ಪೃಥ್ವಿ ಪೊರತಾಗಿ ಮಿಕ್ಕ ಭೂತಚತುಷ್ಟಯದಿಂದಲೆ, ದೇಹಮಂ ಧರಿಸುವ, ನಿತ್ಯಸುಗಂಧಮಂ ಸೇವಿಸುವಹ ಎಂಟು ಪಾರ್ಥಿವ ಸಿದ್ಧಿಗಳು ಪಿಶಾಚರ ಗುನಾಂಗಕ್ಕುಂ.

ಅಪ್ ತತ್ವ ಸಿದ್ಧಿಗಳೆಂಟು :

ಬಳಿಕ ಜಲನಿರಸನಮಂ ಮಾಡುಹ, ಭೂಸದೃಶ ಜಲಗಮನಮಂ ಮಾಡುಹ, ಅನಾತುರ ಸಮುದ್ರ ಪಾನಮಂ ಮಾಡುಹ, ನಿರ್ಜಲ ಸ್ಥಾನದಲ್ಲಿ ಜಲದರ್ಶನಮಂ

ಮಾಡುಹ, ಶಿಲಾದಿತಾಡವನದಿಂ ವ್ರಣವಿಲ್ಲದಿರುಹ, ಕರಪುಟದಲ್ಲಿ ಸಮುದ್ರಮಂ ಧರಿಸುವ, ನೀರಸ ವಸ್ತುವಂ ಸುರಸಂ ಮಾಡುಹ, ಅಪ್ಪು ಹೊರತಾಗಿ ಮೇಲಣ ಮೂರು ಭೂತಂಗಳಿಂದವೆ ದೇಹಮಂ ಧರಿಸುಹವೆಂಟು ಅಪ್ಪು ಸಿದ್ಧಿಗಳವರೊಡನೆ ಪೂರ್ವೋಕ್ತ ಗುಣಂಗಳು ಎಂಟೂ ಕೂಡಿ ಹದಿನಾರು ರಾಕ್ಷಸರ ಗುಣಂಗಳಕ್ಕುಂ.

ತೈಜಸ ಸಿದ್ಧಿಗಳೆಂಟು :

ಬಳಿಕ ಶರೀರದಲ್ಲಿ ಅಗ್ನಿ ನಿರ್ಮಾಣ, ಅಗ್ನಿಭಯವರ್ಜನ, ಜಲದಲ್ಲಿ ಅಗ್ನಿ ಸ್ಥಾಪನ, ಪಾಣಿಯಲ್ಲಿ ಪಾವಕಧಾರಣ, ಅನ್ನಾತಿಪಚನ, ಅಪ್ರಯತ್ನ ಜಗದ್ದಹನ, ಅಗ್ನಿ ಹೊರತಾಗಿ ಮೇಲಣ ಬೂತದ್ವಯದಿಂದವೆ ದೇಹಧಾರಣವೆಂಬ ಏಳುಂ, ಬೇರೆ ಅತಿ ಸೂಕ್ಷ್ಮವಾಗಿ ಮರೆಯಾಗಿರ್ದ ಅತೀತ ಅನಾಗತವಸ್ತು ವಿಸರಮಂ ಯಥಾರ್ಥಮಾಗಿ ಅರಿವತನವೆ ಪ್ರತಿಭೇದ ಪ್ರಯತ್ನವಿಲ್ಲದೆ ದೂರ ಶಬ್ದಗ್ರಹಣವೆ ಶ್ರವಣ, ಸಕಲ ಜನ ವೃತ್ತಾಂತ ವಿಷಯ ಜ್ಞಾನವೆ ವಾರ್ತೆ, ಪ್ರಯತ್ನವಿಲ್ಲದೆ ದಿವ್ಯದರ್ಶನವೆ ದರ್ಶನ, ದಿವ್ಯರಸಾಸ್ವಾದನವೇ ಆಸ್ವೆದನ, ಸಕಲ ಲೋಕದಲ್ಲಿಯ ದಿವ್ಯ ಗಂಧಾದಿಗಳನರುವುದೇ ವೇದನೆ ಎಂಬಿವೆ ಷಟ್ ಉಪಸರ್ಗಂಗಳೆನಿಸಿಕೊಂಬುವನು ಉಳ್ಳುದೊಂದು, ಇವೆಂಟು ತೈಜಸ ಸಿದ್ಧಿಗಳು. ಇವರೊಡನೆ ಮೊದಲ ಹದಿನಾರು ಗುಣಂ ಕೂಡಿ ಇಪ್ಪತ್ತನಾಲ್ಕು ಯಕ್ಷರ ಗುಣಂಗಳಕ್ಕುಂ

ವಾಯುಸಿದ್ಧಿಗಳೆಂಟು :

ಬಳಿಕ ಮನೋಜವತ್ವ ಭೂತಾಂತಃಪ್ರವೇಶನ, ಪರ್ವತಾದಿ ಭಾರಾಭರಣ, ಗುರುತ್ವ, ಲಘುತ್ವ, ಹಸ್ತಾನಿಲಧಾರಣ, ಅಗ್ರಾಂಗುಲಿ ಭೂಕಂಪನ, ವಾಯು ಹೊರತಾಗಿ ಗಗನಮಾತ್ರದಿಂ, ದೇಹಧಾರಣಮೆಂಬ ಎಂಟೂ ಮಾರುತ ಸಿದ್ಧಿಗಳು ಇವರೊಡೊನೆ ಮೊದಲ ಇಪ್ಪತ್ತನಾಲ್ಕು ಗುಣಂಗೂಡಿ ಮೂವತ್ತೆರಡು ಗಂಧರ್ವರ ಗುಣಂಗಳಕ್ಕುಂ ೫೨೦

ಅಂಬರ ಸಿದ್ಧಿಗಳೆಂಟು :

ಬಳಿಕ, ಛಾಯಾವಿಹೀನತೆ ಇಂದ್ರಿಯ ಅದೃಶ್ಯತೆ, ಖೇಚರತೆ, ಯಥೇಷ್ಟ ವಿಷಯ ಸಂಗತೆ, ಶೈಲಲಂಘನ, ಶೈಲಗರ್ಭೀಕರಣ ಆಕಾಶ ಪಿಂಡೀಕರಣ, ಅಶರೀಜಮೆಂಬವೆಂಟೂ ಅಂಬರ ಸಿದ್ಧಿಗಳು ಇವರೊಡನೆ ಮೊದಲ ಮೂವತ್ತೆರಡು ಕೂಡಿ ನಾಲ್ವತ್ತು ಇಂದ್ರನ ಗುಣಂಗಳಕ್ಕುಂ. ೫೨೧

ಮಾನಸ ಸಿದ್ಧಿಗಳೆಂಟು :

ಬಳಿಕ, ಯಥಾಕಾಮೋಪಲಬ್ಧಿ, ಯಥಾಕಾಮನಿರ್ಗಮನ, ಸರ್ವತಿರಸ್ಕರಣ, ಸಕಲಗುಹ್ಯಾರ್ಥದರ್ಶನ, ಕರ್ಮಾನುಗುಣನಿರ್ಮಾಣ, ವಶಿತ್ವ, ಪ್ರಿಯದರ್ಶನ, ಸಂಸಾರದರ್ಶನವೆಂಬ ಎಂಟು ಮಾನಸ ಸಿದ್ಧಿಗಳು. ಇವರೊಡನೆ ನಾಲ್ವತ್ತು ಗುಣಂಗಳುಂ ಕೂಡಿ ನಾಲ್ವತ್ತೆಂಟು ಸಾಮಾನ್ಯ ಗುಣಂಗಳಕ್ಕುಂ ೫೨೨

ಅಹಂಕಾರ ಸಿದ್ಧಿಗಳೆಂಟು :

ಬಳಿಕ, ಛೇದನ ತಾಡನ ಬಂಧನ ಮೋಚನ, ಗ್ರಹಣಸಂಸಾರಪರಿವರ್ತನೆ ಪ್ರಸಾದ ಮೃತ್ಯುಕಾಲ ಜಯಮೆಂಬ ಎಂಟು ಅಹಂಕಾರ ಸಿದ್ಧಿಗಳು ಇವರೊಡನೆ ಮೊದಲ ನಾಲ್ವತ್ತೆಂಟು ಗುಣಂ ಗೂಡಿ ಐವತ್ತಾರು ಪ್ರಜಾಪತಿಯ ಗುಣಂಗಳಕ್ಕುಂ. ೫೨೩

ಬುದ್ಧಿ ಸಿದ್ಧಿಗಳೆಂಟು :

ಬಳಿಕ, ಜಗಜ್ಜನನಿ, ಜಗದ್ರಕ್ಷಣ, ಜಗತ್ಸಂಹರಣ, ಅಭಿಮತ, ಇಷ್ಟಾಧಿಕರಣ, ಲೋಕಪ್ರವರ್ತನ, ಅಸದೃಶನಿಮಾಣ, ಅಶುಭಕರಣವೆಂಬ ಎಂಟು ಬುದ್ಧಿ ಸಿದ್ಧಿಗಳು ಇವರೊಡನೆ ಮೊದಲ ಐವತ್ತಾರು ಗುಣಂಗೂಡಿ ಅರುವತ್ತನಾಲ್ಕು ಗುಣಂಗಳಿಂ ಸಂಪನ್ನನಾಗಿ ಸತ್ಯಲೋಕದಲ್ಲಿ ಬ್ರಹ್ಮನಿರ್ಪಂ. ೫೨೪

ಚತುರ್ಮುಖ ಸಿದ್ಧಿಗಳ ಪರ್ಯವಸಾನ :

ಇಂತು ಪೃಥ್ವಿ ಮೊದಲು ಬುದ್ಧಿ ಕಡೆಯಾದ ಎಂಟು ತತ್ತ್ವ ಜಯದಿಂದಾದ ಸಿದ್ಧಿಗಳನುಳ್ಳ ಪಿಶಾಚಾದಿ ಬ್ರಹ್ಮಾಂತಮಾದ ದೇವತೆಗಳ ಪದವು ಈ ಪ್ರಕಾರಮಾಗೆ, ಮುಂದೆ ಪ್ರಕೃತಿ ತತ್ತ್ವಾದಿಗಳ ಜಯದಿಂದಾದ ಸಿದ್ಧಿಗಳನುಳ್ಳ ವಿಷ್ಣ್ವಾದಿಗಳ ಮಹಾ ಪದಂಗಳನು ಎಣಿಸಲು ಅಳವಲ್ಲೆಂದು ತಿಳಿಯಲ್ವೇಳ್ಕುಂ ೫೨೫

ನವಬ್ರಹ್ಮರುಗಳ ಉತ್ಪತ್ತಿ :

ಮತ್ತಂ ಆ ಬ್ರಹ್ಮನಿಂದ ಅಖಿಲ ದೇವದಾನವಾದಿಗಳುತ್ಪತ್ತಿ ಕ್ರಮವಾವುದು ಎಂದೊಡೆ: ಪ್ರಥಮ ಸೃಷ್ಟಿಯೊಳು ಆ ಬ್ರಹ್ಮನ ನೇತ್ರದಲ್ಲಿ ಮರಿಚ ಪುಟ್ಟಿದನು. ಹೃದಯದಲ್ಲಿ ಪುಲಸ್ತ್ಯನು ಪುಟ್ಟಿದನು. ವ್ಯಾನವಾಯುವಿನಲ್ಲಿ ಪುಲಹ ಪುಟ್ಟಿದನು. ಅಪಾನವಾಯುವಿನಲ್ಲಿ ಕ್ರತು ಪುಟ್ಟಿದನು. ಸಮಾನ ವಾಯುವಿನಲ್ಲಿ ವಶಿಷ್ಠನು ಪುಟ್ಟಿದನು. ಸಂಕಲ್ಪದಲ್ಲಿ ಧರ್ಮದೇವತೆ ಪುಟ್ಟಿತ್ತು. ಬಳಿಕ ಮರೀಚ್ಯಾದಿ ವಶಿಷ್ಠಾಂತವಾದವರುಗಳೇ ನವಬ್ರಹ್ಮರೆನಿಸಿಕೊಳುತ್ತರ್ಪಂ. ೫೨೬

ಮರೀಚಿಬ್ರಹ್ಮನಿಂ ಕಶ್ಯಪ ಸಂತತಿ :

ಮತ್ತಮ ಆ ಮರೀಚಿಗೆ ಕಶ್ಯಪ ಬ್ರಹ್ಮನಾದನು. ಆತಂಗೆ ದಕ್ಷಬ್ರಹ್ಮನ ಪುತ್ರಿಯರಾದ ದಿತಿ ಅದಿತಿ ಧನು ಕಾಲೆ ಅನಾಯು ಸಂಹಿತೆ ಮುನಿ ಪ್ರವಾಹೆ ಅರಿಷ್ಟೆ ವಿನತೆ ಕಪಿಲೆ ಕದ್ರುವೆ ಕ್ರೋಧೆಯರೆಂಬ ತ್ರಯೋದಶ ಸ್ತ್ರೀಯರುಗಳು ಅವರೊಳಗೆ ೫೨೭

ಅದಿತೇಯರಾದ ದೇವರ್ಕಳ ಸಂತತಿ :

ಅದಿತಿಗೆ ಧಾತೃ ಮೊದಲಾದ ವಿಷ್ಣು ಕಡೆಯಾದ ದ್ವಾದಶಾದಿತ್ಯರುಂ ಇಂದ್ರಾದಿ ಮೂವತ್ತುಮೂರುಕೋಟಿ ದೇವತೆಗಳುಂ ಪುಟ್ಟಿದರು. ಮತ್ತಂ ಆ ಸೂರ್ಯನಾರಾಯಣಂಗೆ ವೈವಸ್ವತಮನು ಜನಿಸಿದನು. ಅವನಿಗೆ ಇಕ್ಷ್ವಾಕುವೇ ಮೊದಲಾದ ಸಂತಾನಪರಂಪರೆಯಿಂ ರಾಮ ಲಕ್ಷ್ಮಣ ಭರತ ಶತೃಘ್ನರು ಕಡೆಯಾದ ಸಮಸ್ತ

ಕ್ಷತ್ರಿಯ ರಾಜವರ್ಗಂ ಜನಿಸಿತ್ತು. ಮತ್ತಂ ಆ ವೈವಸ್ವತಮನುವಿನ ಪುತ್ರಿಯಾದ ಇಳೆಯೆಂಬಾಕೆಗೆ ಚಂದ್ರನ ಸುತನಾದ ಬುಧಂಗೆಯು ಪುರೂರವಂ ಜನಿಸಿದನು. ಆತಂಗೆ ಆಯುವೆಂಬಾತ ಮೊದಲಾಗಿ ಪಾಂಡವರಲ್ಲಿ ಜನಿಸಿದ ಜನಮೇಜಯನೇ ಕಡೆಯಾದ ಸಕಲ ಕ್ಷತ್ರಿಯ ಜಾತಿ ಜನಿಸಿತ್ತೆಂದರಿವುದು. ॥೨೮

ದೈತ್ಯ ಸಂತತಿ :

ಬಳಿಕ್ಕ ಎರಡನೆಯ ದಿತಿಗೆ ಐವತ್ತಾರು ಕೋಟಿ ರಾಕ್ಷಸರು ಜನಿಸಿದರು. ಅವರೊಳಗೆ, ಹಿರಣ್ಯ ಕಶಿಪುವಿಂಗೆ ಪ್ರಹ್ಲಾದ ಸಹ್ಲಾದ ಅನುಹ್ಲಾದ ಶಿಖಿ ಭಾಷ್ಕಳರೆಂಬ ಐವರು ಪುತ್ರರಾದರು. ಅವರೊಳಗೆ, ಪ್ರಹ್ಲಾದಂಗೆ ವಿರೋಚನ ಕುಂಭ ನಿಕುಂಭರೆಂಬ ಮೂವರು ಮಕ್ಕಳು. ಅವರಲ್ಲಿ ವಿರೋಚನಂಗೆ ಬಲೀಂದ್ರನಾದನು. ಆತಂಗೆ ಬಾಣಾಸುರಂ ಮೊದಲಾದ ಶತಕುಮಾರರಾದರು, ಎಂಬುದೇ ಸಿದ್ಧಮಕ್ಕುಂ ॥೨೯

ದನು ಕಾಲೇಯರಿಂ ರಾಕ್ಷಸ ಸಂತತಿ :

ಬಳಿಕ ಮೂರನೆಯ ದನುವೆಂಬಾಕೆಗೆ ನಾಲ್ವತ್ತು ಕ್ರೂರ ದಾನವರು ಪುಟ್ಟಿದರು. ನಾಲ್ಕನೆಯ ಕಾಲೆಯೆಂಬಾಕೆಗೆ ನಿವಾತ ಕವಚಾಸುರರು ಪುಟ್ಟಿದರು. ॥೩೦

ಅಸುರ ಸಂತತಿ :

ಬಳಿಕ ಐದನೆಮ ಆಯುವೆಂಬಾಕೆಗೆ ವೃತ್ರಾಸುರಂ ಮೊದಲಾದ ನಾಲ್ವತ್ತು ಮಕ್ಕಳು ಜನಸಿದರು. ಆರನೆಯ ಸಂಹಿತೆಯೆಂಬಾಕೆಗೆ ರಾಹು ಮೊದಲಾದ ನಾಲ್ವರು ಮಕ್ಕಳು ಪುಟ್ಟಿದರು. ॥೩೧

ರತ್ನ ಗಂಧರ್ವ ಅಪ್ಸರೋ ಗಣಾದಿಗಳ ಉತ್ಪತ್ತಿ :

ಬಳಿಕ ಏಳನೆಯ ಮುನಿ ಎಂಬಾಕೆಗೆ ನವರತ್ನಗಳುಂ ದೇವಗಂಧರ್ವರುಂ ಪುಟ್ಟಿದರು. ಎಂಟನೆಯ ಪ್ರವಾಹಿಗೆ ಚಿಂತಾಮಣಿ ಪರುಷ ಸಕಲಲೋಹಂಗಳು, ಏಳು ಹೆಣ್ಣು ಮಕ್ಕಳು, ಹತ್ತು ಗಂಡು ಮಕ್ಕಳು ಪುಟ್ಟಿದರು. ಬಳಿಕ ಒಂಭತ್ತನೆಯ ಅರಿಷ್ಟೆಗೆ ಹತ್ತು ಅಪ್ಸರ ಸ್ತ್ರೀಯರು ತುಂಬುರರು ಮೊದಲಾದ ನಾಲ್ವರು ಗಂಡು ಮಕ್ಕಳು ಪುಟ್ಟಿದರು. ॥೩೨

ವಿನತೆಯಿಂ ಪಕ್ಷಿ ಸಂತತಿ :

ಬಳಿಕ ಹತ್ತನೆಯ ವಿನತೆಗೆ ಗರುಡ ಅರುಣ ವಜ್ರ ಸಿಡಿಲು ವರುಣಾದಿ ಜಲದೇವತೆಗಳುಂ ಪುಟ್ಟಿದರು. ಅವರಲ್ಲಿ ಸಿಡಿಲು ಗರುಡನೊಡನೆ ಪುಟ್ಟಿದುದರಿಂ ಸರ್ಪವೈರಿಯಾಯಿತ್ತು. ಜಲದೇವತೆಗಳೊಡನೆ ಪುಟ್ಟಿದ ಕಾರಣದಿಂ ಮಳೆಗಳಾಗುವಲ್ಲಿ ಬಂದು ಘರ್ಜಿಸಿ ವ್ಯವಹರಿಸುತ್ತಿರ್ಕುಂ. ॥೩೩

ಕಪಿಲೆಯಿಂ ಅಮೃತ ಗೋ ಬ್ರಾಹ್ಮಣ ಸಂತತಿ :

ಬಳಿಕ ಹನ್ನೊಂದನೆಯ ಕಪಿಲೆಯೆಂಬಾಕೆಗೆ ಅನಂತ ತಕ್ಷಕ ವಾಸುಕಿ ಮೊದಲಾದ ಸಾವಿರ ಮಹಾನಾಗರ್ಕಳು ಪುಟ್ಟಿದರು. ೫೩೫

ಮೃಗ ಪಶು ಪರ್ವತಾದಿಗಳ ಉತ್ಪತ್ತಿ :

ಬಳಿಕ ಹದಿಮೂರನೆಯ ಕ್ರೋಧೆಗೆ ಸಮಸ್ತ ಪರ್ವಗಳುಂ, ಲೋಕಬಾಧಕರಾದ ಕೆಲರು ಕ್ರೂರಾತ್ಮರುಂ, ದ್ವಾದಶಪುತ್ರಿಯರುಂ ಪುಟ್ಟಿದರು. ಅವರೊಳಗೆ ಭದ್ರಾಮುದ್ರೆಯಂಬವಳಲ್ಲಿ ಐರಾವತಂ ಜನಿಸಿತ್ತು. ಸಿತೆಯೆಂಬವಳಲ್ಲಿ ಉಳಿದ ದಿಗ್ಗಜಂಗಳು ಉದಿಸಿದವು. ಮಾತಂಗೆಯಲ್ಲಿ ಮಿಕ್ಕ ಗಜಂಗಳು ಉದಿಸಿದವು. ಗಾಂಧರ್ವೆಯಲ್ಲಿ ಕುದುರೆಗಳು ಉದಿಸಿದವು. ಶಾರ್ದೂಲೆಯಲ್ಲಿ ಸಿಂಹಗಳಾದವು. ಹರಿ ಎಂಬಾಕೆಯಲ್ಲಿ ವಾನರಂಗಳು ಒಗೆದವು. ಮೃಗೆಯಲ್ಲಿ ಮೃಗಂಗಳು ಉದ್ಭವಿಸಿದವು. ಮೃಗಮದೆಯಲ್ಲಿ ಕರಡಿಗಳುಂ ಚಮರೀಮೃಗಂಗಳು ಉಂಟಾದವು. ಸುರಸೆಯಲ್ಲಿ ಸರ್ಪಜಾತಿ ಜನಿಸಿತು. ನಲೆಯೆಂಬವಳಲ್ಲಿ ಪುಷ್ಪವಿಲ್ಲದೆ ಫಲಿಸುವ ಅಶ್ವತ್ಥಾದಿ ಮರಂಗಳು ಉತ್ಪತ್ತಿಯಾದವು. ಕುಹೆ ಎಂಬಾಕೆಯಲ್ಲಿ ಪುಷ್ಪಫಲಂಗಳುಳ್ಳ ಮರಂಗಳು ಪುಟ್ಟಿದವು. ವಿರೋಧೆಯಲ್ಲಿ ಲತೆ ಗುಲ್ಮ ನಾನಾತೃಣಾದಿಗಳು ಉದಯವಾದವು. ಇಂತಿವೆಲ್ಲಂ ಮರೀಚಿಯ ಸಂತಾಲಮಕ್ಕುಂ. ೫೩೬

ಭೃಗುಬ್ರಹ್ಮ ಸೃಷ್ಟಿ :

ಅನಂತರದೊಳು ಆ ಭೃಗುವಿಂಗೆ ಕವಿಯೆಂಬ ಮಗನಾದನು. ಆತಂಗೆ ಶುಕ್ರನುದ್ಭವಿಸಿ ದೈತ್ಯರ್ಗೆ ಗುರುವಾಗಿರ್ಪಂ. ೫೩೮

ಆಂಗಿರೋಬ್ರಹ್ಮ ಸೃಷ್ಟಿ :

ಅನಂತರದೊಳು ಆಂಗೀರಸನಿಗೆ ಬೃಹಸ್ಪತಿಯು ಜನಿಸಿ ಸುರರಿಗೆ ಆಚಾರ್ಯನಾಗಿರ್ಪಂ.

ಪುಲಸ್ತ್ಯ ಬ್ರಹ್ಮನ ಸಂತತಿ :

ಅನಂತರದೊಳು ಆ ಪುಲಸ್ತ್ಯಂಗೆ ವಿಶ್ವಾವಸು ಪುಟ್ಟಿದನು. ಆತಂಗೆ ಕುಬೇರನುಂ ಕಿನ್ನರರುಂ ಜನಿಸಿದರು. ಮತ್ತಂ ಆ ವಿಶ್ವಾವಸುವಿಂಗೆ ರಾಕ್ಷಸಪುತ್ರಿಯಾದ ಕೈಕಸೆ, ಪುಷ್ಪೋತ್ಕಟೆ ಎಂಬ ಈರ್ವರು ಸ್ತ್ರೀಯರು. ಅವರೊಳಗೆ ಕೈಕಸೆ ಎಂಬಾಕೆಗೆ ರಾವಣ ಕುಂಭಕರ್ಣ ವಿಭೀಷಣರೆಂಬ ಮೂವರು ಪುತ್ರರಾದರು. ಪುಷ್ಪೋತ್ಕಟೆಯೆಂಬಾಕೆಗೆ ಖರ ದೂಷಣ ತ್ರಿಶಿರರೆಂಬ ಮೂವರು ತನೂಜರೂ, ಶೂರ್ಪನಖಿಯೆಂಬ ಪುತ್ರಿಯು ಪುಟ್ಟಿದಳು. ೫೩೯

ಪುಲಕ್ರತುಬ್ರಹ್ಮನ ಸಂತತಿ :

ಅನಂತರದೊಳು ಆ ಪುಲಹಂಗೆ ಕಿಂಪುರುಷ ಜಾತಿಯುಂ ವ್ಯಾಘ್ರಾದಿ ಮೃಗಗಳುಂ ಜನಿಸಿದವು. ಅನಂತರದೊಳು ಆ ಕ್ರತುವಿಂಗೆ ಸೂರ್ಯಾಗ್ನಿ ತೇಜಸ್ಸುನುಳ್ಳ ಕೆಲ ಋಷಿಗಳುದಿಸಿದರು. ೫೪೦

ದಕ್ಷ ಬ್ರಹ್ಮನ ಸಂತತಿ :

ಅನಂತರದೊಳು ಆ ದಕ್ಷನಿಗೆ ಐವತ್ತೂ ಪುತ್ರಿಯರುದಿಸಿದರು. ಅವರೊಳಗೆ, ಕೀರ್ತಿ ಲಕ್ಷ್ಮಿ ಧೃತಿ ಮೇಧೆ ಪುಷ್ಟಿ ಶ್ರದ್ಧೆ ಕ್ರಿಯೆ ಬುದ್ಧಿ ಲಜ್ಜೆ ಮತಿಯೆಂಬ ಹತ್ತು ಮಕ್ಕಳನೆ ಬ್ರಹ್ಮನ ಸಂಕಲ್ಪ ಜನಿತನಾದ ಧರ್ಮ ದೇವತೆಗೆ ಕೊಟ್ಟನು.

ಅದಿತಿ ಮೊದಲಾದ ಹದಿಮೂರು ಮಕ್ಕಳನು ಪೂರ್ವೋಕ್ತ ಕಶ್ಯಪ ಬ್ರಹ್ಮನಿಗೆ ಕೊಟ್ಟನು.

ಬಳಿಕ ಆ ಧರ್ಮದೇವತೆಗೆ ಶಮ ಕಾಮ ಹರ್ಷರೆಂಬ ಮೂವರು ಪುತ್ರರು, ಅವರೊಳಗೆ ಶಮಂಗೆ ಪ್ರೀತಿ, ಕಾಮಂಗೆ ರತಿ, ಹರ್ಷಂಗೆ ಆನಂದಿಯರೆಂಬ ಸ್ತ್ರೀಯರುಗಳು ಅವರೇ ಜಗತ್ತಿನ ಧರ್ಮಂಗಳಿಗೆ ಸಹಾಯಂಗಳಕ್ಕುಂ ॥೪೧

ಅತ್ರಿಬ್ರಹ್ಮನ ಸಂತತಿ ಮತ್ತು ವಶಿಷ್ಠ ಸಂತತಿ :

ಅನಂತರದೊಳು ಆ ಅತ್ರಿಗೆ ದೂರ್ವಾಸ ದತ್ತಾತ್ರೇಯ ಚಂದ್ರರೆಂಬ ಮೂವರು ಪುತ್ರರಾದರು. ಆ ಚಂದ್ರಂಗೆ ಬುಧನು ಜನಿಸಿದನು.

ಅನಂತರದೊಳು ಆ ವಶಿಷ್ಠಗೆ ಶಕ್ತಿ ಪರಾಶರ ವ್ಯಾಸ ಶುಕಾದಿ ಋಷಿ ಸಂತಾನವು ಉದಿಸಿತ್ತು. ಅದೇ ನವ ಬ್ರಹ್ಮರಿಂದಾದ ಸೃಷ್ಟಿಕ್ರಮಮಕ್ಕುಂ ॥೪೨

ಚತುರ್ಮುಖನಿಂ ಪ್ರಜಾಪತಿಸಂತತಿ :

ಅನಂತರದೊಳು ಆ ಬ್ರಹ್ಮನಿಗೆ ಪ್ರಜಾಪತಿ ಪುಟ್ಟಿದನು. ಆತಂಗೆ ಧರ ಧ್ರುವ ಸೋಮ ಆಪ ಅನಿಲ ಅನಲ ಪ್ರತ್ಯೂಷ ಪ್ರಭಾಸರೆಂಬ ಅಷ್ಟ ವಸುಗಳು ಜನಿಸಿದರು. ಅವರೊಳಗೆ : ಧರನಿಗೆ ಪ್ರವೀಣನೆಂಬ ಮಗನೂ, ಧ್ರುವಂಗೆ ಕಾಲನೆಂಬ ಮಗನೂ, ಸೋಮನಿಗೆ ಸುವರ್ಚ್ಯನೆಂಬ ಮಗನೂ, ಆಪನಿಗೆ ಶಾಂತನೆಂಬ ಸುತನೂ, ಅನಿಲಂಗೆ ಪುರೋಚನನೆಂಬ ಆತ್ಮಜನೂ, ಅನಲಂಗೆ ಜ್ಯೋತಿಯೆಂಬ ತನಯನೂ, ಪ್ರತ್ಯೂಷಂಗೆ ಯೋಗಸಿದ್ಧಿಯೆಂಬ ಸ್ತ್ರೀಯಲ್ಲಿ ವಿಶ್ವಕರ್ಮನು ಜನಿಸಿ ದೇವತೆಗಳ ಬಡಗಿಯಾದನು.

ಮತ್ತಂ ಆ ವಿಶ್ವಕರ್ಮನ ಮಗಳು ವಡಬೆಯೆಂಬ ವಧುವಿನಲ್ಲಿ ಸೂರ್ಯಂಗೆ ಅಶ್ವಿನಿ ದೇವತೆಗಳು ಮತ್ತಂ ಆ ಅಶ್ವಿನಿ ದೇವತೆಗಳಿಂ ಗುಹ್ಯಕರೆಂಬ ದೇವಜಾತಿಯುಂ, ಸಕಲೋಷಧಿಗಳೆಲ್ಲಂ ಜನಿಸಿದವು. ॥೪೩

ಧಾತೃ ವಿಧಾತೃ ಸಂತತಿ :

ಅನಂತರದೊಳು ಆದಿ ಬ್ರಹ್ಮಂಗೆ ಧಾತೃವೆಂದು ವಿಧಾತೃವೆಂದು ಈಶ್ವರು ಮಕ್ಕಳುಗಳು, ಅವರು ಇ ಲೋಕದ ಪುಣ್ಯಪಾಪಂಗಳಂ ನಡೆದುತ್ತಿರ್ಪರು. ಅವರಿಗೆ ಲಕ್ಷ್ಮಿಯೆಂದು, ಜೇಷ್ಠಾದೇವಿಯೆಂದು ಒಡಹುಟ್ಟಿದರು. ಅವರೊಳಗೆ ಲಕ್ಷಿಗೆ ಜಾತ್ಯಶ್ವಂಗಳು ಜನಿಸಿದವು. ಜೇಷ್ಠಾದೇವಿಗೆ ಶತ್ರಾದೇವಿ ಎಂಬ ಮಗಳಾದಳು, ಅವಳಿಂ ಗೌಡಿ ಪೈಷ್ಟಿ ಮಾಧ್ವಿಯಂ ತ್ರಿವಿಧಸುರೆ ಪುಟ್ಟಿತ್ತು. ಆ ಸುರೆಯಿಂದ ಧರ್ಮ ಜನಿಸಿದನು,

ಆತಂಗೆ ಭಯನೆಂದು ಮಹಾಭಯನೆಂದು, ಅಂತಕನೆಂದು ಮೂವರು ಪುತ್ರರುಗಳುಂ, ಮತ್ತೆ ಕೆಲವು ಸುತೆಯರುಗಳುಂ ಪುಟ್ಟಿದರು. ಅವರಿಂದವೆ ಕ್ರೌಂಚ ವಾಯಸ ಹದ್ದು ಗಿಡುಗ ಹಂಸೆ ಗಿಳಿ ಕೋಗಿಲೆ ಚಕ್ರವಾಕ ಬಕಾದಿ ನಾನಾ ಪಕ್ಷಿ ಜಾತಿ ಪುಟ್ಟಿತ್ತೆಂದು ನಿಶ್ಚಿತಮಕ್ಕುಂ. ೫೪೪

ಸುಖತಾರತಮ್ಯ :

ಬಳಿಕ ಇಂತು ಪೇಳ್ವ ಪ್ರಕಾರದಿಂದ ಅಖಿಲ ಜಗಜ್ಜನಕನಾದ ಬ್ರಹ್ಮನ ಸುಖಾತಿಶಯಂ ಎಂತೆಂದೊಡೆ :

ಕ್ರಿಮಿ ಕೀಟ ಪತಂಗ ಪಶು ಮೊದಲಾದ ಜೀವಜಾತಿಗಳಿಗೆ ಮಿಗೆ ವಿಶಿಷ್ಟಮಾದುದೇ ನರಜನ್ಮವು.

ಅದರಲ್ಲಿ ಆಯುರಾರೋಗ್ಯ ಕುಲಬಲ ಪರಾಕ್ರಮ ರೂಪು ಯೌವನ ವಿದ್ಯ ಕೀರ್ತಿ ಸಂಪದಾದಿ ಸೌಭಾಗ್ಯದೊಳೊಂದುಂ ಕೊರತೆಯಿಲ್ಲದೆ ಸಪ್ತಸಮುದ್ರದ ಅಧೀಶ್ವರನಾದ ಸಾರ್ವಭೌಮನಾದ ಆತಂಗೆ ಸರ್ವನರರಿಂ ನೂರು ಮಡಿ ಸುಖವು.

ಅವನಿಂ ನೂರುಮಡಿ ಮನುಜ ಗಂಧರ್ವರ ಸುಖವು.

ಅವರಿಂ ನೂರುಮಡಿ ದೇವತಾ ಗಂಧರ್ವರ ಸುಖವು.

ಅವರಿಂ ನೂರುಮಡಿ ಪಿತೃಗಳ ಸುಖವು.

ಅವರಿಂ ನೂರುಮಡಿ ದೇವತಾ ಕನಿಷ್ಠರ ಸುಖವು.

ಅವರಿಂ ನೂರುಮಡಿ ದೇವತಾ ಮಧ್ಯರ ಸುಖವು.

ಅವರಿಂ ನೂರುಮಡಿ ದೇವತಾ ವಿಶಿಷ್ಟರ ಸುಖವು

ಅವನಿಂ ನೂರುಮಡಿ ಇಂದ್ರನ ಸುಖವು.

ಅವನಿಂ ನೂರುಮಡಿ ಬೃಹಸ್ಪತಿಯ ಸುಖವು.

ಅವನಿಂ ನೂರುಮಡಿ ಬ್ರಹ್ಮನ ಸುಖವು, ಇಂತು ಮಹಾಸುಖ ಸ್ವರೂಪನಾಗಿ ಸತ್ಯಲೋಕದಲ್ಲಿ ಬ್ರಹ್ಮನಿರ್ಪಂ. ೫೪೫

ವೈಕುಂಠ ಲೋಕ :

ಬಳಿಕ ಆ ಸತ್ಯಲೋಕದಿಂ ಮೇಲೆ ನಾಲ್ಕು ಕೋಟಿ ಯೋಜನಾಂತರದಲ್ಲಿ ವೈಕುಂಠಂ ಇರ್ಪುದು. ಅಲ್ಲಿ ಅಂತರ್ ತಮೋ ಬಹಿರ್ ಸತ್ವಗುಣದಿಂ ಜಗತ್ತಿನ ಸೃಷ್ಟಿ ಸ್ಥಿತಿ ಕರ್ತೃವಪ್ಪ ನಾರಾಯಣನಾದೊಡೆ, ನೀಲವರ್ಣಮಯ ಶರೀರದಿಂ; ಏಕಮುಖ ದ್ವಿಲೋಚನಗಳಿಂ; ಶಂಖ ಚಕ್ರ ಗದೆ ಶಾರ್ಙಂಗಳನುಳ್ಳ ವಾಮ ದಕ್ಷಿಣ ಕರಚತುಷ್ಟಯದಿಂ; ವನಮಾಲೆ ಉಪವೀತ ಪೀತಾಂಬರ ಕಿರೀಟ ಕೌಸ್ತುಭಾದ್ಯಲಂಕಾರಗಳಿಂ; ದಿವ್ಯಗಂಧ ಪುಷ್ಪಾದಿಗಳಿಂದ ಅತಿಸಿಂಗರಂಬಡೆದು; ಲಕ್ಷ್ಮಿಯೊಡಗೂಡಿ, ಜ್ಞಾನ, ಶಕ್ತಿ ಬಲ ಐಶ್ವರ್ಯ ತೇಜ ವೀರ್ಯಗಳೆಂಬ ವೈಷ್ಣವೋಕ್ತ ಷಡ್ಗುಣ ಸಹಿತನಾಗಿ; ಮತ್ಸ್ಯ ಕೂರ್ಮ ವರಾಹ ನಾರಸಿಂಹ ವಾಮನ ಭೃಗುರಾಮ ರಘುರಾಮ ಯದುರಾಮ ಬೌದ್ಧ ಕಲ್ಕಿಯೆಂಬ

ದಶಾವತಾರಯುಕ್ತನೆನಿಸಿ; ಅನಿರುದ್ಧ ರುಕ್ಮಾಂಗದ ಪ್ರಹ್ಲಾದ ನಾರದ ಅಂಬರೀಶ ಪುಂಡರೀಕ ಗಜೇಂದ್ರ ಮುಕ್ತ ಉದ್ಧವ ಸಂಕೇತ ವಿಭೀಷಣ ಬೀಷ್ಮ ಕ್ಷದಾಪಾದಿ ಭಾಗವತರಿಂ ಪೂಜ್ಯನಾಗಿ; ಏಕದಂಡಿ ದ್ವಿದಂಡಿ ತ್ರಿದಂಡಿ ಮೊದಲಾದ ತನ್ನ ಭಕ್ತರಿಂ, ಬ್ರಹ್ಮೇಂದ್ರಾದಿ ದೇವತೆಗಳಿಂದ ಓಲೈಸಿಕೊಳುತ್ತಿರ್ಪಂ. ೫೪೬

ಷಣ್ಮುಖ ಲೋಕ :

ಬಳಿಕ ಅಲ್ಲಿಂದಂ ಮೇಲೆ ಒಂದು ಕೋಟಿ ಯೋಜನಾಂತರದಲ್ಲಿ ಷಣ್ಮುಖನ ಲೋಕವಿಹುದು.

ಉಮಾಲೋಕ :

ಮತ್ತಂ ಅಲ್ಲಿಂದಂ ಮೇಲೆ ಒಂದು ಕೋಟಿ ಯೋಜನಾಂತರದಲ್ಲಿ ಉಮಾಲೋಕವಿಹುದು.

ಕಾಮಧೇನು ಲೋಕ :

ಮತ್ತಂ ಅಲ್ಲಿಂದ ಮೇಲೆ ಒಂದು ಕೋಟಿ ಯೋಜನಾಂತರದಲ್ಲಿ ಕಾಮಧೇನು ಲೋಕಮಿರ್ಕುಂ.

ರುದ್ರ ಲೋಕ :

ಬಳಿಕ ಅಲ್ಲಿಂದಂ ಮೇಲೆ ಮೂರುಕೋಟಿ ಯೋಜನಾಂತರದಲ್ಲಿ ಜ್ಯೋತಿರ್ಮಯವಾದ ಮುಕ್ತಿಸ್ಥಾನಮಪ್ಪ ರುದ್ರಲೋಕವಿಹುದು. ಎಂತೆಂದೊಡೆ; ಕೈಲಾಸವೆಂದೂ, ಪ್ರಮಥಲೋಕವೆಂದೂ ಪೆಸರ್ವಡೆದು ಅತಿಶೋಭನ ಅತಿಚಿತ್ರ ಅತ್ಯಾಶ್ಚರ್ಯ ಅತಿಮಂಗಲಮಯವಾಗಿ ಕಂಗೊಳಿಸುತ್ತಿರ್ಪುದು.ಅಲ್ಲಿ ಅಂತಸ್ಸತ್ವ ಬಹಿಸ್ತಮೋಗುಣದಿಂ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರ ಕೃತ್ಯವಪ್ಪ ರುದ್ರನಾದೊಡೆ : ಗೋಕ್ಷೀರಧವಲ ದ್ಯುತಿಮಯಶರೀರದಿಂ; ಜಟಾಮಕುಟ, ಚಂದ್ರಕಲೆ, ಏಕಮುಖ ತ್ರಿನೇತ್ರ ನೀಲಗ್ರೀವಂಗಳಿಂ; ಪರಶು ಮೃಗ ವರದ ಅಭಯಂಗಳನುಳ್ಳ ವಾಮದಕ್ಷಿಣ ಕರಚತುಷ್ಟಯದಿಂ; ಸ್ವಾತ್ಮಾರಾಮನಪ್ಪುದರಿಂ ಬಾಹ್ಯವಿಷಯ ವ್ಯಾಮೋಹವಿಲ್ಲಾಗಿಯುಂ; ದುಷ್ಟನಿಗ್ರಹತ್ವಮಂ ಸೂಚಿಸಲೋಸುಗಮಾಗಿಮುಂ; ಪೊದೆದು ಉಟ್ಟ ಗಜ ವ್ಯಾಘ್ರಾಜಿನ ಸರ್ಪಾಭರಣ ಭಸ್ಮೋದ್ಧೂಳನ ಅಕ್ಷಮಾಲೆ ಶಿರೋಮಾಲಾದಿಗಳಿಂದ ಅಲಂಕೃತನಾಗಿ; ಗಿರಿಜಾರಮಣನಾಗಿ ಸಮೇತನಾಗಿ; ಸಕಲ ದೇವತಾ ಸಾರ್ವಭೌಮನೆನಿಸಿ; ಸತ್ಯ ಕ್ಷಮೆ ಧೃತಿ ಅಧಿಷ್ಠಿತಿ ಆತ್ಮಬೋಧ ಸೃಷ್ಟಿ ವಿರಾಗ ತಪಸ್ಸು ಮತಿ ಈಶ್ವರತ್ವಮೆಂಬ ದಶಕಲ್ಯಾಣಗುಣಯುಕ್ತನಾಗಿ; ಸವಜ್ಞತ್ವಾದಿ ಷಡಂಗ ಜ್ಞಾನಾದಿ ಷಡ್ಗುಣಗಳಿಂ ಅಣಿಮಾದಿ ಮಹದೈಶ್ವರ್ಯಂಗಳಿಂ ಸಂಪನ್ನನೆನಿಸಿ ಗಂಗವಾಳುಕ ಸಮಾರುದ್ರರಿಂ, ಬ್ರಹ್ಮ ಇಂದ್ರ ಉಪೇಂದ್ರ ಮನು ಮುನಿ ಸುಮನಸಾದಿ ಸಕಲ ದೇವಶ್ರೇಷ್ಠರಿಂದ ಓಲೈಸಿಕೊಳುತ್ತಿರ್ಪಂ. ೫೪೭

ಅಣಿಮಾದಿಗಳ ಲಕ್ಷಣಂ :

ಮತ್ತಂ ಅಣಿಮಾ ಮಹಿಮಾ ಲಘಿಮಾ ಗರಿಮಾ ಪ್ರಾಪ್ತಿ ಪ್ರಾಕಾಮ್ಯ ಈಶತ್ವ ವಶಿತ್ವಂಗಳೆಂಬವೆ ಅಣಿಮಾದಿ ಅಷ್ಟಸಿದ್ಧಿಗಳು. ಅವುಗಳ ಲಕ್ಷಣಮೆಂತೆನೆ :

೧. ಅತ್ಯಂತ ಸೂಕ್ಷವಾದ ಪ್ರಾಣಿಗಳ ಆತ್ಮದಿಂ ಪ್ರವೇಶಿಸುವ ತನವೇ ಅಣಿಮೆ

೨. ಬ್ರಹ್ಮಾಂಡಾದಿ ಶಿವಾಂತಮಾದ ಮೂವತ್ತಾರು ತತ್ವಂಗಳ ಪೊರಗೆ ವ್ಯಾಪಿಸಿ ವರ್ತಿಸುವಹ ತನವೇ ಮಹಿಮೆ.

೩. ಮಹಾಮೇರು ಪರ್ವತಕ್ಕೆ ಸಮಾನ ಶರೀರಮುಳ್ಳಾತನುಂ ಮೇಲಕ್ಕೆ ನೆಗಹುವ ಕೃತ್ಯದಲ್ಲಿ ಪರಮಾಣುವಿಗೆ ಸದೃಶವಹ ತನವೆ ಲಘಿಮೆ

೪. ಪರಮಾಣಿವಿಗೆ ಸದೃಶಮಾದ ದೇಹಿಯನು ಉದ್ದಕ್ಕೆ ಸಿಗಹುವ ಕೃತ್ಯದಲ್ಲಿ, ಸುಮೇರುವಿನೋಪಾದಿಯ ಭಾರವಹ ತನವೇ ಗರಿಮೆ.

೫. ಸ್ವಸ್ಥಾನದೊಳಿರ್ದು ಸಮಸ್ತಲೋಕ ಸಾಕ್ಷಾತ್ಕಾರವೆ ಪ್ರಾಪ್ತಿ

೬. ಸ್ವೇಚ್ಛೆಯಿಂದ ಆಕಾಶ ಗಮನಾದಿ ಸರ್ವಸಿದ್ಧಿಯು, ಸ್ವಶರೀರ ಪ್ರಕಾಶದಿಂ ಸರ್ವಪದಾರ್ಥಂಗಳಂ ಬೆಳಗುವತನಮಾದೊಡೆ ಪ್ರಾಕಾಮ್ಯ.

೭. ಸ್ವೇಚ್ಛಾ ಮಾತ್ರದಿಂ ಜಗದುತ್ಪತ್ಯಾದಿ ಕೃತ್ಯ ಕರಣಮುಂ ಸೂರ್ಯಾದಿಗಳಂ ಪ್ರೇರಿಸುವತನಮುಂ ಈಶತ್ವ

೮. ಸಕಲ ದಿಕ್ಪಾಲಕರೊಡಗೂಡಿದ ಜಗಮಂ ತನ್ನ ಅಧೀನಮಾಗಿ ನಡೆಸುವ ತನವೇ ವಶಿತ್ವಮೆಂಬುದು ನಿಶ್ಚಿತಮಕ್ಕುಂ ೫೪೮

ಶಿವಲೋಕವಿಸ್ತಾರ :

ಮತ್ತಂ ಆ ರುದ್ರ ಲೋಕದಿಂ ಬ್ರಹ್ಮಾಂಡದ ಊರ್ಧ್ವಕಟಾಹಾಂತಮಾಗಿ, ಒಂದುಕೋಟಿ ಯೋಜನದ ಅಳವಿಯಿರ್ಕುಂ. ಅನಂತರದೊಳು ಆ ಬ್ರಹ್ಮಾಂಡದ ಪೊರವಳಯದ ಅಗ್ರ ಪ್ರದೇಂದಲ್ಲಿ ಮೂವತ್ತೆರಡುಕೋಟಿಯೋಜನ ವಿಶಾಲೋನ್ನತಮಾಗಿ ಶಿವಲೋಕವಿಹುದು. ಅದಕ್ಕೆ ಜ್ಯೋತಿರ್ಮಯವಾದ ಕೋಂಟೆಯು ಮೂವತ್ತೆರಡುಕೋಟಿಯೋಜನ ವಿಸಾರಮಪ್ಪುದು. ಅದಕ್ಕೆ ವಿಚಿತ್ರ ರಚನೆಯುಳ್ಳ ಎಂಟುಬಾಗಿಲುಗಳು. ಅವನು ಅತ್ಯಂತ ಪರಾಕ್ರಮಿಗಳಾಗಿ ಕಾಯ್ದಿರ್ಪ ಭೈರವರ ಲಕ್ಷಣಮೆಂತೆನೆ : ೫೪೯

ಅಷ್ಟ ಭೈರವರ ಲಕ್ಷಣ :

೧. ಮೊದಲು ರಕ್ತ ವರ್ಣಮಯ ದೀರ್ಘಶರೀರದಿಂ, ತ್ರಿನೇತ್ರದಿಂ ದಂಡಕಮಂಡಲು, ಪಾಶ ಜಪಮಾಲೆವಿಡಿದ ಕರಚತುಷ್ಟಯದಿಂ ; ಬ್ರಾಹ್ಮಿಯೆಂಬ ಶಕ್ತಿ ಸಮ್ಮೇಳನದಿಂ; ಹಂಸವಾಹನದಿಂ ತನಗೆ ಸಮಾನವಾದ ಭಟರು ಏಳುಕೋಟಿಯಿಂದ ಒಪ್ಪಿ ಮೂಡಣ ಬಾಗಿಲಲ್ಲಿ ಮಹಾಭೈರವನಿರ್ಪಂ.

೨. ಬಳಿಕ, ಹಿರಣ್ಮಯಸ್ಥೂಲಕಾಯದಿಂ, ನೇತ್ರತ್ರಯದಿಂ ಶೂಲ ಡಮರುಗ ಖಡ್ಗ ಖಟ್ವಾಂಗವಿಡಿದ ಕರಚತುಷ್ಟಯದಿಂ, ತನಗೆ ಸಮಾನವಾದ ಹದಿನಾರು ಕೋಟಿ ಭಟರಿಂದೆಸೆದು ಅಗ್ನಿದೆಸೆಯ ಬಾಗಿಲಲ್ಲಿ ರುರು ಭೈರವನಿರ್ಪಂ.

೩. ಬಳಿಕ ಕೋಣ ವರ್ಣಮಯ ಮಹಾಮೂರ್ತಿಯು ಲೋಚನತ್ರಯದಿಂ ಗಿಳಿ ವಜ್ರ ಶಕ್ತಿ ಶೂಲವಿಡಿದ ಕರಚತುಷ್ಟಯದಿಂ ಕಾಮಾರಿಯೆಂಬ ಶಕ್ತಿ ಸಮ್ಮೇಳನದಿಂ ಮಯೂರವಾಹನದಿಂ, ತನಗೆ ಸಮಾನಮಾದ ಭಟರು ಐದುಕೋಟಿಯಿಂ ಮೆರೆದು ತೆಂಕಣ ಬಾಗಿಲಲ್ಲಿ ಚಂಡಭೈರವನಿರ್ಪಂ.

೪. ಬಳಿಕ ಸುವರ್ಣಕಾಂತಿಮಯ ಚಾರುಶರೀರದಿಂ ನಯನತ್ರಯದಿಂ ಶಂಖ ಚಕ್ರ ಗದೆ ಶಾರ್ಙವಿಡಿದ ಪಾಣಿಚತುಷ್ಟಯದಿಂ, ವೈಷ್ಣವಿ ಎಂಬ ಶಕ್ತಿ ಸಮ್ಮೇಳದಿಂ ಗರುಡವಾಹನದಿಂ, ತನಗೆ ಸಮಾನರಾದ ಭಟರು ಐದುಕೋಟಿಯಿಂ ರಂಜಿಸಿ ನೈರುತ್ಯದ ಬಾಗಿಲಲ್ಲಿ ಕ್ರೋಧಭೈರವನಿರ್ಪಂ.

೫. ಬಳಿಕ ಮಯೂರವರ್ಣಮಯವಾದ ಉನ್ನತಗಾತ್ರದಿಂ ಅಕ್ಷಿತ್ರಯದಿಂ ಶಂಖ ಫಲಕ ಖೇಟಕ ಮುಸಲವಿಡಿದ ಹಸ್ತಚತುಷ್ಟಯದಿಂ; ವಾರಾಹಿಯೆಂಬ ಶಕ್ತಿ ಸಮ್ಮೇಳನದಿಂ ಮಹಿಷವಾಹನಂ ತನಗೆ ಸಮಾನವಾದ ಭಟರು ಆರುಕೋಟಿಯಿಂ ಪರಿಶೋಧಿಸಿ ಪಡುವಣ ಬಾಗಿಲಲ್ಲಿ ಉನ್ನತ ಭೈರವನಿರ್ಪಂ.

೬ ಬಳಿಕ ಮಾಣಿಕ್ಯ ವರ್ಣಮಯ ಭೀಕರಾಕಾರದಿಂ ದೃಷ್ಟಿತ್ರಯದಿಂ, ವಜ್ರ ಶಕ್ತಿ ಧನು ಶರವಿಡಿದ ಕರಚತುಷ್ಟಯದಿಂ ಮಾಹೇಂದ್ರಿಯೆಂಬ ಶಕ್ತಿಸಮೇಳದಿಂ, ಗಜವಾಹನದಿಂ, ತನಗೆ ಸಮಾನಮಾದ ಮೂರು ಕೋಟಿ ಭಟರಿಂ ವಿರಾಜಿಸಿ ವಾಯವ್ಯದ ಬಾಗಿಲಲ್ಲಿ ಕಪಾಲಿ ಭೈರವನಿರ್ಪಂ.

೭ ಬಳಿಕ ಧೂಮ್ರ ವರ್ಣಮಯ ಭಯಂಕರ ತನುವಿನಿಂ ಚಕ್ಷುತ್ರಯದಿಂ ಶೂಲ, ಡಮರುಗ, ಗಂಟೆ, ಕಪಾಲವಿಡಿದ ಕರಚತುಷ್ಟಯದಿಂ ಚಾಮುಂಡಿಯೆಂಬ ಶಕ್ತಿ ಸಮೇಳದಿಂ, ಕಾಕವಾಹನದಿಂ, ತನಗೆ ಸಮಾನವಾದ ದ್ವಾದಶಕೋಟಿ ಭಟರೊಡಗೂಡಿ ಬಡಗಣಬಾಗಿಲಲ್ಲಿ ಭೀಷಣ ಭೈರವನಿರ್ಪಂ.

೮. ಬಳಿಕ ಹೇಮವರ್ಣಮಯ ಪ್ರಚಂಡವಿಗ್ರಹದಿಂ ಈಕ್ಷಣತ್ರಯದಿಂ,ಖಡ್ಗ ಗದೆ ಖೇಟಕ ಫಲಕವಿಡಿದ ಕರಚತುಷ್ಟಯದಿಂ ಮಹಾಕಾಳಿಯೆಂಬ ಶಕ್ತಿಸಮೇಳದಿಂ, ಮೂಷಕವಾಹನದಿಂ, ತನಗೆ ಸಮಾನಮಾದ ಭಟರು ಎಂಟುಕೋಟಿಯಿಂ ತೋರ್ಕೆವೆತ್ತು ಈಶಾನ್ಯದ ಬಾಗಿಲಲ್ಲಿ ಸಂಹಾರ ಭೈರವನಿರ್ಪಂ. ೫೫೦

ಶ್ರೀ ಶಿವನಗರ :

ಮತ್ತಂ ಇಂತು ತಮ್ಮ ಸ್ಮರಣಮಾತ್ರದಿಂ ಸಕಲವಿಘ್ನಂಗಳಂ ನಿವಾರಿಸುವ ಅಷ್ಟಭೈರವರ ಕಾವಲ ಬಾಗಿಲಂ ಕಳೆದು, ಒಳಗೆ ಪೊಕ್ಕು ನೋಡೆ ಕಣ್ಣೆ ಮಂಗಳಮಾಗಿ ಮನಕ್ಕೆ ಮನೋಹರಮೆನಿಸಿ, ನುಡಿಗೆ ನವೀನಮಾಗಿ, ಮಯಣ ಮಾಂಡವ್ಯ ವಿಶ್ವಕರ್ಮಾದಿ ಶಿಲ್ಪಿಗಳ ಕಲ್ಪನೆಗಳಂ ಕೀಳ್ಪಡಿಸಿ, ಮಂಜುಳಮಯ ರಂಜನೆವೆತ್ತು ತರತರಂಗೊಂಡು ಮೆರೆವ ಚಿಂತಾಮಣಿಗೆಲಸದ ಕರುಮಾಡ, ಕೋಟ್ಯಾನು ಕೋಟಿಗೆ ಅಳವಟ್ಟ

ಸುವರ್ಣಕಳಸಂಗಳಿಂದ ಎಸೆವ ಅಸಂಖ್ಯಾತ ಮಹಾಗಣಂಗಳ ಮಂದಿರಂಗಳಿಂಸಾಲ್ಗೊಂಡು, ಸೋಮಸೂರ್ಯವೀದಿ ಸಹಸ್ರಂಗಳಿಂದ ಅಪರಿಮಿತಮಾದ ಉಪವೀದಿಗಳಿಂ. ಪನ್ನೀರ ಚಳಯಂಗಳಿಂ; ಕಸ್ತೂರಿಯ ಸಾರಣೆಗಳಿಂ; ಕುಂಕುಮದ ಕಾರಣೆಗಳಿಂ; ಮುತ್ತಿನ ರಂಗವಲ್ಲಿಗಳಿಂ; ತಳಿರುತೋರಣ, ಮಕರತೋರಣ ಗುಡಿತೋರಣಾದಿ ರಚನೆಗಳಿಂ; ವೃಷಭಧ್ವಜ ಪತಾಕೆಗಳಿಂ ; ಕುಸುಮ ವೃಷ್ಟಿಗಳಿಂ ಧೂಪಧೂಮಂಗಳಿಂ ವೇದಾಗಮಶಾಸ್ತ್ರ ಘೋಷಂಗಳಿಂ ನಾನಾವಾದ್ಯಧ್ವನಿಗಳಿಂ ಸಂಚರಿಪ ಸಕಲಗಣೇಶ್ವರರ ಸಂದಣಿಗಳಿಂ ಶೃಂಗಾರಲಾವಣ್ಯ ಸುಕುಮಾರತೆಗಳೆ ಶರೀರಂಬಡೆದು ಎಡೆಯಾಡುವಂತಿರ್ದ ರುದ್ರಗಣಿಕೆಯರಿಂ, ಸಕಳ ಸುರಭೋಗ ಪರಿಕರಗಳಿಂ ಸಂಪನ್ನಮಾಗಿರ್ಪುದರಿಂದ ಅತ್ಯಾಶ್ಚರ್ಯ ಅದ್ಭುತ ಅತಿಕೌತುಕ ಅತಿಚಿತ್ರ ಅತಿಶೋಭನ ಅತಿನೂತನ ಅತಿರಮ್ಯ ಅತಿವಿಲಾಸಮಾಗಿರ್ಪುದು. ೫೫೧

ಮಹಾದೇವನ ಅರಮನೆ :

ಆ ಪುರದ ಮಧ್ಯ ಪ್ರದೇಶದಲ್ಲಿ ಮಹಾದೇವನ ಅರಮನೆ ಪಂಚವಿಂಶತಿಕೋಟಿ ಯೋಜನ ವಿಶಾಲವು, ಅದಕ್ಕೆ ಚತುರ್ದ್ವಾರಂಗಳು, ಅವರಲ್ಲಿ ಪೂರ್ವದಿಕ್ಕಿನ ದ್ವಾರದ ಗೋಪುರವೆ ಋಗ್ವೇದಮಯವಾಗಿ ನಾಲ್ಕು ಲಕ್ಷ ಯೋಜವ ವಿಶಾಲೋನ್ನತಮಾಗಿ ಧವಲಾಕಾರಮಾಗಿರ್ಪುದು. ಆ ಬಾಗಿಲಂ ನಾಲ್ಕರ್ಬುದ ಕೂಷ್ಮಾಂಡ ಗಣೇಶ್ವರರು ಒಂದು ಗೂಡಿ ವೇತ್ರ ಹಸ್ತನಾದ ನಂದಿಕೇಶ್ವರಂ ಕಾಯ್ದಿರ್ಪಂ. ಮತ್ತಂ ಆ ದಕ್ಷಿಣ ದಿಕ್ಕಿನ ದ್ವಾರಗೋಪುರವೆ ಯಜುರ್ವೇದಮಯಮೆನಿಸಿ ಲಕ್ಷಯೋಜನ ವಿಶಾಲೋನ್ನತಮಾಗಿ ನೀಲವರ್ಣದಾಕಾರಮಾಗಿರ್ಪುದು. ಆ ಬಾಗಿಲನು ಅಸಂಖ್ಯಾತ ರೋಮಜಗಣೇಶ್ವರರು ಸಹಿತನಾಗಿ ವೀರೇಶ್ವರಂ ಕಾಯ್ದಿರ್ಪಂ. ಮತ್ತಂ ಆ ಪಶ್ಚಿಮ ದಿಕ್ಕಿನ ದ್ವಾರಗೋಪುರವೆ ಸಾಮವೇದಮಯವಾಗಿ ಲಕ್ಷಯೋಜನ ವಿಶಾಲೋನ್ನತವೆನಿಸಿ ಶುಭ್ರಾಕಾರಮಾಗಿರ್ಪುದು. ಆ ಬಾಗಿಲನು ಅಗಣಿತ ರುದ್ರಗಣಂಗಳ ಒಡಗೂಡಿ ನೀಲ ಲೋಹಿತಂ ಕಾಯ್ದಿರ್ಪಂ. ಮತ್ತಂ ಉತ್ತರದಿಕ್ಕಿನ ದ್ವಾರಗೋಪುರವೆ ಅಥರ್ವಣವೇದಮಯವಾಗಿ ಲಕ್ಷಯೋಜನ ವಿಶಾಲೋನ್ನತವೆನಿಸಿ ಕುಂಕುಮ ವರ್ಣದ ಆಕಾರಮಾಗಿರ್ಪುದು. ಆ ಬಾಗಿಲನು ಅಪರಿಮಿತ ಪ್ರಮಥಗಣಸಮೇತನಾಗಿ ಮಹಾಕಾಳಂ ಕಾಯ್ದಿರ್ಪಂ. ೫೫೨

ಶಿವನ ಸಭಾಸ್ಥಾನ :

ಬಳಿಕ ಆ ನಾಲ್ದೆಸೆಯ ಬಾಗಿಲನು ಒಳಹೊಕ್ಕು ನಿರೀಕ್ಷಿಸೆ ದೃಷ್ಟಿಗೆ ಅಚ್ಚರಿದೋರಿ, ವರ್ಣನೆಗೆ ಅನುಪಮವಾಗಿ, ಸರ್ವೇಶ್ವರನ ಸಭಾಮಂಟಪಂ ಪರಿಶೋಭಿಸುತ್ತಿಹುದು. ಅದರ ನಟ್ಟನಡುವೆ ಕೋಟಿ ಸೂರ್ಯ ಪ್ರಕಾಶಮಂ ಕೀಳ್ಪಡಿಸುವ ದಿವ್ಯ ಸಿಂಹಾಸನಂ ಒಂದು ಲಕ್ಷ ಯೋಜನ ವಿಶಾಲೋನ್ನತಮಾಗಿ ರಂಜಿಸುತ್ತಿಹುದು.ಆ ಸಿಂಹಾಸನಾಗ್ರದಲ್ಲಿ, ಗುಣತ್ರಯಾತೀತನಾದ, ಪ್ರಣವದರ್ಥಮಾದ ಬ್ರಹ್ಮಾದಿಮೂರ್ತಿಗಳಿಂ, ಧ್ಯೇಯ ಮಾನನಾದ,ತನಗೊಂದು ವಸ್ತ್ವಂತರ ಧ್ಯಾನಮಿಲ್ಲದೆ, ತ್ರಿಮೂರ್ತಿಗಳ ಮಧ್ಯದಲ್ಲಿ

ತುರ್ಯನಾದ ಘೃತಕಾಠಿಣ್ಯದಂತೆ ಸಚ್ಚಿದಾನಂದಾತ್ಮಕ ಬ್ರಹ್ಮದ ಸಾಕ್ಷಾತ್ಕಾರಮಾದ ಶಿವ ರುದ್ರ ಮಹಾದೇವ ಮಹಾಲಿಂಗ ಮಹಾಭಸ್ಮಾದಿ ಪರ್ಯಾಯ ಸಂಜ್ಞಿಕನಾದ ಸೃಷ್ಟ್ಯಾದಿ ಪಂಚಕೃತ್ಯಕರ್ತೃವಾದ, ಸತ್ಯಕಾಮ, ಸತ್ಯಸಂಕಲ್ಪಾದಿ ಕಲ್ಯಾಣಗುಣಮಣಿಸಿಂಧುವಾದ ಸಕಲ ದೇವತಾ ಸೀಕರಂಗಳಿಗೆ ಸಮುದ್ರಸ್ಥಾಯಿಯಾದ, ಸ್ವಸ್ವರೂಪಾನುಸಂಧಾನ ಪ್ರಮೋದದಿಂ ನರ್ತನ ಶೀಲನಾದ ಸರ್ವಾಂತರ್ಯಾಮಿಯಾದ, ಸರ್ವಕಾರಣನಾದ, ಮಾಯಾವಿಯಾದ, ಸ್ಮರಣಮಾತ್ರದಿಂದ ಅಖಿಳಪಾಪಕ್ಷಯಂ ಮಾಡಿ ಭೋಗಮೋಕ್ಷಪ್ರದನಾದ, ಸಾಂಬಶಿವನಾದೊಡೆ, ಸ್ಫಟಿಕವರ್ಣಮಯ ಶರೀರದಿಂ, ಚಂದ್ರಾರ್ಧಮಂಡಿತ ಮಸ್ತಕದಿಂ ಪ್ರಸನ್ನವದನದಿಂ, ಅನಂತಕೋಟಿ ಕಂದರ್ಪಲಾವಣ್ಯದಿಂ, ತ್ರಿನೇತ್ರದಿಂ, ನೀಲಗ್ರೀವದಿಂ, ವರದಾನುಭಯ ಕರದ್ವಯದಿಂ ಧವಲಯಜ್ಞಸೂತ್ರದಿಂ, ಉಮಾಸಮೇತನಾದ ವಾಮಾಂಗದಿಂ ಪೊದೆದು ಉಟ್ಟ ವ್ಯಾಘ್ರಗಜಚರ್ಮಾಂಬರದಿಂ, ಮೃದುಪಾದಪದ್ಮದ್ವಯದಿಂ, ಕಟಕ ಕೇಯೂರ ಕುಂಡಲಾದಿ ಸರ್ವಾಭರಣ ಗಂಧ ಪುಷ್ಪಾದಿಗಳಿಂದ ಅಲಂಕೃತನಾಗಿ ಮಹೇಶ್ವರನೊಪ್ಪುತ್ತಿರಲು, ಆ ಸಿಂಹಾಸನದ ಕೆಳಗೆ ಎಡಬಲದಲ್ಲಿ ಕುಳ್ಳಿರ್ದ ಗುಹಗಣಪರಿಂ, ಸೂಳರಿದು ಇಕ್ಕೆಲದೊಳಿಕ್ಕುವ ಚಾಮರ ಸೀಗುರಿಕಾರರಿಂ, ಕೊಂಡಾಡುವ ಚಂಡಕೀರ್ತಿಗಳಿಂ, ನುತಿಸುವ ಸಕಲವೇದ ಶಾಸ್ತ್ರಂಗಳಿಂ ಪೊಗಳುವ ಮುನಿಜನಗಳಿಂ ಕೈವಾರಿಸುವ ಮನುಗಳಿಂ, ಪೊಡಮಡುವ ಹರಿ ಅಜ ಇಂದ್ರಾದಿ ದೇವಶ್ರೇಷ್ಠರಿಂ. ಪರಸುವ ಪ್ರಸೂತಿ ಕೂತಿ ಖ್ಯಾತಿ ಸಂಭೂತಿ ಧೃತಿ ಪ್ರೀತಿ ಕ್ಷಮೆ ಸನ್ನತಿ ಅನಸೂಯೆ ದೇವಮಾತೆ ಅರುಂಧತಿಯರೆಂಬ ಏಕಾದಶ ಪತಿವ್ರತೆಯರಿಂ, ಮುದ್ದಿಸುವ ಭಕ್ತಿ ಕಾಂತೆಯರಿಂ, ಕರೆಕರೆದು ಸಮ್ಮುಖಂಗೆಯ್ವ ಸಾವಿತ್ರ್ಯಾದಿ ಮಂತ್ರಶಕ್ತಿಯರಿಂ ಪರಿವರಿದು ಪರಿಚರ್ಯಂಗಳಂ ಮಾಳ್ಪ ಸಿರಿ ಸರಸ್ವತಿ ಶಚಿದೇವಿಯರಿಂ, ಪಾಡುವ ತುಂಬುರನಾರದಾದಿಗಳಿಂ, ನರ್ತಿಸುವ ರಂಭಾದಿ ದೇವಗಣಿಕಯರಿಂ, ಪರಿವೇಷ್ಟಿಸಿರ್ದ ಪ್ರಮಥಗಣ ದೇವಗಣ ಭಕ್ತಮಹಾಗಣಂಗಳಿಂ ಕಿಕ್ಕಿರಿಗಿರಿದು ಕೋಳಾಹಳಂಬೆರಸಿ ಮತಿಗೆ ಮಂಗಳಕರವಾಗಿರ್ಪುದು. ಅಲ್ಲಿ ೫೫೮

ಮೂಡಣಸಭಾಸ್ಥಾನ :

ನಂದಿಕೇಶ್ವರ ಭೃಂಗೀಶ್ವರ ಸ್ಕಂದ ಮಹಾಕಾಳ ಕಿರೀಟ ಘಂಟಾಕಾಲ ವೀರಭದ್ರ ಘಂಟಾಕರ್ಣ ಸುಘೋಷ ದಂಡಿ ಈಶಾನ್ಯರೆಂಬ ಏಕದಶಮುಖ್ಯ ಗಣೇಶ್ವರರ ಪರಿವಿಡಿದು ಅವರೊಡನೆ ಅನಂತ ಗಣಸಂಭ್ರಮದಿಂ ಮೂಡಣದೆಸೆಯ ಓಲಗಂ ಒಪ್ಪಿರ್ಕುಂ. ೫೫೪

ತೆಂಕಣ ಸಭಾಸ್ಥಾನ :

ಬಳಿಕ ಬ್ರಹ್ಮನು ಮುನಿಗಳು ಕಲಾಗ್ನಿರುದ್ರ ವೀರಭದ್ರ ಪಿನಾಕಿ ಕಾಲಕಂಠ ಅಂಘ್ರಿ ಕರಾಳ ಕೇಶಕರಾಳ ಮುಖಕರಾಳ ನೇತ್ರಕರಾಳ ಶ್ರೋತ್ರಕರಾಳ ಮುಂಡಮಾಲಾಧರ ತ್ರಿಶೂಲಿ ವಿಶ್ವಮಾಲಾಪತಿ ಅಂಡಾದಿನಾಥ ಕಾಲಾಂತಕ ಲಕುಲೀಶ ಮಯೂರಾನನರೆಂಬ ಪದಿನೆಂಟು ಮುಖ್ಯ ಗಣವರರ ಪರಿವಿಡಿದು ಅವರೊಡನೆ ಅಸಂಖ್ಯಾತ ಗಣಸಂಕುಳದಿಂ ತೆಂಕಣದೆಸೆಯ ಓಲಗಂ ಒಪ್ಪುತಿರ್ಕುಂ. ೫೫೫

ಬಡಗಣ ಸಭಾಸ್ಥಾನ :

ಬಳಿಕ, ನಾರಾಯಣನುಂ ದಿಕ್ಪಾಲಕರುಂ ಏಕಾದಶರುದ್ರರುಂ ಅಷ್ಟವಸುಗಳುಂ ಪ್ರಭಾವ ಮುಷ್ಕರ ಆಷಾಡಿ ಡಿಂಡಿ ಅಮರೇಶ ನೈಮಿಷ ಅನಾಕುಲರೆಂಬ ಏಕಾದಶ ಮುಖ್ಯ ದೇವತೆಗಳ ಪರಿವಿಡಿದು ಅವರೊಡನೆ ಅಪರಿಮಿತ ದೇವತಾ ಸಮೂಹದಿಂ ಬಡಗಣ ದೆಸೆಯ ಓಲಗಂ ಒಪ್ಪುತಿಹುದು. ಇಂತು ಪೇಳ್ದ ಶಿವಲೋಕದ ಸಭಾಮಧ್ಯದಲ್ಲಿ ಸಕಲ ವರಪ್ರದನಾಗಿ ಸರ್ವೇಶ್ವರನಾದ ಸಾಂಬಶಿವನೊಪ್ಪುತ್ತಿರ್ಪಂ. ೫೫೭

ದೇವತೆಗಳ ತಾರತಮ್ಯ :

ಬಳಿಕ ಈ ಪೂರ್ವೋಕ್ತ ದೇವತೆಗಳ ತಾರತಮ್ಯ ಕ್ರಮವೆಂತೆಂದೊಡೆ : ಭೂಮ್ಯಾದಿ ಅಚೇತನಂಗಳಿಂ ಚೇತನ ಪ್ರಾಣಿಗಳು ವಿಶೇಷವು. ಮನುಷ್ಯಜಾತಿ ಅವರಿಂ ವಿಶೇಷವು. ಮನುಷ್ಯರಿಂ ದ್ವಿಜರು ವಿಶೇಷವು, ದ್ವಿಜರಿಂ ಬ್ರಾಹ್ಮಣರು ವಿಶೇಷವು, ಅವರಿಂ ಗಂಧರ್ವರು ವಿಶೇಷವು, ಅವರಿಂ ದೇವ ಗಂಧರ್ವರು ವಿಶೇಷವು, ಅವರಿಂ ಸುರಪತಿ ವಿಶೇಷವು, ಆತನಿಂ ಬೃಹಸ್ಪತಿ ವಿಶೇಷವು. ಅವನಿಂ ಪ್ರಜಾಪತಿ ವಿಶೇಷವು. ಅವನಿಂ ಬ್ರಹ್ಮನು ವಿಶೇಷವು. ಆತನಿಂ ವಿಷ್ಣು ವಿಶೇಷವೆಂದು ಸ್ಮೃತಿ ಪುರಾಣ ಸಿದ್ಧಾಂಮಕ್ಕುಂ. ೫೫೮

ದೇವತಾ ಪೂಜಾಭೇದ :

ಬಳಿಕ ಇಲ್ಲಿ ಗುಣಾಭಿಮಾನಿಯಾದ ಸಕಲದೇವತಾ ವಲ್ಲಭನಾದ ರುದ್ರನು, ಗುಣಾತೀತನಾದ ಮಾಯಾವಿಯಾದ ಮಹೇಶ್ವರನೆಂಬ ಈರ್ವರಿಗೂ ಲಿಂಗಲಕ್ಷಣಮಾದ ಏಕಾದಿಕರಣ ಪೂಜಿಸಲ್ಪುದು. ಅದರಿಂ ಪ್ರಣವ ಪಂಚಾಕ್ಷರಿ ಮಂತ್ರಂಗಳು ಆ ಉಭಯ ಪೂಜೆಯಲ್ಲಿಯೂ ಸಮಾನವಹುದು. ಆ ಪೂಜೆ ಪಂಚವಿಧವಹುದು ಅದರಲ್ಲಿ

೧. ಕೇವಲ ರುದ್ರ ಪೂಜೆಯೇ ಕನಿಷ್ಟವೆನಿಸೂದು.
೨. ಅವರೀರ್ವರೊಳಗೆ ರುದ್ರಪ್ರಧಾನವಾದ ಪೂಜೆಯೇ ಮಧ್ಯಮವೆನಿಸೂದು.
೩. ಆ ಶಿವ ರುದ್ರರ ಸಮಪ್ರಧಾನವಾದ ಪೂಜೆಯೇ ಉತ್ತಮಾಧಮವೆನಿಸೂದು.
೪. ಕೇವಲ ಶಿವಪ್ರಧಾನವಾದ ಪೂಜೆಯೇ ಮಧ್ಯಮೋತ್ತಮವೆನಿಸೂದು.
೫. ಆ ಮಹೇಶ್ವರನ ನಿರುಪಾಧಿಕವಾದ ಸಚ್ಚಿದಾನಂದ ಪೂಜೆಯೇ ಉತ್ತಮೋತ್ತಮವೆನಿಸೂದು.

ಈ ಉತ್ತಮೋತ್ತಮ ಪೂಜೆಯೇ ಶಿವಪ್ರೀತಿಕರಮಕ್ಕುಂ. ಬಳಿಕ ವಹ್ನಿ ಸೂರ್ಯ ಇಂದ್ರ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಗೆ ಶಿವನೊಡನೆ ಏಕಾಧಿಕರಣ ಪೂಜೆಯಿಲ್ಲಾಗಿ, ಭಿನ್ನಾಧಿಕರಣ, ಭಿನ್ನಮಂತ್ರ ಭಿನ್ನಪೂಜೆಗಳೇ ಕರ್ತವ್ಯವೆಂದು ಪುರಾಣೋಕ್ತಮಕ್ಕುಂ. ೫೫೯

ಶಿವಪೂಜೆ ಲಭಿಸೂದಕ್ಕೆ ಕಾರಣ :

ಬಳಿಕ ಅಗ್ನಿ ಸೂರ್ಯೇಂದ್ರಾದಿ ದೇವತಾ ಭಜನೆಯಿಂ ಬ್ರಹ್ಮಪೂಜೆ ದೊರಕೊಂಬುದು. ಬ್ರಹ್ಮಪೂಜೆಯಿಂ ವಿಷ್ಣುವಿನ ಅರ್ಚನೆದೊರೆಕೊಂಬುದು. ವಿಷ್ಣುವಿನ ಅರ್ಚನೆಯಿಂ ರುದ್ರಾರಾಧನೆ ದೊರೆಕೊಂಬುದು, ರುದ್ರಾರಾಧನೆಯಿಂ ಶಿವಭಕ್ತಿ ದೊರೆಕೊಂಬುದು.

ಶಿವಭಕ್ತಿ ಪ್ರಾಶಸ್ತ್ಯ :

ಶಿವಭಕ್ತಿಯಿಂದವೆ ಇಹಪರ ಭೋಗಗಳುಂ ಪರಾಪರ ಮುಕ್ತಿಗಳುಂ ಸಿದ್ಧಿಸುತ್ತಿಹವಾಗಿ ಶಿವಭಕ್ತಿಯೇ ಸರ್ವೋತ್ಕರ್ಷಮಪ್ಪುದೆಂದು ನಿರ್ಧರಿಸಲ್ವೇಳ್ಕುಂ.

ಊರ್ಧ್ವಾಂಡ ಕಟಾಹದ ಲೋಕ ಪರಿಮಿತಿ :

ಬಳಿಕ ಇಂತು ಪೇಳ್ವ ಪ್ರಕಾರದಿಂದ ಎಣಿಸಿನೋಡೆ ಭೂಲೋಕಂತೊಡಗಿ ಧ್ರುವ ಮಂಡಲ ಪರ್ಯಂತಮಾದ ಭುವರ್ಲೋಕವೆ ಹದಿನೈದು ಲಕ್ಷ ಯೋಜನವು. ಅದರ ಮೇಲೆ ಸ್ವರ್ಲೋಕವು ಎಂಬತ್ತೈದು ಲಕ್ಷ ಯೋಜನವು. ಉಭಯ ಯೋಜನವು, ಉಭಯಂಗೂಡಿ ಒಂದು ಕೋಟಿ ಯೋಜನವು.

ಆ ಮಹರ್ಲೋಕವು ಎರಡು ಕೋಟಿ ಯೋಜನವು

ಅ ಜನರ್ಲೋಕವು ಎಂಟುಕೋಟಿ ಯೋಜನವು

ಆ ತಪೋಲೋಕವೆ ಹನ್ನೆರಡು ಕೋಟಿ ಯೋಜನವು.

ಆ ಸತ್ಯಲೋಕವು ಹದಿನಾರು ಕೋಟಿ ಯೋಜನವು

ಆ ವಿಷ್ಣುಲೋಕವು ನಾಲ್ಕು ಕೋಟಿ ಯೋಜನವು

ಆ ಕುಮಾರಾದಿ ಲೋಕಸಹ ರುದ್ರಲೋಕವು ಆರು ಕೋಟಿ ಯೋಜನವು.

ಆ ರುದ್ರಲೋಕಾದಿಮ ಬ್ರಹ್ಮಾಂಡ ಊರ್ಧ್ವಕಟಾಹಾಂತಮಾಗಿ ಒಂದು ಕೋಟಿ ಯೋಜನ ಪ್ರಮಾಣವಹುದು.

ಇಂತು ಭೂಮ್ಯಾದಿ ಬ್ರಹ್ಮಾಂಡದ ಊರ್ಧ್ವಕಟಾಹ ಪರಿಯಂತಮಾಗಿ ಐವತ್ತು ಕೋಟಿ ಯೋಜನದ ಆಳವಿಯಕ್ಕುಂ.

ಬಳಿಕ ಅದಃ ಕಟಾಹಾದಿ ಭೂ ಪೃಷ್ಠ ಪರಿಯಂತಮಾಗಿ ಐವತ್ತುಕೋಟಿ ಯೋಜನದ ಅಳತೆಯುಹುದು. ಅಂತು ಉಭಯಂಗೂಡಿ ಬ್ರಹ್ಮಾಂಡಗೋಳಕಂ ನೂರು ಕೋಟಿಯೋಜನ ಪ್ರಮಾಣೋನ್ನತಮೆಂದು ವಿವೇಕಿಸಲ್ವೇಳ್ಕುಂ. ೫೬೦

ಅನೇಕ ಬ್ರಹ್ಮಾಂಡಗಳ ನಿದರ್ಶನ :

ಬಳಿಕ ಈ ಪ್ರಸರಣದಿಂ ವಿಚಿತ್ರ ರಚನೆಯುಳ್ಳ ಬ್ರಹ್ಮಾಂಡದ ಒಳವಳಯದ ಪೂರ್ವಾದಿ ದಿಕ್ಕೆಂಟರೊಳು ಇಂದ್ರಾದಿಲೋಕ ಪಾಲಾಷ್ಟಕರು ಇರ್ದು ಅದಂ ರಕ್ಷಿಸುತ್ತಿರ್ಪರು. ಇಂತಪ್ಪ ಬ್ರಹ್ಮಾಂಡಂಗಳ್ ಅನಂತಕೋಟಿಗಳು ಉಂಟೆಂದು ನಿಶ್ಚೈಸಿಲ್ವೇಳ್ಕುಂ. ಬಳಿಕ ಇಲ್ಲಿ ಮಾಯಾತ್ಮರ ಸಂಬಂಧ, ಲಕ್ಷಣ, ಕಾಲ ತತ್ತ್ವವೆಂಬ ಔದುಂಬರ ವೃಕ್ಷದೊಳ್ ಒಂದೇ ಸಮಯದಲ್ಲಿ ಜನಿಸುತ್ತಿರ್ದ ಜನಿಸಿದ ಜನಿಸಿ ಕೆಡುತ್ತಿರ್ದ ತಮ್ಮೊಳು ಒಂದೊಂದರ ವೃತ್ತಾಂತವನು ಒಂದೊಂದರಿಯದಿರ್ಪ ಸಕಲ ಪ್ರಾಣಿಗಳೆಂಬ ಮಸಕ ವಿಸರಂಗಳೊಳು ಎಸೆವ ಅಜಾಂಡಂಗಳೆಂಬ ಫಲಂಗಳು ಅಸಂಖ್ಯಾತಂಗಳುಂಟು ಎಂಬುದು ಉಪಮಾನಮಕ್ಕುಂ ೫೬೧

ಯೋಜನ ಲಕ್ಷಣ:

ಅನಂತರದೊಳು ಈ ಯೋಜನ ಪ್ರಮಾಣದಿಂದವೆ ಸಮಸ್ತತತ್ವ ವ್ಯಾಪ್ಯ ವ್ಯಾಪಕ

ಸ್ಥಿತಿ ಮೊದಲಾದವನು ಅರಿಯಲ್ಬಕ್ಕುದಾಗಿ, ಯೋಜನ ಲಕ್ಷಣಮಂ ಪೇಳ್ವೆನು, ಅದೆಂತೆಂದೊಡೆ :

ಎಂಟು ಪರಮಾಣು ಕೂಡಲು ಒಂದು ತ್ರಸರೇಣುವೆನಿಸುಗುಂ, ಅದೇ ಗವಾಕ್ಷ ಮಧ್ಯಗತ ಸೂರ್ಯರಶ್ಮಿಯಲ್ಲಿ ತೋರ್ಪ ರಜಸ್ಸೆನಿಸುಗುಂ. ಆ ತ್ರಸರೇಣುಗಳು ಎಂಟಾಗಲು ಒಂದು ವಾಲಾಗ್ರವೆನಿಸುಗುಂ. ಆ ವಾಲಾಗ್ರವು ಎಂಟಾಗಲು ಇಂದು ಅಕ್ಷೆ ಸನಿಸುಗುಂ. ಆ ಲಿಕ್ಷೆ ಎಂಟಾಗಲು ಒಂದು ಯೂಕವೆನಿಸುಗುಂ. ಆ ಯೂಕಂ ಎಂಟಾಗಲು ಒಂದು ಯವ ಎನಿಸುಗುಂ. ಆ ಯವಂ ಎಂಟಾಗಲು ಒಂದು ಉತ್ತಮ ಮಾನಾಂಗುಲವೆನಿಸುಗುಂ. ಏಳರಿಂ ಮಧ್ಯಮ ಮಾನಾಂಗುಲವೆನಿಸುಗುಂ, ಮೂರರಿಂದ ಅಧಮ ಮಾನಾಂಗುಲವೆನಿಸುಗುಂ, ಇದೇ ಮಾನಾಂಗುಲದ ವಿವರಮಕ್ಕುಂ.

ಬಳಿಕ ಮಾತ್ರಾಂಗುಲಮೆಂತೆನೆ : ಕರ್ತೃವಿನ ಮಧ್ಯಮಾಂಗುಲಿಯ ನಡುವಣ ಪರ್ವದ ದೀರ್ಘವೆ ಮಾತ್ರಾಂಗುಲವೆನಸುಗುಂ. ಅದಕೊಂದು ಕಾಲುಭಾಗೆ ಕಡಿಮೆಯಾಗೆ ಮಧ್ಯಮ ಮಾತ್ರಾಂಗುಲವೆನಿಸಿಕೊಳ್ಗುಂ.

ಇನ್ನು ದೇಹ ಲಬ್ಧಾಂಗುಲಮೆಂತೆನೆ : ತನ್ನಿಂ ಗ್ರಹಿಸಲ್ಪಟ್ಟ ಪ್ರತಿಮೆಯ ದೀರ್ಘವನೆ ಆಯಾಯ ತಾಲಂಗುಲದ ಸಂಖ್ಯೆಯಿಂದ ಒಂದೊಂದು ಇಷ್ಟು ಭಾಗೆಯೆಂದು ವಿಭಾಗಿಸೂದೇ ದೇಹಲಬ್ಧಾಂಗುಲಮಕ್ಕುಂ.

ಬಳಿಕ ಅಲ್ಲಿ ಉಪ್ಪರಿಗೆ ಮೊದಲಾದವನೆ ಮಾನಾಂಗುಲದಿಂದ ಮಾಡುವುದು. ಕುಂಡ ಮೊದಲಾದವನು, ಗೃಹೋಪಕರಣಾದಿಗಳನು ಮಾತ್ರಾಂಗುಲಿಯಿಂ ಮಾಡೂದು. ಈ ಪ್ರಕಾರದಿಂದ ಅಂಗುಲಿ ಭೇದವನರಿವುದು.

ಇನ್ನು ಹಸ್ತ ಭೇದಮೆಂತೆನೆ: ಪೂರ್ವೋಕ್ತ ಮಾನಾಂಗುಲವು ಇಪ್ಪತ್ತನಾಲ್ಕಾದರೆ ಒಂದು ಕಿಷ್ಕಿರ್ಹಸ್ತವೆನಿಸೂದು. ಅದು ಇಪ್ಪತ್ತೈದಾದರೆ ಪ್ರಜಾಪತ್ಯ ಹಸ್ತವೆನಿಸೂದು. ಆದು ಇಪ್ಪತ್ತಾದರೆ ಧನುರ್ಮುಷ್ಟಿ ಹಸ್ತವೆನಿಸೂದು. ಅದು ಇಪ್ಪತ್ತೇಳಾದರೆ ಧನುರ್ಗ್ರಹ ಹಸ್ತವೆನಿಸಿಕೊಳ್ಳುಂ. ಬಳಿಕಿಲ್ಲ ಮಂಚಾದಿಕವನೆ ಕಿಷ್ಕುರ್ಹಸ್ತದಿಂ ಮಾಡೂದು ಪಟ್ಟಣಾದಿಕವನೆ ಧನುರ್ಮುಷ್ಟಿ ಹಸ್ತದಿಂ ಮಾಡೂದು. ಮನೆ ದೇವಾಲಯ ಲಿಂಗಾದಿಗಳನೆ ಪ್ರಜಾಪತ್ಯ ಹಸ್ತದಿಂ ಮಾಡೂದು; ಕ್ಷೇತ್ರ ಪ್ರಮಾಣವನೂ ಯೋಜನವನೂ ಧನುರ್ಗ್ರಹಸ್ತದಿಂ ಮಾಡೂದು. ಮತ್ತಂ ಆ ಧನುರ್ಗ್ರಹಸ್ತವು ನಾಲ್ಕಾಗಲು ಒಂದು ಧನುವೆನಿಸೂದು. ಆ ಧನುವೆರಡಾಗಲು ಒಂದು ದಂಡವೆನಿಸುಗುಂ. ಆ ದಂಡವು ಎರಡು ಸಾವಿರಮಾಗಲು ಒಂದು ಕ್ರೋಶವೆನಿಸುಗುಂ. ಆ ಕ್ರೋಶವೆರಡಾಗಲು ಒಂದು ಗವ್ಯೂತಿ ಎನಿಸುಗು, ಆ ಗವ್ಯೂತಿ ಎರಡಾಗಲು ಒಂದು ಯೋಜನವೆಂದು ಪ್ರಮಾಣಿಸಲ್ವೇಳ್ಕುಂ.

ಇತಿ ದೇವಲೋಕ ಸ್ಥಿತಿ ವರ್ಣನಂ

ಷಷ್ಠಮ ಪರಿಚ್ಛೇದ

■■

ಸಪ್ತಮ ಪರಿಚ್ಛೇದ

ಕಂದ॥ ವಿದಿತಮೆನೆ ಕಮಲ ಜನ್ಮಾಂ
ಡದೊಳುಳ್ಳಖಿಳ ಪ್ರಪಂಚಮಂ ಪೇಳಿದೆನಿ ।
ನ್ನದರ ಬಹಿರ್ಭಾಗದ ಸಂ
ಪದಮಂ ಸಾಲ್ಗೊಂಡು ಸರ್ವರರಿವಂತುಸುರ್ವೆಂ॥

ಅದೆಂತೆಂದೊಡೆ :

ಆವಾತನಿಂದ ಆವಾತನು ಅಧಿಕಮಾದ ಜ್ಞಾನ ತೇಜೋಬಲ ಐಶ್ವರ್ಯಾದಿ ಗುಣವಿಶಿಷ್ಟನು ಅವನು ಊರ್ಧ್ವ ಲೋಕ ಸ್ಥಿತನೆಂಬ ಆಗಮ ಪ್ರಮಾಣದಿಂದ ಅಲ್ಲಿಂದಂ ಮೇಲೆ ಪೇಳ್ದ ಭುವನಪತಿಗಳನು ಉತ್ತರೋತ್ತರ ಸುಖ ಭೋಗಿಗಳೆಂದು ಅರಿಯಲ್ಪಕ್ಕುದಾಗಿ, ಪೂರ್ವೋಕ್ತ ಪಾಂಚಭೌತಿಕ ಬ್ರಹ್ಮಾಂಡವನುಳಿದು ಅದರ ಬಹಿರ್ಭಾಗದ ಕೇವಲ ಪೃಥ್ವೀತತ್ವದ ಇಂದ್ರಾದಿ ದಶದಿಕ್ಕಿನೊಳಿರ್ದ, ಇಂದ್ರಾದಿಗಳಿಗೆ ನಿಯಂತೃಗಳಾಗಿ, ಪರಮೈಶ್ವರ್ಯ ಸಂಪನ್ನರಾಗಿ ತಮ್ಮೊಡನೆ ವಿಚಿತ್ರ ವೇಷಧಾರಿಗಳಾದ ಮಹಾಪರಾಕ್ರಮಿಗಳಪ್ಪ ನಾನಾ ಶಸ್ತ್ರಪಾಣಿಗಳಾದ, ಗಂಗವಾಳುಕ ಸಮಾನ ರುದ್ರರೊಡಗೂಡಿ ತದ್ ಬ್ರಹ್ಮಾಂಡ ರಕ್ಷಕರಾದ ಶತರುದ್ರರ ನಾಮಧೇಯಂಗಳು ಆವಾವು ಎಂತೆಂದೊಡೆ : ೫೬೩

ಶತರುದ್ರರ ನಾಮಧೇಯ :

ಕಪಾಲೀಶ ಅಜ ಬುದ್ಧ ವಜ್ರದೇಹ ಪ್ರಮರ್ದನ ಪ್ರಭೂತೆ ಅವ್ಯಯ ಶಾಸ್ತ್ರ ಪಿನಾಕಿ ತ್ರಿದಶವಂದಿತರೆಂಬ ದಶರುದ್ರರು ಇಂದ್ರದಿಕ್ಕಿನಲ್ಲಿಹರು.

ಅಗ್ನಿರುದ್ರ, ಹುತಾಶಿ ಪಿಂಗಲ ಬಾಧಕ ಹರ ಜ್ವಲನ ದಹನ ಬಭ್ರು ಭಸ್ಮಾಂತರ ಕ್ಷಯಾಂತಕರೆಂಬ ದಶರುದ್ರರು ಅಗ್ನಿ ದಿಕ್ಕಿನಲ್ಲಿಹರು.

ಯಾಮ್ಯ ಮೃತ್ಯುಹರ ಧಾತೃ ವಿಧಾತೃ ಕರ್ತೃ ಕಾಲ ಧರ್ಮ ಅಧರ್ಮ ಸಂಯೋಕ್ತರೆಂಬ ದಶರುದ್ರರು ಯಮನದಿಕ್ಕಿನಲ್ಲಿಹರು.

ನೈರುತ್ಯ ಮಾರಣ ಹಂತೃ ಕ್ರೂರದೃಷ್ಟಿ ಭಯಾನಕ ಊರ್ಧ್ವಶೇಷ, ವಿರೂಪಾಕ್ಷ ಧೂಮ್ರ ಲೋಹಿತ ದಂಷ್ಟ್ರಗಳೆಂಬ ದಶರುದ್ರರೆ ನೈರುತ್ಯದಿಕ್ಕಿನಲ್ಲಿಹರು.

ಬಲ ಅತಿಬಲ ಪಾಶಹಸ್ತ ಮಹಾಬಲ ಶ್ವೇತ ಜಯಭದ್ರ ದೀರ್ಘಬಾಹು ಜ್ವಲಾಂತರ ಬಡಬಾಮುಖಿ ಭಿಮರೆಂಬ ದಶರುದ್ರರೆ ವರುಣದಿಕ್ಕಿನಲ್ಲಿಹರು.

ಶೀಘ್ರ ಲಘು ವಾಹುವೇಗ ಸೂಕ್ಷ್ಮ ತೀಕ್ಷ್ಣ ಕ್ಷಯಾಂತಕ ಪಂಚಾಂತಕ ಪಂಚಶಿಖಿ ಕಪರ್ದಿ ಮೇಘವಾಹನರೆಂಬ ದಶರುದ್ರರೆ ವಾಯವ್ಯದಿಕ್ಕಿನಲ್ಲಿಹರು.

ಜಟಾಮಕುಟಧಾರ ನಾನಾರತ್ನಾಧರ ನಿಧೀಶ ರೂಪವಾನ್ ಧನ್ಯ ಸೌಮ್ಯದೇಹ ಪ್ರಸಾದಕೃತ್ ಪ್ರಕಾಶ ಲಕ್ಷ್ಮಿವಾನ್ ಕಾಮರೂಪರೆಂಬ ದಶರುದ್ರರೆ ಕುಬೇರದಿಕ್ಕಿನಲ್ಲಿಹರು.

ವಿದ್ಯಾಧರ ಜ್ಞಾನಧರ ಸರ್ವಜ್ಞ ವೇದಪಾರಗ ಮಾತೃವೃತ್ತ ಪಿಂಗಳಾಕ್ಷ ಭೂತಪಲ ಬಲಿಪ್ರಿಯ ಸರ್ವವ್ವಿದ್ಯಾವಿಧಾತೃ ಸುಖದುಃಖಕರರೆಂಬ ದಶರುದ್ರರೆ ಈಶಾನ ದಿಕ್ಕಿನಲ್ಲಿಹರು.

ಅನಂತ ಧೀರ ಪಾಲಕ ಪಾತಾಳೇಶ ವೃಷಭ ವೃಷಧರ ಸುವೀರ್ಯ ಹ್ರಸನ ಶುಭ ಲೋಹಿತರೆಂಬ ದಶರುದ್ರರು ಆ ಬ್ರಹ್ಮಾಂಡದ ಅಧೋಭಾಗದಲ್ಲಿಹರು.

ಶಂಭು ವಿಭುಗುಣ ಅಧ್ಯಕ್ಷ ತ್ರ್ಯಕ್ಷ ತ್ರಿದಶವಂದಿತ ಸಂವಾಹ ವಿವಾಹ ಉಗ್ರ ನಭೋಲಿಪ್ಸ ವಿಚಕ್ಷಣರೆಂಬ ದಶರುದ್ರರು ಊರ್ಧ್ವಪ್ರದೇಶದಲ್ಲಿಹರು.

ಬಳಿಕ ಈ ಪ್ರಕಾರದಿಂದ ಇಂದ್ರಾದಿ ಲೋಕಪಾಲಾಷ್ಟಕರಿಂ ಬ್ರಹ್ಮಾಚ್ಯುತರಿಂ ದಿಕ್ಷರಿವಿಡಿದು ಪೂಜ್ಯರಾದ ತಮ್ಮ ನಾಮೋಚ್ಚಾರಣೆ ಆರಾಧನೆಗಳಿಂದ ಇಷ್ಟಾರ್ಥ ಪ್ರದರಾದ ಸರ್ವಜ್ಞಾರಾದ ಶತರುದ್ರರಿಗೆ ಕರ್ತೃವಾದ ವೀರಭದ್ರನಾದೊಡೆ; ೫೬೮

ಶತರುದ್ರಪತಿ ವೀರಭದ್ರ :

ನೀಲವರ್ಣಮಯ ಶರೀರದಿಂ ಜಟಾಮಕುಟದಿಂ ಏಕಮುಖ ತ್ರಿನೇತ್ರದಿಂ, ದೀಪ್ತದಂಷ್ಟ್ರಂಗಳಿಂ, ಖಡ್ಗ ಫಲಕ ಚಾಪ ಬಾಣಂಗಳಾಂತ ವಾಮದಕ್ಷಿಣ ಕರಚತುಷ್ಟಯದಿಂ, ವಸ್ತ್ರ ಗಂಧ ಮಾಲ್ಯಾಭರಣಾದಿಗಳಿಂದ ಅಲಂಕೃತನಾಗಿ, ಭದ್ರಕಾಳಿ ಸಹಿತನಾಗಿ, ದುಷ್ಟನಿಗ್ರಹ ಶಿಷ್ಟಪ್ರತಿಪಾಲಕನೆನಿಸಿ ಪೃಥುವ್ಯಾದಿ ಸೂಕ್ಷ್ಮಭೂತವರ್ಗದಲ್ಲಿರ್ಪಂ. ೫೬೫

ತತ್ತ್ವಗಳಿಗೆ ಅಭಿಮಾನಿ ರುದ್ರರು :

ಅನಂತರದೊಳು ಆ ಸ್ಥೂಲರೂಪ ಪೃಥ್ವಿತತ್ತ್ವದತ್ತಣಿಂ ದಶಗುಣ ಅಧಿಕಮಾಗಿ ಆವರಿಸಿರ್ದ ಅಪ್ಪು ತತ್ತ್ವದಲ್ಲಿ, ಅಮರೇಶ ಪ್ರಭಾಸ ನೈಮಿಷ ಪುಷ್ಕರ ಆಷಾಡಿ ಡಿಂಡಿ ಭಾರಭೂತಿ ನಾಕುಲರೆಂಬ ಗುಹ್ಯಾಷ್ಟಕರಿಹರು.

ಮತ್ತಂ ಆ ತೇಜಸ್ತತ್ವದತ್ತಣಿಂ ದಶಗುಣಾಧಿಕಮಾಗಿ ಆವರಿಸಿರ್ದ ವಾಯುತತ್ತ್ವದಲ್ಲಿ ಗಯೆ ಕುರುಕ್ಷೇತ್ರ ನಾಕಲಂಡ ಖಲ ವಿಮಲ ಅಟ್ಟಹಾಸ ಮಹೇಂದ್ರ ಭೀಮರೆಂಬ ಗುಹ್ಯಾದ್ಗುಹ್ಯಾಷ್ಟಕರಿಹರು.

ಮತ್ತಂ ಆ ವ್ಯೋಮ ತತ್ತ್ವದತ್ತಣಿಂ ದಶಗುಣಾಧಿಕಮಾಗಿ ಆವರಿಸಿರ್ದ........................ .... ಅಷ್ಟಕರಿಹರು.

ಬಳಿಕ ಇಂತು ಪೂರ್ವೋಕ್ತ ಲೋಕಪಾಲಾಷ್ಟಕರೊಡಗೂಡಿದ ಈ ಪಂಚಾಷ್ಟಕರಾದ ನಾಲ್ವತ್ತು ಭುವನ ಪತಿಗಳೆ ಸರ್ವಜ್ಞತ್ವ ಸರ್ವ ಕರ್ತೃತ್ವ ಸಹಿತರಾಗಿ ಭೂಲೋಕದೊಳು ಆಯಾಯು ನಾಮಧೇಯಂಗಳಿಂದ ಅವತರಿಸಿ, ಸಕಲ ಲೋಕಾಭಿಮತ ಫಲಪ್ರದಾಯಕರಾಗಿರ್ಪು೦. ೫೬೬

ಪಂಚತನ್ಮಾತ್ರರುದ್ರರು :

ಮತ್ತಂ ಆ ಪೃಥುವ್ಯಾದಿ ಪಂಚಮಹಾಭೂತಂಗಳಿಗೆ ಕ್ರಮದಿಂ ಕಾರಣಮಾದ ಗಂಧಾದಿ ಪಂಚತನ್ಮಾತ್ರಂಗಳೆಂಬೈದರಲ್ಲಿ ಪರಿವಿಡಿದು, ಮಂತ್ರರೂಪಿ ಸುಬಾಹು ಭಾಸುರ ಸರ್ವವಿತ್ ಅಗಜೇಶ್ವರರೆಂಬ ಪಂಚ ಭುವಪತಿಗಳೊಡನೆ ಗಂಧಾಂಗ ಜಲೋಧರ ಭಾನುಮಾನ್ ಬಲವತ್ತರ ಸೂಕ್ಷ್ಮನಾದರೆಂಬ ರುದ್ರರುಗಳು ಆ ಕ್ರಮದಿಂದಹರು.

ಕರ್ಮೇಂದ್ರಯ ಜ್ಞಾನೇಂದ್ರರಿಯ ರುದ್ರರು :

ಮತ್ತಂ ಆ ತನ್ಮಾತ್ರೆಗಳಿಂ ಮೇಲೆ ವಾಗಾದಿ ಕರ್ಮೇಂದ್ರಿಯ ಪಂಚಕದಲ್ಲಿ ಕ್ರಮದಿಂ ಕಾಲದಂಷ್ಟ್ರ ಪಿಂಗಳಾಕ್ಷ ರೌದ್ರ ಜಟಿಲ ವಿಶಾಲರೆಂಬ ಪಂಚಭುವನಪತಿಗಳೊಡನೆ ದುಂದುಭಿ ಸಮಾಧಾನ ತೂರ್ಣಕ ರುದ್ರಪ್ರಣವ ಘನಾನಂದರುಗಳೆಂಬ ರುದ್ರರುಗಳು ಆ ತರುವಾಯಿಂದ ಇಹರು.

ಬಳಿಕ ಕರ್ಮೇಂದ್ರಿಯದಿಂ ಮೇಲೆ ಶ್ರೋತ್ರಾದಿ ಜ್ಞಾನೇಂದ್ರಿಯ ಮನಸ್ಸುಗಳೆಂಬ ಆರರಲ್ಲಿ ಕ್ರಮದಿಂ, ಕಾಮರೂಪಿ ಹುತಾಶನ ಪ್ರಜಾಪತಿ ಘೋರಕ ವಿಧೂಕರ ಅನುಪಮಗುಣಯುತರೆಂಬ ಆರು ಭುನವಪತಿಗಳೊಡನೆ, ವ್ಯೋಮಾಚಾರ ಸರ್ವಾಂಗ ಪ್ರಕಾಶಕ ಮಹಾವಕ್ತ್ರ ನಿಲುಂಪಕ ಸಂಕಲ್ಪರೆಂಬ ರುದ್ರರುಗಳು ಆ ಪರಿವಿಡಿಯಿಂದ ಇಹರು. ೫೬೭

ಅಹಂಕಾರಭುವನ ರುದ್ರರು :

ಬಳಿಕ ಆ ಗಂಧತನ್ಮಾತ್ರಾದಿ ಮಾನಸಾಂತಮಾದ ಷೋಡಶ ವಿಕಾರಂಗಳಿಗೆ ಕಾರನಮಾಗಿ, ಪೂರ್ವೋಕ್ತಮಾದ ಆಕಾಶದತ್ತಣಿಂ ದಶಗುಣಾಧಿಕಮಾಗಿ ಆವರಿಸಿರ್ದ ಅಹಂಕಾರ ತತ್ತ್ವದಲ್ಲಿ, ಭಾಗಲಂಡ ದುರಂಡ ಮಾರೋಟಿ ಮಂಡಲೇಶ್ವರ ಕಾಳಾಂಜನ ಶಂಖಕರ್ಣ ಸ್ಥಲೇಶ್ವರ ಸ್ಥೂಲೇಶ್ವರರೆಂಬ ಸ್ಥಾಣುವಷ್ಟಕರಿಹರು. ೫೬೮

ಬುದ್ಧಿತತ್ತ್ವ ಗುಣತತ್ತ್ವ ರುದ್ರರು :

ಬಳಿಕ ಅಹಂಕಾರ ತತ್ತ್ವದಿತಣಿಂ ದಶಗುಣಾಧಿಕಮಾಗಿ ಆವರಿಸಿರ್ದ ಬುದ್ಧಿತತ್ತ್ವದಲ್ಲಿ: ಪಿಶಾಚ ರಾಕ್ಷಸ ಯಕ್ಷ ಗಂಧರ್ವ ಇಂದ್ರ ಸೌಮ್ಯ ಪ್ರಜೇಶ ಬ್ರಹ್ಮರೆಂಬ ದೇವಾಷ್ಟಕರಿಹರು.

ಬಳಿಕ ಬುದ್ಧಿತತ್ತ್ವದತ್ತಣಿಂ ದಶಗುಣಾಧಿಕಮಾಗಿ ಆವರಿಸಿರ್ದ ಗುಣ ತತ್ತ್ವದಲ್ಲಿ: ಅಕೃತ ಕೃತ, ಭೈರವ ಬ್ರಹ್ಮ ವಿಷ್ಣು ಕುಮಾರ ಉಮೆ ಶ್ರೀಕಂಠರೆಂಬ ಯೋಗಾಷ್ಟಕರಿಹರು. ೫೬೯

ಪ್ರಕೃತಿ ತತ್ತ್ವರುದ್ರರು :

ಬಳಿಕ ಆ ಗುಣತತ್ತ್ವದತ್ತಂಇಂ ದಶಗುಣಾಧಿಕಮಾಗಿ ಆವರಿಸಿರ್ದ ಪ್ರಕೃತಿತತ್ತ್ವದಲ್ಲಿ ಕ್ರೋಧೇಶ ಚಂಡ ಸಂವರ್ತ ಜ್ಯೋತಿಪಿಂಗಳ ಸೂರಗ ಪಂಚಾಂತರ ಏಕವೀರ ಶಿಖೇಧರೆಂಬ ಮಹಾದೇವಾಷ್ಟಕರಿಹರು. ೫೭೦

ಪುರುಷತತ್ತ್ವ ರುದ್ರರು :

ಮತ್ತಂ ಆ ಪ್ರಕೃತಿ ತತ್ತ್ವದತ್ತಣಿಂ ನೂರುಮಡಿಯಾಗಿ ಆವರಿಸಿರ್ದ ಪುರುಷ ತತ್ತ್ವದಲ್ಲಿ ಸರ್ವೇಂದ್ರಿಯ ಸರ್ವತನು ಸರ್ವಾಂತಃಕರಣಾಶ್ರಯರೆಂಬ ರುದ್ರರಿರ್ಪರು, ಅಲ್ಲಿ ಪುರುಷನಾದೊಡೆ ನಿತ್ಯವ್ಯಾಪಕ ಚೈತನ್ಯಮಯನಾಗಿ ಕಾರ್ಯರೂಪನಲ್ಲದೊಡಂ ಮುಂದೆ ಪೇಳ್ವರಾಗಾದಿ ಕಾಲಂತಮಾದಪಂಚಕಂಚುಕಯುಕ್ತನಪ್ಪುದರಿಂದ ಉಪಚಾರದಿಂ ತತ್ತ್ವಂಗಳೊಳಗೆ ಗಣನೆಗೆ ಬಹನಾಗಿ ಭುವನಾಶ್ರಯನಲ್ತು, ಮತ್ತೇನೆನೆ; ಗಂಗೆಯಲ್ಲಿ ಹಳ್ಳಿಯಿದ್ದಿತ್ತೆಂಬುದರಂತೆ, ಲಕ್ಷಣಾವೃತ್ತಿಯಿಂ, ತತ್‌ಸಮೀಪದ ಪ್ರಕೃತಿ ಮಸ್ತಕದೊಳು ಆ ಭುವನಂಗಳಿಹವೆಂದು ವಿಭಾಗಿಸಲ್ವೇಳ್ಕುಂ. (ಪಂಚಕಂಚುಕ= ರಾಗ, ವಿದ್ಯಾ, ನಿಯತಿ, ಕಲಾ, ಕಾಲ) ೫೭೧

ರಾಗ ವಿದ್ಯಾ ನಿಯತಿತತ್ತ್ವರುದ್ರರು :

ಬಳಿಕ ಆ ಪುರುಷತತ್ತ್ವದತ್ತಣಿಂ ನೂರುಮಡಿಯಾಗೆ ಆವರಿಸಿರ್ದ ರಾಗ ತತ್ತ್ವದಲ್ಲಿ ವಾಮದೇವ ಭೀಮ ಉಗ್ರ ಭವ ಸರ್ವೇಶಾನ ಏಕವೀರ ಪ್ರಚಂಡ ಈಶ್ವರ ಉಮಾಭರ್ತೃ, ಜಯ ಅನಂತ ಏಕಶಿವರೆಂಬ ರುದ್ರರುಗಳಿಹರು.

ಬಳಿಕ ರಾಗತತ್ವದತ್ತಣಿಂ ಸಾವಿರಮಡಿಯಾಗಿ ಆವರಿಸಿರ್ದ ವಿದ್ಯಾತತ್ತ್ವದಲ್ಲಿ ಮಹಾತೇಜ ಮಹಾದೇವ ಭವ ಉದ್ಭವ ಜ್ಯೋತಿ ಪಿಂಗೇಕ್ಷಣ ಈಶಾನ ಭುವನೇಶ್ವರ ಅಂಗುಷ್ಟಮಾತ್ರರೆಂಬ ರುದ್ರರುಂ; ಸಂಹೃಷ್ಟ ಸುಹೃಷ್ಟ ಸುರೂಪ ರೂಪವರ್ಧನ ಮನೋನ್ಮನರೆಂಬ ಶಿಷ್ಯಪಂಚಕಂಗೂಡಿ; ಮಹಾವೀರ್ಯ ಕಲ್ಯಾಣ ಪಿಂಗಳ ಬಭ್ರುವೀರ ಪ್ರಭವ ಮೇಧಾತಿಥಿ ಮಂದಕ ದಾಹಕ ಶಾಸ್ತ್ರಕಾರಕರೆಂಬ ಆಚಾರ್ಯದಶಮಿರ್ಕುಂ.

ಮತ್ತಂ ಆ ವಿದ್ಯಾತತ್ತ್ವದತ್ತಣಿಂ ಲಕ್ಷಮಡಿಯಾಗೆ ಆವರಿಸಿರ್ದ ನಿಯತಿ ತತ್ತ್ವದಲ್ಲಿ; ಶೂಲಧರ ವಟರುದ್ರ ಬಲಭುಕ್ ನೀಲಲೋಹಿತ ಜ್ಯೋತಿರೂಪ ಪರಮೇಶ್ವರ ಪರಮ ಪಿಂಗೇಕ್ಷಣ ವಾಮದೇವ ಸರ್ವ ಭವ ಉದ್ಭವ ವಜ್ರದೇಹ ಪ್ರಭು ಕ್ರಮ ವಿಕ್ರಮ ಸುಪ್ರಭರೆಂಬ ರುದ್ರರು; ಸ್ಥಾಪಕ, ವಾಳುಕಾಕ್ಷ ಯಮ ತ್ರಿಶಿರ ಚಿರಪುಟ್ಟಿಗಳೆಂಬ ಶಿಲ್ಪಿರುದ್ರರುಗಳು ಐವರುಂ ಈಜಗತ್ತಿನಲ್ಲಿ ಅಸಿ ಮಸಿ ಕೃಷಿ ವಾಣಿಜ್ಯ ದೇವನಿರ್ಮಾಣವೆಂಬ ಪಂಚಕೃತ್ಯ ನಿಯಾಮಕರಾಗಿರ್ಕುಂ. ೫೭೨

ಕಲಾತತ್ತ್ವ ಕಾಲತತ್ತ್ವ ಮಾಯಾತತ್ತ್ವರುದ್ರರು :

ಮತ್ತಂ ಆ ನಿಯತಿ ತತ್ವದತ್ತಣಿಂ ಲಕ್ಷಮಡಿಯಾಗಿ ಆವರಿಸಿರ್ದ ಕಲಾ ತತ್ತ್ವದಲ್ಲಿ: ಮಾಯೀಯ್ಯ ಹಾಲಾಹಲ ಕ್ರೋಧನ ಬಡಬಾಮುಖ ಉಚ್ಚಿಷ್ಟಶಾಚರ ಚಂಡಮಾತಂಗ

ಘೋರರೂಪ ಶುದ್ಧ ಬುದ್ಧ ಪ್ರಬುದ್ಧ ಪ್ರಶಾಂತ ಪರಮಾತ್ಮ ಶಿವ ಸುಶಿವ ಬಭ್ರು ಅಕ್ಷರಾಟ್ ಶಂಭುಗಳೆಂಬ ರುದ್ರರಿಹರು.

ಮತ್ತಂ ಆ ಕಲಾತತ್ತ್ವದತ್ತಣಿಂ ದಶಲಕ್ಷಗುಣಾಧಿಕಮಾಗಿ ಆರವಿಸಿರ್ದ ಕಾಲ ತತ್ತ್ವದಲ್ಲಿ; ಗಹನೇಶ ಸಾಧ್ಯ ವಿಷ್ಣು ಹರ ದಶೇಶಾನ ಮಹಾವೀರ್ಯ ತ್ರಿಕಲಾ ಗೋಪತಿಗಳೆಂಬ ರುದ್ರರಿಹರು.

ಮತ್ತಂ ಆ ಕಾಲತತ್ತ್ವದತ್ತಣಿಂ ಕೋಟಿಗುಣಾಧಿಕಮಾಗಿ ಆವರಿಸಿರ್ದ ಮಾಯಾ ತತ್ತ್ವದಲ್ಲಿ; ಅನಂತ ತ್ರಿಕಲ ಗೋಪ್ತ್ಯ ಕ್ಷೇಮೀಶ ಬ್ರಹ್ಮಪತಿ ಧ್ರುವ ತೇಜೋಧಿಪ ಸಹನೇಶರೆಂಬ ರುದ್ರರಿಹರು. ೫೭೩

ರುದ್ರ ಪ್ರಪಂಚ :

ಮತ್ತಂ ಈ ಪ್ರಕಾರಮಾದ ಪೃಥುವ್ಯಾದಿ ಮಾಯಾಂತಮಾದ ಸಮಸ್ತ ತತ್ತ್ವಂಗಳಲ್ಲಿ ಇರ್ಪರೆಂದು ಪೇಳ್ದ ರುದ್ರರುಗಳ ನಾಮಧೆಯಂಗಳಿಂದವೆ ಅಲ್ಲಲ್ಲಿಯ ಭುವನಂಗಳಿರ್ಪವು. ಆ ಭುವನಂಗಳು ಅಸಂಖಾತಂಗಳು ಅಪ್ಪವು. ಇಲ್ಲಿ ಮುಖ್ಯ ಭುವನಂಗಳೆ ಹವಣಿಸಿ ಪೇಳಲ್ಪಟ್ಟವು. ಆ ಭುವನಂಗಳೆಲ್ಲಂ ವಿಚಿತ್ರನದಿ ನಂದನ ಸರಸಿ ಪುರ ಪ್ರಾಕಾರ ದ್ವಾರ ವೀಧಿ ಮಂದಿರ ಪ್ರಸಾದಾದಿ ರಚನೆಗಳಿಂ; ಗೀತವಾದ್ಯ ನೃತ್ಯಂಗಳಿಂ; ವನಿತಾದಿ ಸಕಲ ಸುಖಭೋಗ ಸಾಧನಂಗಳಿಂ ಸಂಪನ್ನರುಗಳಾಗಿ ಯಜ್ಞ ದಾನ ತಪ ವ್ರತ ಸತ್ಕ್ರಿಯಾ ನಿಷ್ಠರಿಂದ ಐದಲ್ತಕ್ಕವಾಗಿರ್ಕುಂ. ೫೭೪

ಇತಿ ಊರ್ಧ್ವಲೋಕ ಸ್ಥಿತಿ ವರ್ಣನಂ

ಸಪ್ತಮ ಪರಿಚ್ಛೇದ

■■

ಅಷ್ಟಮ ಪರಿಚ್ಛೇದ

ಕಂದ॥ ಈ ತೆರದಿನಥೋ ಮಾಯಾ
ಜಾತ ಪದಾರ್ಥ ಪ್ರತಾನಮಂ ತಿಳುಪಿದೆನಿ।
ನ್ನೋತೂರ್ಧ್ವಪ್ರಕೃತಿಯಿನಾ
ದಾ ತತ್ತ್ವಾದಿಕವನುಸುರ್ವೆನರಿವಂತಿಳೆಯೊಳ್ ॥

ಅದೆಂತೆಂದೊಡೆ :

ಶುದ್ಧವಿದ್ಯಾತತ್ತ್ವ ರುದ್ರರು :

ಪೂರ್ವೋಕ್ತ ಮಾಯಾತತ್ತ್ವದತ್ತಣಿಂ ದಶಕೋಟಿ ಮಿಗಿಲಾಗಿ ಆವರಿಸಿರ್ದ ಶುದ್ಧವಿದ್ಯಾತತ್ತ್ವದಲ್ಲಿ: ವಾಮ ಜೇಷ್ಠ ರುದ್ರ ಕಾಲ ಕಲವಿಕರಣ ಬಲವಿಕರಣ ಬಲಪ್ರಮಥನ ಸರ್ವಭುತದಮನ ಮನೋನ್ಮನ ತ್ರಿಗುಣಿ ಬ್ರಹ್ಮವೇತಾಳ ಸ್ಥಾಣುಮತಿ ಅಂಬಿಕೆ ರೂಪಿಣಿ ನಂದಿನಿ ಜ್ವಾಲೆ ವಿದ್ಯಾಧಿಪತಿಯೆಂಬ ರುದ್ರರುಂ, ಅವರ ಭುವನಂಗಳಲ್ಲಿ ಇರ್ಪರು. ಅಲ್ಲಿ ಕಾಮಿಕಾದಿ ವಾತೂಲಾಂತಮಾದ ಇಪ್ಪತ್ತೆಂಟು ಆಗಮಂಗಳುಂ, ಮನನತ್ರಾಣಮುಳ್ಳ ಜ್ಞಾನಶಕ್ತಿ ಅಧಿಕಮಾದ, ಕ್ರಿಯಾಶಕ್ತಿ ನ್ಯೂನಮಾದ ಸಪ್ತಕೋಟಿ ಮಹಾ ಮಂತ್ರಂಗಳು ಇರ್ಪವು. ಅವರೊಳಗೆ ಮೂರುವರೆಕೋಟಿ ಮಂತ್ರಂಗಳೇ ಪರಮೇಶ್ವರನ ನಿರಧಿಕರಣ ದೀಕ್ಷೆಗೆ ಸಾಧನಂಗಳಾಗಿಹವು. ಮಿಕ್ಕ ಮೂರುವರೆಕೋಟಿ ಮಂತ್ರಂಗಳೇ ಗುರುಸ್ವರೂಪನಾದ ಈಶ್ವರನ ಸಾಧಿಕರಣ ದೀಕ್ಷೆಗೆ ಸಾಧನಂಗಳಾಗಿರ್ಪುವು. ॥೭॥

ವಿದ್ಯಾತತ್ತ್ವ ರುದ್ರರು:

ಮತ್ತಮ ಆ ವಿದ್ಯಾತತ್ತ್ವದಲ್ಲಿಯ ಶ್ರೀಕಂಠ ಅನಂತ ಸೂಕ್ಷ್ಮ ತ್ರಿಮೂರ್ತಿ ಅಮರೇಶ್ವರ ಅರ್ಘೀಶ ಭಾರಭೂತಿ ತ್ರಿಧೀಶ ಸ್ಥಾಣುಕ ಹರ ಝುಂಟೇಶ ಭೌತಿಕ ಸದ್ಯೋಜಾತ ಅನುಗ್ರಹೇಶ್ವರ ಅಕ್ರೂರ ಮಹಾಸೇನ ಕ್ರೋಧೀಶ ಚಂಡೇಶ ಪಂಚಾಂತಕ ಶಿವೋತ್ತಮ ಏಕರುದ್ರ ಕೂರ್ಮ ಏಕನೇತ್ರ ಅಜೇಶ ಚತುರಾನನ ಸರ್ವ ಸೋಮೇಶ್ವರ ಲಾಂಗುಲಿ ದಾರುಕ ಅರ್ಧನಾರೀಶ್ವರ ಉಮಾಕಾಂತ ಆಷಾಡಿ ಡಿಂಡಿ ಅತ್ರಿ ಮೀನ ಮೇಷ ಲೋಹಿತ ಶಿಖಿ ಖಡ್ಗೀಶ ಶೂಲಿ ಸ್ಥಗಲಂಡ ದ್ವಿಲಂಡ ಮಹಾಕಾಳ ವಾಲಿ ಭುಜಂಗೇಶ ಪಿನಾಕೇಶ ಬಕಶ್ವೇತ ಭೃಗು ಲಕುಲೀಶ ಶಿವ ಸಂವರ್ತಕರೆಂಬ ಅಕಾರಾದಿ ಕ್ಷಕಾರಾಂತಮಾದ ಐವತ್ತೊಂದು ಮಾತೃಕಮೂರ್ತಿಗಳಪ್ಪ ರುದ್ರರುಗಳಾದೊಡೆ;

ಪೂರ್ಣೋದರಿ ವಿರಜೆ ಶಾಲ್ಮಲಿ ಲೋಲಾಕ್ಷಿ ವರ್ತುಳಾಕ್ಷಿ ದೀರ್ಘನಾಸಿಕೆ ದೀರ್ಘಮುಖಿ ಗೋಮುಖಿ ದೀರ್ಘಜಿಹ್ವೆ ಕುಂಡೋದರಿ ಅರ್ಧಕೇಶಿ ವಿಕೃತಮುಖಿ ಜ್ವಾಲಾಮುಖಿ ಶ್ರೀಮುಖಿ ಉಲ್ಕಾಮುಖಿ ವಿದ್ಯಾಮುಖಿ ಮಹಾಕಾಳಿ ಸರಸ್ವತಿ ಸರ್ವಸಿದ್ಧಿ ಸಮನ್ವಿತೆ ಗೌರಿ ತ್ರೈಲೋಕ್ಯವಿದ್ಯ ಮಂತ್ರಶಕ್ತಿ ಆತ್ಮಶಕ್ತಿ ಭೂತಮಾತೆ ಲಂಬೋದರಿ ದ್ರಾವಿಣಿನಗರಿ ಖೇಚರಿ ಮಂಜರಿ ರೂಪಿಣಿ ವಿರಾಜೆ ಕಾಲೋದರಿ ಪೂತಿನಿ ಭದ್ರಕಾಳಿ ಯೋಗಿಣಿ ಶಂಖಿನಿ ಘರ್ಜಿನಿ ಕಾಳರಾತ್ರಿ ಕುರ್ದನ್ಯೆ ಕಪರ್ದಿನಿ ವಾಙ್ಮಯೆ ಜಯೆ ಸುಮುಖ್ಯೈಶ್ವರ್ಯೆ ರೇವತಿ ಮಾಧವಿ ವಾರುಣಿ ವ್ಯಾಪಿನಿ ರಕ್ಷೋವಧಾರಿಣಿ ಸಹಜೆ ಲಕ್ಷ್ಮಿ ಮಾಯಾನ್ವಿತೆಯರೆಂಬ ಐವತ್ತೊಂದು ಶಕ್ತಿಗಳೊಡನೆ ಕ್ರಮದಿಂಕೂಡಿ ರಕ್ತಾಂಗಚ್ಛವಿಯುಳ್ಳವರಾಗಿ ಶೂಲ ಕಪಾಲ ಪಾಣಿಗಳೆನಿಸಿಕೊಂಡು ತಮ್ಮ ಮೂರ್ತಿಧ್ಯಾನ ನಾಮೋಚ್ಚರಣ ಮಾತ್ರದಿಂ ಸರ್ವಸಿದ್ಧಿ ಪ್ರದಾಯಕರಾಗಿರ್ಪುರ್. ॥೭೬

ಈಶ್ವರತತ್ತ್ವ ಅಷ್ಟವಿದ್ಯೇಶ್ವರರು :

ಮತ್ತಂ ಆ ವಿದ್ಯಾತತ್ತ್ವದತ್ತಣಿಂ ನೂರುಕೋಟಿ ಮಿಗಿಲಾಗಿ ಆವರಿಸಿರ್ದ ಈಶ್ವರ ತತ್ತ್ವದಲ್ಲಿ; ಅನಂತ ಸೂಕ್ಷ್ಮ ಶಿವೋತ್ತಮ ಏಕನೇತ್ರ ಏಕರುದ್ರ ತ್ರಿಮೂರ್ತಿ ಶ್ರೀಕಂಠ ಶಿಖಂಡಿಗಳೆಂಬ ಭವನಂಗಳಿಪ್ಪವು. ಅವರಲ್ಲಿ ಕ್ರಮದಿಂದ ಆಯಾಯು ನಾಮಧೇಯಂಗಳನುಳ್ಳ ಜ್ಞಾನಶಕ್ತಿನ್ಯೂನ ಕ್ರಿಯಾಶಕ್ತಿಬಾಹುಳ್ಯ ಮೊದಲಾದಷ್ಟು ವಿದ್ಯೇಶ್ವರರಿರ್ಪರು. ಅವರೊಳಗೆ : ಮೊದಲ ಅನಂತನೆಂಬಾತನೆ ಅಧೋಮಾಯಾಕ್ಷೋಭಕನಾಗಿ, ಸಕಲಾತ್ಮರ್ಗೆ ಭೋಗಮೋಕ್ಷ ಪ್ರದನಾಗಿರ್ಪುಂ.

ಮತ್ತಂ ಆ ಈಶ್ವರ ತತ್ತ್ವಮೆಂಬ ಬಿಂದುವಿನ ಅಧಿಕಾರಸ್ತೋಪಾಧಿಯಿಂ, ಪರಶಿವನು ತಾನೆ ಜಗದ್ಧಿತಾರ್ಥಮಾಗಿ ಜೋತಿರ್ಮಯ, ಮಂತ್ರಮಯ ಶರೀರದಿಂ, ಜಟಾಮಕುಟ ಏಕಮುಖ ತ್ರಿನೇತ್ರಂಗಳಿಂ ವರದಾಭಯಹಸ್ತಂಗಳಿಂ, ದಿವ್ಯವಸ್ತ್ರಾಭರಣ ಗಂಧಮಾಲ್ಯಾದಿಗಳಿಂದ ಅಲಂಕೃತನಾಗಿ, ಅಂಬಿಕೆಯೆಂಬ ಶಕ್ತಿ ಸಹಿತನಾಗಿರ್ಪುಂ, ॥೭೭

ಮಹೇಶ್ವರ ತತ್ತ್ವಸ್ವರೂಪ – ೨೫ ಲೀಲೆಗಳು :

ಬಳಿಕ ಬೇರೆ ಬೇರೆ ತೋರ್ಪ, ಸೋಮಧಾರಿತ್ವ ಉಮಾಸಮೇತತ್ವ ವೃಷಭಾರೂಢತ್ವ ನೃತ್ಯವಿಲಾಸಿತ್ವ ವಿವಾಹೋತ್ಸಾಹಿತ್ವ ಭಿಕ್ಷಾಟನತ್ವ ಕಾಮಾರಿತ್ವ ಕಾಲಾರಿತ್ವ ಚಕ್ರಪ್ರದಾನರೂಪತ್ವ ತ್ರಿಪುರಾರಿತ್ವ ಕಂಕಾಳಧಾರಿತ್ವ ಜಲಂಧಾರಿತ್ವ ಅಜಾರಿತ್ವ ವೀರಭದ್ರಾವತಾರಿತ್ವ ಹರಿಧ್ವಂಸಿತ್ವ ಅರ್ಧನಾರಿತ್ವ ಕಿರಾತರೂಪತ್ವ ಚಂಡೇಶಾನುಗ್ರಹತ್ವ ವಿಷಾಪಹಾರಿತ್ವ ವಿಘ್ನೇಶ್ವರ ಪ್ರದಾಭಿಮುಖತ್ವ ಉಮಾಕುಮಾರಸಹಿತತ್ವ ಏಕಪಾದತ್ವ ಸುಖಪ್ರದತ್ವ ದಕ್ಷಿಣಾಮೂರ್ತಿಸ್ವರೂಪತ್ವ ಮಹಾಲಿಂಗ ಸ್ವರೂಪಂಗಳೆಂಬ ಪಂಚವಿಂಶನ್ಮೂರ್ತಿ ಲೀಲಾಧರನೆನಿಸಿ; ಸಕಲನು ಅಧಿಕಾರಿ, ಅಧೀಶ್ವರನು, ಪ್ರವೃತ್ತನು, ಪ್ರಭಾವನುಂ ಎನಿಸಿಕೊಂಡು ಜಗತ್ತಿನ

ಸೃಷ್ಟಿ ಸ್ಥಿತಿ ಸಂಹಾರಂಗಳಂ ಮಾಡುತ್ತೆ ತನ್ನ ಧ್ಯಾನ ಪೂಜಾಸ್ಥಿತರ್ಗೆ ಭೋಗಮೋಕ್ಷಪ್ರದನಾಗಿ ಮಾಹೇಶ್ವತತ್ತ್ವವೆನಿಸಿಕೊಳ್ಳುತ್ತಿರ್ಪಂ. ೫೭೮

ಸದಾಶಿವ ತತ್ತ್ವಸ್ವರೂಪ :

ಮತ್ತಂ ಆ ಈಶ್ವರತತ್ತ್ವದತ್ತಣಂ ಸಹಸ್ರಕೋಟಿ ಮಿಗಿಲಾಗಿ ಆವರಿಸಿರ್ದ ಸದಾಶಿವ ತತ್ತ್ವದಲ್ಲಿ; ನಿವೃತ್ತಿ ಪ್ರತಿಷ್ಠೆ ವಿದ್ಯೆ ಶಾಂತಿ ಶಾಂತ್ಯಾತೀತೆ ಪವಿತ್ರಾಂಗ ಸಾದಾಕ್ಯ ಧ್ವನಿ ಪತಿಗಳೆಂಬ ಭುವನಂಗಳಿರ್ಪವು. ಅವರಲ್ಲಿ: ಜ್ಞಾನ ಕ್ರಿಯಾ ಶಕ್ತಿಸಮಾನರಾದ ನಿತ್ಯಸುಖಿಗಳಾದ ಅಣುಸದಾಶಿವರಿರ್ಪರು. ಆ ಸದಾಶಿವತತ್ತ್ವವೆಂಬ ಬಿಂದುವಿನ ಭೋಗಾವಸ್ಥೋಪಾಧಿಯಂ ಪರಶಿವನು ತಾನೇ ಯೋಗಿಗಳ ಧ್ಯಾನ ಪೂಜಾರ್ಥಮಾಗಿ, ಸ್ಫಟಿಕವರ್ಣಮಯಶರೀರದಿಂ, ಪಂಚಜಟಾಮಕುಟಂಗಳಿಂ, ಚಂದ್ರಕಲೆಯಿಂ, ಪಂಚಮುಖ ಪಂಚದಶಲೋಚನಂಗಳಿಂ ಶೂಲ ಪರಶು ಖಡ್ಗ ಆಭಯಂಗಳನುಳ್ಳ ವಾಮ ಪಂಚಕರಂಗಳಿಂ, ಸರ್ವಲಕ್ಷಣ ಸಂಪನ್ನನಾಗಿ, ದಿವ್ಯವಸ್ತ್ರಾಭರಣ ಗಂಧಮಾಲಾದಿಗಳಿಂದ ಅಲಂಕೃತನಾಗಿ, ಮನೋನ್ಮನಿ ಎಂಬ ಶಕ್ತಿಸಹಿತನಾಗಿ, ಸದ್ಯೋಜಾತಾದಿ ಮೂವತ್ತೆಂಟು ಕಲಾನ್ವಿತನೆನಿಸಿ, ಕರ್ತೃಸಾದಾಖ್ಯ ಕರ್ಮಸಾದಾಖ್ಯ ಮೂರ್ತಿಸಾದಾಖ್ಯ ಅಮೂರ್ತಿಸಾದಾಖ್ಯ ಶಿವಸಾದಾಖ್ಯವೆಂಬ ಪಂಚಮೂರ್ತಿ ಭೇದಂಗಳಂ ಧರಿಸಿ, ಸಕಲ ನಿಷ್ಕಲ ಭೋಗಿ ಅಭೋಗಿ ಉದ್ಯುಕ್ತನು ಅಮೂರ್ತಿಎನಿಸಿಕೊಂಡು, ಮೂರ್ತಿಯೆನಿಸಿಕೊಂಡು ತನ್ನ ಧ್ಯಾನ ಪೂಜಾನ್ವಿತರ್ಗೆ ಧರ್ಮ ಅರ್ಥ ಕಾಮ ಮೋಕ್ಷಾದಿಗಳೆಂಬ ಚತುರ್ವಿಧ ಪುರುಷಾರ್ಥಂಗಳಂ ಕೊಡುತ್ತೆ ಸದಾಶಿವ ತತ್ತ್ವವೆನಿಸಿಕೊಳುತ್ತಿರ್ಪಂ. ೫೭೯

ಶಕ್ತಿ ತತ್ತ್ವ :

ಮತ್ತಂ ಆ ಸದಾಶಿವ ತತ್ತ್ವದತ್ತಣಿಂದ ಒಂದರ್ಬುದ ಮಿಗಿಲಾಗಿ ಆವರಿಸಿರ್ದ ಶಕ್ತಿತತ್ತ್ವದಲ್ಲಿ : ಇಂದಿಕೆ ದೀಪಿಕೆ ರೋಚಿಕೆ ಮೋಚಿಕೆ ಊರ್ಧ್ವಗಾಮೆ ವ್ಯೋಮರೂಪೆ ಎಂಬ ಭೋಗಿಗಳಾದ ಅಪರ ಮುಕ್ತರಾದ ಶಿವರುಗಳಿರ್ಪಂ. ೫೮೦

ಶಿವತತ್ತ್ವ :

ಮತ್ತಮ ಆ ಶಕ್ತಿತತ್ತ್ವದತ್ತಣಿಂದ ಅಸಂಖ್ಯಾತಂ ಮಿಗಿಲಾಗಿ ಆವರಿಸಿರ್ದ ಪರಶಿವಂಗೆ ನಿತ್ಯ ಆಧಿಷ್ಠೇಯವಾದ ಶಿವತತ್ತ್ವವೆನಿಸಿಕೊಂಬ ಬಿಂದುವಾದೊಡೆ : ಪರಿಪೂರ್ಣ ಪರಂಜ್ಯೋತಿ ಸ್ವರೂಪಮಾಗಿರ್ಪುದು. ಆ ಬಿಂದುವೆಂಬ ಲಯಾವಸ್ಥೋಪಾಧಿಯಿಂ ಪರಶಿವನು ತಾನೇ, ಶಿವ ಪರಾತ್ಪರ ಸೂಕ್ಷ್ಮ ನಿತ್ಯ ಸರ್ವಗತ ಅವ್ಯಯ ಅನಿಂದಿತ, ಅನೌಪಮ್ಯ ಅಪ್ರಮಾಣ ಅನಾದಿಮಯವೆಂಬ ದಶನಾಮಧೇಯಂಗಳಿಂ; ಪರ ಗೂಢ ಶರೀರಸ್ಥ ಲಿಂಗಕ್ಷೇತ್ರ ಅನಾದಿವತ್ತೆಂಬ ಪಂಚಸಂಜ್ಞೆಯನುಳ್ಳ ಲಿಂಗಸ್ವರೂಪನೆನಿಸಿ; ನಿಷ್ಕಲನು ಲಯಶಕ್ತನು ಈಶನು ತತ್ವನುಂ ಎನಿಸಿಕೊಂಡು ಸರ್ವಕಾರಣಕ್ಕೆ ತಾನೇ ಮೂಲ ಕಾರಣನಾಗಿ ಶಿವತತ್ತ್ವವೆನಿಸಿಕೊಳುತ್ತಿರ್ಪಂ. ೫೮೧

ಷಡಂಗ ಸ್ವರೂಪಿಣೆ ಚಿಚ್ಛಕ್ತಿ :

ಮತ್ತಂ ಬಿಂದುವನೊಳಕೊಂಡು, ಸರ್ವಜ್ಞತ್ವ ನಿತ್ಯತೃಪ್ತತ್ವ ಅನಾದಿಸಿದ್ಧಬೋಧತ್ವ ಸ್ವತಂತ್ರತ್ವ ಅಲುಪ್ತಶಕ್ತಿತ್ವ ಅನಂತಶಕ್ತಿತ್ವಮೆಂಬ ಷಡಂಗ ಸ್ವರೂಪಿಣಿಯಾಗಿ ಪರಮ ಪ್ರಕಾಶಮಾದ ಚಿಚ್ಛಕ್ತಿಯಾದೊಡೆ, ಪರಶಿವಂಗೆ ಸಾಕ್ಷಾತ್ ಶರೀರ ಇಂದ್ರಿಯ ಅಂತಃಕರಣಾಶ್ರಯಾದಿಕಂ ತಾನೆನಿಸಿ, ಅಗ್ನಿ-ಅಗ್ನಿಯೂಷ್ಮದಂತೆ, ಸೂರ್ಯ-ಸೂರ್ಯಕಿರಣದಂತೆ ಪರಶಿವನೊಡನೆ ತಾದಾತ್ಮ್ಯ ಸಂಬಂಧದಿಂದೆಸೆದು ತಾನೊಂದೆಯಾದೊಡಂ, ಜ್ಞತ್ವಕರ್ತೃತ್ವಾದಿ ವ್ಯಾಪಾರೋಪಾಧಿ ಭೇದದಿಂ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ವಾಮೆ ಜೇಷ್ಠೇ ರೌದ್ರಿ ಕಾಲಿ ಕಲವಿಕರಣೆ ಬಲವಿಕರಣೆ ಬಲಪ್ರಮಥಿನಿ ಸರ್ವಭೂತದಮನಿ ಮನೋನ್ಮನಿ ಎಂಬಿವು ಮೊದಲಾದ ಅನೇಕ ನಾಮಧೇಯಂಗಳನು ಉಳ್ಳುದೆನಿಸಿ ಭಕ್ತವತ್ಸಲೆಯಾಗಿರ್ಕುಂ. ೫೮೨

ಸರ್ವಾಶ್ರಯ ಶ್ರೀ ಶಂಭುಲಿಂಗ :

ಮತ್ತಂ ಆ ಚಿಚ್ಛಕ್ತಿಯೆಂಬ ತೇಜೋಮಂಡಲ ಮಧ್ಯದಲ್ಲಿ ಸತ್ಯ ಶುದ್ಧ ಸ್ವಯಂ ಪ್ರಕಾಶ ಚಿನ್ಮಾತ್ರ ಸ್ವರೂಪಮಪ್ಪ ಶ್ರೀ ಗುರು ಶಂಭುಲಿಂಗಂ ಒಪ್ಪುತ್ತಿರ್ಕುಂ.

ಬಳಿಕ ಇಂತು ಪೇಳ್ದ ಸಕಲ ದೇಹಾದಿ ವಿಷಯಂಗಳೇ ಕಾಲಾಗ್ನಿ ಮೊದಲಾದ ಭುವನಂಗಳನಾಶ್ರಯಿಸಿಹವು. ಆ ಭುವನಂಗಳೇ ಭೂಮ್ಯಾದಿ ತತ್ತ್ವಂಗಳನಾಶ್ರಯಿಸಿಹವು. ಆ ತತ್ತ್ವಂಗಳೇ ನಿವೃತ್ಯಾದಿ ಕಲೆಗಳನಾಶ್ರಯಿಸಿಹವು. ಆ ಕಲೆಗಳೆ ಬಿಂದುವನು ಆಶ್ರಯಿಸಿಹವು. ಆ ಬಿಂದುವೆ ಚಿಚ್ಛಕ್ತಿಯನ್ನಾಶ್ರಯಿಸಿಹುದು. ಆ ಚಿಚ್ಛಕ್ತಿಯೇ ಶ್ರೀಗುರುಶಂಭುಲಿಂಗವನಾಶ್ರರಯಿಸಿಹುದು. ಆ ಶಂಭುಲಿಂಗವೇ ಸರ್ವಾಶ್ರಯಂ ತಾನಾಗಿ, ತಾನು ಒಂದನೂ ಆಶ್ರಯಿಸದೆ ನಿರ್ವಿಕಾರಸ್ವರೂಪದಿಂ ಸರ್ವಾತ್ಮರ್ಗೆ ಸುಖಕರಮಾಗಿ ವಿರಾಜಿಸುತ್ತಿರ್ಕುಂ. ೫೮೩

ಇತಿ ಶುದ್ಧ ಭುವನಸ್ಥಿತಿ ವರ್ಣನಂ

ಅಷ್ಟಮ ಪರಿಚ್ಛೇದಃ

■■

ನವಮ ಪರಿಚ್ಛೇದ

ಕಂದ॥ ಇಂತಖಿಳ ಭುವನ ಪದ್ಧತಿ
ಯಂ ತಿಳುಪಿದೆನಿನ್ನು ಜೀವರಾ ಭುವನವನೋ ।
ರಂತೆಯ್ದಿ ಕರ್ಮಫಲಮಂ
ಸಂತತಮನುಭವಿಸುವಂದಮಂ ವಿವರಿಸುವೆಂ ॥

ಅದೆಂತೆಂದೊಡೆ :

ಮೂಢತ್ವದಿಂ ನಾಸ್ತಿಕ್ಯ ಬುದ್ಧಿ :

ಅನ್ನೆಬರಂ ಈ ಲೊಕದಲ್ಲಿ ಆತ್ಮಾನಾತ್ಮವಿವೇಕ ಶೂನ್ಯರಾದ ಮೂಢ ಜನಾಂಗಗಳಾದೊಡೆ, ಪ್ರತ್ಯಕ್ಷಮಾದುದನೆ ಒಡಂಬಟ್ಟು ಅನುಮಾನ ಆಗಮಾದಿ ಪ್ರಮಾಣಂಗಳನು ಉದಾಸೀನಂ ಮಾಡಿ, ನಾನು ಹ್ರಸ್ವನು, ನಾನು ದೀರ್ಘನು, ನಾನು ಕೆಂಚನು, ನಾನು ಬಡವಾದೆನು ನಾನು ತೋರವಾದೆನು ಎಂಬಿವು ಮೊದಲಾದ ತಮ್ಮ ಅನುಭವಗಳಿಂ, ಬಳಿಕ ಈದೇಹಮಂ ಸೀಳಿನೋಡಿದಡೆಯೂ ಒಳಗೊಬ್ಬ ಆತ್ಮನಂ ಕಾಣಬಾರದು ಎಂಬಿವು ಮೊದಲಾದ ಯುಕ್ತಿಗಳಿಂದವೂ, ಆ ದೇಹವೇ ಆತ್ಮನೆಂದು ಬಗೆದು, ಬೆಳಗುತ್ತಿರ್ದ ದೀಪಂ ಕೆಟ್ಟಮೇಲೆ, ಅದಕ್ಕೆ ಮರಳಿ ತೋರ್ಕೆಯಿಲ್ಲದಂತೆ, ದೇಹವಳಿದಡೆ ಬೇರೊಬ್ಬಾತ್ಮನಿಲ್ಲಾಗಿ ಸ್ವರ್ಗನರಕಗಳನೆಯ್ದಿ ಮರಳಿ ಜನಿಸುವತನವಿಲ್ಲ. ಅದರಿಂ ದೇಹವೇ ಆತ್ಮನು, ಮರಣವೇ ಮೋಕ್ಷ, ಸುಖವೇ ಸ್ವರ್ಗ, ದುಃಖವೇ ನರಕ ಇಂತಲ್ಲದೆ ಬೇರೊಂದು ತೆರನಿಲ್ಲಾಗಿ, ವಿಧಿ ನಿಷೇಧ ಪುಣ್ಯ ಪಾಪವಿಲ್ಲವೆಂದು ನಾಸ್ತಿಕ ಬುದ್ಧಿಯಂ ಗಳಹುತ್ತರ್ಪರ್ ಅದಕ್ಕೆ ಪರಿಹಾರಮೆಂತೆನೆ. ೫೮೪

ವಿಚಾರದಿಂದ ಆಸ್ತಿಕ್ಯ ಸಿದ್ಧಿ :

ಲೋಕದೊಳು ಒಂದರೊಳು ಒಂದಿಲ್ಲದ ಬಾಲ್ಯ ಯೌವನ ವಾರ್ಧಿಕ್ಯಂಗಳೆಂಬ ನಾನಾವಸ್ಥೆಯನೆಯ್ದುವ ಈ ದೇಹದೊಳು ಆತ್ಮನೋರ್ವನು ಎಂಬುವ ಬಾಲ್ಯದಲ್ಲಿ ಅನುಭವಿಸಿರ್ದ ಅರ್ಥಮಂ, ವಾರ್ಧಿಕ್ಯದಲ್ಲಿ ಸ್ಮರಿಸುತ್ತಿರ್ಪುದರಿಂದ ಅನುಭವಿತೃ, ಸ್ಮರ್ತೃವೊಬ್ಬನೆ ಅಕ್ಕುಂ ಅದಾಗಿ, ಪ್ರತ್ಯಭಿಜ್ಞಾನ ಪ್ರಮಾಣ ಸಿದ್ಧಮಪ್ಪುದು. ಅದು ಎಂತು ಅಂತೆ.

ಪೂರ್ವದಲ್ಲಿ ಹೋದ, ಮುಂದೆ ಬರಲುಳ್ಳ ಶರೀರಂಗಳಲ್ಲಿಯೂ ಆತ್ಮನೊಬ್ಬನೇ ಎಂಬುದು, ಮುನ್ನಲಿವಂ ಪುಣ್ಯಾಧಿಕನು, ಮುನ್ನಲೀತಂ ಪಾಪಿಷ್ಟನೆಂದು ಲೋಕ ಪ್ರಸಿದ್ಧಮಾದ ಸುಖ ದುಃಖ ತಾರತಮ್ಯದಿಂದ ಅರಿಯಲ್ತಕ್ಕುದಾಗಿಯುಂ, ಆಗ ಪುಟ್ಟಿದಕರು ತಾಯಮೊಲೆಯುಂಬ ಪೂರ್ವಸಂಸ್ಕಾರಂ ದೃಷ್ಟಮಪ್ಪುದಾಗಿಯುಂ; ಮೃತರಾಗಿ ಕೂಡಲೇ ಚೇತನಂ ಬಡೆದು ಯಮಲೋಕಾದಿಗಳಲ್ಲಿ ತಮಗಾದ ಬಾಧೆ ಮೊದಲಾದವರ ಕುರುಹುದೋರ್ಹವರಂ ಕಾಣ್ಬವಾಗಿಯುಂ; ರತಿಕಾಮ ಬಲಿಕಾಮ ಹಂತುಕಾಮಾದಿ ಗ್ರಹವಿಷ್ಟರಂ ಮಂತ್ರವಾದಿಗಳು ನುಡಿಸೆ, ಮುನ್ನನಾವು ಈ ಪ್ರಕಾರದವರು, ಏಗಳು ಇಂತಾದೆವು, ಇನ್ನು ನಾನಾವ ಪ್ರಕಾವುಅಪ್ಪುವೆಂದು ತಮ್ಮ ಪೂರ್ವಾಪರ ಸ್ಥಿತಿಗಳಂ ಪೇಳ್ವ ಬ್ರಹ್ಮರಾಕ್ಷಸ, ಭೂತ, ವೇತಾಲರ ಮಾತುಗೇಳ್ವವಾಗಿಯುಂ; ಬಳಿ ಈ ದೇಹೋತ್ಪತ್ತಿಯೆಂಬುದು ಪೂರ್ವ ಜನ್ಮದಲ್ಲಿ ಕರ್ತೃಮಾಡಿದ ಕರ್ಮಾಧೀನದಿಂದ, ಈಗಳು ಆತನ ಭೋಗಸಾಧನಮಾಗಿಯ ಜನಿಸಿತ್ತೆಂಬುದನು ಒಡಂಬಡದೆ, ತಾನೇ ಅಯಿತ್ತೆನೆ, ಕಾರಣಮಿಲ್ಲದೆ, ಸಕಲ ಕಾರ್ಯವು ಇಂತಾಗಬೇಕೆಂಬ ಅಕೃತಾಭ್ಯಾಗವು ರೂಪ ಬಾಧೆಯುಂಟಾಗಿಯುಂ; ಬಳಿಕ ಮುಳ್ಳಿಗೆ ಕೊನೆ, ಕೋಗಿಲೆಗೆ ಸುಸ್ವರ ನೈಜಮಾದಂತೆ, ಪುರುಷನ ವೀರ್ಯಕ್ಕೆ ದೇಹವಹುದೇ ಸ್ವಭಾವಮೆಂತೆಂದೊಡೆ: ದಿನದಿನದಲ್ಲಿ ವ್ಯರ್ಥಮಾಗಿ ಪೋಗುವ ವೀರ್ಯದಿಂದ ಅದು ಘಟಿಸದಾಗಿಯುಂ; ಬಳಿಕ, ಲೋಕದನ್ನಿ ಸರ್ವಜನವೆಲ್ಲಂ ಬಹುಪ್ರಯಾಸದಿಂ ಮಾಳ್ವ ಯಜ್ಞ ದಾನ ವ್ರತೋಪಾಸನಾದಿ ಪುಣ್ಯಫಲಮಂ ಮೇಲೆ ಅನುಭವಿಸುವಾತನಿಲ್ಲದೊಡೆ, ಕೃತನಾಶವೆಂಬ ದೋಷಮುಂಟಾಗಿಯುಂ; ಬಳಿಕ ನನ್ನ ಮನೆ, ನನ್ನ ಧನಮೆಂಬಲ್ಲಿ ಎಂತಂತೆ, ನನ್ನ ದೇಹಮೆಂಬಲ್ಲಿಯೂ ದೇಹದೆಹಿಗಳ ಭೇದಮಂ ಸೂಚಿಪ ಮುಕ್ತಿಯುಂಟಾಗಿಯುಂ; ಬಳಿಕ ದೇಹವು ಆತ್ಮನಲ್ಲ, ಭೂತಕಾರ್ಯವಾದ ಕಾರಣಮಾಗಿ ಘಟದಂತೆ ಎಂಬ ಅನುಮಾನಮುಂಟಾಗಿಯುಂ; ದೀಕ್ಷೆ ವಡೆದಾತಂಗೆ ಮಂತ್ರ ಸಂಸ್ಕಾರದಿಂ ಪಾಪಕ್ಷಯಂ ಪ್ರತ್ಯಕ್ಷಮಪ್ಪುದಂತೆ, ಚಂದ್ರಸೂರ್ಯ ಗ್ರಹಣಾದಿಗಳಂ ಪೇಳ್ವ ಶಾಸ್ತ್ರಂ ತಪ್ಪದಂತೆ, ದೇಹ ಅನ್ಯನ್ ಆತ್ಮನೆಂಬ ಆಗಮ ಪ್ರಮಾಣದಲ್ಲಿ ಪುಸಿಪೊರ್ದದಾಗಿಯುಂ; ದೇಹವಿಲಿಕ್ಷಣನಾದ ಓರ್ವ ಆತ್ಮನುಂಟೆಂಬುದೇ ಸಿದ್ಧಮಕ್ಕುಂ. ೫೮೫

ಪಿತೃಯಾನ–ಸ್ವರ್ಗಲೋಕ ಪ್ರಾಪ್ತಿ :

ಮತ್ತಂ ದೇಹಾನ್ಯಾತ್ಮನು ನಿತ್ಯವ್ಯಾಪಕ ಚೈತನ್ಯರೂಪನಾದೊಡಂ ತನ್ನ ಅಜ್ಞಾನಬಲದಿಂ, ಕಮಾದೀನದಿಂ, ಈಶ್ವರಪ್ರೇರಣಯಿಂ ಘಟಾಕಾಶದಂತೆ ಸೂಕ್ಷ್ಮಶರೀರದ ಎಡೆಯಾಟವೆ ತನ್ನ ಎಡೆಯಾಟವಾಗಿ, ಸಕಲ ಲೋಕದಲ್ಲಿಯ ಸುಖದುಃಳಂಗಳಂ ಮುಕ್ತಿಯಪ್ಪನ್ನಬರಂ ಅನುಭವಿಸುತ್ತಿರ್ಪನೆಂಬುದೇ ಸತ್ಯವು, ಅದೆಂತೆಂದೊಡೆ:

ಕರ್ಮಭೂಮಿ ಎನಿಸುವ ಈ ಲೋಕದಲ್ಲಿ ಆರವೆ ಕೂಪ, ತಟಾಕಾದಿ ಪೂರ್ತವೆಂಬ ಪೆಸರನುಳ್ಳ ಪುಣ್ಯವಿಶೇಷದಲ್ಲಿ ತತ್ಪರರಾದ ಲೌಕಿಕರ್ಗೆಯೂ; ಜೋತಿಷ್ಟೋಮ, ಅಶ್ವಮೇಧಯಾಗದಂತಹ ಇಷ್ಟಮೆಂಬ ಪೆಸರನುಳ್ಳ ಕರ್ಮನಿಷ್ಟಗೆಯೂ; ವಾಮ

ನಾಸಾಪುಟದ ಈಡೆಯಂಬ ನಾಡಿಮಾರ್ಗದಿಂ ಪ್ರಾಣತ್ಯಾಗಮಾಗೆ, ಮೊದಲು ಧೂಮವನೆಯ್ದಿ, ಧೂಮದಿಂ ರಾತ್ರಿ, ರಾತ್ರಿಯಂ ಕೃಷ್ಣಪಕ್ಷ, ಆ ಕೃಷ್ಣಪಕ್ಷದಿಂ ದಕ್ಷಿನಾಯನ, ಆ ದಕ್ಷಿಣಾಯನದಿಂ ಸಂವತ್ಸರ, ಆ ಸಂವತ್ಸರದಿಂ ಪಿತೃಲೋಕ, ಆ ಪಿತೃಲೋಕದಿಂ ಆಕಾಶ, ಆ ಆಕಾಶದಿಂ ಚಂದ್ರ, ಆ ಚಂದ್ರನಿಂದ ಅಡರಿ ಮೇಲೆ ಈ ಕ್ರಮದಿಂ ಸ್ವರ್ಗಲೋಕ ಪ್ರಾಪ್ತಿಯಕ್ಕುಂ. ೫೮೬

ಪುಣ್ಯಕ್ಷಯದಿಂ ಪುನರಾವೃತ್ತಿ–ಮಲೋತ್ಪತ್ತಿ :

ಮತ್ತಂ ಆ ಸ್ವರ್ಗದೊಳು ಇಂದ್ರನ ಸಾಲೋಕ್ಯ ಸಾಮೀಪ್ಯಾದಿ ಪದಸ್ಥರಾಗಿ, ಬಳಿಕ ಅಲ್ಲಿ, ಪ್ರಿಯವಿಷಯ ಭೋಗ, ಮೋಕ್ಷಕ್ಷಯದುಃಖ, ಅನ್ಯರಅತಿಶಯ ಸುಖಮಂ ಸೈರಿಸದ ದುಃಖ, ಪತನಭಯದುಃಖವೆಂಬ ದುಃಖತ್ರಯಮಂ, ಬಂದು ಬಂದಡಿಗಡಿಗೆ ಮುಸುಕುತ್ತಿರ್ದ ವನಿತಾದಿ ಮಹಾಸುಖ ಭೋಗಿವನುಂಡು, ತೀರೆ ಪುನರಾವೃತ್ತಿ ಘಟಿಸುವ ಸಮಯದಲ್ಲಿಯು, ಮೊದಲು ಗಗನ, ಆ ಗಗನದಿಂ ವಾಯು, ಆ ವಾಯುವಿನಿಂ ಧೂಮ, ಆ ಧೂಮದಿಂ ಮೇಘ, ಆ ಮೇಘದಿಂ ವೃಷ್ಟಿ, ಆ ವೃಷ್ಟಿಯಿಂ ಶಾಲ್ಯಾದ್ಯನ್ನವು, ಆ ಅನ್ನರೂಪದಿಂದ ಈ ಕ್ರಮದೊಳೆಯ್ದಿಬರೆ, ಬಳಿಕ ಆ ಪಂಚಭೂತಾತ್ಮಕವಾದ ಅನ್ನವೆ, ಭಕ್ಷ್ಯ ಭೋಜ್ಯ ಲೇಹ್ಯ ಚೋಹ್ಯ ಪಿಚ್ಛಲ ಪಾನೀಯವೆಂದು ಷಡ್ವಿಧವಾಗಿವುದು. ಅದನೆ ಜಾಯಾಪತಿಗಳು ಭುಂಜಿಸಲು ಅದಾದೊಡೆ ಉದರಾಗ್ನಿಯಿಂ ಪಚಿಸಿ ಕಿಟ್ಟವೆಂದು ರಸವೆಂದು ಇತ್ತೆರನಹುದು. ಆ ಕಿಟ್ಟವೆ ಮಲಮೂತ್ರವೆನಿಸಿ ಗುದಗುಹ್ಯದ್ವಾರದೊಳು ಅಪಾನವಾಯು ವ್ಯಾಪಾರದಿಂ ಪೊರಮಟ್ಟು ಪೋಪುದು. ಮತ್ತಂ ಆರಸವನೆ ನಾಭಿ ಸ್ವಾನದಲ್ಲಿರ್ದ ಸಮಾನವಾಯು ಸರ್ವಾಂಗಕ್ಕೆ ಹಂಚಿಕೊಡಲು ಆ ರಸವು ಅಲ್ಲಲ್ಲಿ ಪಚಿಸಿ ಮತ್ತೆ ಕಿಟ್ಟಮೆಂದು, ರಸಮೆಂದು ಎರಡು ಪ್ರಕಾರವಹುದು. ಆ ಕಿಟ್ಟವೆ ಕಫ ಸ್ವೇದ ಮಲ ಮೂತ್ರ ಜಿಹ್ವಾಮಲ ದಂತಮಲ ನಾಸಾಮಲ ನೇತ್ರಮಲ ಶ್ರೋತ್ರಮಲ ಗುದಮಲ ಗುಹ್ಯಮಲ ನಖಮಲಗಳೆಂಬ ದ್ವಾದಶವಿಧ ಮಲ ರೂಪದಿಂದ ಓಸರಿಸಿ ಪೋಪುದು. ಉಳಿದ ರಸವೆ ಸ್ಥೂಲರಸ ಸೂಕ್ಷ್ಮರಸವೆಂದು ದ್ವಿವಿಧವಹುದು. ಅದರಲ್ಲಿ ಸೂಕ್ಷ್ಮರೂಪರಸದಿಂ ಪ್ರಾಣ ಇಂದ್ರಿಯ ಅಂತಃಕರಣಾದಿಗಳೆಲ್ಲಂ ಪರಿಪೋಷಿಸುತ್ತಿಹವು. ೫೮೭

ಪಿಂಡೋತ್ಪತ್ತಿ :

ಮಿಕ್ಕ ಸ್ಥೂಲರೂಪರಸದಿಂ ರುಧಿರ ಮಾಂಸ ಮೇಧಸ್ಸು ಸ್ನಾಯು ಅಸ್ಥಿ ಮಜ್ಜೆ ಶುಕ್ಲವೆಂಬ ಸಪ್ತಧಾತುಗಳು ಕ್ರಮದಿಂ ವರ್ಧಿಸಲು, ಆ ಜೀವನು ಆದೊಡೆ ಆಯಾಯ ಧಾತುಮಯನಾಗಿ ಪುರುಷನ ಗರ್ಭದಲ್ಲಿ ಮಾಂಸತ್ರಯಮಿರ್ದು ಮೇಲೆ ಸ್ತ್ರೀ ಪುರುಷರ ಸಂಭೋಗ ಸಮಯದೊಳು ಆ ಪಿಂಡವೆ ಕಾಲಕರ್ಮವಶದಿಂ ಶುಕ್ಲ ಸಂಬಂಧದಿಂದಿಳಿದು ಸ್ತ್ರೀ ಋತುಮತಿಯಾದ ದಿನಂ ತೊಡಗಿ ಹದಿನೈದುದಿನ ಪರಿಯಂತರಂ ತುರುವೆಯ ಕುಸುಮದಂತೆ ವಿಕಸಿತಮಾಗಿರ್ದ, ನಿರ್ದೋಷಮಾದ ಗರ್ಭಾಶ್ರಯುಮೆಂಬ ಕೋಶಮಂ ವಾಯುವಶದಿಂ ಪ್ರವೇಶವಹುದು. ಆ

ವಾಯುವಿಕಾರದಿಂದ ಶುಕ್ಲವೆರಡಾಗಿ ಜರಾಯುಜವೆಂಬ ಮಾಂಸಕೂರ್ಪಾಸಮನ್ ಆಶ್ರಯಿಸಿ, ಜವಳಿ ಪಿಂಡವು ಉದಿಸುತ್ತಿಹುದು. ಅಲ್ಲಿ ಉದರಾಗ್ನಿಯಿಂದ ಅನ್ನಾದಿಕವೆಲ್ಲ ಪಚಿಸಿ ಪೋಗುತ್ತಿರಲು ಆ ಶುಕ್ಲಪಿಂಡಂ ಸುಸ್ಥಿತಿ ಮಾಗಿಹುದು. ಎಂತೆನಲು, ಆ ಶುಕ್ಲಮಯ ಪಿಂಡಕ್ಕೆ ವಹ್ನಿಸೆಕೆ ಸೋಂಕದಂತೆ ಮೇಲೆ ನೀರ ಪೊಟ್ಟಣವಿಹುದು. ಅದರ ಮೇಲೆ ಅಗ್ನಿಯನು ಊರ್ಧ್ವಮುಖವಾಗಿಯೆ ವಾಯು ನಿರೋಧಿಸಿಕೊಂಡಿಹುದರಿಂ, ಕೆಳಗಿರ್ದ ಶುಕ್ಲಪಿಂಡಂ ಬೆಂದು ಕೆಡದೆ ಶುಕ್ತಿಯಲ್ಲಿ ಬಿರ್ದ ಸ್ವಾತಿಯುದಕ ಬಲಿದು ಮುತ್ತಾಗುವಂತೆ, ಆ ಪಿಂಡಮಯವಾದ ಪುರುಷನ ವೀರ್ಯಂ ಸ್ತ್ರಿರಕ್ತದೊಡವೆರೆದು ಒಂದು ದಿನಕ್ಕೆ ಕಲಲವಹುದು. ಐದುದಿನಕ್ಕೆ ಬೊಬ್ಬುಳಿಕೆಯಹುದು, ಹತ್ತುದಿನಕ್ಕೆ ರಕ್ತಾತ್ಮಕವಹುದಿ, ಹದಿನೈದುದಿನಕ್ಕೆ ಮಾಂಸಮಯವಾದ ಅಂಡಾಕಾರವಹುದು, ಇಪ್ಪತ್ತುದಿನಕ್ಕೆ ಬಲಿಕೆಯಹುದು, ಇಪ್ಪತ್ತೈದುದಿನಕ್ಕೆ ಅಲ್ಲಿ ಪಂಚಾಂಕುರ ಸೀಮೆದೋರ್ಹುದು. ತಿಂಗಳೊಂದಕ್ಕೆ ಶಿರಸ್ಸು ಪುಟ್ಟೂದು, ತಿಂಗಳೆರಡಕ್ಕೆ ಭುಜಂಗಳುದಿಸುತ್ತಿಹವು. ಮೂರು ತಿಂಗಳಿಗೆ ಪಾದಾಂಕುರ ಕೇಶ ಗುಹ್ಯಾದಿಗಳಹವು. ನಾಲ್ಕು ತಿಂಗಳಿಗೆ ನಾಸಾಕ್ಷಿ ಶ್ರೋತ್ರಾದಿ ರಂಧ್ರಂಗಳಹವು; ತಿಂಗಳೈದಕ್ಕೆ ಸ್ಕಂದ ಜಠರಾದಿಗಳಹವು. ತಿಂಗಳಾರಕ್ಕೆ ಗುದ ಪಾದಾಂಗುಲಿಗಳಹವು. ಏಳು ತಿಂಗಳಿಗೆ ಸರ್ವಾಂಗ ಸಂಧಿ ಸಂಪೂರ್ಣಮಾಗಿ ಚೇತನಂಪುಟ್ಟಿ, ಮಾತೆಯುಂಡ ಅನ್ನರಸಮಂ ನಾಭಿ ಸೂತ್ರದಿಂದ ಉಣುತ್ತಿಹುದು. ಎಂಟು ತಿಂಗಳಿಗೆ ಆ ಗರ್ಭಾಶ್ರಯಮೆಂಬ ರೌರವ ನರಕದ ಮಲ ಮೂತ್ರಾದಿಗಳ ಹೇಸಿಕೆಯೆಂಬ ಬಚ್ಚಲು ಪುಳುವಿನಂತೆ ಮಹಾದುಃಖವನು ಅನುಭವಿಸುತ್ತೆ ವಿಚಾರಿಸಿ ನೋಡಿ, ಮುನ್ನ ನಾನು ಅಜ್ಞಾನಬಲದಿಂ ಶಿವಜ್ಞಾನ ಹೀನನಾಗಿ ಇಂತು ನಾನಾಜನ್ಮಂಗಳಲ್ಲಿ ತೊಳಲಿಬಳಲಿದೆನು. ಇನ್ನು ಈ ಗರ್ಭಾಶ್ರಯದಿಂದ ಎಂತಕ್ಕೆ ಪೊರಿಮಟ್ಟು ಶ್ರೀಗುರುವನೆಯ್ದಿ ಶಿವಭಕ್ತಿ ಶಿವಜ್ಞಾನ ಶಿವಧ್ಯಾನ ಶಿವಾರ್ಚನೆ ಶಿವವ್ರತ ಶಿವಮಾಹೇಶ್ವರ ಸಂಸರ್ಗಾದಿ ಸಂಪನ್ನನಾಗಿ ಜನ್ಮಜರಾಮರಣರೂಪ ಸಂಸಾರಸಾಗರಮಂ ದಾಂಟುವೆನೆಂದು ತನ್ನ ಪೂರ್ವಾಪರ ಸ್ಥಿತಿಗತಿಗಳಂ ಗರ್ಭೋಪನಿಷತ್ ಸಮ್ಮತದಿಂ ನೆನನೆವುತ್ತಿಹುದು. ೫೮೮

ಬಳಿಕ ಆ ಮಾತೆಯುಂಡ ಮಧುರ ಆಮ್ಲ ತಿಕ್ತ ಕಟು ಕಷಾಯ ಲವಣೀಮೆಂಬ ಷಡ್ವಿಧರಸಾನ್ನ ಪರಿಣಾಮ ಭೇದದಿಂ; ಶ್ವೇತ ಪೀತ ಕಪೋತ ಹರೀತ ಕೃಷ್ಣ ಮಾಂಜಿಷ್ಟವೆಂಬ ಷಡ್ವರ್ಣವಾಂತು; ಶುಕ್ಲಾಧಿತ್ಯದಿಂ ಪುರುಷನು, ಶೋಣಿತಾಧಿಕ್ಯದಿಂ ಸ್ತ್ರಿಯು, ಶುಕ್ಲಶೋಣಿತ ಸಮತ್ವದಿಂ ನಪುಂಸಕನೆನಿಸಿ; ಶುಭಕರ್ಮದಿಂ ಸಲ್ಲಕ್ಷಣ ಶರೀರಂದಳೆದು, ಹೀನ ಕರ್ಮದಿಂ ಬದಿರ ಅಂಧ ಪಂಗುಳನಾಗಿ; ಬಳಿಕ ಆ ಶುಕ್ಲ ಶೋಣಿತಂಗಳಿಗೆ ಕ್ರಮದಿಂ ಮೂರುಮೂರಾದ ರೋಮ ನಾಡಿ ಅಸ್ಥಿ ರಕ್ತ ಮಾಂಸ ತ್ವಕುಗಳೆಂಬ ಷಟ್‌ಕೌಶಿಕಯುಕ್ತಮಾದ; ಅಂಗ ಪ್ರತ್ಯಂಗಾದಿಕವೆಲ್ಲಂ ಸಂಪೂರ್ಣಮಾಗಿ; ಆಯುಷ್ಯ ಕರ್ಮ ದ್ರವ್ಯ ವಿದ್ಯೆ ಮರಣವೆಂಬ ಐದು ನಿಯತಮಾದ ವಿಧಿಲಿಖಿತಂಬಡೆದು, ಅಲ್ಲಿ ಪಿರಿದಾಯಾಸಂಗೊಳುತ್ತಿರೆ, ನವಮಾಸಂ ತುಂಬೆ, ಮೇಲೆ ಒಂದುಕೋಟಿ

ಮುದ್ಗರವೆರಸಿದಂತೆ ಪೊಡೆದು ಕೆಡಪುವ ಸೂತಿವಾಯುವಿನ ಘಾತಿಯಿಂ ದಿಮ್ಮುದಿರುಗಿ, ದಿಗ್ಭ್ರಾಂತಿ ಪುಟ್ಟಿ, ಮೊದಲ ವಿವೇಕಂ ಕೆಟ್ಟು ಉಪಮಿಸಬಾರದ ವೇದನೆಯಿಂ ಕರ್ಬೊನ್ನು ಸರಿಗೆಯಪ್ಪಂತೆ, ಯೋನಿದ್ವಾರದಿಂ ಪೊರಮಟ್ಟು, ಮೂರ್ಛಿಸಿ, ಮೆಲ್ಲಮೆಲ್ಲನೆ ಚೇತರಿಸಿ ಕ್ರಮದಿಂದ ಆಯಾಯ ಜಾತಿ ಸಂಸ್ಕಾರವಳಪಟ್ಟು, ಕೆಂಬರ ಈರಲು ಗುಳಿ ಬಾಲಗ್ರಹಾದಿ ಕಂಟಕಂಗಳಂ ಕಳಿದು, ಬಾಲಲೀಲೆ ಮುಂತಾದ ವಿನೋದಂಗಳಂ ನಟಿಸಿ, ವೃದ್ಧಸಂಕೇತದಿಂದ ಆಯಾಯ ಜಾತಿ ಭಾಷೆಗಲಿತು, ಬಳಿಕ ಆ ಗರ್ಭದೊಳಗೆ ಮೂರು, ಹೊರಗೆ ಮೂರು ವರ್ತಿಸುವ ಜಾಯತೆ, ಅಸ್ಥಿತೆ, ಮರಿಣಮತೆ, ವಿವರ್ಧತೆ, ಅವಕ್ಷತೆ ವಿನಶ್ಯತೆ, ಎಂಬ ಷಡ್ಭಾವ ವಿಕಾರಮುಳ್ಳಾತನೆನಿಸಿ, ಪುಣ್ಯಶೇಷದಿಂ ಬ್ರಾಹ್ಮಣಾದಿ ವಿಶಿಷ್ಟ ಜನ್ಮಿ, ಪಾಪಶೇಷದಿಂ ಶುನಕ ಸೂಕರಾದಿ ಹೀನ ಯೋನಿಜನೆನಿಸಿ, ಮತ್ತಂ ಆ ಕರ್ಮವೈಚಿತ್ರದಿಂ ಪುರುಷನೆ ಸ್ತ್ರಿಯಾಗೆ, ಸ್ತ್ರೀಯ ಪುರುಷನಾಗಿ ಪುಟ್ಟಿ, ಬಳಿಕ ಇಲ್ಲಿ ಮಾಳ್ಪ ಪುಣ್ಯದಿಂ ದೇವತ್ವಮಂ, ಪಾಪದಿಂ ಸ್ಥಾವರತ್ವಮಂ, ಪುಣ್ಯಪಾಪ ಸಮಾನದಿಂ ಮನುಜತ್ವಮಂ ಮುಂದೆ ಪಡೆಯಲು ಉಳ್ಳಾತನಾಗಿ ಈ ಪ್ರಕಾರದಿಂ ಸ್ವರ್ಗಲೋಕಾದಿಕವನೆಯ್ದಿ ಮರಳಿ ಇಂತು ಜನಿಪುದೆ ಪಿತೃಯಾನಮಕ್ಕುಂ. ೫೮೯

ದೇವಯಾನ :

ಬಳಿಕ ಬ್ರಹ್ಮ ವಿಷ್ಣು ರುದ್ರಾದಿ ಸಗುಣದೇವತಾಮೂರ್ತಿ ಉಪಾಸಕರಾಗಿರ್ದು, ಆಯಾಯಾ ಭಕ್ತರ್ಗೆ ದಕ್ಷಿಣನಾಸಾಪುಟದ ಪಿಂಗಲೆಯೆಂಬ ನಾಡಿ ಮಾರ್ಗದಿಂ, ಪ್ರಾಣ ಮಿಯೋಗಮಾಗೆ, ಮೊದಲು ಜ್ವಾಲೆಯನೆಬ್ದಿ, ಜ್ವಾಲೆಯಿಂ ದಿವಸ, ಆ ದಿವಸದಿಂ ಶುಕ್ಲಪಕ್ಷ, ಆ ಶುಕ್ಲಪಕ್ಷದಿಂದ ಉತ್ತರಾಯಣ, ಅದರಿಂ ಸಂವತ್ಸರ, ಆ ಸಂವತ್ಸರದಿಂ ವಾಯು, ವಾಯನಿನಿಂ ಸೂರ್ಯ, ಆ ಸೂರ್ಯನಿಂ ಸುಧಾಂಶು, ಆ ಸುಧಾಂಶುವಿಂ ಮಿಂಚು, ಮಿಂಚಿನಿಂದ ಇಂದ್ರ, ಅ ಇಂದ್ರನಿಂದ ಅಡರಿ ಮೇಲೆ ಈ ಕ್ರಮದಿಂದ ಆ ಬ್ರಹ್ಮ ವಿಷ್ಣು ರುದ್ರಾದಿ ದೇವತಾ ಲೋಕ ಪ್ರಾಪ್ತಿಯಹುದು. ಅಲ್ಲಿ ಬ್ರಹ್ಮನ ಕಾಮಧೇನು, ವಾಹನ ಹಂಸಾದಿಗಳೆಂತತಂತೆ, ಆಯಾಯ ದೇವತಾ ಲೋಕದಲ್ಲಿಹತನವೇ **ಸಾಲೋಕ್ಯವೆನಿಸೂದು**. ಮತ್ತಂ ಆ ಬ್ರಹ್ಮ ಸಂಬಂಧಮಾದ ಸಾವಿತ್ರ್ಯಾದಿ ಮಂತ್ರಶಕ್ತಿಗಳೆಂತು ಅಂತೆ ಆಯಾಯ ದೇವತೆಗಳತ್ಯಂತ ಸಮೀಪಸ್ಥಿತಿಯೇ **ಸಾಮಿಪ್ಯವೆನಿಸೂದು**. ಮತ್ತಂ ಆ ವಿಷ್ಣು ಸಂಬಂಧಮಾದ ಶಿಶುಪಾಲಾದಿಗಳು ಎಂತು ಅಂತೆ ಆಯಾಯ ದೇವತೆಗಳೊಡನೆ ಏಕದೇಹಲಕ್ಷಣವೆ **ಸಾಯುಜ್ಯವೆನಿಸೂದು**. ಮತ್ತಂ ಆ ಶಿವಸಂಬಂಧಮಾದ ನಂದೀಶ್ವರಾದಿಗಳೆಂತು ಅಂತೆ ಆಯಾಯ ದೇವತಾ ಸಮಾನಮಾದ ಐಶ್ವರ್ಯವೇ **ಸಾರೂಪ್ಯವೆನಿಸೂದು**. ಬಳಿಕ ಈ ಪ್ರಕಾರಮಾದ ಐದು ಪದ ತಾರತಮ್ಯದಿಂದಾದ ಅಯಾಯ ದೇವತಾಲೋಕಂಗಳಲ್ಲಿ ಮಹ ಸುಖದಿಮದ ಇರ್ದು, ಬಳಿಕ, ಅಲ್ಲಿಯ ಪ್ರಳಯಕಾಲದೊಳಗೆ ಆಯಾಯ ದೇವತೆಯೊಡಗೂಡಿಯಾದೊಡಂ, ಅಲ್ಲ ಮತ್ತೆ ಅಲ್ಲಿ ವೈರಾಗ್ಯದಿಂದಾದೊಡಂ ಸಮ್ಯಜ್ಞಾನಬಲದಿಂ ನಿಜಮೋಕ್ಷಮಕ್ಕುಂ.

ಬಳಿಕ ಎತ್ತಲಾನು ಅಲ್ಲಿಂದ ಇಲ್ಲಿಗೈತಂದರೂ ಪುನರಾವೃತ್ತಿ ಲಕ್ಷಣ ಸಂಸಾರಮೋಹಕವಿಲ್ಲದೆ ಜಗದ್ಧಿತಾರ್ಥಮೆನಿಸಿ ಉಭಯಕುಲಶುದ್ಧರಾದ

ಶ್ರೀಮಾನ್ನುಗಳಗರ್ಭದಲ್ಲಾದರೂ, ಸಂಪ್ರದಾಯಸಿದ್ಧರಾದ ಆಚಾರ್ಯಕುಲದೊಳಾದೊಡಂ ಜನಿಸಿ, ಮೇಲೆ ಜ್ಞಾನ ಕ್ರಿಯಾ ಸಂಪನ್ನರಾಗಿ ಸಹಜ ಕೈವಲ್ಯಂ ಬಡೆವರು. ಇದೇ ದೇವಯಾನಮಕ್ಕುಂ. ೫೯೦

ಯೋಗ ಸಿದ್ಧರ ಗತಿ :

ಬಳಿಕ ಯಮ ನಿಯಮಾದಿ ಅಷ್ಟಾಂಗಯೋಗ ಸಿದ್ಧರಾದ ಯೋಗೀಶ್ವರರ್ಗೆ, ರೇಚಕಾದಿ ಸಪ್ತ ಪ್ರಾಣಾಯಾಮ ಬಲದಿಂ ಸುಷುಮ್ನ ನಾಡಿಮಾರ್ಗದಲ್ಲಿ ಶಿರೋರಂದ್ರದಿಂ ಪ್ರಾಣೋತ್ಕ್ರಾಂತಮಾಗೆ, ಮಕಾಮದಿಂ ಸ್ವೇಚ್ಛಾಲೋಕ ಪ್ರಾಪ್ತಿ, ನಿಷ್ಕಾಮದಿಂ ಬ್ರಹ್ಮಲೋಕಾದಿ ವ್ಯವಧಾನಮಿಲ್ಲದೆ, ತತ್ತ್ವಾತೀತಮಾದ ಶಿವತತ್ವ ಪ್ರಾಪ್ತಿಯಕ್ಕುಂ. ೫೯೧

ಜ್ಞಾನಿಗಳ ಗತಿ :

ಬಳಿಕ ವಿಶಿಷ್ಟಜ್ಞಾನ ದೀಕ್ಷಾಸಂಪನ್ನರ್ಗೆ ಜೀವನ್ಮುಕ್ತಿ ಸಿದ್ಧಿಸಿತ್ತಾಗಿಯುಂ, ಪೂರ್ಣಸ್ವರೂಪದಲ್ಲಿ ಗಗನದಂತೆ ಗಮನಾಗಮನವಿಲ್ಲಾಗಿಯುಂ, ನಾಡಿ ಮಾರ್ಗನಿಯಮವಿಲ್ಲದೆ ಕಾಶಿಯಲ್ಲಾಗಲಿ ಹೀನಾಶ್ರಯದಲ್ಲಾಗಲಿ, ಅರಿವು ಮರವೆಗಳಿಂದಾಗಲಿ, ಆವ ಪ್ರಕಾರದಿಂ ಪ್ರಾಣ ಪ್ರಯಾಣಮಾದರೂ ಮೇಲೆ ನಿಜಮೋಕ್ಷ ವಹುದುದೆಂಬುದೇ ಸಿದ್ಧಮಕ್ಕುಂ. ೫೯೨

ಪಾಪಿಗಳಗತಿ :

ಮತ್ತಂ ಆ ಕರ್ಮ ಭಕ್ತಿ ಯೋಗ ಜ್ಞಾನಾದಿ ಪುಣ್ಯಹೀನರಾದ ಪಾಪಾತ್ಮರ್ಗೆ ತೃಣಜಳೂಕನ್ಯಾಯದಿಂ, ಯಾತನಾಶರೀರವಿಡಿದು, ಗುದಗುಹ್ಮಂಗಳಲ್ಲಿ ಪ್ರಾಣಂ ಪೊರಮಟ್ಟು ಹೋಗೆ, ಮೇಲೆ ನೀಲಾದ್ರಿಯಂತೆ ಕಾರೊಡಲ ಕೆಂಗಣ್ಣ ಕೋರೆದಾಡೆಯ ಪಾಶದಂಡಕರದ ರಕ್ತವಸ್ತ್ರ ರಕ್ತಾಭರಣ ರಕ್ತಚಂದನ ರಕ್ತಪುಷ್ಪಗಳಿಂದ ಅಲಂಕೃತರಾದ ಉಗ್ರಕಂಠಕ ಅತ್ಯುಗ್ರಸುರಕಂಟಕ ಉಗ್ರಚಂಡ ಸಮಗ್ರ ಉದುಂಬಲಾದಿ ಯಮದೂತರು ಅತಿಭಯಂಕರ ಮಾರ್ಗದೊಳಿಳಿದು ಒಯ್ದು, ದಂಡಧರನ ಸನ್ನಿಧಿಯಲ್ಲಿ ನಿಲಿಸಿ ಚಿತ್ರಗುಪ್ತರಾಣತಿಯಿಂದ ಆಯಾಯ ಪಾಪಾನುಸಾರಮಾದ ಮಹಾ ಬಾಧೆಗೊಳಿಸಿ, ಪೂರ್ವೋಕ್ತ ನರಕಾರ್ಣವದಲ್ಲಿ ಕೆಡಹುತ್ತಿಹರೆಂಬುದು ಸತ್ಯಮಕ್ಕುಂ. ೫೯೩

ಪ್ರಾಣ ವಿಯೋಗ ಕ್ರಮಗತಿ :

ಬಳಿಕ ಉಳಿದ ಸಾಮಾನ್ಯ ಜೀವಜಾಲಕ್ಕೆ ಗುದಗುಹ್ಯಂಗಳಿಂ ಪ್ರಾಣವೆಯ್ದೆ ಪಿಶಾಚಪದಪ್ರಾಪ್ತಿ.

ಶ್ರೋತ್ರದಿಂ ಪ್ರಾಣ ತ್ಯಾಗಮಾಗೆ ಪಿತೃಲೋಕಪ್ರಾಪ್ತಿ.
ಜಿಹ್ವೆಯಿಂ ಪ್ರಾಣ ವಿಯೋಗಮಾಗೆ ದೈತ್ಯಲೋಕ ಪ್ರಾಪ್ತಿ.
ನೇತ್ರದಿಂ ಪ್ರಾಣಪ್ರಯಾಣಮಾಗೆ ಸ್ವರ್ಗಲೊಕಪ್ರಾಪ್ತಿ.
ನಾಸಿಕದಿಂ ಪ್ರಾಣಂ ಗಮಿಸೆ ಮರ್ತ್ಯಲೋಕಪ್ರಾಪ್ತಿ.
ಸ್ತನಂಗಳಿಂ ಪ್ರಾಣಂ ಪೋಗೆ ಕಾಮಧೇನು ಲೋಕಪ್ರಾಪ್ತಿಗಳಕ್ಕುಂ. ೫೯೮

ಸಮಯಾಂತರ ಅಭಿಮಾನಿಗಳ ಗತಿಭೇದ :

ಮತ್ತಂ ಈ ಪ್ರಕಾರದಿಂ, ಕೌಳಯಾಮಳಾದಿ ಮತಾಂತರಾಭಿಯಾನಿಗಳಿಗೆ ಪಿಶಾಚಪದ ಪ್ರಾಪ್ತಿ, ಚಾರ್ವಾಕ, ಜೋತಿಷಿ, ಪೂರ್ವಮೀಮಾಂಸಕರುಗಳಿಗೆ ಸ್ಥೂಲ ಭವಾಂತರ ಪ್ರಾಪ್ತಿ, ಸ್ಮಾರ್ತರಿಗೆ ತನ್ಮಾತ್ರಪ್ರಾಪ್ತಿ. ಇಂದ್ರಿಯ ಚೈತನಿಕರಿಗೆ ಇಂದ್ರಿಯಪ್ರಾಪ್ತಿ, ಮನಶ್ಚೈತನಿಕರಿಗೆ ಮನಃಪ್ರಾಪ್ತಿ, ಅಹಂಕಾರ ಚೈತನಿಕರಿಗೆ ಮತ್ತು ಪ್ರಾಣಚೈತನಿಕರಿಗೆ ಅಹಂಕಾರತತ್ತ್ವಪ್ರಾಪ್ತಿ. ಬೌದ್ಧನೈಯ್ಯಾಯಿಕ ವೈಶೇಷಿಕರ್ಗೆ ಬುದ್ಧಿತತ್ತ್ವ ಪ್ರಾಪ್ತಿ. ಅರ್ಹತರಿಗೆ, ಸತ್ವ ಸಂಭೋಗವಾದಿಗಳಿಗೆ ಗುಣತತ್ತ್ವಪ್ರಾಪ್ತಿ, ಪಂಚರಾತ್ರರಿಗೆ ಪ್ರಕೃತಿತತ್ತ್ವಪ್ರಾಪ್ತಿ, ಸಾಂಖ್ಯರ್ಗೆ ಪ್ರಕೃತಿಮಸ್ತಕದಲ್ಲಿಯ ಭುವನಪ್ರಾಪ್ತಿ. ಅದ್ವೈತಿಗಳಿಗೆ ಪುರುಷತತ್ತ್ವಪ್ರಾಪ್ತಿ, ಪೌರಾಣಿಕರಿಗೆ ರಾಗತತ್ತ್ವಪ್ರಾಪ್ತಿ, ಕಾಪಾಲಿಕರಿಗೆ ಕಾಲ ತತ್ತ್ವಪ್ರಾಪ್ತಿ, ಪಾಶುಪತರಿಗೆಯೂ, ಉತ್ಪತ್ಯ ಸಾಮ್ಯವಾದಿಗಳಿಗಿಯೂ ಆವೇಶಸಾಮ್ಯ ವಾದಿಗಳಿಗೆಯೂ ಮಾಯಾ ತತ್ತ್ವ ಪ್ರಾಪ್ತಿ. ಮಹಾವ್ರತರಿಗೆ ಶುದ್ಧವಿದ್ಯಾ ತತ್ತ್ವಪ್ರಾಪ್ತಿ, ಶಿವಪ್ರಯೋಜ್ಯ ಕರ್ತೃತ್ವವಾದಿಗಳಿಗೆಯೂ, ಈಶ್ವರ ಉದಾಸಿನ್ಯಮುಕ್ತ ಕರ್ತೃತ್ವವಾದಿಗಳಿಗೆಯೂ ಈಶ್ವರತ್ವಪ್ರಾಪ್ತಿ. ಗಾರುಡ ದಕ್ಷಿಣ ವಾಮ ಭೂತತಾಂತ್ರಿಕರಿಗೆ ನಿವೃತ್ಯಾದಿ ಭುವನಪ್ರಾಪ್ತಿ. ಶುದ್ಧ ಶಾಕ್ತರಿಗೆ ಶಕ್ತಿತತ್ತ್ವಪ್ರಾಪ್ತಿ. ಶೈವರ್ಗೆ ಪರಶಿವ ಸಮಾನತ್ವಪ್ರಾಪ್ತಿ.

ವೇದ ವೇದಾಂತ ಆಗಮ ಪುರಾಣಗಳಲ್ಲಿ ಸಾರತರಮೆನಿಸಿದ ಅತಿ ರಹಸ್ಯಾರ್ಥ ಪ್ರತಿಪಾದಕಮಾದ ವೀರಶೈವ ಮಾರ್ಗದಿಂ ಲಿಂಗಾಂಗ ಸಂಬಂಧಿಗಳಾದ ಷಟುಸ್ಥಲ ಜ್ಞಾನಿಗಳಿಗೆ ಸರ್ವೋತ್ಕರ್ಷಮಾದ ಅವಿರಳ ಶಿವೈಕ್ಯ ಪ್ರಾಪ್ತಿಯಹುದೆಂದು ವಿವೇಕಿಸಲ್ವೇಳ್ಕುಂ.

ಇತಿ ಭುವನಾಂತರ ಪ್ರಾಪ್ತಿ ವರ್ಣನಂ

ನವಮ ಪರಿಚ್ಛೇದ

■■

ದಶಮ ಪರಿಚ್ಛೇದ

ಕಂದ ॥ ಮತವೆನೆ ಜೀವರ್ಗಿಹಪರ
ಗತಿಗಳ ನಿಂತುಸುರ್ದೆನೊಲಿದು ಬಳಿಕಮವರ್ಗಾ।
ಸ್ಥಿತಿಕಾಲ ಕ್ರಮಮಂ ನಿ
ಶ್ಚಿತಮಿದೆನಿಪ್ಪಂದದಿಂದೆ ಪೇಳ್ವೆನಮೋಘಂ ॥

ಕಾಲಸ್ವರೂಪ ಭೇದಂಗಳು :

ಅದೆಂತೆಂದೊಡೆ : ಆ ಕಾಲಮೆಂಬುದೇ ಮಾಯಾಕಾರ್ಯಮಪ್ಪುದು ಅದು ಸ್ಥೂಲಕಾಲವೆಂದು ಸೂಕ್ಷ್ಮಕಾಲವೆಂದು ದ್ವಿಪ್ರಕಾರವಹುದು. ಅವರಲ್ಲಿ ಲೌಕಿಕವೆ ಸ್ಥೂಲಕಾಲವೆಂದು ದ್ವಿಪ್ರಕಾರವಹುದು. ಅವರಲ್ಲಿ ಲೌಕಿಕವೆ ಸ್ಥೂಲಕಾಲವೆನಿಸೂದು. ಆಧ್ಯಾತ್ಮಕಕಾಲವೆ ಸೂಕ್ಷ್ಮಕಾಲಮಕ್ಕುಂ.

ಮತ್ತಂ ಆ ಕಾಲವೆ ಮನುಷ್ಯರ ಪಿತೃಗಳ ದೇವತೆಗಳ ಬ್ರಹ್ಮಾದಿಗಳ ಸಂಬಂಧದಿಂ ಬಹು ವಿಧಮಾಗಿ ಸಕಲಾತ್ಮರ್ಗೆ ನಾನಾ ವ್ಯವಹಾರಂಗಳೆನಿಸಿ ಕೊಡುತ್ತಿಹುದು.

ಆ ಸ್ಥೂಲವಾದ ಲೌಕಿಕಕಾಲದ ಲಕ್ಷಣವೆಂತೆನೆ : ಒಮ್ಮೆ ಕಣ್ಣೆವೆಯನಿಕ್ಕುವ ಅನಿತರ ಭಾಗೆಯೊಳಗೆ ಒಂದು ಭಾಗವೆ ತೃಟಿಯೆನಿಸುಗುಂ, ಅದು ಎರಡಾಗಲು ಒಂದು ಲವವೆನಿಸುಗುಂ. ಅದು ಎರಡಾಗಲು ಒಂದು ಕಾಷ್ಠಯೆನಿಸುಗುಂ, ಅದು ಮೂವತ್ತಾಗಲು ಒಂದು ಕಲೆಯೆನಿಸುಗುಂ, ಅದು ಹದಿನೈದು ಆಗಲು ಒಂದು ಕ್ಷಣವೆನಿಸುಗುಂ, ಅದು ಎರಡಾಗಲು ಒಂದು ಮೂಹೂರ್ತವೆನಿಸುಗುಂ ಅದು ನಾಲ್ಕಾಗಲು ಒಂದು ಘಳಿಗೆಯಕ್ಕುಂ.

ಮತ್ತಂ ಆ ಘಳಿಗೆ ಎಂಟಾಗಲು ಒಂದು ಜಾವವಹುದು. ಜಾವವೊಂದಕ್ಕೆ ಜೋತಿಷದಲ್ಲಿ ಏಳುವರೆ ಘಳಿಗೆ ಸಲ್ವುದು. ಆ ಜಾವಮೆಂಟಾಗೆ ಪಗಲಿರುಳಿನ ಅರವತ್ತು ಘಳಿಗೆಗೆ ಒಂದು ದಿನವಹುದು. ಆ ದಿನವೇ ಆದಿತ್ಯವಾರ ಸೋಮವಾರ ಮಂಗಳವಾರ ಬುಧವಾರ ಬೃಹಸ್ಪತಿವಾರ ಶುಕ್ರವರ ಶನಿವಾರವೆಂದು ಏಳುತೆರನಾಗಿಹುದು. ೫೯೬

ಆ ವಾರ ಹದಿನೈದಾಗಲು ಒಂದು ಪಕ್ಷಮಕ್ಕುಂ ಮತ್ತಂ ಆ ಪಕ್ಷವೆ ಶುಕ್ಲಪಕ್ಷವೆಂದು ಕೃಷ್ಣಪಕ್ಷವೆಂದು ಇತ್ತೆರನಹುದು. ಆ ಪಕ್ಷಂಗಳೊಳಗೆ,

ಅಗ್ನಿ ಅಧಿದೇವತೆಯಾದ ಪಾಡ್ಯ, ಸೂರ್ಯನಧಿದೇವತೆಯಾದ ಬಿದಿಗೆ,
ಕುಬೇರನಧಿದೇವತೆಯಾದ ತದಿಗೆ, ವಿನಾಯಕನಧಿದೇವತೆಯಾದ ಚತುರ್ಥಿ,
ಲಕ್ಷ್ಮಿಯಧಿದೇವತೆಯಾದ ಪಂಚಮಿ, ಷಣ್ಮುಖನಧಿದೇವತೆಯಾದ ಷಷ್ಠಿ,
ರವಿಯಧಿದೇವತೆಯಾದ ಸಪ್ತಮಿ, ರುದ್ರನಧಿದೇವತೆಯಾದ ಅಷ್ಟಮಿ,
ದುರ್ಗಿಯಧಿದೇವತೆಯಾದ ನವಮಿ, ಮನುವಧಿದೇವತೆಯಾದ ದಶಮಿ
ಇಂದ್ರನಧಿದೇವತೆಯಾದ ಏಕಾದಶಿ, ವಿಷ್ಣುವಧಿದೇವತೆಯಾದ ದ್ವಾದಶಿ
ಕಾಮನಧಿದೇವತೆಯಾದ ತ್ರಯೋದಶಿ ಈಶ್ವನಧಿದೇವತೆಯಾದ ಚತುರ್ದಶಿ
ಚಂದ್ರನಧಿದೀವತೆಯಾದ ಪೌರ್ಣಿಮೆ ಎಂಬ ಶುಭಾಶುಭರೂಪಮಾದ ಹದಿನೈದು ತಿಥಿಗಳನುಳ್ಳುದೇ ಶುದ್ಧವೆನಿಸಿ ಶುಕ್ಲಪಕ್ಷವಹುದು.
ಈ ಕ್ರಮದಿಂದವೆ ಮರಳಿ ಪಾಡ್ಯಂ ಮೊದಲಾಗಿ

ಪಿತೃದೇವತೆಯಾದ ಅಮಾವಾಸ್ಯೆ ಪರ್ಯಂತಮಾಗಿ ಹದಿನೈದು ತಿಥಿಗಳನು ಉಳ್ಳುದೇ ಬಹುಳವೆನಿಸಿ ಕೃಷ್ಣಪಕ್ಷಮಕ್ಕುಂ ೫೯೭

ರಾಶಿ – ನಕ್ಷತ್ರ– ಯೋಗ ವಿಚಾರ :

ಮತ್ತಂ ಆ ಪಕ್ಷದ್ವಯದಲ್ಲಿಯ ಮೇಷಾದಿ ಹನ್ನೆರಡು ರಾಶಿಗಳುಂ ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳುಂ,

ವಿಷ್ಕಂಭ	ಪ್ರೀತಿ	ಅಯುಷ್ಮಾನ್	ಸೌಭಾಗ್ಯ	ಶೋಭವ
ಅತಿಗಂಡ	ಸುಕರ್ಮ	ಧೃತಿ	ಶೂಲ	ಗಂಡ
ವೃದ್ಧಿ	ಧ್ರುವ	ವ್ಯಾಘಾತ	ಹರ್ಷಣ	ವಜ್ರ
ಸಿದ್ಧಿ	ವ್ಯತಿಪಾತ	ವರ್ರ್ಯಾಷ್ಣ	ಪರಿಘ	ಶಿವ
ಸಿದ್ಧ	ಸಾಧ್ಯ	ಶುಭ	ಶುಕ್ಲ	ಬ್ರಹ್ಮ
ಇಂದ್ರ	ವೈಧೃತಿಗಳೆಂಬ	ಇಪ್ಪತ್ತೇಳು ಯೋಗಂಗಳುಂ		

ಶಕುನಿ ಚಡುಷ್ಕ ನಾಗ ಕಿಂಸ್ತುಘ್ನಮೆಂಬ ನಾಲ್ಕು ಸ್ಥಿರಕರಣಂಗಳುಂ.
ಬವ ಬಾಲವ ಕೌಲವ ತೈತಿಲ ಗರಜೆ ಒಣಜೆ ಭದ್ರೆಗಳೆಂಬ ಏಳು ಚರಕರಣಂಗಳುಂ,

ತಮ್ಮ ತಮ್ಮ ಕ್ರಮದಿಂದ ಅರುವತ್ತು ಘಳಿಗೆಗೆ ಒಂದೆನಿಸಿ ಕ್ಷಯಗಾಮಿ ವೃದ್ಧಿಗಾಮಿಗಳಾಗಿ ಶುಭಾಶುಭರೂಪದಿಂ ವರ್ತಿಸುತ್ತಿಹನು. ಅಲ್ಲಿ ಸ್ಥಿರ ಕರಣಂಗಳೇ ಚತುರ್ದಶಿ ಹುಣ್ಣಿಮೆ ಅಮಾವಾಸ್ಯಗಳಲ್ಲಿಯೇ ವರ್ತಿಸುತ್ತಿಹವು. ಮಿಕ್ಕ ಚರಕರಣಂಗಳೇ ಮೂವತ್ತು ಘಳಿಗೆಗೆ ಒಂದೆನಿಸಿ ದಿನಕ್ಕೆ ಎರದೆರಡು ವರ್ತಿಸುತ್ತಿರ್ಪವು. ಇಂತು ತಿಥಿ ವಾರ ನಕ್ಷತ್ರ ಯೋಗ ಕರಣಮೆಂಬ ಪಂಚಾಂಗಯುಕ್ತಮಾದ ಪಕ್ಷದ್ವಯದಿಂದ ಒಂದು ಮಾಸಮಕ್ಕುಂ. ೫೯೮

ಮಾಸ – ಋತು – ಅಯನಾದಿಗಳು :

ಬಳಿಕ, ಮಾಸವೇ : ಚೈತ್ರ ವೈಶಾಖ, ಜೇಷ್ಠ ಆಷಾಢ ಶ್ರಾವಣ ಭಾದ್ರಪದ ಆಶ್ವೀಜ ಕಾರ್ತೀಕ ಮಾರ್ಗಶಿರ ಪುಷ್ಯ ಮಾಘ ಪಾಲ್ಗುಣಮೆಂದು ಹನ್ನೆರಡು ತೆರನಾಗಿಹುದು.

ಆ ಮಾಸವೆರಡಕ್ಕೆ ಒಂದು ಋತುವಹುದು. ಆ ಋತುವೆ: ಹಿಮ ಶಿಶಿರ ವಸಂತ ಗ್ರೀಷ್ಮ ವರ್ಷ ಶರದೃತುಗಳೆಂದು ಆರು ತೆರನಾಗಿ, ಮಾರ್ಗಶಿರ ಮೊದಲಾಗಿ ಎರಡೆರಡು ತಿಂಗಳಿಗೆ ಒಂದೊಂದು ವರ್ತಿಸುತ್ತಿಹುದು. ಆ ಋತು ಮೂರಾಗಲು ಒಂದು ಅಯನವೆನಿಸೂದು. ಆ ಅಯನವೆ ದಕ್ಷಿಣಾಯನಮೆಂದು, ಉತ್ತರಾಯನಮೆಂದು ಎರಡು ತೆರನಾಗಿಹುದು. ೫೯೯

ಸ್ಸಂವತ್ಸರ ವಿಚಾರ :

ಮತ್ತಂ ಆ ವರ್ಷವೆ :

ಪ್ರಭವ	ವಿಭವ	ಶುಕ್ಲ	ಪ್ರಮೋದೂತ	ಪ್ರಜೋತ್ಪತ್ಯ	ಅಂಗೀರಸ
ಭಾವ	ಶ್ರೀಮುಖ	ಯುವ	ಧಾತು	ಈಶ್ವರ	ಬಹುಧಾನ್ಯ
ಪ್ರಮಾಧಿ	ವಿಕ್ರಮ	ವಿಷು	ಚಿತ್ರಭಾನು	ಸ್ವಭಾನು	ತಾರಣ
ಪಾರ್ಥಿವ	ವ್ಯಯ	ಸರ್ವಜಿತು	ಸರ್ವಧಾರಿ	ವಿರೋಧಿ	ವಿಕೃತಿ
ಖರ	ನಂದನ	ವಿಜಯ	ಜಯ	ಮನ್ಮಥ	ದುರ್ಮುಖ
ಹೇವಿಳಂಬಿ	ವಿಳಂಬಿ	ವಿಕಾರಿ	ಶಾರ್ವರಿ	ಪ್ಲವ	ಶುಭಕೃತು
ಶೋಭನಕೃತು	ಕ್ರೋಧಿ	ವಿಶ್ವಾವಸು	ಪರಾಭವ	ಪ್ಲವಂಗ	ಕೀಲಕ
ಸೌಮ್ಯ	ಸಾಧಾರಣ	ವಿರೋಧಿಕೃತು	ಪರಿಧಾವಿ	ಪ್ರಮಾದೀಚ	ಆನಂದ
ರಾಕ್ಷಸ	ನಳ	ಪಿಂಗಳ	ಕಾಳಾಯುಕ್ತಿ	ಸಿದ್ಧಾರ್ಥಿ	ರೌದ್ರಿ
ದುರ್ಮತಿ	ದುಂದುಭಿ	ರುಧಿರೋದ್ಗಾರಿ	ರಕ್ತಾಕ್ಷಿ	ಕ್ರೋಧನ	ಕ್ಷಯ

ಎಂದು ಅರುವತ್ತು ತೆರನಾಗಿಹುದು. ಅವಾದೊಡೆ ಬೇರೆ ಬೇರೆ ಶುಭಾಶುಭ ಫಲಂಗಳುಳ್ಳವಾಗಿ ಕ್ರಮದಿಂದ ಉತ್ತಮಂಬಿಸಿಗೆ, ಮಧ್ಯಮಂಬಿಸಿಗೆ, ಕನಿಷ್ಟಂ ಬಿಸಿಗೆಗಳೆನಿಸಿ ಇಪ್ಪತ್ತಿಪ್ಪತ್ತು ವರ್ತಿಸುತ್ತಿರ್ಕುಂ.

ಮತ್ತಂ ಆ ದಿನ ಪಕ್ಷ ಮಾಸ ಋತು ಅಯನ ವರ್ಷಂಗಳೆಲ್ಲಂ ಮನುಷ್ಯರ್ಗೆ ಪೂರ್ವೋಕ್ತ ಸೂರ್ಯನ ಎಡೆಯಾಟದಿಂದವೆ ಪ್ರಮಾಣಿಸಿಕೊಳುತ್ತಿಹವು. ದೇವತೆಗಳಿಗವರ ಈಡ ಪಿಂಗಳಯೆಂಬ ಚಂದ್ರ ಸೂರ್ಯರ, ರೇಚಕ ಪೂರಕಮೆಂಬ ಎಡೆಯಾಟದಿಂದವೆ ಲಕ್ಷಿಸಿಕೊಳುತ್ತಿರ್ಕುಂ.

ಮತ್ತಂ ಈ ಲೌಕಿಕರಾದ ಮನುಷ್ಯರ ಒಂದು ಮಾಸವೆ ಪಿತೃಗಳಿಗೆ ಒಂದು ದಿನವಹುದು: ಆ ದಿನ ಮುನ್ನೂರ ಆರುವತ್ತದೊಡೆ ಒಂದು ವರ್ಷವಹುದು. ಅಕ್ರಮದಿಂದ ಅವರ್ಗೆ ಶತಾಯುಷಮೆಂದರಿಯಲ್ವೇಳ್ಕುಂ. ಮತ್ತಂ ಆ ಸೂರ್ಯನ ದಕ್ಷಿಣಾಯನವೆ ದೇವತೆಗಳ ರಾತ್ರಿ, ಉತ್ತರಾಯನವೆ ದಿವಸವು. ಅಂತಪ್ಪ ದಿನರಾತ್ರಿಗಳ್ ಕೂಡಲ್ ಒಂದು ದಿನ, ಆ ದಿನ ಮುನ್ನೂರ ಅರುವತ್ತಾಗಲು ಅ ದೇವತೆಗಳಿಗೆ

ಒಂದು ದಿವ್ಯ ವರ್ಷ, ಅಂತಪ್ಪ ದಿವ್ಯ ವರ್ಷ ನೂರು ಪರ್ಯಂತರಂ ಅವರ ಸ್ಥಿತಿಯಕ್ಕುಂ. ೬೦೦

ಯುಗ ಪರಿಮಾಣ ಮತ್ತು ಧರ್ಮ :

ಬಳಿಕ ಆ ಮನುಷ್ಯರ ವರ್ಷಾನುಕ್ರಮದಿಂದ ಇಲ್ಲಿ ಕೃತಾದಿಯುಗಂಗಳು ಪ್ರವರ್ತಿಸುತ್ತಿರ್ಪವು. ಅದೆಂತೆನೆ :

ಕೃತಯುಗವೆ ಹದಿನೇಳುಲಕ್ಷದ ಮೇಲೆ ಇಪ್ಪತ್ತೆಂಟು ಸಾವಿರವರ್ಷ ವರ್ತಿಸುತ್ತಿಹುದು.

ತ್ರೇತಾಯುಗವೆ ಹನ್ನೆರಡುಲಕ್ಷದ ಮೇಲೆ ತೊಂಭತ್ತಾರುಸಾವಿರ ವರ್ಷ ವರ್ತಿಸುತ್ತಿಹುದು.

ದ್ವಾಪರಯುಗವೆ ಎಂಟುಲಕ್ಷದ ಮೇಲೆ ಅರವತ್ತನಾಲ್ಕುಸಾವಿರ ವರ್ಷ ವರ್ತಿಸುತ್ತಿಹುದು.

ಕಲಿಯುಗವೆ ನಾಲು ಲಕ್ಷದ ಮೇಲೆ ಮೂವತ್ತೆರಡು ಸಾವಿರ ವರ್ಷವರ್ತಿಸುತ್ತಿಹುದು.

ಈ ನಾಲ್ಕು ಯುಗಂಗಳಲ್ಲಿ ಕ್ರಮದಿಂ, ನಾಲ್ಕು ಪಾದ ಮೂರು ಪಾದ ಎರಡು ಪಾದ ಒಂದು ಪಾದವಾಗಿ ಧರ್ಮವು ವರ್ತಿಸುತ್ತಿಹುದು.

ಮತ್ತಂ ಆ ಕೃತಯುಗದಲ್ಲಿ ಯೋಗ, ತ್ರೇತಾಯುಗದಲ್ಲಿ ಜ್ಞಾನ
ದ್ವಾಪರಯುಗದಲ್ಲಿ ಯಜ್ಞ ಕಲಿಯುಗದಲ್ಲಿ ದಾನ ಈಶ್ವರಕ್ಷೇತ್ರಯಾತ್ರೆಗಳೇ ಮುಖ್ಯವಾಗಿ ಭೋಗಮೋಕ್ಷ ಸಾಧನಂಗಳಾಗಿರ್ಕುಂ. ೬೦೧

ಯುಗಭೇದದಿಂ ಕರ್ಮಸಿದ್ಧಿಭೇದ :

ಮತ್ತಂ, ಅ ಯುಗಗಳಲ್ಲಿ :

ಕೃತಯುಗದಲ್ಲಿ ಹತ್ತುವರ್ಷಕ್ಕೆಸಿದ್ಧಿಸುವ ತಪಸ್ಸು ಮೊದಲಾದ ಸತ್ಕರ್ಮವೇ ತೇತಾಯುಗದಲ್ಲಿ ಒಂದುವರ್ಷಕ್ಕೆ ಸಿದ್ಧಿಸೂದು.

ತ್ರೇತಾಯುಗದಲ್ಲಿ ಒಂದುವರ್ಷಕ್ಕೆ ಸಿದ್ಧಿಸೂದು ದ್ವಾಪರಯುಗದಲ್ಲಿ ಒಂದು ತಿಂಗಳಿಗೆ ಸಿದ್ಧಿಸೂದು.

ದ್ವಾಪರಯುಗದಲ್ಲಿ ಒಂದು ತಿಂಗಳಿಗೆ ಸಿದ್ಧಿಸುವ ತಪಸ್ಸು, ಕಲಿಯುಗದಲ್ಲಿ ಒಂದು ದಿನಕ್ಕೆ ಸಿದ್ಧಿಸುವುದು.

ರಾಗಾದಿ ದೋಷವಿಲ್ಲದ ಮನಸ್ಸು, ಅನೃತಾದಿ ದುಷ್ಕೃತಮಿಲ್ಲದ ವಾಕ್ಕು, ಹಿಂಸಾದಿ ಕಲುಷಮಿಲ್ಲದ ಕಾಯುವೆಂಬ ತ್ರಿಕರಣ ಶುದ್ಧರಾದ ಮಹಾಪುರುಷರ್ಗೆ ಈ ಕಲಿಯುಗದಲ್ಲಿಯೇ ಶೀಘ್ರಮಾಗಿ ಭೋಗಮೋಕ್ಷಂಗಳಕ್ಕುಂ ೬೦೨

ಚತುರ್ಯುಗ ದಿವ್ಯ ಪರಿಮಿತಿ :

ಮತ್ತಂ ಆ ಚತುರ್ಯುಗಂಗಳ ಆಯಾಯ ಗಣನೆಗಳಂ ಬೇರೆ ಬೇರೆ ಇಕ್ಕಿ ಮುನ್ನೂರಅರವತ್ತರಿಂ ಕಳೆದು, ಗುಣಿಸಿನೊಡೆ, ನಿಂದುದೇ ದೇವತೆಗಳ ದಿವ್ಯ ವರ್ಷವಹುದು. ಹಾಗಾಗಿ :

ಕೃತಯುಗವೆ ನಾಲ್ಕುಸಾವಿರದ ಎಂಟುನೂರು ದಿವ್ಯವರ್ಷವಹುದು.
ತ್ರೇತಾಯುಗವೆ ಮೂರುಸಾವಿರದ ಅರುನೂರು ದಿವ್ಯವರ್ಷವಹುದು.
ದ್ವಾಪರಯುಗವೆ ಎರಡುಸಾವಿರದ ನಾನೂರು ದಿವ್ಯವರ್ಷವಹುದು.
ಕಲಿಯುಗವೆ ಸಾವಿರದಇನ್ನೂರು ದಿವ್ಯವರ್ಷವಹುದು.

ಇಂತೆಣಿಸಿ ಹನ್ನೆರಡು ಸಾವಿರ ದಿವ್ಯವರ್ಷಂಗಳಾದ ಕೃತಾದಿ ನಾಲ್ಕು ಯುಗಂಗಳು ಕೂಡಲು ಒಂದು ದಿವ್ಯ ಯುಗವೆನಿಸೂದು. ಆ ದಿವ್ಯಯುಗಂಗಳೇ ಎಪ್ಪತ್ತೊಂದು ಆಗಲು ಒಂದು ಮನ್ವಂತರವೆನಿಸೂದು. ಆ ಮನ್ವಂತರಂಗಳು ಹದಿನಾಲ್ಕು ಆಗಲು ಒಂದು ಸೃಷ್ಟಿಕಲ್ಪವೆನಿಸೂದು. ಆ ಸೃಷ್ಟಿಕಲ್ಪವೆ ದಿವ್ಯಯುಗ ಸಾವಿರಮಪ್ಪುದರಿಂ ಬ್ರಹ್ಮಂಗೆ ಒಂದು ದಿವಸ. ಆ ದಿವಸ ಒಂದರೊಳಗೆ ಹದಿನಾಲ್ಕು ಮನುಗಳಿಗೆ, ಅನೇಕರಾದ ಇಂದ್ರರುಗಳಿಗೆ ಅಧಿಕಾರ ಸಮಾಪ್ತಿಯಾಗಿ ಬೇರೆ ಅಧಿಕಾರಿಗಳು ಉದಿಸುತ್ತಿರ್ಪುರು. ೬೦೩

ಬ್ರಹ್ಮಾದಿಗಳ ಪರಿಮಿತಿ :

ಬಳಿಕ ಅಂತಪ್ಪ ದಿವ್ಯಯುಗವೆ ಬ್ರಹ್ಮಂಗೆ ಒಂದು ರಾತ್ರಿಯಹುದು. ಅ ಸಂಹಾರಕಲ್ಪವು ಅಂತಪ್ಪ ದಿವರಾತ್ರಿಗಳ್ಕೂಡಿದ ದಿನ, ಮುನ್ನೂರಅರುವತ್ತಾಗಲು ಒಂದು ವರ್ಷ, ಅಂತಪ್ಪ ವರ್ಷ ನೂರುಪರ್ಯಂತಂ ಅ ಬ್ರಹ್ಮನ ಸ್ಥಿತಿ. ಆ ಸ್ಥಿಯೊಳಗೆ ಅನೇಕ ಮನುಗಳಿಗೆ, ಅನೇಕ ಶಕ್ರರಿಗೆ ಅಧಿಕಾರ ಸಮಾಪ್ತಿಯಾಗಿ ಬೇರೆ ಅಧಿಕಾರಿಗಳು ಉದಿಸುತ್ತಿರ್ಪುರು.

ಬಳಿಕ ಆ ಬ್ರಹ್ಮನ ಸ್ಥಿತಿಯೆಂಬುದಕ್ಕೆ ವಿಷ್ಣುವಿಗೆ ಒಂದು ಮಾಸವಹುದು. ಆ ಮಾಸ ಬಂದಲ್ಲಿ ಬ್ರಹ್ಮಂಗೆ ಅಧಿಕಾರ ಸಮಾಪ್ತಿಯಾಗಿ ಬೇರೊಬ್ಬ ಅಧಿಕಾರಿ ಉದಿಸುತ್ತಿರ್ಪನು. ಅಂತಪ್ಪ ಮಾಸ ಹನ್ನೆರಡಾಗಲು, ಒಂದು ವರ್ಷ,ಅಂತಪ್ಪ ವರ್ಷ ನೂರು ಪರಿಯಂತರಂ ಆ ವಿಷ್ಣುವಿನ ಸ್ಥಿತಿಯೆಬುದೇ ರುದ್ರಂಗೊಂದು ಮಾಸ. ಆ ಮಾಸ ಒಂದರಲ್ಲಿ ವಿಷ್ಣುವಿಂಗೆ ಅಧಿಕಾರ ಸಮಾಪ್ತಿಯಾಗಿ, ಬೇರೊಬ್ಬ ಅಧಿಕಾರಿ ಉದಿಸುತ್ತಿರ್ಪನು. ಅಂತಪ್ಪ ಮಾಸ ಹನ್ನೆರಡಾಗಲು ಒಂದು ವರ್ಷ, ಅಂತಪ್ಪ ವರ್ಷ ನೂರು ಪರಿಯಂತರ ರುದ್ರನ ಸ್ಥಿತಿ. ಆ ಸ್ಥಿತಿಯೊಳಗೆ ಅನಂತ ನಾರಾಯನಾರಿಂಗೆ ಅಧಿಕಾರ ಸಮಾಪ್ತಿಯಾಗಿ ಬೇರೆ ಅಧಿಕಾರಿಗಳು ಉದಿಸುತ್ತಿರ್ಪುರು.

ಬಳಿಕ ರುದ್ರನ ಸ್ಥಿತಿಯೆಂಬುದೆ ಈಶ್ವರಂಗೆ ಒಂದು ದಿನ, ಆ ದಿನಮೊಂದರೊಳಗೆ ರುದ್ರಂಗೆ ಅಧಿಕಾರ ಸಮಾಪ್ತಿಯಾಗಿ ಬೇರೊಯ್ಯ ಅಧಿಕಾರಿ ಉದಿಸುತ್ತಿರ್ಪಂ. ಅಂತಪ್ಪ ದಿನ ಮುನ್ನೂರರವತ್ತಾಗಲು ಒಂದು ವರ್ಷ. ಅಂತಪ್ಪ ವರ್ಷ ನೂರು ಪರಿಯಂತರಂಈಶ್ವರನ ಸ್ಥಿತಿ. ಆ ಸ್ಥಿತಿಯೊಳಗೆ ಅಸಂಖ್ಯಾತ ರುದ್ರರುಗಳಿಗೆ ಅಧಿಕಾರ ಸಮಾಪ್ತಿಯಾಗಿ ಬೇರೆ ಅಧಿಕಾರಿಗಳು ಉದಿಸುತ್ತಿರ್ಪುರು.

ಬಳಿಕ ಆ ಈಶ್ವರನಮನ ಸ್ಥಿತಿಯೆಂಬುದೆ ಸದಾಶಿವಂಗೆ ಒಂದು ನಿಮಿಷವು. ಆ ನಿಮಿಷದೊಳಗೆ ಈಶ್ವರಂಗೆ ಅಧಿಕಾರ ಸಮಾಪ್ತಿಯಾಗಿ ಬೇರೊಬ್ಬಅಧಿಕಾರಿಯು

ಉದಿಸುತ್ತಿರ್ಪನು. ಈ ಕ್ರಮದುಂ ಪೆರ್ಚದ ಘಳಿಗೆ ಜಾವ, ದಿನ, ಪಕ್ಷ, ಮಾಸ, ವರ್ಷಂಗಳು ಅಂತಪ್ಪ ವರ್ಷ ನೂರು ಪರಿಯಂತರಂ ಆ ಸದಾಶಿವನ ಸ್ಥಿತಿ. ಆ ಸ್ಥಿತಿಯೊಳಗೆ ಅನೇಕ ಈಶ್ವರರ್ಗೆ ಅಧಿಕಾರ ಸಮಾಪ್ತಿಯಾಗಿ ಬೇರೆ ಅಧಿಕಾರಿಗಳು ಉದಿಸುತ್ತಿರ್ಪುಂ.

ಬಳಿಕ ಆ ಸದಾಶಿವನ ಸ್ಥಿತಿ ಎಂಬುದೆ ಬಿಂದೂಪಾಧಿಯಂ ಮಂತ್ರ ಮೂರ್ತಿತ್ವಮುಂ, ಮುಮುಕ್ಷುಗಳ ಧ್ಯಾನ ಪೂಜಾರ್ಥಿವಾಗಿ ತಳೆದು, ಸಕಲ, ಸಕಲ-ನಿಷ್ಕಳ, ನಿಷ್ಕಳವೆನಿಸಿಕೊಳುತ್ತಿರ್ದ ಮಹೇಶ್ವರ ಸದಾಶಿವ ಶಿವಸ್ವರೂಪನಾದ ಪರಶಿವಂಗೆ ಒಂದು ತೃಟಿಮಾತ್ರದ ಅನಿತೆಂಬ ಆರೋಪಿತವಹುದು. ಅನಿತರೊಳು ಅನಂತ ಸದಾಶಿವರ್ಗೆ ಅಧಿಕಾರ ಸಮಾಪ್ತಿಯಾಗಿ ಬೇರೆ ಅಧಿಕಾರಿಗಳು ಉದಿಸುತ್ತಿರ್ಪುಂ. ೬೦೪

ಮಹಾಸಂಹಾರಕ್ರಮ :

ಬಳಿಕ, ಇಂತಾಗಲು, ಆ ಸಂಹಾರಕ್ರಮದಲ್ಲಿ ಸ್ವರ್ಗ ಮರ್ತ್ಯ ಪಾತಾಳವೆಂಬ ಲೋಕತ್ರಯ ಸಂಹಾರವೇ ಅಧಮ ಪ್ರಳಯವೆನಿಸೂದು. ಅಲ್ಲಿ ಮೇಲಣ ಮಹರ್ಲೋಕಾದಿಗಳ ಸ್ಥಿತಿಯುಂಟಾಗಿಹುದು. ೬೦೫

ಮತ್ತಂ ಆ ಪೃಥುವ್ಯಾದಿ ಪ್ರಕೃತ್ಯಂತಮಾದ ತತ್ತ್ವಂಗಳ ಸಂಹಾರವೇ ಮಧ್ಯಮ ಪ್ರಳಯವೆನಿಸೂದು. ಬಳಿಕ ಪೃಥುವ್ಯಾದಿ ಶಿವತತ್ವಾಂತಮಾದ ಸಕಲ ತತ್ತ್ವ ಅಧ್ವಾದಿ ಷಡಧ್ವವನೊಳಕೊಂಡು ಬಿಂದು ನಿಂದ ಅವಸ್ಥೆಯೇ ಮಹಾಪ್ರಳಯಮಕ್ಕುಂ.

ಮತ್ತಂ, ಆ ಮಹಾಪ್ರಳಯದಲ್ಲಿಯೂ ಪರಶಿವನು ಮಲವಿಶಿಷ್ಟ ಪರಿವಾಕ ತಾರತಮ್ಯ ಅಪೇಕ್ಷೆಯಿಂ ಬೋಧಿಸಲು ಯೋಗ್ಯರಾದವರುಗಳನ್ ಅನುಗ್ರಹ ಏಕರಸಿಕ ಶಕ್ತಿ ಮಾತ್ರದಿಂ ಬೋಧಕ್ಕೆ ಉಪಯೋಗ್ಯರನ್ನಾಗಿ ಸಂಸ್ಕರಿಸುತ್ತಂ, ನಿಬಿಡತರ ಮಲಪಾಶದಿಂ ರೋಧಿಸಲು ಯೋಗ್ಯರಾದವರುಗಳಂ, ರೋಧಶಕ್ತಿಮಾತ್ರದಿಂ ರೋಧಿಸುತ್ತಂ ಕರ್ಮಿಗಳ ಮಂದತರ ಮಲಪರಿವಾಕದೊಡಗೂಡಿದ ಕರ್ಮವನು ಉತ್ತರಸ್ಥಿತಿ ಕಾಲಭಾವಿಯಾದ ಭೋಗನಿಮಿತ್ತಮಾಗಿ, ಕ್ರಿಯಾಶಕ್ತಿಯಿಂ ಪಚನಂಗೆಯ್ವುತ್ತಂ, ಶಾಂತಮಾದ ಶುದ್ಧಾಶುದ್ಧ ಮಾಯಾಶಕ್ತಿಗಳಂ ಸೃಷ್ಟಿ ವಿಷಯಮಾದ ಅಭಿವ್ಯಕ್ತಿಗೆ ಯೋಗ್ಯಂಗಳನ್ ಆಗು ಮಾಡುತ್ತಾ ಇಂತು ಪ್ರಕಾರಾಂತರದಿಂದ ಅಖಿಳ ಕಾರ್ಯಂಗಳಂ ಮಾಡುತ್ತಿರ್ಪಂ. ೬೦೬

ಮತ್ತಂ, ಆ ಬಿಂದುವನು ಅತಿಕ್ರಮಿಸಿರ್ದ ಶುದ್ಧ ನಿಷ್ಕಲ ಚಚ್ಛಕ್ತಿಯ ಅಗ್ರದಲ್ಲಿ ಬೆಳಗುತ್ತಿರ್ಪ ಶ್ರೀಗುರು ಶಂಭುಲಿಂಗದಲ್ಲಿ ಕಾಲದೇಶಾದಿ ಕಲ್ಪನೆ ಒಂದುಂ ಇಲ್ಲ, ಅದರಿಂದ ಆ ಶ್ರೀಗುರು ಶಂಭುಲಿಂಗನೆ ನಿತ್ಯ ನಿರ್ಮಲ ನಿರಾವರಣ ನಿರ್ಮಾಯ ನಿರ್ಗುಣ, ನಿಷ್ಕರ್ಮ ನಿಷ್ಕಳ ನಿಃಪ್ರಪಂಚ ನಿರಘ ನಿರ್ಲೇಪ, ನಿರಾಮಯ ನಿರವಧ್ಯ ನಿಸ್ಸಂಗ ನಿರ್ದ್ವಂದ್ವ ನಿರಾಕುಳ ನಿರಾತಂಕ ನಿರುಪಮ ನಿರತಿಶಯ ನಿತ್ಯಮುಕ್ತ ಸತ್ಯಾನಂದ ಸ್ವರೂಪದಿಂ ವಿರಾಜಿಸುತ್ತಿರ್ಪುಂ.

ಬಳಿಕ ಇಂತಾಗಲು ಇನ್ನೇನೆಂತೆಂದೊಡೆ, ಆಯುರಾರೋಗ್ಯ ರೂಪು ಯೌವನ ಲಾವಣ್ಯ ಲಕ್ಷಣ ಸತ್ಕುಲ ಸಾಹಸ ವನಿತಾವಿಲಾಸ ಪುತ್ರಪೌತ್ರ ಬಂಧು ಬಾಂಧವ ಧನ ಧಾನ್ಯ ಬಲ ಪರಾಕ್ರಮ ವಿದ್ಯಾವಿತರಣ ನಯವಿನಯಾದಿ ಸಕಲ ಸೌಭಾಗ್ಯ ಸಮಗ್ರತೆ ಸಹಿತಮಾಗಿ ಸಪ್ತಸಮುದ್ರ ಮುದ್ರಿತ ವಸುಧಾದಿಪತ್ಯ ಸಂತೋಷಸಂಜನಿತ ಸುಖಮಂ ಸುಕ್ಷೇಮದಿಂದ ಇಹದೊಳು ಅನುಭವಿಸಿ ಮೇಲೆ ಸರ್ವೋತ್ಕರ್ಷಮಾದ ಶ್ರೀಗುರು ಶಂಭುಲಿಂಗದೊಡಗೂಡಿ ಸರ್ವಜ್ಞತ್ವ ಸರ್ವಕರ್ತೃತ್ವದಿಂ ಸತ್ಯಾನಂದ ಸ್ವರೂಪರಾಗಿರ್ಪ ಭೋಗಮೋಕ್ಷಂಗಳಿಂದಂ ಏಕಾಗ್ರಚಿತ್ತದಿಂ ಕೇಳಿ ತಿಳಿದರ್ಗೆ ಆಗಲೆಂಬ ಆಶೀರ್ವಾದ ಲಕ್ಷಣ ಮಂಗಳಾಚರಣದಿಂದ ಈ ವಿವೇಕಚಿಂತಾಮಣಿಯೆಂಬ ಪ್ರಕರಣಂ ಪರಿಪೂರ್ಣಮಕ್ಕುಂ. ೭೦೮

ಇತಿ ಕಾಲಕ್ರಮ ವರ್ಣನಂ
ದಶಮ ಪರಿಚ್ಛೇದ:

ಶ್ರೀಮದನಂತಸೂರಿಜನ ಸಮ್ಮತದಿಂದೆಸೆವೀ ವಿವೇಕಚಿಂ
ತಾಮಣಿಯೆಂಬ ಸತ್ಕೃತಿಯನಾಲಿಸಿದರ್ಗೆಡೆಗೊಂಡ ಸಂಶಯ
ಸ್ತೋಮವಡಂಗಿ ಬೇರೆ ಬಹುಶಾಸ್ತ್ರವನೋದುವ ಬಾಧೆ ಪಿಂಗಿ ಸ
ತ್ಪ್ರೇಮದೊಳಕ್ಕುಮಿಷ್ಟಫಲಸಿದ್ಧಿ ಸಮುನ್ನತಿ ಶಂಭುಲಿಂಗದಿಂ ॥

■■

ಅನುಬಂಧಗಳು

ಅನುಬಂಧಗಳು – ೧
ವಿವೇಕ ಚಿಂತಾಮಣಿಯ ಭಾಷಾಂತರಗಳು

ಕನ್ನಡ ವಿವೇಕಚಿಂತಾಮಣಿಯು ಮರಾಠಿಭಾಷೆಗೂ ಮತ್ತು ಸಂಸ್ಕೃತಕ್ಕೂ ಭಾಷಾಂತರವಾಗಿರುವುದು ಗಮನಾರ್ಹವಿಷಯವಾಗಿದೆ. ಇದು ತಮಿಳಿಗೂ ಅನುವಾದವಾಗಿದೆಯೆಂದು ತಿಳಿದುಬರುತ್ತದೆ. ಆದರೆ ತಮಿಳಿನ ಭಾಷಾಂತರಕೃತಿ ನಮಗೆ ಇನ್ನೂ ತಿಳಿದು ಬಂದಿಲ್ಲ.

೧. ಮರಾಠಿ ಭಾಷಾಂತರದ ಅಲ್ಪ ಪರಿಚಯ [೧]

ತೇ ವಿವೇಕ ಚಿಂತಾಮಣಿಶಾಸ್ತ್ರ । ಪ್ರಾಕೃತ ಭಾಷಾವಿಸ್ತರ
ಸಾಂಗಿಜೇಲ ಮ್ಹಣೆ ಶಾಂತೇಶ್ವರ। ಜಗ ಸ್ವಹಿತ ನಿಮಿತ್ತೇ
ಆಶ್ರಮ ವಿಸ್ಫೂರ್ಜಿತ । ನಿಜಾನಂದ ಸ್ವಾನಂದಶಕ್ತ
ಚಿತ್ತೋಪಿತ ಶಾಂತಲಿಂಗ ಶಿವಯೋಗೀ ವಿರಚಿತ ।
ವಿವೇಕ ಚಿಂತಾಮಣಿ ॥

ಮರಾಠಿ ಸಾಹಿತ್ಯಕ್ಕೆ 'ವಿವೇಕ ಚಿಂತಾಮಣಿ 'ಯ ಅನುವಾದವು ಮೌಲ್ಯವಾದ ಕಾಣಿಕೆಯಾಗಿದೆ. ಅನುವಾದಕನ ಹೆಸರು ಶಾಂತಲಿಂಗ ಶಿವಯೋಗಿ ಅಥವಾ ಶಾಂತೇಶ್ವರ ವಿವೇಕ ಚಿಂತಾಮಣಿಯಲ್ಲಿ ಸ್ವತಃ ಕವಿಯು ತನ್ನ ಹೆಸರನ್ನು ನಿರ್ದೇಶಿಸಿದ್ದಾನೆ.

ನಿಜಗುಣಾನೇನಿ ಯೋಗೇಶ್ವರೇ । ಜೇ ಸಾಕ್ಷಾತ್ ಶಂಭೂಚ್ಯಾಮತ್ರೇ
ತಯಾಚೇ ಚರಿತ್ರ ಅಪಾರೇ । ಸಾಂಗಿತಲೇ ಆಸೇ
ತಯಾಚಿಯೇ ಯುಕ್ತವಾರೀ । ಮೀ ಪ್ರಾಕೃತ ಭಾಷಾ ಬೋಲಿಲೋ ವೈಖರಿ ।
ತೇ ಪ್ರೀತಿ ಪಾವೋ ಸರ್ವೇಶ್ವರಿ । ಶ್ರೀ ಶಂಬೋ ನೀಳಕಂಠೀ ।

ನಿಜಗುಣಶಿವಯೋಗಿಯ ಕೃತಿಯ ಆಧಾರದ ಮೇಲೆ ತಾನು ಇದನ್ನು ರಚಿಸುತ್ತಿರುವುದಾಗಿ ಕವಿಯು ಸ್ಪಷ್ಟಪಡಿಸಿದ್ದಾನೆ. ಅಲ್ಲದೆ ನಿಜಗುಣರನ್ನು ಯೋಗೇಶ್ವರೇ ಸಾಕ್ಷಾತ್ ಶಂಭೂಚ್ಯಾ ಪುತ್ರೇ ಎಂದು ಭಕ್ತಿಪೂರ್ವಕವಾಗಿ ಸ್ತುತಿಸಿದ್ದಾನೆ.

---

೧. ಕರ್ನಾಟಕ ಮತ್ತು ಮರಾಠಿ ಸಾಹಿತ್ಯ ಪುಟ ೨.

೨. ಸಂಸ್ಕೃತ ಭಾಷಾಂತರದ ಸೂಕ್ಷ್ಮ ಪರಿಚಯ :

ಸಂಸ್ಕೃತದ ಭಾಷಾಂತರವು ನಂಜನಗೂಡು ತಾಲ್ಲೂಕು ಹುರ ಎಂಬ (ಈಗ ಗ್ರಾಮ) ನಗರದಲ್ಲಿ ರಾಜನಾಗಿದ್ದ ಲಿಂಗರಾಜನಿಂದ 'ಲಿಂಗರಾಜೀಯ' ಎಂಬ ಹಸರಿನಲ್ಲಿ ರಚಿತವಾಗಿದೆ.

ಕೃತಿಯ ಪ್ರಾರಂಭದಲ್ಲಿ :

ತ್ಯಮುಚಿತೇ ವಿಜ್ಞಾನಮಾಭಿರ್ಯತೇ
ವಿದ್ವತ್ಸಮ್ಮತಿವಿವೇಕಪದಯುಕ್ಚಿಂತಾಮಣಿಃ ದೀಪ್ತಿಮಾನ್,
ಶ್ರೀಕರ್ಣಾಟಕ ಭಾಷಾಯಾ ನಿಜಗುಣ ಶ್ರೀ ಯೋಗಿನಾ ನಿರ್ಮಿತಸ್ತಂ
ಗೀರ್ವಾಣವಚೋ ಮುಖೇನ ವಿವೃತಂ ಕುರ್ವೇ ಪ್ರಣಮ್ಯಾಂಬಿಕಾಮ್।

ಶ್ರೀ ಲಿಂಗರಾಜೀಯಮುಮಾಧವಸ್ಯ
ಮುದಾಹಂ ಪಂಡಿತಭಾವನೀಯಮ್ ।
ವಿವೇಕ ಚಿಂತಾಮಣಿ ತಂತ್ರಸಾರೇ
ನೃಸಿಂಹಸೂರಿಗ್ರಥಿತಂ ಲಿಖಾಮಿ ॥

ಕೃತಿಯ ಅಂತ್ಯದಲ್ಲಿ :

ಏವಂ ವಿಶ್ರುತ ನಂಜರಾಜತನುಜಂ ಶ್ರೀಲಿಂಗರಾಜೋ ಮಹಾನ್
ವಿದ್ವದ್ಭೂಷಿತ ವಾಗ್ವಿವೇಕ ಪದಯುಕ್ ಚಿಂತಾಮಣೇರರ್ಥಗಮ್
ಗೀರ್ವಾಣೋಕ್ತ್ಯಭಿರಂಜಿತಂ ವಿವರಣಂ ಕೃತ್ವಾ ವಿವೇಕಂಪದಮ್
ನತ್ವಾಚೇತಸಿ ಶಂಭುಲಿಂಗಮನಘಂ ನಿತ್ಯಂ ಮುದಾರಾಜತೇ

ಪುಷ್ಪಿಕೆ :

ಸ್ವಸ್ತಿ ಸಮಸ್ತ ದಿವ್ಯಾಯುದಾನಿ ಕೃದ್ಧೈನೇಯಕಾಯ
ವಿಜಯ ನಿರಸ್ತಗತ್ಯವಾಯ ಪ್ರಚಯ ಜಯಾಭ್ಯುದಯಯುತ
ನಿರಾಮಯಾದಿತೇಯ ಪೂಜನೀಯ.........
ವಚೋವಚಕ್ಷಣ.....ನಿಜಗುಣಶಿವಯೋಗಿ ನಿರ್ಮಿತ
ಕರ್ಣಾಟಕ ಭಾಷಾಮಯಿ ವಿವೇಕ ಚಿಂತಾಮಣೇ
ವಿವರಣೇ ಲಿಂಗರಾಜೀಯೇ . ... [೧]

ಈ ಮೇಲಿನ ಪದ್ಯಗಳಿಂ ತಿಳಿದು ಬರುವ ಅಂಶವೆಂದರೆ : ನಂಜರಾಜವ ಮಗನಾದ ಲಿಂಗರಾಜನು, ಕರ್ನಾಟಕ ಭಾಷೆಯಲ್ಲಿ ಬರೆದಿರುವ ನಿಜಗುಣಶಿವಯೋಗಿಯ ವಿವೇಕ ಚಿಂತಾಮಣಿಯನ್ನು ಸಂಸ್ಕೃತ ಭಾಷೆಯಲ್ಲಿ 'ಲಿಂಗರಾಜೀಯ' ಎಂಬ ಹೆಸರಿನಲ್ಲಿ ರಚಿಸಿರುತ್ತೇನೆ – ಎಂದು ಹೇಳಿರುತ್ತಾನೆ.

---

೧. Descriptive Catalogue of Sanskrit Manuscripts Vol. XII Page 146. Appendix

ಅನುಬಂಧ - ೨

ಸಂಖ್ಯಾಪದ ಸೂಚಿ - ಪದದ ಮುಂದಿನ ಸಂಖ್ಯೆ ಗ್ರಂಥದಲ್ಲಿನ ಪ್ಯಾರಾಸಂಖ್ಯೆ.

ಅನುಬಂಧ – ೩
ಕೆಲವು ಪದಗಳ ಅರ್ಥ

ಅಂಬು = ನೀರು
ಆಪಾಮಾರ್ಗ= ಉತ್ತರಣಿ ಗಿಡ
ಆವಿ = ಕುರಿ
ಊರ್ಣನಾಭಿ= ಜೇಡರ ಹುಳು
ಕಟಾಹ = ಕಡಾಯಿ
ಕಬಳ = ಕೈಮುಷ್ಟಿ, ತುತ್ತು
ಕಮಠ = ಆಮೆ
ಕರವೀರ = ಕೆಂಪುಕಣಗಲೆ
ಕುಲಾಲ = ಕುಂಬಾರ
ಕುರಂಗಮುದ್ರೆ= ಹೆಬ್ಬೆರಳು ಮತ್ತು ಉಳಿದ ನಾಲ್ಕು ಬೆರಳ ಮಧ್ಯದ ಎರಡು ಬೆರಳುಗಳಿಂದ ಹಿಡಿಯುವ ರೀತಿ (ಹಸ್ತ ಮುದ್ರೆ)
ಕೂರ್ಮ = ಆಮೆ
ಖರ = ಕತ್ತೆ
ಘಟ = ಮಡಕೆ, ದೇಹ
ಚಣಕ = ಚಣ್ಣ, ಚಡ್ಡಿ
ಚಳಯ = ಚಿಮುಕಿಸು, ಚಳಿ
ಜರೆ = ಮುಪ್ಪು
ದಧಿ = ಮೊಸರು
ದ್ಯುತಿ = ಪ್ರಕಾಶ
ನಗ = ಪರ್ವತ, ಬೆಟ್ಟ
ಪಿತ್ತಳ = ಹಿತ್ತಾಳೆ
ಪುತ್ರಜೀವಿ = ಓಷಧಿ ಸಸ್ಯ
ಬಾಲಾರ್ಕ = ಬಾಲರವಿ, ಬಾಲಸೂರ್ಯ
ಬಾಸಣಿಸಿ = ಹೊದಿಸಿ
ಭುಜಂಗ = ಹಾವು
ಮಂಡೂಕ = ಕಪ್ಪೆ
ಮಸಕ = ಸೊಳ್ಳೆ
ಮಹೀಧರ = ಪರ್ವತ
ಮುಕುಳಿತ = ಮುಚ್ಚಿದ
ಮೃತ್ತಿಕೆ = ಮಣ್ಣು
ಮಾರ್ಜಾಲ = ಬೆಕ್ಕು
ರುಜೆ = ಕಾಯಿಲೆ, ರೋಗ
ವಳಿತರ್ದವ ಪಟ್ಟಣ = ಉಪರಾಜಧಾನಿ
ವಾಸ = ಕೊಳಲು
ವಿಷಯ = ದೇಶ
ಶೋಣವರ್ಣ= ಕೆಂಪುಬಣ್ಣ
ಸರಿಗೆ = ಲೋಹದ ದಾರ
ಶತ = ನೂರು
ಶುನಕ = ನಾಯಿ
ಸೂಕರ = ಹಂದಿ

ಅನುಬಂಧ -೪

ಆಕರಗ್ರಂಥಗಳು:

1. ಕರ್ನಾಟಕ ಕವಿಚರಿತೆ, ದ್ವಿತೀಯ ಸಂಪುಟ
   ರಾ.ಆರ್. ನರಸಿಂಹಾಚಾರ್
   ಪ್ರ : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

2. ಕನ್ನಡ ಸಾಹಿತ್ಯ ಚರಿತ್ರೆ
   ಡಾ. ರಂ. ಶ್ರೀ ಮುಗಳಿ
   ಪ್ರ : ಉಷಾ ಸಾಹಿತ್ಯ ಮಾಲೆ, ಮೈಸೂರು

3. ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು
   (ಐದು ಉಪನ್ಯಾಸಗಳು)
   ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1966

4. ಕರ್ನಾಟಕ ಮತ್ತು ಮರಾಠಿ ಸಾಹಿತ್ಯ
   ಪಂ. ಅವಳೀಕರ
   ಅನು : ಎಸ್.ಪಿ. ಪಾಟೀಲ್
   ಪ್ರ : ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ 1977

5. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ
   ಡಾ. ಅ.ನ.ಕೃಷ್ಣರಾಯ,
   ಪ್ರ: ಶಾರದಾ ಮುದ್ರಣಾಲಯ, ಬೆಂಗಳೂರು 1959

6. ಶರಣ ಚರಿತಾಮೃತ
   ಸಿದ್ಧಯ್ಯ ಪುರಾಣಿಕ
   ಪ್ರ : ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು 1964

7. ಪರಂಜ್ಯೋತಿಯತಿ ವಿರಚಿತ ಅನುಭವಮುಕುರ
   ಸಂ: ಕೆ.ಆರ್. ಶೇಷಗಿರಿ
   ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1978

8. ನಿಜಗುಣರ ಸಮಗ್ರ ಕೃತಿಗಳು, ಭಾಗ –೨
ಸಂ. ಡಾ. ಎಸ್. ವಿದ್ಯಾಶಂಕರ್, ಕರ್ನಾಟಕ ಸರ್ಕಾರ

9. ನಿಜಗುಣಶಿವಯೋಗಿಯ ತತ್ತ್ವ ದರ್ಶನ
ಡಾ.ಎಲ್. ಬಸವರಾಜು,
ಪ್ರ : ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು 1991

10. History of Kanarese Literature
By E.P. Rice, Second edn. 1920

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ